ಕನ್ನಡ ವಿಶ್ವವಿದ್ಯಾಲಯ

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಸಂಪ್ರಬಂಧ

ಐಕನಹಳ್ಳಿ : ಒಂದು ಸಾಂಸ್ಕೃತಿಕ ಅಧ್ಯಯನ

ಸಂಶೋಧನ ವಿದ್ಯಾರ್ಥಿ
ಕೆ.ಎಂ. ಸುರೇಶ್

ಮಾರ್ಗದರ್ಶಕರು
ಡಾ. ಎಸ್. ಪ್ರಸಾದಸ್ವಾಮಿ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಎಂ.ವಿ.ಸೀ ಸ್ನಾತಕೋತ್ತರ ಸಂಶೋಧನ ಕೇಂದ್ರ
ಬೆಂಗಳೂರು - ೫೬೦ ೦೧೯

ಕನ್ನಡ ವಿಶ್ವವಿದ್ಯಾಲಯ

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಸಂಪ್ರಬಂಧ

ಐಕನಹಳ್ಳಿ : ಒಂದು ಸಾಂಸ್ಕೃತಿಕ ಅಧ್ಯಯನ

ಸಂಶೋಧನ ವಿದ್ಯಾರ್ಥಿ
ಕೆ.ಎಂ. ಸುರೇಶ್

ಮಾರ್ಗದರ್ಶಕರು
ಡಾ. ಎಸ್. ಪ್ರಸಾದಸ್ವಾಮಿ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಎಂ.ವಿ.ಸೀ ಸ್ನಾತಕೋತ್ತರ ಸಂಶೋಧನ ಕೇಂದ್ರ
ಬೆಂಗಳೂರು – ೫೬೦ ೦೧೯

ಅಭ್ಯರ್ಥಿ ದೃಢೀಕರಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಬೆಂಗಳೂರಿನ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ "ಐಕನಹಳ್ಳಿ: ಒಂದು ಸಾಂಸ್ಕೃತಿಕ ಅಧ್ಯಯನ" ಎಂಬ ಮಹಾಪ್ರಬಂಧವನ್ನು ಡಾ. ಎಸ್. ಪ್ರಸಾದಸ್ವಾಮಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ನನ್ನ ಸ್ವಂತ ಬರವಣಿಗೆಯಾಗಿದ್ದು, ಈ ಮೊದಲು ಬೇರೆ ಯಾವುದೇ ಪದವಿಗಾಗಿ ಸಾದರಪಡಿಸಿಲ್ಲವೆಂದು ಹಾಗೂ ಈ ಮಹಾಪ್ರಬಂಧದ ಯಾವುದೇ ಭಾಗವನ್ನು ಬೇರೆಲ್ಲೂ ಪ್ರಕಟಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ: ಬೆಂಗಳೂರು

ದಿನಾಂಕ: 17-07-2014

(ಕೆ.ಎಂ. ಸುರೇಶ್)

ಸಂಶೋಧನ ವಿದ್ಯಾರ್ಥಿ

ಮಾರ್ಗದರ್ಶಕರ ದೃಢೀಕರಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಬೆಂಗಳೂರಿನ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ 'ಐಕನಹಳ್ಳಿ: ಒಂದು ಸಾಂಸ್ಕೃತಿಕ ಅಧ್ಯಯನ" ಮಹಾಪ್ರಬಂಧವನ್ನು ಕೆ.ಎಂ. ಸುರೇಶ್ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ.

ಪ್ರಸ್ತುತ ಮಹಾಪ್ರಬಂಧವು ವಿದ್ಯಾರ್ಥಿಯ ಸ್ವಂತ ಬರವಣಿಗೆಯಾಗಿದ್ದು, ಈ ಮೊದಲು ಇವರು ಯಾವುದೇ ಪದವಿಗಾಗಿ ಸಾದರಪಡಿಸಿಲ್ಲವೆಂದು ಹಾಗೂ ಈ ಮಹಾಪ್ರಬಂಧದ ಯಾವುದೇ ಭಾಗವನ್ನು ಬೇರೆಲ್ಲೂ ಪ್ರಕಟಿಸಿರುವುದಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ: ಬೆಂಗಳೂರು

ದಿನಾಂಕ: 17-07-2014

(ಡಾ. ಎಸ್. ಪ್ರಸಾದಸ್ವಾಮಿ)

ಡಾ. ಪ್ರಸಾದಸ್ವಾಮಿ. ಎಸ್.
ಎಂ.ಎ., ಎಂ.ಇಡಿ., ಪಿಎಚ್.ಡಿ.
ಸಂಯೋಜಕ ಹಾಗು ಮುಖ್ಯ.
ಕನ್ನಡ ಸ್ನಾತಕೋತ್ತರ ವಿಭಾಗ
ಸ.ಪ್ರ.ದ. ಕಾಲೇಜು, ಕೃರಾಪುರ, ಬೆಂಗಳೂರು-3

ಪರಿವಿಡಿ

ಅಧ್ಯಾಯ ಒಂದು :
ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ ... ೧

ಅಧ್ಯಾಯ ಎರಡು :
ಐಕನಹಳ್ಳಿ ಗ್ರಾಮದ ಹೆಸರಿನ ಮೂಲ ಮತ್ತು
ಭೌಗೋಳಿಕ ಪರಿಸರ ... ೭

ಅಧ್ಯಾಯ ಮೂರು :
ಗ್ರಾಮದ ಜಾತಿ ಪದ್ಧತಿ : ಸಾಮುದಾಯಿಕ ಪರಿಕಲ್ಪನೆ ... ೨೪

ಅಧ್ಯಾಯ ನಾಲ್ಕು :
ಐಕನಹಳ್ಳಿ : ಸಾಂಸ್ಕೃತಿಕ ವಿಶ್ಲೇಷಣೆ ... ೩೭

ಅಧ್ಯಾಯ ಐದು :
ಐಕನಹಳ್ಳಿಯಮ್ಮ ಮತ್ತು ಇತರ ಗ್ರಾಮ ದೇವತೆಗಳು ... ೧೧೫

ಅಧ್ಯಾಯ ಆರು :
ಐಕನಹಳ್ಳಿಯ ಹಬ್ಬ ಹರಿದಿನಗಳು ... ೧೨೬

ಅಧ್ಯಾಯ ಏಳು :
ಗ್ರಾಮದ ಜಾನಪದ ಸಾಹಿತ್ಯ, ಕಲೆ, ಜನಪದ ವೈದ್ಯ,
ಅಡುಗೆ–ಉಡುಗೆ ಮತ್ತು ಜನಪದ ಆಟಗಳು ... ೧೪೯

ಅಧ್ಯಾಯ ಎಂಟು :
ಐಕನಹಳ್ಳಿಯ ಉಪಭಾಷೆಯ ಪ್ರಭೇದಗಳು ... ೨೦೯

ಅಧ್ಯಾಯ ಒಂಬತ್ತು :
ಒಟ್ಟು ನೋಟ ... ೨೧೮

ಅನುಬಂಧ ... ೨೨೪
೧. ಕೋಲಾಟ ಪದಗಳು
೨. ವಕ್ತೃಗಳ ವಿವರ
೩. ಆಕರ ಗ್ರಂಥಗಳು
೪. ಛಾಯಾಚಿತ್ರಗಳು

❖ ❖ ❖

ಅಧ್ಯಾಯ – ೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಮಾನವ ನೆಲೆಸಿರುವ ಒಟ್ಟು ಭೌಗೋಳಿಕ ಪ್ರದೇಶ ಗ್ರಾಮ ಎನಿಸಿಕೊಳ್ಳಬಲ್ಲದು. ಆದಿಮಾನವ ಬೇಟೆಯಿಂದ ಜೀವನ ಸಾಗಿಸುತ್ತಿದ್ದ ಸಂದರ್ಭದಲ್ಲಿ ಒಂದು ಕಡೆಯಿಂದ ಮತ್ತೊಂದೆಡೆಗೆ ಅಲೆಯುತ್ತಿದ್ದ. ದಿನ ಕಳೆದಂತೆ ಪಶುಪಾಲನೆಯನ್ನು ಮತ್ತು ವ್ಯವಸಾಯವನ್ನು ಕಂಡುಕೊಂಡ ಮೇಲೆ ಒಂದೆಡೆ ನೆಲೆನಿಂತು ಗ್ರಾಮಗಳನ್ನು ಕಟ್ಟಿಕೊಂಡ. ಸುಮಾರು ಕ್ರಿ.ಪೂ. ೨೫೦೦ ರ ನವಶಿಲಾಯುಗದ ಕಾಲದಲ್ಲಿ ಗ್ರಾಮಗಳು ಹುಟ್ಟಿಕೊಂಡಿರಬಹುದು. ನಂತರ ಕಬ್ಬಿಣದ ಆಯುಧಗಳನ್ನು ಬಳಸಿಕೊಂಡು ನವೀನವಾದ ಕೃಷಿ ವಿಧಾನವನ್ನು ಬಳಸಿಕೊಂಡು, ದವಸಧಾನ್ಯಗಳನ್ನು ಬೆಳೆಯತೊಡಗಿದ. ತರುವಾಯ ಭೌಗೋಳಿಕ ಅಂಶಗಳಾದ ಕೆರೆ, ಕಟ್ಟೆ, ಬೆಟ್ಟ, ಗುಡ್ಡ, ಹಳ್ಳ–ಕೊಳ್ಳ, ದೇವರು, ಗುಡಿಗಳನ್ನು ಬಳಕೆ ಮಾಡಿಕೊಂಡ. ಮಾನವನು ಬೇಟೆ ಸಂಸ್ಕೃತಿಯ ಕಾಲದಲ್ಲೆ ಗ್ರಾಮದೇವತೆಯ, ಕುಲದೇವತೆಯ ಹುಟ್ಟು, ಆರಾಧನೆ, ಆಚರಣೆ ಕಾಣಿಸಿಕೊಂಡರೂ ಅದಕ್ಕೆ ಪರಿಪೂರ್ಣವಾದ ಸ್ವರೂಪ ಸಿಕ್ಕಿದ್ದು ಆತ ಒಂದೆಡೆ ವಾಸ ಮಾಡಲು ಪ್ರಾರಂಭಿಸಿದ ಮೇಲೆ ಎನ್ನಬಹುದು. ಆ ನೆಲೆಗೊಂದು ಹೆಸರು ಕಂಡುಕೊಂಡ ತರುವಾಯ ಗ್ರಾಮ ದೇವತೆಗಳ ಹೆಸರುಗಳು ಆ ಊರಿನ ಹೆಸರಿನಿಂದಲೇ ಕರೆಯಲ್ಪಡುತ್ತವೆ. "ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ದೇವತೆಗಳ ಹೆಸರಿನಿಂದಾಗಿಯೇ ಊರಿಗೆ ಅದೇ ಹೆಸರು ಬಂದಿತು ಎಂದು ತಿಳಿದು ಬರುತ್ತದೆಯಾದರೂ ಗ್ರಾಮದ ಹೆಸರಿನಿಂದಲೇ ಗ್ರಾಮ ದೇವತೆಗಳು ಹೆಸರು ಪಡೆಯುತ್ತವೆ ಎಂಬುದು ಸ್ಪಷ್ಟ. ಅಲೆಮಾರಿಯಾಗಿದ್ದ ಮಾನವ ಒಂದು ಕಡೆ ನೆಲೆನಿಂತ ಮೇಲೆ ಅವನು ಪೂಜಿಸಲು ಒಂದು ದೈವ ಬೇಕಿತ್ತು. ತದನಂತರ ಅವನೇ ಸೃಷ್ಟಿಸಿದ ದೇವತೆಗೆ ಒಂದು ಹೆಸರು ಬೇಕಿತ್ತು. ಆ ಹೆಸರು ಆ ಊರಿನ ಹೆಸರಿನಿಂದಲೇ ನಿಷ್ಪತ್ತಿಯಾಗುತ್ತಿತ್ತು"[೧] ಈ ಕಾರಣದಿಂದಾಗಿ ಊರಿನ ಹೆಸರಿನಿಂದಲೇ ಗ್ರಾಮ ದೇವತೆಗಳನ್ನು ಕರೆದಿದ್ದಾರೆ. ಉದಾ:– ಹಾಸನದ ಹಾಸನಾಂಬ, ಮಂಗಳೂರಿನ ಮಂಗಳಾದೇವಿ, ಪಿರಿಯಾಪಟ್ಟಣದ ಪರಿಯಾಪಟ್ಟಣದಮ್ಮ, ಆನೆಕೆರೆಯ ಆನೆಕೆರೆಯಮ್ಮ, ಇತ್ಯಾದಿ.

ಗ್ರಾಮಗಳಲ್ಲಿ ಗಂಡು ದೇವರುಗಳಿಗಿಂತಲೂ ಹೆಣ್ಣು ದೇವರುಗಳದ್ದೆ ಸಿಂಹಪಾಲು. ಹಿಂದೆ ರಕ್ಷಣೆಯ ದೃಷ್ಟಿಯಿಂದಲೂ, ಕುಟುಂಬದ ಜವಾಬ್ದಾರಿಯನ್ನು ನಿಬಾಯಿಸುವ ಕಾರಣಕ್ಕಾಗಿ ಹೆಣ್ಣು ತನ್ನ ಊರಿನಲ್ಲಿಯೇ ತನ್ನ ಮನೆಯಲ್ಲಿ ಉಳಿಯುತ್ತಿದ್ದಳು. ಗಂಡು ಹೊರಗೆ ದುಡಿದು ತಂದರೆ

ಹೆಣ್ಣು ಕುಟುಂಬ ನಿರ್ವಹಣೆಯನ್ನು ಹೊರುತ್ತಿದ್ದಳು. ಅಲ್ಲದೆ ದ್ರಾವಿಡರಲ್ಲಿ ಮಾತೃಪ್ರಧಾನ ಕುಟುಂಬ ವ್ಯವಸ್ಥೆ ಇದ್ದ ಕಾಲದಲ್ಲಿ ಗ್ರಾಮ ಮತ್ತು ಗ್ರಾಮದೇವತೆಯ ಹುಟ್ಟು ಮತ್ತು ಬೆಳವಣಿಗೆಯಿಂದಾಗಿ ದೇವರುಗಳಿಗಿಂತ ದೇವತೆಗಳನ್ನು ಬಹುಪಾಲು ನೋಡಬಹುದು.

ಗ್ರಾಮದಲ್ಲಿ ಹಲವು ಜಾತಿಗಳ ಜನ ಸಾಮರಸ್ಯದಿಂದ ಬದುಕುತ್ತಿರುತ್ತಾರೆ. ಐಕನಹಳ್ಳಿ ಗ್ರಾಮದಲ್ಲಿ ಬಹುಸಂಖ್ಯಾತರಾದ ಒಕ್ಕಲಿಗರಿದ್ದು, ನಂತರದ ಸ್ಥಾನಗಳಲ್ಲಿ ಹರಿಜನರು, ಶೆಟ್ಟರು, ಅಗಸರು, ಆಚಾರರು, ಕ್ಷೌರಿಕರು, ಮೊದಲಾದವರಿದ್ದಾರೆ. ಇವರ ವೃತ್ತಿ, ಜೀವನ ಕ್ರಮ, ಸಾಮಾಜಿಕ ಆಚರಣೆ, ಆರ್ಥಿಕತೆ, ಆಡಳಿತ ಮೊದಲಾದ ವಿಷಯಗಳನ್ನು ಚರ್ಚಿಸುವುದು ಸೂಕ್ತವೆನಿಸುತ್ತದೆ. ಗ್ರಾಮದ ಸುತ್ತ ಬೇಲಿ ಅಥವಾ ಕೋಟೆ, ಗ್ರಾಮದ ಹೆಬ್ಬಾಗಿಲಿರಬೇಕು. ಇದು ಗ್ರಾಮದ ಪ್ರಮುಖವಾದ ಲಕ್ಷಣವೆನ್ನಬಹುದು. ಎಲ್ಲಾ ಜಾತಿಯ ಜನರಿಂದ ಕೂಡಿದ ಗ್ರಾಮ ಸಹಜ ಬದುಕನ್ನು ನಡೆಸಲು ಗ್ರಾಮದೇವತೆಯಂತಹ ದೈವ ಪ್ರೇರಣೆ ಅಗತ್ಯವಾಗುತ್ತದೆ. ಮಾನವ ಪ್ರಕೃತಿಯನ್ನು ದೇವರೆಂದು ಪೂಜಿಸಿಕೊಂಡು ಬದುಕುತ್ತಿದ್ದದ್ದು ಹಿಂದಿನಿಂದಲೂ ಬೆಳೆದು ಬಂದಿದೆ. ಇಂತಹ ಗ್ರಾಮಗಳ ಅಧ್ಯಯನದಿಂದ ಸಂಸ್ಕೃತಿಗೆ ಮತ್ತು ಸಾಹಿತ್ಯಕ್ಕೆ ಏನಾದರೂ ಪ್ರಯೋಜನವಿದೆಯೆ? ಒಂದು ಹಳ್ಳಿ, ಗ್ರಾಮ, ಊರು, ಇವುಗಳ ಅಧ್ಯಯನ ಯಾವ ಕಾರಣಕ್ಕಾಗಿ ಮುಖ್ಯವಾಗುತ್ತವೆ? ಎಂಬ ಪ್ರಶ್ನೆಗಳು ಕಾಡುವುದು ಸಹಜ. ಹಳ್ಳಿ, ಊರು, ಗ್ರಾಮಗಳು ನೆನ್ನೆ ಮೊನ್ನೆಯ ಪರಿಕಲ್ಪನೆಗಳಲ್ಲ. ಕ್ರಿಸ್ತ ಪೂರ್ವದಲ್ಲೇ ಈ ಪರಿಕಲ್ಪನೆಗಳಿದ್ದು ಅಂದೇ ಅಸ್ತಿತ್ವವನ್ನು ಪಡೆದಿವೆ. ಅಂದಿನಿಂದ – ಇಂದಿನವರೆಗೆ ಗ್ರಾಮದ ಜನ–ಜೀವನದ ಮೇಲೆ, ಸಂಸ್ಕೃತಿಯ ಮೇಲೆ, ಮತ್ತು ಭಾಷೆಯ ಮೇಲೆ ವಿವಿಧ ಸ್ಥರಗಳಲ್ಲಿ ಬೇರೆ ಬೇರೆ ಪ್ರಭಾವಗಳಾಗಿದ್ದು, ಸಂಸ್ಕೃತಿ ಕೂಡ ಬದಲಾವಣೆಗೆ ಒಳಗಾಗಿದೆ ಮತ್ತು ಇಂದೂ ಕೂಡ ಬದಲಾಗುತ್ತಲೇ ಮುಂದುವರೆಯುತ್ತಿದೆ. ಇಂತಹವುಗಳನ್ನು ಈ ಅಧ್ಯಯನ ವಿಶ್ಲೇಷಿಸುತ್ತದೆ.

ಹಳ್ಳಿ, ಗ್ರಾಮ, ಊರುಗಳು ಎಂದಾಗ ವಿವಿಧ ಜಾತಿಯ, ಧರ್ಮದ, ವರ್ಗಗಳ ಜನರು ವಾಸಿಸುತ್ತಿದ್ದು ಎಲ್ಲರ ಸಂಪ್ರದಾಯಗಳು ಭಿನ್ನವಾಗಿದ್ದರೂ ಸಹಬಾಳ್ವೆ ನಡೆಸುತ್ತಾರೆ. ಇದು ಪ್ರಸ್ತುತ ಸಮಾಜಕ್ಕೆ ಬೇಕಾಗಿರುವ ಮುಖ್ಯ ಸಂದೇಶಗಳಲ್ಲಿ ಒಂದಾಗಿದೆ. ಇದರ ಬಗೆಗೆ ಈ ಅಧ್ಯಯನ ಬೆಳಕು ಚೆಲ್ಲುತ್ತದೆ.

ನಮ್ಮ ಸಂಸ್ಕೃತಿಯ ಅಂಗಗಳಾಗಿರುವ ಆಹಾರ, ಉಡುಗೆ–ತೊಡುಗೆ, ಆಟ, ವೈದ್ಯ, ಹಬ್ಬದಂತಹ ಆಚರಣೆಗಳು ಆಧುನಿಕತೆಯ ಪ್ರಭಾವದಿಂದಾಗಿ ನಮ್ಮಿಂದ ಮರೆಯಾಗುತ್ತಿವೆ. ಇವುಗಳನ್ನು ಮುಂದಿನ ಪೀಳಿಗೆಗೆ ತಿಳಿಸುವಲ್ಲಿ ಹಾಗೂ ಕೊಂಡೊಯ್ಯುವಲ್ಲಿ ಈ ಅಧ್ಯಯನ ಮಹತ್ವವನ್ನು ಪಡೆಯುತ್ತದೆ. ಕವಿ ಬೇಂದ್ರೆ ಅವರ ಮಾತಿನಂತೆ 'ಜನವಾಣಿ ಬೇರು : ಕವಿ ವಾಣಿ ಹೂ' ಈ ಗ್ರಾಮಗಳಲ್ಲಿ ಕಂಡುಬರುವ ಜನಪದ ಹಾಡು–ಹಸೆಗಳು ಹೊಸದರ ಸೃಷ್ಟಿಗೆ ಕಾರಣಿಭೂತವಾಗಿವೆ.

"ಇಂದು ಗ್ರಾಮೀಣಾಭಿವೃದ್ಧಿ, ನಗರಾಭಿವೃದ್ಧಿಯಂತಹ ಯೋಜನೆಗಳಿಗೆ ಮೂಲ ಗ್ರಾಮದ ರಚನೆಯ ಅರಿವು ಬಹುಮುಖ್ಯ. ಹಳ್ಳಿಗಳ ಅಧ್ಯಯನ ಅಂತಹ ಅರಿವನ್ನು ತಂದುಕೊಡುತ್ತದೆ. 'ಆಧುನೀಕರಣ ಹಳ್ಳಿಗಳನ್ನು ಪ್ರವೇಶಿಸಿದರೂ ಹಳ್ಳಿಯಲ್ಲಿ ಗುಪ್ತವಾಗಿ ಗಟ್ಟಿಗೊಂಡಿರುವ ಪ್ರಾಚೀನ ಪರಂಪರೆ ಹುದುಗಿದೆ. ಪಟ್ಟಣದಷ್ಟು ಬೇಗ ಹಳ್ಳಿ ತನ್ನ ಪ್ರಾಚೀನ ಪರಂಪರೆಯನ್ನು ಬಿಟ್ಟುಕೊಡಲಾರದು"[೨] ಎಂಬ ಮಾತನ್ನು ಮನಗಾಣುವಲ್ಲಿ ಹಳ್ಳಿಗಳ ಅಧ್ಯಯನ ಮುಖ್ಯವಾಗಿದೆ. ವ್ಯಕ್ತಿ ಮತ್ತು ಸಮಾಜ ಗ್ರಾಮದೇವತೆಯನ್ನು ಅಪ್ರಜ್ಞಾಪೂರಕವಾಗಿ ಒಪ್ಪಿಕೊಂಡು ಅನುಸರಿಸುತ್ತಿದ್ದಾರೆ. ಒಂದು ಗ್ರಾಮದೇವತೆಗೆ ಸಂಬಂಧಿಸಿದ ಕಥೆ, ಗೀತೆ, ಐತಿಹ್ಯ, ಗಾದೆ ಮುಂತಾದವುಗಳನ್ನು ಅಧ್ಯಯನ ಮಾಡುತ್ತಾ ಹೋದಂತೆ ಆ ಪರಿಸರದ ಜನರ ಜೀವನ ಕ್ರಮ, ಭಾಷೆ, ಸಾಮಾಜಿಕ ಜವಾಬ್ದಾರಿಗಳಂತಹ ಹಲವು ವಿಚಾರಗಳು ಬೆಳಕಿಗೆ ಬರುತ್ತವೆ.

ಸಕ್ಕರೆಯ ಸೀಮೆಯಾದ ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕಿನ ಐಕನಹಳ್ಳಿ ಇಂದಿನ ಹೊತ್ತಿನಲ್ಲಿ ಬಹುದೊಡ್ಡ ಗ್ರಾಮವಾಗಿದ್ದು, ಪ್ರಸ್ತುತದ ನಗರೀಕರಣ ಹಾಗೂ ವೈಜ್ಞಾನಿಕ ಸಂಶೋಧನೆಗಳು ಗ್ರಾಮದ ಮೇಲೆ ಪ್ರಭಾವ ಬೀರಿದ್ದರೂ, ಗ್ರಾಮದೇವತೆ, ಜಾತ್ರೆ, ಕಲೆ ಮೊದಲಾದ ಆಚರಣೆಗಳನ್ನು ಉಳಿಸಿಕೊಂಡು ಬಂದಿರುವುದರಿಂದ 'ಐಕನಹಳ್ಳಿ ಒಂದು ಸಾಂಸ್ಕೃತಿಕ ಅಧ್ಯಯನ' ಎಂಬ ಸಂಶೋಧನೆ ಕಾರ್ಯವನ್ನು ಕೈಗೊಳ್ಳಲಾಗಿದೆ.

ಮಹಾಪ್ರಬಂಧವನ್ನು ಅಧ್ಯಯನದ ಅನುಕೂಲಕ್ಕಾಗಿ ಮತ್ತು ಒಂದು ಚೌಕಟ್ಟು ಒದಗಿಸುವ ಸಲುವಾಗಿ ಒಂಬತ್ತು ಅಧ್ಯಾಯಗಳನ್ನಾಗಿ ವಿಂಗಡಿಸಿಕೊಂಡಿದೆ. ಅವು ಹೀಗಿವೆ.

ಅಧ್ಯಾಯ ಒಂದು : ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಐಕನಹಳ್ಳಿಯ ಜನರ ಜೀವನ ಕ್ರಮ, ಭೌಗೋಳಿಕ ಪರಿಸರ, ಆರ್ಥಿಕತೆ, ಆಡಳಿತ, ಸಾಮಾಜಿಕ ನಂಬಿಕೆಗಳು, ಆಚರಣೆ, ಗ್ರಾಮದೇವತೆ ಕುರಿತ ಸಾಂಸ್ಕೃತಿಕ ಅಧ್ಯಯನ ಹೆಚ್ಚೆಚ್ಚು ನಡೆದಷ್ಟು ಮುಂದಿನ ಪೀಳಿಗೆಗೆ ಕೊಡುಗೆಯಾಗಿ ಉಳಿಯಬಲ್ಲದು. ಆಧುನಿಕತೆಯ ಪ್ರಭಾವದಿಂದಾಗಿ ಮೂಲ ಸಂಸ್ಕೃತಿ ಮರೆಯಾಗುವ ಹೊತ್ತಿನಲ್ಲಿ ಇಲ್ಲಿನ ಜಾನಪದ ಸಾಹಿತ್ಯ, ಜನಪದ ವೈದ್ಯ, ಕಲೆ, ಉಡುಗೆ ತೊಡುಗೆ, ಜನಪದ ಆಟ, ಜೀವನ ಕ್ರಮ ಮೊದಲಾದವುಗಳ ಪರಿಚಯ ಅಗತ್ಯವಾದುದು. ಹಳ್ಳಿಗಳು ಇಂತಹ ಸಂಸ್ಕೃತಿಯನ್ನು ಉಳಿಸಿಕೊಂಡು ಬೆಳೆಯುತ್ತಿವೆ. ಈ ಹಿನ್ನೆಲೆಯಲ್ಲಿ ಸಂಶೋಧನೆ ಕೈಗೊಳ್ಳುತ್ತಿರುವ ಉದ್ದೇಶ ಮತ್ತು ವ್ಯಾಪ್ತಿಯನ್ನು ಚರ್ಚಿಸುವುದು ನನ್ನ ಉದ್ದೇಶವಾಗಿದೆ.

ಅಧ್ಯಾಯ ಎರಡು : ಐಕನಹಳ್ಳಿ ಗ್ರಾಮದ ಹೆಸರಿನ ಮೂಲ ಮತ್ತು ಭೌಗೋಳಿಕ ಪರಿಸರ

ಒಂದು ಗ್ರಾಮದ ಹೆಸರಿನ ಮೂಲದಲ್ಲಿ ಒಂದು ಸಂಸ್ಕೃತಿ ಅಡಗಿರಲು ಸಾಧ್ಯವಿದೆ. ಅದು ವಿಶ್ವಕೋಶದ ಕೆಲಸವನ್ನು ಮಾಡುತ್ತದೆ. ಐಕನಹಳ್ಳಿ ಗ್ರಾಮ ನಾಮದ ನಿಷ್ಪತ್ತಿ ಮೂಲವನ್ನು

ಹುಡುಕುವುದು. ಈ ಊರಿಗೆ ಸಂಬಂಧಿಸಿದ ಕೆಲವು ಸ್ಥಳಗಳ ಕತೆಯನ್ನು ವಿವರವಾಗಿ ಕೊಡಲಾಗಿದೆ. ಆ ಮೂಲಕ ಜನರ ಸಂಸ್ಕೃತಿ, ಭಾಷೆ, ಜೀವನ ವಿಧಾನಗಳು ತಿಳಿಯಲು ಪ್ರಯತ್ನಿಸುವುದು. ಮೇಲ್ನೋಟಕ್ಕೆ ಇದು ವ್ಯಕ್ತಿವಾಚಕ ಗ್ರಾಮವೆಂದು ತಿಳಿಯುತ್ತದೆ. ಕ್ಷೇತ್ರಕಾರ್ಯದ ಮೂಲಕ ಅಧ್ಯಯನ ಮಾಡಲಾಗುವುದು. ಈ ಗ್ರಾಮಕ್ಕಿರುವ ಸೌಲಭ್ಯವನ್ನು ತಿಳಿಸಲಾಗುವುದು. ಅಲ್ಲಿಯ ನೆಲ-ಜಲ, ಸಸ್ಯ ಸಂಪನ್ಮೂಲ, ಪಶು-ಪಕ್ಷಿ, ಬೆಳೆ, ಮೊದಲಾದ ವಿವರಗಳನ್ನು ಅಧ್ಯಯನ ಮೂಲಕ ವಿವರವಾಗಿ ವಿವೇಚಿಸಲಾಗುವುದು. ಕೃಷಿ ಪರಿಭಾಷೆಯಲ್ಲಿ ಅಲ್ಲಿನ ಪರಿಕರಗಳನ್ನು ಪರಿಚಯಮಾಡಲಾಗುವುದು.

ಅಧ್ಯಾಯ ಮೂರು : ಗ್ರಾಮದ ಜಾತಿ ಪದ್ಧತಿ : ಸಾಮುದಾಯಿಕ ಪರಿಕಲ್ಪನೆ

ಒಂದು ಗ್ರಾಮ ಎನಿಸಿಕೊಳ್ಳಬೇಕಾದರೆ ಬೇಲಿಯನ್ನೊ ಕೋಟೆಯನ್ನೊ ಆ ಗ್ರಾಮ ಹೊಂದಿರಬೇಕು; ಅಲ್ಲದೆ ಆ ಗ್ರಾಮದಲ್ಲಿ ಒಕ್ಕಲಿಗರು ಮತ್ತು ಹರಿಜನರು ವಾಸವಾಗಿರಲೇ ಬೇಕು ಇಲ್ಲವಾದಲ್ಲಿ ಅದು ಗ್ರಾಮ ಎನಿಸಿಕೊಳ್ಳುವುದಿಲ್ಲ. ಈ ಗ್ರಾಮದಲ್ಲಿ ಬಹುಸಂಖ್ಯೆಗಳಲ್ಲಿ ಒಕ್ಕಲಿಗರಿದ್ದು, ನಂತರ ಸ್ಥಾನಗಳಲ್ಲಿ ಹರಿಜನರು, ಶೆಟ್ಟರು, ಆಚಾರರು, ಅಗಸರು, ಕ್ಷೌರಿಕರು ಮೊದಲಾದವರಿದ್ದಾರೆ. ಇವರ ವೃತ್ತಿ ಮತ್ತು ಜೀವನ ಕ್ರಮಗಳನ್ನು ಚರ್ಚಿಸಲಾಗುವುದು. ಕುಟುಂಬದ ಜೀವನೋಪಾಯಕ್ಕಾಗಿ ಜನರ ಮುಖ್ಯ ಆದಾಯದ ಮೂಲ ಕೃಷಿ ಹಾಗು ಪಶು ಸಂಗೋಪನೆಯಾಗಿರುತ್ತದೆ. ವ್ಯಾಪಾರ ಇತ್ಯಾದಿಗಳ ಮೂಲಕ ಆರ್ಥಿಕ ಮೂಲವನ್ನು ಹುಡುಕಿಕೊಂಡಿದ್ದಾರೆ. ಇವುಗಳ ಬಗ್ಗೆ ವಿವರವಾಗಿ ತಿಳಿಸಲಾಗುವುದು. ಕುಟುಂಬವು ಆಡಳಿತದ ಅತಿ ಚಿಕ್ಕ ಘಟಕವಾಗಿದ್ದು, ಗ್ರಾಮ, ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಹೀಗೆ ಆಡಳಿತ ವ್ಯವಸ್ಥೆಯನ್ನು ಕಾಣಬಹುದಾದರು ಗ್ರಾಮ ಆಡಳಿತ ಕುರಿತು ಚರ್ಚಿಸಲು ಹೆಚ್ಚು ಒತ್ತು ಕೊಡಲಾಗುವುದು.

ಅಧ್ಯಾಯ ನಾಲ್ಕು : ಐಕನಹಳ್ಳಿ : ಸಾಂಸ್ಕೃತಿಕ ವಿಶ್ಲೇಷಣೆ

ಗ್ರಾಮದಲ್ಲಿರುವ ಪ್ರತಿಯೊಂದು ವರ್ಗ ಪದ್ಧತಿಯ ಹಿನ್ನೆಲೆಯಲ್ಲಿ ಭಿನ್ನಭಿನ್ನ ಸಾಮಾಜಿಕ ಆಚರಣೆಗಳನ್ನು ಕಾಣಬಹುದು. ಒಕ್ಕಲಿಗರು, ಹರಿಜನರು,ಶೆಟ್ಟರು, ಅಗಸರು, ಆಚಾರರು, ಕ್ಷೌರಿಕರು ಮೊದಲಾದ ವರ್ಗದಲ್ಲಿನ ಹುಟ್ಟಿನಿಂದ ಸಾವಿನವರೆಗೆ ನಡೆಯುವ ಎಲ್ಲಾ ವಿಧಿ-ವಿಧಾನಗಳ ಬಗ್ಗೆ ಕ್ಷೇತ್ರಕಾರ್ಯ ನಡೆಸಿ ಮಾಹಿತಿ ಸಂಗ್ರಹಿಸಿ ವಿಶ್ಲೇಷಿಸಲಾಗುವುದು.

ಅಧ್ಯಾಯ ಐದು : ಐಕನಹಳ್ಳಿಯಮ್ಮ ಮತ್ತು ಇತರ ಗ್ರಾಮ ದೇವತೆಗಳು

ತನ್ನ ಮತ್ತು ಗ್ರಾಮದ ರಕ್ಷಣೆ ಮಾಡುವ ಸಲುವಾಗಿ ಮಾನವನು ತನ್ನ ಕಲ್ಪನೆಗೆ ಪ್ರತೀಕವಾದ ಮೂರ್ತಿಯೊಂದನ್ನು ಗುಡಿಯಲ್ಲಿಟ್ಟು ಪೂಜಿಸಿದನು. ಇದೇ ಗ್ರಾಮ ದೇವತೆಯಾಯಿತು. ಮಾತ್ರ

ಪ್ರಧಾನ ಕುಟುಂಬ ಹೊಂದಿರುವ ಹಳ್ಳಿಗಳು ಯಾವ ರೀತಿ ಸ್ತ್ರೀ ದೇವತೆಗಳನ್ನು ಗ್ರಾಮದೇವತೆಯನ್ನಾಗಿ ಹೊಂದಿವೆ ಎಂಬುದನ್ನು ವಿವರವಾಗಿ ವಿಶ್ಲೇಷಿಸಲಾಗುವುದು. ಐಕನಹಳ್ಳಿಯಮ್ಮ ಅನುಗ್ರಹ ದೇವತೆಯಾಗಿದ್ದಾಳೆ. ಇವಳಿಗೆ ಹೊರುವ ಹರಕೆ, ಮಾಡುವ ಆರಾಧನೆ, ನಡೆಸುವ ಜಾತ್ರೆಯ ವಿವರ, ದೇವತೆಗೆ ಜನರು ನಡೆದುಕೊಳ್ಳುವ ರೀತಿ, ಹಬ್ಬ, ಅಲಂಕಾರ ಮುಂತಾದವುಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗುವುದು. ಇತರ ದೇವತೆಗಳಾದ ಲಕ್ಕಮ್ಮ, ಚಿಕ್ಕಮ್ಮ, ಸತ್ಯಮ್ಮ, ಕನ್ನಂಬಾಡಮ್ಮ, ಮಾರಮ್ಮ, ಭೈರವೇಶ್ವರ, ಬಸವೇಶ್ವರ, ಹೆತ್ತಪ್ಪ ಮುತ್ತಪ್ಪ ಮೊದಲಾದವುಗಳಿಗೆ ಗ್ರಾಮಸ್ಥರು ನಡೆದುಕೊಳ್ಳುವ ರೀತಿಯನ್ನು ಗುರುತಿಸಲಾಗುವುದು. ದೈವದ ಬಗೆಗೆ ಗ್ರಾಮದ ಜನರಿಗಿರುವ ನಂಬಿಕೆ ಎಷ್ಟು ಗಟ್ಟಿಯಾದುದು ಎಂಬ ಅಂಶವನ್ನು ವಿಶ್ಲೇಷಿಸಲಾಗುವುದು.

ಅಧ್ಯಾಯ ಆರು : ಐಕನಹಳ್ಳಿಯ ಹಬ್ಬ ಹರಿದಿನಗಳು

ಐಕನಹಳ್ಳಿಯ ದೇವ-ದೇವತೆಗಳ ಹಬ್ಬಗಳಲ್ಲದೆ, ಸಾಮಾನ್ಯವಾಗಿ ಎಲ್ಲಾ ಕಡೆ ಆಚರಿಸುವ ಹಬ್ಬಗಳನ್ನು ಆಚರಿಸುತ್ತಾರೆ. ಅವುಗಳಲ್ಲಿ ಯುಗಾದಿ, ಗೌರಿ ಹಬ್ಬ, ಪಿತೃಪಕ್ಷ, ದೀಪಾವಳಿ, ಆಯುಧ ಪೂಜೆ, ನಾಗರಪಂಚಮಿ, ಸಂಕ್ರಾಂತಿ, ಶಿವರಾತ್ರಿ, ಕಾರ್ತಿಕ ಸೋಮವಾರ, ಹೆಡಿಗೆ ಪರ, ಕಾರ ಹಬ್ಬ, ಉಪವಾಸದ ಹಬ್ಬ, ಮಾರಮ್ಮನ ಹಬ್ಬ, ತಿಪ್ಪಮ್ಮನ ಹಬ್ಬ, ಕಾರೆಮೆಳೆ ಸಿಂಗಮ್ಮನ ಹಬ್ಬ, ಬಂಡಿಹಬ್ಬ, ಮೊದಲಾದ ಹಬ್ಬಗಳನ್ನು ಮಾಡುತ್ತಾರೆ. ಯುಗಾದಿ ಹೊಸ ವರ್ಷವಾಗಿದ್ದು, ಬೇವು-ಬೆಲ್ಲ, ಹೋಳಿಗೆ ಈ ಹಬ್ಬದ ವೈಶಿಷ್ಟ್ಯ. ಯುಗಾದಿಯ ದಿನ ಚಂದ್ರನನ್ನು ನೋಡುವುದರ ಮೂಲಕ ಆ ವರ್ಷದ ಮುಂಗಾರು-ಹಿಂಗಾರು, ಗಾಳಿ-ಮಳೆ ಯಾವ ರೀತಿ ಇರುತ್ತದೆ ಎಂದು ಕಾಲಜ್ಞಾನ ತಿಳಿಯುತ್ತಾರೆ. ದೀಪಾವಳಿ ಈ ಗ್ರಾಮದ ವಿಶೇಷ ಹಬ್ಬವಾಗಿದೆ. ಇದು ಮೂರು ದಿನಗಳ ಕಾಲ ನಡೆಯುತ್ತದೆ. ಐಕನಹಳ್ಳಿಯಮ್ಮನ ಮಕ್ಕಳಾದ ದೊಡ್ಡಯ್ಯ ಚಿಕ್ಕಯ್ಯರು ಪಕ್ಕದ ಊರಾದ ತುಳಸಿ ಗ್ರಾಮದಲ್ಲಿದ್ದು ಅವರನ್ನು ಭಕ್ತರು ಐಕನಹಳ್ಳಿಗೆ ಕರೆದುಕೊಂಡು ಬರುತ್ತಾರೆ ಮತ್ತು ಹಬ್ಬದ ಆಚರಣೆಯಲ್ಲಿ ಭಾಗವಹಿಸುತ್ತಾರೆ. ಇವೆಲ್ಲದರ ವಿವರ-ವಿಶ್ಲೇಷಣೆಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗುತ್ತದೆ.

ಅಧ್ಯಾಯ ಏಳು : ಗ್ರಾಮದ ಜನಪದ ಸಾಹಿತ್ಯ, ಕಲೆ, ಜನಪದ ವೈದ್ಯ, ಅಡುಗೆ-ಉಡುಗೆ ಮತ್ತು ಜನಪದ ಆಟಗಳು

ಜನಪದರು ಪ್ರತಿ ದೇವತೆಯನ್ನು ಕುರಿತಂತೆ ಹಾಡು ಕಟ್ಟುತ್ತಾರೆ. ಐಕನಹಳ್ಳಿಯಮ್ಮನು ಕೂಡ ಇದರಿಂದ ಹೊರತಾಗಿಲ್ಲ. ಈ ದೇವತೆ ಕುರಿತಂತೆ ಇರುವ ಹಾಡು ಅವುಗಳು ಹುಟ್ಟಿಕೊಂಡ ಸಂದರ್ಭಗಳನ್ನು ಕೂಡ ವಿವರಿಸಲಾಗುವುದು. ಜನಪದರು ಜನಪದ ಪ್ರದರ್ಶನ ಕಲೆಗಳಾದ ನಾಟಕ, ಕೋಲಾಟ, ಸೋಮನ ಕುಣಿತ, ರಂಗದ ಕುಣಿತ ಮೊದಲಾದವುಗಳನ್ನು ಕರಗತ

ಮಾಡಿಕೊಂಡಿರುತ್ತಾರೆ. ಐಕನಹಳ್ಳಿ ಗ್ರಾಮಸ್ಥರು ಕೂಡ ಇಂತಹ ಕಲೆಗಳನ್ನು ಉಳಿಸಿಕೊಂಡು ಬೆಳೆಸಿಕೊಂಡು ಬರುತ್ತಿದ್ದಾರೆ. ಜನಪದ ವೈದ್ಯಕ್ಕೆ ಸಂಬಂಧಪಟ್ಟ ಮಾಹಿತಿಗಳನ್ನು ಮನುಷ್ಯ ಹಾಗೂ ಗೋವೈದ್ಯ ಚಿಕಿತ್ಸೆಗಳ ಹಿನ್ನೆಲೆಯಲ್ಲಿ ವಿವರಿಸಲಾಗುವುದು. ಜನಪದ ಅಡುಗೆ-ಉಡುಗೆಗಳ ಬಗ್ಗೆ ತಿಳಿಸಲಾಗುವುದು. ಬಳಕೆಯಲ್ಲಿರುವ ಗಾದೆಗಳನ್ನು ಪರಿಚಯಿಸಲಾಗುವುದು. ಹಾಗೆಯೇ ಮರಕೋತಿಯಾಟ, ಕಬ್ಬಡಿ, ಗುರಿಯಿಟ್ಟು ಹೊಡೆಯುವ ಚೆಂಡು, ಚಿನ್ನಿದಾಂಡು ಮೊದಲಾದ ಜನಪದ ಆಟಗಳನ್ನು ರೂಡಿಸಿಕೊಂಡಿದ್ದಾರೆ. ಕ್ಷೇತ್ರಕಾರ್ಯ ಮಾಡುವ ಮೂಲಕ ಮಾಹಿತಿ ಸಂಗ್ರಹಿಸಿ ತಿಳಿಸಲಾಗುವುದು.

ಅಧ್ಯಾಯ ಎಂಟು : ಐಕನಹಳ್ಳಿಯ ಉಪಭಾಷೆಯ ಪ್ರಭೇದಗಳು

ಐಕನಹಳ್ಳಿಯು ಒಂದು ಬಯಲು ಪರಿಸರದ ಗ್ರಾಮವಾಗಿದ್ದು ಉಪಭಾಷಿಕವಾಗಿಯೂ ಗುರುತಿಸುವ ಒಂದು ಗ್ರಾಮವಾಗಿದೆ. ಇಲ್ಲಿ ಭಾಷೆ ಜಾನಪದ ಸೊಗಡು ತುಂಬಿದ ಗ್ರಾಮೀಣ 'ದೇಸಿ' ಭಾಷೆಯೂ ಹೌದು. ಮಹಾಪ್ರಾಣಗಳ ಉಚ್ಚಾರದ ಸ್ಥಾನದಲ್ಲಿ ಅಲ್ಪಪ್ರಾಣಗಳೆ ಬಳಕೆಯಾಗುತ್ತವೆ. 'ಶ' 'ಷ' ಕಾರಗಳಿಗೆ 'ಸ' ಕಾರ ಪ್ರಯೋಗಗೊಳ್ಳುತ್ತದೆ. ದಿನನಿತ್ಯದ ಭಾಷೆಯ ವಾಕ್ಯಗಳಲ್ಲಿ ಇಂಗ್ಲಿಷ್ ಪದ ಪ್ರಯೋಗ ಹೆಚ್ಚು. ಪದ ವಾಕ್ಯ ಪ್ರಯೋಗಗಳಲ್ಲಿ ಶ್ಲೀಲ ಮತ್ತು ಅಶ್ಲೀಲಗಳ ಭೇದ ಎಣಿಸುವುದಿಲ್ಲ. ಪರಂಪರೆಯಲ್ಲಿಲ್ಲದ ಕೆಲವು ಹೊಸ ಸಂಬಂಧ ವಾಚಕಗಳ ವಿಶಿಷ್ಟ ಪದ ಪ್ರಯೋಗಗಳು ಕಂಡುಬರುತ್ತವೆ. ಅವುಗಳನ್ನು ನಿದರ್ಶನದೊಂದಿಗೆ ತಿಳಿಸಲಾಗುವುದು.

ಅಧ್ಯಾಯ ಒಂಬತ್ತು : ಒಟ್ಟು ನೋಟ :

ಅಧ್ಯಯನದ ಕೊನೆಯ ಭಾಗವಾದ ಈ ಒಟ್ಟು ನೋಟದಲ್ಲಿ, ಸಂಶೋಧನೆಯಲ್ಲಿ ಕಂಡುಕೊಂಡ ಫಲಿತಗಳನ್ನು ಅದರ ಉಪಯೋಗಗಳನ್ನು, ಮಹತ್ವಗಳನ್ನು ವಿವರವಾಗಿ ತಿಳಿಸಲಾಗುವುದು. ಭಿನ್ನ ಸಂಸ್ಕೃತಿ, ಭಿನ್ನ ಜಾತಿ-ಜನಾಂಗಳುಳ್ಳ ಹಳ್ಳಿಗಳನ್ನು ಸಮಗ್ರವಾಗಿ ಅಧ್ಯಯನ ಮಾಡಬೇಕಿದೆ ಎಂಬುದನ್ನು ಕಂಡುಕೊಳ್ಳಲಾಗಿದೆ.

❖ ❖ ❖

ಅಡಿ ಟಿಪ್ಪಣಿಗಳು

೧. ಮೈಸೂರು ಜಿಲ್ಲಾ ಗ್ರಾಮ ನಾಮಗಳ ಅಧ್ಯಯನ : ಡಾ. ಎಸ್. ನಾಗಾಚಾರಿ, ಪುಟ. ೧೮.

೨. ಗ್ರಾಮೀಣ : ಚಿದಾನಂದಮೂರ್ತಿ, ಪುಟ. ೧೧೩.

ಅಧ್ಯಾಯ – ೨

ಐಕನಹಳ್ಳಿ ಗ್ರಾಮದ ಹೆಸರಿನ ಮೂಲ ಮತ್ತು ಭೌಗೋಳಿಕ ಪರಿಸರ

೧. ಐಕನಹಳ್ಳಿ ಗ್ರಾಮದ ಹೆಸರಿನ ಮೂಲ

ಐಕನಹಳ್ಳಿಯು ಬಯಲು ಪ್ರದೇಶವಾದ ಮಂಡ್ಯ ಜಿಲ್ಲೆಯ ಒಂದು ಸ್ಥಳ. ಈ ಗ್ರಾಮದ ಹೆಸರಿನ ನಿಷ್ಪತ್ತಿಯು ವಿಶಿಷ್ಟವಾಗಿದೆ. ಇದರ ನಿಷ್ಪತ್ತಿಯನ್ನು ಕುರಿತಂತೆ ಎರಡು ಹೇಳಿಕೆಗಳನ್ನು ಕಾಣಬಹುದಾಗಿದೆ. ಕ್ಷೇತ್ರ ಕಾರ್ಯದ ಸಮಯದಲ್ಲಿ ತಿಳಿದು ಬಂದ ಮೊದಲನೆಯ ನಿಷ್ಪತ್ತಿ: ಗ್ರಾಮದಲ್ಲಿ ಒಂದು ಬಸವೇಶ್ವರ ದೇವಾಲಯವಿದ್ದು ಇದು ಶಿವ ದೇವಾಲಯವಾಗಿದೆ. "ಉತ್ತರದಿಂದ ಬಂದ ಬಸವೇಶ್ವರರು, ಈ ಶಿವ ದೇವಾಲಯದ ಸ್ಥಳದಲ್ಲಿ ಐಕ್ಯ ಹೊಂದಿದರು ಈ ಕಾರಣದಿಂದಾಗಿ ಈ ಗ್ರಾಮಕ್ಕೆ ಐಕನಹಳ್ಳಿ ಎಂಬ ಹೆಸರು ಬಂದಿತು"[೧] ಆದರೆ ಇದೊಂದು ಹೇಳಿಕೆ ಮಾತ್ರವಾಗಿ ಉಳಿಯುತ್ತದೆಯೇ ಹೊರತು ಇದನ್ನು ದೃಢೀಕರಿಸಲು ಯಾವುದೇ ಆಧಾರಗಳಿಲ್ಲ. ಈ ಕಾರಣದಿಂದಾಗಿ ಇದರ ನಿಷ್ಪತ್ತಿಯನ್ನು ಈ ರೀತಿ ಹೇಳಬಹುದಾಗಿದೆ.

ಎರಡನೆಯದು: ಐಕನಹಳ್ಳಿ ಒಂದು ವ್ಯಕ್ತಿವಾಚಿ ನಾಮವಾಗಿ ಕಂಡುಬರುತ್ತದೆ. 'ಐಕ + ನ + ಹಳ್ಳಿ' ಎಂಬಲ್ಲಿ 'ಐಕ' ಎಂಬ ವ್ಯಕ್ತಿ ಈ ಊರಿನ ಮೂಲ ಪುರುಷ ಎಂದು ತಿಳಿದುಬರುತ್ತದೆ. ಐಕನ ಎಂಬ ಪದದಲ್ಲಿ ಬರುವ 'ನ' ಪ್ರತ್ಯಯ ಐಕ ಎಂಬ ವ್ಯಕ್ತಿಗೆ ಸಂಬಂಧಿಸಿದ ಊರು ಎಂಬುದನ್ನು ತಿಳಿಸುತ್ತದೆ. " 'ಏನ' ಎಂಬ ಪ್ರತ್ಯಯ ಅಯ್ಯಾ ಎಂಬ ಪದದ ಸವೆದರೂಪವಾದರೆ 'ನ' ಪ್ರತ್ಯಯ ಷಷ್ಠಿ ವಿಭಕ್ತಿ ಪ್ರತ್ಯಯ ಸಂಬಂಧದ ಕಾರಕವಾಗಿ ಪ್ರಯೋಗಗೊಂಡಿದ್ದು, ಆ ವ್ಯಕ್ತಿಗೆ ಸಂಬಂಧಿಸಿದ ಊರು ಎಂದು ತಿಳಿದುಬರುತ್ತದೆ."[೨]

ನೀರು-ನೆರಳು ಇರುವ ಜಾಗದಲ್ಲಿ ತಳ ಊರುವುದು ಮಾನವನ ಸಹಜ ಗುಣ. ಅವನಿಗೆ ಅವನ ದನ-ಕರುಗಳಿಗೆ ನೀರು-ನೆರಳು ಇರುವ ಜಾಗ ಬೇಕು. ಅಂತಹ ಜಾಗವನ್ನು ಅರಸುತ್ತಿದ್ದ ಐಕ ಎಂಬ ವ್ಯಕ್ತಿಗೆ ಕೆರೆ ಇರುವ ಈಗ ಐಕನಹಳ್ಳಿ ಎಂದು ಕರೆಯಲ್ಪಡುವ ಈ ಜಾಗ ಸೂಕ್ತವಾಗಿ ಕಂಡಿರಬೇಕು. ಇಲ್ಲೆ ನೆಲೆ ನಿಲ್ಲಲು ನಿರ್ಧರಿಸಿರಬೇಕು. ಒಂದು ಊರಿಗೆ ಹೆಸರು ಕೊಡುವವರು ಅದರೊಂದಿಗೆ ನಿತ್ಯ ಸಂಬಂಧ ಹೊಂದಿರುವ ಪರ ಊರಿನವರು. ಐಕ ಎಂಬ ವ್ಯಕ್ತಿ ಮೊದಲಿಗೆ ಇಲ್ಲಿ ನೆಲೆನಿಂತಿದ್ದರಿಂದ 'ಐಕ' ನೆಲಸಿದ ಹಳ್ಳಿ ಐಕನಹಳ್ಳಿಯಾಗಿದೆ. ಈ ರೀತಿ ನೆಲೆ ನಿಂತವರನ್ನು 'ತರಗುಗುಡಿಸಿ ಊರು ಕಟ್ಟಿದವರು' ಎಂದೂ ಕರೆಯುತ್ತಾರೆ. ಒಂದು ಗ್ರಾಮದ ಹೆಸರಿನ ಹಿಂದೆ

ಒಂದು ಸಂಸ್ಕೃತಿ ಅಡಗಿರುತ್ತದೆ ಈ ಕಾರಣದಿಂದಾಗಿಯೇ "ಗ್ರಾಮ ನಾಮಗಳು ಪುಟ್ಟ ಪುಟ್ಟ ವಿಶ್ವಕೋಶಗಳಾಗಿವೆ."[೩]

'ಐಕ' ಎಂಬ ಈ ಊರಿನ ಮೂಲ ಪುರುಷ ಒಕ್ಕಲಿಗ ಜಾತಿಗೆ ಸೇರಿರುವನಾಗಿದ್ದು ಒಕ್ಕಲುತನ ಈತನ ಕಸುಬಾಗಿದೆ. ಪ್ರಸ್ತುತದಲ್ಲೂ ಒಕ್ಕಲಿಗ ಜಾತಿಗೆ ಸೇರಿದ ಕುಟುಂಬಗಳು ಈ ಹಳ್ಳಿಯಲ್ಲಿ ಬಹುಸಂಖ್ಯಾತರಾಗಿದ್ದು ನಾವೆಲ್ಲರು 'ಐಕ'ನ ವಂಶಸ್ಥರೆಂದು ಹೇಳಿಕೊಳ್ಳುತ್ತಾರೆ. ಈ ಊರಿನಲ್ಲಿರುವ ಅಂಕಮ್ಮನ ಕುಟುಂಬದವರು ನಾವು ಐಕನ ವಂಶಸ್ಥರು ಎಂದು ಹೇಳಿಕೊಳ್ಳುತ್ತಾರೆ. ಐಕ > ಅಂಕ ಆಗಿರುವ ಸಾಧ್ಯತೆಗಳನ್ನು ಒಪ್ಪಬಹುದಾಗಿದೆ. ಆದರೆ ಪುರುಷವಾಚಿ ಯಾವ ಕಾರಣದಿಂದ ಸ್ತ್ರೀವಾಚಿಯಾಯಿತು ಎಂಬುದು ತಿಳಿಯಬರುತ್ತಿಲ್ಲ. ಒಟ್ಟಿನಲ್ಲಿ ಇಲ್ಲಿಯ ಮೂಲ ಪುರುಷ 'ಐಕ' ಎಂಬುದು ಸ್ಪಷ್ಟವಾಗಿದೆ.

೨. ಐಕನಹಳ್ಳಿಯ ಸ್ಥಳ ನಾಮಗಳು

ಗ್ರಾಮದಲ್ಲಿರುವ ಪ್ರಸಿದ್ಧ ಸ್ಥಳಗಳಿಗೆ ಗ್ರಾಮಸ್ಥರು ಕೆಲವು ಹೆಸರುಗಳನ್ನಿಟ್ಟು ಕರೆದುಕೊಂಡು ಬಂದಿದ್ದಾರೆ. ಇವು ಇತಿಹಾಸ ಮತ್ತು ಸಂಸ್ಕೃತಿಗಳನ್ನು ಪರಿಚಯಿಸಿಕೊಳ್ಳಲು ಸಹಾಯಕವಾಗುತ್ತವೆ.

ದೋಣಿಹರೆ

ಗ್ರಾಮದ ದಕ್ಷಿಣ ದಿಕ್ಕಿನಲ್ಲಿ ಕಲ್ಲುಗಳು ಹೆಚ್ಚಾಗಿ ಇವೆ. ಇದೇ ಸ್ಥಳದಲ್ಲಿ ದೋಣಿಯ ಆಕಾರವನ್ನು ಹೋಲುವ ಕಲ್ಲಿದೆ. ಪೂರ್ವಿಕರ ಕಾಲದಿಂದಲು ಇದನ್ನು ದೋಣಿಹರೆಯೆಂದು ಕರೆಯುತ್ತ ಬಂದಿದ್ದಾರೆ. ಊರಿನ ಸ್ಥಳಗಳನ್ನು ಸುಲಭವಾಗಿ ಗುರುತಿಸುವ ಕಾರಣಕ್ಕಾಗಿ ಇಂತಹ ಹೆಸರುಗಳು ಇಂದಿಗೂ ಚಾಲ್ತಿಯಲ್ಲಿವೆ.

ಕೆಂಬಾರೆ

ಊರಿನ ಹೊರಭಾಗದಲ್ಲಿರುವ ಬಾರೆಯ ಹಳ್ಳವೊಂದನ್ನು ಕೆಂಬಾರೆ ಎಂದು ಕರೆಯುತ್ತಾರೆ. "ಸುಮಾರು ೪೦೦ ವರ್ಷಗಳ ಹಿಂದೆ ಶವಗಳನ್ನು ತೆಗೆದುಕೊಂಡು ಹೋಗಿ ಕೆಂಬಾರೆಯಲ್ಲಿ ಎಸೆಯುತ್ತಿದ್ದರಂತೆ. ಶವದ ಮೇಲೆ ಅವರಕೆ ಸೊಪ್ಪನ್ನು ಮುಚ್ಚಿ ಬರುತ್ತಿದ್ದರಂತೆ. ಪಕ್ಕದಲ್ಲಿ ಒಂದು ಬಿಂದಿಗೆ ನೀರನ್ನು ಇಟ್ಟುಬರುತ್ತಿದ್ದರು. ಇದು ನಮ್ಮ ಜನಪದರ ಪ್ರಾಚೀನ ಶವಸಂಸ್ಕಾರ ಪದ್ಧತಿಯನ್ನು ಪರಿಚಯಿಸುತ್ತದೆ."[೪]

ಸಿಡಿಲು ಹೊಡೆದ ಕಲ್ಲು

ಕಲ್ಲು ಬಂಡೆಯ ಬಳಿ ದೊಡ್ಡ ಕಲ್ಲಿಗೆ ಸಿಡಿಲು ಹೊಡೆದು ಬಿರುಕು ಬಿಟ್ಟಿದೆ. ಇದೇ ಸಿಡಿಲು ಹೊಡೆದ ಕಲ್ಲು ಎಂದು ಪ್ರಸಿದ್ಧಿ ಪಡೆದುಕೊಂಡು ಬಂದಿದೆ. ಈ ಕಲ್ಲಿನ ತಳಭಾಗ ದೊಡ್ಡ ಗುಂಡಿಯಂತಿದೆ. ಮಳೆ ಬಂದಾಗ ನೀರು ತುಂಬಿಕೊಳ್ಳುತ್ತದೆ. "ಮತ್ತೊಂದು ನಂಬಿಕೆಯ ಪ್ರಕಾರ

ಶ್ರೀರಾಮ ಬಾಣ ಹೊಡೆದಾಗ ಈ ರೀತಿ ಆಗಿದೆ ಎಂದು ಹಿರಿಯರು ಹೇಳುತ್ತಾರೆ."[೫] ಜನಪದರು ಇಂತಹ ನಂಬಿಕೆಯಿಟ್ಟುಕೊಂಡಿರುವುದರಿಂದ ಈ ಸ್ಥಳದ ಮಹತ್ವ ಹೆಚ್ಚಿದೆ.

ಕರಿಕಲ್ಲಿನ ಮಂಟಿ

ಸಿಡಿದು ಹೊಡೆದ ಕಲ್ಲಿನ ಅಕ್ಕಪಕ್ಕದಲ್ಲಿ ವಿಸ್ತಾರವಾದ ಬಯಲು ಪ್ರದೇಶದಲ್ಲಿ ದಪ್ಪ ದಪ್ಪ ಕರಿಕಲ್ಲಿನ ಬಂಡೆಗಳಿವೆ. ಅವುಗಳ ಸುತ್ತಮುತ್ತ ಬೇರೆ ಬೇರೆ ಆಕಾರದ ಕಲ್ಲುಗಳು ಇವೆ. ಈ ಸ್ಥಳವೇ ಕರಿಕಲ್ಲಿನ ಮಂಟಿ. "ಇದೇ ಜಾಗದಲ್ಲಿ ದೊಡ್ಡ ಗಾತ್ರದ ಬಂಡೆಯೊಂದಿದೆ. ಈ ಬಂಡೆಯ ಎದುರಿಗೆ ನಿಂತು ಕೂಗಿದರೆ ನಾವು ಕೂಗಿದಂತೆ ಪ್ರತಿಧ್ವನಿಸುತ್ತದೆ."[೬] ರಜಾ ದಿನಗಳಲ್ಲಿ ಮಕ್ಕಳು ಸಾಕು ಪ್ರಾಣಿಗಳನ್ನು ಮೇಯಿಸಲು ಬಂದಾಗ ಕೂಗಿ ಕೂಗಿ ಸಂಭ್ರಮಿಸುತ್ತಾರೆ. ಕೆಲವು ಹಿರಿಯರು ಇದರಿಂದ ಹೊರತಾಗಿಲ್ಲ.

ಹಾರೆಕಲ್ಲು

ಕನ್ನಂಬಾಡಮ್ಮನ ಗುಡಿಯ ಕಡೆಯಿಂದ ಸಾಸಲು ಗ್ರಾಮಕ್ಕೆ ಹೋಗುವ ದಾರಿಯಲ್ಲಿ ದೊಡ್ಡ ಕಲ್ಲಿದೆ. ಇದು ನೆಲಕ್ಕೆ ಹಾಸಿದಂತಿದೆ. ಈ ಕಾರಣಕ್ಕಾಗಿ ಹಾರೆಕಲ್ಲು ಹರಡಿರುವ ಕಲ್ಲು ಎಂದು ಕರೆದಿದ್ದಾರೆ. ಈ "ಹಾರೆಕಲ್ಲಿನ ಮೇಲೆ ಗ್ರಾಮದೇವತೆ ಐಕನಹಳ್ಳಿಯಮ್ಮ ತಮ್ಮ ಮಕ್ಕಳಾದ ದೊಡ್ಡಯ್ಯ-ಚಿಕ್ಕಯ್ಯನ ಜೊತೆಯಲ್ಲಿ ಮಲಗುತ್ತಿದ್ದಳು ಎಂದು ನಂಬಿಕೊಂಡಿದ್ದಾರೆ. ಮತ್ತೆ ಕೆಲವರು ಐಕನಹಳ್ಳಿಯಮ್ಮ ತನ್ನ ಅಕ್ಕ-ತಂಗಿಯರು (ಒಟ್ಟು ೭ ಜನ) ಬಂದಾಗ ಈ ಹಾರೆಕಲ್ಲಿನ ಮೇಲೆ ಕುಳಿತು ಊಟ ಮಾಡಿದ್ದಳಂತೆ ಎಂದು ಹೇಳುತ್ತಾರೆ."[೭] ಈ ಕಾರಣಕ್ಕಾಗಿ ಈ ಕಲ್ಲು ಮಹತ್ವ ಪಡೆದುಕೊಂಡಿದೆ.

ದಾಸನ ಕಟ್ಟೆ

ಊರಿನ ಕುಟುಂಬಗಳ ಹಿರಿಯರು ತಮ್ಮ ಜಮೀನಿನಲ್ಲಿ ಕಟ್ಟೆಗಳನ್ನು ಕಟ್ಟಿಸುತ್ತಿದ್ದರು. ಮಳೆ ನೀರು ಸಂಗ್ರಹವಾಗಿ ದನಕರುಗಳಿಗೆ ಕುಡಿಯಲು ನೀರು ಸಿಗಬೇಕು ಎಂಬ ಆಶಯವಿತ್ತು. ಹೀಗಾಗಿ ಕಟ್ಟೆಯನ್ನು ಕಟ್ಟಿಸಿದ ವ್ಯಕ್ತಿಯ ಹೆಸರೆ ಉಳಿದುಕೊಂಡು ಬಂದಿದೆ. ಈ ಗ್ರಾಮದಲ್ಲಿರುವ ಒಕ್ಕಲಿಗರೆಲ್ಲ ಗಂಗಡಿಕಾರ ಒಕ್ಕಲಿಗರೆ ಆಗಿದ್ದಾರೆ. ವಕ್ತೃ ಒಬ್ಬರು ಹೇಳುವ ಪ್ರಕಾರ "ನೂರಾರು ವರ್ಷಗಳ ಹಿಂದೆ ಹಾಸನ ಜಿಲ್ಲೆಯ ದಾಸ ಒಕ್ಕಲಿಗರ ಕುಟುಂಬವೊಂದು ಇಲ್ಲಿ ನೆಲೆಸಿತ್ತು. ತರುವಾಯ ಅವರ ಕುಟುಂಬದವರು ಆಸ್ತಿಪಾಸ್ತಿ ಮಾರಿ ಹೊರಟುಹೋದರಂತೆ. ಆದರೂ ಕಟ್ಟೆಯನ್ನು ಕಟ್ಟಿಸಿದ ದಾಸ ಒಕ್ಕಲಿಗರ ನೆನಪಿಗಾಗಿ ದಾಸನಕಟ್ಟೆ ಎಂಬ ಹೆಸರೇ ಇಂದಿಗೂ ಉಳಿದಿದೆ."[೮]

ಹೊಂಗೆ ಹಳ್ಳ

ಐಕನಹಳ್ಳಿಯಿಂದ ತುಳಸಿ ಗ್ರಾಮಕ್ಕೆ ಹೋಗುವ ದಾರಿಯೊಂದಿದೆ. ಇಲ್ಲಿನ ಹಳ್ಳದಲ್ಲಿ ಹೆಚ್ಚಾಗಿ ಹೊಂಗೆ ಮರಗಳು ಬೆಳೆದಿವೆ. ಈ ಹಳ್ಳದಲ್ಲಿ ಹೊಂಗೆ ಮರಗಳು ಹೆಚ್ಚಾಗಿ ಇರುವ ಕಾರಣಕ್ಕಾಗಿ ಈ ಸ್ಥಳವನ್ನು ಹೊಂಗೆ ಹಳ್ಳವೆಂದು ಕರೆದುಕೊಂಡು ಬಂದಿದ್ದಾರೆ.

ಮಣ್ಣುಗುಂಡಿ

ಗ್ರಾಮದಿಂದ ಕಿಕ್ಕೇರಿಗೆ ಹೋಗುವ ದಾರಿಯಲ್ಲಿ ದೊಡ್ಡ ಗುಂಡಿಯೊಂದಿದೆ. ಈ ಜಾಗದಲ್ಲಿರುವ ಮಣ್ಣನ್ನು ಮನೆ ಕಟ್ಟಲು ಬಳಸುತ್ತಿದ್ದರು. ಮಣ್ಣು ತೆಗೆದು ತೆಗೆದು ಗುಂಡಿ ಬಿದ್ದಿರುವುದರಿಂದ ಇದು ಮಣ್ಣುಗುಂಡಿಯೆಂದು ಕರೆಸಿಕೊಂಡಿದೆ. ಹಿಂದೆ ಮಣ್ಣಿನಿಂದ ಕಟ್ಟಿದ ಮನೆಗಳೆ ಹೆಚ್ಚಾಗಿದ್ದವು. ಈಗ ಸಿಮೆಂಟನ್ನು ಉಪಯೋಗಿಸಿ ಮನೆಗಳನ್ನು ಕಟ್ಟುತ್ತಿರುವುದರಿಂದ ಮಣ್ಣನ್ನು ಉಪಯೋಗಿಸುವುದು ಕಡಿಮೆ. ಮಳೆಗಾಲದಲ್ಲಿ ಸಂಗ್ರಹವಾದ ಮಣ್ಣುಗುಂಡಿಯ ನೀರನ್ನು ದನಕರುಗಳಿಗೆ ನೀರು ಕುಡಿಸಲು, ಬಟ್ಟೆ ತೊಳೆಯಲು ಮುಂತಾದ ಕಾರಣಗಳಿಗೆ ಬಳಸುತ್ತಾರೆ.

ಮೂಡಲ ಕಟ್ಟೆಹಳ್ಳ

ಐಕನಹಳ್ಳಿಯ ಮೂಡಲ ದಿಕ್ಕಿಗೆ ಸಾಸಲು ಗ್ರಾಮವಿದೆ. ಇದೇ ದಾರಿಯಲ್ಲಿ ದೊಡ್ಡ ಹಳ್ಳವೊಂದಿದೆ. ಮೂಡಲ ದಿಕ್ಕಿಗೆ ಇರುವ ಕಾರಣಕ್ಕಾಗಿ ಮೂಡಲ ಕಟ್ಟೆಹಳ್ಳವೆಂದು ಕರೆಯುತ್ತಾರೆ. ದನಕರುಗಳಿಗೆ ನೀರನ್ನು ಕುಡಿಸಲು ಹೆಚ್ಚಾಗಿ ಇದು ಉಪಯುಕ್ತವಾಗಿದೆ.

ಜೋಡಹಳ್ಳಿ ಮರ

ಊರಿನ ಹೊರ ಭಾಗದ ಕೆರೆಯ ಬಳಿ ಐಕನಹಳ್ಳಿಯಮ್ಮನ ಗುಡಿಯಿದೆ. ಇದೇ ದಾರಿಯಲ್ಲಿ ಎರಡು ಅರಳಿ ಮರಗಳು ಒಟ್ಟಾಗಿ ಇವೆ. ಈ ಕಾರಣಕ್ಕಾಗಿ ಜೋಡಹಳ್ಳಿ ಮರವೆಂದು ಕರೆದಿದ್ದಾರೆ.

ಹೊಸಕಟ್ಟೆ

ಐಕನಹಳ್ಳಿಯಿಂದ ಮಾದಾಪುರಕ್ಕೆ ಹೋಗುವ ದಾರಿಯಲ್ಲಿ ಹೊಸದಾಗಿ ಕಟ್ಟೆಯೊಂದನ್ನು ಕಟ್ಟಿಸಿದ್ದಾರೆ. ಪ್ರಮುಖವಾಗಿ ದನಕರುಗಳಿಗೆ ನೀರಿನ ಅನುಕೂಲವಾಗಲಿ ಎಂಬ ಉದ್ದೇಶವಿದೆ. ಇತ್ತೀಚೆಗೆ ಕಟ್ಟಿಸಿದ ಕಟ್ಟೆಯಾದ್ದರಿಂದ ಇದಕ್ಕೆ ಹೊಸಕಟ್ಟೆಯೆಂದು ಕರೆಯುವುದು ವಾಡಿಕೆಯಾಗಿದೆ.

ಗೌಜಲಹಕ್ಕಿ ಹಳ್ಳ

ಐಕನಹಳ್ಳಿಯಿಂದ ಗುರುಗಾರನಹಳ್ಳಿಗೆ ಹೋಗುವ ದಾರಿಯಲ್ಲಿ ಹಳ್ಳವೊಂದಿದೆ. ಇಲ್ಲಿ ಗೌಜಲಹಕ್ಕಿಗಳು ಹೆಚ್ಚು ವಾಸಮಾಡುತ್ತಿದ್ದವಂತೆ. ಹೀಗಾಗಿ ಇದಕ್ಕೆ ಗೌಜಲಹಕ್ಕಿ ಹಳ್ಳವೆಂದು ಕರೆಯುತ್ತಾರೆ. ಆದರೆ ಇತ್ತೀಚೆಗೆ ಅಷ್ಟು ಪ್ರಮಾಣದ ಗೌಜಲಹಕ್ಕಿಗಳು ಇಲ್ಲಿ ಕಾಣುವುದಿಲ್ಲ.

ಜಲದ ಗುಂಡಿ

ಐಕನಹಳ್ಳಿಯಿಂದ ತುಳಸಿ ಗ್ರಾಮಕ್ಕೆ ಹೋಗುವ ದಾರಿಯಲ್ಲಿ ಗುಂಡಿಯೊಂದಿದೆ. ಅಂತರ್ಜಲ ಹೆಚ್ಚಾಗಿರುವ ಕಾರಣಕ್ಕೆ ಈ ಗುಂಡಿಯಲ್ಲಿ ಬೇಸಿಗೆ ಕಾಲದಲ್ಲಿಯೂ ನೀರು ಸಿಗುತ್ತಿತ್ತು. ಹೀಗಾಗಿ ಜಲದ ಗುಂಡಿಯೆಂದು ಕರೆಯುತ್ತಾರೆ. ಇತ್ತೀಚೆಗೆ ಕೊಳವೆ ಬಾವಿಗಳನ್ನು ಈ ಭಾಗದಲ್ಲಿ ಹೆಚ್ಚಾಗಿ ಕೊರೆಸಿರುವುದರಿಂದ, ನೀರಿನ ಪ್ರಮಾಣ ಕಡಿಮೆಯಾಗುತ್ತಿದೆ.

ಗೌಡನೋರಕಲ್ಲು ಬಾವಿ

ಗೌಡನೋರ ಎಂಬುದು ಒಂದು ಕುಟುಂಬದ ಹೆಸರು. ಈ ಕುಟುಂಬದ ಹಿರಿಯ ತಮ್ಮ ಜಮೀನಿನ ಬಳಿ ಬಾವಿಯನ್ನು ತೋಡಿಸಿದ್ದಾರೆ. ಬಾವಿಯ ಸುತ್ತ ಕಲ್ಲುಗಳನ್ನು ಜೋಡಿಸಿದ್ದಾರೆ. ಇದರಿಂದಾಗಿ ಗೌಡನೋರ ಕಲ್ಲುಬಾವಿ ಎಂದು ಕರೆಯುತ್ತಾರೆ.

ಕಲ್ಲುಬಾವಿ

ಐಕನಹಳ್ಳಿಯಮ್ಮನ ದೇವಾಲಯಕ್ಕೆ ಹೋಗುವ ದಾರಿಯಲ್ಲಿ ಕಲ್ಲುಬಾವಿ ಇದೆ. ಇದನ್ನು ಸಂಪೂರ್ಣವಾಗಿ ಚಪ್ಪಡಿ ಕಲ್ಲುಗಳನ್ನು ಉಪಯೋಗಿಸಿ ಕಟ್ಟಿಸಿದ್ದಾರೆ. ಅತ್ಯಂತ ಆಕರ್ಷಣೀಯವಾದ ರೀತಿಯಲ್ಲಿರುವ ಈ ಕಲ್ಲುಬಾವಿಯು ಗ್ರಾಮದ ಸೌಂದರ್ಯವನ್ನು ಹೆಚ್ಚಿಸಿದೆ. ನೂರಾರು ವರ್ಷಗಳಿಂದ ಗ್ರಾಮದಲ್ಲಿ ಜರುಗುವ ಯಾವುದೇ ಶುಭ ಸಮಾರಂಭಗಳಿಗೆ ಇಲ್ಲಿಯ ನೀರನ್ನು ಶಾಸ್ತ್ರದ ನೀರಾಗಿ ಬಳಸುತ್ತಿದ್ದಾರೆ. ಅಂತರ್ಜಲ ಕುಸಿದಿರುವುದರಿಂದ ನೀರಿನ ಪ್ರಮಾಣ ಬೇಸಿಗೆ ಕಾಲದಲ್ಲಿ ಕಡಿಮೆಯಿರುತ್ತದೆ. ಮಳೆಗಾಲದಲ್ಲಿ ಇಲ್ಲಿ ನೀರಿಗೆ ಕೊರತೆಯಿಲ್ಲ.

ಭಜನೆ ಮನೆ

ರಂಗದ ಬೀದಿಯ ಪಕ್ಕದಲ್ಲಿಯೇ ಭಜನೆ ಮನೆಯಿದೆ. ಗ್ರಾಮದವರೆ ಕಟ್ಟಿಸಿದ ಈ ಭಜನೆ ಮನೆಯಲ್ಲಿ ಹರಿಕಥೆ ಮಾಡುತ್ತಾರೆ. ದಿನಪೂರ್ತಿ ದುಡಿದ ಜನ, ತಮ್ಮ ದೈಹಿಕ ಆಯಾಸವನ್ನು ಹೋಗಲಾಡಿಸಿಕೊಳ್ಳಲು ಹಾಗು ದೇವರ ಭಕ್ತಿಯನ್ನು ಪ್ರದರ್ಶಿಸಲು ಇವುಗಳ ಮೊರೆ ಹೋಗಿದ್ದಾರೆ. ಗ್ರಾಮಸ್ಥರಲ್ಲಿಯೇ ೮–೧೦ ಜನ ಹರಿಕಥೆ ಮಾಡುವವರಿದ್ದಾರೆ. ಚಿನ್ಮಯ ದಾಸರ ಶನಿಕಥೆ ಪುಸ್ತಕವನ್ನು ಓದುತ್ತಾರೆ. ಬೇರೆ ಬೇರೆ ಊರುಗಳಿಗೂ ಹರಿಕಥೆ ಮಾಡಲು ಹೋಗುತ್ತಾರೆ. ಹರಿಕಥೆ ಓದಿದಾಗ ಬರುವ ದಕ್ಷಿಣೆಯಿಂದ ಲಕ್ಷ್ಮಿದೇವಿ ಗುಡಿಯಲ್ಲಿ ಅಭಿಷೇಕ ಮಾಡಿಸುತ್ತಾರೆ.

೩. ಭೌಗೋಳಿಕ ಪರಿಸರ ಮತ್ತು ನೈಸರ್ಗಿಕ ಅಂಶಗಳು

ಗ್ರಾಮವೊಂದು ಅಭಿವೃದ್ಧಿಯ ದಾರಿಯಲ್ಲಿ ಸಾಗಬೇಕಾದರೆ ಅದು ನಗರ ಪ್ರದೇಶಕ್ಕೆ ಭೌಗೋಳಿಕವಾಗಿ ಎಷ್ಟು ಹತ್ತಿರವಿದೆ ಎಂಬುದು ಮುಖ್ಯವಾಗುತ್ತದೆ. ವ್ಯವಹಾರಿಕವಾಗಿ ಹೊರಜಗತ್ತಿನೊಂದಿಗೆ ಯಾವ ರೀತಿಯ ಸಂಬಂಧವನ್ನು ಇಟ್ಟುಕೊಂಡಿದೆ ಎಂಬುದು ಪ್ರಮುಖ ಪಾತ್ರವಹಿಸುತ್ತದೆ. ನಗರಕ್ಕೆ ಸಮೀಪದಲ್ಲಿದ್ದು ಬಾಹ್ಯ ಜಗತ್ತಿನೊಂದಿಗೆ ಉತ್ತಮ ಸಂಬಂಧ ಹೊಂದಿದ್ದರೆ ಸಹಜವಾಗಿಯೇ ಗ್ರಾಮದ ಬೆಳವಣಿಗೆ ಸುಲಭವಾಗುತ್ತದೆ.

ಐಕನಹಳ್ಳಿ ಕರ್ನಾಟಕದ ಸಕ್ಕರೆಯ ನಾಡು ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕಿನ ಕಿಕ್ಕೇರಿ ಹೋಬಳಿಗೆ ಸೇರಿದ ಗ್ರಾಮವಾಗಿದೆ. ಇದು ಬೆಂಗಳೂರಿನಿಂದ ೧೬೫ ಕಿ.ಮೀ. ದೂರದಲ್ಲಿದೆ. ಐಕನಹಳ್ಳಿಯಿಂದ ತಾಲ್ಲೂಕು ಕೇಂದ್ರಕ್ಕೆ ಉತ್ತಮ ರಸ್ತೆ ಸಂಪರ್ಕವಿದೆ. ಆದರೆ ಸಾರಿಗೆ

ಸೌಲಭ್ಯ ಅಷ್ಟಕಷ್ಟೆ. ಇತ್ತೀಚೆಗೆ ಬಹುತೇಕ ಎಲ್ಲರು ಸ್ಕೂಟರ್ ಮತ್ತು ಬೈಕ್‌ಗಳನ್ನು ಇಟ್ಟುಕೊಂಡಿದ್ದಾರೆ. ಆಟೋಗಳು ಹೆಚ್ಚು ಊರಿಗೆ ಬರುತ್ತಿವೆ. ವ್ಯಾಪಾರ-ವ್ಯವಹಾರ, ಆಸ್ಪತ್ರೆ, ಕಾಲೇಜು ಮೊದಲಾದ ಉದ್ದೇಶಕ್ಕಾಗಿ ಕಿಕ್ಕೇರಿ ಹಾಗು ಪಕ್ಕದ ತಾಲ್ಲೂಕಾದ ಚನ್ನರಾಯಪಟ್ಟಣವನ್ನು ಹೆಚ್ಚಾಗಿ ಅವಲಂಭಿಸಿದ್ದಾರೆ. ಕೃಷ್ಣರಾಜಪೇಟೆಗೆ ಅನಿವಾರ್ಯ ಸಂದರ್ಭದಲ್ಲಿ ಮಾತ್ರ ಹೋಗುತ್ತಾರೆ. ಸರ್ಕಾರಿ ಪ್ರಾಥಮಿಕ ಶಾಲೆಯಿದೆ ಹಾಗು ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ನಡೆಸುತ್ತಿರುವ ಬಸವೇಶ್ವರ ಪ್ರೌಢಶಾಲೆ ಸರ್ಕಾರದ ಅನುದಾನಕ್ಕೆ ಒಳಪಟ್ಟಿದೆ. ಆದರು ಇಂಗ್ಲಿಷ್ ಮಾಧ್ಯಮದ ಶಿಕ್ಷಣವನ್ನು ಮಕ್ಕಳಿಗೆ ಕೊಡಿಸಬೇಕೆಂಬ ತುಡಿತ ಪೋಷಕರಲ್ಲಿ ಹೆಚ್ಚಾಗುತ್ತಿದೆ.

ಗ್ರಾಮೀಣ ವಾತಾವರಣದ ಮೇಲೆ ನಾಗರಿಕತೆ ಹಿಡಿತ ಸಾಧಿಸಲು ಪ್ರಯತ್ನಿಸುತ್ತಿದೆ. ಗ್ರಂಥಾಲಯ, ಸಮುದಾಯ ಭವನ, ಗ್ರಾಮ ಪಂಚಾಯಿತಿ ಕಾರ್ಯಾಲಯ, ಹಾಲಿನ ಡೈರಿ, ನ್ಯಾಯಬೆಲೆ ಅಂಗಡಿ, ಅಂಚೆ ಕಛೇರಿ, ಸಾಕ್ಷರತಾ ಶಿಕ್ಷಣ ಸಮಿತಿಗಳೆಲ್ಲವೂ ಗ್ರಾಮಕ್ಕೆ ಸಿಕ್ಕಿವೆ. ಇದರೊಟ್ಟಿಗೆ ಮಿಲ್, ಅಂಗಡಿ ಮುಂಗಟ್ಟುಗಳು, ಹೋಟಲ್‌ಗಳು ಹೆಚ್ಚಾಗುತ್ತಿವೆ. ಗ್ರಾಮದ ಜನ ರೇಡಿಯೋಗಳ ಜೊತೆಗೆ ಟಿ.ವಿ.ಗಳನ್ನು ಹೊಂದಿದ್ದಾರೆ. ಕಂಪ್ಯೂಟರ್, ಲ್ಯಾಪ್‌ಟಾಪ್‌ಗಳು ಬರುತ್ತಿವೆ. ಬಣ್ಣ ಬಣ್ಣದ ಮೊಬೈಲ್ ಕೈ ಸೇರುತ್ತಿವೆ. ಪತ್ರಿಕೆಗಳು ಮತ್ತು ನಿಯತಕಾಲಿಕೆಗಳನ್ನು ಮನೆಗೆ ತರಿಸಿಕೊಳ್ಳುತ್ತಿದ್ದಾರೆ. ಎತ್ತಿನ ಗಾಡಿಗಳು ಕಡಿಮೆಯಾಗಿ ಟ್ರ್ಯಾಕ್ಟರ್‌ಗಳು ಬರುತ್ತಿವೆ. ಒಟ್ಟಾರೆಯಾಗಿ ಇಲ್ಲಿಯ ಜನ ಅಭಿವೃದ್ಧಿಯ ಪಥದತ್ತ ಹೆಜ್ಜೆ ಇಡುತ್ತಿದ್ದಾರೆ.

ಅ) ಕೃಷಿ ಮತ್ತು ತೋಟಗಾರಿಕೆ

ಎತ್ತರವಾದ ಪ್ರದೇಶದಲ್ಲಿ ಗ್ರಾಮದ ನಿರ್ಮಾಣವಾಗಿದೆ. ಫಲವತ್ತಾದ ಭೂಮಿಯ ಜೊತೆಗೆ ಹೇಮಾವತಿ ನದಿ ನೀರಿನ ಸೌಲಭ್ಯವೂ ಇದೆ. ಪಂಪ್‌ಸೆಟ್‌ಗಳು ಹೆಚ್ಚುತ್ತಿವೆ. ಕಟ್ಟೆ, ಬಾವಿಗಳು ಕಡಿಮೆಯಾಗುತ್ತಿವೆ. ವಿಶಾಲವಾದ ಎರಡು ಕೆರೆಗಳು ಇವೆ. ಬಯಲುಸೀಮೆಯ ಗ್ರಾಮವಾದ ಐಕನಹಳ್ಳಿಯಲ್ಲಿ ತಗ್ಗು-ಬಾರೆ-ಗುಡ್ಡಗಳಿಂದ ಕೂಡಿದ ಪ್ರದೇಶವನ್ನು ಹೊಂದಿದೆ. ಸಮತಟ್ಟಾದ ಭೂ ಪ್ರದೇಶವೂ ಇದೆ. ಬರಬರುತ್ತ ತಗ್ಗು-ಬಾರೆಗಳನ್ನು ಮಟ್ಟಮಾಡಿ ವ್ಯವಸಾಯ ಮಾಡಲು ಬಳಸಿಕೊಳ್ಳುತ್ತಿದ್ದಾರೆ. ರೈತರ ಅತಿಕ್ರಮಣದಿಂದಾಗಿ ಗೋಮಾಳಗಳು ಕಡಿಮೆಯಾಗುತ್ತಿವೆ. ಇದರಿಂದಾಗಿ ಪ್ರಾಣಿಗಳನ್ನು ಸಾಕಲು ಸ್ವಲ್ಪ ತೊಂದರೆಯಾಗುತ್ತಿದೆ. ಗ್ರಾಮದ ಹೊಲತೋಟಗಳು ಮರಳು ಮಿಶ್ರಿತ ಕೆಂಪು ಮಣ್ಣನ್ನು ಹೊಂದಿವೆ. ಗದ್ದೆ ಬಯಲಿನ ಮಣ್ಣು ಕಪ್ಪು ಮಿಶ್ರಿತವಾಗಿದೆ. ಇನ್ನು ಕೆಲವು ಕಡೆ ಜಿಗಟಿನಿಂದ ಕೂಡಿದ ಎರೆ ಭೂಮಿ ಇದೆ.

ಐಕನಹಳ್ಳಿಯ ಭೌಗೋಳಿಕ ವಿಸ್ತೀರ್ಣ ಸರ್ಕಾರಿ ದಾಖಲೆಗಳ ಪ್ರಕಾರ "೧,೬೭೭ ಎಕರೆ ೩೯ ಕುಂಟೆಯಾಗಿದೆ. ಇದರಲ್ಲಿ ೧೧೯ ಎಕರೆ ೨೧ ಕುಂಟೆ ತೋಟ, ೧೨೭೬ ಎಕರೆ ೩೮ ಕುಂಟೆ ಖುಷ್ಕಿ

ಜಮೀನು, ೩೬ ಎಕರೆ ೨೮ ಕುಂಟೆ ತರಿ ಜಮೀನಿದೆ. ೮೧ ಎಕರೆ ೧೭ ಕುಂಟೆ ಗೋಮಾಳ, ೩ ಎಕರೆ ೩೩ ಕುಂಟೆ ಗುಂಡುತೋಪು ಹಾಗು ೧೩ ಎಕರೆ ೨೯ ಕುಂಟೆ ಸರ್ಕಾರಿ ಬೀಳಿಗೆ ಸೇರಿದ ಭೂಮಿಯಿದೆ. ಸುಮಾರು ೧೧೧ ಎಕರೆ ವ್ಯವಸಾಯೋತ್ತರ ಭೂಮಿಯಿದ್ದು ಅದು ಊರು, ರಸ್ತೆ, ಸ್ಮಶಾನ, ಕೆರೆ, ಕಟ್ಟೆಗಳ ಉದ್ದೇಶಕ್ಕಾಗಿ ಬಳಕೆಯಾಗಿದೆ.

ಗ್ರಾಮದ ಜನ ಪ್ರಮುಖವಾಗಿ ಬೆಳೆಯುವ ಬೆಳೆಗಳೆಂದರೆ ಸುಮಾರು ೧೮೫ ಎಕರೆ ೨೦ ಕುಂಟೆಯಲ್ಲಿ ಭತ್ತ, ೨೬೩ ಎಕರೆ ೩೫ ಕುಂಟೆಯಲ್ಲಿ ಕಬ್ಬು, ೨೫೬ ಎಕರೆ ೧೫ ಕುಂಟೆ ರಾಗಿ, ೧೧೯ ಎಕರೆ ೨೧ ಕುಂಟೆ ತೆಂಗು, ೨೫ ಎಕರೆ ಉರುಳಿ, ೨೦ ಎಕರೆ ೧೫ ಕುಂಟೆ ಬಾಳೆ, ೫ ಎಕರೆ ತೊಗರಿ, ೨೫ ಎಕರೆ ಅಲಸಂದೆ, ೧೦ ಎಕರೆ ೨೦ ಕುಂಟೆ ಅವರೆ, ೩೦ ಎಕರೆ ೨೦ ಕುಂಟೆ ಎಳ್ಳು, ೧೦ ಎಕರೆ ೨೦ ಕುಂಟೆ ಉಚ್ಚೆಳ್ಳು, ೫ ಎಕರೆ ೨೦ ಕುಂಟೆಯಲ್ಲಿ ಅಡಿಕೆ ಬೆಳೆಯುತ್ತಾರೆ."[೯]

ಇವುಗಳಲ್ಲದೆ ಹಣ್ಣು, ತರಕಾರಿ, ಸೊಪ್ಪು, ಅರಿಶಿನ, ಶುಂಠಿ, ಮೆಣಸಿನ ಕಾಯಿ, ಸೂರ್ಯಕಾಂತಿ, ಎಲೆ, ರೇಷ್ಮೆ, ಜೋಳ, ಉದ್ದು ಮೊದಲಾದವುಗಳನ್ನು ಅಲ್ಪಸ್ವಲ್ಪ ಬೆಳೆದುಕೊಳ್ಳುತ್ತಾರೆ. ರೈತರು ಬೆಳೆಗಳನ್ನು ಬೆಳೆಯಲು ಹಟ್ಟಿಗೊಬ್ಬರ, ತರಗೆಲೆ, ಹಸಿರು ಸೊಪ್ಪು, ಬೂದಿ, ಸಗಣಿ ಮುಂತಾದವುಗಳನ್ನು ಸಾಂಪ್ರದಾಯಿಕವಾಗಿ ಗೊಬ್ಬರವಾಗಿ ಬಳಸುತ್ತಾರೆ. ಇದರೊಟ್ಟಿಗೆ ರಾಸಾಯನಿಕ ಮತ್ತು ಕೀಟನಾಶಕಗಳನ್ನು ಕೂಡ ಬಳಸುತ್ತಿದ್ದಾರೆ. ರಾಸಾಯನಿಕ ಗೊಬ್ಬರ ದುಬಾರಿಯಾಗಿರುವುದರ ಜೊತೆಗೆ ಇಳುವರಿ ಚೆನ್ನಾಗಿ ಬರುವುದಿಲ್ಲವೆಂಬ ಭಾವನೆ ಕೆಲವು ರೈತರಲ್ಲಿದೆ.

ಆ) ಸಸ್ಯ ಸಂಪತ್ತು

ಐಕನಹಳ್ಳಿಯ ಪರಿಸರದಲ್ಲಿ ವೈವಿಧ್ಯಮಯವಾದ ಸಸ್ಯ ಸಂಪತ್ತನ್ನು ಕಾಣಬಹುದು. ನೈಸರ್ಗಿಕವಾಗಿ ಬೆಳೆದ ಮರಗಿಡಗಳ ಜೊತೆಗೆ ಮಾನವ ನೆಟ್ಟು ಬೆಳೆಸಿದ ಸಸ್ಯ ಸಂಪತ್ತು ಇವೆ. ತೆಂಗಿನ ಮರ, ಆಲದ ಮರ, ಬೇವಿನ ಮರ, ಹೊಂಗೆ ಮರ, ಬಸುರಿ ಮರಗಳ ಜೊತೆಗೆ ಬಿದಿರು, ಬಿಲ್ವಪತ್ರೆ, ಗಂಧದ ಮರ, ತೇಗ, ಹೊನ್ನೆಗಳು ಅಲ್ಲಲ್ಲಿ ಕಂಡುಬರುತ್ತವೆ. ಅರಣ್ಯ ಇಲಾಖೆಯವರು ನೆಟ್ಟಿರುವ ನೀಲಗಿರಿ ಮರಗಳು ಅಲ್ಲಲ್ಲಿ ಕಾಣುತ್ತವೆ. ನೈಸರ್ಗಿಕವಾದ ಮುಳ್ಳಿನ ಪೊದರುಗಳು, ಗಿಡಗಂಟೆಗಳು ಸಿಗುತ್ತವೆ. ಮಾವಿನ ಮರ, ಹಲಸಿನ ಮರಗಳಿಗೂ ಕೊರತೆಯಿಲ್ಲ. ಸಪೋಟ, ದಾಳಿಂಬೆ, ಸೀಬೆ, ಪರಂಗಿ ಗಿಡಗಳು ಮಾತ್ರ ಕಡಿಮೆ ಪ್ರಮಾಣದಲ್ಲಿವೆ. ಅರಳೀ ಮರವೂ ಗ್ರಾಮದ ಸೌಂದರ್ಯವನ್ನು ಹೆಚ್ಚಿಸಿದೆ. ರೈತರ ಕೃಷಿ ಉಪಕರಣಗಳು ಹಾಗು ಮನೆಗಳ ಪೀಠೋಪಕರಣಗಳ ಉಪಯೋಗಕ್ಕಾಗಿ ಮರಗಳು ನಾಶವಾಗುತ್ತಲು ಇವೆ. ಇದರೊಟ್ಟಿಗೆ ಗಿಡಗಳನ್ನು ನೆಟ್ಟು ಬೆಳೆಸುತ್ತಿರುವುದರಿಂದ ಸಸ್ಯ ಸಂಪತ್ತು ಕಣ್ಣಿಗೆ ಕಾಣುತ್ತಿದೆ.

ಇ) ಪಶುಪಾಲನೆ

ಜನಪದರು ಪಶು ಪಕ್ಷಿಗಳ ಒಡನಾಟವನ್ನಿಟ್ಟುಕೊಂಡೇ ಬೆಳೆದವರು. ಉಳುಮೆ ಮಾಡುವ ಉದ್ದೇಶಕ್ಕಾಗಿ ದನ, ಹೈನುಗಾರಿಕೆಗಾಗಿ ಎಮ್ಮೆ, ಹಸುಗಳು ಬೇಕೇ ಬೇಕು. ಕುರಿ, ಮೇಕೆ, ಕೋಳಿಗಳನ್ನು ಸಾಕಿ ಹಣಗಳಿಸುತ್ತಾರೆ. ಕೆಲವರು ಹಂದಿಗಳನ್ನು ಸಾಕುತ್ತಿದ್ದಾರೆ. ಆರು ಕೋಳಿ ಫಾರಂಗಳು ಇವೆ. ಸಂಬಂಧಿಕರು ಮನೆಗೆ ಬಂದಾಗ ಕೋಳಿ ಕುಯ್ದು ಊಟಕ್ಕೆ ಇಕ್ಕಿ ಸಂಭ್ರಮಿಸುತ್ತಾರೆ. ಹಬ್ಬ ಹರಿದಿನಗಳಲ್ಲಿ ನೆಂಟರಿಷ್ಟರಿಗೆಲ್ಲ ಹಬ್ಬಕ್ಕೆ ಹೇಳಿ ಕುರಿ ಮೇಕೆಗಳನ್ನು ಕುಯ್ದು ಅದ್ಧೂರಿ ಔತಣವನ್ನು ಸಿದ್ಧಪಡಿಸಿ ಹಬ್ಬದೂಟ ಮಾಡುತ್ತಾರೆ.

ಗಿಡಗಳ ಸಂದಿಯಲ್ಲಿ ಮೊಲ, ನರಿ, ಕೀರ, ಗುಳ್ಳೆನರಿ, ಇಲಿ, ಹೆಗ್ಗಣ, ಹಾವುಗಳು ಕಂಡರೆ ಮರಗಳಲ್ಲಿ ಕೋತಿ, ಅಳಿಲುಗಳು ಸಿಗುತ್ತವೆ. ಊರೊಳಗೆ ಬೀದಿ ನಾಯಿಗಳು ಇವೆ. ನಾಯಿಯನ್ನು ಮನೆಯಲ್ಲಿ ಸಾಕುವವರು ಇದ್ದಾರೆ. ಇವುಗಳಲ್ಲದೆ ಬಯಲು ಸೀಮೆಗಳಲ್ಲಿ ಕಂಡು ಬರುವ ಕಾಗೆ, ಗೂಬೆ, ಹದ್ದು, ಗಿಳಿ, ಗುಬ್ಬಚ್ಚಿ, ಗೀಜಗ, ಪಾರಿವಾಳ, ಕೊಕ್ಕರೆ, ಬಾತುಕೋಳಿಗಳು ಇವೆ. ಪಶು ಸಂಗೋಪನಾ ಇಲಾಖೆಯ ೨೦೧೧ರ ಜಾನುವಾರುಗಳ ಸಮೀಕ್ಷೆಯ ಪ್ರಕಾರ "ಮಿಶ್ರತಳಿ ಇಲಾಖೆ ಹಸು ೪೮೭, ಸ್ಥಳೀಯ ನಾಟಿ ಹಸು ೨೭೯, ಎಮ್ಮೆ ೩೩೯, ಕುರಿ ೨೮೫, ಮೇಕೆ ೧೫೪, ಕೋಳಿ ೬೨೦, ನಾಯಿ ೧೭"[೧೦] ಇವೆ ಎಂದು ತಿಳಿದುಬರುತ್ತದೆ.

ಈ) ಜಲ ಸೌಕರ್ಯಗಳು

ಸಹಜವಾಗಿ ಏಪ್ರಿಲ್-ಮೇ ತಿಂಗಳಿನಿಂದ ನವೆಂಬರ್-ಡಿಸೆಂಬರ್‌ವರೆಗೆ ನೈರುತ್ಯ ಮಾರುತಗಳಿಂದಾಗಿ ಮಳೆ ಬೀಳುತ್ತದೆ. ಬೇಸಾಯದ ವಿಧಾನವನ್ನು ಮಳೆಯೊಂದಿಗೆ ಹೊಂದಿಸಿಕೊಂಡಿರುವ ರೈತರು ನೀರಿನ ನಿರ್ವಹಣೆಯನ್ನು ಕರಗತ ಮಾಡಿಕೊಂಡಿರುವ ಜಾಣರಾಗಿದ್ದಾರೆ. ಮಳೆಗಾಲದಲ್ಲಿ ರೈತರು ತೀವ್ರವಾದ ಕೃಷಿ ಚಟುವಟಿಕೆಯಲ್ಲಿ ನಿರತರಾಗಿರುತ್ತಾರೆ. ಮಳೆಯಾಧಾರಿತ ವ್ಯವಸಾಯವೇ ಇಲ್ಲಿ ಪ್ರಧಾನವಾಗಿದೆ. ಕೆಲವು ಕಡೆ ಕೃತಕ ನೀರಾವರಿ ವ್ಯವಸ್ಥೆ ಇದೆ. ಎರಡು ದೊಡ್ಡ ಕೆರೆಗಳು ಇವೆ. ಏಳೆಂಟು ಬಾವಿ - ಕಟ್ಟೆಗಳು ಇವೆ. ಇಲ್ಲಿ ಸಂಗ್ರಹವಾದ ನೀರನ್ನು ಪ್ರಾಣಿಗಳ ಅನುಕೂಲಕ್ಕಷ್ಟೇ ಅಲ್ಲದೇ ತರಕಾರಿ, ಸೊಪ್ಪು ಮುಂತಾದವುಗಳನ್ನು ಬೆಳೆಯಲು ಬಳಸುತ್ತಾರೆ. ಸಾಂಪ್ರದಾಯಿಕ ಏತಗಳನ್ನು ನೀರೆತ್ತುವುದಕ್ಕಾಗಿ ಅಲ್ಲಲ್ಲಿ ಇನ್ನು ಬಳಸುತ್ತಿದ್ದಾರೆ. ಆಧುನಿಕ ನೀರೆತ್ತುವ ಯಂತ್ರಗಳನ್ನು ಬಳಕೆ ಮಾಡುತ್ತಿದ್ದಾರೆ. ಇತ್ತೀಚೆಗೆ ಕೊಳವೆ ಬಾವಿಗಳು ಹೆಚ್ಚಾಗುತ್ತಿವೆ. ಸರ್ಕಾರಿ ದಾಖಲೆಗಳ ಪ್ರಕಾರ ೦೧-೦೩-೧೯೮೩ರಲ್ಲಿ ದೇವರಸೇಗೌಡ ಎಂಬುವರು ಮೊದಲ ಪಂಪ್‌ಸೆಟ್ ಸಂಪರ್ಕ ಪಡೆದುಕೊಂಡಿದ್ದಾರೆ. ಪ್ರಸ್ತುತ ೧೮೫ ಕೊಳವೆ ಬಾವಿಗಳಿವೆ. ಹೀಗಾಗಿ ಹೆಚ್ಚು ರೈತರು ಕಬ್ಬಿನ ಬೆಳೆ ತೆಗೆಯುತ್ತಾರೆ. ಉಳಿದಂತೆ ತರಕಾರಿ, ತೆಂಗು, ಬಾಳೆ, ಅಡಿಕೆ ಮುಂತಾದ ಬೆಳೆಗಳನ್ನು ಬೆಳೆದು ಆದಾಯ ಗಳಿಸಲು ಪಂಪ್‌ಸೆಟ್‌ಗಳು ಸಹಕಾರಿಯಾಗಿವೆ.

೪. ಬೇಸಾಯ ಉಪಕರಣಗಳು

ಮಾನವ ವೃತ್ತಿ ಜೀವನದಲ್ಲಿ ಯಶಸ್ವಿಯಾಗಬೇಕಾದರೆ ತನ್ನ ಉದ್ಯೋಗಕ್ಕೆ ಸಂಬಂಧಿಸಿದ ಹಲವು ಉಪಕರಣಗಳನ್ನು ಬಳಸಿಕೊಳ್ಳಬೇಕಾಗುತ್ತದೆ. ಬಟ್ಟೆ ವ್ಯಾಪಾರಿಗೆ ಅಳತೆಯ ಟೇಪು, ಕತ್ತರಿ. ಕಿರಾಣಿ ವ್ಯಾಪಾರಿಗೆ ತಕ್ಕಡಿ, ತೂಕದ ಬೊಟ್ಟುಗಳು (ಕಲ್ಲುಗಳು), ಹೇಗೆ ಮುಖ್ಯವೊ ಹಾಗೆಯೇ ರೈತನ ಬದುಕಿನಲ್ಲಿ ನೇಗಿಲು, ನೊಗ, ಕುಂಟೆ, ಹಲಬೆ, ಗೆಣಿ ಮರ, ಕುಡುಗೋಲು, ಕೊಡಲಿ, ಬುಟ್ಟಿ, ಮೊರ, ಸೇರು–ಪಾವು, ಗುದ್ದಲಿ–ಹಾರೆ, ಎತ್ತಿನಗಾಡಿ ಮೊದಲಾದ ನೂರಾರು ಸಾಧನ ಸಾಮಗ್ರಿಗಳು ಬೇಕಾಗುತ್ತವೆ. ಅವಶ್ಯಕತೆಗನುಗುಣವಾಗಿ ಈ ವಸ್ತುಗಳನ್ನು ಬಳಸುವ ರೈತ ಇವೆಲ್ಲವನ್ನು ಸಂಗ್ರಹಿಸಿಕೊಂಡಿರುತ್ತಾನೆ. ಪ್ರಮುಖವಾದ ಉಪಕರಣಗಳ ಬಗ್ಗೆ ಪರಿಚಯಿಸಲಾಗಿದೆ.

ನೇಗಿಲು

ಭೂಮಿಯನ್ನು ಉಳಲು ನೇಗಿಲನ್ನು ಬಳಸುತ್ತಾರೆ. ರೈತನ ಬದುಕಿನಲ್ಲಿ ನೇಗಿಲಿಗೆ ಮಹತ್ವದ ಸ್ಥಾನವಿದೆ. ಪುರಾಣ ಪುರುಷ ಬಲರಾಮ ನೇಗಿಲನ್ನು ಹಿಡಿದಿರುವುದು ಕೂಡ ಇದನ್ನು ಸಾಕ್ಷೀಕರಿಸುತ್ತದೆ. ನೇಗಿಲ ತಯಾರಿಕೆಗೆ ಸಾಮಾನ್ಯವಾಗಿ ಗೊಬ್ಬಳಿ (ಜಾಲಿ), ಬೇವು, ಹೊಂಗೆ, ಹುಣಸೆ ಮುಂತಾದ ಗಟ್ಟಿಯಾದ ಮರಗಳನ್ನು ಬಳಸುತ್ತಾರೆ. ಭೂಮಿಯನ್ನು ಉಳುಮೆ ಮಾಡುವಾಗ ಈ ಸಾಧನ ಬೇಕೇ ಬೇಕು. ಮೊದಲು ಮರದ ನೇಗಿಲನ್ನು ಹೆಚ್ಚಾಗಿ ಬಳಸುತ್ತಿದ್ದರು. ಮರದ ನೇಗಿಲಲ್ಲಿ ಉಳುಮೆ ಮಾಡುವುದು ಕಷ್ಟವಾಗುವುದನ್ನು ಅರಿತ ಇತ್ತೀಚಿನ ರೈತರು ಕಬ್ಬಿಣದ ನೇಗಿಲಿನ ಮೊರೆ ಹೋಗಿದ್ದಾರೆ.

ನೊಗ

ರೈತ ಬೇಸಾಯ ಮಾಡಲು ನೊಗವನ್ನು ಹೆಚ್ಚು ಅವಲಂಬಿಸಿದ್ದಾನೆ. ಎತ್ತಿನ ಹೆಗಲ ಮೇಲೆ ನೊಗವನ್ನು ಹಾಕಬೇಕಾಗಿರುವುದರಿಂದ ಹಲಸಿನ ಮರ, ಹಗುರವಾಗಿರುವ ಪೌಸೆ (ಪಗಸೆ) ಕೊಂಬೆಗಳಿಂದ ತಯಾರಿಸಿದ ನೊಗವನ್ನು ಬಳಸುತ್ತಾರೆ. ಪೌಸೆ ಮರ ಬಾವಿ ಮತ್ತು ಹಳ್ಳಗಳ ಅಕ್ಕಪಕ್ಕ ಬೆಳೆಯುತ್ತದೆ. ಇದು ದನಗಳಿಗೆ ಕುತ್ತಿಗೆಗೆ ತಂಪು ಎಂಬ ಕಾರಣವಿದೆ. ಹೆಚ್ಚು ನುಣುಪಾಗಿ ನಾಲ್ಕು ಮೊಳದಲ್ಲಿ ನೊಗವನ್ನು ತಯಾರು ಮಾಡಿಸಿಕೊಳ್ಳುತ್ತಾರೆ. ನೊಗದ ಎರಡು ಬದಿಯಲ್ಲಿ ರಂಧ್ರಗಳಿರುತ್ತವೆ. ಎತ್ತುಗಳ ಕೊರಳನ್ನು ಸೇರಿಸಿ ನೊಗಕ್ಕೆ ಕುಣಿಕೆ ಹಾಕಲು ಈ ರಂಧ್ರಗಳು ಸಹಕಾರಿಯಾಗುತ್ತವೆ. ನೇಗಿಲು ನೊಗವನ್ನು ಕಟ್ಟಿ ಬೇಸಾಯಕ್ಕೆ ಸಿದ್ಧವಾಗುವುದು ರೈತನ ಒಂದು ಕಲೆ.

ಕುಂಟೆ

ಬೆಳೆಗಳನ್ನು ಹರಗಲು ಬಳಸುವ ಸಾಧನವೇ ಕುಂಟೆ. ಸಾಮಾನ್ಯವಾಗಿ ಜಾಲಿಯ ಮರದಿಂದ ಕುಂಟೆಗಳನ್ನು ತಯಾರಿಸಿಕೊಳ್ಳುತ್ತಾರೆ. ನಾಲ್ಕೈದು ಗೇಣುಗಳಲ್ಲಿ ಕುಂಟೆಯ ದಿಂಡು ಇರುತ್ತದೆ.

ಕುಂಟೆಗೆ ಬಳಸುವ ಈಚುಗಳು ಐದಾರು ಮೊಳ ಉದ್ದವಾಗಿರುತ್ತವೆ. ಇವುಗಳನ್ನು ಬಿದಿರಿನಿಂದ ಅಥವಾ ಇನ್ನಿತರ ಮರದ ಕೊಂಬೆಗಳಿಂದ ತಯಾರಿಸಿಕೊಂಡಿರುತ್ತಾರೆ. ಉಳುಮೆಯಾದ ಮೇಲೆ ಮಣ್ಣಿನ ಹೆಂಟೆಗಳನ್ನು ಒಡೆಯಲು ಹಾಗು ರಾಗಿ ಮೆಣಸು ಬೆಳೆದಾಗ ಅದರ ಮಧ್ಯಭಾಗದಲ್ಲಿರುವ ಕಳೆಯನ್ನು ಕೀಳಲು ಕುಂಟೆಯನ್ನು ಬಳಸುತ್ತಾರೆ. ಬೆಳೆಯನ್ನು ಹರಗಲು ಸಣ್ಣಕುಂಟೆಯನ್ನು ಬಳಸಿದರೆ, ಮಣ್ಣಿನ ಹೆಂಟೆ ಒಡೆಯಲು ದೊಡ್ಡ ಕುಂಟೆಯನ್ನು ಬಳಸುತ್ತಾರೆ.

ಗೆಣೆ ಮರ (ಹಲಬೆ)

ಬೆಳೆ ಬಿತ್ತುವಾಗ ಸಾಲುಗಳನ್ನು ಹೊಡೆಯಲು ಬಳಸುವ ಸಾಧನ. ಏಳೆಂಟು ಅಡಿ ಉದ್ದ, ಒಂದು ಅಡಿ ಅಗಲವಾಗಿ ಗೆಣೆ ಮರವನ್ನು ತಯಾರಿಸಿಕೊಂಡಿರುತ್ತಾರೆ. ಗೆಣೆ ಮರದ ತಳಭಾಗದಲ್ಲಿ ಒಂದು ಅಡಿ ಉದ್ದದ ಐದು ಹಲ್ಲುಗಳಿರುತ್ತವೆ (ಮರದ ಬೆಣೆ) ರಾಗಿ, ಅವರೆ, ತಡಣಿ ಕಾಳನ್ನು ಬಿತ್ತುವಾಗ ಹೊಲದಲ್ಲಿ ಗೆರೆಗಳನ್ನು ಗೆಣೆ ಮರದ ಸಹಾಯದಿಂದ ಸಿದ್ಧಮಾಡಿಕೊಳ್ಳುತ್ತಾರೆ. ಈ ಗೆರೆಗಳ ಒಳಕ್ಕೆ ಕಾಳುಗಳನ್ನು ಬಿತ್ತುತ್ತಾರೆ. ಗಣೆ ಮರದ ಹಲ್ಲುಗಳು ಮೇಲೆ ಬರುವಂತೆ ಸಿದ್ಧಪಡಿಸಿಕೊಂಡು, ಕಾಳುಗಳನ್ನು ಬಿತ್ತಿದ ಮೇಲೆ ಗೆರೆಗಳನ್ನು ಮುಚ್ಚಲು ಹಲಬೆ ಸಹಾಯಕವಾಗಿದೆ. ಕಾಳುಗಳು ಪಕ್ಷಿಗಳಿಗೆ ಸಿಗದಂತೆ ಮಣ್ಣನ್ನು ಮುಚ್ಚಿ ಹೊಲವನ್ನು ಸಮತಟ್ಟಾಗಿ ಮಾಡಲು ಹಲಬೆ ಬೇಕೇ ಬೇಕು. ಕೆಲವು ರೈತರು ಹಲಬೆ ಒಡೆದ ಮೇಲೆ ಹೊಂಗೆ ಸೊಪ್ಪನ್ನು ಕಟ್ಟಿಕೊಂಡು ಅದರ ಮೇಲೆ ಕಲ್ಲನ್ನು ಇಟ್ಟುಕೊಂಡು ಮತ್ತೊಮ್ಮೆ ಹೊಲವನ್ನು ಸಮ ಮಾಡುತ್ತಾರೆ.

ಕೂರಿಗೆ ದಿಂಡು (ಸಡ್ಡೆ)

ಬೇವು ಅಥವಾ ಜಾಲಿ ಮರದ ದಿಂಡನ್ನು ಹೊಂದಿರುವ ಕೂರಿಗೆಗೆ ಕೆಳಗಡೆ ನಾಲ್ಕು ಬಿದಿರಿನ ಕೋಲುಗಳನ್ನು ಜೋಡಿಸಿರುತ್ತಾರೆ. ಇದು ಬೀಜವನ್ನು ಬಿತ್ತುವ ಸಾಧನ. ಇದನ್ನು ಸಡ್ಡೆಯೆಂದು ಕೂಡ ಕರೆಯುತ್ತಾರೆ. ಇತ್ತೀಚೆಗೆ ಪ್ಲಾಸ್ಟಿಕ್ ಮತ್ತು ತಗಡಿನ ಕೂರಿಗೆಗಳನ್ನು ರೈತರು ಬಳಸುತ್ತಿದ್ದಾರೆ. ಗೆರೆಗಳ ಒಳಕ್ಕೆ ಕಾಳುಗಳು ಸರಿಯಾಗಿ ಬೀಳಲು ಕೂರಿಗೆಗಳು ಸಹಾಯಕವಾಗಿವೆ.

ಕುಡಗೋಲು

ಕಬ್ಬಿಣದಿಂದ ಅರ್ಧ ವೃತ್ತಾಕಾರದಲ್ಲಿ ಚೂಪಾಗಿ ತಯಾರಿಸಿದ ಕುಡಗೋಲು ರೈತನಿಗೆ ಹೆಚ್ಚು ಉಪಯೋಗದ ವಸ್ತುವಾಗಿದೆ. ಹರಿಶ್ಚಂದ್ರ ಕಾವ್ಯದಲ್ಲಿ ಲೋಹಿತಾಶ್ವನು ಕುಡಗೋಲನ್ನು ಹಿಡಿದು ಗರಿಕೆ ಹುಲ್ಲನ್ನು ಕುಯ್ಯುವ ಪ್ರಸಂಗವಿದೆ. ಉಳುಮೆ ಮಾಡುವಾಗ ತೆಂಗಿನ ಗರಿಗಳು ತೊಂದರೆ ಕೊಡುತ್ತಿದ್ದರೆ ಅವುಗಳನ್ನು ಕತ್ತರಿಸಲು, ರೋಸಳ್ ಗಿಡ (ಉಣ್ಣೆ ಗಿಡ) ಸೇರಿದಂತೆ ಇತರ ಗಿಡಗಳನ್ನು ಕತ್ತರಿಸಲು, ಎಳೆನೀರು ಕೊಚ್ಚಲು, ತೆಂಗಿನ ಕಾಯಿ ಸುಲಿಯಲು, ಪ್ರಾಣಿಗಳಿಗೆ ಜೋಳ, ಹುಲ್ಲು ಮೊದಲಾದ ಆಹಾರವನ್ನು ಕುಯ್ಯಲು. ರಾಗಿ, ಭತ್ತ ಮುಂತಾದ ಬೆಳೆಗಳು ಕಟಾವಿಗೆ ಬಂದಾಗ ಕುಯ್ಯಲು ಮೊದಲಾದ ಉದ್ದೇಶಗಳಿಗೆ ಕುಡಗೋಲು ಬೇಕಾಗುತ್ತದೆ.

ಹಾರೆ

ಗಟ್ಟಿಯಾದ ಕಬ್ಬಿಣದ ಸಲಾಕೆಯಿಂದ ಐದಾರು ಅಡಿ ಉದ್ದವಾಗಿ ಹಾರೆಯನ್ನು ತಯಾರಿಸಿರುತ್ತಾರೆ. ತೆಂಗಿನ ಸಸಿ ಮತ್ತು ಬಾಳೆಯ ಸಸಿಗಳನ್ನು ನೆಡಲು ಗುಂಡಿ ತೆಗೆಯಲು ಹಾರೆ ಬೇಕೇಬೇಕು. ಎತ್ತರವಾದ ಭೂಮಿಯನ್ನು ಮಟ್ಟಮಾಡುವಾಗ ಮಣ್ಣನ್ನು ಮೀಟಲು ಹಾರೆಯನ್ನು ಬಳಸುತ್ತಾರೆ. ಸತ್ತವರನ್ನು ಹೂಳಲು ಗುಂಡಿ ತೆಗೆಯಲು ಹಾರೆ ಅವಶ್ಯಕವಾಗಿದೆ.

ಗುದ್ದಲಿ

ಮಣ್ಣನ್ನು ಅಗೆಯಲು ಬಳಸುವ ಸಾಧನ. ಇದು 'U' ಆಕಾರದಲ್ಲಿ ಇರುತ್ತದೆ. ಗುದ್ದಲಿಯನ್ನು ಬಳಸಲು ಮರದಿಂದ ಹಿಡಿಯನ್ನು ಮಾಡಿಕೊಳ್ಳುತ್ತಾರೆ. ಹಾರೆ ಇದ್ದಲ್ಲೆಲ್ಲ ಗುದ್ದಲಿ ಬೇಕೇಬೇಕು. ಹಾರೆಯಿಂದ ತೆಗೆದ ಮಣ್ಣನ್ನು ಗುಂಡಿಯಿಂದ ಹೊರಕ್ಕೆ ತೆಗೆಯಲು ಗುದ್ದಲಿ ಸಹಾಯಕವಾಗಿದೆ. ಹೊಲ-ಗದ್ದೆಗಳಿಗೆ ನೀರನ್ನು ಬಿಡುವಾಗಲು ಪ್ರಯೋಜನಕ್ಕೆ ಬರುತ್ತದೆ. ಗೊಬ್ಬರವನ್ನು ಮಂಕರಿಗಳಿಗೆ ತುಂಬಲು, ತೆಂಗಿನ ಸಸಿ, ಅಡಿಕೆ ಸಸಿ ಮುಂತಾದವುಗಳ ಬುಡದಲ್ಲಿ ಸರಿಯಾಗಿ ಉಳುಮೆ ಮಾಡಲು ಸಾಧ್ಯವಾಗದಿದ್ದರಿಂದ ಅಲ್ಲಿ ಭೂಮಿಯನ್ನು ಅಗೆದು ಹಸನು ಮಾಡಲು ಕೂಡ ಗುದ್ದಲಿ ಬೇಕಾಗುತ್ತದೆ.

ಮಂಕರಿ

ಬಿದುರಿನಿಂದ ತಯಾರಿಸಿದ ವೃತ್ತಾಕಾರದ ವಸ್ತುವೇ ಮಂಕರಿ. ಕೆಲವು ಕಡೆ ಈಚಲು ಕಡ್ಡಿಯಿಂದಲು ತಯಾರಿಸುತ್ತಾರೆ. ಪ್ರಾಣಿಗಳ ಕಸವನ್ನು ತಿಪ್ಪೆಗೆ ಹಾಕಲು ರೈತರು ಪ್ರತಿನಿತ್ಯ ಮಂಕರಿಯನ್ನು ಬಳಸುತ್ತಾರೆ. ಹೊಲ ಗದ್ದೆಗಳಿಗೆ ಗೊಬ್ಬರ ಸುರಿಯುವಾಗ, ಕಲ್ಲು ಮಣ್ಣುಗಳನ್ನು ತುಂಬಿ ಸಾಗಿಸುವಾಗ ಮಂಕರಿ ಬೇಕು. ತೆಂಗಿನಕಾಯಿಗಳನ್ನು ಎತ್ತಿನಗಾಡಿಗೆ (ಬಂಡಿಗೆ) ಸುರಿಯುವಾಗ, ಸುಲಿದ ತೆಂಗಿನಕಾಯಿ ಹಾಗು ಸಿಪ್ಪೆಯನ್ನು ತೆಗೆದುಕೊಂಡು ಹೋಗಲು ಸಹಾಯಕವಾಗುತ್ತದೆ. ಇತ್ತೀಚೆಗೆ ಪ್ಲಾಸ್ಟಿಕ್ ಮಂಕರಿಗಳು ಬಳಕೆಗೆ ಬಂದಿವೆ.

ಮೇಟಿ ಮರ

ಭತ್ತದ ಹುಲ್ಲನ್ನು ತುಳಿಸುವಾಗ ಕಣದ ಮಧ್ಯ ಭಾಗದಲ್ಲಿ ನೆಡುವ ಮರದ ಸಾಧನವನ್ನೆ ಮೇಟಿ ಮರ ಎನ್ನುತ್ತಾರೆ. ಇದು ೧೦ ರಿಂದ ೧೨ ಅಡಿ ಉದ್ದವಿರುತ್ತದೆ. ನಂತರ ಮೇಟಿ ಮರದ ಸುತ್ತ ಹುಲ್ಲನ್ನು ಹರಡುತ್ತಾರೆ. ಎತ್ತು ಹಸುಗಳನ್ನು ಸಾಲಾಗಿ ನಿಲ್ಲಿಸಿ, ಮೊದಲು ಕಂಬಕ್ಕೆ ಹಗ್ಗವನ್ನು ಕಟ್ಟಿ ನಂತರ ಎತ್ತು ಹಸುಗಳ ಕೊರಳಿಗೆ ಹಗ್ಗವನ್ನು ಕಟ್ಟುತ್ತಾರೆ. ಒಬ್ಬ ವ್ಯಕ್ತಿ ಕೋಲಿನಿಂದ ಎತ್ತುಗಳನ್ನು ಹೊಡೆಯುತ್ತ ಹುಲ್ಲನ್ನು ತುಳಿಸುತ್ತಾನೆ. ಇದರಿಂದಾಗಿ ಹುಲ್ಲಿನಲ್ಲಿ ಉಳಿದುಕೊಂಡಿರುವ ಭತ್ತ ಉದುರುತ್ತದೆ. ಹೀಗೆ ಮೇಟಿ ಮರ ರೈತನಿಗೆ ಉಪಯುಕ್ತವಾಗಿದೆ.

ರೋಣಗಲ್ಲು

ಕಣದಲ್ಲಿ ಹರಡಿರುವ ರಾಗಿ ತೆನೆಯಿಂದ ಕಾಳನ್ನು ಬೇರ್ಪಡಿಸಲು ಬಳಸುವ ಸಾಧನವೇ ರೋಣಗಲ್ಲು. ೫–೬ ಅಡಿ ಅಗಲ ಮತ್ತು ೩–೪ ಅಡಿ ಉದ್ದವಾದ ವೃತ್ತಾಕಾರದ ಕಲ್ಲು. ಕಲ್ಲಿನ ಎಡ ಮತ್ತು ಬಲಭಾಗದಲ್ಲಿ ೧ ಅಡಿ ಕಬ್ಬಿಣದ ತುಂಡನ್ನು ಜೋಡಿಸಿರುತ್ತಾರೆ. ಅಲ್ಲಿಂದ ಮೇಲ್ಭಾಗಕ್ಕೆ ಬರುವಂತೆ ಅಡ್ಡವಾಗಿ ಮರವನ್ನು ಜೋಡಿಸಿ ಕೂರಲುಬೇಕಾದ ಅಗಲವಾದ ಕಾಲು ಮಣೆಯನ್ನು ಜೋಡಿಸಿರುತ್ತಾರೆ. ಮುಂದಕ್ಕೆ ಒಂದು ಮರದ ಈಚನ್ನು ಹಾಕಿರುತ್ತಾರೆ. ಈ ಈಚಿಗೆ ನೊಗವನ್ನು ಕಟ್ಟುತ್ತಾರೆ. ನಂತರ ಎತ್ತುಗಳನ್ನು ನೊಗಕ್ಕೆ ಕಟ್ಟಿ ರಾಗಿ ಹುಲ್ಲಿನ ಮೇಲೆ ಕಣದ ಸುತ್ತಲೂ ರೋಣಗಲ್ಲನ್ನು ಹೊಡೆಯುತ್ತಾರೆ. ಹೀಗೆ ಮಾಡಿದಾಗ ರಾಗಿ ಕಾಳುಗಳು ಬೇರ್ಪಡುತ್ತವೆ.

ಹುಲ್ಲು ಒಡಿಯುವ ಕೋಲು

ತೆನೆಯಿಂದ ಕಾಳು ಬೇರ್ಪಡಿಸಲು ಇದನ್ನು ಬಳಸುತ್ತಾರೆ. ಸುಮಾರು ಮೂರು ಅಡಿ ಉದ್ದದ ಗಟ್ಟಿ ಬಿದುರಿನ ಅಥವಾ ಇನ್ನಾವುದೇ ಮರದಿಂದ ಈ ಕೋಲುಗಳನ್ನು ಸಿದ್ಧಮಾಡಿಕೊಂಡಿರುತ್ತಾರೆ. ಇವುಗಳನ್ನು ಗಂಡಸರು ಹೆಚ್ಚಾಗಿ ಬಳಸುತ್ತಾರೆ. ಕೆಲವು ಬಾರಿ ಹೆಂಗಸರು ಉಪಯೋಗಿಸುತ್ತಾರೆ.

ಮೊರ

ಕಾಳುಗಳನ್ನು ತೂರಿ ಸ್ವಚ್ಛ ಮಾಡಲು ಮೊರಗಳನ್ನು ಬಳಸುತ್ತಾರೆ. ಇವುಗಳನ್ನು ಬಿದಿರಿನಿಂದ ಹೆಣೆದಿರುತ್ತಾರೆ. ಸಗಣಿಯಿಂದ ಮೊರವನ್ನು ಸಾರಿಸುತ್ತಾರೆ. ನಂತರ ದವಸಧಾನ್ಯಗಳನ್ನು ತೂರುವ ಕೆಲಸಕ್ಕಾಗಿ ಮೊರವನ್ನು ಉಪಯೋಗಿಸುತ್ತಾರೆ.

ಜರಡಿ (ವಂದರಿ)

ಕಾಳಿನಲ್ಲಿರುವ ಕಡ್ಡಿ ಕಸಗಳನ್ನು ಬೇರ್ಪಡಿಸಲು ವಂದರಿಯನ್ನು ಬಳಸುತ್ತಾರೆ. ಇದನ್ನು ತಗಡಿನಿಂದ ಮಾಡಿರುತ್ತಾರೆ. ಚಿಕ್ಕ ಚಿಕ್ಕ ರಂಧ್ರಗಳಿರುತ್ತವೆ. ಕಾಳುಗಳನ್ನು ಇದರೊಳಕ್ಕೆ ಹಾಕಿ ವಂದರಿಸಿದಾಗ ಕಡ್ಡಿ, ಕಸ ಹೊರಟುಹೋಗಿ ಕಾಳುಗಳು ಶುದ್ಧವಾಗುತ್ತವೆ.

ಪೊರಕೆ

ಮರದಿಂದ ಕಾಳನ್ನು ತೂರಿದಾಗ ಬಿದ್ದಿರುವ ಕಾಳು ಕಸವನ್ನು ಬೇರ್ಪಡಿಸಲು ಪೊರಕೆಯನ್ನು ಬಳಸುತ್ತಾರೆ. ಪೊರಕೆಯನ್ನು ತೆಂಗಿನ ಗರಿಯ ಕಡ್ಡಿ ಹಾಗು ಬದುವಿನ ದಡದಲ್ಲಿ ಬೆಳೆದಿರುವ ಅಂಚಿ ಕಡ್ಡಿಯಿಂದ ಸಿದ್ಧಮಾಡಿಕೊಂಡಿರುತ್ತಾರೆ.

ಪಿಕಾಸಿ

ಮಣ್ಣನ್ನು ಅಗೆಯಲು ಬಳಸುವ ಸಾಧನವಿದು. ಒಂದು ಕಡೆ ಚೂಪಾಗಿದ್ದು ಮತ್ತೊಂದು ಕಡೆ ಅಗಲವಾಗಿರುತ್ತದೆ. ಗಟ್ಟಿಯಾದ ಕಬ್ಬಿಣದಿಂದ ಇದನ್ನು ತಯಾರಿಸುತ್ತಾರೆ. ಮರದಿಂದ ಮಾಡಿದ ಹಿಡಿಯನ್ನು ಹಾಕಿಕೊಂಡು ಪಿಕಾಸಿಯನ್ನು ಬಳಸುತ್ತಾರೆ.

ಮಚ್ಚು

ಕಬ್ಬಿಣದಲ್ಲಿ ಮಾಡಿರುವ ಅರ್ಧ ಚಂದ್ರಾಕಾರದ ವಸ್ತು ಮಚ್ಚು. ಇದು ಕುಡುಗೋಲಿಗಿಂತ ಸ್ವಲ್ಪ ಗಟ್ಟಿಯಾಗಿರುತ್ತದೆ. ಮರದ ಕೊಂಬೆ, ಗಿಡ, ಮುಳ್ಳಿನ ಮೆಳೆಗಳನ್ನು ಕಡಿಯಲು ಬಳಸುತ್ತಾರೆ. ತೆಂಗಿನಕಾಯಿಯನ್ನು ಸುಲಿಯಲು ಕೂಡ ಇದನ್ನು ಉಪಯೋಗಿಸುತ್ತಾರೆ.

ರೋಟಿ

ತೆಂಗಿನಕಾಯಿ ಮತ್ತು ಎಳನೀರನ್ನು ತೆಂಗಿನಮರದಿಂದ ಕೀಳಲು ರೋಟಿಯನ್ನು ಉಪಯೋಗಿಸುತ್ತಾರೆ. ಸುಮಾರು ಹದಿನೈದು ಇಪ್ಪತ್ತು ಅಡಿ ಉದ್ದದ ಬಿದಿರಿನ ಗಳುಗಳ ತುದಿಗೆ ಕುಡಗೋಲನ್ನು ಸೆಣಬಿನ ಹಗ್ಗದಿಂದ ಕಟ್ಟಿರುತ್ತಾರೆ. ಇದನ್ನೆ ರೋಟಿ ಎನ್ನುತ್ತಾರೆ. ಇದನ್ನು ತೆಂಗಿನ ಗರಿ (ಸೋಗೇ) ಕೀಳಲು, ಕುರಿ, ಮೇಕೆಗಳಿಗೆ ಸೊಪ್ಪುಗಳನ್ನು ಮರದಿಂದ ಕೀಳಲು ಬಳಸುತ್ತಾರೆ.

ಬಂಡಿ (ಎತ್ತಿನಗಾಡಿ)

ಗಾಡಿಯಲ್ಲಿ ಮರದ ಗಾಡಿ ಮತ್ತು ಟೈರು ಗಾಡಿಗಳೆಂಬ ಎರಡು ವಿಧಗಳಿವೆ. ಇತ್ತೀಚೆಗೆ ಎಲ್ಲರು ಟೈರು ಗಾಡಿಗಳನ್ನೆ ತೆಗೆದುಕೊಳ್ಳುತ್ತಿದ್ದಾರೆ. ತಿಪ್ಪೆಯಿಂದ ಹೊಲಗದ್ದೆಗಳಿಗೆ ಗೊಬ್ಬರ ಸಾಗಿಸಲು, ತೆಂಗಿನಕಾಯಿಯನ್ನು ತೋಟದಿಂದ ಮನೆಗೆ ತರಲು, ದನಕರುಗಳಿಗೆ ಹುಲ್ಲು ಸೊಪ್ಪು ತರಲು ಗಾಡಿ ಬೇಕು. ಸುಗ್ಗಿಯ ಕಾಲದಲ್ಲಿ ಕಣಕ್ಕೆ ರಾಗಿ ಹಾಗು ಭತ್ತವನ್ನು ತಂದು ಸಿದ್ಧ ಮಾಡಿಕೊಂಡ ನಂತರ ಹುಲ್ಲನ್ನು ಹಿತ್ತಲಿಗೆ ಸಾಗಿಸಲು, ದವಸ ಧಾನ್ಯಗಳನ್ನು ಮನೆಗೆ ತರಲು ಗಾಡಿ ಸಹಾಯಕವಾಗಿದೆ. ಬಂಡಿ ಹಬ್ಬದಲ್ಲಿ ಗಾಡಿಗೆ ಕಮಾನುಕಟ್ಟಿ ಅಲಂಕಾರ ಮಾಡಿಕೊಂಡು ಜನರೇ ಬಂಡಿಯನ್ನು ಊರ ದೇವಸ್ಥಾನಕ್ಕೆ ಎಳೆದುಕೊಂಡು ಹೋಗಿ ಪೂಜೆ ಮಾಡಿಸುತ್ತಾರೆ. ಹಿಂದೆ ಸಂತೆಗಳಿಗೆ ಹೋಗಲು ನೆಂಟರಿಷ್ಟರ ಮನೆಗಳಿಗೆ ಹೋಗಲು ಎತ್ತಿನ ಗಾಡಿಯನ್ನು ಬಳಸುತ್ತಿದ್ದರು. ಇತ್ತೀಚೆಗೆ ವಾಹನ ಸೌಲಭ್ಯವಿರುವುದರಿಂದ ಅವುಗಳನ್ನೆ ಆಶ್ರಯಿಸಿದ್ದಾರೆ. ಎತ್ತಿನ ಗಾಡಿಯನ್ನು ತಯಾರಿಸಲು ಅನುಭವಸ್ಥನಾದ ಆಚಾರಿ ಬೇಕಾಗುತ್ತದೆ.

ಕೊಡಲಿ

ರೈತರು ಬಳಸುವ ವಸ್ತುಗಳಲ್ಲಿ ಕೊಡಲಿಯು ಒಂದು. ಇದು ಪುರಾಣದ ಪ್ರಕಾರ ಪರಶುರಾಮನ ಆಯುಧವು ಆಗಿದೆ. ೧/೨ ಅಡಿ ಉದ್ದ ಮತ್ತು ಅಗಲವಾದ ಚೂಪಾಗಿ ತಯಾರಿಸಿದ ಕೊಡಲಿಯನ್ನು ಹಿಡಿಯಲು ಮರದ ಕೊಂಬೆಯಿಂದ ಮಾಡಿದ ಹಿಡಿಯಿರುತ್ತದೆ. ಕೊಡಲಿಯಲ್ಲಿ ಚಾಪು ಕೊಡಲಿ ಮತ್ತು ತೂಬಿನ ಕೊಡಲಿಗಳೆಂಬ ಎರಡು ವಿಧಗಳಿವೆ. ರೈತರು ಕುಡುಗೋಲಿನಿಂದ ಕತ್ತರಿಸಲು ಸಾಧ್ಯವಾಗದ ಗಿಡಗಳನ್ನು, ಮರದ ಕೊಂಬೆಗಳನ್ನು ಕತ್ತರಿಸಲು ಚಾಪು ಕೊಡಲಿಯನ್ನು ಬಳಸುತ್ತಾರೆ. ಸೌದೆಯನ್ನು ಸೀಳು ಮಾಡಲು ತೂಬಿನ ಕೊಡಲಿ ಬಳಸುತ್ತಾರೆ. ಮದುವೆ, ತಿಥಿ ಮೊದಲಾದ ಕಾರ್ಯಗಳಲ್ಲಿ ಸೌದೆಗಳು ಹೆಚ್ಚಾಗಿ ಬೇಕಾಗಿರುವುದರಿಂದ ಕೊಡಲಿ ಹೆಚ್ಚು ಉಪಯೊಗಕ್ಕೆ ಬರುತ್ತದೆ.

೫. ನಾಗರಿಕ ಜೀವನದ ಸೌಲಭ್ಯಗಳು

ಅ) ಹಾಲಿನ ಡೈರಿ

ಗ್ರಾಮಸ್ಥರು ತಮ್ಮ ಜೀವನ ನಡೆಸಲು ಹೈನುಗಾರಿಕೆಯನ್ನು ನಂಬಿಕೊಂಡಿದ್ದಾರೆ. ೧೯೮೨-೮೩ರಲ್ಲಿ ಪ್ರಾರಂಭವಾದ ಹಾಲಿನ ಡೈರಿ ೨೮-೧೨-೧೯೯೮ರಿಂದ ಹೊಸ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. ಪ್ರಾರಂಭದಲ್ಲಿ ಐ.ಬಿ. ಅಣ್ಣಯ್ಯ ಅಧ್ಯಕ್ಷರಾಗಿ, ಡಿ. ಕೃಷ್ಣೇಗೌಡ ಕಾರ್ಯದರ್ಶಿಯಾಗಿ, ಜಗದೀಶ ಹಾಲು ಪರೀಕ್ಷಕರಾಗಿದ್ದರು. ಪ್ರಸ್ತುತ ಕಾಂತರಾಜು ಅಧ್ಯಕ್ಷರಾಗಿ, ಎನ್. ಮಂಜೇಗೌಡ ಕಾರ್ಯದರ್ಶಿಯಾಗಿ, ಶೇಖರ್ ಹಾಲು ಪರೀಕ್ಷಕರಾಗಿ ಉತ್ತಮವಾಗಿ ಹಾಲಿನ ಡೈರಿಯನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. "೧೧೨ ಜನ ಸಾಮಾನ್ಯ ಸದಸ್ಯರು ಹಾಗು ೪೫೦ ಜನ ಷೇರುದಾರರು ಇಲ್ಲಿದ್ದಾರೆ. ಪ್ರತಿದಿನ ಬೆಳಿಗ್ಗೆ, ಹಾಗು ಸಂಜೆ ಸರಾಸರಿ ೬೦೦ ಲೀಟರ್ ಹಾಲು ಸಂಗ್ರಹವಾಗುತ್ತದೆ. ಡೈರಿಯ ವ್ಯಾನಿನಲ್ಲಿ ಕೆ.ಆರ್. ಪೇಟೆ ಹಾಲು ಶೀತಲ ಕೇಂದ್ರಕ್ಕೆ ಹಾಲನ್ನು ತೆಗೆದುಕೊಂಡು ಹೋಗುತ್ತಾರೆ.

ಪ್ರತಿ ಶನಿವಾರ ಪಶುವೈದ್ಯರು ಗ್ರಾಮಕ್ಕೆ ಬೇಟಿ ನೀಡಿ ಹಸುಗಳ ಆರೋಗ್ಯ ತಪಾಸಣೆ ಮಾಡಿ ಚಿಕಿತ್ಸೆ ನೀಡುತ್ತಾರೆ. ಆದರೆ ಪಶು ಆಸ್ಪತ್ರೆಯ ಕೊರತೆ ಎದ್ದು ಕಾಣುತ್ತದೆ. ಪಶುಗಳ ಆಹಾರ ಫೀಡ್ಸ್ ೫೦ ಕೆ.ಜಿ. ಚೀಲಕ್ಕೆ ೫೫೦ ರೂ. ತೆಗೆದುಕೊಳ್ಳುತ್ತಾರೆ."[೧೧] ಐಕನಹಳ್ಳಿ, ಐಕನಹಳ್ಳಿ ಕೊಪ್ಪಲು, ಭದ್ರನ ಕೊಪ್ಪಲಿನ ಗ್ರಾಮಸ್ಥರು ಈ ಹಾಲಿನ ಡೈರಿಯ ಉಪಯೋಗ ಪಡೆದುಕೊಂಡಿದ್ದಾರೆ. ಹಾಲು ಉತ್ಪಾದಕರ ಒಕ್ಕೂಟದಿಂದ ವರ್ಷಕ್ಕೊಮ್ಮೆ ಮೂರು ದಿನ ಮಹಿಳೆಯರಿಗೆ ಹಾಲಿನ ಶೇಖರಣೆ, ಹಸು ಸಾಕಾಣೆ ಕುರಿತಂತೆ ತರಬೇತಿ ನಡೆಯುತ್ತದೆ. ಮಂಡ್ಯ ಮತ್ತು ಮೈಸೂರಿನಲ್ಲಿ ಲೆಕ್ಕ ಪತ್ರ ವ್ಯವಹಾರದ ಬಗ್ಗೆ ಕಾರ್ಯದರ್ಶಿಗೆ ತರಬೇತಿ ಕೊಡಲಾಗುತ್ತದೆ. ಹಾಲು ಪರೀಕ್ಷಕರು ತರಬೇತಿಯಲ್ಲಿ ಭಾಗವಹಿಸುತ್ತಾರೆ. ಸಾಮಾನ್ಯವಾಗಿ ಸೆಪ್ಟೆಂಬರ್‌ನಲ್ಲಿ ಷೇರುದಾರರಿಗೆ ಸರ್ವಸದಸ್ಯರ ವಾರ್ಷಿಕ ಮಹಾಸಭೆ ನಡೆಯುತ್ತದೆ. ವಿಸ್ತರಣ ಅಧಿಕಾರಿ ಬಂದು ಸಲಹೆ ನೀಡುತ್ತಾರೆ. ಷೇರುದಾರರಿಗೆ ಬೋನಸ್ ಕೊಡುವ ಚರ್ಚೆಯಾಗಿಲ್ಲ. ಗ್ರಾಮಸ್ಥರು ಹಾಲಿನ ಡೈರಿಯ ಸೌಲಭ್ಯವನ್ನು ವ್ಯವಸ್ಥಿತವಾಗಿ ಬಳಸಿಕೊಳ್ಳುತ್ತಿದ್ದಾರೆ.

ಆ) ಗ್ರಾಮ ಪಂಚಾಯಿತಿ

ಐಕನಹಳ್ಳಿ ಗ್ರಾಮಕ್ಕೆ ಗ್ರಾಮ ಪಂಚಾಯಿತಿಯ ಸ್ಥಾನ ಸಿಕ್ಕಿರುವುದರಿಂದ ಗ್ರಾಮದ ಮೂಲಭೂತ ಸೌಲಭ್ಯಗಳು ಹೆಚ್ಚುತ್ತಿವೆ. ಪ್ರಾರಂಭದಲ್ಲಿ ಕಂಡೆಕ್ಟರ್ ಪುಟ್ಟೇಗೌಡರ ಮನೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಗ್ರಾಮ ಪಂಚಾಯಿತಿ ಕಛೇರಿ ೨೫-೦೮-೧೯೯೭ರಿಂದ ಸ್ವಂತ ಕಟ್ಟಡವನ್ನು ಹೊಂದಿದೆ. ಈ ಗ್ರಾಮ ಪಂಚಾಯಿತಿಯು ೧೪ ಸದಸ್ಯರನ್ನು ಒಳಗೊಂಡಿದೆ. ಐಕನಹಳ್ಳಿ, ಐಕನಹಳ್ಳಿ ಕೊಪ್ಪಲು, ಭದ್ರನಕೊಪ್ಪಲು ಒಳಗೊಂಡಂತೆ ನಾಲ್ಕು ಸದಸ್ಯರು, ಸಾಸಲು, ಸಾಸಲು ಕೊಪ್ಪಲು,

ಎಲದಹಳ್ಳಿ ಸೇರಿದಂತೆ ಮೂರು ಸದಸ್ಯರು, ಐನಾರಹಳ್ಳಿ ಒಬ್ಬ ಸದಸ್ಯರು, ದೇವರಹಳ್ಳಿ ಒಬ್ಬ ಸದಸ್ಯರು, ಅಂಕನಹಳ್ಳಿ ಇಬ್ಬರು ಸದಸ್ಯರು, ಮಂಡಲೀಕನಹಳ್ಳಿ ಒಬ್ಬ ಸದಸ್ಯರಿದ್ದಾರೆ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕಾರ್ಯದರ್ಶಿ, ಗ್ರಾಮ ಲೆಕ್ಕಿಗರು, ಬಿಲ್ ಕಲೆಕ್ಟರ್, ಸಹಾಯಕ, ಕಂಪ್ಯೂಟರ್ ಆಪರೇಟರ್ ಇವರೆಲ್ಲರು ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಚುನಾವಣಾ ದೃಷ್ಟಿಯಿಂದ ಹೇಳುವುದಾದರೆ ಐಕನಹಳ್ಳಿ ಗ್ರಾಮವು ತಾಲ್ಲೂಕು ಪಂಚಾಯಿತಿಗೆ ಆನಗೊಳ ಕ್ಷೇತ್ರಕ್ಕೂ, ಜಿಲ್ಲಾ ಪಂಚಾಯಿತಿಗೆ ಸಂತೇಬಾಚಹಳ್ಳಿ ಕ್ಷೇತ್ರಕ್ಕೂ, ವಿಧಾನಸಭೆಗೆ ಕೆ.ಆರ್. ಪೇಟೆ ಕ್ಷೇತ್ರಕ್ಕೂ, ಲೋಕಸಭೆಗೆ ಮಂಡ್ಯ ಕ್ಷೇತ್ರಕ್ಕೂ ಸೇರುತ್ತದೆ.

ಇ) ವಿದ್ಯುತ್ ವ್ಯವಸ್ಥೆ

ಗ್ರಾಮಗಳ ಬೆಳವಣಿಗೆಯಲ್ಲಿ ವಿದ್ಯುತ್ ಸಂಪರ್ಕವು ಮುಖ್ಯ ಪಾತ್ರವಹಿಸುತ್ತದೆ. ಆದರೆ ೩೦-೪೦ ವರ್ಷಗಳ ಹಿಂದೆ ಸೀಮೆಎಣ್ಣೆ ದೀಪ ಹಾಗು ಲಾಟೀನ್‌ಗಳನ್ನೆ ಹೆಚ್ಚಾಗಿ ಬಳಸುತ್ತಿದ್ದರು. ಸರ್ಕಾರಿ ದಾಖಲೆಗಳ ಪ್ರಕಾರ ನಂಜುಂಡೇಗೌಡ ಎಂಬುವರು ೦೯-೧೨-೧೯೭೩ರಲ್ಲಿ ಮೊದಲ ವಿದ್ಯುತ್ ಸಂಪರ್ಕ ಪಡೆದುಕೊಂಡಿದ್ದಾರೆ. ತದನಂತರ ಗ್ರಾಮದ ೩೬೬ ಮನೆಗಳಲ್ಲು ವಿದ್ಯುತ್ ವ್ಯವಸ್ಥೆ ಮಾಡಿಕೊಂಡಿರುವುದು ಸಮಾಧಾನ ಪಡುವ ಸಂಗತಿ. ಭಾಗ್ಯಜ್ಯೋತಿ ಯೋಜನೆಯ ಆಶ್ರಯದಲ್ಲಿ ೩೦ ಯುನಿಟ್‌ಗಳವರೆಗೆ ೨.೨೦ ಪೈಸೆ, ೩೦ ರಿಂದ ೧೦೦ ಯುನಿಟ್‌ವರೆಗೆ ೩.೨೦ ಪೈಸೆ, ೧೦೦ ರಿಂದ ೨೦೦ ಯುನಿಟ್‌ಗೆ ೪.೩೦ ಪೈಸೆ, ೨೦೦ ಯುನಿಟ್ ಮೀರಿದರೆ ೫-೧೦ ಪೈಸೆ ಹಣ ಕಟ್ಟಬೇಕಾಗುತ್ತದೆ. ಪಂಪ್‌ಸೆಟ್‌ಗಳನ್ನು ಬಳಸುವ ರೈತರು ಪ್ರತಿ ಯೂನಿಟ್‌ಗೆ ೩-೪೮ ಪೈಸೆ ತೆರಬೇಕು. ನಿರಂತರವಾಗಿ ವಿದ್ಯುತ್ ಇಲ್ಲದಿರುವುದು ರೈತರ ಅಸಹನೆಗೆ ಕಾರಣವಾಗಿದೆ. ಗ್ರಾಮದ ಬೀದಿಗಳಲ್ಲಿ ಬೀದಿ ದೀಪಗಳು ಇರುವುದರಿಂದ ಗ್ರಾಮಸ್ಥರಿಗೆ ಹೆಚ್ಚು ಅನುಕೂಲವಾಗಿದೆ.

ಈ) ಸಾರ್ವಜನಿಕ ಗ್ರಂಥಾಲಯ

ಸಾರ್ವಜನಿಕ ಗ್ರಂಥಾಲಯ ಇಲಾಖೆಯು ಗ್ರಾಮೀಣ ಭಾಗದ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗ್ರಂಥಾಲಯಗಳನ್ನು ತೆರೆದಿದೆ. ೨೦೦೪ ರಿಂದ ಐಕನಹಳ್ಳಿ ಗ್ರಾಮಕ್ಕೂ ಈ ಸೌಲಭ್ಯ ಸಿಕ್ಕಿದೆ. ಗ್ರಂಥಾಲಯ ಮೇಲ್ವಿಚಾರಕರಾಗಿ ಐ.ಡಿ. ಪ್ರಕಾಶ್ ಕಾರ್ಯನಿರ್ವಹಿಸುತ್ತಿದ್ದಾರೆ. ದಿನಪತ್ರಿಕೆ, ನಿಯತಕಾಲಿಕೆಗಳನ್ನು ಓದಲು ಗ್ರಾಮಸ್ಥರು ಆಸಕ್ತಿ ತೋರುತ್ತಿದ್ದಾರೆ. ಪುಸ್ತಕಗಳನ್ನು ತೆಗೆದುಕೊಂಡು ಓದುವವರ ಸಂಖ್ಯೆ ಅಷ್ಟಕಷ್ಟೆ.

ಉ) ಗ್ರಾಮ ಸಾಕ್ಷರತಾ ಸಮಿತಿ

ಅನಕ್ಷರಸ್ಥರು ಅಕ್ಷರಸ್ಥರಾದಾಗ ಸಾಕ್ಷರತೆಯ ಪ್ರಮಾಣ ಹೆಚ್ಚುವುದಷ್ಟೆ ಅಲ್ಲ. ನಾಗರೀಕರು ಸ್ವಾವಲಂಬಿಗಳಾಗಿ ಬದುಕಲು ಸಾಧ್ಯವಾಗುತ್ತದೆ. ಮಂಡ್ಯ ಜಿಲ್ಲಾ ಲೋಕ ಶಿಕ್ಷಣ ಇಲಾಖೆಯು ಐಕನಹಳ್ಳಿ ಗ್ರಾಮದಲ್ಲಿ ಗ್ರಾಮ ಸಾಕ್ಷರತಾ ಸಮಿತಿಯೊಂದನ್ನು ತೆರೆದಿದೆ. ೪೦ ಕ್ಕೂ ಹೆಚ್ಚು ಜನ

ಅನಕ್ಷರಸ್ಥರು ಇದರ ಪ್ರಯೋಜನವನ್ನು ಪಡೆಯುತ್ತಿದ್ದಾರೆ. ಐಕನಹಳ್ಳಿ ಗ್ರಾಮದ ಹೇಮಲತಾ ಪ್ರೇರಕರಾಗಿ, ಸಾಸಲು ಗ್ರಾಮದ ವಿರುಪಾಕ್ಷ ಸಹಪ್ರೇರಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಊ) ಸರ್ಕಾರಿ ಪ್ರಾಥಮಿಕ ಶಾಲೆ

ಐಕನಹಳ್ಳಿ ಗ್ರಾಮದಲ್ಲಿ ೧೯೩೦ ರಲ್ಲಿ ೧ ರಿಂದ ೪ನೇ ತರಗತಿವರೆಗೆ ಸರ್ಕಾರಿ ಕೂಲಿ ಮಠವು ಆರಂಭವಾಯಿತು. ೧೯೬೦ರಲ್ಲಿ ೪ ರಿಂದ ೭ನೇ ತರಗತಿಯವರೆಗೆ ಹಿರಿಯ ಪ್ರಾಥಮಿಕ ಶಾಲೆ ಪ್ರಾರಂಭವಾಯಿತು. ಊರಿನ ಹೊರಭಾಗದ ಸುಂದರ ಪರಿಸರದಲ್ಲಿ ಒಟ್ಟು ೭ ಕೊಠಡಿಗಳಿಂದ ಕೂಡಿದ ಈ ಶಾಲೆಯಲ್ಲಿ ೫ ಜನ ಶಿಕ್ಷಕರಿದ್ದಾರೆ. "ಶೌಚಾಲಯ ಹಾಗು ಅಡುಗೆ ಮನೆಗಳು ಇವೆ. ಬುಡಿಯಪ್ಪನ ಕೃಷ್ಣೇಗೌಡರು ಶಾಲಾನಿವೇಶನವನ್ನು ದಾನವಾಗಿ ನೀಡಿದ್ದಾರೆ. ಕಿಕ್ಕೇರಮ್ಮನ ಮಗಳಾದ ನಂಜಮ್ಮನವರು ಅಡಿಗೆ ಮನೆ ಕಟ್ಟಲು ಸ್ಥಳ ಕೊಟ್ಟಿದ್ದಾರೆ. ರಾಮಯ್ಯನವರು ಶೌಚಾಲಯ ಕಟ್ಟಲು ಜಾಗ ನೀಡಿದ್ದಾರೆ."[೧೨] ಸರ್ಕಾರದಿಂದ ಸಮವಸ್ತ್ರ, ಪಠ್ಯಪುಸ್ತಕ, ಬಿಸಿಯೂಟವು ಎಲ್ಲಾ ವಿದ್ಯಾರ್ಥಿಗಳಿಗೂ ಸಿಗುತ್ತದೆ. ೧ ರಿಂದ ೭ನೇ ತರಗತಿಯವರೆಗೆ ೪೨ ಜನ ಗಂಡು ಮಕ್ಕಳು, ೬೩ ಜನ ಹೆಣ್ಣು ಮಕ್ಕಳು ಸೇರಿದಂತೆ ಒಟ್ಟು ೧೦೫ ಜನ ವಿದ್ಯಾರ್ಥಿಗಳಿದ್ದಾರೆ. ಮಕ್ಕಳಿಗೆ ಇಂಗ್ಲಿಷ್ ಮಾಧ್ಯಮದ ಶಿಕ್ಷಣ ಕೊಡಿಸಲು ಪೋಷಕರು ಇಷ್ಟಪಡುತ್ತಿರುವುದರಿಂದ ಈ ಸರ್ಕಾರಿ ಪ್ರಾಥಮಿಕ ಶಾಲೆಯ ಮೇಲೆ ಪರಿಣಾಮ ಬೀರಿರುವುದನ್ನು ಕಾಣಬಹುದು.

ಋ) ಶ್ರೀ ಬಸವೇಶ್ವರ ಪ್ರೌಢಶಾಲೆ

ಗ್ರಾಮದ ಯುವಕ ಯುವತಿಯರು ಈ ಹಿಂದೆ ಪ್ರೌಢ ಶಾಲಾ ಶಿಕ್ಷಣ ಪಡೆಯಲು ಕಿಕ್ಕೇರಿ, ಚನ್ನರಾಯಪಟ್ಟಣ, ಶ್ರವಣಬೆಳಗೊಳ ಹಾಗು ಕಾಂತರಾಜಪುರ ಗ್ರಾಮಕ್ಕೆ ಬರಬೇಕಾಗಿತ್ತು. ಇದನ್ನು ಮನಗಂಡ ಐಕನಹಳ್ಳಿ ಗ್ರಾಮಸ್ಥರು ಆದಿಚುಂಚನಗಿರಿಯ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರನ್ನು ಭೇಟಿ ಮಾಡಿ ಪ್ರೌಢಶಾಲೆಯೊಂದನ್ನು ತೆರೆಯುವಂತೆ ಪ್ರಾರ್ಥಿಸಿದರು. ಇದರ ಪ್ರತಿಫಲವಾಗಿ ೧೯೯೪ರಲ್ಲಿ ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ವತಿಯಿಂದ ಶ್ರೀ ಬಸವೇಶ್ವರ ಪ್ರೌಢಶಾಲೆ ಪ್ರಾರಂಭವಾಯಿತು. ೩ ಶಾಲಾ ಕೊಠಡಿ, ೧ ಕಛೇರಿ, ಹಾಗು ೧ ಕ್ರೀಡಾ ಕಛೇರಿ ಹಾಗು ಗ್ರಂಥಾಲಯ ಕೊಠಡಿಗಳ ಜೊತೆಗೆ ಶೌಚಾಲಯ ವ್ಯವಸ್ಥೆಯು ಇದೆ. ೮ ಜನ ಶಿಕ್ಷಕರು ಹಾಗು ಒಬ್ಬರು ಗುಮಾಸ್ತರು ಕಾರ್ಯನಿರ್ವಹಿಸುತ್ತಿದ್ದಾರೆ. ೮ನೇ ತರಗತಿಯಿಂದ ೧೦ನೇ ತರಗತಿಯವರೆಗೆ ೫೩ ಗಂಡು ಮಕ್ಕಳು ೪೯ ಹೆಣ್ಣು ಮಕ್ಕಳು ಸೇರಿ ೧೦೨ ಜನ ವಿದ್ಯಾರ್ಥಿಗಳು ಇಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಇತ್ತೀಚೆಗಷ್ಟೆ ಈ ಪ್ರೌಢಶಾಲೆ ಸರ್ಕಾರದ ಅನುದಾನಕ್ಕೆ ಒಳಪಟ್ಟಿದೆ. ಆರ್ಥಿಕವಾಗಿ ಹಿಂದುಳಿದ ಇತರೆ ಜಾತಿಯ ವಿದ್ಯಾರ್ಥಿಗಳಿಗೆ ೨೦೦ ಹಾಗು ಪರಿಶಿಷ್ಟ ಜಾತಿಯವರಿಗೆ ೬೦೦ ರೂ. ಗಳ ವಿದ್ಯಾರ್ಥಿ ವೇತನ ಸರ್ಕಾರದಿಂದ ಬರುತ್ತದೆ. "ಪ್ರತಿವರ್ಷ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ಹಾಗು ಬ್ಯಾಗ್‌ಗಳನ್ನು ಶಿಕ್ಷಕರು ದಾನಿಗಳಿಂದ ಸಂಗ್ರಹಿಸಿಕೊಡುತ್ತಾರೆ. ಎಸ್.ಎಸ್.ಎಲ್.ಸಿ.ಯಲ್ಲಿ ಹೆಚ್ಚು ಅಂಕಗಳನ್ನು ತೆಗೆದುಕೊಂಡ ಮೊದಲ ಇಬ್ಬರು ವಿದ್ಯಾರ್ಥಿಗಳಿಗೆ

ಕ್ರಮವಾಗಿ ೫೦೦೦ ಹಾಗು ೨೦೦೦ ಹಣವನ್ನು ಐಕನಹಳ್ಳಿ ಗ್ರಾಮಸ್ಥರೇ ಸಂಗ್ರಹಿಸಿ ನೀಡುತ್ತಾರೆ. ಪ್ರತಿ ವಿಷಯದಲ್ಲಿಯು ಹೆಚ್ಚು ಅಂಕ ತೆಗೆದುಕೊಂಡ ವಿದ್ಯಾರ್ಥಿಗಳಿಗೆ ಕಿಕ್ಕೇರಿಯ ಗಣೇಶ್ ಬುಕ್ ಸ್ಟೋರ್ ಮತ್ತು ಜಯಲಕ್ಷ್ಮಿ ಬುಕ್ ಸ್ಟೋರ್ ಮಾಲೀಕರು ಪುಸ್ತಕ ಬಹುಮಾನವನ್ನು ನೀಡಿ ಪ್ರೋತ್ಸಾಹಿಸುತ್ತಿದ್ದಾರೆ."[೧೩] ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಸಾರ್ವಜನಿಕರು ಸ್ಪಂದಿಸುತ್ತಿರುವುದು ಸ್ವಾಗತಾರ್ಹ ಸಂಗತಿಯಾಗಿದೆ.

❖ ❖ ❖

ಅಡಿ ಟಿಪ್ಪಣಿಗಳು

೧. ಕೃಷ್ಣಯ್ಯ, ಐಕನಹಳ್ಳಿ, ೫೨ ವರ್ಷ.
೨. ಮೈಸೂರು ಜಿಲ್ಲಾ ಗ್ರಾಮನಾಮಗಳ ಅಧ್ಯಯನ : ಡಾ. ಎಸ್. ನಾಗಾಚಾರಿ, ಪುಟ. ೧೮೦.
೩. ಗ್ರಾಮನಾಮಗಳ ಸಾಂಸ್ಕೃತಿಕ ಪರಿವೇಷ : ಡಾ. ವಿಶ್ವನಾಥ, ಪುಟ. ೧೦೫.
೪. ಶಿವಣ್ಣ, ಐಕನಹಳ್ಳಿ, ೭೪ ವರ್ಷ.
೫. ದೊರೆ, ಐಕನಹಳ್ಳಿ, ೫೧ ವರ್ಷ.
೬. ನಾಗಮ್ಮ, ಐಕನಹಳ್ಳಿ, ೫೭ ವರ್ಷ.
೭. ಕೆಂಪಮ್ಮ, ಐಕನಹಳ್ಳಿ, ೭೫ ವರ್ಷ.
೮. ಅಣ್ಣಯ್ಯ, ಐಕನಹಳ್ಳಿ, ೫೦ ವರ್ಷ.
೯. ಎಸ್.ಕೆ. ಶಂಕರ್, ಗ್ರಾಮ ಲೆಕ್ಕಿಗರು, ಐಕನಹಳ್ಳಿ ವೃತ್ತ, ೫೪ ವರ್ಷ.
೧೦. ಡಾ. ವಿ. ಕೃಷ್ಣಮೂರ್ತಿ, ಪಶುವೈದ್ಯಾಧಿಕಾರಿ, ಕಿಕ್ಕೇರಿ, ೪೮ ವರ್ಷ.
೧೧. ಶೇಖರ್, ಹಾಲು ಪರೀಕ್ಷಕ, ಐಕನಹಳ್ಳಿ, ೩೪ ವರ್ಷ.
೧೨. ಎಂ.ಕೆ. ಸಿದ್ದೇಗೌಡ, ಮುಖ್ಯ ಶಿಕ್ಷಕರು, ಐಕನಹಳ್ಳಿ, ೫೫ ವರ್ಷ.
೧೩. ಐ.ಆರ್. ಶ್ರೀಧರ್, ಶಿಕ್ಷಕರು, ಐಕನಹಳ್ಳಿ, ೪೦ ವರ್ಷ.

ಅಧ್ಯಾಯ – ೩

ಗ್ರಾಮದ ಜಾತಿ ಪದ್ಧತಿ : ಸಾಮುದಾಯಿಕ ಪರಿಕಲ್ಪನೆ

೧. ಗ್ರಾಮದ ಜಾತಿ ವ್ಯವಸ್ಥೆ

ಜಾತಿ ಪದ್ಧತಿ ಭಾರತದಾದ್ಯಂತ ಹೆಮ್ಮರವಾಗಿ ಬೆಳೆದುನಿಂತಿದೆ. ನಮ್ಮ ಸಂಪ್ರದಾಯ, ವೃತ್ತಿ, ಆಚರಣೆಗಳು ಜಾತಿಯನ್ನು ಬಿಂಬಿಸುತ್ತವೆ. ವ್ಯಕ್ತಿಯ ಹೆಸರಿನಲ್ಲಿಯೇ ಅವನ ಜಾತಿಯನ್ನು ಹುಡುಕುವ ಸಂಪ್ರದಾಯ ಹೆಚ್ಚುತ್ತಿದೆ. ಜಾತಿಯು ನಮ್ಮ ಜೀವನ ಕ್ರಮದೊಂದಿಗೆ ಸೇರಿಹೋಗಿದೆ ಎಂದು ಹೇಳಬಹುದು. "ಭಾರತೀಯ ಸಂದರ್ಭದಲ್ಲಂತೂ ಜಾತಿ ಬಲಿಷ್ಠವಾದ ಒಂದು ಸಾಮಾಜಿಕ ಗುಣವಾಗಿದ್ದು, ಸಾಂಸ್ಕೃತಿಕವಾಗಿ ಹಲವು ಅಂಶಗಳನ್ನು ನಿಯಂತ್ರಿಸುವ, ನಿರ್ಮಿಸುವ ವಿಶೇಷವಾಗಿದೆ. ಇಷ್ಟಲ್ಲದೆ, ಜಾತಿಯ ಬಗೆಗೆ ಆಯಾ ಜಾತಿಗಳಲ್ಲಿರುವ ನಂಬಿಕೆ, ಐತಿಹ್ಯ, ಪುರಾಣಗಳೂ ಜಾನಪದ ಅಧ್ಯಯನದ ಮುಖ್ಯ ಅಂಗವೇ ಆಗಿರುತ್ತವೆ."[೧] ಜಾತಿ ಒಂದು ಸಾಮಾಜಿಕ ಪ್ರಕ್ರಿಯೆಯಾಗಿದ್ದು ಭಾರತದ ಬಹುತೇಕ ಎಲ್ಲ ಚಟುವಟಿಕೆಗಳಲ್ಲೂ ಗೋಚರಿಸುತ್ತದೆ. ವೃತ್ತಿ ಆಧಾರದ ಮೇಲೆ ಜಾತಿ ಪದ್ಧತಿ ಬೆಳೆಯಿತು. "ಜಾತಿ ಪದ್ಧತಿಯು ನಮ್ಮ ಸಮಾಜದ ವೈಶಿಷ್ಟ್ಯಪೂರ್ಣವಾದ ಹಾಗೂ ಸ್ಥಿರವಾದ ವ್ಯವಸ್ಥೆ, ಪ್ರತಿಯೊಂದು ಜಾತಿಗೂ ತನ್ನದೆ ಆದ ಪಂಚಾಯ್ತಿ ನಿಯಮ ನಿರ್ಬಂಧಗಳಿರುತ್ತವೆ. ಡಾ. ಜಿ.ಎಸ್. ಘಾಯ್ ಅವರು ಅಸಂಖ್ಯಾತ ಜಾತಿ ಮತ್ತು ಉಪಜಾತಿಗಳು ಬೃಹತ್ ಸಮಾಜದ ಬೇರೆ ಬೇರೆ ಭಾಗಗಳೇ ಆಗಿದ್ದರೂ ಅವು ಪುಟ್ಟದಾದ ಹಾಗೂ ಪರಿಪೂರ್ಣ ಜಗತ್ತಿನಂತಿವೆ. ಪ್ರತಿಯೊಂದು ಜಾತಿ ಹಾಗು ಉಪಜಾತಿಗೂ ತನ್ನದೇ ಆದ ನಾಮಾಂಕಿತ, ಜನನ, ಮರಣದ ಬಗ್ಗೆ ಕೆಲವು ವಿಧಿಗಳಿವೆ. ಈ ದೃಷ್ಟಿಯಿಂದ ಜಾತಿಗಳು ಸಮಾಜದ ಬೇರೆ ಭಾಗಗಳು"[೨] ಎನ್ನುತ್ತಾರೆ.

ಗ್ರಾಮ ಎನಿಸಿಕೊಳ್ಳಬೇಕಾದರೆ ಆ ಗ್ರಾಮವು ಬೇಲಿಯನ್ನೂ, ಕೋಟೆಯನ್ನೂ ಹೊಂದಿರಬೇಕು ಮತ್ತು ಆ ಗ್ರಾಮದಲ್ಲಿ ಒಕ್ಕಲಿಗರು ಮತ್ತು ಹರಿಜನರು ವಾಸವಾಗಿರಲೇಬೇಕು. ಇಲ್ಲವಾದ್ದಲ್ಲಿ ಅದು ಗ್ರಾಮ ಎನಿಸಿಕೊಳ್ಳುವುದಿಲ್ಲ. ಜಾತಿಯ ಉಗಮದ ಬಗ್ಗೆ ನಿಖರವಾಗಿ ಹೇಳಲು ಸಾಧ್ಯವಾಗುತ್ತಿಲ್ಲ. ಕಸುಬುಗಳ ಆಧಾರದ ಮೇಲೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರೆಂಬ ನಾಲ್ಕು ವರ್ಣಗಳಿದ್ದವು. ಕ್ರಮೇಣವಾಗಿ ಅವುಗಳಲ್ಲಿ ಉಪಜಾತಿಗಳು ಸೇರಿಕೊಂಡು ಅವುಗಳ ಸಂಖ್ಯೆ ಜಾಸ್ತಿಯಾಗಿದೆ ಎಂಬ ಸಮಾಜ ಶಾಸ್ತ್ರಜ್ಞರ ಊಹೆಯನ್ನು ಒಪ್ಪಬಹುದು. ಐಕನಹಳ್ಳಿ ಗ್ರಾಮದಲ್ಲಿ

ಬಹುಪಾಲು ಒಕ್ಕಲಿಗರಿದ್ದಾರೆ. ನಂತರದ ಸ್ಥಾನದಲ್ಲಿ ಹರಿಜನರು, ಶೆಟ್ಟರು, (ಮಗ್ಗದವರು), ಆಚಾರಿಗಳು (ವಿಶ್ವಕರ್ಮ), ಅಗಸರು, (ಮಡಿವಾಳರು), ಕ್ಷೌರಿಕರು, ಬ್ರಾಹ್ಮಣರು ಇದ್ದಾರೆ. ಈ ಗ್ರಾಮದಲ್ಲಿ ಅಲ್ಪಸಂಖ್ಯಾತರಾದ ಮುಸಲ್ಮಾನರು, ಕ್ರೈಸ್ಥರ ಕುಟುಂಬಗಳು ನೆಲೆಸಿರುವುದಿಲ್ಲ. ಗ್ರಾಮವೊಂದರ ಅಧ್ಯಯನದ ಸಂದರ್ಭದಲ್ಲಿ ಜಾತಿಪದ್ಧತಿಯನ್ನು ಅವಲೋಕಿಸುವುದು ಮುಖ್ಯವಾಗಿದೆ. ಈ ಹಿನ್ನೆಲೆಯಲ್ಲಿ ಐಕನಹಳ್ಳಿಯ ಜಾತಿ ವಿಚಾರವನ್ನು ಗಮನಿಸಲಾಗಿದೆ.

ಅ) ಗಂಗಡಿಕಾರ ಒಕ್ಕಲಿಗರು

ಈ ಗ್ರಾಮದಲ್ಲಿ ವಾಸವಿರುವ ಒಕ್ಕಲಿಗರೆಲ್ಲರು ಗಂಗಡಿಕಾರ ಒಕ್ಕಲಿಗರೆ ಆಗಿದ್ದಾರೆ. ಇವರು ಜನಸಂಖ್ಯಾ ದೃಷ್ಟಿಯಿಂದ ಮೊದಲಿಗರಾಗಿದ್ದಾರೆ. ಗಂಗಡಿಕಾರರ ಮೂಲ ವೃತ್ತಿ ಬೇಸಾಯ. "ಆನೆಗಳನ್ನು ಹಿಡಿದು ಪಳಗಿಸುವ ಧೀರ ವೃತ್ತಿ ಸಾಹಸ ಪ್ರವೃತ್ತಿಯಿಂದಾಗಿ ಅವರು ಗಂಗಡಿಕಾರರು. ಮುಂದೆ ಈ ವೃತ್ತಿಯವರು ಸ್ವಸಾಮರ್ಥ್ಯದಿಂದ ನಾಡನ್ನು ಆಳುವ ಶಕ್ತಿ ತೋರ್ಪಡಿಸಿದಾಗ ಗಂಗರಸರು ಆದರು. ಅಂದರೆ ಗಂಗರಸರ ಹೆಸರಿನ ಮೂಲ ಮತ್ತು ಗಂಗವಾಡಿ ಹೆಸರಿನ ಮೂಲ ಇರುವುದು ಗಂಗಡಿಕಾರ ಎನ್ನುವುದರಲ್ಲೇ ಎಂಬುದು ಇದರಿಂದ ಸ್ಪಷ್ಟ".[೩] ಹೀಗೆ ಪರಸ್ಪರ ಬೇರೆ ಬೇರೆಯಾದ ಎರಡು ವೃತ್ತಿಗಳಲ್ಲಿ ಇವರು ತೋರಿದ ಸಾಮರ್ಥ್ಯ ಪರಿಣತಿಗಳಿಂದಾಗಿ ಗಂಗಡಿಕಾರ ಒಕ್ಕಲಿಗರಾಗಿದ್ದಾರೆ. ಐಕನಹಳ್ಳಿ ಗ್ರಾಮದ ಗಂಗಡಿಕಾರ ಒಕ್ಕಲಿಗರು ಬೇಸಾಯ ಮಾಡುವುದರ ಜೊತೆಗೆ ಗ್ರಾಮಪಂಚಾಯಿತಿ ಅಧ್ಯಕ್ಷರಾಗಿ ತಾಲ್ಲೂಕು ಪಂಚಾಯ್ತಿ ಅಧ್ಯಕ್ಷರಾಗಿ ಪ್ರಭುತ್ವ ಸಾಧಿಸಿದ್ದಾರೆ. ಗ್ರಾಮದ ಪ್ರಮುಖ ಹಬ್ಬಗಳಲ್ಲಿ ಮುಖಂಡತ್ವ ವಹಿಸಿಕೊಂಡು ಜವಾಬ್ದಾರಿ ನಿರ್ವಹಿಸಿದ್ದಾರೆ. ಐಕನಹಳ್ಳಿಯಮ್ಮನ ದೇವಸ್ಥಾನದ ಅರ್ಚಕರಾಗಿ ಕಾರ್ಯ ನಿರ್ವಹಿಸಿಕೊಂಡು ಬರುತ್ತಿರುವ ಕುಟುಂಬದವರು ಕೂಡ ಗಂಗಡಿಕಾರ ಒಕ್ಕಲಿಗರೇ ಆಗಿದ್ದಾರೆ.

ಆ) ಹರಿಜನರು

ಐಕನಹಳ್ಳಿ ಗ್ರಾಮದಲ್ಲಿ ಹರಿಜನರು ಜನಸಂಖ್ಯಾ ದೃಷ್ಟಿಯಿಂದ ಎರಡನೆಯ ಸ್ಥಾನವನ್ನು ಪಡೆದಿದ್ದಾರೆ. ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯ ಎದುರಿಗೆ ಹರಿಜನ ಕಾಲೋನಿ ಇದೆ. ಹಿಂದೆ ಒಕ್ಕಲಿಗರಲ್ಲಿ ಜೀತದಾಳಾಗಿ ದುಡಿಯುತ್ತಿದ್ದರಾದರು, ದಿನಕಳೆದಂತೆ ಸರ್ಕಾರದ ಸೌಲಭ್ಯಗಳು ಹೆಚ್ಚಾಗಿ, ಕಾನೂನು ಬಿಗಿಯಾಗಿರುವುದರಿಂದ ಜೀತಪದ್ಧತಿ ಮರೆಯಾಗಿದೆ. ಗ್ರಾಮದ ಜನರ ಮದುವೆ, ಸಾವು, ಹಬ್ಬ ಹರಿದಿನಗಳಲ್ಲಿ ಕೊಂಬು, ಕಹಳೆ, ತಮ್ಮಟೆಗಳನ್ನು ನುಡಿಸುವ ಕಾಯಕವನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. ನ್ಯಾಯ ಪಂಚಾಯಿತಿಗಳಿದ್ದಾಗ ಹಾಗು ಹಬ್ಬದ ದಿನ ಗೊತ್ತು ಮಾಡಿದಾಗ ತಮ್ಮಟೆ ಬಡಿದು ಸಾರುವ ಜವಾಬ್ದಾರಿಯನ್ನು ಹೊರುತ್ತಾರೆ. ಇವರು ಮೊದಮೊದಲು ಮೇಲು ಜಾತಿಯವರ ಮನೆಗಳಲ್ಲಿ ನಡೆಯುವ ಮದುವೆ ತಿಥಿಗಳಲ್ಲಿ ಉಳಿದ ಆಹಾರವನ್ನು ತೆಗೆದುಕೊಂಡು ಹೋಗುತ್ತಿದ್ದರಾದರು, ಇತ್ತೀಚಿಗೆ ಇದು ಕಡಿಮೆಯಾಗುತ್ತಿದೆ. ಇಂತಹ ಶೋಷಣೆಗಳನ್ನು ನೋಡಿಯೇ ಡಾ. ಅಂಬೇಡ್ಕರ್‌ರವರು ಅಸ್ಪೃಶ್ಯರು ಹಳ್ಳಿಗಳನ್ನು ತೊರೆಯಬೇಕು ಎಂದು ಹೇಳಿದ್ದಾರೇನೊ ಅನ್ನಿಸುತ್ತದೆ. ಇವತ್ತಿಗೂ ಹಳ್ಳಿಗಳು ದುರ್ಬಲರ ಪಾಲಿಗೆ

ಕ್ರೂರ ಶಾಪಗಳಾಗಿವೆ. ಆದರೆ ವಿದ್ಯಾವಂತರು ಹೆಚ್ಚಾದಂತೆ ಹರಿಜನರನ್ನು ಗೌರವದಿಂದ ಸಮಾನವಾಗಿ ನಡೆಸಿಕೊಳ್ಳುತ್ತಿರುವವರು ಹೆಚ್ಚುತ್ತಿದ್ದಾರೆ.

ಇ). ಶೆಟ್ಟರು (ಮಗ್ಗದವರು)

ಶೆಟ್ಟರು ಐಕನಹಳ್ಳಿ ಗ್ರಾಮದ ಜನಸಂಖ್ಯೆಯಲ್ಲಿ ಮೂರನೇ ಸ್ಥಾನ ಪಡೆದುಕೊಂಡಿದ್ದಾರೆ. ಇವರ ವೃತ್ತಿ ವ್ಯಾಪಾರ. ಮೊದಲು ನಾಲ್ಕಾರು ಕುಟುಂಬಗಳು ಮಗ್ಗವನ್ನು ನೆಯ್ಯುತ್ತಿದ್ದರು. ಇತ್ತೀಚೆಗೆ ಈ ವೃತ್ತಿಯನ್ನು ಎಲ್ಲರು ನಿಲ್ಲಿಸಿದ್ದಾರೆ. ಒಂದು ಕುಟುಂಬದವರು ಸಿಹಿ ಪದಾರ್ಥಗಳನ್ನು ಸಿದ್ಧ ಮಾಡಿಕೊಂಡು ಸಂತೆ, ಜಾತ್ರೆಗಳಲ್ಲಿ ವ್ಯಾಪಾರ ಮಾಡಿ ಹಣ ಸಂಪಾದಿಸುತ್ತಾರೆ. ಗ್ರಾಮದ ಜನ ನಾಮಕರಣ, ನಿಶ್ಚಿತಾರ್ಥ, ಮದುವೆ, ತಿಥಿ ಮುಂತಾದ ಕಾರ್ಯಗಳಲ್ಲಿ ಇವರಿಂದಲೇ ಸಿಹಿ ಪದಾರ್ಥಗಳನ್ನು ಮಾಡಿಸಿಕೊಳ್ಳುತ್ತಾರೆ. ಒಂದೆರಡು ಕುಟುಂಬದವರು ಅಂಗಡಿಗಳನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದಾರೆ. ಉಳಿದವರೆಲ್ಲರು ವ್ಯವಸಾಯವನ್ನೆ ನಂಬಿ ಬದುಕುತ್ತಿದ್ದಾರೆ. ಗ್ರಾಮದ ಇತರೆ ಜಾತಿಯವರಿಗೆ ಹೋಲಿಸಿದರೆ ಇವರಲ್ಲಿ ಶಾಸ್ತ್ರ ಸಂಪ್ರದಾಯಗಳು ಹೆಚ್ಚು. ಇತ್ತೀಚಿನ ದಿನಗಳಲ್ಲಿ ಮೊದಲಿದ್ದ ಆಸಕ್ತಿ ಇಲ್ಲವಾಗಿದೆ.

ಈ) ಆಚಾರಿಗಳು (ವಿಶ್ವಕರ್ಮ)

ಈ ಗ್ರಾಮದಲ್ಲಿ ಆಚಾರಿ ಜನಾಂಗದ ಏಳೆಂಟು ಕುಟುಂಬಗಳಿವೆ. ಮರಗೆಲಸ ಇವರ ಮೂಲ ವೃತ್ತಿಯಾಗಿದೆ. ಎರಡು ಮೂರು ಕುಟುಂಬದವರು ಮಾತ್ರ ಇವತ್ತಿಗೂ ಮರಗೆಲಸವನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಎತ್ತಿನ ಗಾಡಿಗಳನ್ನು ತಯಾರಿಸುತ್ತಾರೆ. ಅಕ್ಕಪಕ್ಕದ ಊರುಗಳಲ್ಲಿಯೂ ಇವರನ್ನು ಬಳಕೆ ಮಾಡಿಕೊಳ್ಳುತ್ತಾರೆ. ಬ್ರಾಹ್ಮಣರ ಹಾಗೆ ಜನಿವಾರಗಳನ್ನು ಹಾಕುವ ಇವರು ಕಬ್ಬಿಣದ ಆಯುಧಗಳನ್ನು ತಯಾರಿಸುತ್ತಾರೆ. ರೈತರು ಬೆಳೆಗಳನ್ನು ಕಟಾವು ಮಾಡುವ ಸಂದರ್ಭದಲ್ಲಿ ಕುಡಗೋಲುಗಳನ್ನು ಕುಲುಮೆಗಳಲ್ಲಿ ಚೂಪು ಮಾಡಿಸಿಕೊಂಡು ಹೋಗುತ್ತಾರೆ. ನೇಗಿಲು ಮಾಡಿಕೊಡುವುದು, ಮತ್ತು ದೇವರ ಉತ್ಸವಗಳ ಸಂದರ್ಭದಲ್ಲಿ ಮಂಟಪಗಳನ್ನು ಸಿದ್ಧಪಡಿಸುತ್ತಾರೆ. ಈ ಕೆಲಸಕ್ಕಾಗಿ ರೈತರಿಂದ ವರ್ಷಕ್ಕೊಮ್ಮೆ ಹಡದೆ ಪಡೆಯುತ್ತಾರೆ. ಪ್ರಾರಂಭದಲ್ಲಿ ಬೇರೆ ಜಾತಿಯವರ ಮನೆಗಳಲ್ಲಿ ಊಟ ಮಾಡದಿದ್ದ ಇವರು ಈಗ ಬದಲಾಗಿದ್ದಾರೆ. ಮಾಂಸಾಹಾರ ತಿನ್ನುವುದನ್ನು ಅಭ್ಯಾಸ ಮಾಡಿಕೊಂಡಿದ್ದಾರೆ.

ಉ) ಮಡಿವಾಳರು (ಅಗಸರು)

ಊರಿನಲ್ಲಿ ನಡೆಯುವ ಹಬ್ಬ, ಮದುವೆ, ಉತ್ಸವಗಳಲ್ಲಿ ಪ್ರಮುಖ ಸ್ಥಾನ ವಹಿಸುವ ಮಡಿವಾಳರ ಐದಾರು ಕುಟುಂಬಗಳು ಐಕನಹಳ್ಳಿಯಲ್ಲಿವೆ. ಇವರ ಆಚರಣೆ ಸಂಪ್ರದಾಯಗಳೆಲ್ಲವು ಬಹುತೇಕ ಗಂಗಡಿಕಾರ ಒಕ್ಕಲಿಗರಂತೆಯೇ ಇವೆ. ಬಟ್ಟೆಯನ್ನು ಒಗೆಯುವ ವೃತ್ತಿ ಇವರದಾಗಿದೆ. ದೇವರ ಬಟ್ಟೆಗಳನ್ನು ಇವರೇ ಮಡಿಮಾಡಿ ತರಬೇಕು. ಜೊತೆಗೆ ಪಂಜನ್ನು ಹಿಡಿಯುವ ಜವಾಬ್ದಾರಿಯನ್ನು ಹೊರುತ್ತಾರೆ. ಗ್ರಾಮದಲ್ಲಿರುವ ಭೈರವೇಶ್ವರನ ದೇವರನ್ನು ಪೂಜೆ ಮಾಡುವ

ಅರ್ಚಕರು ಇವರ ಕುಟುಂಬದವರೆ ಆಗಿದ್ದಾರೆ. ಜೊತೆಗೆ ಭೈರವೇಶ್ವರನನ್ನು ಮನೆ ದೇವರಾಗಿ ಹೊಂದಿರುವ ಇತರ ಕುಟುಂಬದವರು ಮದುವೆ, ನಾಮಕರಣ, ತಿಥಿ ಮೊದಲಾದ ಸಂದರ್ಭದಲ್ಲಿ ಮನೆಯ ದೇವರಿಗೆ ಎಡೆ ಇಟ್ಟು ಪೂಜೆ ಮಾಡಿಸಲು ಈ ಅರ್ಚಕರನ್ನು ಕರೆಯುತ್ತಾರೆ. ನಂತರ ಊರಿನವರಿಗೆ ಊಟ ಕೊಡುತ್ತಾರೆ. ಇದರಿಂದಾಗಿ ಐಕನಹಳ್ಳಿ ಗ್ರಾಮದ ಮಡಿವಾಳರಿಗೆ ವಿಶೇಷವಾದ ಗೌರವವಿದೆ. ಗಂಗಡಿಕಾರ ಒಕ್ಕಲಿಗರೇ ಪ್ರಧಾನವಾಗಿದ್ದರು, ಮಡಿವಾಳರ ಕುಟುಂಬದವರೆ ಅಂಚೆ ಕಛೇರಿಯ ಪೋಸ್ಟ್ ಮಾಸ್ಟರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇತರರು ವ್ಯವಸಾಯ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ.

ಊ) ಕ್ಷೌರಿಕರು (ನಯನ ಕ್ಷತ್ರಿಯರು)

ಐಕನಹಳ್ಳಿ ಗ್ರಾಮದಲ್ಲಿ ಕ್ಷೌರಿಕರ ನಾಲ್ಕು ಮನೆಗಳಿವೆ. ಇವರು ಕ್ಷೌರಿಕ ವೃತ್ತಿಯನ್ನೆ ಪ್ರಧಾನವಾಗಿ ನಂಬಿಕೊಂಡಿದ್ದಾರೆ. ಒಬ್ಬರು ಕಿಕ್ಕೇರಿಯಲ್ಲಿ ಕ್ಷೌರದಂಗಡಿಯನ್ನು ಇಟ್ಟುಕೊಂಡಿದ್ದಾರೆ. ಇವರ ಬಹುತೇಕ ಆಚರಣೆಗಳು ಒಕ್ಕಲಿಗರಂತೆಯೇ ಇವೆ. ಮದುವೆ, ತಿಥಿಗಳಲ್ಲಿ ಕೇಶಮಂಡನ ಮಾಡಿಸಿಕೊಳ್ಳಲು ಎಲ್ಲಾ ಜನಾಂಗದವರು ಇವರನ್ನು ಕರೆಯುತ್ತಾರೆ. ಹಬ್ಬ ಹರಿದಿನ, ಉತ್ಸವ, ಮದುವೆ, ಮೆರವಣಿಗೆಗಳಲ್ಲಿ ವಾಲಗ ಮತ್ತು ಡೋಲನ್ನು ಬಾರಿಸಲು ಇವರನ್ನು ಬಳಸಿಕೊಳ್ಳುತ್ತಾರೆ. ಅಕ್ಕಪಕ್ಕದ ಹಳ್ಳಿಗಳಿಗೂ ಹೋಗಿ ಹಣವನ್ನು ಸಂಪಾದಿಸುತ್ತಾರೆ. ಎಲ್ಲಾ ಗ್ರಾಮದಲ್ಲಿಯು ವಾಲಗದ ತಂಡದವರು ಇಲ್ಲದಿರುವುದು ಇದಕ್ಕೆ ಕಾರಣವಾಗಿದೆ. ಹಿಂದೆ ದವಸ ಧಾನ್ಯಗಳನ್ನು (ಹಡದೆ) ವರ್ಷಕ್ಕೊಮ್ಮೆ ಪಡೆದು ಮನೆಗಳ ಬಳಿಯೇ ಬಂದು ಕ್ಷೌರ ಮಾಡುತ್ತಿದ್ದರು. ಇತ್ತೀಚೆಗೆ ಕ್ಷೌರದ ಅಂಗಡಿಗಳನ್ನು ತೆರೆದು ಗ್ರಾಹಕರೇ ಇವರ ಬಳಿಗೆ ಬರುವಂತೆ ಮಾಡಿಕೊಂಡಿದ್ದಾರೆ. ಪ್ರತಿ ಶುಕ್ರವಾರ ಹಾಗು ದೀಪಾವಳಿ ಹಬ್ಬದ ದಿನ ಐಕನಹಳ್ಳಿಯಮ್ಮನ ಗುಡಿಯ ಬಳಿ ಮಕ್ಕಳ ಕೇಶಮಂಡನವನ್ನು ಮಾಡಿಕೊಡುತ್ತಾರೆ. ಜೊತೆಗೆ ವ್ಯವಸಾಯ ಮತ್ತು ಜಾನುವಾರುಗಳ ಸಾಕಾಣೆಯನ್ನು ಮಾಡುತ್ತ ಬದುಕು ಕಂಡುಕೊಂಡಿದ್ದಾರೆ.

ಋ) ಬ್ರಾಹ್ಮಣರು

ಗ್ರಾಮದಲ್ಲಿ ಮೊದಲು ಬ್ರಾಹ್ಮಣರ ಕುಟುಂಬಗಳಿರಲಿಲ್ಲ. ಏಳೆಂಟು ವರ್ಷಗಳ ಹಿಂದೆ ಬ್ರಾಹ್ಮಣರ ಕುಟುಂಬವೊಂದು ಬಂದು ನೆಲೆಸಿದೆ. ರಂಗದ ಬೀದಿಯಲ್ಲಿರುವ ಲಕ್ಕಮ್ಮನ ಗುಡಿಯ ಅರ್ಚಕರಾಗಿ ಕಾರ್ಯನಿರ್ವಹಿಸುವ ಜವಾಬ್ದಾರಿಯನ್ನು ಊರಿನ ಗ್ರಾಮಸ್ಥರು ಈ ಕುಟುಂಬಕ್ಕೆ ವಹಿಸಿದ್ದಾರೆ. ಜೀವನ ನಿರ್ವಹಣೆಗಾಗಿ ಜಮೀನನ್ನು ಬಿಟ್ಟಿದ್ದಾರೆ. ಇದನ್ನು ದೇವರ ಜಮೀನೆಂದು ಕರೆಯುತ್ತಾರೆ. ಪ್ರತಿ ಶುಕ್ರವಾರ ವಿಶೇಷ ಪೂಜೆ ಮಾಡುತ್ತಾರೆ. ಉಳಿದಂತೆ ಮದುವೆ, ಉತ್ಸವಗಳಲ್ಲಿ ಪೂಜೆಯ ಕಾರ್ಯ ನೆರವೇರಿಸುತ್ತಾರೆ. ಬೇರೆ ಗ್ರಾಮಗಳಲ್ಲಿ ಇರುವಂತೆ, ಈ ಗ್ರಾಮದಲ್ಲಿಯು ಬ್ರಾಹ್ಮಣರೊಬ್ಬರಿದ್ದು ದೇವರ ಪೂಜೆ ಪುರಸ್ಕಾರಗಳನ್ನು ನಡೆಸಿಕೊಂಡು ಬರುತ್ತಿರುವುದಕ್ಕೆ ಭಕ್ತ ಸಮೂಹ ಸಂತಸಪಡುತ್ತಾರೆ.

೨. ಆಡಳಿತ ಪದ್ಧತಿ

ಐಕನಹಳ್ಳಿ ಗ್ರಾಮವು ಗ್ರಾಮ ಪಂಚಾಯಿತಿಯ ಕೇಂದ್ರ ಸ್ಥಾನವಾಗಿದೆ. ಗ್ರಾಮೀಣ ಆಡಳಿತ ವ್ಯವಸ್ಥೆ ಮೊದಲಿನಷ್ಟು ಸುಲಭವಾಗಿಲ್ಲ. ರಾಜಕೀಯ ವ್ಯವಸ್ಥೆ ಗ್ರಾಮದ ಆಡಳಿತವನ್ನು ನಿಯಂತ್ರಿಸುವ ಮಟ್ಟಕ್ಕೆ ಬೆಳೆದಿದೆ. ಆದರೂ ಸಾಂಪ್ರದಾಯಿಕವಾಗಿ ಬೆಳೆದು ಬಂದ ಐಕನಹಳ್ಳಿ ಗ್ರಾಮದ ಆಡಳಿತ ವ್ಯವಸ್ಥೆ ಸಂಪೂರ್ಣವಾಗಿ ನಾಶವಾಗಿಲ್ಲ. ಇದನ್ನು ಹೀಗೆ ಗುರುತಿಸಬಹುದು.

ಅ) ಗ್ರಾಮಮಟ್ಟದ ಆಡಳಿತ ಪದ್ಧತಿ

ನಮ್ಮ ಪ್ರಾಚೀನ ಸಂಪ್ರದಾಯದ ಪ್ರಕಾರ ಪಟೇಲರು, ಶಾನುಭೋಗರು ಗ್ರಾಮವನ್ನು ಆಳುತ್ತಿದ್ದರು. ತಳವಾರನು ಸಹಕಾರ ನೀಡುತ್ತಿದ್ದ. ಊರಿನ ಮುಖ್ಯಸ್ಥನಾದ ಪಟೇಲರು ಕಂದಾಯ ವಸೂಲಿ ಮಾಡುವುದು, ಗ್ರಾಮಸ್ಥರ ನಡುವೆ ನಡೆದ ಜಗಳ ಬಿಡಿಸಿ ಒಂದು ಮಾಡುವುದು, ತನಗೆ ಗೌರವ ಕೊಡದಿದ್ದವರ ಮೇಲೆ ಕ್ರಮ ಜರುಗಿಸುವುದು ಅಗತ್ಯವಾದರೆ ಪೋಲೀಸ್ ಸ್ಟೇಷನ್ನಿಗೆ ದೂರು ನೀಡುವುದು ಮುಂತಾದ ಕಾರ್ಯ ನಿರ್ವಹಿಸುತ್ತಿದ್ದ. ಗ್ರಾಮದಲ್ಲಿ ನಡೆಯುತ್ತಿದ್ದ ಹಬ್ಬ ಹರಿದಿನ, ಜಾತ್ರೆ-ಉತ್ಸವಗಳಲ್ಲಿ ಮುಖಂಡನಾಗಿ ಊರಿನ ಕೆಲಸ ಕಾರ್ಯಗಳು ಸುಗಮವಾಗಿ ನಡೆಯುವಂತೆ ನೋಡಿಕೊಳ್ಳುತ್ತಿದ್ದ. ಹೀಗೆ ಪಟೇಲರ ಮೇಲೆ ಪ್ರಮುಖ ಜವಾಬ್ದಾರಿಯಿತ್ತು. ಶಾನುಭೋಗರು ಕಂದಾಯ ವಸೂಲಿ ಮತ್ತು ಬಾಕಿ ಹಣ ವಸೂಲಿ ಮಾಡಿ ಅದನ್ನು ಬರೆದಿಡಬೇಕಾಗಿತ್ತು. ಸಂಬಂಧಪಟ್ಟವರಿಗೆ ಹಕ್ಕು ಪತ್ರ ನೀಡುವ ಕಾರ್ಯವನ್ನು ನಿರ್ವಹಿಸುತ್ತಿದ್ದ.

ಊರಿನ ಯಜಮಾನ ಗೌಡನ ಸಹಾಯಕನಾಗಿ ತಳವಾರನ ಪಾತ್ರ ಮಹತ್ವದ್ದು. ಗೌಡ ಹೇಳಿದ ಸುದ್ದಿಗಳನ್ನು ಸಾರುವುದು, ಊರ ಜನ ಸೇರಿಸುವುದು, ಊರನ್ನು ಕಾವಲು ಕಾಯುವುದು ಮೊದಲಾದ ಜವಾಬ್ದಾರಿಗಳು ತಳಾರನಿಗಿತ್ತು. ಊರಿನ ರಂಗದ ಬೀದಿಯಲ್ಲಿರುವ ಲಕ್ಕಮ್ಮನ ಗುಡಿಯ ಬಳಿ ಊರಿನವರೆಲ್ಲಾ ಸೇರಿ ನ್ಯಾಯವನ್ನು ಬಗೆಹರಿಸಿಕೊಳ್ಳುತ್ತಿದ್ದರು. ಗೌಡರ ಸಹಾಯಕರಾಗಿ ತೋಟಿ ಹಾಗು ನೀರಗಂಟಿಯ ಪಾತ್ರವು ಪ್ರಮುಖವಾಗಿತ್ತು. ನ್ಯಾಯ ತೀರ್ಮಾನ ಮಾಡುವಾಗ ಊರಿನ ಪ್ರಮುಖರು ಸ್ಥಾನಪಡೆಯುತ್ತಿದ್ದರು. ಸಮರ್ಥರಾದ ಪ್ರಭಾವಶಾಲಿಗಳಿಗೆ ಇಂತಹ ಗೌರವಗಳು ಸಿಗುತ್ತಿದ್ದವು. ಸಾಮಾನ್ಯವಾಗಿ ಎಂತಹ ವಿವಾದವೇ ಆದರು ತಮ್ಮಲ್ಲಿಯೆ ಬಗೆಹರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಸಾಧ್ಯವಾಗದಿದ್ದರೆ ಅನಿವಾರ್ಯವಾಗಿ ಕೋರ್ಟ್ ಮೆಟ್ಟಿಲನ್ನು ಹತ್ತುತ್ತಿದ್ದರು.

ಆ) ಪಂಗಡ ಆಡಳಿತ ಪದ್ಧತಿ

ಐಕನಹಳ್ಳಿ ಗ್ರಾಮದಲ್ಲಿ ಬುಡಿಯಪ್ಪನ ಪಂಗಡ, ಹುಚ್ಚಮ್ಮನ ಪಂಗಡ, ತೋಪಣ್ಣನ ಪಂಗಡ, ಕೆಂಗಪ್ಪನ ಪಂಗಡಗಳೆಂಬ ನಾಲ್ಕು ಗುಂಪುಗಳಿವೆ. ಪ್ರತಿಯೊಂದು ಪಂಗಡಕ್ಕು ಒಬ್ಬೊಬ್ಬ ಯಜಮಾನರಿದ್ದಾರೆ. ಹಳ್ಳಿಯ ಯಾವುದೇ ಜಗಳ, ಗೊಂದಲಗಳಿದ್ದರು ಈ ನಾಲ್ಕು ಜನ

ಯಜಮಾನರ ಸಮಕ್ಷಮದಲ್ಲಿ ಪರಿಹಾರವಾಗಬೇಕು. ನಮ್ಮ ಪುರಾತನ ಆಡಳಿತ ವ್ಯವಸ್ಥೆಯಲ್ಲಿ ಕುಲಮಟ್ಟದ ಕಟ್ಟೆಮನೆ ಅಸ್ಥಿತ್ವದಲ್ಲಿತ್ತು. ಈ ಗ್ರಾಮದಲ್ಲಿ ಕಟ್ಟೆಮನೆ ಪದ್ಧತಿ ಕಂಡುಬಂದಿಲ್ಲ.

ತಮ್ಮ ತಮ್ಮ ಯಜಮಾನರ ಮಾತುಗಳಿಗೆ ಉಳಿದ ಸದಸ್ಯರು ಗೌರವ ಕೊಡುವುದರಿಂದ ಈ ನಾಲ್ಕು ಪಂಗಡಗಳ ನ್ಯಾಯ ತೀರ್ಮಾನ ಸುಲಭವಾಗಿ ಬಗೆಹರಿಯುತ್ತಿತ್ತು. ಆದರೆ ಇತ್ತೀಚಿನ ಯುವಜನತೆ ಪಂಗಡದ ಆಡಳಿತ ಪದ್ಧತಿಯಲ್ಲಿ ಆಸಕ್ತಿ ವಹಿಸದೆ ಪೊಲೀಸ್ ಠಾಣೆ ಹಾಗು ನ್ಯಾಯಾಲಯದ ಮೆಟ್ಟಿಲೇರುತ್ತಿದ್ದಾರೆ. ಯಜಮಾನರು ತಮ್ಮ ನಿಯಂತ್ರಣವನ್ನು ಕಳೆದುಕೊಳ್ಳುತ್ತಿದ್ದಾರೆ.

ಇ) ಕುಟುಂಬ ಆಡಳಿತ ಪದ್ಧತಿ

ಕುಟುಂಬ ಆಡಳಿತ ಪದ್ಧತಿ ಪಿತೃ ಪ್ರಧಾನವಾದ ವ್ಯವಸ್ಥೆಯಿಂದ ಕೂಡಿದೆ. ಕುಟುಂಬದ ಹಿರಿಯ ಪುರುಷ (ತಂದೆ) ಅಧಿಕಾರ ಚಲಾಯಿಸುವ ಮತ್ತು ಮಾರ್ಗದರ್ಶನ ನೀಡುವುದರ ಜೊತೆಗೆ ಮನೆಯ ಎಲ್ಲಾ ಜವಾಬ್ಧಾರಿಗಳ ಉಸ್ತುವಾರಿಯನ್ನು ನೋಡಿಕೊಳ್ಳುತ್ತಾನೆ. ವ್ಯವಸಾಯ ನೋಡಿಕೊಳ್ಳುವುದು, ಜಮೀನಿಗೆ ಬೇಕಾದ ಗೊಬ್ಬರ ತರಿಸುವುದು. ಎತ್ತು, ಗಾಡಿ, ಟ್ರ್ಯಾಕ್ಟರ್ ತರುವುದು ಮತ್ತು ಮಾರಾಟ ಮಾಡುವುದು. ಮನೆಗೆ ಬೇಕಾದ ದಿನೋಪಯೋಗಿ ವಸ್ತುಗಳನ್ನು ತರುವುದು, ಹಬ್ಬ ಹರಿದಿನಗಳಲ್ಲಿ ಬರುವ ಖರ್ಚು ನಿಭಾಯಿಸುವುದು. ಮನೆಯ ಮಕ್ಕಳ ನಾಮಕರಣ, ಶಿಕ್ಷಣ, ನಿಶ್ಚಿತಾರ್ಥ, ಮದುವೆಗಳ ಜವಾಬ್ಧಾರಿ ಹೊರುವುದು ಮೊದಲಾದ ಕಾರ್ಯಗಳನ್ನು ನಿರ್ವಹಿಸುತ್ತಾನೆ. ಮನೆಯ ಕಿರಿಯ ಸದಸ್ಯರು ಯಾವುದೇ ತೀರ್ಮಾನ ತೆಗೆದುಕೊಳ್ಳಬೇಕಾದರು ಯಜಮಾನನ ಮೌಖಿಕ ಒಪ್ಪಿಗೆ ಪಡೆದುಕೊಳ್ಳುತ್ತಾರೆ. ಯಜಮಾನನ ಹೆಂಡತಿಯ ಕೈಕೆಳಗೆ ಕುಟುಂಬದ ಇತರ ಸ್ತ್ರೀಯರು ಬರುತ್ತಾರೆ. ಅವರಿಗೆ ಮಾರ್ಗದರ್ಶನ ಮಾಡುವ, ಮನೆ ಕೆಲಸಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುವ ಜವಾಬ್ಧಾರಿ ಯಜಮಾನತಿಯದ್ದಾಗಿರುತ್ತದೆ. ಯಜಮಾನ ಮತ್ತು ಯಜಮಾನತಿ ಇತರ ಸದಸ್ಯರಿಗೆ ಒಬ್ಬರಿಗೆ ಒಂದೊಂದು ಕೆಲಸವನ್ನು ವಹಿಸುತ್ತಾರೆ. ಪುರುಷರು ಹೊಲ, ಗದ್ದೆ, ತೋಟದ ಕೆಲಸದ ಜೊತೆಗೆ ಎಮ್ಮೆ, ಹಸು, ಎತ್ತು, ಕುರಿ, ಮೇಕೆಗಳನ್ನು ಸಾಕುವ ಜವಾಬ್ಧಾರಿ ಹೊರುತ್ತಾರೆ. ಮಹಿಳೆಯರು ಅಡಿಗೆ ಮಾಡುವುದು, ಪಾತ್ರೆ ತೊಳೆಯುವುದು, ಬಟ್ಟೆ ಹೊಗೆಯುವುದು, ಅನಿವಾರ್ಯ ಸಂದರ್ಭಗಳಲ್ಲಿ ಪ್ರಾಣಿಗಳನ್ನು ಸಾಕುವ ಕೆಲಸವನ್ನು ನಿರ್ವಹಿಸುತ್ತಾರೆ. ಬೆಳೆಗಳನ್ನು ಬಿತ್ತಿ, ಕಟಾವು ಮಾಡಿ, ಕಣದಲ್ಲಿ ಧಾನ್ಯಗಳನ್ನು ಸ್ವಚ್ಛ ಮಾಡುವ ಕಾರ್ಯವನ್ನು ಎಲ್ಲರು ಒಟ್ಟಾಗಿ ಮಾಡುತ್ತಾರೆ. ಮನೆಯ ಯಜಮಾನ ಮತ್ತು ಯಜಮಾನತಿ ತಮ್ಮ ಜವಾಬ್ಧಾರಿಯನ್ನು ನಿರ್ವಹಿಸಲು ಸಂಪೂರ್ಣವಾಗಿ ವಿಫಲವಾದರೆ ಸಹಜವಾಗಿಯೇ ಮತ್ತೊಬ್ಬರು ಈ ಜವಾಬ್ಧಾರಿ ಹೊರುತ್ತಾರೆ. ಅವಿಭಕ್ತ ಕುಟುಂಬಗಳಲ್ಲಿ ಹಿರಿಯ ಮಗ ಮತ್ತು ಸೊಸೆಯು ಹೆಚ್ಚು ಜವಾಬ್ಧಾರಿಯನ್ನು ನಿರ್ವಹಿಸುತ್ತಾರೆ. ಮನೆಯ ಸೊಸೆ ಅಡುಗೆ ಮಾಡುವಾಗ ಅತ್ತೆಯನ್ನು ಕೇಳಿಯೇ ಅಡುಗೆ ಮಾಡಬೇಕಾಗಿತ್ತು. ಸೊಸೆ

ಅತ್ತೆ ಹೇಳಿದ ಸಾಂಬಾರನ್ನೆ ಮಾಡಬೇಕು. ಹಾಗೆಯೇ ಮಕ್ಕಳು ಅಪ್ಪನ ಜೊತೆ ನೇರವಾಗಿ ವ್ಯವಹರಿಸಲು ಹೆದರುತ್ತಿದ್ದರು. ಅಮ್ಮನ ಮಧ್ಯಸ್ಥಿಕೆಯಿಂದಲೇ ತಮ್ಮ ಬೇಕು-ಬೇಡಗಳನ್ನು ಬಗೆಹರಿಸಿಕೊಳ್ಳುತ್ತಿದ್ದರು. ಅತಿಥಿಗಳನ್ನು ಕರೆತರುವುದು ಯಜಮಾನನ ಕಾರ್ಯವಾದರೆ ಅವರನ್ನು ಉಪಚರಿಸುತ್ತಿದ್ದದ್ದು ಮಾತ್ರ ಯಜಮಾನಿ.

ಈ) ಹಿರಿ ಅಳಿಯ ಮತ್ತು ಮಗಳ ಜವಾಬ್ಧಾರಿ

ಸಾಮಾನ್ಯವಾಗಿ ಅಪ್ಪ ಅಮ್ಮನ ಆಡಳಿತ ಕೊನೆಗೊಂಡಾಗ ಹಿರಿಯ ಮಗ ಮತ್ತು ಸೊಸೆ ಆ ಜವಾಬ್ಧಾರಿ ಹೊರುತ್ತಾರೆ. ಆದರೆ ಮನೆಯ ಮಗಳು ಮತ್ತು ಹಿರಿಯ ಅಳಿಯನ ಜವಾಬ್ಧಾರಿಯನ್ನು ಅಲ್ಲಗೆಳೆಯುವಂತಿಲ್ಲ. ಕುಟುಂಬದವರ ಮದುವೆ, ಸಾವು, ತಿಥಿ ಮುಂತಾದ ಸಂದರ್ಭದಲ್ಲಿ ಇವರ ಕಾರ್ಯ ಮೆಚ್ಚುವಂತದ್ದು. ಹೆಣ್ಣು, ಗಂಡು ನೋಡುವಾಗಲು ಮನೆ ಮಗಳು ಹಾಗು ಹಿರಿಯ ಅಳಿಯನ ಒಪ್ಪಿಗೆ ತೆಗೆದುಕೊಂಡೆ ಮುಂದುವರಿಯುತ್ತಾರೆ. ಮದುವೆ ಮುಗಿಯುವವರೆಗು ಎಲ್ಲ ಕೆಲಸ ಕಾರ್ಯಗಳಲ್ಲಿ ಇವರಿಬ್ಬರು ಕೈಜೋಡಿಸುತ್ತಾರೆ. ಸಾವು ಸಂಭವಿಸಿದಾಗಲು ಮುಂದೆ ನಿಂತು ಜವಾಬ್ಧಾರಿ ಹೊರುತ್ತಾರೆ. ಕೆಲವು ಕುಟುಂಬಗಳು ತಮ್ಮ ಮಕ್ಕಳಿಗಿಂತಲು ಹೆಚ್ಚಾಗಿ ಮಗಳು ಹಾಗು ಹಿರಿಯ ಅಳಿಯನನ್ನು ಅವಲಂಭಿಸಿವೆ. ಇನ್ನು ಕೆಲವು ಕುಟುಂಬಗಳಲ್ಲಿ ಇವರಿಬ್ಬರ ತೀರ್ಮಾನಗಳಿಗೆ ಸೊಪ್ಪು ಹಾಕುವುದಿಲ್ಲ. ಮನೆಯ ಮಗ ಮತ್ತು ಸೊಸೆಯ ನಿಯಂತ್ರಣವೇ ಇದಕ್ಕೆ ಪ್ರಮುಖ ಕಾರಣವಾಗಿದೆ.

ಉ) ಚುನಾಯಿತ ಪ್ರತಿನಿಧಿಯ ಆಡಳಿತ

ಗ್ರಾಮೀಣ ಮತ್ತು ಪಂಚಾಯತ್‌ರಾಜ್ ವ್ಯವಸ್ಥೆ ಬಂದ ಮೇಲೆ ಗ್ರಾಮೀಣ ಆಡಳಿತದಲ್ಲಿ ಸಾಕಷ್ಟು ಬದಲಾವಣೆಯಾಯಿತು. ಗ್ರಾಮ ಪಂಚಾಯಿತಿ ಸದಸ್ಯರು ಆಯ್ಕೆಯಾದರು. ವಂಶಪಾರಂಪಾರ್ಯವಾಗಿ ಬೆಳೆದು ಬಂದಿದ್ದ ಪಟೇಲರ ಆಡಳಿತ ಜನಪ್ರತಿನಿಧಿಯ ಕೈಗೆ ಸಿಕ್ಕಿತು. ಶಾನುಭೋಗನ ಬದಲಾಗಿ ಗ್ರಾಮ ಲೆಕ್ಕಿಗ ನೇಮಕವಾದ. ಗ್ರಾಮ ಪಂಚಾಯಿತಿಯ ಅಧ್ಯಕ್ಷನ ಗೌರವ ಹೆಚ್ಚಾಯಿತು. ಗ್ರಾಮದ ಎಲ್ಲಾ ಜನಾಂಗದವರಿಗೂ ಅಧಿಕಾರ ಸಿಗುವಂತಾಯಿತು. ಊರಿನ ಯಜಮಾನನ ಮನೆಯಲ್ಲಿ ಕೈ ಕಟ್ಟಿಕೊಂಡು ಕುಳಿತುಕೊಳ್ಳುತ್ತಿದ್ದ ಕೆಳ ವರ್ಗದವರು ಕೂಡ ಕುರ್ಚಿಯ ಮೇಲೆ ಕೂರುವಂತಾಯಿತು. ಐಕನಹಳ್ಳಿ ಗ್ರಾಮ ಪಂಚಾಯ್ತಿಯ ಮುಖ್ಯ ಕೇಂದ್ರವಾಗಿರುವುದು ಗಮನಿಸಬೇಕಾದ ಸಂಗತಿ. ಇದೇನೇ ಇದ್ದರೂ ಮೊದಲಿನಿಂದಲೂ ಬೆಳೆದು ಬಂದ "ಪಂಚಾಯ್ತಿ ನ್ಯಾಯ ತೀರ್ಮಾನ" ಮುಂದುವರೆದುಕೊಂಡು ಬರುತ್ತಿರುವುದು ಸ್ವಾಗತಾರ್ಹ ಸಂಗತಿ. ಗ್ರಾಮದ ನಾಲ್ಕು ಪಂಗಡಗಳ ಯಜಮಾನರು ಚುನಾಯಿತ ಪ್ರತಿನಿಧಿಗಳ ಜೊತೆ ಸೇರಿ ಗ್ರಾಮಸ್ಥರ ಸಮಸ್ಯೆಗಳನ್ನು ಪರಿಹರಿಸಿಕೊಂಡು ಬರುತ್ತಿದ್ದಾರೆ. ಕೆಲವೊಮ್ಮೆ ತಾಲ್ಲೂಕು ಪಂಚಾಯಿತಿ ಪ್ರತಿನಿಧಿಗಳು ಇವರೊಟ್ಟಿಗೆ ಸೇರಿಕೊಳ್ಳುತ್ತಾರೆ. ಬೇರೊಬ್ಬರ ತೋಟದಲ್ಲಿ ಬಿದ್ದಿರುವ ತೆಂಗಿನಕಾಯಿ, ಸೋಗೆ ಗರಿಗಳನ್ನು ಮುಟ್ಟುವಂತಿಲ್ಲ. ತೆಗೆದುಕೊಂಡರೆ ದಂಡ ಕಟ್ಟಬೇಕಾಗುತ್ತದೆ.

ಬೇರೊಬ್ಬರ ಜಮೀನಿನಲ್ಲಿ ಬೆಳೆದ ಪೈರುಗಳನ್ನು ನಾಶ ಮಾಡಿದ ಜಾನುವಾರುಗಳನ್ನು ಊರಿನ ದೊಡ್ಡಿಗೆ ಸೇರಿಸಿ ದಂಡ ವಿಧಿಸಲಾಗುತ್ತದೆ. ಹೀಗೆ ಒಬ್ಬರು ಮತ್ತೊಬ್ಬರಿಗೆ ತೊಂದರೆ ಕೊಡದ ಪರಸ್ಪರ ಸಹಬಾಳ್ವೆಯಿಂದ ಬದುಕುವ ವಾತಾವರಣವನ್ನು ಜನಪ್ರತಿನಿಧಿಗಳ ನೇತೃತ್ವದಲ್ಲಿ ನಿರ್ಮಿಸಿಕೊಂಡಿದ್ದಾರೆ.

ಅನಕ್ಷರಸ್ಥ ಮಹಿಳೆಯರು ಆರಿಸಿ ಬಂದಾಗ ಸಹಜವಾಗಿಯೇ ಆಕೆಯ ಪತಿ ಅಧಿಕಾರ ಚಲಾಯಿಸುತ್ತಾನೆ. ಬೇರೆ ಬೇರೆ ಪಕ್ಷದ ಜನಪ್ರತಿನಿಧಿಗಳು ಇರುವುದರಿಂದ ಗುಂಪುಗಾರಿಕೆ ಹೆಚ್ಚಾಗುತ್ತಿದೆ. ನ್ಯಾಯ ತೀರ್ಮಾನ ಕೆಲವೊಮ್ಮೆ ಕಠಿಣವಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಜನರು ಪೊಲೀಸ್ ಸ್ಟೇಷನ್ ಹಾಗು ನ್ಯಾಯಾಲಯದ ಮೊರೆ ಹೋದ ಉದಾಹರಣೆಗಳು ಇವೆ.

೩. ಆರ್ಥಿಕ ವ್ಯವಸ್ಥೆ

ಗ್ರಾಮದ ವಿವಿಧ ಜನಾಂಗದ ಬೆಳವಣಿಗೆಯಲ್ಲಿ ಆರ್ಥಿಕತೆ ಪ್ರಮುಖ ಪಾತ್ರವಹಿಸುತ್ತದೆ. ಕಸುಬು ಮತ್ತು ಉಪ ಕಸುಬುಗಳು ಗ್ರಾಮೀಣ ಜನರ ಆದಾಯದ ಮೂಲಗಳಾಗಿರುತ್ತವೆ. ಬದುಕನ್ನು ನಡೆಸಲು ಅಗತ್ಯವಾದ ಮಾರ್ಗೋಪಾಯಗಳನ್ನು ಹುಡುಕಿಕೊಳ್ಳಬೇಕಾಗುತ್ತದೆ. ಕುಟುಂಬದ ಮುಖ್ಯಸ್ಥನ ಜವಾಬ್ದಾರಿ ಹೆಚ್ಚಾಗಿರುತ್ತದೆ. ಎಷ್ಟು ದುಡಿದೆ ಎನ್ನುವುದಕ್ಕಿಂತ ಎಷ್ಟು ಉಳಿಸಿದೆ ಎಂಬ ರೀತಿಯಲ್ಲಿ ಬದುಕಿ ಭವಿಷ್ಯ ಕಟ್ಟಿಕೊಳ್ಳಬೇಕಾಗುತ್ತದೆ. ಗ್ರಾಮವೊಂದರ ಅರ್ಥ ವ್ಯವಸ್ಥೆ ಅಲ್ಲಿನ ನಾಗರೀಕತೆಯನ್ನು ಪರಿಚಯಿಸುತ್ತದೆ. ಐಕನಹಳ್ಳಿಯ ಆರ್ಥಿಕತೆಯ ಒಳಹೊರಗುಗಳನ್ನು ತಿಳಿದುಕೊಳ್ಳಬಹುದು.

ಅ) ಕೃಷಿ ಮೂಲ

ಗ್ರಾಮದಲ್ಲಿ ಹೆಚ್ಚು ಜನ ಕೃಷಿ ಮೂಲವನ್ನೆ ನಂಬಿಕೊಂಡಿದ್ದಾರೆ. ಸಣ್ಣ ರೈತರೇ ಹೆಚ್ಚಾಗಿದ್ದು ಕೆಲವೊಮ್ಮೆ ಬೆಳೆಯ ಪ್ರಮಾಣದಲ್ಲಿ ವ್ಯತ್ಯಾಸವಾಗುವುದು ಉಂಟು. "ಗ್ರಾಮ ವಿವಿಧ ಕಸಬುದಾರ ಕುಟುಂಬಗಳು, ವಿವಿಧ ಜಾತಿಗಳವರು, ವೃತ್ತಿಗಳವರು ನೆಲೆಸಿರುವ ತಾಣ, ಗ್ರಾಮ ಸಮುದಾಯ ಕೃಷಿ ಪ್ರಧಾನವಾದುದು. ಕೃಷಿಯೆ ಅದರ ಮೂಲಾಧಾರ. ಕೃಷಿ ಕೇವಲ ಉದ್ಯೋಗವಲ್ಲ ಅದು ಒಂದು ಜೀವನ ಮಾರ್ಗ".[೪] ಐಕನಹಳ್ಳಿ ಪ್ರಧಾನವಾಗಿ ಕೃಷಿಕ ಗ್ರಾಮವೇ ಆಗಿದೆ. ರೈತರು ಮಳೆಯನ್ನೆ ಹೆಚ್ಚಾಗಿ ನಂಬಿಕೊಂಡಿರುವುದರಿಂದ ಕಾಲಕಾಲಕ್ಕೆ ಮಳೆ ಬಿದ್ದಾಗ ಇವರ ಬದುಕು ಹಸನಾಗುತ್ತದೆ. ಮಳೆಗಾಲದಲ್ಲಿ ಈ ಊರಿನ ಕೆರೆ ತುಂಬಿದಾಗ ವರ್ಷಕ್ಕೆ ಎರಡು ಬೆಳೆಗಳನ್ನು ಬೆಳೆದುಕೊಳ್ಳುತ್ತಾರೆ. ಆಧುನಿಕ ಸೌಲಭ್ಯಗಳನ್ನು ಬಳಸಿಕೊಂಡು ಹೆಚ್ಚು ಇಳುವರಿಯನ್ನು ಪಡೆದುಕೊಂಡರು ಕೆಲವೊಮ್ಮೆ ರೈತನ ಬೆಳೆಗಳಿಗೆ ಮಾರುಕಟ್ಟೆಯಲ್ಲಿ ಸೂಕ್ತವಾದ ಬೆಲೆ ಸಿಕ್ಕದಿದ್ದಾಗ ಹಾಗು ದಲ್ಲಾಳಿಗಳ ಹಾವಳಿಯಿಂದಾಗಿ ನಷ್ಟವನ್ನು ಅನುಭವಿಸಬೇಕಾಗುತ್ತದೆ.

ರಾಗಿ, ಭತ್ತ, ಜೋಳ, ಹುರುಳಿ, ಅವರೆ, ಹೆಸರು, ತೊಗರಿ, ಎಳ್ಳು ಮುಂತಾದ ಕಾಳು ಕಡ್ಡಿಗಳನ್ನು ಖುಷ್ಕಿ ಜಮೀನಿನಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ಕೆಲವರು ಅರಿಸಿನ, ಶುಂಠಿ, ಕಡಲೆ ಕಾಯಿಯನ್ನು ಅಪರೂಪಕ್ಕೊಮ್ಮೆ ಬೆಳೆಯುತ್ತಾರೆ. ಬಾಗಾಯ್ತು ಜಮೀನಿನಲ್ಲಿ ತೆಂಗು, ಅಡಿಕೆ, ವೀಳ್ಯೆದೆಲೆಗಳನ್ನು ಬೆಳೆದರೆ ಕೆಲವರು ಬಾಳೆ, ರೇಷ್ಮೆಯ ಬೆಳೆಯ ಕಡೆ ಆಸಕ್ತಿ ವಹಿಸಿದ್ದಾರೆ. ಇವುಗಳಲ್ಲದೆ ಈರುಳ್ಳಿ, ಬೆಳ್ಳುಳ್ಳಿ, ಆಲೂಗೆಡ್ಡೆ, ಟಮಟೊ, ಸೊಪ್ಪು, ಕೊತ್ತಂಬರಿ, ಬೆಂಡೆಕಾಯಿ, ಬದನೆಕಾಯಿ, ಎಲೆಕೋಸುಗಳನ್ನು ಆಗಾಗ ಬೆಳೆಯುತ್ತಾರೆ. ಪಂಪ್‌ಸೆಟ್‌ಗಳನ್ನು ಹಾಕಿಸಿಕೊಂಡಿರುವವರು ಹೆಚ್ಚಾಗಿ ತೆಂಗು, ಕಬ್ಬನ್ನು ಬೆಳೆದು ನೆಮ್ಮದಿಯ ಜೀವನ ಸಾಗಿಸುತ್ತಿದ್ದಾರೆ.

ವ್ಯವಸಾಯ ಮನೆಮಕ್ಕಳೆಲ್ಲ ಸಾಯ ಎಂಬ ಗಾದೆ ಮಾತಿನಂತೆ ಮನೆಯವರೆಲ್ಲ ದುಡಿದರೂ. ಕೆಲವೊಮ್ಮೆ ಆದಾಯ ಸಿಗದಿದ್ದಾಗ ರೈತನ ಬದುಕು ಚಿಂತಾಜನಕವಾಗುತ್ತದೆ. ಇತ್ತೀಚೆಗೆ ಕೂಲಿ ಆಳುಗಳ ಸಂಖ್ಯೆ ಗಣನೀಯವಾಗಿ ಕುಸಿಯುತ್ತಿರುವುದರಿಂದ ವ್ಯವಸಾಯ ಮಾಡುವುದು ಕಷ್ಟವಾಗುತ್ತಿದೆ. ಗ್ರಾಮದ ಯುವಕರು ವಿದ್ಯಾವಂತರಾಗಿ ನಗರ ಪ್ರದೇಶಗಳಿಗೆ ವಲಸೆ ಬರುತ್ತಿರುವುದರಿಂದಲೂ ಬೇಸಾಯದ ಮೇಲೆ ಪರಿಣಾಮ ಬೀರುತ್ತಿದೆ. ಕೂಲಿಯವರು ಸಿಗದೆ ತಮ್ಮ ಜಮೀನು ಮಾಡಿಸಲು ಕಷ್ಟವಾಗಿರುವ ಪರಿಸ್ಥಿತಿಯಲ್ಲಿ ಜಮೀನನ್ನು ವಾರ, ಗುತ್ತಿಗೆ, ಭೋಗ್ಯಕ್ಕೆ ಪಡೆದು ದುಡಿಯುತ್ತಿದ್ದ ಜನ ಈಗ ವಿಮುಖವಾಗುತ್ತಿದ್ದಾರೆ. ಸಹಕಾರ ಸಂಘಗಳು, ಬ್ಯಾಂಕುಗಳು ನೀಡುವ ಸಾಲ ಸೌಲಭ್ಯ ಪಡೆದುಕೊಳ್ಳುವವರ ಸಂಖ್ಯೆ ಹೆಚ್ಚಾಗಿದೆ. ಇತ್ತೀಚೆಗೆ ಸರ್ಕಾರ ರೈತರ ಸಾಲವನ್ನು ಮನ್ನ ಮಾಡುತ್ತಿರುವುದು ಇದಕ್ಕೆ ಪ್ರಮುಖ ಕಾರಣ.

ಆ) ಸಾಕು ಪ್ರಾಣಿಗಳು

ರೈತರು ತಮ್ಮ ಜೀವನ ನಡೆಸಲು ವ್ಯವಸಾಯದ ಜೊತೆಗೆ ಇನ್ನಿತರ ಆದಾಯದ ಮೂಲಗಳನ್ನು ಹುಡುಕಿಕೊಂಡಿದ್ದಾರೆ. ಹಸು, ಎಮ್ಮೆ, ಮೇಕೆ, ಕುರಿ, ಕೋಳಿ ಮುಂತಾದ ಪ್ರಾಣಿಗಳನ್ನು ಸಾಕಿಕೊಂಡಿದ್ದಾರೆ. ಕೆಲವರು ಮೊಲ, ಹಂದಿಗಳನ್ನು ಸಾಕುತ್ತಿದ್ದಾರೆ. ಗ್ರಾಮಕ್ಕೆ ಹಾಲಿನ ಡೈರಿ ಬಂದ ಮೇಲೆ ಸೀಮೆ ಹಸುಗಳನ್ನು ಸಾಕುವವರ ಸಂಖ್ಯೆ ಹೆಚ್ಚಿದೆ. ಇತ್ತೀಚೆಗೆ ಗೋಮಾಳಗಳು ಕಡಿಮೆಯಾಗಿ ಪ್ರಾಣಿಗಳನ್ನು ಮೇಯಿಸಲು ಕಷ್ಟವಾಗುತ್ತಿದೆ. ಆಡು, ಕುರಿಗಳನ್ನು ಹಿಂಡುಹಿಂಡಾಗಿ ಸಾಕುತ್ತಿದ್ದ ಜನ ಈಗ ಅವುಗಳನ್ನು ನಾಲ್ಕಾರು ಸಂಖ್ಯೆಯಲ್ಲಿ ಮಾತ್ರ ಸಾಕಲು ಸಾಧ್ಯವಾಗುತ್ತಿದೆ. "ಹಿಂದೆ ಕುರಿ ಮಂದೆಗಳನ್ನು ಹೊಂದಿದ್ದ ಎರಡು-ಮೂರು ಕುಟುಂಬಗಳಿದ್ದವಂತೆ."[೫] ಆದರೆ ಈಗ ಒಂದು ಕುಟುಂಬವೂ ಇಲ್ಲ.

ವರ್ಷಕ್ಕೊಮ್ಮೆ ಕುರಿ ಮೇಕೆಗಳನ್ನು ಮಾರಾಟಮಾಡಿ ಆದಾಯ ಗಳಿಸಿಕೊಳ್ಳುತ್ತಾರೆ. ನಾಟಿ ಕೋಳಿಗಳನ್ನು ನೆಂಟರಿಷ್ಟರು ಬಂದಾಗ ಕುಯ್ದುಕೊಳ್ಳುತ್ತಾರೆ. ಕೋಳಿಗಳಿಗೆ ಬೇಡಿಕೆ ಹೆಚ್ಚಾಗಿರುವುದರಿಂದ ಐದಾರು ಕುಟುಂಬಗಳು ಕೋಳಿ ಫಾರಂ ನಡೆಸಿಕೊಂಡು ಬರುತ್ತಿವೆ. ಪೈಪೋಟಿ ಹೆಚ್ಚಿದರು ಸುಮಾರಾಗಿ ಆದಾಯ ಪಡೆಯುತ್ತಿದ್ದಾರೆ. ರೈತರು ಸಾಕು ಪ್ರಾಣಿಗಳನ್ನು

ಸಾಕುವ ಉದ್ದೇಶಕ್ಕಾಗಿಯೇ ಆಧುನಿಕ ಸೌಲಭ್ಯದ ಕೊಟ್ಟಿಗೆಗಳನ್ನು ನಿರ್ಮಾಣ ಮಾಡಿಕೊಂಡಿದ್ದಾರೆ. ಮನೆಗೆ ಬೇಕಾದ ಹಾಲು, ಮೊಸರು, ಮಜ್ಜಿಗೆ, ಬೆಣ್ಣೆ, ತುಪ್ಪವನ್ನು ಪಡೆಯಲು ಸಾಕು ಪ್ರಾಣಿಗಳು ಬೇಕು. ಕುರಿ, ಮೇಕೆ, ಹಸು, ಎತ್ತು, ಎಮ್ಮೆಗಳ ಗೊಬ್ಬರ ವ್ಯವಸಾಯಕ್ಕೆ ಉಪಯೋಗವಾಗುತ್ತಿದೆ.

ಇ) ವ್ಯಾಪಾರ – ವ್ಯವಹಾರ

ಗ್ರಾಮದ ಕೆಲವು ಜನ ವ್ಯಾಪಾರ ವ್ಯವಹಾರಗಳ ಮೂಲಕ ಹಣವನ್ನು ಸಂಪಾದಿಸುತ್ತಾರೆ. ಹೀಗಾಗಿ ನಾಲ್ಕಾರು ಚಿಕ್ಕ ಚಿಕ್ಕ ಹೋಟೆಲ್‌ಗಳು ತಲೆಯೆತ್ತಿ ನಿಂತಿವೆ. ಕಾಫಿ, ಟೀ, ಬಜ್ಜಿ, ವಡೆ, ಬೀಡಿ, ಸಿಗರೇಟು, ಬಿಸ್ಕೆಟ್, ಚಾಕ್‌ಲೇಟ್, ಸಿಹಿ ಪದಾರ್ಥಗಳು ಮುಂತಾದವುಗಳನ್ನು ಮಾರಾಟ ಮಾಡಿ ಹಣಗಳಿಸುವವರು ಇದ್ದಾರೆ. ಏಳೆಂಟು ಅಂಗಡಿಗಳು ಇವೆ. ದಿನನಿತ್ಯದ ಗೃಹ ಬಳಕೆಯ ವಸ್ತುಗಳಿಗೆ ನಗರ ಪ್ರದೇಶವನ್ನು ಆಶ್ರಯಿಸಿದ್ದ ಜನ ತಮ್ಮೂರಿನಲ್ಲೇ ಸಿಗುತ್ತಿರುವ ಸೌಲಭ್ಯವನ್ನು ಬಳಸಿಕೊಂಡಿದ್ದಾರೆ. ಕೆಲವರು ಕಿಕ್ಕೇರಿ ಹಾಗು ಚನ್ನರಾಯಪಟ್ಟಣಕ್ಕೆ ಹೋದಾಗ ರಿಯಾಯತಿ ದರದಲ್ಲಿ ಮನೆಗೆ ಬೇಕಾದ ಸಾಮಾನುಗಳನ್ನು ತರುವುದು ಉಂಟು.

ಶುಕ್ರವಾರ ನಡೆಯುವ ಕಿಕ್ಕೇರಿ ಸಂತೆ, ಶನಿವಾರ ನಡೆಯುವ ಚನ್ನರಾಯಪಟ್ಟಣದ ಸಂತೆಗಳಲ್ಲಿ ತಾವು ತಯಾರಿಸಿದ ಬೆಣ್ಣೆಯನ್ನು ಮಾರಾಟ ಮಾಡಿ ಕೆಲವರು ಆದಾಯ ಗಳಿಸುತ್ತಾರೆ. ಸಂತೆಗಳಲ್ಲಿ ಜಾನುವಾರುಗಳನ್ನು ಮಾರುವವರ ಮತ್ತು ಕೊಳ್ಳುವವರ ನಡುವೆ ದಲ್ಲಾಳಿಗಳಾಗಿ ಕಾರ್ಯನಿರ್ವಹಿಸಿ ವಾರದ ಖರ್ಚಿಗೆ ಹಣ ಗಳಿಸುವವರು ಇದ್ದಾರೆ. ಕೆಲವರು ಪ್ರಾಣಿಗಳನ್ನು, ಕುರಿ–ಮೇಕೆಗಳನ್ನು ಕೊಂಡು, ಮಾರಾಟ ಮಾಡಿ ಹಣ ಸಂಪಾದಿಸುತ್ತಾರೆ. ವರ್ಷಕ್ಕೊಮ್ಮೆ ತಮ್ಮ ಸುತ್ತಮುತ್ತಲಿನ ಸ್ಥಳಗಳಲ್ಲಿ ನಡೆಯುವ ಜಾತ್ರೆಗಳಲ್ಲಿ ದನದ ವ್ಯಾಪಾರ ಮಾಡಿ ವ್ಯವಹಾರ ಮಾಡುವವರು ಇದ್ದಾರೆ.

ಗ್ರಾಮಸ್ಥರು ಬೆಳೆದ ತೆಂಗಿನ ಕಾಯಿಯನ್ನು ಕೊಂಡು ಸಂತೆಗಳಿಗೆ ತೆಗೆದುಕೊಂಡು ಹೋಗಿ ಮಾರಿ ಹಣ ಸಂಪಾದಿಸುವ ತೆಂಗಿನಕಾಯಿ ವ್ಯಾಪಾರಸ್ಥರು ಇದ್ದಾರೆ. ಗ್ರಾಮದ ಬಹುತೇಕ ಎಲ್ಲಾ ಮನೆಗಳಲ್ಲು ಟಿವಿಗಳಿರುವುದರಿಂದ ಕೇಬಲ್ ಹಾಕಿ ಜೀವನವನ್ನು ನಡೆಸುತ್ತಿರುವ ಕುಟುಂಬವೊಂದಿದೆ. ಶೆಟ್ಟರ ಕುಟುಂಬವೊಂದು ಸಿಹಿ ಪದಾರ್ಥಗಳನ್ನು ಸಿದ್ಧಪಡಿಸಿ ಜಾತ್ರೆಗಳಿಗೆ, ಸಂತೆಗಳಿಗೆ ಹೋಗಿ ವ್ಯಾಪಾರ ಮಾಡಿ ಹಣವನ್ನು ಸಂಪಾದಿಸುತ್ತಾರೆ. ಇವುಗಳಲ್ಲದೆ ಟೈಲರಿಂಗ್, ನಂಬಿಕೊಂಡಿರುವ ನಾಲ್ಕಾರು ಜನರಿದ್ದಾರೆ. ಎರಡು ಕುಟುಂಬಗಳು ಮಿಲ್‌ಗಳನ್ನು ಇಟ್ಟುಕೊಂಡಿದ್ದಾರೆ. ಮೂರು ಜನ ಟ್ರ್ಯಾಕ್ಟರ್ ಇಟ್ಟುಕೊಂಡು ವ್ಯವಹಾರ ಮಾಡುತ್ತಿದ್ದಾರೆ. ಹಣವನ್ನು ಹೊಂದಿರುವವರು ಬಡ್ಡಿಗೆ ಹಣವನ್ನು ನೀಡಿ ಲೇವಾದೇವಿ ವ್ಯವಹಾರ ನಡೆಸುತ್ತಿದ್ದಾರೆ. 'ಉದರ ನಿಮಿತ್ತಂ ಬಹುಕೃತ ವೇಷಂ' ಎಂಬಂತೆ ಜನರು ಬದುಕನ್ನು ಕಟ್ಟಿಕೊಳ್ಳಲು ಹೀಗೆ ಹಲವು ಮಾರ್ಗಗಳನ್ನು ಹುಡುಕಿಕೊಂಡಿದ್ದಾರೆ.

ಈ) ಸರ್ಕಾರಿ ಹಾಗು ಖಾಸಗಿ ವೃತ್ತಿ

ಗ್ರಾಮದ ಜನತೆ ಉದ್ಯೋಗವನ್ನು ಹುಡುಕಿಕೊಂಡು ನಗರ ಪ್ರದೇಶಗಳತ್ತ ವಲಸೆ ಬರುತ್ತಿದ್ದಾರೆ. ಬೆಂಗಳೂರಿನಲ್ಲಿ ನೂರಾರು ಜನ ವಾಸವಾಗಿದ್ದಾರೆ. ಬಾಂಬೆಯಲ್ಲಿ ಸುಮಾರು ೫೦ ಜನ ನೆಲೆಸಿದ್ದಾರೆ. ಮೈಸೂರಿನಲ್ಲಿಯು ೨೫ ಕ್ಕೂ ಹೆಚ್ಚು ಜನರಿದ್ದಾರೆ. ಇಂಜಿನಿಯರ್, ಶಿಕ್ಷಕರು, ಪೊಲೀಸ್, ಕಂಡಕ್ಟರ್, ಡ್ರೈವರ್, ಅಧಿಕಾರಿಗಳು, ಕಛೇರಿ ಸಹಾಯಕರು, ಜವಾನರುಗಳು ಜೊತೆಗೆ ಕಾರ್ಖಾನೆಗಳಲ್ಲಿ ಕೆಲಸ ಮಾಡುವವರು ಇದ್ದಾರೆ. ಆಟೋ ಚಾಲಕರು ಗಾರ್ಮೆಂಟ್ಸ್‌ಗಳಲ್ಲಿ, ಹೋಟಲ್‌ಗಳಲ್ಲಿ, ದುಡಿಯುವವರು ಹಾಗು ಕಂಟ್ರಾಕ್ಟರ್‌ಗಳು ಇದ್ದಾರೆ. ಹೀಗೆ ವಿವಿಧ ವೃತ್ತಿಗಳ ಮೂಲಕ ಹಣ ಗಳಿಸಿ ಬದುಕುತ್ತಿದ್ದಾರೆ.

ಉ) ಕೂಲಿ

ತೋಟ, ಹೊಲ, ಗದ್ದೆಗಳಲ್ಲಿ ಕೂಲಿ ಮಾಡಿ ಜೀವನ ನಡೆಸುತ್ತಿರುವ ಕೆಲವು ಮಧ್ಯಮ ಹಾಗು ಕೆಳ ವರ್ಗದ ಕುಟುಂಬಗಳಿವೆ. ಗಂಡು ಆಳಿಗೆ ೧೫೦ ರೂ. ಹೆಣ್ಣು ಆಳಿಗೆ ೧೦೦ ರೂ. ಕೂಲಿ ಇದೆ. ಇದಕ್ಕಾಗಿ ಬೆಳಿಗ್ಗೆ ೧೦ ಗಂಟೆಯಿಂದ ಸಂಜೆ ೫ ಗಂಟೆಯವರೆಗು ದುಡಿಯಬೇಕಾಗುತ್ತದೆ. ದನಗಳನ್ನು ಸಾಕಿಕೊಂಡಿರುವ ಕೆಲವರು ಭೂಮಿಯನ್ನು ಉಳುಮೆ ಮಾಡಲು ಹೋಗುತ್ತಾರೆ. "ಇವರು ಬೆಳಿಗ್ಗೆ ೭ ಗಂಟೆಯಿಂದ ೧೧ ಗಂಟೆಯವರೆಗೆ ಕೆಲಸ ಮಾಡುತ್ತಾರೆ. ಇವರಿಗೆ ೨೫೦ ರೂ. ಕೂಲಿಯಿದೆ. ಎತ್ತಿನ ಗಾಡಿ ಬಾಡಿಗೆಗೆ ಹೋಗುವವರು ೩೦೦ ರೂ. ಗಳಿಸುತ್ತಾರೆ."[೬] ಇತ್ತೀಚೆಗೆ ಕೂಲಿ ಮಾಡುವವರ ಸಂಖ್ಯೆ ಇಳಿಮುಖವಾಗುತ್ತಿದೆ. ಈ ಕಾರಣಕ್ಕಾಗಿ 'ಮುಯ್ಯಾಳು' ಪದ್ಧತಿ ಜಾರಿಯಲ್ಲಿದೆ. ತಮಗೆ ಬೇಕಾದಾಗ ಬೇರೊಬ್ಬರನ್ನು ಕೆಲಸಕ್ಕೆ ಕರೆದುಕೊಂಡು, ಅವರ ಕೆಲಸಕ್ಕೆ ಇವರು ಹೋಗುವುದು ಕಂಡುಬರುತ್ತದೆ. ಇದನ್ನೆ ಮುಯ್ಯಾಳು ಎಂದು ಕರೆಯುತ್ತಾರೆ. ಹೀಗೆ ಪರಸ್ಪರ ಸಹಕಾರ ನೀಡುವ ಮೂಲಕ ತಮ್ಮ ತಮ್ಮ ಜಮೀನಿನ ಕೆಲಸ ಕಾರ್ಯಗಳನ್ನು ಮಾಡಿಕೊಳ್ಳುತ್ತಾರೆ.

೪. ಚೀಟಿ ಪದ್ಧತಿ

ಗ್ರಾಮಸ್ಥರು ವಿವಿಧ ಉದ್ದೇಶಗಳಿಗಾಗಿ ಬೇರೆ ಬೇರೆ ಗುಂಪುಗಳಲ್ಲಿ ಸೇರಿ ಹಣವನ್ನು ಕಟ್ಟಿ ಚೀಟಿ ಪದ್ಧತಿಯನ್ನು ತಪ್ಪದೇ ನಡೆಸಿಕೊಂಡು ಬರುತ್ತಿದ್ದಾರೆ. ಒಂದೇ ಬಾರಿಗೆ ಹಣವನ್ನು ಹೊಂದಿಸುವುದು ಕಷ್ಟವಾಗುವ ಹಿನ್ನೆಲೆಯಲ್ಲಿ ಬೇರೆ ಗ್ರಾಮಗಳಲ್ಲಿ ಇರುವಂತೆಯೇ ಇಲ್ಲಿಯೂ ಚೀಟಿ ಪದ್ಧತಿಯಂತಹ ಆರ್ಥಿಕ ವ್ಯವಸ್ಥೆಯನ್ನು ಕಾಣಬಹುದು. ಪ್ರಮುಖವಾದವುಗಳನ್ನು ಚರ್ಚಿಸಲಾಗಿದೆ.

ಅ) ಮಾಂಸದ ಚೀಟಿ

ಗ್ರಾಮಸ್ಥರು ಹಬ್ಬ ಹರಿದಿನಗಳಲ್ಲಿ ನೆಂಟರಿಷ್ಟರನ್ನು ಕರೆದು ಮಾಂಸದ ಅಡಿಗೆ ಮಾಡಿ ಊಟಕ್ಕೆ ಬಡಿಸುತ್ತಾರೆ. ಕೆಲವರು ತಾವೇ ಸಾಕಿರುವ ಕುರಿ, ಮೇಕೆಗಳನ್ನು ಕುಯ್ಯುತ್ತಾರೆ. ಎಲ್ಲರಿಗು ಇದು

ಸಾಧ್ಯವಾಗುವುದಿಲ್ಲ, ಇಂತಹವರೆಲ್ಲ ಸೇರಿ ಪ್ರತಿ ತಿಂಗಳು ತಮ್ಮ ತಮ್ಮ ಶಕ್ತಾನುಸಾರ ಬೇರೆ ಬೇರೆ ಗುಂಪುಗಳಲ್ಲಿ ೨೦೦ ರಿಂದ ೫೦೦ ರೂ. ಗಳ ವರೆಗು ಚೀಟಿ ಹಾಕಿಕೊಂಡು ಹಣವನ್ನು ಬೆಳಸುತ್ತಾರೆ. ಹಬ್ಬದ ದಿನ ಸದಸ್ಯರೆಲ್ಲ ಒಟ್ಟಾಗಿ ಮರಿಗಳನ್ನು ತಂದು ಕುಯ್ದು ಸಮಾನವಾಗಿ ಗುಡ್ಡೆ ಮಾಂಸವನ್ನು ಹಂಚಿಕೊಳ್ಳುತ್ತಾರೆ. ಹೀಗೆ ಹಬ್ಬಕ್ಕೆ ಬೇಕಾದ ಮಾಂಸದ ಉದ್ದೇಶಕ್ಕಾಗಿ ಹಾಕಿಕೊಂಡಿರುವ ಚೀಟಿ ಪದ್ಧತಿಯನ್ನೆ ಮಾಂಸದ ಚೀಟಿ ಎಂದು ಕರೆದುಕೊಂಡಿದ್ದಾರೆ.

ಆ) ನಾಟಕದ ಚೀಟಿ

ಐಕನಹಳ್ಳಿ ಗ್ರಾಮದಲ್ಲಿ ದೀಪಾವಳಿ ಹಬ್ಬವನ್ನು ವಿಶಿಷ್ಟವಾಗಿ ಆಚರಿಸುತ್ತಾರೆ. ಹೆಚ್ಚಿನ ಸಂಖ್ಯೆಯಲ್ಲಿ ಬಂಧು–ಬಳಗದವರು ಈ ಹಬ್ಬಕ್ಕೆ ಬರುತ್ತಾರೆ. ಅವರಿಗೆ ಮನರಂಜನೆ ನೀಡುವ ಉದ್ದೇಶಕ್ಕಾಗಿ ಪ್ರತಿವರ್ಷವು ಬೇರೆ ಬೇರೆ ನಾಟಕವನ್ನು ಕಲಿತು ಪ್ರದರ್ಶಿಸುತ್ತಾರೆ. ನಾಟಕ ಕಲೆಯಲ್ಲಿ ಆಸಕ್ತಿಯಿರುವ ಸ್ಥಳೀಯ ಕಲಾವಿದರುಗಳು ಒಟ್ಟಾಗಿ ಸೇರಿ ತಿಂಗಳಿಗೊಮ್ಮೆ ಚೀಟಿ ನಡೆಸುತ್ತಾರೆ. ನಾಟಕ ಕಲಿಸುವ ಮಾಸ್ತರಿಗೆ ಕೊಡಬೇಕಾದ ಹಣ, ವೇಷಭೂಷಣ ಮತ್ತು ವೇದಿಕೆ (ಸೀನರಿ) ಮುಂತಾದ ನಾಟಕದ ಖರ್ಚಿಗೆ ಬೇಕಾದ ಹಣವನ್ನು ಈ ರೀತಿ ಹೊಂದಿಸಿಕೊಂಡು ಹೊರೆಯನ್ನು ಕಡಿಮೆ ಮಾಡಿಕೊಳ್ಳುತ್ತಾರೆ.

ಇ) ಗಣಪತಿ ಚೀಟಿ

ಗಣಪತಿ ಚೀಟಿ ಇಡೀ ಗ್ರಾಮಕ್ಕೆ ಸೇರಿದ್ದು. ಐಕನಹಳ್ಳಿ ಗ್ರಾಮದಲ್ಲಿ ಬುಡಿಯಪ್ಪನ ಪಂಗಡ, ಹುಚ್ಚಮ್ಮನ ಪಂಗಡ, ತೋಪಣ್ಣನ ಪಂಗಡ, ಕೆಂಗಪ್ಪನ ಪಂಗಡಗಳೆಂಬ ನಾಲ್ಕು ಗುಂಪುಗಳಿವೆ. ಈ ನಾಲ್ಕು ಪಂಗಡಗಳಿಂದ ಪ್ರತಿ ವರ್ಷ ತಲಾ ಇಬ್ಬರು ಮುಖ್ಯಸ್ಥರು ಸೇರಿ ಒಟ್ಟು ೮ ಜನರ ಮುಖಂಡತ್ವದಲ್ಲಿ ಈ ಚೀಟಿ ನಡೆಯುತ್ತದೆ. ಹಣವನ್ನು ೧೦೦೦ ರೂ. ನಂತೆ ಒಬ್ಬರಿಗೆ ಬಡ್ಡಿಗೆ ಕೊಡುತ್ತಾರೆ. ಪ್ರತಿವರ್ಷ ಬರುವ ಬಡ್ಡಿ ಹಣವನ್ನು ಬಳಸಿಕೊಂಡು ಗಣಪತಿಯನ್ನು ಕೂರಿಸುತ್ತಾರೆ. ಇದಲ್ಲದೆ ಗ್ರಾಮದ ಇತರೆ ದೇವರಿಗೆ ಸಂಬಂಧಿಸಿದ ಕೆಲಸಕ್ಕೆ ಹಣವನ್ನು ಬಳಸಿಕೊಳ್ಳುತ್ತಾರೆ. ಊರಿನ ದೇವರ ಕೆಲಸವನ್ನು ಮಾಡಿಕೊಳ್ಳಲು ತಮ್ಮದೇ ಆದ ಆರ್ಥಿಕ ಸಂಪನ್ಮೂಲವನ್ನು ಹೊಂದಿಸಿಕೊಂಡಿರುವುದು ಗಮನ ಸೆಳೆಯುತ್ತದೆ.

ಈ) ಪಂಗಡದ ಚೀಟಿ

ಐಕನಹಳ್ಳಿ ಗ್ರಾಮದಲ್ಲಿರುವ ಬುಡಿಯಪ್ಪನ ಪಂಗಡ, ಹುಚ್ಚಮ್ಮನ ಪಂಗಡ, ತೋಪಣ್ಣನ ಪಂಗಡ, ಕೆಂಗಪ್ಪನ ಪಂಗಡ ಈ ನಾಲ್ಕು ಪಂಗಡಗಳು ನಡೆಸುವ ಚೀಟಿ ಪದ್ಧತಿಯನ್ನೆ ಪಂಗಡದ ಚೀಟಿಯೆಂದು ಕರೆದುಕೊಂಡಿದ್ದಾರೆ. ಗ್ರಾಮದ ಕುಟುಂಬಗಳು ಈ ನಾಲ್ಕು ಪಂಗಡಗಳಿಗೆ ಹರಿದು ಹಂಚಿಹೋಗಿವೆ. ಪ್ರತಿವರ್ಷ ದೀಪಾವಳಿ, ಬಂಡಿಹಬ್ಬ ಸೇರಿದಂತೆ ಊರಿನ ದೇವರ ಕೆಲಸ ಕಾರ್ಯಗಳನ್ನು ಮಾಡಲು ಪ್ರತಿಯೊಂದು ಪಂಗಡಕ್ಕು ಒಂದೊಂದು ವರ್ಷ ಅವಕಾಶ ಸಿಗುತ್ತದೆ. ನಾಲ್ಕು ಪಂಗಡದವರು ತಮ್ಮ ತಮ್ಮ ಗುಂಪುಗಳಲ್ಲಿ ಸೇರಿ ಚೀಟಿ ಹಾಕಿಕೊಳ್ಳುತ್ತಾರೆ. ಪ್ರತಿ

ಪಂಗಡದಲ್ಲು ಇಬ್ಬರು ಯಜಮಾನರು ಈ ಜವಾಬ್ದಾರಿ ನಡೆಸುತ್ತಾರೆ. ದೀಪಾವಳಿ ಮತ್ತು ಬಂಡಿಹಬ್ಬಗಳಲ್ಲಿನ ಖರ್ಚಿಗೆ ಈ ಹಣ ಬಳಸುತ್ತಾರೆ.

ಉ) ಅಯ್ಯಪ್ಪಸ್ವಾಮಿ ಚೀಟಿ

ಮಕರ ಸಂಕ್ರಾಂತಿಯ ಸಂದರ್ಭದಲ್ಲಿ ಅಯ್ಯಪ್ಪ ಸ್ವಾಮಿಯ ದರ್ಶನ ಪಡೆಯಲು ಆಸಕ್ತಿಯಿರುವವರೆಲ್ಲ ಸೇರಿ ಈ ಚೀಟಿ ಪದ್ಧತಿ ನಡೆಸಿಕೊಂಡು ಬಂದಿದ್ದಾರೆ. ಕಳೆದ ೧೫ ವರ್ಷಗಳಿಂದ ೨ ವರ್ಷಕ್ಕೊಮ್ಮೆ ತಿಂಗಳಿಗೆ ೫೦೦ ರೂ. ಚೀಟಿಯನ್ನು ಕಟ್ಟಿಕೊಳ್ಳುತ್ತಾರೆ. ೩ ಬಾರಿಗಿಂತ ಹೆಚ್ಚಾಗಿ ಅಯ್ಯಪ್ಪ ಸ್ವಾಮಿಗೆ ಹೋಗಿ ಬಂದ ಹಿರಿಯರೊಬ್ಬರನ್ನು ಗುರುಸ್ವಾಮಿಯಾಗಿ ಗೌರವಿಸಿ ಅವರಿಂದ ಬೇರೆಯವರು ಅಯ್ಯಪ್ಪಸ್ವಾಮಿಯ ಮಾಲೆ ಹಾಕಿಸಿಕೊಳ್ಳುತ್ತಾರೆ. ೨ ದಿನ ಭಜನೆ ಮಾಡಿ ಮಾರನೇ ದಿನ ಹಿರುಮುಡಿ ಕಟ್ಟಿಸಿಕೊಳ್ಳುತ್ತಾರೆ. ಆ ದಿನ ಭಕ್ತಾದಿಗಳೆಲ್ಲರಿಗೂ ಅನ್ನದಾನ ಏರ್ಪಡಿಸುತ್ತಾರೆ. ಮಾಲೆ ಧರಿಸಿದವರೆಲ್ಲ ಒಟ್ಟಾಗಿ ಶಬರಿಮಲೆಗೆ ಹೊರಡುತ್ತಾರೆ. ಅಯ್ಯಪ್ಪ ಸ್ವಾಮಿಯ ದರ್ಶನವಾದ ಮೇಲೆ ಚೀಟಿಯ ಹಣದಲ್ಲಿ ಪ್ರವಾಸ ಕೈಗೊಳ್ಳುತ್ತಾರೆ. ಹೀಗೆ ಸಮಾನ ಮನಸ್ಕರೆಲ್ಲ ಒಟ್ಟಾಗಿ ಸೇರಿ ಸಂಭ್ರಮಿಸುತ್ತಾರೆ.

❖ ❖ ❖

ಅಡಿ ಟಿಪ್ಪಣಿಗಳು

೧. ಚನ್ನಾದೇವಿ ಅಗ್ರಹಾರ ಜಾನಪದೀಯ ಅಧ್ಯಯನ : ಡಾ. ಟಿ. ಗೋವಿಂದರಾಜು, ಪುಟ. ೪೯

೨. ಭಾರತೀಯ ಸಮಾಜದ ಅಧ್ಯಯನ : ಡಿ.ಕೆ. ಶಿವಣ್ಣ, ಪುಟ. ೧೫೨.

೩. ಗಂಗಡಿಕಾರ ಒಕ್ಕಲಿಗರು, ಡಾ. ನಲ್ಲೂರು ಪ್ರಸಾದ್, ಪುಟ. ೬೫.

೪. ಗ್ರಾಮಾಂತರ, ಎಚ್.ವಿ. ನಾಗೇಶ್, ಪುಟ. ೪

೫. ಕಾಳಪ್ಪ, ಐಕನಹಳ್ಳಿ, ೬೫ ವರ್ಷ.

೬. ಡಿ. ಮಂಜೇಗೌಡ, ಐಕನಹಳ್ಳಿ, ೩೭ ವರ್ಷ.

ಅಧ್ಯಾಯ – ೪

ಐಕನಹಳ್ಳಿ : ಸಾಂಸ್ಕೃತಿಕ ವಿಶ್ಲೇಷಣೆ

೧. ಒಕ್ಕಲಿಗರ ಧಾರ್ಮಿಕ ಆಚರಣೆಗಳು

೧.೧. ಹೆಣ್ಣು ಮಕ್ಕಳ ಶಾಸ್ತ್ರ ಸಂಪ್ರದಾಯಗಳು

ಅ) ಗುಡ್ಲು ಕೂಡುವುದು (ಮೈನೆರೆದ ಶಾಸ್ತ್ರ)

ಹೆಣ್ಣು ಮಕ್ಕಳು ೧೪ ರಿಂದ ೧೫ ವರ್ಷಕ್ಕೆ ಸಾಮಾನ್ಯವಾಗಿ ಮೈನೆರೆಯುತ್ತಾರೆ. ಕೆಲವರು ಇನ್ನು ಬೇಗ ಆದರೂ ಆಗಬಹುದು. ಹೆಣ್ಣು ದೊಡ್ಡವಳಾಗುವುದನ್ನು ಋತುಮತಿಯಾಗಿದ್ದಾಳೆಂದು ಕರೆಯುತ್ತಾರೆ. ಈ ಸಂದರ್ಭದಲ್ಲಿ ಮಾಡುವ ಶಾಸ್ತ್ರವನ್ನೇ ಸೊಪ್ಪು ಹಾಕುವುದು ಅಥವಾ ಗುಡ್ಲು ಕೂಡುವುದು ಎನ್ನುತ್ತಾರೆ. ಹಿಂದಿನ ಕಾಲದಲ್ಲಿ ಋತುಮತಿಯಾಗುವುದು ತಡವಾಗುತ್ತಿದ್ದಾದರೂ ಈಗ ಅಂತಹ ಸಮಸ್ಯೆಯಿಲ್ಲ. ಗಂಡುಮಕ್ಕಳು ಯೌವನಾವಸ್ಥೆಗೆ ಬಂದಾಗ ಯಾವುದೇ ಶಾಸ್ತ್ರಗಳಿಲ್ಲ ನಿಜ. ಆದರೆ ಒಂದು ಹೆಣ್ಣಿನ ಬದುಕಿನಲ್ಲಿ ನಡೆಯುವುದೇ ಬೇರೆ. ಹೆಣ್ಣು ಮೈ ನೆರೆದಾಗ ಅವಳ ಭಾವನೆಗಳನ್ನು ತಾಯಿ ಅರ್ಥಮಾಡಿಕೊಳ್ಳುತ್ತಾಳೆ. ಹುಡುಗಾಟಿಕೆಯನ್ನು ಬಿಟ್ಟು ಜವಾಬ್ಧಾರಿಯಿಂದ ವರ್ತಿಸಬೇಕಾದ ಅನಿವಾರ್ಯತೆಯನ್ನು ಮಗಳಿಗೆ ಪರಿಚಯಿಸಿಕೊಡುತ್ತಾಳೆ. ಹೆಣ್ಣಿನ ಶೀಲದ ಬಗೆಗಿನ ಗೌರವ ಮತ್ತು ನಂಬಿಕೆಗಳನ್ನು ತಿಳಿಸಲು ಪ್ರಯತ್ನಿಸುತ್ತಾಳೆ. ಹೆಣ್ಣು ದೊಡ್ಡವಳಾದಾಗ ಸಹಜವಾಗಿಯೇ ತಂದೆ–ತಾಯಿಯರಲ್ಲಿ ಸಂಭ್ರಮ ಮತ್ತು ಆತಂಕಗಳೆರಡು ಎದ್ದು ಕಾಣುತ್ತವೆ.

ಹೆಣ್ಣಿನ ಜೀವನದಲ್ಲಿ ನಡೆಯುವ ಬಹುಮುಖ್ಯ ಶಾಸ್ತ್ರವಿದು. ಹುಡುಗಿಯೊಬ್ಬಳು ಮೈನೆರೆದಾಗ ಅವಳು ಮನೆಯ ಒಳಗಡೆ ಕೂರುವಂತಿಲ್ಲ, ಕೊಟ್ಟಿಗೆಯಲ್ಲಿ ಕೂರಬೇಕಾಗುತ್ತದೆ. ಹತ್ತಿರದ ಬಂಧುಗಳಿಗೆ ವಿಷಯ ಮುಟ್ಟಿಸುತ್ತಾರೆ. ಒಳ್ಳೆಯ ಸಮಯವನ್ನು ನೋಡಿ ಆ ದಿನ ಸಂಜೆ ಅಥವಾ ಮಾರನೆಯ ದಿನ ಗುಡ್ಲು ಕೂಡುವ ಶಾಸ್ತ್ರ ಮಾಡುತ್ತಾರೆ. ಹೆಣ್ಣು ದೊಡ್ಡವಳಾದಾಗ ಸೋದರಮಾವ ಪ್ರಮುಖ ಪಾತ್ರ ವಹಿಸುತ್ತಾನೆ. ಆ ದಿನ ಸಂಜೆ ಸೋದರ ಮಾವ ಮಾವಿನ ಸೊಪ್ಪು, ಹತ್ತಿ ಸೊಪ್ಪು, ಹಲಸಿನ ಸೊಪ್ಪುಗಳನ್ನು ತಂದು ಕೊಟ್ಟಿಗೆಯಲ್ಲೊ ಅಥವಾ ಜಗುಲಿಯಲ್ಲಿಯೋ ಸೊಪ್ಪಿನ ಗುಡಿಸಲೊಂದನ್ನು ನಿರ್ಮಾಣ ಮಾಡುತ್ತಾನೆ. ಕೆಲವು ಕಡೆ ಐದು ಬಗೆಯ ಸೊಪ್ಪುಗಳನ್ನು ಬಳಸುತ್ತಾರೆ. ಗುಡಿಸಲು ಸಿದ್ಧವಾದ ಮೇಲೆ ಸೋದರಮಾವ ಮೂರು ಜನ ಚಿಕ್ಕ ಹುಡುಗರನ್ನು ಮೂರು ಸಾರಿ ಗುಡಿಸಲ ಒಳಕ್ಕೆ ನುಗ್ಗಿಸಿ ಅವರು ಬಂದ ಮೇಲೆ ಮೈನೆರೆದ ಹುಡುಗಿಯನ್ನು

ಕಳುಹಿಸುತ್ತಾರೆ. ಈ ಕಾರಣಕ್ಕಾಗಿಯೇ ಗುಡ್ಲು ಕೊಡುವುದು ಅಥವಾ ಸೊಪ್ಪಾಕುವುದು ಮಹತ್ವ ಪಡೆದುಕೊಂಡಿದೆ.

ಮೈನೆರೆದ ಹುಡುಗಿಯ ಮಡಿಲಿಗೆ ತಂಬಿಟ್ಟು, ಚಿಗಣಿ, ಕೊಬ್ಬರಿ, ಬೆಲ್ಲ, ತಂಬಿಟ್ಟುಗಳನ್ನು ತುಂಬುತ್ತಾರೆ. ಬಾಳೆಹಣ್ಣು, ಕಡ್ಲೆ, ಕೊಬ್ಬರಿಗಳನ್ನು ತಟ್ಟೆಯಲ್ಲಿ ತುಂಬಿ ಇಟ್ಟಿರುತ್ತಾರೆ. ಮನೆಯವರು ಮಡಿಲು ತುಂಬಿದ ಮೇಲೆ ನೆಂಟರಿಷ್ಟರು, ಅಕ್ಕಪಕ್ಕದವರು ತಂದ ವಸ್ತುಗಳನ್ನು ಮಡಿಲಿಗೆ ತುಂಬುತ್ತಾರೆ. ಐದು ಜನ ಮುತ್ತೈದೆಯರು ಅಕ್ಷತೆ ಕಾಳುಗಳನ್ನು ಹಾಕಿ ಶಾಸ್ತ್ರ ಮಾಡುತ್ತಾರೆ. ಈ ಸಂದರ್ಭದಲ್ಲಿ ಹಾಡುಗಾರರು ಮಡಿಲು ತುಂಬುವ ಹಾಡುಗಳನ್ನು ಹಾಡುತ್ತಾರೆ. ಉಗ್ಗಿದನ್ನ, ಅನ್ನ, ತುಪ್ಪವನ್ನೆ ತಿನ್ನಬೇಕು. ಆ ದಿನ ರಾತ್ರಿ ಹುಡುಗಿ ನಿದ್ದೆ ಮಾಡಬಾರದೆಂದು ಹೇಳುತ್ತಾರೆ. ಯಾರಾದರು ಅವಳ ಜೊತೆಗಿದ್ದು ಅವಳನ್ನು ಮಾತನಾಡಿಸುತ್ತ, ರೇಗಿಸುತ್ತ, ತಮಾಷೆ ಮಾಡುತ್ತ ಕಾಲಕಳೆಯುತ್ತಾರೆ. ಸಾಮಾನ್ಯವಾಗಿ ಆಕೆಯ ಸ್ನೇಹಿತೆಯರು ಜೊತೆಯಲ್ಲಿರುತ್ತಾರೆ. ಮೂರು ದಿನ ಮುಗಿದ ಮೇಲೆ ಹುಡುಗಿಯಿಂದಲೇ ಗುಡ್ಲನ್ನು ಕೀಳಿಸುತ್ತಾರೆ. ಇತ್ತೀಚೆಗೆ ಒಂದೇ ದಿನಕ್ಕೆ ಮನೆಯೊಳಕ್ಕೆ ಕರೆದುಕೊಳ್ಳುತ್ತಾರೆ. ನಂತರ ಬಿಸಿ ನೀರಿನ ಸ್ನಾನ ಮಾಡಿಸಿ ಮಡಿಯಾದ ಸೀರೆ ಉಡಿಸುತ್ತಾರೆ. ಅಕ್ಕಪಕ್ಕದ ಮನೆಯ ಮೂರು ಜನ ಹುಡುಗಿಯರು ಸ್ನಾನ ಮಾಡಿಕೊಂಡು, ಕಳಸಗಳನ್ನು ಹೊರಲು ಬರುತ್ತಾರೆ. ಋತುಮತಿಯಾದ ಹುಡುಗಿಯ ಜೊತೆಯಲ್ಲಿ ಕೆರೆಯ ಬಳಿಗೆ ಹೋಗಿ ಗಂಗೆ ಪೂಜೆ ಮಾಡಿ ನೀರಿನಲ್ಲಿ ವಿಳ್ಯದೆಲೆಯನ್ನು ಬಿಟ್ಟು ಬರುತ್ತಾಳೆ. ಇದನ್ನು ಎಲೆ ಬಿಡಿಸುವ ಪೂಜೆ ಎಂದು ಕರೆಯುತ್ತಾರೆ. ಮನೆಯಲ್ಲಿ ದೇವರ ಮುಂದೆ ಕಳಸವನ್ನಿಟ್ಟು ಪೂಜೆ ಮಾಡಿಸಿ ದೇವರಿಗೆ ದೂಪ ಹಚ್ಚಿಸಿ ಮೂರು ದಿನದ ಸೂತಕ ಕಳೆದುಕೊಳ್ಳುತ್ತಾರೆ. ನಂತರ ಹೆಣ್ಣಿಗೆ 'ಬಾಣಂತನ' ಮಾಡಲು ಪ್ರಾರಂಭಿಸುತ್ತಾರೆ. ಹುಡುಗಿ ಹೊರಗಡೆ ಹೋಗದೆ, ಶೀತವಾದ ಪದಾರ್ಥಗಳನ್ನು ತಿನ್ನದೆ ಬೆಚ್ಚಗೆ ಮನೆಯಲ್ಲಿ ಇರಬೇಕಾಗುತ್ತದೆ. ೧೧ನೆಯ ದಿನಕ್ಕೆ ಕೊನೇ ದಿನದ ಸೂತಕವನ್ನು ಕಳೆದುಕೊಳ್ಳುತ್ತಾರೆ. ಗುಡ್ಲು ಹಾಕಿದ ಸೋದರಮಾವನಿಗೆ ಅಂದು ಭರ್ಜರಿಯಾದ ಆತಿಥ್ಯ ಸಿಗುತ್ತದೆ.

ಆ) ಹಸೆ ಹಚ್ಚುವುದು

ಮೈನೆರೆದ ಹುಡುಗಿಯೊಬ್ಬಳು ಬಾಣಂತನವನ್ನು ಮಾಡಿಸಿಕೊಂಡ ಮೇಲೆ ಹತ್ತಿರದ ಬಂಧು-ಬಳಗವನ್ನು ಹಾಗು ಊರಿನಲ್ಲಿ ತಮಗೆ ಆಪ್ತರಾದವರನ್ನು ಕರೆದು ಮಾಡುವ ಶಾಸ್ತ್ರವನ್ನೆ ಹಸೆ ಹಚ್ಚುವುದು ಅಥವಾ ಒಸಗೆ ಶಾಸ್ತ್ರ ಎಂದು ಕರೆಯುತ್ತಾರೆ. ಒಂದು, ಮೂರು, ಅಥವಾ ಐದು ತಿಂಗಳಿಗೆ ಈ ಶಾಸ್ತ್ರ ಮಾಡುತ್ತಾರೆ. ಚಿಗಣಿ, ತಂಬಿಟ್ಟು, ಕೊಬ್ಬರಿ, ಬೆಲ್ಲ, ಹೂವು, ಹಣ್ಣು ಕಾಯಿ, ಸೀರೆ, ರವಿಕೆ ಕಣದೊಂದಿಗೆ ಸೋದರಮಾವನ ಮನೆಯವರು ಬರುತ್ತಾರೆ. ಈ ಶಾಸ್ತ್ರ ಸಾಮಾನ್ಯವಾಗಿ ಸಂಜೆ ಹೊತ್ತಿನಲ್ಲಿ ನಡೆಯುತ್ತದೆ. ಹುಡುಗಿಗೆ ಸ್ನಾನ ಮಾಡಿಸಿ ಸೀರೆ, ರವಿಕೆ ತೊಡಿಸಿ ಅಲಂಕಾರ ಮಾಡುತ್ತಾರೆ. ನಡುಮನೆಯಲ್ಲಿ ಹಸೆಮಣೆಯ ಮೇಲೆ ಹುಡುಗಿಯನ್ನು

ಕೂರಿಸುತ್ತಾರೆ. ಬಂಧು ಬಳಗದವರು ತಂದಿರುವ ಉಡುಗೊರೆಯ ವಸ್ತುಗಳನ್ನು ಒಂಭತ್ತು ತಟ್ಟೆಯಲ್ಲಿ ತುಂಬಿಡುತ್ತಾರೆ

ಐದು ಜನ ಮುತ್ತೈದೆಯರು ಸೇರಿ ಹುಡುಗಿಗೆ ಹಸೆ ಶಾಸ್ತ್ರ ಮಾಡುತ್ತಾರೆ. ಅಕ್ಷತೆಯನ್ನು ಹುಡುಗಿಯ ಪಾದ, ಸೊಂಟ, ಭುಜ, ತಲೆಗೆ ಮುಟ್ಟಿಸಿ ಬೆನ್ನಿನ ಹಿಂದೆ ಚೆಲ್ಲುತ್ತಾರೆ. ಇದನ್ನೇ ಹಸೆ ಶಾಸ್ತ್ರ ಎನ್ನುತ್ತಾರೆ. ನಂತರ ಹುಡುಗಿ ಹಿರಿಯರಿಗೆ ನಮಸ್ಕರಿಸುತ್ತಾಳೆ. ಆ ದಿನ ಸಾಮಾನ್ಯವಾಗಿ ಕುರಿ, ಕೋಳಿಗಳನ್ನು ಕುಯ್ದು ಮಾಂಸದ ಅಡಿಗೆ ಮಾಡಿರುತ್ತಾರೆ. ಅತಿಥಿಗಳೆಲ್ಲರು ಊಟ ಮಾಡಿ ಸಂತೃಪ್ತರಾಗುತ್ತಾರೆ. ಇತ್ತೀಚೆಗೆ ಹಚ್ಚೆ ಹಚ್ಚುವ ಶಾಸ್ತ್ರವನ್ನು ಬಹುತೇಕ ಮಂದಿ ಗುಟ್ಟಾಗಿಯೇ ಮಾಡಿ ಮುಗಿಸುತ್ತಾರೆ. ಎಲ್ಲರಿಗು ರಟ್ಟು ಮಾಡಲು ಇಷ್ಟಪಡುವುದಿಲ್ಲ.

ಇ) ಬಸಿರು ಮತ್ತು ಮಾಡಿಕ್ಕುವುದು

ಮದುವೆಯಾದ ಹೆಣ್ಣು ಗರ್ಭವತಿಯಾದಾಗ ಹತ್ತಿರದ ಸಂಬಂಧಿಕರ ಜೊತೆಯಲ್ಲಿ ವಿಚಾರ ಹೇಳಿಕೊಂಡು ಸಂಭ್ರಮಿಸುತ್ತಾರೆ. ಹೆಣ್ಣಿನ ಬದುಕಿನಲ್ಲಿ ಬಸಿರಾಗುವುದು ಮುಖ್ಯವಾಗುತ್ತದೆ. ಇಲ್ಲದಿದ್ದರೆ ಬಂಜೆ ಎಂದು ಕರೆಯುವ ಅವಮಾನವನ್ನು ಸಹಿಸಿಕೊಳ್ಳಬೇಕಾಗುತ್ತದೆ. ಹೆಣ್ಣು ಬಸಿರಾಗಿರುವ ವಿಚಾರ ತಿಳಿದು ಗಂಡ, ಅತ್ತೆ, ಮಾವ, ತಾಯಿ, ತಂದೆ, ಅಣ್ಣ-ತಮ್ಮ, ಅಕ್ಕ-ತಂಗಿಯರಾದಿಯಾಗಿ ಎಲ್ಲರೂ ಸಂತೋಷಪಡುತ್ತಾರೆ. ಹೆಂಡತಿ ಇಷ್ಟಪಡುವ ತಿಂಡಿ-ತಿನಿಸು, ವಸ್ತುಗಳನ್ನು ಗಂಡ ತಂದುಕೊಡುತ್ತಾನೆ. ಮನೆಯ ಸದಸ್ಯರು ಆಕೆಯ ಬಗ್ಗೆ ನಿಗಾವಹಿಸುತ್ತಾರೆ. ಗರ್ಭಿಣಿ ಹೆಂಗಸು ಭಾರವಾದ ವಸ್ತುಗಳನ್ನು ಎತ್ತದೆ ಬಹಳ ಎಚ್ಚರಿಕೆಯಿಂದ ಕೆಲಸ ಮಾಡುತ್ತಾಳೆ.

ಹೆಣ್ಣೊಬ್ಬಳು ಗರ್ಭಿಣಿಯಾಗಿರುವುದು ತಿಳಿಯುತ್ತಿದ್ದಂತೆ ಬಂಧುಬಳಗದವರು ಅವಳನ್ನು ಮನೆಗೆ ಕರೆದು ಅಡುಗೆ ಮಾಡಿ ಊಟಕ್ಕೆ ಹಾಕಲು ಉತ್ಸುಕರಾಗುತ್ತಾರೆ. ಹೀಗೆ ಗರ್ಭಿಣಿ ಹೆಣ್ಣು ಬಯಸಿದ್ದನ್ನು ಪೂರೈಸುವ ಕಾರ್ಯವನ್ನೆ ಮಾಡಿಕ್ಕುವುದು ಎಂದು ಕರೆಯುತ್ತಾರೆ. ಕೆಲವರು ತಿಂಡಿತಿನಿಸು, ಹಣ್ಣುಹಂಪಲುಗಳನ್ನು ತೆಗೆದುಕೊಂಡು ಬಂದು ಗರ್ಭಿಣಿಯನ್ನು ನೋಡಿಕೊಂಡು ಹೋಗುತ್ತಾರೆ.

ಈ) ಸೀಮಂತ

ಸಾಮಾನ್ಯವಾಗಿ ಹೆಣ್ಣೊಬ್ಬಳು ಮೊದಲ ಬಾರಿಗೆ ಗರ್ಭಿಣಿಯಾದಾಗ ಅದಕ್ಕೆ ಚೊಚ್ಚಲ ಬಸಿರು ಎಂದು ಹೇಳುತ್ತಾರೆ. ಬಸುರಿಯನ್ನು ತವರು ಮನೆಗೆ ಕಳುಹಿಸುವಾಗ ಸೀಮಂತ ಕಾರ್ಯ ಮಾಡುತ್ತಾರೆ. ಚೊಚ್ಚಲ ಹೆರಿಗೆ ತವರು ಮನೆಯಲ್ಲಿ ನಡೆಯಬೇಕೆಂಬ ಸಂಪ್ರದಾಯವಿದೆ. ೫ ತಿಂಗಳು ಅಥವಾ ೭ ತಿಂಗಳು ತುಂಬಿದಾಗ ತವರು ಮನೆಯಿಂದ ಗರ್ಭಿಣಿಯನ್ನು ಕರೆಯಲು ಬರುತ್ತಾರೆ. ಒಂದು ಶುಭ ದಿನವನ್ನು ಗೊತ್ತು ಮಾಡಿ ನೆಂಟರಿಷ್ಟರಿಗೆ ಹೇಳಿಕೊಂಡು ಸೀಮಂತವನ್ನು ಸಂಭ್ರಮದಿಂದ ಮಾಡುತ್ತಾರೆ. ಗರ್ಭಿಣಿ ಹೆಣ್ಣಿಗೆ ಗಂಡನ ಮನೆಯಲ್ಲಿ ತಂದ ರೇಷ್ಮೆ ಸೀರೆಯನ್ನು

ತೊಡಿಸಿ, ಅಲಂಕಾರ ಮಾಡಿ ಹಸೆಮಣೆಯ ಮೇಲೆ ಕೂರಿಸುತ್ತಾರೆ. ಅದರ ಮುಂದೆ ಅಕ್ಕಿ, ಕೊಬ್ಬರಿ, ಎಲೆ ಅಡಿಕೆ, ಹೂ, ಹಣ್ಣು, ಅರಿಶಿಣ ಕುಂಕುಮಗಳನ್ನು ತಟ್ಟೆಯಲ್ಲಿ ಹಾಕಿ ಇಟ್ಟಿರುತ್ತಾರೆ. ಐದು ಜನ ಮುತ್ತೈದೆಯರು ಗರ್ಭಿಣಿಗೆ ಅಕ್ಷತೆ ಹಾಕಿ ಶಾಸ್ತ್ರ ಮಾಡುತ್ತಾರೆ. ನಂತರ ಒಂದು ಟವಲಿನಲ್ಲಿ ಆ ವಸ್ತುಗಳನ್ನೆಲ್ಲ ಇಟ್ಟು ಮಡಿಲು ತುಂಬುತ್ತಾರೆ. ಆ ದಿನ ಎಲ್ಲರಿಗೂ ವಿಶೇಷವಾದ ರೀತಿಯಲ್ಲಿ ಅಡುಗೆ ಮಾಡಿಸಿ ಊಟಕ್ಕೆ ಕೊಡುತ್ತಾರೆ. ನಂತರ ಗರ್ಭಿಣಿ ಹೆಣ್ಣು ತನ್ನ ತವರು ಮನೆಗೆ ಬಂದು ಸೇರಿಕೊಳ್ಳುತ್ತಾಳೆ. ಅಲ್ಲಿ ಅವಳಿಗೆ ಪ್ರತಿನಿತ್ಯ ವಿಶೇಷ ಆತಿಥ್ಯ ನಡೆಯುತ್ತದೆ.

ಉ) ಹೆರಿಗೆ-ಬಾಣಂತನ

ಹಿಂದಿನ ದಿನಗಳಲ್ಲಿ ಹಳ್ಳಿಯಲ್ಲಿ ಹೆರಿಗೆಯನ್ನು ಸುಸೂತ್ರವಾಗಿ ಮಾಡಿಸುವ ಅನುಭವಸ್ಥ ಸೂಲಗಿತ್ತಿಯರಿದ್ದರು. ಇತ್ತೀಚೆಗೆ ವೈದ್ಯರ ಬಳಿಗೆ ಹೋಗಿ ಹೆರಿಗೆ ಮಾಡಿಸಿಕೊಳ್ಳುವುದು ರೂಢಿಯಾಗಿದೆ. ಗರ್ಭಿಣಿಗೆ ಹೆರಿಗೆ ನೋವು ಕಾಣಿಸಿಕೊಂಡಾಗ ಆದಷ್ಟು ಬೇಗ ವೈದ್ಯರ ಬಳಿಗೆ ಕರೆದುಕೊಂಡು ಬರುತ್ತಾರೆ. ಕೆಲವರಿಗೆ ಸಹಜ ಹೆರಿಗೆಯಾದರೆ, ಮತ್ತೆ ಕೆಲವರು ವೈದ್ಯರ ಸಲಹೆಯ ಮೇರೆಗೆ ಸಿಜರಿಯನ್ ಮಾಡಿಸಿಕೊಂಡು ಮಗುವಿಗೆ ಜನ್ಮ ನೀಡುತ್ತಾರೆ. ಮಗು ಹುಟ್ಟಿದ ರಾಶಿ, ಘಳಿಗೆ, ನಕ್ಷತ್ರಗಳನ್ನು ಜೋಯಿಸರಿಂದ ಕೇಳಿ ತಿಳಿದುಕೊಳ್ಳುತ್ತಾರೆ. ತಾಯಿಗೆ ತನ್ನ ಮಗುವನ್ನು ನೋಡಿದಾಗ ತಾನು ಅನುಭವಿಸಿದ ನೋವೆಲ್ಲ ಮಾಯವಾಗುತ್ತದೆ. ಮೂರು ದಿನ ಕಳೆದ ಮೇಲೆ ತಾಯಿ ಮಗುವಿಗೆ ಹಾಲುಣಿಸುವುದನ್ನು ರೂಢಿಮಾಡಿಕೊಳ್ಳುತ್ತಾಳೆ. ಆಕೆಗೆ ಜೀವನ ಸಾರ್ಥಕವಾಯಿತು ಎನಿಸುತ್ತದೆ. ಹೆರಿಗೆ ಮುಗಿದ ಮೇಲೆ ತಾಯಿಗೆ ಬಿಸಿನೀರಿನ ಸ್ನಾನ ಮಾಡಿಸಿ ತಲೆಗೆ ಬಟ್ಟೆ ಕಟ್ಟಿಕೊಳ್ಳಲು ಹೇಳುತ್ತಾರೆ. ಮೈತುಂಬ ರಗ್ಗು ಹೊದ್ದುಕೊಂಡು ಬೆಚ್ಚಗೆ ಮಲಗಿಕೊಳ್ಳಬೇಕಾಗುತ್ತದೆ. ಮಗುವಿಗೆ ಸ್ನಾನ ಮಾಡಿಸಲು ಅನುಭವವಿರಬೇಕು. ಹಿರಿಯ ಹೆಂಗಸೊಬ್ಬಳು ತನ್ನ ಕಾಲುಗಳ ಮೇಲೆ ಮಲಗಿಸಿಕೊಂಡು ಮಗುವಿಗೆ ಸ್ನಾನ ಮಾಡಿಸುತ್ತಾಳೆ. ಅನಂತರ ತೊಟ್ಟಿಲಿಗೆ ಹಾಕಿ ಮಲಗಿಸುತ್ತಾರೆ. ತೊಟ್ಟಿಲ ಕೆಳಗೆ ಸಾಂಬ್ರಾಣಿ ಹೊಗೆಯನ್ನು ಹಾಕುತ್ತಾರೆ. ಬಾಣಂತಿಯಾದವಳು ತಣ್ಣೀರನ್ನು ಮುಟ್ಟುವಂತಿಲ್ಲ, ಶಾಖಾಹಾರಿಯಾಗಿರಬೇಕು. ತುಪ್ಪ, ಬೆಣ್ಣೆಯನ್ನು ಹಾಕಿ ಬಿಸಿಯಾದ ಅನ್ನಕ್ಕೆ ಬೆರಸಿಕೊಂಡು ಊಟ ಮಾಡಿಸುತ್ತಾರೆ. ಹೀಗೆ ತನ್ನ ತವರು ಮನೆಯಲ್ಲಿ ಬಾಣಂತನವನ್ನು ಮಾಡಿ ತಾಯಿ ಮತ್ತು ಮಗುವನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ. ಅಚ್ಚುಕಟ್ಟಾಗಿ ಬಾಣಂತನ ಮಾಡಿದರೆ ಬಾಣಂತಿಯ ತಾಯಿಯನ್ನು ಸಂಬಂಧಿಕರೆಲ್ಲರು ಕೊಂಡಾಡುತ್ತಾರೆ. ಮಗುವನ್ನು ಹಾಗೆ ನೋಡಬಾರದೆಂದು ಬಂದವರೆಲ್ಲ ಮಗುವಿನ ಕೈಗೆ ಹಣ ಕೊಟ್ಟು ನೋಡುತ್ತಾರೆ. ಕೆಲವರು ಹಣ್ಣು ಹಂಪಲುಗಳನ್ನು ತರುತ್ತಾರೆ. ಬಾಣಂತನದ ಖರ್ಚಿಗೆ ಸಹಾಯವಾಗಲೆಂದು ನಮ್ಮ ಜನಪದರು ಇಂತಹ ಸಂಪ್ರದಾಯವೊಂದನ್ನು ಬೆಳೆಸಿಕೊಂಡು ಬಂದಿದ್ದಾರೆ.

ಮಗುವಿಗೆ ೭ ಅಥವಾ ೯ ತಿಂಗಳಾದಾಗ ಗಂಡನ ಮನೆಯಿಂದ ಬಾಣಂತಿ ಮಗುವನ್ನು

ಕರೆದುಕೊಂಡು ಹೋಗಲು ಬರುತ್ತಾರೆ. ತವರು ಮನೆಯಲ್ಲಿ ಮಗಳು ಮತ್ತು ಮೊಮ್ಮಗುವಿಗೆ ಹೊಸ ಬಟ್ಟೆಯನ್ನು ತರುತ್ತಾರೆ. ಮಗುವಿಗೆ ಕೈಲಾದಷ್ಟು ಒಡವೆ ಮಾಡಿಸುತ್ತಾರೆ. ಎಲ್ಲರು ಸೇರಿ ಊಟ ಮಾಡಿದ ಮೇಲೆ ಬಾಣಂತಿಯನ್ನು ಮಗುವಿನ ಜೊತೆಯಲ್ಲಿ ಗಂಡನ ಊರಿಗೆ ಕರೆದುಕೊಂಡು ಹೋಗುತ್ತಾರೆ.

೧.೨. ಮಕ್ಕಳ ಶಾಸ್ತ್ರ ಸಂಪ್ರದಾಯಗಳು

ಅ) ಎಣ್ಣೆಯಲ್ಲಿ ಮುಖ ನೋಡುವ ಶಾಸ್ತ್ರ

ಮಗುವಿನ ಸೋದರ ಮಾವಂದಿರು ಮಗುವಿನ ಮುಖವನ್ನು ನೇರವಾಗಿ ನೋಡುವುದಿಲ್ಲ. ಊರ ದೇವಸ್ಥಾನದಲ್ಲಿ ದೇವರಿಗೆ ಪೂಜೆ ಮಾಡಿಸುತ್ತಾರೆ. ನಂತರ ಮನೆಗೆ ಬಂದು ಮಗುವಿಗೆ ಮಧ್ಯೆ ಒಂದು ಬಟ್ಟೆಯನ್ನು ತೆರೆಯಿಡಿಯುತ್ತಾರೆ. ಅದರ ಕೆಳಗೆ ಬಟ್ಟಲೊಂದರಲ್ಲಿ ಹರಳೆಣ್ಣೆಯನ್ನು ಇಡುತ್ತಾರೆ. ತೆರೆಯ ಮರೆಯಲ್ಲಿ ನಿಂತ ಸೋದರ ಮಾವ ಹರಳೆಣ್ಣೆಯಲ್ಲಿ ಕಾಣುವ ಮಗುವಿನ ಪ್ರತಿಬಿಂಬವನ್ನು ನೋಡುತ್ತಾನೆ. ನಂತರ ಮಗುವಿಗೆ ಹಣವನ್ನು ನೀಡುತ್ತಾನೆ. ಕೆಲವರು ಒಡವೆಯನ್ನು ಮಾಡಿಸಿಕೊಡುತ್ತಾರೆ. ಹೀಗೆ ಮಗು ಹುಟ್ಟಿದಾಗ ಸೋದರಮಾವ ಮತ್ತು ಮಗುವಿನ ಮಧ್ಯೆ ಸಂಪ್ರದಾಯವೊಂದು ಬೆಳೆದು ಬಂದಿದೆ. ಇತ್ತೀಚಿನ ದಿನಗಳಲ್ಲಿ ಈ ಶಾಸ್ತ್ರದ ಮಹತ್ವ ಕಡಿಮೆಯಾಗುತ್ತಿದೆ.

ಆ) ನಾಮಕರಣ ಪದ್ಧತಿ

ಮಗು ಹುಟ್ಟಿದ ಮೇಲೆ ಅದಕ್ಕೊಂದು ಹೆಸರನ್ನಿಟ್ಟು, ಆ ಹೆಸರಿನಿಂದಲೇ ಮಗುವನ್ನು ಗುರುತಿಸುತ್ತಾರೆ. ಇದನ್ನು ತೊಟ್ಟಿಲ ಶಾಸ್ತ್ರ, ನಾಮಕರಣ ಶಾಸ್ತ್ರ ಎಂದು ಕರೆಯುತ್ತಾರೆ. ಮಗುವಿಗೆ ನಾಮಕರಣ ಮಾಡುವಾಗ ಮಗು ಹುಟ್ಟಿದ ಗಳಿಗೆ ನಕ್ಷತ್ರ ಮತ್ತು ಶಾಸ್ತ್ರಗಳನ್ನು ನೋಡಿಸಿ ಜೋಯಿಸರಿಂದ ಮಗುವಿಗೆ ಯಾವ ಅಕ್ಷರದಿಂದ ಹೆಸರಿಡಬೇಕೆಂಬುದನ್ನು ಕೇಳಿಕೊಳ್ಳುತ್ತಾರೆ. ಸಾಮಾನ್ಯವಾಗಿ ಹೆರಿಗೆಯಾದ ೧೧ನೇ ದಿನ ಸೂತಕವನ್ನು ತೆಗೆಯುತ್ತಾರೆ. ಮಗುವಿಗೆ ಹೆಸರಿಡುವ ಕಾರ್ಯಕ್ರಮವು ಅಂದೇ ನಡೆಯುತ್ತದೆ. ಇದನ್ನು ಕೆಲವು ಕಡೆ ತೊಟ್ಟಿಲ ಶಾಸ್ತ್ರವೆಂದೂ, ಮತ್ತೆ ಕೆಲವು ಕಡೆ ನಾಮಕರಣ ಶಾಸ್ತ್ರವೆಂದೂ ಕೂಡ ಕರೆಯುತ್ತಾರೆ. ಇದನ್ನು 'ಗುಣಿಗೆಗೆ ಇಕ್ಕೋದು' ಎಂದು ಕರೆಯುವುದುಂಟು. ಅಂದು ಉಗ್ಗೇದನ್ನ ಮಾಡಿ ಊರ ಹುಡುಗರನ್ನೆಲ್ಲಾ ಕರೆದು ಹಂಚುತ್ತಾರೆ. ತಮಗೆ ಇಷ್ಟವಾದ ದೇವರ ಹೆಸರು, ಕುಟುಂಬದ ಹಿರಿಯರ ಹೆಸರು ಇಡುವುದು ಕೂಡ ಸಂಪ್ರದಾಯದಂತೆ ಬೆಳೆದು ಬಂದಿದೆ. ಇತ್ತೀಚೆಗೆ ಹೊಸ ಹೊಸ ಹೆಸರುಗಳನ್ನು ಇಡುತ್ತಾರೆ. ಹೊಸ ಜೀವನವೊಂದನ್ನು ಅತ್ಯಂತ ಸಂತೋಷ ಸಂಭ್ರಮಗಳಿಂದ ಸ್ವಾಗತಿಸುತ್ತಾರೆ. ಕೆಲವರು ನೆಂಟರಿಷ್ಟರನ್ನು ಸೇರಿಸಿ ಮಾಂಸದೂಟ ಮಾಡಿ ಅದ್ದೂರಿಯಾಗಿ ನಾಮಕರಣ ಮಾಡುತ್ತಾರೆ.

ಇ) ಹೊಸ್ತಿಲು ದಾಟಿದ ಶಾಸ್ತ್ರ

ನಡುಮನೆಯಲ್ಲಿ ಆಟವಾಡಿಕೊಂಡಿದ್ದ ಮಗು ಬೆಳೆದು ದೊಡ್ಡದಾಗುವ ಹಂತದಲ್ಲಿ ತಾನೇ

ಹೊಸ್ತಿಲನ್ನು ದಾಟಲು ಪ್ರಯತ್ನಿಸಿ ಯಶಸ್ವಿಯಾಗುತ್ತದೆ. ಇಂತಹ ಸಂದರ್ಭದಲ್ಲಿ ಮಗುವನ್ನು ಮನೆಯ ಬಾಗಿಲಿನ ಹೊಸ್ತಿಲ ಮೇಲೆ ಕೂರಿಸುತ್ತಾರೆ. ಹಣ್ಣುಕಾಯಿ, ಅರಿಶಿಣ ಕುಂಕುಮ, ಗಂಧದ ಕಡ್ಡಿಯಿಂದ ಹೊಸ್ತಿಲಿಗೆ ಪೂಜೆ ಮಾಡುತ್ತಾರೆ. ಮಗುವು ಹೊಸ್ತಿಲನ್ನು ದಾಟುವ ಸಂದರ್ಭದಲ್ಲಿ ಮಾಡುವ ಶಾಸ್ತ್ರವೊಂದು ನಮ್ಮ ಜನಪದರ ಬದುಕಿನಲ್ಲಿ ಹಾಸುಹೊಕ್ಕಾಗಿದೆ.

ಈ) ಕಿವಿ ಚುಚ್ಚುವುದು

ಮಕ್ಕಳಿಗೆ ಕಿವಿ ಚುಚ್ಚುವುದು ಹಿಂದಿನಿಂದಲೂ ಬೆಳೆದು ಬಂದಿದೆ. ಮಗುವಿಗೆ ವರ್ಷ ತುಂಬುವುದರೊಳಗೆ ಕಿವಿ ಚುಚ್ಚಿಸುತ್ತಾರೆ. ಕಿವಿ ಚುಚ್ಚುವ ಶಾಸ್ತ್ರವನ್ನು ಸಾಮಾನ್ಯವಾಗಿ ಅಕ್ಕಸಾಲಿಗ ಮಾಡುತ್ತಾನೆ. ಇದಕ್ಕಾಗಿ ಚಿನ್ನದ ಆಭರಣವನ್ನು ಮಾಡುವ ಆಚಾರಿಯನ್ನು ಕರೆಸುತ್ತಾರೆ. ಮತ್ತೆ ಕೆಲವರು ಅನುಭವಸ್ಥ ಹಿರಿಯರಿಂದ ಕಿವಿ ಚುಚ್ಚಿಸುತ್ತಾರೆ. ಕಿವಿ ಚುಚ್ಚುವ ಶಾಸ್ತ್ರ ಮಾಡುವಾಗ ಚಿನ್ನದ ಸೂಜಿ ಬಳಸುವುದು ಮಂಗಳಕರ. ಆದರೆ ಅದಕ್ಕೆ ಅನುಕೂಲವಿಲ್ಲದವರು ಅವರವರ ಶಕ್ತಿಗನುಗುಣವಾಗಿ ಬೆಳ್ಳಿ ಅಥವಾ ಕಬ್ಬಿಣದ ಸೂಜಿಯಿಂದ ಚುಚ್ಚಿಸುತ್ತಾರೆ. ಕೆಲವರು ಆ ದಿನವೇ ಕಿವಿಗೆ ಆಭರಣ ಹಾಕುತ್ತಾರೆ. ಮತ್ತೆ ಕೆಲವರು ಕಿವಿಯ ತೂತಿಗೆ ಹಂಚಿ ಕಡ್ಡಿಯನ್ನು ಸ್ವಲ್ಪ ದಿನ ಹಾಕಿ, ಕಿವಿಯ ತೂತು ದೊಡ್ಡದಾದ ಮೇಲೆ ಆಭರಣವನ್ನು ಹಾಕುತ್ತಾರೆ. ಕಿವಿ ಚುಚ್ಚುವ ಶಾಸ್ತ್ರವನ್ನು ಕುರಿತು ಶುಶ್ರುತ ತನ್ನ ವೈದ್ಯ ಗ್ರಂಥದಲ್ಲಿ ಹೇಳಿದ ಹಾಗೆ "ಕಿವಿಯಲ್ಲಿ ಶಂಕು ರೇಖೆ, ಶಿರೋರೇಖೆ ಎಂಬ ಸೂಕ್ಷ್ಮವಾದ ನರಗಳಿರುತ್ತವೆ. ಈ ನರಗಳಿಗೂ ಮೂತ್ರ ಪಿಂಡಕ್ಕೂ ನೇರವಾದ ಸಂಬಂಧವಿರುತ್ತದೆ. ಈ ಎರಡು ನರಗಳು ಕ್ರಮವಾಗಿ ಬೆಳೆಯುತ್ತ ಕಿವಿ ಪ್ರದೇಶದಲ್ಲಿ ಒಂದಕ್ಕೊಂದು ತಗಲಿಕೊಂಡರೆ 'ಅಂತ್ರ ವೃದ್ಧಿ' (ಹರ್ಣಿಯ) ಬರುವ ಅವಕಾಶಗಳಿರುತ್ತದೆ. ಈ ನರಗಳು ಪರಸ್ಪರ ಸೇರದಂತಿರಲು ಕಿವಿ ಚುಚ್ಚಿದ ಸ್ಥಳದಲ್ಲಿ ಆಭರಣವೊಂದನ್ನು ಧರಿಸಿದರೆ ಅಂತ್ರ ವೃದ್ಧಿಯನ್ನು ತಡೆಗಟ್ಟಬಹುದು. ಮತ್ತು ಅಲಂಕಾರದ ಆಭರಣವಾಗಿಯು ಬಳಸಿದಂತಾಗುತ್ತದೆ ಎಂದು ಹೇಳಿದ್ದಾನೆ."[೧] ಕಿವಿ ಚುಚ್ಚಿದವರಿಗೆ ಎಲೆ ಅಡಿಕೆ, ಬಾಳೆಹಣ್ಣಿನ ಜೊತೆಯಲ್ಲಿ ತಮ್ಮ ಕೈಲಾದಷ್ಟು ಹಣವನ್ನು ಕೊಡುತ್ತಾರೆ. ಸಾಮಾನ್ಯವಾಗಿ ತಾಯಿ ಬಾಣಂತನವನ್ನು ಮುಗಿಸಿಕೊಂಡು ಗಂಡನ ಮನೆಗೆ ಹೋಗುವಾಗ ಮಗುವಿಗೆ ಕಿವಿ ಚುಚ್ಚಿಸಿ ತಮ್ಮ ಶಕ್ತಾನುಸಾರ ಆಭರಣ ಮಾಡಿಸಿ ಹಾಕುತ್ತಾರೆ. ಇದು ಹೆಣ್ಣಿನ ತವರು ಮನೆಯವರ ಗೌರವವನ್ನು ಹೆಚ್ಚಿಸುತ್ತದೆ.

ಉ) ಮುಡಿ ಕೊಡುವುದು

ಮಗುವಿಗೆ ವರ್ಷ ತುಂಬುವುದರೊಳಗೆ ಮನೆ ದೇವರಿಗೆ ಮುಡಿ ಕೊಡುವುದು ಒಂದು ಸಂಪ್ರದಾಯ. ಊರ ಹಬ್ಬದ ದಿನ ಅಥವಾ ಶುಕ್ರವಾರ ಮನೆ ಮಂದಿಯೆಲ್ಲ ಸ್ನಾನ ಮಾಡಿಕೊಂಡು ಮಡಿಯಾದ ಬಟ್ಟೆಯನ್ನು ತೊಟ್ಟು ಪೂಜಾ ಸಾಮಗ್ರಿಗಳೊಂದಿಗೆ ಗ್ರಾಮದೇವತೆ ಐಕನಹಳ್ಳಿಯಮ್ಮನ ದೇವಾಲಯಕ್ಕೆ ಬರುತ್ತಾರೆ. ಮಗುವಿಗೆ ಮುಡಿ ಕೊಡುವಾಗ ಕ್ಷೌರಿಕರನ್ನು ಕರೆಸಿ ದೇವರ ಸನ್ನಿಧಿಯಲ್ಲಿ ಭಕ್ತ ಸಮೂಹದ ಸಮಕ್ಷಮದಲ್ಲಿ ಮುಡಿಕೊಡಿಸುತ್ತಾರೆ. ಕೆಲವರು ಮಗುವಿಗೆ ತಲೆಯಲ್ಲಿ ಗಾಯವಾದಾಗಲೋ, ಕಾಯಿಲೆ ವಾಸಿಯಾಗದಿದ್ದರೂ ದೇವರಿಗೆ ಹರಕೆ

ಕಟ್ಟಿಕೊಂಡಿರುತ್ತಾರೆ. ಹರಕೆಯ ರೂಪದಲ್ಲಿ ಮುಡಿಕೊಡುವುದು ಕೂಡ ಹೆಚ್ಚಾಗಿ ಕಂಡುಬರುತ್ತದೆ. ಮುಡಿಕೊಡುವಾಗ ಸ್ವಲ್ಪ ಮಕ್ಕಳು ಸಾಕಷ್ಟು ತೊಂದರೆ ಕೊಡುತ್ತವೆ. ಕೆಲವು ಏನು ಆಗೆ ಇಲ್ಲವೇನೋ ಎಂಬಂತೆ ನಿಂತಿರುತ್ತವೆ. ಎಲ್ಲರು ಮಕ್ಕಳ ಗಮನವನ್ನು ಬೇರೆ ಕಡೆಗೆ ಸೆಳೆದು ಕ್ಷೌರಿಕನಿಗೆ ಸಹಕರಿಸುತ್ತಾರೆ. ಕ್ಷೌರಿಕನಿಗೆ ಇದಕ್ಕಾಗಿ ನಿಗದಿತ ಹಣವನ್ನು ಕೊಡಬೇಕಾಗುತ್ತದೆ.

೧.೩. ವಿವಾಹ ಪದ್ಧತಿ

ಕನ್ನಡ ನಾಡಿನ ಜನಾಂಗಗಳಲ್ಲಿ ಒಕ್ಕಲಿಗರು ಪ್ರಮುಖರು. ದಕ್ಷಿಣ ಕರ್ನಾಟಕದಲ್ಲಿ ಹೆಚ್ಚಾಗಿ ಕಂಡುಬರುವ ಇವರು ಬೇಸಾಯ ಮತ್ತು ಪಶುಪಾಲನೆಯನ್ನು ಮುಖ್ಯ ವೃತ್ತಿಯನ್ನಾಗಿಸಿಕೊಂಡಿದ್ದಾರೆ. ನಿಸರ್ಗ ಪ್ರಿಯರಾದ ಇವರು ಹೆಚ್ಚಾಗಿ ವಾಸಿಸುತ್ತಿರುವುದು ಹಳ್ಳಿಗಳಲ್ಲಿಯೇ. ಮಂಡ್ಯ ಜಿಲ್ಲೆಯ ಈ ಗ್ರಾಮದಲ್ಲಿ ವಾಸಿಸುತ್ತಿರುವವರೆಲ್ಲ ಗಂಗಡಿಕಾರ ಒಕ್ಕಲಿಗರೆ ಆಗಿದ್ದಾರೆ. ಪ್ರಾರಂಭದಲ್ಲಿ ಈ ಜನಾಂಗದಲ್ಲಿಯು ಬಾಲ್ಯ ವಿವಾಹ ಪದ್ಧತಿ ರೂಢಿಯಲ್ಲಿತ್ತು. ಇತ್ತೀಚೆಗೆ ವಿದ್ಯಾವಂತರ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಮಕ್ಕಳು ಪ್ರೌಢರಾದ ಮೇಲೆ ಅವರಿಗೆ ವಿವಾಹ ಮಾಡಬೇಕೆಂದು ಪೋಷಕರು ಆಲೋಚಿಸುತ್ತಾರೆ. ವಿವಾಹ ವ್ಯಕ್ತಿಗೆ ಸಮಾಜದಲ್ಲಿ ಜವಾಬ್ದಾರಿಯನ್ನು ತರುತ್ತದೆ. ವಂಶ ಉದ್ಧಾರದ ಕಾರಣಕ್ಕಾಗಿಯು ಮದುವೆಗಳು ನಡೆಯುತ್ತಿವೆ. ಒಕ್ಕಲಿಗರಲ್ಲಿನ ವಿವಾಹ ಸಂಬಂಧಿ ಸಂಪ್ರದಾಯಗಳು ವೈಶಿಷ್ಟ್ಯಪೂರ್ಣವಾಗಿವೆ.

ಅ) ಹೆಣ್ಣು ನೋಡುವುದು

ಮಕ್ಕಳು ವಯಸ್ಸಿಗೆ ಬಂದ ಕೂಡಲೇ ತಮ್ಮ ಕುಟುಂಬಕ್ಕೆ ಹೊಂದಿಕೊಳ್ಳುವ ವಧು-ವರನ ಅನ್ವೇಷಣೆ ಪ್ರಾರಂಭವಾಗುತ್ತದೆ. ತಮಗೆ ಪರಿಚಯವಿರುವವರ ಬಳಿ ತಮ್ಮ ಮಗನ/ಮಗಳ ಮದುವೆ ಮಾಡುತ್ತೇವೆ. ಒಳ್ಳೆಯ ಸಂಬಂಧವಿದ್ದರೆ ತಿಳಿಸಿ ಎಂದು ಹೇಳಿಕೊಳ್ಳುತ್ತಾರೆ. ಹೆಣ್ಣು ನೋಡುವಾಗ ಆಕೆಯ ರೂಪ, ಗುಣ, ವಿದ್ಯೆಯನ್ನು ಪರಿಗಣಿಸುತ್ತಾರೆ. ಹೆಣ್ಣಿನ ಕಡೆಯವರು ಒಂದು ಶುಭ ದಿನ ಹೆಣ್ಣನ್ನು ಬಂದು ನೋಡಿಕೊಂಡು ಹೋಗುವಂತೆ ಗಂಡಿನ ಕಡೆಯವರನ್ನು ಆಹ್ವಾನಿಸುತ್ತಾರೆ. ಮೊದಲು ಹಿರಿಯರು ಹೋಗಿ ಹೆಣ್ಣನ್ನು ನೋಡಿಕೊಂಡು ಬಂದು ಒಪ್ಪಿಗೆಯಾದರೆ ಗಂಡನ್ನು ಕಳುಹಿಸಿಕೊಡುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಗಂಡು ಒಪ್ಪಿದ ಮೇಲೆ ತಾವು ಹೋಗಿ ಬರುತ್ತಾರೆ ಅಥವಾ ಗಂಡನ್ನು ತಮ್ಮ ಜೊತೆ ಕರೆದೊಯ್ಯುತ್ತಾರೆ. ಸಾಮಾನ್ಯವಾಗಿ ಹುಡುಗನ ಸಹಿತ ಐದು ಜನ ಹುಡುಗಿಯ ಮನೆಗೆ ಬರುತ್ತಾರೆ. ಹುಡುಗಿಯ ಕಡೆಯವರು ಆತ್ಮೀಯತೆಯಿಂದ ಅವರನ್ನು ಬರಮಾಡಿಕೊಳ್ಳುತ್ತಾರೆ. ಅವರನ್ನು ಕುಳ್ಳಿರಿಸಿ ತಿಂಡಿ-ತಿನಿಸು ಮತ್ತು ಪಾನೀಯಗಳನ್ನು ಕೊಡುತ್ತಾರೆ. ಸ್ವಲ್ಪ ಸಮಯದ ಬಳಿಕ ಹೆಣ್ಣು ವರನ ಕಡೆಯವರಿಗೆ ನಮಸ್ಕಾರ ಹೇಳಿ ಸಮೀಪದ ಆಸನದಲ್ಲಿ ಕುಳಿತುಕೊಳ್ಳುತ್ತಾಳೆ. ಗಂಡಿನ ಕಡೆಯವರು ಸಾಂಪ್ರದಾಯಿಕವಾಗಿ ಮಾತನಾಡಿಸುತ್ತ ಆಕೆಯ ನಡವಳಿಕೆಗಳನ್ನು ಗಮನಿಸುತ್ತಾರೆ. ಇತ್ತೀಚಿನ ದಿನಗಳಲ್ಲಿ ಗಂಡು-ಹೆಣ್ಣು ಪರಸ್ಪರ ಮಾತನಾಡಲು ಅವಕಾಶವಿದೆ. ನಂತರ ಆದಷ್ಟು ಬೇಗನೆ ನಮ್ಮ ಅಭಿಪ್ರಾಯಗಳನ್ನು ತಿಳಿಸುತ್ತೇವೆಂದು ಹೇಳಿ ಗಂಡಿನ ಕಡೆಯವರು ಹೊರಡುತ್ತಾರೆ.

ಆ) ಮನೆ ನೋಡುವ ಶಾಸ್ತ್ರ

ಗಂಡಿನ ಕಡೆಯವರಿಗೆ ಹೆಣ್ಣು ಒಪ್ಪಿಗೆಯಾದ ಮೇಲೆ, ಹೆಣ್ಣಿನ ಕಡೆಯವರನ್ನು ತಮ್ಮ ಮನೆಗೆ ಆಹ್ವಾನಿಸುತ್ತಾರೆ. ಹುಡುಗನ ಮನೆಯ ಸ್ಥಿತಿಗತಿ, ನಡೆ-ನುಡಿಗಳನ್ನು ಸೂಕ್ಷ್ಮವಾಗಿ ಗಮನಿಸುವುದು ಇದರ ಉದ್ದೇಶ. ನಿರ್ದಿಷ್ಟ ದಿನ ಹೆಣ್ಣಿನ ಮನೆಯವರು ಸಾಮಾನ್ಯವಾಗಿ ಒಂಬತ್ತು ಜನ ಕೆಲವೊಮ್ಮೆ ಹೆಚ್ಚು ಜನರು ಬರುತ್ತಾರೆ. ಗಂಡಿನ ಮನೆಯಲ್ಲಿ ವಿಶೇಷ ಉಟೋಪಚಾರ ನಡೆಯುತ್ತದೆ. ಹೆಣ್ಣಿನ ಕಡೆಯ ಹೆಂಗಸರು ಮನೆಯ ಒಳಹೊರಗನ್ನು ಗಮನಿಸಿ ಗಂಡಿನ ಮನೆಯ ಹೆಂಗಸರ ಗುಣ ಸ್ವಭಾವಗಳನ್ನು ತಿಳಿದುಕೊಳ್ಳುತ್ತಾರೆ.

ವರನ ಕಡೆಯ ಆದರಾತಿಥ್ಯವನ್ನು ವಧು ಕಡೆಯವರು ಮನಸಾರೆ ಹೊಗಳುತ್ತಾರೆ. ಇಂತಹ ಸಂಬಂಧ ದೊರೆತದ್ದು ನಮ್ಮ ಪುಣ್ಯ ಎಂದು ಪರಸ್ಪರ ಹೊಗಳಿಕೊಳ್ಳುತ್ತಾರೆ. ಮನೆ ನೋಡುವ ಶಾಸ್ತ್ರ ಮುಗಿದ ಮೇಲೆ ವಧು ಹಾಗು ವರನ ಕಡೆಯ ಕೆಲವು ಹಿರಿಯರು ಒಂದು ಕಡೆ ಕೂತು ವಧು-ವರರಿಗೆ ಕೊಡುವುದನ್ನು ತರುವುದನ್ನು ನಿರ್ಧರಿಸಿ ಒಪ್ಪಂದಕ್ಕೆ ಬರುತ್ತಾರೆ. ಎರಡು ಕಡೆಯವರಿಗೂ ಸಮಾಧಾನವಾದ ಮೇಲೆ ಪುರೋಹಿತರನ್ನು ಭೇಟಿಯಾಗಿ ವಿಳ್ಳೆಶಾಸ್ತ್ರ (ಒಪ್ಪುವೀಳ್ಯ) ಮತ್ತು ಲಗ್ನಪತ್ರಿಕೆ ಬರೆಸುವ ದಿನವನ್ನು ಗೊತ್ತುಪಡಿಸುತ್ತಾರೆ.

ಇ) ಒಪ್ಪು ವೀಳ್ಯ (ನಿಶ್ಚಿತಾರ್ಥ) ಶಾಸ್ತ್ರ

ಒಪ್ಪು ವೀಳ್ಯ ಶಾಸ್ತ್ರಕ್ಕೆ ಗಂಡಿನ ಕಡೆಯವರು ಹೆಣ್ಣಿನ ಮನೆಗೆ ಬರುತ್ತಾರೆ. ಮೊದಲು ಒಂಬತ್ತು ಅಥವಾ ಹನ್ನೊಂದು ಜನ ಮಾತ್ರ ಬರುತ್ತಿದ್ದರಿಂದ ಸಾಮಾನ್ಯವಾಗಿ ಮನೆಗಳಲ್ಲಿಯೇ ಈ ಕಾರ್ಯ ನಡೆಯುತ್ತಿತ್ತು. ಇತ್ತೀಚಿನ ದಿನಗಳಲ್ಲಿ ಅವರವರ ಸಾಮರ್ಥ್ಯಕ್ಕೆ ತಕ್ಕಂತೆ ಕೆಲವರು ಮನೆಗಳಲ್ಲಿ ಮತ್ತೆ ಕೆಲವರು ಕಲ್ಯಾಣ ಮಂಟಪ ಅಥವಾ ಹೋಟಲ್‌ಗಳಲ್ಲಿ ನಿಶ್ಚಿತಾರ್ಥ ಕಾರ್ಯ ಮಾಡುತ್ತಾರೆ. ಗಂಡಿನ ಕಡೆಯವರು ಅರಿಶಿನ, ಕುಂಕುಮ, ತಾಂಬೂಲ, ಎಲೆ, ಅಡಿಕೆ, ಬಾಳೆಹಣ್ಣು, ಹೂವು, ಸಿಹಿ ತಿಂಡಿ, ಹುರಿಗಡಲೆ, ಬೆಲ್ಲದಚ್ಚು, ಕೊಬ್ಬರಿ, ಬಳೆ, ಒಣ ಕರ್ಜೂರ, ಕಲ್ಲು ಸಕ್ಕರೆಗಳನ್ನು ಹಾಗು ಸೀರೆ, ರವಿಕೆ ಉಂಗುರಗಳನ್ನು ತಂದಿರುತ್ತಾರೆ. ನಿಗದಿತ ಸಮಯಕ್ಕೆ ಅಲಂಕಾರಳಾದ ವಧುವನ್ನು ಕುರ್ಚಿಯ ಮೇಲೆ ಕುಳ್ಳಿರಿಸಿ ಈ ಎಲ್ಲಾ ಪದಾರ್ಥಗಳನ್ನು ಅವಳ ಮುಂದೆ ಇಡುತ್ತಾರೆ. ವರನ ಕಡೆಯವರು ವಧುವಿನ ಕೆನ್ನೆಗೆ ಅರಿಶಿನ ಸವರಿ ಹಣೆಗೆ ಕುಂಕುಮವನ್ನಿಟ್ಟು, ಮುಡಿಗೆ ಹೂ ಮುಡಿಸುತ್ತಾರೆ. ನಂತರ ವಧುವಿನ ತೊಡೆಯ ಮೇಲೆ ಬಿಳಿ ವಸ್ತ್ರವನ್ನು ಹರಡಿ ಮಡಿಲು ತುಂಬುತ್ತಾರೆ. ಮೂರು ಅಥವಾ ಐದು ಜನ ಮುತ್ತೈದೆಯರು ವಧುವಿನ ಹಣೆಗೆ ಕುಂಕುಮವಿಟ್ಟು ಶುಭ ಹಾರೈಸುತ್ತಾರೆ.

ನಂತರ ವರನನ್ನು ಕರೆದು ವಧುವಿನ ಪಕ್ಕದಲ್ಲಿ ನಿಲ್ಲಿಸುತ್ತಾರೆ. ಪರಸ್ಪರ ಉಂಗುರಗಳನ್ನು ಹಾರವನ್ನು ಬದಲಾಯಿಸಿಕೊಳ್ಳುತ್ತಾರೆ. ಸಂಬಂಧಿಗಳೆಲ್ಲ ಬಂದು ಭಾವಚಿತ್ರ ತೆಗೆಸಿಕೊಳ್ಳುತ್ತಾರೆ.

ನಿಶ್ಚಿತಾರ್ಥದ ತರುವಾಯ ಸಿಹಿ ವಿತರಿಸುತ್ತಾರೆ. ಶುಭ ಸಮಾರಂಭದ ಸಂಭ್ರಮದಲ್ಲಿ ಹೆಣ್ಣಿನ ಕಡೆಯವರು ಸಿದ್ಧವಾಗಿದ್ದ ವಿಶೇಷ ಸಿಹಿ ಭೋಜನ ನೀಡಿ ಎಲ್ಲರನ್ನು ಸತ್ಕರಿಸುತ್ತಾರೆ.

ಈ) ಲಗ್ನ ಕಟ್ಟುವುದು

ನಿಶ್ಚಿತಾರ್ಥ ಕಾರ್ಯ ಮುಗಿದ ತರುವಾಯ ವಧು ಮತ್ತು ವರನ ಕಡೆಯ ಪ್ರಮುಖರು ಲಗ್ನದ ಮುಹೂರ್ತ ಗೊತ್ತುಪಡಿಸಲು ಪುರೋಹಿತರ ಬಳಿಗೆ ಹೊರಡುತ್ತಾರೆ. ಇದು ಎರಡು ಕುಟುಂಬದವರಿಗೆ ಒಂದು ಸಂಭ್ರಮ ತರುವ ಕ್ಷಣ. ಲಗ್ನಪತ್ರಿಕೆ ಬರೆಯಲು ಬೇಕಾದ ಪೂಜಾ ಸಾಮಾಗ್ರಿಗಳು ಹಾಗೂ ದಕ್ಷಿಣೆಯನ್ನಿಟ್ಟು ಶುಭ ದಿನದ ಶುಭ ಘಳಿಗೆಯಲ್ಲಿ ಲಗ್ನದ ನಿಶ್ಚಯ ಮಾಡುವಂತೆ ಕೇಳಿಕೊಳ್ಳುತ್ತಾರೆ.

ಪುರೋಹಿತರು ಎರಡು ಮೂರು ಒಳ್ಳೆಯ ಮುಹೂರ್ತಗಳನ್ನು ಗುರುತಿಸಿ ಹೇಳುತ್ತಾರೆ. ಎರಡು ಕಡೆಯವರಿಗೂ ಒಪ್ಪಿಗೆಯಾದ ದಿನವನ್ನು ನಿರ್ಧರಿಸಿ ಕುಲದೇವರ ಸ್ತುತಿಯೊಂದಿಗೆ ಎರಡು ಲಗ್ನಪತ್ರಿಕೆಗಳನ್ನು ಬರೆದು ಮುಗಿಸುತ್ತಾರೆ. ಲಗ್ನಪತ್ರಿಕೆಗಳನ್ನು ಓದಿ ಹೇಳುತ್ತಾರೆ. ವರನ ಹಾಗು ವಧುವಿನ ತಂದೆ ತಾಯಿಗಳು ಪರಸ್ಪರ ಲಗ್ನಪತ್ರಿಕೆ ಫಲ ತಾಂಬೂಲಗಳ ತಟ್ಟೆಗಳನ್ನು ಬದಲಾಯಿಸಿಕೊಳ್ಳುತ್ತಾರೆ.

ಲಗ್ನಪತ್ರಿಕೆ ಬರೆಸಿದ ದಿನದಿಂದ ವಿವಾಹ ಕಾರ್ಯ ಮುಗಿಯುವ ತನಕ ಎರಡು ಮನೆಗಳಲ್ಲಿ ಮಾಂಸಾಹಾರವನ್ನು ಮಾಡುವುದಿಲ್ಲ. ಹಾಗೆಯೇ ವಧು ಮತ್ತು ವರ ಮಾಂಸವನ್ನು ತಿನ್ನುವಂತಿಲ್ಲ. ಎರಡು ಕಡೆಯವರು ಲಗ್ನಪತ್ರಿಕೆಗಳನ್ನು ಸಂಬಂಧಿಕರಿಗೆ, ಸ್ನೇಹಿತರಿಗೆ ಹಂಚಿ ಮದುವೆಗೆ ಬರುವಂತೆ ಆಹ್ವಾನಿಸುತ್ತಾರೆ.

ಉ) ವಿವಾಹ ಪೂರ್ವ ಸಿದ್ಧತೆ

ವಿವಾಹ ಕಾರ್ಯ ಹತ್ತಿರವಾಗುತ್ತಿದ್ದಂತೆ ವಧು-ವರರ ಮನೆಗಳು ಸುಣ್ಣ, ಬಣ್ಣಗಳಿಂದ ಕಂಗೊಳಿಸುತ್ತವೆ. ಈಶಾನ್ಯ ದಿಕ್ಕಿಗೆ ಹೋಗಿರುವ ಬಸರಿ ಮರದ ಕೊನೆಯನ್ನು ಕಡಿದು ಹಾಕುತ್ತಾರೆ. ಗಂಡಸರು ಎಲ್ಲಾ ಸೌದೆಗಳನ್ನು ಒಡೆದು ಒಣಗಿಸುತ್ತಾರೆ. ಹೆಂಗಸರು ಅಕ್ಕಿ ಶುದ್ಧ ಮಾಡಿಕೊಳ್ಳುತ್ತಾರೆ, ಹಪ್ಪಳಗಳನ್ನು ತಯಾರಿಸುತ್ತಾರೆ. ಇಂತಹ ಸಂದರ್ಭಗಳಲ್ಲಿ ಹತ್ತಿರದ ಸಂಬಂಧಿಕರನ್ನು ಮನೆಮನೆಗೆ ಹೋಗಿ ಕರೆಯುತ್ತಾರೆ. ಗಂಡಿನ ಕಡೆಯವರು ಹೆಣ್ಣಿಗೆ ಸೀರೆ-ಆಭರಣಕೊಳ್ಳುವಾಗ ಮೊದಲೆಲ್ಲ ತಾವೇ ತಂದು ನಂತರ ಹೆಣ್ಣಿನ ಮನೆಯವರಿಗೆ ತೋರಿಸುತ್ತಿದ್ದರು. ಹೆಣ್ಣು ಒಪ್ಪದಿದ್ದರೆ ಬದಲಾಯಿಸಿಕೊಂಡು ಬರುತ್ತಿದ್ದರು. ಈಗ ಹೆಣ್ಣನ್ನು ಜೊತೆಯಲ್ಲಿಯೇ ಕರೆದುಕೊಂಡು ಹೋಗಿ ಕೊಡಿಸುತ್ತಾರೆ. ಗಂಡಿನ ವಿಚಾರದಲ್ಲಿ ಹೆಣ್ಣಿನ ಮನೆಯವರು ಕೂಡ ಇದನ್ನು ಅನುಸರಿಸಿಕೊಂಡು ಬಂದಿದ್ದಾರೆ.

ತಮ್ಮ ಹತ್ತಿರದ ಸಂಬಂಧಿಕರಿಗೂ ಹೊಸ ಬಟ್ಟೆ ತರುತ್ತಾರೆ. ಮದುವೆಗೆ ಬೇಕಾದ ಅಂಗಡಿ

ಸಾಮಾನು, ಮಡಿಕೆ, ಕುಡಿಕೆ, ಕುಕ್ಕೆ (ಬಿದರಿನ ಬುಟ್ಟಿ) ಗಳನ್ನು ಕೊಂಡು ತರುತ್ತಾರೆ. ಇಂತಹ ಪ್ರತಿಯೊಂದು ಕೆಲಸ ಕಾರ್ಯಗಳಲ್ಲಿಯು ಪರಸ್ಪರ ಭಾಗಿಯಾಗುವ ಸಹಕಾರ ಮನೋಭಾವನೆ ಪ್ರಶಂಸನಾರ್ಹವಾದುದು.

ಊ) ಚಪ್ಪರ ಪೂಜೆ ಅಥವಾ ದ್ಯಾವರೂಟ

ಚಪ್ಪರದ ದಿನ ಚಪ್ಪರ ಹಾಕುವುದು ಒಂದು ಕ್ರಮ ಎಂದು ತೋರಿಸಿಕೊಡುತ್ತಾರೆ. ಈಶಾನ್ಯ ದಿಕ್ಕಿನಲ್ಲಿ ತೆಗೆದ ಗುಂಡಿಗೆ ಬಿದಿರು ಮರ, ಬಸುರಿ ಮರ ಅಥವಾ ಅಡಿಕೆಮರದ ಕಂಬವೊಂದನ್ನು ನೆಟ್ಟು ಅದಕ್ಕೆ ವಧು-ವರರಿಂದ ಪೂಜೆ ಮಾಡಿಸುತ್ತಾರೆ. ನಂತರ ನಾಲ್ಕು ಅಥವಾ ಆರು ಅಥವಾ ಹನ್ನೆರಡು ಕಂಬಗಳ ಚಪ್ಪರವನ್ನು ಹಾಕುತ್ತಾರೆ. ಚಪ್ಪರದ ದಿನ ಮನೆಯ ಮುಂದೆ ಹಸಿರು ತೆಂಗಿನ ಗರಿಯ ಚಪ್ಪರವನ್ನು ಸುಂದರವಾಗಿ ನಿರ್ಮಿಸುತ್ತಾರೆ. ಮಾವಿನೆಲೆ, ಹೂವು, ಬಾಳೆಕಂಬ ಹಾಗು ಬಣ್ಣ ಬಣ್ಣದ ದೀಪಗಳಿಂದ ಅಲಂಕರಿಸುತ್ತಾರೆ. ವಧುವಿನ ಮನೆಯಲ್ಲಿಯೇ ಮದುವೆ ನಡೆಯುವ ಕಡೆ ವಿಶಾಲವಾದ ಚಪ್ಪರ ನಿರ್ಮಿಸಿದರೆ, ಕಲ್ಯಾಣ ಮಂಟಪಗಳಲ್ಲಿ ಮದುವೆ ಮಾಡುವವರು ಚಿಕ್ಕದಾದ ಚಪ್ಪರ ಹಾಕುತ್ತಾರೆ. ಯಾವಾಗಲು ವರನ ಮನೆಯ ಚಪ್ಪರ ಸಾಮಾನ್ಯವಾಗಿ ಚಿಕ್ಕದಾಗಿರುತ್ತದೆ. ಹಿರಿಯರು ಕೆಲಸ ಕಾರ್ಯಗಳನ್ನು ನಿರ್ದೇಶಿಸುತ್ತಿದ್ದರೆ, ಕಿರಿಯರು ಕಾರ್ಯ ನಿರ್ವಹಿಸುತ್ತಾರೆ. ಅಷ್ಟೊತ್ತಿಗಾಗಲೇ ಉಪ್ಪಿಟ್ಟು ಸಿದ್ಧವಾಗಿರುತ್ತದೆ. ಚಪ್ಪರ ಹಾಕಲು ಬಂದ ಪ್ರತಿಯೊಬ್ಬರು ಉಪ್ಪಿಟ್ಟು ತಿಂದು ಸಂಭ್ರಮಿಸಿ ಮುಂದಿನ ಕೆಲಸಕ್ಕೆ ಸಿದ್ಧರಾಗುತ್ತಾರೆ.

ಋ) ಶಾಸ್ತ್ರದ ನೀರು

ಚಪ್ಪರದ ದಿನ ಸಂಜೆ ವೇಳೆಗೆ ಸಂಬಂಧಿಕರ ಹಾಗು ಊರಿನ ಅಣ್ಣ ತಮ್ಮಂದಿರ ಮನೆಯವರೆಲ್ಲ ಬಹಳ ಸಂಭ್ರಮದಿಂದ ಈ ಕ್ಷಣಕ್ಕಾಗಿ ಕಾಯುತ್ತಿರುತ್ತಾರೆ. ಐದು ಜನ ಮುತ್ತೈದೆ ಹೆಂಗೆಸರು ಕರೆಗಡಿಗೆಗಳನ್ನು (ಮಣ್ಣಿನಿಂದ ತಯಾರಿಸಿದ ಕಪ್ಪು ಗಡಿಗೆಗಳು) ಹೊರಭಾಗದಲ್ಲಿ ಸುಣ್ಣದಿಂದ ಚಿತ್ತಾರ ಮಾಡಿಕೊಂಡು ಪೂಜಾ ಸಾಮಾಗ್ರಿಗಳನ್ನು ಸಿದ್ಧಮಾಡಿಕೊಂಡಿರುತ್ತಾರೆ. ಮದುವೆಯ ಮನೆಯ ಹೆಂಗಸರು ಊರಿನ ಪರಿಚಯಸ್ಥರ ಮನೆಗಳಿಗೆ ಹೋಗಿ ಈ ಶಾಸ್ತ್ರಕ್ಕೆ ಹೆಂಗಸರನ್ನು ಕರೆಯುತ್ತಾರೆ. ವಾದ್ಯಗೋಷ್ಠಿಯವರು ಸುಮಧುರವಾಗಿ ವಾದ್ಯಗಳನ್ನು ನುಡಿಸುತ್ತ ಮನೆಯ ಹೊರಗಿನ ಜಗಲಿಯ ಮೇಲೆ ಕುಳಿತಿರುತ್ತಾರೆ. ಮನೆಯೊಳಗಿನ ಒಳಕಲ್ಲಿಲನ ಬಳಿ ಭತ್ತ ಹಾಕಿ ಮುತ್ತೈದೆಯರು ಶಾಸ್ತ್ರದ ಭತ್ತವನ್ನು ಕಟ್ಟುತ್ತಾರೆ. ಈ ಭತ್ತದಿಂದ ಬರುವ ಅಕ್ಕಿಯನ್ನು ಮುಂದಿನ ಶಾಸ್ತ್ರಗಳಿಗೆ ಬಳಸಿಕೊಳ್ಳುತ್ತಾರೆ. ಅಲ್ಲಿ ನೆರೆದಿದ್ದ ಹೆಂಗಸರುಗಳಿಗೆಲ್ಲ ಅರಿಶಿನ ಕುಂಕುಮ, ಎಲೆ, ಅಡಿಕೆ ಮತ್ತು ಎಳ್ಳು, ಅಕ್ಕಿ, ಬಾಳೆಹಣ್ಣುಗಳನ್ನು ಕೊಡುತ್ತಾರೆ. ನಂತರ ಊರಿನ ಹೊರಭಾಗದ ಕೆರೆ, ಬಾವಿ, ಕಟ್ಟೆ ಯಾವುದರ ಬಳಿಗಾದರು ಹೋಗಿ ಗಂಗೆಯನ್ನು ಪೂಜೆ ಮಾಡಿಕೊಂಡು ಶಾಸ್ತ್ರದ ನೀರನ್ನು ತರುತ್ತಾರೆ. ಈ ನೀರನ್ನು ಅಡಿಗೆ ಮಾಡಲು ಬಳಸುತ್ತಾರೆ. ಸೋಬಾನೆ ಪದವನ್ನು ಹೇಳುವ ಹೆಂಗಸರು ಪ್ರಮುಖ ಆಕರ್ಷಣೆಯಾಗಿರುತ್ತಾರೆ. ಈ ಶಾಸ್ತ್ರ ವಧು-ವರರ ಮನೆಗಳೆರಡರಲ್ಲು ನಡೆಯುತ್ತದೆ.

ಋ) ಕ್ಷೌರದ ಶಾಸ್ತ್ರ

ವರನ ಮನೆಯ ಚಪ್ಪರದ ಅಡಿಯಲ್ಲಿ ಕ್ಷೌರಿಕನು ತನ್ನ ಸಲಕರಣೆಗಳನ್ನು ಸಿದ್ಧಪಡಿಸಿಕೊಂಡಿರುತ್ತಾನೆ. ವರನ ಮುಖಕ್ಷೌರವನ್ನು ಸುಸೂತ್ರವಾಗಿ ನೆರವೇರಿಸುತ್ತಾನೆ. ಹಣ್ಣು, ಕಾಯಿ, ಎಲೆ, ಅಡಿಕೆ ಮತ್ತು ಹಣವನ್ನು ವರನ ಮನೆಯವರು ಕ್ಷೌರಿಕನಿಗೆ ನೀಡಿ ಸತ್ಕರಿಸುತ್ತಾರೆ. ಈ ಶಾಸ್ತ್ರವನ್ನು ಪೂರೈಸಿಕೊಂಡ ಮೇಲೆ ವರನು ಸ್ನಾನ ಮಾಡಿಕೊಂಡು ಹೊಸ ವಸ್ತ್ರ ತೊಟ್ಟು, ಹೆಣ್ಣಿಗೆ ಕೊಡಲು ತಂದಿರುವ ಸೀರೆ ಹಾಗು ಒಡವೆಗಳನ್ನು ತಟ್ಟೆಯೊಂದರಲ್ಲಿಟ್ಟುಕೊಂಡು ದೇವಸ್ಥಾನಕ್ಕೆ ಹೊರಡುತ್ತಾನೆ. ಪೂಜಾಸಲಕರಣೆಗಳೊಂದಿಗೆ ಹತ್ತಿರದ ಸಂಬಂಧಿಕರೆಲ್ಲ ಊರಿನ ದೇವರುಗಳಿಗೆಲ್ಲ ಪೂಜೆ ಮಾಡಿಸಿಕೊಂಡು ಬರುತ್ತಾರೆ. ವಾದ್ಯಗೋಷ್ಠಿಯವರು ತಮ್ಮ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಾರೆ. ಗಂಡು ದೇವಸ್ಥಾನಕ್ಕೆ ಹೋಗಿ ಬಂದ ಕೂಡಲೇ ಸಾಮಾನ್ಯವಾಗಿ ಊರಿನ ರಂಗಸ್ಥಳದಲ್ಲಿ ಸಂಬಂಧಿಕರಿಗೆ ಹಾಗು ಊರಿನವರಿಗೆಲ್ಲ ಚಪ್ಪರದ ಊಟ ನಡೆಯುತ್ತದೆ. ಈ ದಿನ ಸಿಹಿ ಊಟದ ವ್ಯವಸ್ಥೆಯಿರುತ್ತದೆ. ಹೆಣ್ಣಿನ ಮನೆಯಲ್ಲಿ ಹತ್ತಿರದ ಸಂಬಂಧಿಕರಿಗೆ ಮಾತ್ರ ಚಪ್ಪರದೂಟವಿರುತ್ತದೆ. ಹಿರಿಯರ ಮುಂದಾಳತ್ವದಲ್ಲಿ ಕಿರಿಯರೆಲ್ಲ ತಮ್ಮ ತಮ್ಮ ಕಾರ್ಯಗಳನ್ನು ನಿರ್ವಹಿಸುತ್ತಾರೆ.

ಎ) ಬಳೆ ಶಾಸ್ತ್ರ

ಬಳೆಗಾರ ಅಥವಾ ಬಳೆಗಾರ್ತಿ ವಧುವಿನ ಮನೆಯ ನಡುಮನೆಯಲ್ಲಿ ಬಣ್ಣಬಣ್ಣದ, ವಿನ್ಯಾಸದಿಂದ ಕೂಡಿದ ಬಳೆಗಳೊಂದಿಗೆ ಹಾಜರಿರುತ್ತಾರೆ. ಹೆಣ್ಣಿಗೆ ಮುತ್ತೈದೆ ಸಂಕೇತವಾಗಿ ಬಳೆ ತೊಡಿಸುವ ಶಾಸ್ತ್ರ ನಡೆಯುವಾಗ ಕಪ್ಪು ಬಳೆಗಳನ್ನು ತೊಡಿಸುತ್ತಾರೆ. ಸಂಬಂಧಿಕರು ಕೂಡ ಬಳೆಗಳನ್ನು ತೊಡಿಸಿಕೊಳ್ಳುತ್ತಾರೆ. ಬಹಳ ಪ್ರೀತಿ ವಿಶ್ವಾಸಗಳಿಂದ ನೆರೆದಿದ್ದವರಿಗೆಲ್ಲ ಬಳೆ ತೊಡಿಸಿ ಸಂಭ್ರಮಿಸುತ್ತಾರೆ. ಬಳೆಗಾರ ಅಥವಾ ಬಳೆಗಾರ್ತಿಗೆ ಎಲೆ, ಅಡಿಕೆ, ಹಣ್ಣು, ಕಾಯಿ ಹಾಗು ಹಣವನ್ನು ಕೊಟ್ಟು ಸತ್ಕರಿಸುತ್ತಾರೆ.

ಏ) ಅರಿಶಿನ ಹಚ್ಚುವುದು

ವರನಿಗೆ ಹಾಗು ವಧುವಿಗೆ ಅರಿಶನ ಹಚ್ಚಲು ಬೇಕಾಗುವ ಸಾಮಗ್ರಿಗಳನ್ನು ಹಿರಿಯ ಮಹಿಳೆಯರು ಜೋಡಿಸಿರುತ್ತಾರೆ. ವರನು ಮಣೆಯನ್ನು ಮುಟ್ಟಿ ನಮಸ್ಕರಿಸಿ ಬಲಗಾಲಿನಿಂದ ದಾಟಿ ಸಂತೋಷವಾಗಿ ಕುಳಿತುಕೊಳ್ಳುತ್ತಾನೆ. ಅರಿಶಿನ ಬೆರೆಸಿದ ಹರಳೆಣ್ಣೆಯನ್ನು ತಲೆ, ಕೆನ್ನೆ ಮತ್ತು ಮೈಕೈಗೆಲ್ಲ ಅಕ್ಕರೆಯಿಂದ ಹಚ್ಚುವ ಅಕ್ಕ-ತಂಗಿಯರು ಗಂಡನ್ನು ಬಚ್ಚಲು ಮನೆಗೆ ಕರೆದುಕೊಂಡು ಹೋಗಿ ಐದು ಚೆಂಬು ನೀರನ್ನು ಉಯ್ಯುತ್ತಾರೆ. ಹೆಣ್ಣಿನ ಮನೆಯಲ್ಲಿಯು ಇದೇ ರೀತಿ ಅರಿಶಿನ ಹಚ್ಚುವ ಶಾಸ್ತ್ರ ನಡೆಯುತ್ತದೆ. ಅರಿಶಿನ ಹಚ್ಚುವಾಗ ಅಕ್ಕಿಯಲ್ಲಿ ಹಸೆ ಬರೆಯುವ ಹೆಂಗಸರ ಸಂಭ್ರಮ ಮುಗಿಲು ಮುಟ್ಟಿರುತ್ತದೆ. ಹಾಸ್ಯ ಚಟಾಕಿಗಳನ್ನು ಹಾರಿಸುತ್ತ ಭಾಗಿಯಾಗುತ್ತಾರೆ.

ಐ) ನೆರೆ ಹೊರಡುವುದು

ಚಪ್ಪರದ ರಾತ್ರಿ ಮಧ್ಯರಾತ್ರಿಯ ನಂತರ ಹೆಣ್ಣಿನ ಊರಿನ ದೂರವನ್ನು ಗಮನದಲ್ಲಿರಿಸಿಕೊಂಡು ಗಂಡನ್ನು ನೆರೆ ಹೊರಡಿಸುತ್ತಾರೆ. ಇದನ್ನು 'ದಿಬ್ಬಣ' ಎಂದು ಕೂಡ ಕರೆಯುತ್ತಾರೆ. 'ಗಂಡು ನೆರೆ ಹೊಂಟೈತೆ ಬಲ್ಲಿ' ಎಂದು ಊರಿನವರನ್ನೆಲ್ಲ ಕರೆಸಿದ ನಂತರ ಗಂಡಿನ ದಿಬ್ಬಣ ಹೊರಡುತ್ತದೆ. ಅಷ್ಟರಲ್ಲಿ ಬಿದಿರಿನ ಬಿಜಣಿಗೆ ಪೆಟ್ಟಿಗೆಯಲ್ಲಿ, ಧಾರೆಯ ಸಾಮಾನು ತುಂಬಿ ಸಿದ್ಧಪಡಿಸಿಕೊಂಡಿರುತ್ತಾರೆ. ಪೆಟ್ಟಿಗೆ ತುಂಬುವುದು ಬಹಳ ಮುಖ್ಯವಾದ ಕಾರ್ಯಕ್ರಮ. ಬಿದಿರಿನಿಂದ ಮಾಡಿದ ಪೆಟ್ಟಿಗೆಯೊಳಗೆ ೯ ಚಿಪ್ಪು ಬಾಳೆಹಣ್ಣು, ೯ ತೆಂಗಿನಕಾಯಿ, ೯ ಉಂಡೆ ತಂಬಿಟ್ಟು, ೯ ಹಿಡಿ ಅಡಿಕೆ, ೯ ಕಟ್ಟು ಎಲೆ ಮತ್ತು ಒಡವೆಗಳನ್ನಿಡುತ್ತಾರೆ. ಪೆಟ್ಟಿಗೆಯ ಮೇಲ್ಭಾಗದಲ್ಲಿ ಎಲ್ಲರಿಗೂ ಕಾಣುವ ಹಾಗೆ 'ಧಾರೆ ಸೀರೆ ಕುಪ್ಪಸ'ಗಳನ್ನಿಟ್ಟು ಬಾಳೆಪಟ್ಟೆಯಿಂದ ಕಟ್ಟುತ್ತಾರೆ. ಗಂಡಿನ ಅಕ್ಕ ಅಥವಾ ತಂಗಿ ಹೊರುವ ಈ ಪೆಟ್ಟಿಗೆಯ ಜೊತೆಯಲ್ಲಿ ಇನ್ನೊಂದು ತಟ್ಟೆಯಾಕಾರದ ಬಿದಿರುಬುಟ್ಟಿ ಹೆಡಿಗೆ ಇರುತ್ತದೆ. ಗಂಡಿನ ಅಕ್ಕ-ತಂಗಿಯರು ಪೆಟ್ಟಿಗೆ ಹೊರಲಾರದೆ ಒದ್ದಾಡುತ್ತಿದ್ದ ದೃಶ್ಯವನ್ನು ನೆನೆಸಿಕೊಂಡು, ಇಂದಿನ ಮದುವೆಗಳಲ್ಲಿ ಶಾಸ್ತ್ರ ಸಂಪ್ರದಾಯ ಕಡಿಮೆಯಾಗುತ್ತಿರುವುದಕ್ಕೆ ಹಿರಿಯರು ಬೇಸರ ವ್ಯಕ್ತಪಡಿಸುತ್ತಾರೆ.

ಗಂಡು ಹೊಸ ಬಟ್ಟೆಗಳನ್ನು ಧರಿಸುತ್ತಾನೆ. ಸಾಮಾನ್ಯವಾಗಿ ಬಿಳಿ ಅಂಗಿ, ಕಚ್ಚೆ ಪಂಚೆ, ತಲೆಗೆ ಪೇಟ, ಕರಿಕೋಟು ಮೇಲೊಂದು ಅಡ್ಡ ರುಮಾಲು, ಕೊರಳಿಗೆ ಹಾರ, ತಲೆಗೆ ಬಾಸಿಂಗ ಮತ್ತು ಕುಚ್ಚು, ಕಾಲುಗಳಿಗೆ ಮಿಂಚು, ದೇವಸ್ಥಾನದಲ್ಲಿ ಹಾಕುವ ತುಂಬಿದ ತಾಲಿಸರ ಇವನ್ನೆಲ್ಲಾ ಧರಿಸುತ್ತಾನೆ. "ಆಡ್ಲುದಮ್ಮ" ಇವನು ಗಂಡಿನ ಸಹಚರನಾಗಿ ಧಾರೆ ಮುಗಿಯುವವರೆಗೆ ಗಂಡಿನ ಜೊತೆಯಲ್ಲಿ ಇರುತ್ತಾನೆ. ಧಾರೆಯ ನಂತರವೂ ಒಂಟಿಯಾಗಿ ಗಂಡು ಓಡಾಡುವಂತಿಲ್ಲ. ಎಲ್ಲಿಗೆ ಹೋಗಬೇಕಾದರೂ ಜೊತೆಗಿರಬೇಕು. ಬಂಧು ಬಾಂಧವರೊಂದಿಗೆ ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿ, ಈಡುಗಾಯಿ ಹಾಕಿಸಿ, ಮೆರವಣಿಗೆ ಹೆಣ್ಣಿನೂರಿಗೆ ಪ್ರಯಾಣ ಬೆಳೆಸುತ್ತದೆ. ಹಿಂದೆ ಊರುಗಳಲ್ಲಿ ಹತ್ತಾರು ಎತ್ತಿನ ಗಾಡಿಗಳನ್ನು ಹೂಡಿ, ಎಲ್ಲರನ್ನೂ ತುಂಬಿಕೊಂಡು ವಿಜೃಂಭಣೆಯಿಂದ ದಿಬ್ಬಣ ಹೊರಡುತ್ತಿದ್ದರು. ಎಷ್ಟೋ ವೇಳೆ ಖುಷಿಗಾಗಿ ಒಂದು ಗಾಡಿಯನ್ನು ಹಿಂದೆ ಹಾಕಲು ಇನ್ನೊಂದು ಗಾಡಿಯ ಮುಂದೆ ನುಗ್ಗಿಸಿ ಚೌಕಳಿ ಹೊಡೆದು ಆನಂದಿಸುತ್ತಿದ್ದರು. ಈಗ ಸಾರಿಗೆ ವ್ಯವಸ್ಥೆ ಸುಧಾರಿತವಾಗಿ ಹಳ್ಳಿಗಳಿಗೂ ಮೋಟಾರು, ಕಾರುಗಳು ಬಂದಿರುವುದರಿಂದ ಈ ವೈಭವ, ವಿಜೃಂಭಣೆ, ಉತ್ಸಾಹ, ಉಲ್ಲಾಸಗಳ ಸಾಮುದಾಯಿಕ ಜನಪದ ಸಂಸ್ಕೃತಿಯ ಸಂತೋಷ ಆಧುನಿಕತೆಯ ಸೌಲಭ್ಯಗಳ ಹೆಸರಿನಲ್ಲಿ ಕಣ್ಮರೆಯಾಗುತ್ತಿದೆ ಎಂದು ಹಿರಿಯರು ಕೊರಗುತ್ತಾರೆ. ಹಿಂದೆ ಯಾರ ಮದುವೆಗೆ ಎಷ್ಟು ಗಾಡಿ ಹೊರಟಿದ್ದವು ಎಂಬುದರ ಲೆಕ್ಕಾಚಾರದ ಮೇಲೆ ಆ ಮದುವೆಯ ಸ್ಥಾನಮಾನ ನಿರ್ಧಾರವಾಗುತ್ತಿದ್ದುದುಂಟು. ಎಷ್ಟು ಹೆಚ್ಚು ಗಾಡಿ ಹೊರಡುತ್ತವೆಯೋ ಅಷ್ಟು ದೊಡ್ಡ ಮದುವೆ ಎನ್ನಿಸಿಕೊಳ್ಳುತ್ತಿದ್ದುದಲ್ಲದೆ ಅವರವರ ಘನತೆ ಗೌರವಗಳನ್ನೂ ಅದು ನಿರ್ಧರಿಸುತ್ತಿತ್ತು.

ಮರುದಿನ ಸೂರ್ಯೋದಯವಾಗುವಷ್ಟರಲ್ಲಿ ಗಂಡು ಹೆಣ್ಣಿನ ಊರಿಗೆ ಬಂದರೂ ಗಂಡಿನ ದಿಬ್ಬಣ ನೇರವಾಗಿ ಹೆಣ್ಣಿನ ಮನೆಗೆ ಹೋಗುವಂತಿಲ್ಲ. ಹೆಣ್ಣಿನ ಮನೆಯವರಿಗೆ ಗಂಡು ನೆರೆ ಬಂದ ಸುದ್ದಿಯನ್ನು ಕೊಂಬು ಕಹಳೆಗಳನ್ನು ಮೊಳಗಿಸುವುದರ ಮೂಲಕ ತಿಳಿಸಲಾಗುವುದು. ಗಂಡು ಈಗ ನಿಜವಾದ ಗಂಡಿನ ಠೀವಿಯನ್ನು ಮೆರೆಯುತ್ತಾನೆ. ಸರ್ವಾಲಂಕಾರಭೂಷಿತ ಗಂಡು ಕುದುರೆಯ ಮೇಲೆ ಕುಳಿತಿರುತ್ತಾನೆ. ಇದಕ್ಕಾಗಿಯೇ ಭಾರಿ ಕುದುರೆಯನ್ನು ಹುಡುಕಿ ತರುತ್ತಾರೆ. ಕುದುರೆಯ ಮೇಲೆ ಕುಳಿತ ಗಂಡಿಗೆ ದೇವರ ಮೆರವಣಿಗೆಯಲ್ಲಿ ದೇವರಿಗೆ ಹಿಡಿಯುವ ಛತ್ರಿಯನ್ನು ಹಿಡಿಯುತ್ತಾರೆ. ಗಂಡಿನ ಕೈಯಲ್ಲಿ ಲೋಹದಿಂದ ಮಾಡಿದ ಹೂವಿನಿಂದ ಅಲಂಕೃತವಾದ ಕಠಾರಿ ಇರುತ್ತದೆ. ಮುಂದೆ ವಾಲಗದವರು, ಪಕ್ಕದಲ್ಲಿ ಅಡ್ಲುದಮ್ಮ, ಅಕ್ಕಪಕ್ಕ ಪೆಟ್ಟಿಗೆ ಹೊತ್ತ ಅಕ್ಕತಂಗಿಯರು, ಬುಜ್ಜಣಿಗೆ ಹಿಡಿದವರು, ಕಳಶ ಹಿಡಿದ ಮುತ್ತೈದೆಯರು ಸಂಭ್ರಮದಿಂದ ನಿಂತಿರುವ ಬಂಧುಗಳು, ಸ್ನೇಹಿತರು, ಊರವರು ಸಾಲುಗಟ್ಟಿ ಗುಂಪುಗುಂಪಗಿ ಸಾಗುವ ನೆರೆಯ ದೃಶ್ಯ ನೋಡುವವರ ಕಣ್ಣಿಗೆ ಚಿತ್ತಾಕರ್ಷಕವಾಗಿದ್ದು ಆ ಊರಿನ ದೇವಸ್ಥಾನಕ್ಕೆ ಹೋಗಿ ಹಣ್ಣುಕಾಯಿ ಮಾಡಿಸಿ, ಇಡುಗಾಯಿ ಹೊಡೆಸಿ, ಹೆಣ್ಣಿನ ಮನೆಯ ಕಡೆ ಸವಾರಿ ನಿಧಾನವಾಗಿ ಮುಂದುವರಿಯುತ್ತದೆ. ಹೀಗೆ ಗಂಡು ನೆರೆಬರುವ ಹಿನ್ನೆಲೆಯನ್ನು ಗಮನಿಸಿ ಕತ್ತಿ, ಕಠಾರಿ, ಛತ್ರಿ, ಕುದುರೆ ಇವೆಲ್ಲ ಕುಲದ ವೀರತ್ವದ ಸಂಕೇತ ಎನ್ನುತ್ತಾರೆ. ಅಂದರೆ ಹೆಣ್ಣಿನ ಮನ ಜಯಿಸಿ ವಿಜಯದಿಂದ ಆಕೆಯ ಕೈಹಿಡಿಯುವುದು ಎಂದರ್ಥ. ಈಗ 'ವರ' ಕುದುರೆಯ ಮೇಲೆ ಬರುವುದಿಲ್ಲ. ಅಂಥ ದೃಶ್ಯಗಳು ಈಗ ಕಾಣಸಿಗುತ್ತಿಲ್ಲ.

ಒ) ನದಿರು

ವರನ ದಿಬ್ಬಣ ತಮ್ಮ ಮನೆಯ ಕಡೆ ಬರುತ್ತಿದೆಯೆಂದು ಗೊತ್ತಾಗುತ್ತಲೇ ಹೆಣ್ಣಿನ ಕಡೆಯವರು ಅವರನ್ನು ಸ್ವಾಗತಿಸಿ ಕರೆತರಲು ಸಿದ್ಧತೆ ಮಾಡಿಕೊಳ್ಳುತ್ತಾರೆ. ಕಳಸವಿಡಿದ ಮುತ್ತೈದೆಯರು ಗಂಡಿಗೆ ನೀಡುವ ಒಡವೆ ವಸ್ತ್ರಗಳನ್ನು ತಟ್ಟೆಯೊಂದರಲ್ಲಿಟ್ಟುಕೊಂಡು ವಾಲಗ ಸಮೇತ ವರನನ್ನು, ವರನ ಕಡೆಯವರನ್ನು ಇದಿರುಗೊಂಡು ಸ್ವಾಗತಿಸಿ ಕರೆತರಲು ಹೊರಡುತ್ತಾರೆ. ಛತ್ರಿಯೊಂದನ್ನು ಬಿಡಿಸಿ ಹಿಡಿದು ಅದರ ಮೇಲೆ ದೊಡ್ಡ ಶಾಲೊಂದನ್ನು ಹೊದಿಸಿ ನಾಲ್ಕು ಮೂಲೆಯಲ್ಲಿ ನಾಲ್ಕು ಜನ ಹಿಡಿದುಕೊಂಡು ದಿಬ್ಬಣವನ್ನು ಎದುರುಗೊಳ್ಳುತ್ತಾರೆ. ವರನಿಗೆ ಆರತಿ ಬೆಳಗಿ ಕುದುರೆಯಿಂದಿಳಿಸಿ ಹಣೆಗೆ ಆರತಿ ಬೊಟ್ಟು ಇಡುತ್ತಾರೆ. ಹೆಣ್ಣಿನ ಕಡೆಯವರು ಗಂಡಿಗೆ ಹೂಮಾಲೆ ಹಾಕುತ್ತಾರೆ. ಕೆನ್ನೆಗೆ ಅರಿಶಿಣ ಲೇಪಿಸುತ್ತಾರೆ. ಬೀಗರು ಪರಸ್ಪರ ಹೀಗೆ ಅರಿಶಿಣ ಹಚ್ಚಿಕೊಳ್ಳುವುದು ಉಂಟು. ಹಾಗೆ ಮಾಡುವಾಗ ತಲೆಗೆ ಪೇಟ ಸುತ್ತಿಕೊಳ್ಳುತ್ತಾರೆ. ಮುತ್ತೈದೆಯರು ಕಳಸದಾರತಿ ಬೆಳಗುತ್ತಾರೆ. ಹಿಂದಿನ ದಿನ ಕುಟ್ಟಿದ ಶಾಸ್ತ್ರದ ಅಕ್ಷತೆ ಕಾಳನ್ನು ಗಂಡಿನ ತಲೆಯ ಮೇಲೆ ಬೀಳುವಂತೆ ಹಾಕುತ್ತಾರೆ. ಈ ಶಾಸ್ತ್ರ ಮುಗಿದ ತಕ್ಷಣ ಎರಡೂ ಕಡೆಯವರು ತಂತಮ್ಮ ಛತ್ರಿಗಳನ್ನು ಪರಸ್ಪರ ತಾಗಿಸಿ ಮಡಿಸುತ್ತಾರೆ. ಇದನ್ನೇ ಕಾಯುತ್ತಿದ್ದ ನೆರೆದವರೆಲ್ಲರೂ ಸಂಭ್ರಮದಿಂದ ಅಕ್ಷತೆಯನ್ನು ಎರಡೂ

ಛತ್ರಿಗಳು ಸಂಧಿಸುವ ಜಾಗಕ್ಕೆ ಎಸೆಯುತ್ತಾರೆ. ಕೊನೆಗೆ ಎರಡೂ ಕಡೆಯವರು ಒಂದಾಗಿ ಹೆಣ್ಣಿನ ಮನೆಗೆ ಬರುತ್ತಾರೆ.

ಓ) ಧಾರೆ ಶಾಸ್ತ್ರ (ಮುಹೂರ್ತ)

ಮದುವೆಯ ಬಹುಮುಖ್ಯವಾದ ಪವಿತ್ರ ಕಾರ್ಯ ಧಾರೆಶಾಸ್ತ್ರ. ಈ ಶುಭ ಲಗ್ನದ ಸಂದರ್ಭಕ್ಕಾಗಿಯೇ ವಧು-ವರ-ಬಂಧು ಬಳಗವಷ್ಟೆ ಅಲ್ಲ ನೆರೆದವರೆಲ್ಲರೂ ಕಾಯುತ್ತಿರುತ್ತಾರೆ. ಜೋಯಿಸರು, ಜಂಗಮರು ಪೌರೋಹಿತ್ಯ ವಹಿಸಿ ನಡೆಸಿಕೊಡುವುದು. ಸಾಮಾನ್ಯವಾಗಿ ಧಾರೆಶಾಸ್ತ್ರ ಚಪ್ಪರದ ಹಟ್ಟಿಯಲ್ಲೇ ನಡೆಯುತ್ತದೆ. ಇದಕ್ಕಾಗಿಯೇ ಚಪ್ಪರದ ನಡುವೆ 'ಧಾರೆಮಂಟಪ'ವನ್ನು ನಿರ್ಮಿಸಿರುತ್ತಾರೆ. ಧಾರೆ ಮಂಟಪದ ಮಧ್ಯಭಾಗದಲ್ಲಿ ಗಂಡಿಗೊಂದು, ಹೆಣ್ಣಿಗೊಂದು ಹಸೆಮಣೆಯನ್ನು ಎದುರುಬದಿರಾಗಿ ಹಾಕಿರುತ್ತಾರೆ. ಧಾರೆಗೆ ಅಗತ್ಯವಾದ ಸಾಮಗ್ರಿಗಳನ್ನು ಪುರೋಹಿತರಿಗೊದಗಿಸಿರುತ್ತಾರೆ. ಪುರೋಹಿತರ ಮಂತ್ರಘೋಷ ಮತ್ತು ವಾದ್ಯಗಾರರ ಗಟ್ಟಿಮೇಳಗಳ ಮಧುರ ನಿನಾದಗಳೊಡನೆ ಮನೆಯೊಳಗಿದ್ದ ಮದುಮಗನನ್ನು ಚಪ್ಪರದಟ್ಟಿಗೆ (ಧಾರೆಮಂಟಪಕ್ಕೆ) ಕರೆದುಕೊಂಡು ಬಂದು ಹಸೆಮಣೆಯ ಮೇಲೆ ಪೂರ್ವ ದಿಕ್ಕಿಗೆ ಮುಖಮಾಡಿ ನಿಲ್ಲಿಸುತ್ತಾರೆ. ಗಂಡಿನೆದುರಿಗೆ ಅಗಸ ತಂದ ಮಡಿಬಟ್ಟೆಯನ್ನು ಅಡ್ಡವಾಗಿ 'ತೆರೆ' ಹಿಡಿಯುತ್ತಾರೆ. ತವರು ಮನೆಯವರು ತಂದ ಧಾರೆ ಸೀರೆ ಕುಪ್ಪಸಗಳನ್ನು ತವರಿಗೆ ಒಡವೆಗಳ ಜೊತೆಗೆ ಗಂಡಿನ ಮನೆಯವರು ತಂದ ಒಡವೆಗಳನ್ನು ತೊಟ್ಟು ಸರ್ವಾಲಂಕೃತಭೂಷಿತಳಾದ ಹೆಣ್ಣನ್ನು ಸೋದರಮಾವ ಕೈಹಿಡಿದು ಧಾರೆಮಂಟಪಕ್ಕೆ ಕರೆತರುತ್ತಾನೆ. ಹಿಂದೆ ಕುಕ್ಕೆಯಲ್ಲಿ ಹೆಣ್ಣನ್ನು ಕೂರಿಸಿಕೊಂಡು ಸೋದರಮಾವ ಹೊತ್ತುಕೊಂಡು ಚಪ್ಪರದ ಹಟ್ಟಿಗೆ ಕರೆತರುತ್ತಿದ್ದನೆಂದು ಹೇಳುತ್ತಾರೆ. ಸೋದರಮಾವ ವಧುವನ್ನು ಕೈಹಿಡಿದು ವರನ ಸುತ್ತ ಮೂರು ಸುತ್ತು ಪ್ರದಕ್ಷಿಣೆ ಹಾಕಿಸಿ ಮದುವಣಗಿತ್ತಿಯನ್ನು ಹಸೆಮಣೆಯ ಮೇಲೆ ಗಂಡಿಗೆ ಎದುರಾಗಿ ಪಶ್ಚಿಮ ಮುಖಿಯಾಗಿ ನಿಲ್ಲಿಸುತ್ತಾನೆ. ಹೀಗೆ ಗಂಡು ಪೂರ್ವ ದಿಕ್ಕಿಗೆ ಮುಖಮಾಡಿ ಹೆಣ್ಣು ಪಶ್ಚಿಮ ದಿಕ್ಕಿಗೆ ಮುಖಮಾಡಿ ಎದುರುಬದರು ನಿಲ್ಲುತ್ತಾರೆ. ನಡುವೆ 'ತೆರೆ' ಅಡ್ಡಲಾಗಿರುತ್ತದೆ. ಬಳಗಧಾರೆಯಲ್ಲಾದರೆ ಕುಲದ ಹಿರಿಯರ; ಇಲ್ಲವಾದರೆ ಪುರೋಹಿತನ ನಿರ್ದೇಶನದಂತೆ ಗಂಡು ಹೆಣ್ಣುಗಳು ಪರಸ್ಪರ ಮೂರು ಸಲ ಜೀರಿಗೆ ಅಕ್ಷತೆಗಳನ್ನು ತಲೆಯಮೇಲೆ ಹಾಕುತ್ತಾರೆ. ಅನಂತರ ತೆರೆಯನ್ನು ತೆಗೆಯುತ್ತಾರೆ. ಮಾಂಗಲ್ಯದ ಜೊತೆಗೆ ಹಾಲು ತುಪ್ಪದಿಂದ ತುಂಬಿದ ಚೆಂಬನ್ನು ಹಿರಿಯರಿಂದ ಮುಟ್ಟಿಸಿ ಮೊದಲು ತಂದೆತಾಯಿಯರು ಧಾರೆ ಎರೆಯುತ್ತಾರೆ. ಇದು ಕುಲದ ಸರ್ವರ ಒಪ್ಪಿಗೆಯಿಂದ ಆಗುವ ಕೆಲಸವೆಂಬ ನಂಬಿಕೆ ಹಾಗೂ ಹಿರಿಯರ ಆಶೀರ್ವಾದ ವಧು-ವರರಿಗಿರಲಿ ಎಂಬ ಹಾರೈಕೆಯ ಜನಪದ ಆಶಯ ಈ ಆಚರಣೆಯಲ್ಲಿ ಅಡಗಿದೆ. ಗಂಡು-ಹೆಣ್ಣುಗಳ ಕೈಗಳನ್ನು ಒಂದರ ಮೇಲೊಂದರಂತೆ ಜೋಡಿಸಿ, ವೀಳ್ಯ, ತೆಂಗಿನಕಾಯಿ, ಬಾಳೆಹಣ್ಣು ಹಿಡಿದು ಧಾರೆ ಎರೆಸಿಕೊಳ್ಳಲು ವಧು-ವರರು ಸಿದ್ಧರಾಗಿ ನಿಂತಿರುತ್ತಾರೆ. ಪಕ್ಕದಲ್ಲಿಯೇ ಹಾಲು ತುಪ್ಪದ ಕೊಳಗ ಸಿದ್ಧವಾಗಿರುತ್ತದೆ. ಮೊದಲಿಗೆ ಹೆಣ್ಣಿನ ತಂದೆತಾಯಿಗಳು, ಗಂಡಿನ ತಂದೆತಾಯಿಗಳು, ಒಡಹುಟ್ಟಿದವರು ಧಾರೆ ಎರೆದ

ಮೇಲೆ ಉಳಿದವರೆಲ್ಲ ಧಾರೆ ಎರೆಯುತ್ತಾರೆ. ಬಂಧು-ಬಳಗ, ನೆಂಟರಿಷ್ಟರೆಲ್ಲ ಧಾರೆ ಮಂಟಪಕ್ಕೆ ಬಂದು ಪಾವಲಿ ರೂಪಾಯಿ ನಾಣ್ಯಗಳನ್ನು ಮದುಮಕ್ಕಳ ವೀಳ್ಯದ ಮೇಲಿಕ್ಕಿ, ಧಾರೆ ಎರೆದು, ಅಕ್ಷತೆ ಹಾಕಿ, ಮದುಮಕ್ಕಳ ತಲೆ ಮುಟ್ಟಿ ಕಿರಿಯರು ನಮಸ್ಕರಿಸುತ್ತಾರೆ. ಹಿರಿಯರು ಆಶೀರ್ವದಿಸುತ್ತಾರೆ. ಧಾರೆ ಎರೆವಾಗ ಎರೆಯುವವರು ತಲೆಗೆ 'ವಲ್ಲಿ' ಸುತ್ತಿಕೊಳ್ಳುತ್ತಾರೆ.

ಮಾಂಗಲ್ಯ ಕಟ್ಟಿಸುವುದು ಧಾರೆ ಎರೆದಮೇಲೆ. ಮಾಂಗಲ್ಯ ಕಟ್ಟಿಸುವ ಮುನ್ನ ಪುರೋಹಿತರು ಕೆಲವು ಶಾಸ್ತ್ರಗಳನ್ನು ಹೆಣ್ಣು-ಗಂಡಿನಿಂದ ಮಾಡಿಸುತ್ತಾರೆ. ಧಾರೆ ನೀರು, ಅಕ್ಕಿ ತುಂಬಿದ ಬೋಗುಣಿಯಲ್ಲಿ ಉಂಗುರವೊಂದನ್ನು ಹಾಕಿ ಹೆಣ್ಣು-ಗಂಡನ್ನು ಹುಡುಕಲು ಹೇಳುತ್ತಾರೆ. ಅಕ್ಕಪಕ್ಕದವರು ಇಬ್ಬರಿಗೂ ಉತ್ಸಾಹ ತುಂಬುತ್ತಾರೆ. ನಂತರದಲ್ಲಿ ಹೆಣ್ಣು ಗಂಡಿನ ಸುತ್ತ ಅರಿಶಿಣ ಹಚ್ಚಿದ ನೂಲನ್ನು ಸುತ್ತಿ ನಿಂತವರ ಕೈಯಲ್ಲಿಟ್ಟು ಸುತ್ತುತ್ತಾರೆ. ಇದನ್ನು ದೈವರಕ್ಷಣೆಯ ಸಂಕೇತವೆನ್ನುತ್ತಾರೆ. ಜೊತೆಗೆ ಹೆಣ್ಣು ಗಂಡುಗಳು ಪರಸ್ಪರ ಕಂಕಣ ಮುಟ್ಟುವಂತೆ ಹೇಳುತ್ತಾರೆ. ವೀಳ್ಯೇದೆಲೆ ಅಡಿಕೆ ಅರಿಶಿಣ ಕೊಂಬುಗಳನ್ನು ಒಟ್ಟಿಗೆ ಕೂಡಿಸಿ ಕಟ್ಟಿ ತಯಾರು ಮಾಡುವುದೇ ಕಂಕಣ. ಕೆಲವು ಕಡೆ ಮದುವೆಗೆ ಮೊದಲು ಕಂಕಣ ಬಲ ಕೂಡಿ ಬರುತ್ತದೆಯೋ ಇಲ್ಲವೋ ನೋಡಿ ಹೇಳಿ ಎಂದು ಪುರೋಹಿತರನ್ನು ಕೇಳುವುದುಂಟು. ಪುರೋಹಿತರ ಶಾಸ್ತ್ರಗಳ ನಂತರ ಶುಭ ಮುಹೂರ್ತ ಶುಭ ಲಗ್ನದಲ್ಲಿ ಮಾಂಗಲ್ಯ ಧಾರಣೆಯನ್ನು ಗಂಡಿನ ಕೈಯಲ್ಲಿ ಮಾಡಿಸುತ್ತಾರೆ. ಅರಿಶಿಣ ಹಚ್ಚಿದ ದಾರದಿಂದ ಬಂಧಿಸಲ್ಪಟ್ಟ ತಾಳಿಯನ್ನು ಎಲ್ಲರ ಸಮಕ್ಷಮದಲ್ಲಿ ಆಶೀರ್ವಾದದೊಡನೆ ಗಂಡು ಹೆಣ್ಣಿನ ಕೊರಳಲ್ಲಿ ಮೂರು ಗಂಟೆ ಹಾಕಿ (ಬ್ರಹ್ಮಗಂಟು) ಕಟ್ಟುತ್ತಾನೆ. ಇದು ಬಿಚ್ಚಿಕೊಳ್ಳದ ಬಾಂಧವ್ಯದ ಸಂಕೇತ ಎನ್ನುತ್ತಾರೆ. ತಾಳಿಯಲ್ಲಿ ಎರಡು ರೀತಿ. ಒಂದು ಜಾಗಟೆ ತಾಲಿ, ಇನ್ನೊಂದು ಬಾಸಿಂಗ ತಾಲಿ. ಇದಕ್ಕೆ ಕಾರಣ ತಮ್ಮ ದೇವರು ನಡೆದು ಬಂದಿದ್ದು ಎಂದು ತಾವು ಬಳಸುವ ತಾಳಿಯ ರೂಪವನ್ನು ಕುರಿತು ಹೇಳುತ್ತಾರೆ. ವಾದ್ಯಗಳ ಏರುದನಿ, ಸಂಬಂಧಿಕರ ಸಂಭ್ರಮ ಉತ್ಸಾಹಗಳ ಮಧ್ಯೆ ಮಾಂಗಲ್ಯ ಧಾರಣೆ ಮುಗಿಯುತ್ತದೆ. ಪುರೋಹಿತರು ಹೆಣ್ಣು ಗಂಡುಗಳ ಸೆರಗನ್ನು ಗಂಟುಹಾಕುತ್ತಾರೆ. ಇಲ್ಲಿ ಮೇಲ್ವರ್ಗಗಳಲ್ಲಿರುವಂತೆ ಅಗ್ನಿ ಪ್ರದಕ್ಷಿಣೆ ಸಪ್ತಪದಿಗಳು ಇಲ್ಲವೆನ್ನುವುದನ್ನು ಗಮನಿಸಬೇಕು. ಬ್ರಾಹ್ಮಣರಿಗೂ ಶೂದ್ರರಿಗೂ ಮದುವೆ ಆಚಾರಗಳಲ್ಲಿರುವ ಮುಖ್ಯ ವ್ಯತ್ಯಾಸಗಳಲ್ಲಿ ಇದೂ ಒಂದು. ಗಂಗಡಿಕಾರ ಒಕ್ಕಲಿಗರಲ್ಲಿ ಹಿಂದೆ ಬಳಗಧಾರೆಯಲ್ಲಿ ಪುರೋಹಿತನ ಪ್ರವೇಶವಿರುತ್ತಿರಲಿಲ್ಲ. ಮದುವೆಯ ಮುಹೂರ್ತದ ದಿನ ಚೆಂಬಿನಲ್ಲಿ ಹಾಲುತುಪ್ಪ ಮಾಂಗಲ್ಯವಿಟ್ಟು, ಬಂದ ಹಿರಿಯರು ಅದನ್ನು ಮುಟ್ಟಿ ಆಶೀರ್ವದಿಸಿ, ಹಿರಿಯರೊಬ್ಬರ ನೇತೃತ್ವದಲ್ಲಿ ತಾಲಿಯನ್ನು ಗಂಡಿನ ಕೈಯಿಂದ ಹೆಣ್ಣಿನ ಕುತ್ತಿಗೆಗೆ ಕಟ್ಟಿಸುತ್ತಿದ್ದರಂತೆ! ಈಗಿನ ವ್ಯವಸ್ಥೆಯನ್ನು ನೋಡಿದಾಗ ಧಾರೆ ಮುಹೂರ್ತದ ಪೂರ್ವಭಾಗ ಹಿಂದಿನ ಬಳಗಧಾರೆ ಶಾಸ್ತ್ರದ ಪಳೆಯುಳಿಕೆಯಂತೆಯೇ ಗೋಚರಿಸುತ್ತದೆ. ಮುಂದಿನದು ಆನಂತರದಲ್ಲಿ ಪುರೋಹಿತರ ಪ್ರವೇಶದಿಂದ ಸಂಸ್ಕೃತೀಕರಣಗೊಂಡಿರುವುದು ಸ್ಪಷ್ಟವಾಗಿಯೇ ಕಾಣುತ್ತದೆ. ಮಾಂಗಲ್ಯ ಧಾರಣೆ

ಮುಗಿದ ನಂತರದಲ್ಲಿ ಬಂದವರಿಗೆಲ್ಲಾ ಊಟದ ವ್ಯವಸ್ಥೆಯಿರುತ್ತದೆ. ವಿಶೇಷ ಬಗೆಯ ಸಿಹಿ ಅಡಿಗೆ ಮಾಡಿ ಬಡಿಸುತ್ತಾರೆ. ಎಲ್ಲರಿಗೂ ಫಲತಾಂಬೂಲದ ವಿತರಣೆ ಮಾಡುತ್ತಾರೆ.

ಔ) ಸೂರ್ಯನನ್ನು ತೋರಿಸುವುದು

ಬಂಧುಗಳ ಮತ್ತು ಅತಿಥಿ ಅಭ್ಯಾಗತರ ಊಟೋಪಚಾರ ಮುಗಿದ ನಂತರದಲ್ಲಿ ಮತ್ತೆ ಶಾಸ್ತ್ರಗಳು ಪ್ರಾರಂಭವಾಗುತ್ತವೆ. ಗಂಡು ಮತ್ತು ಹೆಣ್ಣನ್ನು ಜೋಯಿಸರು ಮದುವೆ ಮನೆಯಿಂದ ಹೊರಕ್ಕೆ ಕರೆದುಕೊಂಡು ಒಂದು ಸೂರ್ಯನಿಗೆ ಎದುರಾಗಿ ನಿಲ್ಲಿಸುತ್ತಾರೆ. ಗಂಡು-ಹೆಣ್ಣಿನ ಶಲ್ಯ ಮತ್ತು ಸೆರಗಿನ ತುದಿಯನ್ನು ಅದುವರೆಗೆ ಗಂಟು ಹಾಕಿರುತ್ತಾರೆ. ಈಗ ಅದನ್ನು ಬಿಚ್ಚಿಸಿ ಸೂರ್ಯನಿಗೆ ಪೂಜೆ ಮಾಡಿಸಿ, ಸೂರ್ಯನ ಕಂಡ್ಯಾ, ಚಂದ್ರನ ಕಂಡ್ಯಾ, ಮುತ್ತಿನಂತ ಗಂಡನ್ ಕಂಡ್ಯಾ ಎಂದು ಹೆಣ್ಣನ್ನು ಜೋಯಿಸರು ಪ್ರಶ್ನಿಸಿ ಅವರಿಂದ ಹೌದು ಎಂಬ ಉತ್ತರ ಪಡೆಯುತ್ತಾರೆ. ಆನಂತರದಲ್ಲಿ ಜೋಯಿಸರು ನವ ವಧೂವರರನ್ನು ಒಳಗೆ ಕರೆದುಕೊಂಡು ಹೋಗುತ್ತಾರೆ. ಇದನ್ನು ಅರುಂಧತಿ ನಕ್ಷತ್ರ ನೋಡುವುದು ಎಂದು ಕೂಡ ಕರೆಯುತ್ತಾರೆ. ಬಹುಶಃ ಇದು ಗಂಗಡಿಕಾರ ಒಕ್ಕಲಿಗರ ಮದುವೆಯಲ್ಲಿ ಇತ್ತೀಚೆಗೆ ಸೇರ್ಪಡೆಯಾಗಿರುವ ಒಂದು ಶಾಸ್ತ್ರ ಆಗಿರುವ ಸಾಧ್ಯತೆ ಇದೆ. ಸಂಸ್ಕೃತೀಕರಣದ ಪ್ರಭಾವ ಶೂದ್ರ ಸಮುದಾಯದ ಮೇಲೆ ಉಂಟಾಗಿರುವುದನ್ನು ಇಲ್ಲಿ ಗಮನಿಸಬಹುದು.

ಅಂ) ಫಲಪೂಜೆ

ಗಂಡು ಹೆಣ್ಣುಗಳನ್ನು ಧಾರೆಮಂಟಪಕ್ಕೆ ಮತ್ತೆ ಕರೆದುಕೊಂಡು ಬಂದು ಅವರನ್ನು ಹಸೆಮಣೆಯ ಮೇಲೆ ಕೂರಿಸಿ ಶಾಸ್ತ್ರ ಪ್ರಾರಂಭಿಸುತ್ತಾರೆ. ಐದು ಬಾಳೆ ಎಲೆ, ಅದರ ಮೇಲೆ ಅಕ್ಕಿ, ಅದರ ಮೇಲೆ ಐದು ಎಳನೀರು, ಜೊತೆಗೆ ತೆಂಗಿನಕಾಯಿ ಬಾಳೆಹಣ್ಣು, ಎಲೆ ಅಡಿಕೆ ಇಟ್ಟು ಪೂಜೆ ಮಾಡಿಸುತ್ತಾರೆ. ಒಂದು ತಟ್ಟೆಯಲ್ಲಿ ಫಲತಾಂಬೂಲವನ್ನಿಟ್ಟು ವಧೂವರರ ಕೈಯಲ್ಲಿ ಮುಟ್ಟಿಸಿ ಜೋಯಿಸರಿಗೆ ಕೊಡುತ್ತಾರೆ. ಬಹುಶಃ ಇದು 'ಫಲವಂತಿಕೆ'ಯ ಆಶಯವನ್ನು ಅಭಿವ್ಯಕ್ತಿಸುವ ಅಚರಣೆಯಾಗಿರಬಹುದು.

ಅಃ) ತೆರಕಟ್ಟುವುದು

ಇದನ್ನು ಮುಯ್ಯಿ ಮಾಡುವುದು ಎಂದೂ ಹೆಸರಿಸುತ್ತಾರೆ. ಗಂಡು ಹೆಣ್ಣುಗಳನ್ನು ಕೂರಿಸಿ, ಇಬ್ಬರು ಹಿರಿಯರು ಅವರ ಪರವಾಗಿ ತೆರಕಟ್ಟುತ್ತಾರೆ. ಮೊದಲು ಗಂಡಿಗಿಷ್ಟು ಹೆಣ್ಣಿಗಿಷ್ಟು ಎಂದು ಹಣವನ್ನು ಕಟ್ಟುತ್ತಾರೆ. ತೆರ ಹಾಕುವ ಯಾರೇ ಆಗಲಿ ಈ ಸಂದರ್ಭದಲ್ಲಿ ಬಂದು, ಗಂಡು ಮತ್ತು ಹೆಣ್ಣಿಗೆ ಮುಯ್ಯಿ ಹಾಕಬಹುದು. ಕೆಲವು ಕಡೆ ಅಕ್ಷರ ಬಲ್ಲವರು ಯಾರು ಎಷ್ಟು ಹಣ ಮುಯ್ಯಿ ಹಾಕಿದರು ಯಾವ ವಸ್ತುಗಳನ್ನು ಹಾಕಿದರು ಎಂದು ಬರೆದು ಪಟ್ಟಿ ಮಾಡಿಕೊಳ್ಳುತ್ತಾರೆ. ಯಾಕೆಂದರೆ ಹೀಗೆ ತೆರೆ ಕಟ್ಟಿದವರ ಮನೆಯಲ್ಲಿ ಮದುವೆ ಕಾರ್ಯ ನಡೆದರೆ, ಈಗ

ಪಡೆದುಕೊಂಡವರು ಆಗ 'ಮುಯ್ಯಿ' ಮಾಡಿ ತೀರಿಸಬೇಕು. ಬಹುಶಃ ಈ ಅರ್ಥದಲ್ಲಿಯೇ 'ಮುಯ್ಯಿ' ಬಳಕೆಗೆ ಬಂದಿರಬಹುದು. ಈ ರೀತಿ ತೆರದ "೩೨ ಹಣದಲ್ಲಿ ೧೨ ಹಣವನ್ನು, ಕುಲ, ಬಳಗ, ಮಠಕ್ಕೆ ಇಷ್ಟಿಷ್ಟು ಅಂತ ಕೋಡೋರು, ಕೋಲಹಣ, ದೇವ್ರಹಣ, ಮಠದ ಹಣ, ಗುರುಹಣ ಅಂತಾ ಗೌಡ್ಗೋಲು ತೆಗೆಯೋರು, ಮಿಕ್ಕಿದ್ದ ಹೆಣ್ಣಿಗೆ ಕೊಡೋರು" ಎಂದು ವಕ್ತೃವೊಬ್ಬರು ಹಿಂದೆ ಇದ್ದ 'ತೆರ'ದ ವ್ಯವಸ್ಥೆಯನ್ನು ಕುರಿತು ಹೇಳಿದರು.

ಕ) ಕೆರೊಳ್ಳ ಶಾಸ್ತ್ರ

ಗಂಡು ಹೆಣ್ಣನ್ನು ವಾಲಗ ಸಮೇತ ಮೆರವಣಿಗೆ ಮಾಡಿಕೊಂಡು (ಹಗಲು ಮೆರವಣಿಗೆ), 'ಗಂಗಾಸ್ಥಾನ' (ಸ್ಥಳ)ಕ್ಕೆ. ಅದು ಕೆರೆ, ಭಾವಿಕಟ್ಟೆ, ಹೊಳೆಯಾಗಿರಬಹುದು. ಸಾಮಾನ್ಯ ಇಂಥ ಸ್ಥಳದಲ್ಲಿ ಅರಳಿಮರ ಮತ್ತು ಬೇವಿನ ಮರ ಇದ್ದು ಆ ಮರದ ಕೆಳಗೆ ಚಾಪೆ ಹಾಕಿ ತೆವಟಿಗೆ ಮಣೆ ಕಳಸ ಇನ್ನಿತರ ಪೂಜಾ ಸಾಮಗ್ರಿಯನ್ನಿಡುತ್ತಾರೆ. ಗಂಡಿನ ಕೈಯಲ್ಲಿ ಹೆಣ್ಣಿನ ಕಂಕಣವನ್ನು, ಹೆಣ್ಣಿನ ಕೈಯಲ್ಲಿ ಗಂಡಿನ ಕಂಕಣವನ್ನು ಬಿಚ್ಚಿಸುತ್ತಾರೆ. ಪರಸ್ಪರ ಸೇಸೆ ಹಾಕಿ (ಅಕ್ಕಿ ಇಕ್ಕಿಸಿ)ಸುತ್ತಾರೆ. ಮುತ್ತೈದೆಯರು ಇದೇ ರೀತಿ ಮಾಡಿ ವೀಳ್ಯದೆಲೆ ಕೊಡುತ್ತಾರೆ. ಗಂಡಿನಿಂದ ಹೆಣ್ಣಿನ ಹೆಸರನ್ನು, ಹೆಣ್ಣಿನಿಂದ ಗಂಡಿನ ಹೆಸರನ್ನು ಹೇಳಿಸುತ್ತಾರೆ.

ಖ) ಚಂಚಿ ಕಟ್ಟುವುದು

ಮನೆಗೆ ಗಂಡು ಹೆಣ್ಣು ಬಂದ ನಂತರ ಬುವ್ವಶಾಸ್ತ್ರ ಮಾಡುತ್ತಾರೆ. ಮೂರು ಬಾರಿ ಭುವ್ವ ಶಾಸ್ತ್ರ ಮಾಡುತ್ತಾರೆ. ಬುವ್ವಶಾಸ್ತ್ರ ಎಂದರೆ, ಗಂಡು ಹೆಣ್ಣು ಪರಸ್ಪರರು ಬಾಳೆಹಣ್ಣು, ತುಪ್ಪ, ತಂಬಿಟ್ಟನ್ನು ಕಲಸಿ ಅದನ್ನು ಒಬ್ಬರು ಮತ್ತೊಬ್ಬರಿಗೆ ತಿನ್ನಿಸುವ ಒಂದು ಶಾಸ್ತ್ರ. ಅದಾದ ಮೇಲೆ ಚಂಚಿ ಕಟ್ಟುವ ಕೆಲಸ ನಡೆಯುತ್ತದೆ. ಚಂಚಿ (ಸಂಚಿ) ಒಂದು ಕಟ್ಟು ಎಲೆ, ಒಂದು ಪಾವು ಅಡಿಕೆ, ನಾಕಾಣೆ ಪಾವಲಿ ಒಂದು ಬಟ್ಟೆಗೆ ಹಾಕಿ ಅದನ್ನು ಗಂಡಿಗೆ ಕೊಡುತ್ತಾರೆ. ಹೆಣ್ಣಿಗೆ ಮಡಲಕ್ಕಿ ಹೂದು, (ಹಿಂದಿನ ದಿನ ಕುಟ್ಟಿದ ಶಾಸ್ತ್ರದ ಭತ್ತದಿಂದ) ಹೆಣ್ಣನ್ನು ಗಂಡಿನ ಮನೆಗೆ ಕಳುಹಿಸಲು ಸಿದ್ಧತೆ ಮಾಡುತ್ತಾರೆ.

ಗ) ಹೆಣ್ಣುಕಳಿಸೋ ಶಾಸ್ತ್ರ

ಹೆಣ್ಣಿನ ಮನೆಯಲ್ಲಿ ನಡೆಯುವ ಧಾರೆ ದಿನದ ಕಡೆಯಶಾಸ್ತ್ರ. ಹೆಣ್ಣನ್ನು ಕಳಿಸುವ ಮುನ್ನ ಮನೆಯೊಳಗಿರುವವರೆಲ್ಲಾ ಒಬ್ಬರೂ ಇಲ್ಲದಂತೆ ಹೊರಬರುತ್ತಾರೆ. ತಲೆಬಾಗಿಲ ಬಳಿ ಮನೆಯ ಒಳಭಾಗದಲ್ಲಿ ಕಂಚಿನ (ಗಂಗಳ) ತಟ್ಟೆ ಇಟ್ಟು ಬಾಗಿಲಿನಿಂದ ಹೊರಗೆ ನಿಂತ ಹೆಣ್ಣು ಗಂಡುಗಳು. ಅದರ ಮೇಲೆ ಬೊಗಸೆಯಲ್ಲಿ ತುಂಬಿಕೊಂಡ ಭತ್ತವನ್ನು ಎರಚುತ್ತಾರೆ. ಹೆಣ್ಣು ಮಗಳು "ನಮ್ಮಪ್ಪನ ಮನೆ ಹಾಲುಕ್ಕಿದಂತೆ ಉಕ್ಕಲಿ" ಎಂದು ಹೇಳುತ್ತಾ ಎರಚಿದರೆ, ಗಂಡು "ನಮ್ಮ ಮಾವನ ಮನೆ ಹಾಲುಕ್ಕಿದಂಗೆ ಉಕ್ಕಲಿ" ಎಂದು ಎರಚುತ್ತಾನೆ.

ಇನ್ನು ಮುಂದೆ, ಹೆಣ್ಣು ತನ್ನ ತವರನ್ನು ಬಿಟ್ಟು ಗಂಡನ ಮನೆಗೆ ಹೊರಡುತ್ತಾಳೆ. ಇಡೀ ಊರಿನ

ಸಮಸ್ತರು, ಬಂಧು ಬಾಂಧವರೆಲ್ಲರೂ ಈ ಸಂದರ್ಭದಲ್ಲಿ ಸೇರಿರುತ್ತಾರೆ. ತವರಿನವರಿಗೆ ಮಗಳನ್ನು ಕಳಿಸಿಕೊಡಲು ಸಂಕಟ. ಮಗಳಿಗೆ ಇದುವರೆವಿಗೆ ಹುಟ್ಟಿ ಆಡಿ ಬೆಳೆದ ಮನೆಯನ್ನು ಬಿಡಲಾರದ ಸಂಕಟ. ಇಂಥದೊಂದು ಸನ್ನಿವೇಶ ಅಲ್ಲಿ ನಿರ್ಮಾಣವಾಗುತ್ತದೆ. ಹೆಣ್ಣು ಗಂಡುಗಳು ಅಲ್ಲಿರುವ ಹಿರಿಯರ ಕಾಲಿಗೆ ನಮಸ್ಕರಿಸಿ ಆಶೀರ್ವಾದ ಪಡೆಯುತ್ತಾರೆ. ಹೆಣ್ಣಿನ ಕಡೆಯವರು ಅಂದರೆ ಚಿಕ್ಕಪ್ಪ ಅಥವಾ ದೊಡ್ಡಪ್ಪ ಹೆಣ್ಣಿನ ಕೈಹಿಡಿದು ಗಂಡಿನ ಕಡೆಯವರಿಗೆ ಒಪ್ಪಿಸುತ್ತಾ ಇನ್ನು ಮೇಲೆ ನಮ್ಮ ಮಗಳಲ್ಲ ನಿಮ್ಮ ಮಗಳು ಎನ್ನುತ್ತಾರೆ. ಗಂಡಿನ ಕಡೆಯವರು ಅದೇ ರೀತಿ ಹೆಣ್ಣಿನ ಕಡೆಯವರಿಗೆ ಗಂಡಿನ ಕೈಹಿಡಿದು ಕೊಡುತ್ತಾ 'ನಮ್ಮ ಮಗನಲ್ಲ ನಿಮ್ಮ ಮಗ' ಎಂದು ಒಪ್ಪಿಸುತ್ತಾರೆ. ಗಂಡು ಹೆಣ್ಣು ಅಪ್ಪುದಮ್ಮ ಅಪ್ಪುದಂಗಿಯರು ಬಂಧುಗಳು, ಗಂಡಿನ ಊರಿಗೆ ಪ್ರಯಾಣ ಬೆಳೆಸುತ್ತಾರೆ.

ಫ) ಗಂಡಿನ ಊರಿನಲ್ಲಿ :

ಮದುವೆಯಾಗಿ ಹೆಣ್ಣಿನೊಡನೆ ಬಂದ ಗಂಡಿಗೆ ಆವರೂರಿನಲ್ಲಿ ಮೆರವಣಿಗೆ ನಡೆಯುತ್ತದೆ. ಕೆಲವೆಡೆ, ಗಂಡು ಹೆಣ್ಣು ನಡೆದುಕೊಂಡೇ ಹೋದರೆ, ಕೆಲವು ಕಡೆ ಅಲಂಕರಿಸಿದ ಎತ್ತಿನಗಾಡಿಯ ಮೇಲೆ ಮೆರವಣಿಗೆ ಮಾಡುತ್ತಾರೆ. ಊರಿನ ಜನ ಮಡ್ಲಕ್ಕಿ ಕೊಟ್ಟು, ಆರತಿ ಎತ್ತಿ ಸ್ವಾಗತಿಸುತ್ತಾರೆ. ಗಂಡು ಹೆಣ್ಣುಗಳು ದೇವಸ್ಥಾನಕ್ಕೆ ಹೋಗಿ ಪೂಜೆ ಮುಗಿಸಿ ಗಂಡಿನ ಮನೆ ಬಾಗಿಲಿಗೆ ಬಂದು ನಿಲ್ಲುತ್ತಾರೆ.

ಚ) ಬಾಗಿಲು ತಡೆಯೋ ಶಾಸ್ತ್ರ :

ನವ ವಿವಾಹಿತ ದಂಪತಿಗಳನ್ನು, ನೇರವಾಗಿ ಮನೆಯೊಳಗೆ ಬಿಡದೆ ಗಂಡಿನ ಅಕ್ಕ ತಂಗಿಯರು ಬಾಗಿಲು ತಡೆಯುತ್ತಾರೆ. ಗಂಡು, "ಬಾಗಿಲು ಬಿಡು ಬಾಗಿಲು ಬಿಡು" ಎಂದು ಅಂಗಲಾಚಿದರೆ, ಅಕ್ಕ (ತಂಗಿ) ಬಿಡೋದಿಲ್ಲ ಎನ್ನುತ್ತಾಳೆ. "ಕುದುರೇ ಕೊಡುತೀನಿ, ಕುರಿ, ಹಸು, ಕೊಡ್ತೀನಿ ಬಾಗಿಲು ಬಿಡು" ಅಂದ್ರೆ "ಬಿಡೋದಿಲ್ಲ" ಎನ್ನುತ್ತಾಳೆ. 'ಏನ್ ಬೇಕು ಕೇಳು ಎಂದಾಗ 'ನಿನಗೆ ಹುಟ್ಟೊ ಮಗಳನ್ನು ನನ್ ಮಗನಿಗೆ ಕೊಡು ಅಂತಾಳೆ ಅದಕ್ಕೆ ಗಂಡು 'ಆಯ್ತು' ಎಂದರೆ ಆಕೆ 'ಅತ್ತಿಗೆ ಒಪ್ಗೆ ಕೊಡ್ಲಿ' ಅಂತಾಳೆ. ಆಗ ಹೆಣ್ಣು ನಾಚಿ ಆಯ್ತು ಎನ್ನುತ್ತಾಳೆ. ಹೀಗೆ ಒಪ್ಪಿಗೆ ಪಡೆದು ಒಳಬಿಡುತ್ತಾರೆ. ಇದೇ ಸಂದರ್ಭದಲ್ಲಿ ಗಂಡಿಗೆ ಉಳೋ ಹಗ್ಗ ಮೇಣಿ ಕೊಟ್ಟು, ಹೊಲ ಉತ್ಕೊಂಡು ಹೋಗು ಎಂದು ಹೇಳಿ ಹೆಣ್ಣಿನ ಕೈಗೆ 'ಸಡ್ಡೆ' ಕೊಟ್ಟು ಭತ್ತ (ಬೀಜ) ಬಿತ್ಕೊಂಡು ಹೋಗು ಎನ್ನುತ್ತಾರೆ. ಹೆಣ್ಣು ಗಂಡುಗಳು ಹಾಗೇ ಮಾಡುತ್ತವೆ. ಉತ್ಕೊಂಡೋಗೋದು ಬಿತ್ಕೊಂಡೋಗೋದು ಕೃಷಿಪರವಾದ ಅವರ ನಂಬಿಕೆಗಳನ್ನು ತಿಳಿಸುತ್ತವೆ. ಹಾಗೆಯೇ ಫಲವಂತಿಕೆಯ ಸಂಕೇತವನ್ನೂ ಬಿಂಬಿಸುತ್ತವೆ. ಅಲ್ಲದೆ ತಂದ ಭತ್ತವನ್ನು ಹೆಣ್ಣು ಮಾವನ ಮನೆಯೊಳಗೆಲ್ಲ ಚೆಲ್ಲಿ "ನಮ್ಮ ಮಾವನ ಮನೆ ಹಾಲುಕ್ಕಿದಂಗೆ ಉಕ್ಕಲಿ" ಎಂದು ಆಶಯ ವ್ಯಕ್ತಪಡಿಸುತ್ತಾಳೆ. ಉಳಿದ, ಬಿತ್ತಿದ್ದ ಭತ್ತವನ್ನು ಊರ ಮಡಿವಾಳಿ ತೆಗೆದುಕೊಂಡು ಹೋಗುತ್ತಾಳೆ.

ಛ) ಮಡಕೆಗೆ ಕೈ ಹಾಕುವುದು :

ಮನೆ ಒಳಗೆಬಂದ ಹೆಣ್ಣು ಗಂಡುಗಳಿಗೆ ಮತ್ತೊಂದು ಶಾಸ್ತ್ರವನ್ನು ಮಾಡುತ್ತಾರೆ. ಒಂದು ಮಡಕೆಯಲ್ಲಿ, ಉಂಗುರ, ಗರಿಕೆ, ಗೊಬ್ಬರ (ಬೆರಣಿ) ತುಂಬಿ, ಹೆಣ್ಣು ಗಂಡುಗಳ ಕೈ ಹಾಕಿಸುತ್ತಾರೆ. ಗಂಡು ಹೆಣ್ಣುಗಳು ಯಾವ ವಸ್ತುವನ್ನು ಹಿಡಿದಿರುತ್ತಾರೋ ಅದಕ್ಕನುಗುಣವಾಗಿ ಅದರ ವಿಶೇಷತೆಯನ್ನು ಹೇಳುತ್ತಾರೆ.

ಗೊಬ್ಬರ (ಬೆರಣಿ) ಸಿಕ್ಕಿದರೆ–ಒಳ್ಳೆಯ ರೈತನಾಗುತ್ತಾನೆ. ಚಿಕ್ಕ ಸಿಕ್ಕಿದರೆ–ಹೊನ್ನಿನ ಕುಳವಾಗುತ್ತಾನೆ. ಗರಿಕೆ ಸಿಕ್ಕಿದರೆ – ಒಳ್ಳೆ ಫಸಲು ದೊರಕುತ್ತದೆ ಎಂದು ನಂಬುತ್ತಾರೆ. ಅಥವಾ ಅವನಿಗೆ ಹೊನ್ನು ನಿನಗೆ ಮಣ್ಣು ಎಂದು ಇದನ್ನು ತಮಾಷೆಯಾಗಿಯೂ ತೆಗೆದುಕೊಳ್ಳುತ್ತಾರೆ. ಹೀಗೆ ಅಂದಿನ ದಿನದ ಶಾಸ್ತ್ರಗಳೆಲ್ಲ ಮುಗಿದು ಹೋಗುತ್ತದೆ.

ಜ) ಬೀಗರೂಟ

ಮದುವೆಯ ಮುಖ್ಯ ದಿನದ (ಮುಹೂರ್ತದ) ಕಾರ್ಯಗಳು ಹೆಣ್ಣಿನ ಮನೆಯಲ್ಲಿಯೇ ನಡೆಯುತ್ತವೆ. ಅಂದು ಗಂಡಿನ ಕಡೆಯ ನೆಂಟರಿಷ್ಟರಿಗೆಲ್ಲಾ ಊಟೋಪಚಾರಗಳು ಸಾಂಗವಾಗಿ ನೆರವೇರಿರುತ್ತವೆ. ಇದೆಲ್ಲಾ ಹೆಣ್ಣಿನ ಕಡೆಯವರು ಗಂಡಿನ ಕಡೆಯವರಿಗೆ ಮಾಡಿದ ಆದರೋಪಚಾರಗಳಾಗಿರುತ್ತವೆ. ಇದೇ ರೀತಿ ಮದುವೆ ಮುಗಿದು ಹೆಣ್ಣನ್ನು ಗಂಡಿನ ಮನೆಗೆ ಕಳಿಸುವ ಮುನ್ನ ಗಂಡಿನ ಕಡೆ ಹಿರಿಯರು ಹೆಣ್ಣಿನ ಕಡೆಯ ತಂದೆ ಮತ್ತು ಬಂಧುಗಳನ್ನು 'ಹೆಣ್ ಕರಿಯಾಕೆ ಯಾವತ್ ಬತ್ತೀರಿ' ಎಂದು ಕೇಳುತ್ತಾರೆ. ಎರಡೂ ಕಡೆಯವರೂ ಚರ್ಚಿಸಿ, ಒಪ್ಪಿತವಾದ ಒಂದು ದಿನವನ್ನು ಅದಕ್ಕಾಗಿ ಗೊತ್ತುಪಡಿಸಿಕೊಳ್ಳುತ್ತಾರೆ. ಅಷ್ಟೇ ಅಲ್ಲದೆ 'ಅವತ್ತು ಎಷ್ಟು ಜನ ಬತ್ತೀರಿ' ಎಂದು ಕೇಳಿ ತಿಳಿದುಕೊಳ್ಳುತ್ತಾರೆ. ಅವರು ಹೀಗೆ ಪ್ರಶ್ನಿಸುವಲ್ಲಿ ಬರುವಷ್ಟು ಜನಕ್ಕೆ ಕೊರತೆಯಿಲ್ಲದ ಹಾಗೆ ಊಟೋಪಚಾರಗಳನ್ನು ಸಿದ್ಧಗೊಳಿಸಬೇಕೆಂದು ಕಳಕಳಿ ಇರುತ್ತದೆ. ಇಷ್ಟು ಜನ ಬರ್ತೀವಿ ಎಂದು ಹೆಣ್ಣಿನವರು ಸಂಖ್ಯೆ ಹೇಳಿದರೆ 'ಇನ್ನೂ ಹೆಚ್ಚಿಗೇನೆ ಬನ್ನಿ ಚಿಂತಿಲ್ಲ' ಎಂದು ಆಹ್ವಾನಿಸುತ್ತಾರೆ. ಸಾಮಾನ್ಯವಾಗಿ ಶನಿವಾರ, ಸೋಮವಾರಗಳನ್ನುಳಿದು (ಇತ್ತೀಚೆಗೆ ಗುರುವಾರ ಕೂಡ ಈ ಪಟ್ಟಿಗೆ ಸೇರಿದೆ) ಬೇರೆ ದಿನಗಳನ್ನು ಗುರುತು ಮಾಡುತ್ತಾರೆ. ಹೀಗಾಗಿ ಹೆಣ್ಣು ಕರೆಯಲು ಹೋಗುವ ದಿನ ಯಾವುದು ಎಂದು ಅಂದೇ ನಿರ್ಧಾರವಾಗಿ ಬಿಡುತ್ತದೆ.

ನೆರವಿ, ಕರನೆರೆ, ಬೀಗರೂಟ, ಹೆಣ್ ಕರೆಯೋ ಶಾಸ್ತ್ರ., ಮುಂತಾದ ಹೆಸರುಗಳಿಂದ ಹೆಣ್ಣು ಕರೆಯಲು ಹೋಗುವ ಈ ದಿನವನ್ನು ಗುರುತಿಸುತ್ತಾರೆ. ಈ ದಿನ ಗಂಡಿನ ಮನೆಯಲ್ಲಿ ವಿಶೇಷ ಊಟದ ಸಿದ್ಧತೆಗಳು ನಡೆಯುತ್ತವೆ. ಧಾರೆ ಮುಹೂರ್ತದ ದಿನ ಹೆಣ್ಣಿನ ಮನೆಯಲ್ಲಿ ಸಿಹಿ ಊಟವಾದರೆ ಇಂದು ಬೀಗರೂಟದ ದಿನ ಗಂಡಿನ ಮನೆಯಲ್ಲಿ 'ಖಾರದೂಟ' ಹೆಚ್ಚುಗಟ್ಲೆ. ಬೀಗರೂಟ ಎಂದರೆ 'ಕೋಳಿ, ಕುರಿ ಬೀಳುವ ದಿನ.' ಅವರವರ ಅಂತಸ್ತಿಗನುಗುಣವಾಗಿ ಅಂದು

ಕುರಿಕೋಳಿಗಳನ್ನು ಕೊಯ್ಯುತ್ತಾರೆ. ಮೊದಲು ಮಣಗಟ್ಲೆ ಈಗ ಕ್ವಿಂಟಾಲ್ ಗಟ್ಲೆ ಬಾಡು ಬೇಯಿಸುವ ಕೆಲಸವನ್ನು ಮಾಡುತ್ತಾರೆ. ಅದಕ್ಕೆಂದೇ ಕುರಿ, ಆಡುಗಳನ್ನು ಮೊದಲೇ ಮನೆಯಲ್ಲಿ ಸಾಕಿ, ದಷ್ಟಪುಷ್ಟವಾಗಿ ಬೆಳಸಿರುತ್ತಾರೆ. ಅಥವಾ ಸಂತೆಗಳಿಗೆ ಹೋಗಿಕೊಂಡು ತರುತ್ತಾರೆ. ದೊನ್ನೆ, ಎಲೆ, ಮಸಾಲು ಸಾಮಾನುಗಳನ್ನು ತರುತ್ತಾರೆ.

ಹೆಣ್ಣನ್ನು ಕರೆಯಲು ತಂದೆ, ತಾಯಿ, ಆಯ್ದ ಮತ್ತು ಆಪ್ತರಾದ ಬಂಧು ಬಳಗದವರು, ಊರವರು ಗಂಡಿನ ಊರಿಗೆ ಆಗಮಿಸುತ್ತಾರೆ. ಹೆಣ್ಣಿನ ಮನೆಯಿಂದ ಬರುವ ಮುತ್ತೈದೆಯರು ಬಾಯಿ ಕಟ್ಟಿದ ಹೆಡಿಗೆಯನ್ನು ಹೊತ್ತು ಬರುತ್ತಾರೆ. ಹೀಗೆ ಬಂದವರು ನೇರವಾಗಿ ಬೀಗರ ಮನೆಗೆ ಬರುವುದಿಲ್ಲ ಬದಲಾಗಿ ಆ ಊರಿನ ಗುಡಿಗೆ ಹೋಗಿ ಊರ ದೇವರಿಗೆ ಇಡುಗಾಯಿ ಒಡೆದು ಪೂಜೆ ಮಾಡಿದ ನಂತರ ಬೀಗರ ಮನೆಯನ್ನು ಪ್ರವೇಶಿಸುತ್ತಾರೆ. ಬಂದ ಅತಿಥಿಗಳನ್ನು ಗಂಡಿನವರು ಈಗ ಬಂದ್ರಾ ಬನ್ನಿ ಎಂದು ವಿಶ್ವಾಸದಿಂದ ಬರಮಾಡಿಕೊಳ್ಳುತ್ತಾರೆ. ಬಂದವರಲ್ಲಿ ಗಂಡಸರೆಲ್ಲ ಜಗಲಿ, ಅಡಿಗೆ ಅಟ್ಟೀಲಿ, ಕುಂತು ನಿಂತು ಮಾತಾಡಿದರೆ, ಹೆಂಗಸರು ನಡುಮನೆಯಲ್ಲಿ ಕುಳಿತುಕೊಳ್ಳುತ್ತಾರೆ. ವಿಶೇಷವಾಗಿ ಬೀಗರನ್ನೇ ಆಹ್ವಾನಿಸಿ ಅವರ ಬಂಧು ಬಳಗದವರಿಗೆಂದೇ ಊಟವನ್ನು ಸಿದ್ಧಗೊಳಿಸಿ, ಬಡಿಸಿ, ತೃಪ್ತಿಪಡಿಸಿ ಕಳುಹಿಸುವುದರಿಂದ ಈ ಕಾರ್ಯಕ್ರಮಕ್ಕೆ 'ಬೀಗರೂಟ' ಎಂದು ಹೆಸರಿಸಿರುವುದು ಅರ್ಥಪೂರ್ಣವೆಂದೇ ಹೇಳಬೇಕು. 'ಕರೆನೆರೆ' ಎಂಬ ಇನ್ನೊಂದು ಹೆಸರು ಕರೆಯಲು ಬಂದ ಸಮೂಹ ಎನ್ನೋದು ಕೂಡ ಈ ಸಂದರ್ಭಕ್ಕೆ ಹೊಂದಿಕೊಳ್ಳುತ್ತದೆ.

ಬೀಗರಿಗೆ ಊಟ ಸಾಮಾನ್ಯವಾಗಿ ಮಧ್ಯಾಹ್ನದ ಹೊತ್ತಿನಲ್ಲಿ ನಡೆಯುತ್ತದೆ. ಬಂದ ನೆಂಟರಿಷ್ಟರು ಊಟ ಮಾಡಿ ಮರಳಿ ತಮ್ಮ ತಮ್ಮ ಊರಿಗೆ ಹೋಗಬೇಕಾಗಿರುವುದರಿಂದ ಇಂಥದೊಂದು ವ್ಯವಸ್ಥೆಯನ್ನು ಮಾಡಿಕೊಂಡಿರುತ್ತಾರೆ. 'ಅಡಿಗೂಟ' ಸಿದ್ಧವಾದ ಮೇಲೆ ನೆಂಟರಿಷ್ಟರನ್ನು ಮೊದಲ ಪಂಕ್ತಿಯಲ್ಲಿ ಕೂರಿಸಿ, ಹಿಟ್ಟು ಅನ್ನ ಬಾಡೆಸರು ತೃಪ್ತಿಯಾಗುವವರೆಗೂ ಬಡಿಸಿ ಹೋಗುತ್ತಾರೆ. ಇತ್ತೀಚೆಗೆ ಬೀಗರೂಟದ ಸಾಂಪ್ರದಾಯಿಕ ಬಣ್ಣ ಮೆಲ್ಲನೆ ಬದಲಾಗುತ್ತಿದೆ. ಇದು ಉಳ್ಳವರ ಮನೆಗಳಲ್ಲಿ ಢಾಳಾಗಿ ಕಾಣುವ ಬದಲಾವಣೆಗಳಾಗಿವೆ. ಮುದ್ದೆಯ ಜಾಗದಲ್ಲಿ ಚಾಪ್ಸ್, ಕುರ್ಮ, ಕಬಾಬ್, ಮತ್ತು ಗೀರೈಸ್, ಬಿರಿಯಾನಿಗಳು ಬರುತ್ತಿವೆ. ಇಷ್ಟಾದರೂ ಪರವಾಗಿಲ್ಲ. ಆದರೆ ಬೀಗರೂಟ ಸಾಂಪ್ರದಾಯಿಕ. ಸೌಹಾರ್ದ ಕೂಟವಾಗುವ ಬದಲು 'ಮೋಜಿನ ಮೇಜುವಾನಿ' ಮತ್ತು ಪೊಳ್ಳು ಪ್ರತಿಷ್ಠೆಯ ವಿಕೃತ ಪ್ರದರ್ಶನಗಳಾಗುತ್ತಿರುವುದು ಒಂದು ದುರಂತವೇ ಸರಿ. ಇದು ಉಳ್ಳವರ ಕಥೆಯಾದರೆ ಚಿಂತೆ ಪಡಬೇಕಾಗಿಲ್ಲ. ಬದಲಾಗಿ ಇಲ್ಲದವರ ಮನೆಯಲ್ಲೂ ಕೆಲವೊಮ್ಮೆ ಕದ್ದು ಮುಚ್ಚಿ ಈ ಪ್ರಸಂಗಗಳು ನಡೆಯುತ್ತವೆ. ಪ್ರಮಾಣ ಕಡಿಮೆ ಇರಬಹುದು ಅಷ್ಟೆ.

ಬಂಧು ಬಾಂಧವರೆಲ್ಲ ಊಟ ಮಾಡಿ, ಸಂತೃಪ್ತಿಯಿಂದ ಎಲೆ ಅಡಿಕೆ ಹಾಕಿ ಹೊರಡಲು ಸಿದ್ಧವಾದರೆ, ಗಂಡು ಹೆಣ್ಣುಗಳು ಸಹ ಅವರೊಡನೆ ಹೊರಡಲು ತಯಾರಿ ನಡೆಸುತ್ತಾರೆ. ಗಂಡಿನ ಮನೆಯಲ್ಲಿ ಹೆಣ್ಣಿಗೆ ಮಡಿಲ ತುಂಬಿಸಿ ಕಳಿಸಿದರೆ, ಊರಿನ ಐದು ಜನ ಮುತ್ತೈದೆಯರ

ಮನೆಯಲ್ಲೂ ತವರಿಗೆ ಹೊರಟ ಹೆಣ್ಣಿಗೆ ಮಡಿಲ ತುಂಬಿ ಬೀಳ್ಕೊಡುತ್ತಾರೆ. ಬಂದ ನೆಂಟರಿಷ್ಟರು ಹೆಣ್ಣು ಗಂಡುಗಳನ್ನು ಕರೆದುಕೊಂಡು ಹೊರಡುತ್ತಾರೆ.

ಹೆಣ್ಣಿನ ತವರಿಗೆ ಬಂದ ನಂತರದಲ್ಲಿ ಗಂಡಿಗೆ 'ಅಳಿಯತನ' ಪ್ರಾರಂಭ. ಗಂಡಿನ ಜತೆಗೆ 'ಆಡುಳ್ಳಿ' ಗಂಡು ಅಂದರೆ ಗಂಡಿಗೊಬ್ಬ ಗೆಳೆಯನಿರುತ್ತಾನೆ. ಅವನನ್ನು 'ಆಡುಳ್ಳಿ ಗಂಡು', 'ಅಡ್ಲುದಮ್ಮ', ಹೆಣ್ಣಿನೊಂದಿಗಿರುವ ಗೆಣಕಾತಿ ಹುಡುಗಿಯನ್ನು 'ಅಡ್ಲುದಂಗಿ' ಅಡುಳ್ಳಿ ಹೆಣ್ಣು ಎಂದು ಕರೆಯುತ್ತಾರೆ.

ಮಾವನ ಮನೆಯವರು 'ಗಂಡಿಗೆ' ಅಳಿಯತನ ಮಾಡುತ್ತಾರೆ. ಬಿಸಿ ಅನ್ನ, ಬುಟ್ಲುಗಟ್ಲೆ ತುಪ್ಪ, ಮುದ್ದೆ ಕೋಳಿಸಾರು ಹೀಗೆ ಕೇಳಿದ್ದನ್ನೆಲ್ಲ ಅಳಿಯನಿಗೆ ಸಿದ್ಧಗೊಳಿಸಿಕೊಡುತ್ತಾರೆ. ಅದಕ್ಕೆಂದೇ 'ಅಳಿಯ ಮನೆ ತೊಳಿಯ' ಎಂಬ ಮಾತು ಕೂಡ ಮೂಡಿಬಂದಿದೆ.

ಝ) ಪ್ರಸ್ತ ಅಥವಾ ಸೋಬ್ನ

ಹಿರಿಯರ ಆಶೀರ್ವಾದ ಸಮಾಜದ ಒಪ್ಪಿಗೆಯ ಮುದ್ರೆ ಪಡೆದು, ದಂಪತಿಗಳನ್ನು ದೈಹಿಕವಾಗಿ ಒಂದುಗೂಡಿಸುವ ಶಾಸ್ತ್ರವೇ ಪ್ರಸ್ತ ಅಥವಾ ಸೋಬ್ನ ಶಾಸ್ತ್ರ, ಮದುವೆ, ಬೀಗರೂಟಗಳ ಹಾಗೆ ಇದನ್ನು ನಾಕೂರಿಗೆ ಸಾರಿ ಹೇಳಿ ಮಾಡುವಂಥದಲ್ಲ. ಗಂಡು ಹೆಣ್ಣಿನ ಮನೆಯವರು ಶುಭ ದಿನವೊಂದನ್ನು ಗೊತ್ತುಪಡಿಸಿ (ಆಷಾಢ ಮಾಸವನ್ನುಳಿದು) ಆ ದಿನ ಸೋಬನಕ್ಕೆ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಾರೆ. ಸಾಮಾನ್ಯವಾಗಿ ಇದು ಹೆಣ್ಣಿನ ತವರಿನಲ್ಲಿಯೇ ನಡೆಯುತ್ತದೆ. ಹೊಸ ಹಾಸಿಗೆಗಳು, ಮಿಠಾಯಿ, ಹಣ್ಣು ಹಂಪಲು, ಹಾಲು ಇರುವ ಕೋಣೆಗೆ ನವ ವಧೂವರರನ್ನು ಕಳಿಸುತ್ತಾರೆ. ಅದಕ್ಕೂ ಮುನ್ನ, ಮನೆದೇವತೆಗೆ ಪೂಜೆ ಮಾಡಿ ಹಿರಿಯರ ಆಶೀರ್ವಾದ ಪಡೆದಿರುತ್ತಾರೆ. ವಂಶ ಬೆಳೆಸುವ ಹಿನ್ನೆಲೆಯಲ್ಲಿ ರೂಪಿಸಿದ 'ಮದುವೆ'ಯ ಎಲ್ಲಾ ಶಾಸ್ತ್ರಗಳು ಮುಗಿಯುತ್ತವೆ.

೧.೪. ಶವಸಂಸ್ಕಾರ ಪದ್ಧತಿ

ವ್ಯಕ್ತಿಯೊಬ್ಬನಿಗೆ ಸಾವು ಸಂಭವಿಸುತ್ತಿದೆ ಎನ್ನುವಾಗ ಅವನ ಬಾಯಿಗೆ ಹಾಲು ನೀರನ್ನು ಬಿಟ್ಟು ಋಣ ತೀರಿಸಿಕೊಳ್ಳುತ್ತಾರೆ. ನಡುಮನೆಯಿಂದ ಎತ್ತಿಕೊಂಡು ಬಂದು ಜಗಲಿಯಲ್ಲಿ ಮಲಗಿಸುತ್ತಾರೆ. ಮನೆಯ ಒಳಗಡೆ ಸಾಯುವುದು ಅಶುಭವೆಂದು ಜನಪದರು ನಂಬಿಕೊಂಡಿದ್ದಾರೆ. ನಂತರ ಶವದ ಕಾಲುಗಳನ್ನು ಮಡಚುತ್ತಾರೆ. ಕೈಗಳನ್ನು ಕೂಡ ಮಡಚಿ ಎದೆಯ ಮೇಲೆ ಇಡುತ್ತಾರೆ. ಕೈಕಾಲು ಮುರಿಯುವುದನ್ನು ಸಂಪ್ರದಾಯದಂತೆ ನಡೆಸಿಕೊಂಡು ಬಂದಿದ್ದಾರೆ. ನಂತರ ತಟ್ಟೆಯೊಂದರಲ್ಲಿ ಅಕ್ಕಿ, ಬೆಲ್ಲ, ಎಲೆ, ಅಡಿಕೆ, ರೂಪಾಯಿ ನಾಣ್ಯ ಇಡುತ್ತಾರೆ. ಸೇರಿನ ಮೇಲೆ ಸಗಣಿಯನ್ನು ಮತ್ತೆ ಅದರ ಮೇಲೆ ದೀಪ ಹಚ್ಚಿ ತಲೆ ಬದಿಯಲ್ಲಿಡುತ್ತಾರೆ. ಮನೆಯ ಮುಂಭಾಗದಲ್ಲಿ ಸೌದೆಯಿಂದ ಬೆಂಕಿಯನ್ನು ಹಾಕುತ್ತಾರೆ. ಮನೆಯ ಮುಂದೆ ಹೊಗೆ ಹಾಕುವುದು ಸಾವನ್ನು ಸೂಚಿಸುತ್ತದೆ. ನೆಂಟರಿಷ್ಟರ ಮನೆಗಳಿಗೆ, ಪರಿಚಯ ಇರುವವರನ್ನು ಕಳುಹಿಸಿ ಸಾವಿನ ಸುದ್ದಿ ತಲುಪಿಸುತ್ತಾರೆ.

ಇತ್ತೀಚೆಗೆ ಬಹುತೇಕ ಎಲ್ಲರೂ ಮೊಬೈಲ್‌ಗಳನ್ನು ಹೊಂದಿರುವುದರಿಂದ ಫೋನ್ ಮಾಡಿ ವಿಷಯ ತಿಳಿಸುತ್ತಾರೆ.

ಶವದ ಮುಂದೆ ಕುಟುಂಬದ ಸದಸ್ಯರೆಲ್ಲ ಕುಳಿತುಕೊಂಡು ಕಣ್ಣೀರು ಸುರಿಸುತ್ತಾರೆ. ಬಂಧು-ಬಳಗದವರು ಬಂದಾಗ ಸತ್ತ ವ್ಯಕ್ತಿಯ ಗುಣಗಾನ ಮಾಡಿ ತಮ್ಮ ಭಾವನೆಗಳನ್ನು ಹೊರಹಾಕುತ್ತಾರೆ. ಊರಿನ ವ್ಯಕ್ತಿಗಳು ಅಳುವವರ ಬಗ್ಗೆಯೇ ದೊಡ್ಡ ಚರ್ಚೆ ಮಾಡುತ್ತಿರುತ್ತಾರೆ. ಶವವನ್ನು ಹೂಳುವ ಜಾಗಕ್ಕೆ ತೆಗೆದುಕೊಂಡು ಹೋಗಲು ಬಿದಿರಿನಿಂದ ಚಟ್ಟವನ್ನು ತಯಾರಿಸಿಕೊಳ್ಳುತ್ತಾರೆ. ಏಳೆಂಟು ಅಡಿ ಉದ್ದವಿರುವ ಎರಡು ಬಿದಿರುಗಳನ್ನು ಉದ್ದವಾಗಿ ಇಡುತ್ತಾರೆ. ಸಿಗುಳಿದ ಆರು ಬಿದಿರುಗಳನ್ನು ಅಡ್ಡವಾಗಿಟ್ಟು ಸೆಣಬಿನ ದಾರದಿಂದ ಬಿಗಿಯಾಗಿ ಕಟ್ಟುತ್ತಾರೆ. ನಂತರ ಉಗುರು ಬೆಚ್ಚಗೆ ಕಾಯಿಸಿದ ನೀರನ್ನು ತಂದು ಶವದ ಮುಂದೆ ಇಡುತ್ತಾರೆ. ಹತ್ತಿರದ ಬಂಧು-ಬಳಗದವರು ಒಂದೊಂದು ಚೊಂಬು ನೀರನ್ನು ಹಾಕಿ ಶವಕ್ಕೆ ಸ್ನಾನ ಮಾಡಿಸುತ್ತಾರೆ. ಹೊಸ ಬಿಳಿ ಬಟ್ಟೆಯಿಂದ ಶೃಂಗಾರ ಮಾಡುತ್ತಾರೆ. ಸತ್ತಿರುವ ವ್ಯಕ್ತಿಯ ಹೆಂಡತಿ ಜೀವಂತವಾಗಿದ್ದರೆ ಅವಳನ್ನು ಶವದ ಪಕ್ಕದಲ್ಲಿ ಕೂರಿಸಿ ಪೂಜೆ ಮಾಡುತ್ತಾರೆ. ಮುತ್ತೈದೆಯಾದ ಅವಳಿಗೆ ಇದೇ ಕಡೇ ಪೂಜೆ. ಮುಂದೆ ಆಕೆ ಯಾವುದೇ ಶುಭ ಸಮಾರಂಭಗಳಲ್ಲಿ ಶಾಸ್ತ್ರ ಮಾಡುವಂತಿಲ್ಲ. ಈ ಸನ್ನಿವೇಶದಲ್ಲಿ ನೆರೆದಿದ್ದವರೆಲ್ಲರು ಮತ್ತಷ್ಟು ದುಃಖಪಡುತ್ತಾರೆ. ರಕ್ತ ಸಂಬಂಧಿಕರು ಪೂಜೆ ಮಾಡಿ ಕಾಲುಗಳನ್ನು ಮುಟ್ಟಿ ನಮಸ್ಕರಿಸುತ್ತಾರೆ. ತಮಟೆಯ ಸದ್ದು ಹೆಚ್ಚಾಗುತ್ತಿದ್ದಂತೆ ಶವಯಾತ್ರೆ ಆರಂಭವಾಗುತ್ತದೆ.

ಅ) ಶವಯಾತ್ರೆ

ಶವವನ್ನು ಹೂಳುವ ಜಾಗಕ್ಕೆ ಹೊತ್ತುಕೊಂಡು ಹೋಗುವಾಗ ಕೂಳಾಕುವ ಮಡಿಕೆ ಹಾಗು ಕೊಳ್ಳಿಯನ್ನು ಹಿಡಿದು ಸತ್ತ ವ್ಯಕ್ತಿಯ ಮಗ ಮುಂದೆ ಹೊರಡುತ್ತಾನೆ. ನಂತರ ನಾಲ್ಕು ಜನ ಸಂಬಂಧಿಕರು ಚಟ್ಟದ ಮೇಲೆ ಮಲಗಿಸಿದ ಶವವನ್ನು ಹೊತ್ತು ಸಾಗುತ್ತಾರೆ. ವಾದ್ಯದವರ ಸದ್ದು ಸಾವನ್ನು ಪ್ರತಿನಿಧಿಸುತ್ತಿರುತ್ತದೆ. ಶವವನ್ನು ಹೊರುವಾಗ ಬಂಧು ಬಳಗದವರೆಲ್ಲರು ಹೆಗಲು ಕೊಡುತ್ತಾರೆ. ಹೆಣದ ಮೇಲೆ ಪುರಿ ಹಾಗು ಚಿಲ್ಲರೆಯ ಹಣವನ್ನು (ನಾಣ್ಯ) ಎರಚುತ್ತಾರೆ. ದಾರಿಯುದ್ದಕ್ಕು ಅಲ್ಲಲ್ಲಿ ನಿಂತು ಸಾಗುವ ಶವಯಾತ್ರೆ ಊರಾಚೆ ತಲುಪುತ್ತಿದ್ದಂತೆ ಮೂರು ದಾರಿ ಸೇರುವ ಸ್ಥಳದಲ್ಲಿ ಮೂರು ಸುತ್ತು ಪ್ರದಕ್ಷಿಣೆ ಹಾಕಿ ತಲೆಯನ್ನು ದಕ್ಷಿಣ ದಿಕ್ಕಿಗೆ ಬರುವಂತೆ ಚಟ್ಟವನ್ನು ಕೆಳಕ್ಕಿಳಿಸುತ್ತಾರೆ. ಆಗ ಎಲ್ಲರೂ ಒಂದೊಂದು ಸಣ್ಣ ಸಣ್ಣ ಕಲ್ಲುಗಳನ್ನು ದಕ್ಷಿಣ ದಿಕ್ಕಿಗೆ ತಂದು ಗುಡ್ಡೆ ಹಾಕುತ್ತಾರೆ. ತಮ್ಮಟೆ ಬಾರಿಸುತ್ತಿದ್ದ ಹರಿಜನರ ವ್ಯಕ್ತಿ ೧೫ ಎಕ್ಕದ ಎಲೆಗಳನ್ನು ತರುತ್ತಾನೆ. ಚಟ್ಟದ ಸುತ್ತಲೂ ಐದು ಕಡೆ ಎಲೆಗಳನ್ನು ಇಡುತ್ತಾನೆ. ಕೂಳಾಕುವ ವ್ಯಕ್ತಿ ಮಡಿಕೆಯಲ್ಲಿರುವ ಅನ್ನವನ್ನು ಎಲೆಗಳ ಮೇಲೆ ಹಾಕುತ್ತಾನೆ. ನಂತರ ಮಡಿಕೆಯ ಬಾಯನ್ನು ಕೆಳಕ್ಕೆ ಮಾಡಿ ಜೋರಾಗಿ ಕಲ್ಲಿನ ಮೇಲೆ ಎತ್ತಿ ಹಾಕಿ ಒಡೆದು ಲಬಲಬನೆ ಬಾಯಿ ಬಡಿದುಕೊಳ್ಳುತ್ತಾನೆ. ನಂತರ ಶವಯಾತ್ರೆ ಮುಂದುವರೆಯುತ್ತದೆ. ಮುಂದಿನ ಭಾಗದಲ್ಲಿ ಶವವನ್ನು ಹೊತ್ತವರು ಹಿಂದಕ್ಕು, ಹಿಂದಿನ

ಭಾಗದಲ್ಲಿ ಹೊತ್ತವರು ಮುಂದಕ್ಕು ಹೆಗಲನ್ನು ಬದಲಿಸಿಕೊಂಡು ಹೆಣ ಹೂಳಬೇಕಾದ ಜಾಗಕ್ಕೆ ಬರುತ್ತಾರೆ. ಅಪಘಾತ ಮತ್ತು ಕಾಯಿಲೆಯಿಂದ ಆಸ್ಪತ್ರೆಯಲ್ಲಿ ಸಾವನಪ್ಪಿದ್ದರೆ ನೇರವಾಗಿ ಸತ್ತ ವ್ಯಕ್ತಿಗೆ ಪ್ರಿಯವಾದ ಹೊಲ, ತೋಟದ ಬಳಿಗೆ ತರುತ್ತಾರೆ. ಇವರಿಗೆ ಶವಯಾತ್ರೆ ಇರುವುದಿಲ್ಲ.

ಆ) ಅಂತಿಮ ಸಂಸ್ಕಾರ

ಶವವನ್ನು ಗುಂಡಿಯ ಸುತ್ತ ಮೂರು ಸುತ್ತು ಸುತ್ತಿಸಿ ಬಲಭಾಗಕ್ಕೆ ಇಡುತ್ತಾರೆ. ಉತ್ತರ ದಕ್ಷಿಣಕ್ಕೆ ಆರು ಅಡಿ ಉದ್ದ, ಪೂರ್ವ ಪಶ್ಚಿಮಕ್ಕೆ ಮೂರು ಅಡಿ ಅಗಲ ಹಾಗು ನಾಲ್ಕೈದು ಅಡಿ ಆಳದ ಗುಂಡಿ ಸಿದ್ಧವಾಗಿರುತ್ತದೆ. ನಂತರ ಕುಡುಗೋಲಿನಿಂದ ಎಡಗೈಯಿಂದ ಚಟ್ಟದ ದಾರವನ್ನು ಕುಯ್ದು ಚಟ್ಟವನ್ನು ದೂರಕ್ಕೆ ಬಿಸಾಡುತ್ತಾರೆ. ಹೆಣದ ಮೇಲಿನ ಒಡವೆಗಳನ್ನು ಹೆಣ್ಣು ಮಕ್ಕಳಿಗೆ ನೆನಪಿನ ಕಾಣಿಕೆಯಂತೆ ಕೊಡುತ್ತಾರೆ. ಹೆಂಗಸರು ಸತ್ತಿದ್ದರೆ ಒಡವೆಯ ಒಂದು ಚೂರನ್ನು ಬಾಯಿಗೆ ತುರುಕುತ್ತಾರೆ. ಗುಂಡಿಯೊಳಕ್ಕೆ ಬಾಳೆ ಎಲೆಯನ್ನು ಮುಚ್ಚಿ ಶವವನ್ನು ಜೋಪಾನವಾಗಿ ಗುಂಡಿಯಲ್ಲಿಟ್ಟು ಒಪ್ಪ ಮಾಡುತ್ತಾರೆ. ಬಿಳಿಯ ಬಟ್ಟೆಯನ್ನು ಪೂರ್ತಿ ಹೊದಿಸಿ ಹೆಣದ ಸುತ್ತ ನಾಲ್ಕೈದು ಕೆ.ಜಿ. ಉಪ್ಪನ್ನು ಸುರಿಯುತ್ತಾರೆ. ಉಪ್ಪಿನ ಋಣ ಇಲ್ಲಿಗೆ ಮುಗಿಯಿತೆಂದು ನಂಬಿಕೊಂಡಿದ್ದಾರೆ. ಮುಖವನ್ನು ಮುಚ್ಚುವಾಗ ಕೊನೆಯ ಬಾರಿಗೆ ಶವವನ್ನು ನೋಡುತ್ತಾರೆ. ಗುಂಡಿಯ ಮೇಲಿದ್ದ ಮಣ್ಣನ್ನು ಮೂರು ಹಿಡಿ ತೆಗೆದು ಪ್ರತಿಯೊಬ್ಬರು ಶವದ ಮೇಲೆ ಹಾಕುತ್ತಾರೆ. (ಶವವನ್ನು ಸುಡುತ್ತಿದ್ದರೆ ಸೌದೆಯ ಮೇಲೆ ಶವವನ್ನು ಮಲಗಿಸುತ್ತಾರೆ. ಶವ ಸಂಸ್ಕಾರಕ್ಕೆ ಬಂದಿದ್ದವರು ಸೌದೆಯ ಚೂರನ್ನು ಬೆಂಕಿಗೆ ಹಾಕುತ್ತಾರೆ.) ನಂತರ ಗುದ್ದಲಿಯ ಸಹಾಯದಿಂದ ಗುಂಡಿಯನ್ನು ಮುಚ್ಚುತ್ತಾರೆ. ಎರಡು ಅಡಿ ಎತ್ತರಕ್ಕೆ ಮಣ್ಣಿನಿಂದ ಸಮಾಧಿ ಕಟ್ಟುತ್ತಾರೆ. ನಂತರ ಎಳನೀರನ್ನು ತೂತು ಮಾಡಿ ಅಡಿಕೆ ಹೊಂಬಾಳೆ ಇಟ್ಟು ಪಕ್ಕದಲ್ಲಿ ಕಲ್ಲಿಡುತ್ತಾರೆ. ತೆಂಗಿನ ಗಿಡವನ್ನು ನೆಡುತ್ತಾರೆ. ಹೆಣಕ್ಕೆ ಶೃಂಗಾರ ಮಾಡಿದ್ದ ಹೂವಿನ ಹಾರವನ್ನು ಸಮಾಧಿ (ಗುದ್ದು) ಮೇಲೆ ಹಾಕುತ್ತಾರೆ. ಕಡೆಯಲ್ಲಿ ಕುಟುಂಬದ ಸದಸ್ಯರು ಹಾಗು ಶವಸಂಸ್ಕಾರಕ್ಕೆ ಬಂದಿದ್ದವರೆಲ್ಲ ಪೂಜೆ ಮಾಡುತ್ತಾರೆ. ಶವ ಸಂಸ್ಕಾರದಲ್ಲಿ ಭಾಗವಹಿಸಿದ್ದವರೆಲ್ಲ ಮನೆಗೆ ಹೋಗುವ ದಾರಿಯಲ್ಲಿ ಸಿಗುವ ಕೆರೆ, ಕಟ್ಟೆಗಳಲ್ಲಿ ನೀರಿನ ಜೊತೆ ಸಗಣಿಯನ್ನು ಬೆರಸಿ ತಲೆಯ ಮೇಲೆ ಎರಚಿಕೊಳ್ಳುತ್ತಾರೆ. ನಂತರ ಕೈ ಕಾಲನ್ನು ತೊಳೆದುಕೊಂಡು ಸತ್ತವರ ಮನೆಗೆ ಬಂದು ಹಚ್ಚಿದ ದೀಪವನ್ನು ನೋಡಿಕೊಂಡು ಕೈ ಮುಗಿದು ಹೋಗುತ್ತಾರೆ. ಮನೆಯವರು ಊರಿನ ಹಿರಿಯರ ಜೊತೆ ಚರ್ಚಿಸಿ ತಿಥಿ ಕಾರ್ಯವನ್ನು ಹೇಗೆ ಮಾಡಬೇಕೆಂದು ನಿರ್ಧರಿಸುತ್ತಾರೆ.

ಇ) ತಿಥಿ

ವ್ಯಕ್ತಿ ಸತ್ತ ೧೧ನೇ ದಿನಕ್ಕೆ ತಿಥಿ ಕಾರ್ಯ ನಡೆಯುತ್ತದೆ. ಶವ ಸಂಸ್ಕಾರವನ್ನು ಮಾಡಿದ ದಿನವೇ ಈಶಾನ್ಯ ದಿಕ್ಕಿನ ಚಿಕ್ಕ ಮರದ ಕೊಂಬೆಯೊಂದನ್ನು ಕಡಿದಿರುತ್ತಾರೆ. ನಂತರ ಸೌದೆಗಳನ್ನು ಒಡೆದು ಸಂಗ್ರಹಿಸಿಕೊಳ್ಳುತ್ತಾರೆ. ಸಂಬಾರ ಪದಾರ್ಥ, ಹಪ್ಪಳ, ಉಪ್ಪಿನಕಾಯಿಗಳನ್ನು ಸಿದ್ಧಮಾಡಿಕೊಂಡು

ಅಡಿಗೆ ಸಾಮಾನುಗಳನ್ನು ತರುತ್ತಾರೆ. ವೈಕುಂಠ ಸಮಾರಾಧನೆಯ ಆಹ್ವಾನಪತ್ರಿಕೆ (ತಿಥಿ ಕಾರ್ಡ್) ಯನ್ನು ಬಂಧುಬಳಗಕ್ಕೆಲ್ಲ ಹಂಚುತ್ತಾರೆ. ಊರಿಗೆ ಸಂಬಂಧಿಸಿದ ಹಬ್ಬ, ಜಾತ್ರೆ, ಉತ್ಸವ ಮೊದಲಾದವುಗಳಿದ್ದರೆ ೯ ದಿನಕ್ಕೆ ತಿಥಿ ಕಾರ್ಯ ಮುಗಿಸಿ ಊರಿನ ಕಾರ್ಯ ಸುಗಮವಾಗಿ ನಡೆಯಲು ಅವಕಾಶ ಮಾಡಿಕೊಡುತ್ತಾರೆ. ತಿಥಿಯ ದಿನ ಬೆಳಿಗ್ಗೆ ಮನೆ ಮಂದಿಯೆಲ್ಲ ಸ್ನಾನಮಾಡಿಕೊಂಡು ಮಡಿಬಟ್ಟೆಯನ್ನು ಧರಿಸಿಕೊಳ್ಳುತ್ತಾರೆ. ಸತ್ತ ವ್ಯಕ್ತಿಗೆ ಕೊಳು ಹಾಕುವ ಮಗ ಕ್ಷೌರಿಕನಿಂದ ತಲೆಯನ್ನು ಬೋಳಿಸಿಕೊಂಡು ಅಕ್ಕ, ತಂಗಿ, ಸೋದರತ್ತೆ ತಂದೆ ಹೊಸ ಬಟ್ಟೆಯನ್ನು ಹಾಕಿಕೊಳ್ಳುತ್ತಾನೆ.

ತಿಥಿಯ ದಿನ ಮಧ್ಯಾಹ್ನ ೧೨.೩೦ ರಿಂದ ೧ ಗಂಟೆಯ ಸುಮಾರಿಗೆ ಬಂಧುಬಳಗವೆಲ್ಲ ಸಮಾಧಿಯ ಸ್ಥಳದಲ್ಲಿ ಬಂದು ಸೇರುತ್ತಾರೆ. ಹತ್ತಿರದ ಸಂಬಂಧಿಕರು ತಿಂಡಿ-ತಿನಿಸು, ಹಣ್ಣು-ಹಂಪಲು, ಬಾಳೆಹಣ್ಣು, ಗಂಧದ ಕಡ್ಡಿ, ತೆಂಗಿನ ಕಾಯಿಯನ್ನು ತಂದಿರುತ್ತಾರೆ. ತಿಥಿ ಕಾರ್ಯ ಮಾಡುವವರ ಮನೆಯಿಂದಲೂ ಇವೆಲ್ಲವನ್ನು ತರುತ್ತಾರೆ. ಸಮಾಧಿಯ ಬಳಿ ಸ್ವಚ್ಛ ಮಾಡಿ ಬಿಂದಿಗೆಯಲ್ಲಿ ತಂದ ನೀರನ್ನು ಸುತ್ತಲೂ ಎರಚುತ್ತಾರೆ. ಸತ್ತ ವ್ಯಕ್ತಿಯ ಫೋಟೋವನ್ನು ಒಂದು ಕುರ್ಚಿಯ ಮೇಲೆ ಇಡುತ್ತಾರೆ. ಸಮಾಧಿಯ ಸುತ್ತ ೯ ಉದ್ದವಾದ ಬಾಳೆ ಎಲೆಗಳನ್ನು ಇಡುತ್ತಾರೆ. ಎಲ್ಲರೂ ತಂದಿದ್ದ ಹಣ್ಣು-ಹಂಪಲು, ತಿಂಡಿ-ತಿನಿಸುಗಳನ್ನು ಬಾಳೆ ಎಲೆಗಳ ಮೇಲೆ ಎಡೆ ಇಡುತ್ತಾರೆ. ಸಮಾಧಿಯ ಸುತ್ತ ಹೂವು ಹಾರಗಳನ್ನು ಹಾಕುತ್ತಾರೆ. ನಂತರ ತೆಂಗಿನ ಕಾಯಿಯನ್ನು ಒಡೆದು, ಗಂಧದ ಕಡ್ಡಿ, ಕರ್ಪೂರದಿಂದ ಪೂಜೆ ಮಾಡುತ್ತಾರೆ. ಸತ್ತಿರುವ ವ್ಯಕ್ತಿ ತಂದೆಯಾಗಿದ್ದರೆ ಹಿರಿಯ ಮಗ, ತಾಯಿಯಾಗಿದ್ದರೆ ಕಿರಿಯ ಮಗ. ಮಕ್ಕಳಿಲ್ಲದಿದರೆ ಅಣ್ಣ-ತಮ್ಮಂದಿರ ಮಕ್ಕಳಲ್ಲಿ ಯಾರಾದರೊಬ್ಬರು ತಲೆಯನ್ನು ಬೋಳಿಸಿಕೊಂಡು ಸಮಾಧಿಯ ಶಾಸ್ತ್ರ ಮಾಡಬೇಕಾಗುತ್ತದೆ.

ತಲೆ ಬೋಳಿಸಿಕೊಂಡ ವ್ಯಕ್ತಿಯ ಎಡಭುಜದ ಮೇಲೆ ನೀರು ತುಂಬಿದ ಮಣ್ಣಿನ ಗಡಿಗೆಯೊಂದನ್ನು ಇಡುತ್ತಾರೆ. ಕೈಯಲ್ಲಿ ಸೌದೆಯ ಕೊಳ್ಳಿಯೊಂದನ್ನು ಕೊಡುತ್ತಾರೆ. ಅವನ ಜೊತೆಯಲ್ಲಿ ಯಾರಾದರು ಹಿರಿಯರು ಕುಡುಗೋಲನ್ನು ಹಿಡಿದು ಮೂರು ಸುತ್ತು ಪ್ರದಕ್ಷಿಣೆ ಹಾಕಿಸುತ್ತಾರೆ. ಒಂದು ಸುತ್ತು ಪ್ರದಕ್ಷಿಣೆ ಬಂದ ಮೇಲೆ ಗಡಿಗೆಯನ್ನು ಕುಡುಗೋಲಿನಿಂದ ಒಂದು ತೂತು ಕುಕ್ಕುತ್ತಾರೆ. ಎರಡನೇ ಸುತ್ತಿಗೆ ಎರಡು ತೂತು ಮೂರನೇ ಸುತ್ತಿಗೆ ೩ ತೂತನ್ನು ಮಾಡುತ್ತಾರೆ. ನಂತರ ಸಮಾಧಿಯ ತಲೆಯ ಬಳಿ ಬಂದು ಗಡಿಗೆಯನ್ನು ಕಲ್ಲಿನ ಮೇಲೆ ಎತ್ತಾಕಿ ಹಿಂತಿರುಗಿ ನೋಡದೆ ಮನೆಯ ಕಡೆಗೆ ಹೊರಡುತ್ತಾನೆ. ಒಬ್ಬ ಹುಡುಗನನ್ನು ಜೊತೆಯಲ್ಲಿ ಕಳುಹಿಸಿಕೊಡುತ್ತಾರೆ. ಸತ್ತ ವ್ಯಕ್ತಿಯ ಹೆಂಡತಿಯಿದ್ದರೆ ಅವಳ ಕೈ ಬಳೆಗಳನ್ನು ಒಡೆದು, ಕುಂಕುಮವನ್ನು ಅಳಿಸಿ ಹಾಕುತ್ತಾರೆ. ಇಲ್ಲಿಗೆ ಅವಳ ಮುತ್ತೈದೆತನ ಮುಗಿದು ವಿಧುವೆಯಾಗುತ್ತಾಳೆ. ನಂತರ ಅಲ್ಲಿ ನೆರೆದಿದ್ದವರೆಲ್ಲರೂ ಸಮಾಧಿಯ ಮೇಲೆ ನೆಟ್ಟಿರುವ ಹೊಂಬಾಳೆಗೆ ಸ್ವಲ್ಪ ಹಾಲು ಬಿಟ್ಟು ಪೂಜೆ ಮಾಡುತ್ತಾರೆ.

ನಂತರ ಸಮಾಧಿಯ ಸ್ಥಳದಿಂದ ಸ್ವಲ್ಪ ದೂರದಲ್ಲಿ ಎಲ್ಲರಿಗೂ ವಿಳ್ಯದೆಲೆ, ಸಕ್ಕರೆ ಬೆರೆಸಿದ ಕಡ್ಲೆಹಿಟ್ಟು, ಪುರಿ ಕೊಡುತ್ತಾರೆ. ಸಮಾಧಿಯ ಮೇಲಿರುವ ತಿಂಡಿ ತಿನಿಸುಗಳನ್ನು ಕಾಗೆಗಳು ಬಂದು ತಿಂದರೆ ಸತ್ತ ವ್ಯಕ್ತಿಗೆ ತೃಪ್ತಿಯಾಗಿದೆ ಎಂದು ನಂಬುತ್ತಾರೆ. ಇಲ್ಲದಿದ್ದರೆ ಸತ್ತ ವ್ಯಕ್ತಿ ಇಷ್ಟಪಡುತ್ತಿದ್ದ ವ್ಯಕ್ತಿಯಿಂದ ಮತ್ತೊಮ್ಮೆ ಪೂಜೆ ಮಾಡಿಸುತ್ತಾರೆ. ಆಗ ಸಹಜವಾಗಿ ಕಾಗೆಗಳು ಬಂದು ತಿಂಡಿ ತಿನಿಸುಗಳನ್ನು ತಿನ್ನುತ್ತವೆ. ಇದನ್ನು ನೋಡಿ ಸಮಾಧಾನ ಪಟ್ಟುಕೊಂಡ ಬಂಧುಮಿತ್ರರೆಲ್ಲ ಊರಿನೊಳಕ್ಕೆ ಬರುತ್ತಾರೆ.

ಊರಿನಲ್ಲಿ ತಿಥಿ ಊಟದ ಸಿದ್ಧತೆಯಾಗಿರುತ್ತದೆ. ತಿಥಿಗೆ ಬಂದವರೆಲ್ಲರೂ ಊಟವನ್ನು ಮಾಡಿ ತಮ್ಮ ತಮ್ಮ ಊರುಗಳಿಗೆ ಹೊರಡುತ್ತಾರೆ. ಕೆಲವರು ಸತ್ತ ವ್ಯಕ್ತಿಯ ಹೆಂಡತಿ ಮಕ್ಕಳಿಗೆ ಸಮಾಧಾನ ಹೇಳುತ್ತಾರೆ. ನೆಂಟರಿಷ್ಟರಿಗೆ ತಿಥಿಗೆ ಮಾಡಿದ್ದ ಸಿಹಿ ತಿಂಡಿ ಹಾಗು ಎಲೆ ಅಡಿಕೆಯನ್ನು ಕೊಟ್ಟು ಕಳುಹಿಸುವುದು ಪದ್ಧತಿಯಂತೆ ನಡೆದುಕೊಂಡು ಬಂದಿದೆ.

ಈ) ತಿಂಗಳ ತಿಥಿ

ತಿಂಗಳ ತಿಥಿ ಎಂದರೆ ತಿಥಿಯಾದ ತಿಂಗಳಿಗೆ ನಡೆಯುವುದಿಲ್ಲ. ಕೆಲವರು ತಿಥಿಯಾದ ರಾತ್ರಿಯೆ ವಡೆ, ಪಾಯಸ ಮಾಡಿ ತಿಥಿಯಲ್ಲಿ ಉಳಿದಿರುವ ಅಡುಗೆಯಲ್ಲಿಯೇ ತಿಂಗಳ ತಿಥಿ ಮಾಡಿಬಿಡುತ್ತಾರೆ. ಸಾಮಾನ್ಯವಾಗಿ ತೀರ ಹತ್ತಿರದ ಬಂಧುಗಳು ಮಾತ್ರ ತಿಂಗಳ ತಿಥಿಗೆ ಉಳಿದುಕೊಳ್ಳುತ್ತಾರೆ. ತಿಥಿಯಾದ ಮಾರನೆಯ ದಿನ ಮಾಡುವ ಕಾರ್ಯ ತಿಂಗಳ ತಿಥಿ ಎಂದು ಕರೆಸಿಕೊಂಡಿದೆ. ಕೆಲವರು ಸಿಹಿ ಅಡುಗೆ ಮಾಡಿದರೆ ಮತ್ತೆ ಕೆಲವರು ಕುರಿ ಮಾಂಸ, ಕೋಳಿ ಮಾಂಸವನ್ನು ತಂದು ಮಾಂಸದ ಅಡುಗೆಯನ್ನೆ ಸಿದ್ಧಪಡಿಸುತ್ತಾರೆ. ದೇವರ ಕೋಣೆಯಲ್ಲಿ ಎಡೆ ಇಡುವ ಉದ್ದೇಶಕ್ಕಾಗಿ ಹೊಬ್ಬಿಟ್ಟು ಮಾಡಿರುತ್ತಾರೆ. ಹಿರಿಯರ ಹೆಸರಿನಲ್ಲಿ ಪೂಜೆ ಮಾಡಿ ನೈವೇದ್ಯ ಮಾಡುತ್ತಾರೆ. ನಂತರ ಎಲ್ಲರು ಕುಳಿತುಕೊಂಡು ಊಟ ಮಾಡುತ್ತಾರೆ. ತಿಂಗಳ ತಿಥಿ ಮುಗಿದ ಮೇಲೆ ಉಳಿದುಕೊಂಡಿದ್ದ ಬಂಧುಬಳಗವೆಲ್ಲ ತಮ್ಮ ಊರುಗಳಿಗೆ ಹೊರಟುಹೋಗುತ್ತಾರೆ.

೨. ಶೆಟ್ಟರ ಧಾರ್ಮಿಕ ಆಚರಣೆಗಳು

೨.೧. ಹೆಣ್ಣು ಮಕ್ಕಳ ಶಾಸ್ತ್ರ ಸಂಪ್ರದಾಯಗಳು

ಅ) ಗುಡ್ಲು ಕೊಡುವ ಶಾಸ್ತ್ರ

ಹೆಣ್ಣು ಮಕ್ಕಳು ಋತುಮತಿಯಾದಾಗ ಇವರಲ್ಲಿ ಮಡಿವಂತಿಕೆ ಹೆಚ್ಚು. ಗುಡ್ಲು ಕೊಡುವ ಶಾಸ್ತ್ರ ಮತ್ತು ವಸಗೆ ಹೆಣ್ಣು ಮಕ್ಕಳ ಪಾಲಿಗೆ ಪ್ರಮುಖ ಸಮಾರಂಭ. ಗುಡ್ಲು ಕೊಡುವ ಶಾಸ್ತ್ರದಲ್ಲಿ ಸೋದರ ಮಾವ ಸೊಪ್ಪನ್ನು ತಂದು ಅದರಲ್ಲಿ ೫ ದಿನಗಳ ಕಾಲ ಕೂರಿಸುತ್ತಾರೆ. ಹಲಸಿನ ಸೊಪ್ಪು, ಬಸರಿ ಸೊಪ್ಪು, ತೆಂಗಿನ ಗರಿಗಳು, ಹತ್ತಿ ಸೊಪ್ಪುಗಳಿಂದ ಗುಡಿಸಲು ತಯಾರಿಸಿ ವಿವಿಧ ಶಾಸ್ತ್ರಗಳನ್ನು ಮಾಡಿ ಸೂತಕವನ್ನು ತೆಗೆದುಕೊಳ್ಳುತ್ತಾರೆ. ನಂತರ ಒಂದು ತಿಂಗಳ ಕಾಲ ಬಾಣಂತನ ಮಾಡಿ

ನೆಂಟರಿಷ್ಟರನ್ನು ಕರೆದು ವಸಗೆ ಶಾಸ್ತ್ರ ಮಾಡುತ್ತಾರೆ. ಬಾಣಂತನ ಮಾಡುವಾಗ ಉದ್ದಿನ ಕಾಳು, ಕೊಬ್ಬರಿ ಬೆಲ್ಲ, ತುಪ್ಪ, ಮೆಂತ್ಯ ಸೊಪ್ಪಿನ ಪಲ್ಯ, ಮೆಂತ್ಯ ಹಿಟ್ಟು ಕೊಟ್ಟು ಬಹಳ ಶಾಖವಾಗಿ ಬಾಣಂತನ ಮಾಡುತ್ತಾರೆ. ಉದ್ದಿನ ಕಾಳು ಸೊಂಟಕ್ಕೆ ಶಕ್ತಿ ಕೊಡುತ್ತದೆ. ಇದರಿಂದ ಮುಂದಿನ ಜೀವನಕ್ಕೆ ಹೆಣ್ಣು ಮಗು ದೃಢವಾಗುವಂತೆ ಮಾಡುತ್ತದೆ. ವಸಗೆ ಅಥವಾ ಆರತಿ ಮಾಡುವ ಶಾಸ್ತ್ರದಲ್ಲಿ ಸೋದರ ಮಾವ ಸೀರೆ, ಹೂವು ಹಣ್ಣು ಹಂಪಲು ಕೊಡುತ್ತಾನೆ. ಮುತ್ತೈದೆಯರು ಆರತಿ ಶಾಸ್ತ್ರ ಮಾಡಿ ಮುಗಿಸುತ್ತಾರೆ.

ಆ) ಸೀಮಂತ ಕಾರ್ಯಕ್ರಮ

ಮದುವೆಯಾದ ಹೆಣ್ಣು ಚೊಚ್ಚಲ ಬಸುರಿಯಾದಾಗ (ಗರ್ಭವತಿ) ತವರುಮನೆಯವರು ಐದನೇ ತಿಂಗಳಿಗೆ (ಏಳು/ಒಂಬತ್ತು) ಮಗಳನ್ನು ತವರಿಗೆ ಕರೆತರುತ್ತಾರೆ. ಈ ಸಂದರ್ಭದಲ್ಲಿ ಗಂಡನ ಮನೆಯವರು ಸೀಮಂತ ಕಾರ್ಯಕ್ರಮ ಏರ್ಪಡಿಸುತ್ತಾರೆ. ಹೊಸ ಸೀರೆ ಉಡಿಸಿ, ಹಸಿರು ಬಳೆ ತೊಡಿಸಿ, ಎಲ್ಲಾ ತರಹದ ಹಣ್ಣನ್ನು ಬಸುರಿಯ ಮುಂದೆ ಐದು ತಟ್ಟೆಗಳಲ್ಲಿ ಇರಿಸಿ, ಹಾಗೂ ಆಕೆ ಇಷ್ಟ ಪಡುವ ಎಲ್ಲಾ ತರದ ತಿಂಡಿಯನ್ನು ತುಂಬಿ ಅವಳ ಮುಂದಿಡುತ್ತಾರೆ. ಶಾಸ್ತ್ರೋಕ್ತವಾಗಿ ೯ ಜನ ಮುತ್ತೈದೆಯರು ಅವಳಿಗೆ ಬಳೆ ತೊಡಿಸಿ ಅರಿಶಿನ-ಕುಂಕುಮ ಹಚ್ಚಿ ಹೂ ಮುಡಿಸಿ ಆರತಿ ಮಾಡುತ್ತಾರೆ. ಸೀಮಂತಕ್ಕೆ ಬಂದ ಎಲ್ಲಾ ಮುತ್ತೈದೆಯರಿಗೆ ಬಳೆ-ತಾಂಬೂಲ, ಹೂ, ಅರಿಶಿಣ-ಕುಂಕುಮ ಕೊಡುತ್ತಾರೆ ಹಾಗೂ ಬಂಧು-ಬಳಗದವರು ಮತ್ತು ಊರಿನ ಜನರಿಗೆ ಸಿಹಿ ಔತಣವಿರುತ್ತದೆ.

ಬಂದಂತಹ ಬಂಧು-ಬಳಗದವರು ಹೆಣ್ಣಿಗೆ ಉಡುಗೊರೆ ಕೊಡುವಾಗ ಸಿಪ್ಪೆ ತೆಗೆಯದ ತೆಂಗಿನ ಫಲವನ್ನು ಕೊಟ್ಟು ಆಶೀರ್ವದಿಸುತ್ತಾರೆ. ಆ ದಿನ ತಾಯಿ ಮನೆಯವರು ತವರಿಗೆ ಕರೆದುಕೊಂಡು ಬರುತ್ತಾರೆ. ತವರಿಗೆ ಬಂದ ಮೇಲೆ ಹೆಣ್ಣಿನ ತಾಯಿಯ ಸಂಬಂಧಿಕರು, ಅಕ್ಕ ತಂಗಿಯರು ಬಸುರಿಯನ್ನು ವಿಶೇಷವಾಗಿ ಗಮನಿಸಿಕೊಳ್ಳುತ್ತಾರೆ. ಚಿಕ್ಕಮ್ಮ, ದೊಡ್ಡಮ್ಮ, ಸೋದರತ್ತೆಯರು ಬಸುರಿಯನ್ನು ಕೇಳಿ ಅವಳು ಬಯಸಿದ ತಿನಿಸು, ಉಟೋಪಚಾರಗಳನ್ನು ಒಬ್ಬಬ್ಬರು ಒಂದೊಂದು ದಿನ ಮಾಡಿ ಬಡಿಸುತ್ತಾರೆ. ಈ ಪ್ರೀತಿಯ ಹಾರೈಕೆ ಮತ್ತು ಆರೈಕೆಯಿಂದ ದಿನ ತುಂಬಿ ಅವಳು ಮಗುವಿಗೆ ಜನ್ಮ ನೀಡುತ್ತಾಳೆ. ಇದು ಹೆಣ್ಣಿನ ಬದುಕಿನಲ್ಲಿ ಬಹಳ ಪ್ರಮುಖವಾದ ಘಟ್ಟ. ಸ್ಥಿತಿವಂತರು ಐದು ತಿಂಗಳುಗಳ ಕಾಲ ಬಹಳ ಜಾಗ್ರತೆಯಿಂದ ಬಾಣಂತನ ಮಾಡುತ್ತಾರೆ. ಆನಂತರ ನಾಮಕರಣ ಶಾಸ್ತ್ರ ಮುಗಿಸಿ ಗಂಡನ ಮನೆಗೆ ಕಳುಹಿಸಿಕೊಡುತ್ತಾರೆ.

೨.೨. ನಾಮಕರಣ ಪದ್ಧತಿ

ಹುಟ್ಟಿದ ಮಗುವಿನ ಜಾತಕವನ್ನು ಜೋಯಿಸರಿಂದ ತಿಳಿದುಕೊಂಡು ಬರುತ್ತಾರೆ. ಅವರು ಹೇಳಿದ ಅಕ್ಷರದಲ್ಲಿಯೆ ಮಗುವಿಗೆ ಹೆಸರನ್ನಿಡುತ್ತಾರೆ. ಆ ದಿನ ಜೋಯಿಸರನ್ನು ಕರೆಸಿ ಮನೆಗೆ ಕರೆಸಿ ಪುಣ್ಯ ಮಾಡಿಸುತ್ತಾರೆ. ಸೂತಕವನ್ನು ಕಳೆದುಕೊಂಡ ದಿನವೇ ಉಗ್ಗೆದ ಅನ್ನ ಮಾಡಿ

ಗುಣಿಗೆಗೆ ಇಕ್ಕುತ್ತಾರೆ. ಉಗ್ಗೆದ ಅನ್ನ ೫ ಉಂಡೆಗಳನ್ನು ಕಟ್ಟಿ ಪೂಜೆ ಮಾಡಿ ಮನೆಗೆ ಬಂದವರಿಗೆ ಹಂಚುತ್ತಾರೆ. ಸೋದರ ಮಾವನೆ ಹೆಸರು ಕಟ್ಟುತ್ತಾನೆ. ಕೆಲವರು ಗುಣಿಗೆಗೆ ಇಕ್ಕುವ ದಿನವೇ ಮಗುವಿಗೆ ಹೆಸರು ಕಟ್ಟುತ್ತಾರೆ. ನಾಮಕರಣದಲ್ಲಿ ಇನ್ನಾವುದೇ ವಿಶೇಷತೆಗಳಿಲ್ಲ.

೨.೩. ವಿವಾಹ ಪದ್ಧತಿ

ಶೆಟ್ಟರು ವೃತ್ತಿಯಲ್ಲಿ ವ್ಯಾಪಾರಿಗಳು. ಬೇರೊಬ್ಬರ ತಂಟೆಗೆ ಹೋಗದೆ ತಮ್ಮ ಪಾಡಿಗೆ ತಾವು ಇದ್ದುಬಿಡುವ ಇವರು ಕುಟುಂಬದ ಜವಾಬ್ದಾರಿಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಾರೆ. ತಮಗೆ ಗೊತ್ತಿರುವ ವ್ಯಾಪಾರ ಮಾರ್ಗವನ್ನು ರೂಢಿಸಿಕೊಂಡು ಬದುಕಿನಲ್ಲಿ ಯಶಸ್ಸು ಕಾಣುತ್ತಾರೆ. ಹಲವು ಬಗೆಯ ತಿಂಡಿ ಪದಾರ್ಥಗಳನ್ನು ತಯಾರು ಮಾಡಿ ಸಂತೆ, ಜಾತ್ರೆಗಳಲ್ಲಿ ಮಾರಾಟ ಮಾಡುವುದರಲ್ಲಿಯು ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ. ಮನೆಯ ಹೆಂಗಸರು ಇವುಗಳನ್ನು ತಯಾರಿಸುವಲ್ಲಿ ಗಂಡಸರಿಗೆ ಸಹಾಯ ಮಾಡುತ್ತಾರೆ. ಹೆಚ್ಚು ವಿದ್ಯಾವಂತ ಯುವಕರು ಕೂಡ ವೃತ್ತಿ ಧರ್ಮವನ್ನು ಪಾಲಿಸಿಕೊಂಡು ಬರುತ್ತಿದ್ದಾರೆ.

ಅ) ವಿವಾಹ ಶಾಸ್ತ್ರಗಳು

ವರನ ಮನೆಯವರು ವಧುವಿನ ಮನೆಗೆ ಹೆಣ್ಣು ನೋಡಲು ಬರುತ್ತಾರೆ. ಕನ್ಯೆಯ ರೂಪ, ಸ್ವಭಾವ, ವಿದ್ಯಾರ್ಹತೆ ಹಾಗು ತಂದೆ-ತಾಯಿಯ ಸ್ಥಿತಿಗತಿಗಳನ್ನು ಅವಲೋಕಿಸಿ, ಸಂಬಂಧ ಸೂಕ್ತವೆನಿಸಿದರೆ ವರನನ್ನು ಹುಡುಗಿ ನೋಡಲು ಕಳುಹಿಸುತ್ತಾರೆ. ಗಂಡು ಹೆಣ್ಣಿಗೆ ಪರಸ್ಪರ ಒಪ್ಪಿಗೆಯಾದ ಮೇಲೆ ಹೆಣ್ಣಿನ ಕಡೆಯವರು ಗಂಡಿನ ಮನೆಗೆ ಹೋಗಿ ಬರುತ್ತಾರೆ. ನಂತರ ಒಂದು ಒಳ್ಳೆಯ ದಿನ ಗೊತ್ತುಪಡಿಸಿ ಸಿಹಿ ಅಡುಗೆ ಮಾಡಿಸಿ, ವಧುವಿನ ಮನೆಯಲ್ಲಿ ಹಿರಿಯರು ಮಾತುಕತೆಗೆ ಸೇರುತ್ತಾರೆ. ವರೋಪಚಾರ, ಮದುವೆ ಮಾಡಿಕೊಡುವ ಸ್ಥಳಗಳ ಬಗ್ಗೆ ತೀರ್ಮಾನ ಮಾಡಿಕೊಳ್ಳುತ್ತಾರೆ. ಹಾಗೆಯೇ ವರನ ಮನೆಯವರು ಹುಡುಗಿಗೆ ಕೊಡುವ ಚಿನ್ನಾಭರಣಗಳ ಬಗ್ಗೆಯು ಚರ್ಚಿಸುತ್ತಾರೆ. ಶುಭದಿನದಂದು ನಿಶ್ಚಿತಾರ್ಥ ಶಾಸ್ತ್ರವನ್ನು ಇಟ್ಟುಕೊಳ್ಳುತ್ತಾರೆ.

ಆ) ನಿಶ್ಚಿತಾರ್ಥ

ನಿಶ್ಚಿತಾರ್ಥ ಸಾಮಾನ್ಯವಾಗಿ ವಧುವಿನ ಮನೆಯಲ್ಲಿಯೇ ನಡೆಯುತ್ತದೆ. ಅನುಕೂಲಸ್ಥರಾದರೆ ಕಲ್ಯಾಣ ಮಂಟಪ ಅಥವಾ ಹೋಟೆಲ್‌ಗಳಲ್ಲಿ ಅದ್ದೂರಿಯಾಗಿ ಇಲ್ಲದಿದ್ದರೆ ಮನೆಯಲ್ಲಿಯೆ ಸಾಧ್ಯವಾದ ಮಟ್ಟಿಗೆ ನಿಶ್ಚಿತಾರ್ಥ ಕಾರ್ಯ ಮಾಡಿಕೊಡುತ್ತಾರೆ. ವರನ ಕಡೆಯವರು ಬಂದಾಗ ವಧುವಿನ ಕಡೆಯವರು ಅವರನ್ನು ಸಂತೋಷದಿಂದ ಬರಮಾಡಿಕೊಳ್ಳುತ್ತಾರೆ. ನಂತರ ತಂಪು ಪಾನೀಯಗಳಿಂದ ಸತ್ಕರಿಸುತ್ತಾರೆ. ಅಲಂಕಾರ ಭೂಷಿತಳಾದ ವಧುವನ್ನು ಕುರ್ಚಿಯಲ್ಲಿ ಕುಳ್ಳಿರಿಸಿ, ಮುತ್ತೈದೆಯರು ಕುಂಕುಮವಿಟ್ಟು ಹೂ ಮುಡಿಸುತ್ತಾರೆ. ವರನು ವಧುವಿನ ಕೊರಳಿಗೆ ಹಾರ ಹಾಕುತ್ತಾನೆ. ವಧು-ವರನ ಕೊರಳಿಗೆ ಹಾರ ಹಾಕುತ್ತಾಳೆ. ನಂತರ ಇಬ್ಬರು ಉಂಗುರವನ್ನು

ಬದಲಾಯಿಸಿ ಕೊಳ್ಳುತ್ತಾರೆ. ತರುವಾಯ ಎರಡು ಕಡೆಯವರು ಸಿಹಿ ಭೋಜನ ಮಾಡಿ ಬೀಗುತ್ತಾರೆ.

ಇ) ಅರಿಶಿನ ಕುಟ್ಟುವ ಶಾಸ್ತ್ರ

ಲಗ್ನ ಪತ್ರಿಕೆಯನ್ನು ಬಂಧು ಬಳಗದವರಿಗೆ, ಇಷ್ಟಮಿತ್ರರಿಗೆ ಕೊಟ್ಟು ಅವರೆಲ್ಲರನ್ನು ವಿವಾಹಕ್ಕೆ ಆಹ್ವಾನಿಸುತ್ತಾರೆ. ವಿವಾಹದ ಒಡವೆ ವಸ್ತ್ರಗಳನ್ನು ಕೊಂಡುಕೊಳ್ಳುವುದಕ್ಕೆ ಮೊದಲು ಒಂದು ಶುಭ ದಿನದಂದು, ಅರಿಶಿನ ಕುಟ್ಟುವ ಶಾಸ್ತ್ರ ಮಾಡುತ್ತಾರೆ. ಶಾಸ್ತ್ರ ತಿಳಿದಿರುವ ಮಹಿಳೆಯರು ಸಡಗರದಿಂದ ಒರಳುಕಲ್ಲು ಮತ್ತು ಎರಡು ಒನಕೆಗಳನ್ನು, ಒಡವೆ ವಸ್ತ್ರಗಳಿಂದ ಅಲಂಕರಿಸುತ್ತಾರೆ. ಹೂಗುಚ್ಛ ಮತ್ತು ಕುಂಕುಮಾಕ್ಷತೆಗಳನ್ನಿಟ್ಟು, ವೀಳೆದೆಲೆ, ತಂಬಿಟ್ಟು, ಚಿಗಣಿ, ಬಾಳೆಹಣ್ಣುಗಳನ್ನು ಅವುಗಳ ಸುತ್ತ ಜೋಡಿಸುತ್ತಾರೆ. ಮುತ್ತೈದೆಯರಲ್ಲಿ ಒಬ್ಬರು ಒರಳುಕಲ್ಲು ಮತ್ತು ಒನಕೆಗಳಿಗೆ ಪೂಜೆ ಮಾಡಿದ ಮೇಲೆ ಐದು ಜನ ಮುತ್ತೈದೆಯರು ಅರಿಶಿನ ಕುಟ್ಟಿ ಪುಡಿ ಮಾಡುತ್ತಾರೆ. ಇದನ್ನು ಮದುವೆಯ ದಿನ ವಧು ವರರಿಗೆ ಹಚ್ಚಲು ಬಳಸುತ್ತಾರೆ. ಅರಿಶಿನ ಕಟ್ಟುವ ಶಾಸ್ತ್ರ ಮುಗಿದ ಮೇಲೆ ಮುತ್ತೈದೆಯರಿಗೆ ಮಡಿಲು ತುಂಬುತ್ತಾರೆ. ವಧುವರರ ಮನೆಗಳು ಸುಣ್ಣಬಣ್ಣಗಳಿಂದ ಕಂಗೊಳಿಸುತ್ತಿರುತ್ತವೆ.

ಈ) ಚಪ್ಪರ ಪೂಜೆ

ಚಪ್ಪರವನ್ನು ಹಾಕಲು ಬಿದಿರು ಬೊಂಬುಗಳನ್ನು ಹಾಕಬೇಕಾದ್ದರಿಂದ ಮನೆಯ ಮುಂಭಾಗದಲ್ಲಿ ಗುಂಡಿ ತೆಗೆಯುತ್ತಾರೆ. ನಂತರ ಕಂಬಗಳನ್ನು ನೆಟ್ಟು, ತಳಿರುತೋರಣಗಳಿಂದ ಸಿಂಗರಿಸಿ ಚಪ್ಪರ ಹಾಕುತ್ತಾರೆ. ಚಪ್ಪರದ ಬಲಭಾಗದ ಕಂಬಕ್ಕೆ ನವಧಾನ್ಯ ತುಂಬಿ ಕಟ್ಟಿದ ಕಂಕಣವನ್ನು ಕಟ್ಟಿ ಹಣ್ಣು, ಕಾಯಿ, ತಾಂಬೂಲಗಳನ್ನಿಟ್ಟು ವಧುವಿನಿಂದ ಮತ್ತು ವರನಿಂದ ಪೂಜೆ ಮಾಡಿಸಿ, ಹಾಲು, ತುಪ್ಪವನ್ನು ಗುಂಡಿಗೆ ಚೆಲ್ಲುತ್ತಾರೆ. ಶುಭ ಕಾರ್ಯಕ್ಕೆ ತೆಂಗಿನ ಮರದ ಹಸಿರು ಗರಿಯ ಚಪ್ಪರವು ಅತ್ಯವಶ್ಯಕ. ಇಲ್ಲಿ ಶ್ರದ್ಧಾ ಭಕ್ತಿಗಳಿಂದ ಸಲ್ಲಿಸುವ ಪೂಜೆ ಎಲ್ಲಾ ದೇವತೆಗಳಿಗೂ ಸಲ್ಲುತ್ತದೆ ಎಂಬ ನಂಬಿಕೆಯಿರುವುದನ್ನು ಗುರುತಿಸಬಹುದು.

ಉ) ಅರಿಶಿನದ ಶಾಸ್ತ್ರ

ದೇವತಾ ಕಾರ್ಯದ ದಿನ ಮುತ್ತೈದೆಯರು ವಧುವನ್ನು ಮಣೆಯ ಮೇಲೆ ಕೂರಿಸುತ್ತಾರೆ. ಒಬ್ಬಳನ್ನು ಕೂರಿಸಬಾರದೆಂಬ ಉದ್ದೇಶದಿಂದ ಅವಳ ಸೋದರಿಯನ್ನು ಜೊತೆಯಲ್ಲಿ ಕೂರಿಸುತ್ತಾರೆ. ವಧುವಿನ ಹಣೆಗೆ ಕುಂಕುಮವಿಟ್ಟು, ಕೆನ್ನೆಗೆ ಅರಿಶಿನ ಹಚ್ಚಿ ತಲೆಗೆ ಹೂವನ್ನು ಮುಡಿಸಿ, ಆಕೆಯ ಕೈಕಾಲಿಗೆ, ಬೆನ್ನಿಗೆ ಎಣ್ಣೆ ಅರಿಶಿನ ಹಚ್ಚುತ್ತಾರೆ. ಶಾಸ್ತ್ರದ ಸಂದರ್ಭದಲ್ಲಿ ಮಹಿಳೆಯರು ಹಸೆಯ ಹಾಡುಗಳನ್ನು ಹಾಡುತ್ತಾರೆ. ನಂತರ ವಧುವಿನ ಬೊಗಸೆಗೆ ತೆಂಗಿನಕಾಯಿ ತಾಂಬೂಲಕೊಟ್ಟು ಆರತಿ ಮಾಡಿ ಸ್ನಾನಕ್ಕೆ ಕಳುಹಿಸಿ ಕೊಡುತ್ತಾರೆ. ಈ ಮಂಗಳ ಮಜ್ಜನವನ್ನು

ಐದು ಜನ ಮುತ್ತೈದೆಯರು ಮಾಡಿಸುತ್ತಾರೆ. ಇದಕ್ಕಾಗಿ ಬಳಸುವ ನೀರನ್ನು ಪವಿತ್ರವೆಂದು ಭಾವಿಸುತ್ತಾರೆ.

ಊ) ಬಳೆಶಾಸ್ತ್ರ

ಹೆಣ್ಣಿನ ಮನೆಯಲ್ಲಿ ಬಳೆ ತೊಡಿಸುವ ಶಾಸ್ತ್ರ ಮಾಡುತ್ತಾರೆ. ಬಳೆಗಾರ ನಿರ್ದಿಷ್ಟ ಸಮಯಕ್ಕೆ ಮದುವೆ ಮನೆಗೆ ಆಗಮಿಸುತ್ತಾನೆ. ತನಗಾಗಿಯೇ ಹಾಸಿರುವ ಚಾಪೆ ಅಥವಾ ಕಂಬಳಿಯ ಮೇಲೆ ಕುಳಿತುಕೊಂಡು, ಬಳೆ ಮಲಾರವನ್ನು ತೆಗೆದಿಡುತ್ತಾನೆ. ವಧುವು ಬಳೆಯ ಮಲಾರಕ್ಕೆ ಪುಷ್ಪ, ಕುಂಕುಮಗಳಿಂದ ಪೂಜೆ ಮಾಡಿದ ಮೇಲೆ ಬಳೆಗಾರನಿಗೆ ಕೊಡಬೇಕಾಗಿರುವ ಹಣ, ಫಲತಾಂಬೂಲಗಳನ್ನು ಕೊಟ್ಟು ಬಳೆಮಲಾರಕ್ಕೆ ನಮಸ್ಕರಿಸಿ ನಂತರ ಬಳೆ ತೊಡಿಸಿಕೊಳ್ಳುತ್ತಾಳೆ. ನಂತರ ಉಳಿದವರು ಒಬ್ಬೊಬ್ಬರಾಗಿ ಬಂದು ಬಳೆ ತೊಡಿಸಿಕೊಳ್ಳುತ್ತಾರೆ. ಬಳೆಗಾರನು ವಿನ್ಯಾಸದಿಂದ ಕೂಡಿದ ಐದು ಹಸಿರು ಬಳೆಗಳನ್ನು ಬಲದ ಕೈಗೆ ಹಾಗೂ ನಾಲ್ಕು ಬಳೆಗಳನ್ನು ವಧುವಿನ ಎಡದ ಕೈಗೆ ತೊಡಿಸುತ್ತಾನೆ. ನಂತರ ಇತರ ಹೆಂಗಸರುಗಳಿಗೆ ತೊಡಿಸುತ್ತಾನೆ. ತರುವಾಯ ಬಳೆಗಾರ ತನ್ನ ಮನೆಗೆ ಹಿಂದಿರುಗುತ್ತಾನೆ.

ಋ) ವರನ ಸಂಬಂಧಿಕರ ಸತ್ಕಾರ

ವರನ ಕಡೆಯವರು ವಧುವಿನ ಮನೆಗೆ ಅಥವಾ ಕಲ್ಯಾಣ ಮಂಟಪಕ್ಕೆ ಬಂದಾಗ ವರನನ್ನು ಮಂಟಪದ ಮುಂದೆ ಕುರ್ಚಿಯಲ್ಲಿ ಕುಳ್ಳಿರಿಸುತ್ತಾರೆ. ಆತನ ಪಕ್ಕದಲ್ಲಿ ಅವನ ತಂದೆ, ತಾಯಿ, ಅಣ್ಣ, ಅತ್ತಿಗೆ, ಅಕ್ಕ, ಭಾವ ಮೊದಲಾದ ರಕ್ತ ಸಂಬಂಧಿಗಳನ್ನು ಕುಳ್ಳಿರಿಸಿ ಕುಂಕುಮಾಕ್ಷತೆ.. ಫಲತಾಂಬೂಲ ಮತ್ತು ಉಡುಗೊರೆಗಳನ್ನು ನೀಡಿ ಸತ್ಕರಿಸುತ್ತಾರೆ. ಹೀಗೆ ಸತ್ಕರಿಸುವುದು ಅವರಿಗೆ ಗೌರವ ತರುತ್ತದೆ ಎಂಬ ಭಾವನೆಯಿದೆ. ಇದರಿಂದ ವಿವಾಹವು ಯಶಸ್ವಿಯಾಗಿ ನೆರವೇರುವುದೆಂಬ ನಂಬಿಕೆಯು ಇದೆ.

ವಧುವಿನ ಸೋದರ ವರನ ಕೊರಳಿಗೆ ಪುಷ್ಪ ಮಾಲಿಕೆ ಹಾಕಿ, ತಾವು ತಂದಿರುವ ಅವಶ್ಯಕ ವಸ್ತುಗಳನ್ನೊಳಗೊಂಡ ಪೆಟ್ಟಿಗೆಯನ್ನು ವರನ ಕೈಗೆ ಕೊಡುತ್ತಾನೆ. ಇದರಲ್ಲಿ ಬ್ರೆಷ್, ಸೋಪು, ಅಲಂಕಾರ ಸಾಮಗ್ರಿಗಳು, ಶೇವಿಂಗ್ ಸೆಟ್, ಟವಲ್, ಪಂಚೆ, ಕನ್ನಡಿ, ಮೊದಲಾದ ವಸ್ತುಗಳಿರುತ್ತವೆ. ನಂತರ ಬಂದವರಿಗೆಲ್ಲಾ ಪಾನಕ ಕೊಟ್ಟು ಸತ್ಕರಿಸುತ್ತಾರೆ. ನಂತರ ವರನಿಗಾಗಿ ಸಿದ್ಧಗೊಳಿಸಿರುವ ಕೊಠಡಿಯನ್ನು ತೋರಿಸುತ್ತಾರೆ. ಬೀಗರು ಅವರ ಕಡೆಯವರಿಗೂ ಕೊಠಡಿಗಳನ್ನು ಕೊಡುತ್ತಾರೆ. ಬಂದಿರುವವರಿಗೆ ತಿಂಡಿ – ಕಾಫಿ, ವ್ಯವಸ್ಥೆ ಮಾಡಿರುತ್ತಾರೆ. ವಧು ವರರಿಗೆ ಕೊಡುವ ಚಿನ್ನಾಭರಣಗಳು ಹಾಗೂ ಬೆಳ್ಳಿಯ ಪೂಜಾ ಸಲಕರಣೆಗಳನ್ನು ಸಿದ್ಧಪಡಿಸಿಕೊಂಡಿರುತ್ತಾರೆ.

ಋ) ವರಪೂಜೆ

ವರ ಮತ್ತು ವಧುವಿನ ಕಡೆಯವರೆಲ್ಲಾ ಊಟ ಮಾಡಿದ ಮೇಲೆ ವರಪೂಜೆಗೆ ಆಗಮಿಸುತ್ತಾರೆ. ವರನಿಗೆ ಗೌರವ ಸೂಚಕವಾಗಿ ಬಗೆ ಬಗೆಯ ತಿಂಡಿ ಪದಾರ್ಥಗಳು ಹಾಗೂ ಆಕರ್ಷಣೀಯವಾದ ಬೊಂಬೆಗಳನ್ನು ತಯಾರಿಸಿರುತ್ತಾರೆ. ಮುಹೂರ್ತ ಮಂಟಪದ ಮುಂಭಾಗದಲ್ಲಿ ವಧು ಹಾಗೂ ವರನ ತಂದೆ ತಾಯಿಗಳು ಎದುರು ಬದುರಿಗೆ ಕುಳಿತುಕೊಂಡಿರುತ್ತಾರೆ. ವಧುವಿನ ಕಡೆಯ ಹಿರಿಯ ಮುತ್ತೈದೆಯೊಬ್ಬರು ವರನ ಸಮೀಪ ಬಂದು ವರನ ಹಣೆಗೆ ಕುಂಕುಮವನ್ನಿಟ್ಟು, ಕೆನ್ನೆಗೆ ದೃಷ್ಟಿ ಬೊಟ್ಟಿಟ್ಟು ಕೊರಳಿಗೆ ಹೂ ಮಾಲೆ ಹಾಕುತ್ತಾರೆ. ಅಲಂಕರಿಸಿಕೊಂಡ ಕನ್ಯೆಯರು ತಿಂಡಿ ಪದಾರ್ಥಗಳ ತಟ್ಟೆಗಳನ್ನು ಒಬ್ಬೊಬ್ಬರೇ ಬಂದು ವರನಿಗೆ ಕೊಡುತ್ತಾರೆ. ವರನ ಕಡೆಯವರು ಕೂಡ ತಾವು ತಯಾರಿಸಿಕೊಂಡು ಬಂದಿರುವ ತಿಂಡಿಗಳನ್ನು ತಟ್ಟೆಯಲ್ಲಿಟ್ಟು ವಧುವಿನ ಕಡೆಯವರಿಗೆ ಕೊಡುತ್ತಾರೆ.

ಪುರೋಹಿತರು ಕುಳಿತಿರುವ ಸ್ಥಳಕ್ಕೆ ಪೂಜಾ ಸಲಕರಣೆಗಳನ್ನು ತಂದು ಜೋಡಿಸುತ್ತಾರೆ. ಪುರೋಹಿತರು ಲಗ್ನಪತ್ರಿಕೆ ಪೂಜೆ ಕಾರ್ಯ ಪ್ರಾರಂಭಿಸುತ್ತಾರೆ. ಮಂತ್ರಗಳನ್ನು ಪಠಿಸುತ್ತಾ ವಧುವರರ ಕೈಲಿ ಲಗ್ನ ಪತ್ರಿಕೆಗಳಿಗೆ ಪೂಜೆ ಮಾಡಿಸುತ್ತಾರೆ. ಅರಿಶಿನ ಕುಂಕುಮಾಕ್ಷತೆ ಮಾಡುತ್ತಾರೆ.

ಎ) ತಲೆಗೆ ಎಣ್ಣೆ ಒತ್ತುವ ಶಾಸ್ತ್ರ

ವರ ಮತ್ತು ವರನ ತಂದೆ ತಾಯಿಯನ್ನು ಮಣೆ ಮೇಲೆ ಕೂರಿಸಿ ಅವರ ತಲೆಗೆ ಎಣ್ಣೆ ಒತ್ತಿ ಹಣೆಗೆ ಕುಂಕುಮವನ್ನಿಟ್ಟು, ಕೈಕಾಲುಗಳಿಗೆ ಅರಿಶಿನ ಹಚ್ಚುತ್ತಾರೆ. ಐದು ಜನ ಮುತ್ತೈದೆಯರು ಹೀಗೆ ಅರಿಶಿನ ಹಚ್ಚಿ, ಎಣ್ಣೆ ತಿಕ್ಕಿ ಆರತಿ ಮಾಡಿ ಸ್ನಾನಕ್ಕೆ ಕಳುಹಿಸುತ್ತಾರೆ. ಇದೇ ರೀತಿ ವಧು ಮತ್ತು ವಧುವಿನ ತಂದೆ ತಾಯಿಗಳಿಗೂ ಎಣ್ಣೆ ಒತ್ತಿ ಹಣೆಗೆ ಕುಂಕುಮವನ್ನಿಟ್ಟು ಕೈಕಾಲುಗಳಿಗೆ ಅರಿಶಿನ ಹಚ್ಚಿ ನಂತರ ಸ್ನಾನ ಮಾಡಲು ಕಳುಹಿಸುತ್ತಾರೆ. ನಂತರ ಹೊಸ ವಸ್ತ್ರಗಳನ್ನುಟ್ಟು ಮುಂದಿನ ಶಾಸ್ತ್ರಗಳಿಗೆ ಸಿದ್ಧರಾಗುತ್ತಾರೆ.

ಏ) ಉಪನಯನ

ವರನ ಉಪನಯನಕ್ಕೆ ಹೊರಡುವುದಕ್ಕೆ ಮೊದಲು ವಧುವಿನ ತಂದೆ ವರನಿಗೆ ಹಳದಿ ಬಣ್ಣದ ಪಂಚೆಯನ್ನು ಕೊಡುತ್ತಾರೆ. ವರನು ಆ ಪಂಚೆಯನ್ನು ಕಚ್ಚೆಯಂತೆ ತೊಟ್ಟುಕೊಳ್ಳುತ್ತಾನೆ. ನಿಯಮದ ಪ್ರಕಾರ ವರನಿಗೆ ಜನಿವಾರ ಧಾರಣೆ ಮಾಡಿ ಬ್ರಹ್ಮೋಪದೇಶ ಮಾಡುತ್ತಾರೆ. ಜನಿವಾರ ಧಾರಣೆಗೆ ಬೇಕಾದ ಸಾಮಗ್ರಿಗಳನ್ನು ತಟ್ಟೆಯಲ್ಲಿಟ್ಟು ಆಚಾರ್ಯರ ಬಳಿ ಇಡುತ್ತಾರೆ. ಒಂದು ತಟ್ಟೆಯಲ್ಲಿ ಅಕ್ಕಿ ಹರಡಿ ಅದರಲ್ಲಿ ಅರಿಶಿನ-ಕುಂಕುಮ, ಗಂಧಾಕ್ಷತೆ ಹಾಗೂ ನೂಲಿನ ಜನಿವಾರವನ್ನಿಟ್ಟಿರುತ್ತಾರೆ. ಇನ್ನೊಂದು ತಟ್ಟೆಯಲ್ಲಿ ಪೂಜಾ ಸಾಮಗ್ರಿಯನ್ನು ಜೋಡಿಸಿಟ್ಟಿರುತ್ತಾರೆ. ನಂತರ ವರನಿಗೆ ಪುರೋಹಿತರು ಜನಿವಾರ ಧಾರಣೆಯ ಉಪಯೋಗವನ್ನು ವಿವರಿಸುತ್ತಾರೆ.

ವರನು ಪುರೋಹಿತರ ಪಾದಗಳಿಗೆ ನಮಸ್ಕಾರ ಮಾಡುತ್ತಾನೆ. ನಂತರ ಭುಜಕ್ಕೆ ಜೋಳಿಗೆಯನ್ನು ಹಾಕಿ ಭಿಕ್ಷೆಗೆ ಕಳುಹಿಸುತ್ತಾರೆ. ಮೊದಲು ತಾಯಿಯ ಬಳಿ ಬಂದು ಭಿಕ್ಷೆ ಕೇಳುತ್ತಾನೆ. ನಂತರ, ಅತ್ತೆ ಮಾವ, ಮತ್ತು ಇತರರು ಭಿಕ್ಷೆ ನೀಡುತ್ತಾರೆ.

ಜನಿವಾರ ಧಾರಣೆಯ ಕಾರ್ಯವನ್ನು ಬಾಲ್ಯದಲ್ಲಿಯೋ, ಯೌವನದಲ್ಲಿಯೋ ಮಾಡಿಸುತ್ತಾರೆ. ಆಗ ಮಾಡಿಸದಿದ್ದರೆ ವಿವಾಹದ ಸಮಯದಲ್ಲಾದರೂ ಮಾಡಿಸುತ್ತಾರೆ. ಪುರೋಹಿತರು ಪಂಚ ಮುತ್ತೈದೆಯರನ್ನು ಕರೆದು ಅವರ ಕೈಲಿ ಜನಿವಾರ ಕೊಟ್ಟು ವರನ ಎಡಭುಜದ ಮೇಲೆ ಬರುವಂತೆ ಹಾಕಿರೆಂದು ಹೇಳುತ್ತಾರೆ. ಪುರೋಹಿತರ ಸಲಹೆಯಂತೆ ಮುತ್ತೈದೆಯರು ವರನಿಗೆ ಜನಿವಾರ ಧಾರಣೆ ಮಾಡುತ್ತಾರೆ. ಇದಾದ ಮೇಲೆ ಅಲ್ಲಿ ಸೇರಿದ್ದವರೆಲ್ಲ ವರನಿಗೆ ಅಕ್ಷತೆ ಹಾಕಿ ಆಶೀರ್ವಾದ ಮಾಡುತ್ತಾರೆ. ಜನಿವಾರ ಧಾರಣೆ ಮಾಡಿದ ಪಂಚ ಮುತ್ತೈದೆಯರು ಒಬ್ಬೊಬ್ಬರಾಗಿ ವರನ ಹಣೆಗೆ ಕುಂಕುಮವನ್ನಿಟ್ಟು ಅಕ್ಷತೆ ಹಾಕಿ ಆಶೀರ್ವಾದ ಮಾಡಿ ಹಿಂದಿರುಗುತ್ತಾರೆ.

ಐ) ಗೌರಿಪೂಜೆ

ದೊಡ್ಡ ಕೊಠಡಿಯೊಂದರಲ್ಲಿ ಗೌರಿಯನ್ನು ಅಲಂಕಾರ ಮಾಡಿ ಕೂರಿಸುತ್ತಾರೆ. ಅದರ ಅಕ್ಕಪಕ್ಕದಲ್ಲಿ ವಿವಿಧ ರೀತಿಯ ಪುಷ್ಪಗಳಿಂದ ವಿಶೇಷವಾಗಿ ಅಲಂಕಾರ ಮಾಡಿರುತ್ತಾರೆ. ಬಣ್ಣ ಬಣ್ಣದ ರಂಗೋಲಿಯನ್ನು ಹಾಕಿರುತ್ತಾರೆ. ದೀಪ ಕಂಬಗಳನ್ನು ಸ್ವಚ್ಛಗೊಳಿಸಿ, ವಸ್ತ್ರಾಭರಣಗಳಿಂದ ಅಲಂಕಾರ ಮಾಡಿರುವ ಅಷ್ಟಲಕ್ಷ್ಮಿಯ ಕಳಸವನ್ನಿಟ್ಟಿರುತ್ತಾರೆ. ಹೂಕುಂಡಗಳನ್ನು ಅಲಂಕಾರ ಮಾಡಿ ಕಲಾತ್ಮಕವಾಗಿ ಜೋಡಿಸಿರುತ್ತಾರೆ. ತಂದೆ ಮನೆಯವರು ಮಗಳಿಗೆ ಕೊಡುವ ಬೆಳ್ಳಿಯ ಪೂಜಾ ವಿಗ್ರಹಗಳು, ತಟ್ಟೆ, ಕಳಸ, ಅಷ್ಟಲಕ್ಷ್ಮಿ ಚೊಂಬು, ಅರಿಶಿನ ಕುಂಕುಮದ ಬಟ್ಟಲು, ಬೆಳ್ಳಿ ಗೌರಿ, ಮೊದಲಾದವುಗಳನ್ನು ಜೋಡಿಸಿರುತ್ತಾರೆ. ಮತ್ತೊಂದು ತಟ್ಟೆಯಲ್ಲಿ ಹಸಿರು ಗಾಜಿನ ಬಳೆ, ಒಂದು ತಟ್ಟೆಯಲ್ಲಿ ಅರಿಶಿನ ಕುಂಕುಮದ ಕವರು ತುಂಬಿಟ್ಟಿರುತ್ತಾರೆ. ಮಗಳಿಗೆ ಕೊಡುವ ವಸ್ತ್ರಗಳನ್ನು ಸಂಗ್ರಹಿಸಿರುತ್ತಾರೆ.

ಗೌರಿದೇವಿಯ ವಿಗ್ರಹದ ಮುಂದೆ ಪಂಚ ಫಲಗಳನ್ನು, ಪೂಜಾ ಸಾಮಗ್ರಿಗಳನ್ನು, ಐದು ಜೊತೆ ಬಾಗಿನವನ್ನು ಎಲೆ, ಅಡಿಕೆ, ತೆಂಗಿನ ಕಾಯಿಗಳ ಜೊತೆಯಲ್ಲಿರಿಸಿರುತ್ತಾರೆ. ವಧುವು ತನ್ನನ್ನು ವಿವಾಹವಾಗಲಿರುವ ಗಂಡನಿಗೆ ದೀರ್ಘಾಯುಷ್ಯವನ್ನು ಬೇಡುವ ಉದ್ದೇಶದಿಂದ ಗೌರಿಪೂಜೆಯನ್ನು ಮಾಡುತ್ತಾಳೆ. ನಂತರ ವಧು ಮುತ್ತೈದೆಯರಿಗೆ ಬಾಗಿನ, ಫಲತಾಂಬೂಲಗಳನ್ನು ಕೊಟ್ಟು ಆಶೀರ್ವಾದ ಪಡೆಯುತ್ತಾಳೆ.

೨.೪. ಶವಸಂಸ್ಕಾರ ಪದ್ಧತಿ

ಈ ಸಮಾಜದಲ್ಲಿ ಸತ್ತಾಗ ವಿಶೇಷ ಆಚರಣೆಗಳಿವೆ. ಸತ್ತ ತಕ್ಷಣ ಮನೆಯಿಂದ ಹೊರಗೆ ತರುತ್ತಾರೆ. ನಂತರ ಕೈಕಾಲು ಮಡಿಚಿ ಜಗುಲಿಯ ಮೇಲಿಟ್ಟು, ಒಂದು ತಟ್ಟೆಯಲ್ಲಿ ಅಕ್ಕಿ-ಬೆಲ್ಲವನ್ನು

ಶವದ ಹೊಟ್ಟೆಯ ಮೇಲಿಡುತ್ತಾರೆ. ಶವದ ತಲೆಯ ಭಾಗದಲ್ಲಿ ಸೇರಿನ ಮೇಲೆ ಸಗಣಿ ಉಂಡೆ ಇಟ್ಟು ಮಣ್ಣಿನ ಹಣತೆ ಹಚ್ಚುತ್ತಾರೆ. ಬಂಧು-ಬಳಗ ಬರುವವರೆಗೂ ಕಾಯುತ್ತಾರೆ. ಮುತ್ತೈದೆಯಾಗಿ ಸತ್ತರೆ ಗಂಡನನ್ನು ಜೊತೆಯಲ್ಲಿ ಕೂರಿಸುತ್ತಾರೆ. ಮನೆ ಮುಂದೆ ಹೊಗೆ ಹಾಕಿ, ಚಟ್ಟ ಸಿದ್ಧಪಡಿಸಿಕೊಳ್ಳುತ್ತಾರೆ. ಒಲೆಯ ಮೇಲೆ ಮಡಕೆಯಲ್ಲಿ ನೀರನ್ನು ಇಡುತ್ತಾರೆ. ಅದೇ ಒಲೆಯ ಮೇಲೆ ಕೂಳನ್ನು ಸಿದ್ಧಪಡಿಸಿಕೊಳ್ಳುತ್ತಾರೆ. ಬಳಗದವರೆಲ್ಲಾ ಬಂದ ಮೇಲೆ ಸಿದ್ಧಪಡಿಸಿಕೊಂಡ ಬಿಸಿ ನೀರಿನಲ್ಲಿ ಸ್ನಾನ ಮಾಡಿಸುತ್ತಾರೆ. ಮುತ್ತೈದೆಯಾಗಿ ಸತ್ತರೆ ಮದುವೆಯಲ್ಲಿ ಮಾಡುವ ಶಾಸ್ತ್ರಗಳ ರೀತಿಯಲ್ಲಿಯೇ ಇಲ್ಲಿಯೂ ಮಾಡುತ್ತಾರೆ.

ಇವರಲ್ಲಿ ಶವವನ್ನು ಹೂಳುವ ಪದ್ಧತಿ ಇದೆ. ಮರಣ ಹೊಂದಿದ ತಕ್ಷಣವೇ ಕೆಲವರು ಹೋಗಿ ತೋಟ ಅಥವಾ ಹೊಲದಲ್ಲಿ ೬ ಅಡಿ ಉದ್ದ, ೩ ಅಡಿ ಅಗಲದ ಗುಂಡಿಯನ್ನು ತೆಗೆಯುತ್ತಾರೆ. ಗುಂಡಿಯ ಬಳಿಗೆ ಶವವನ್ನು ಹೊತ್ತುಕೊಂಡು ಹೋಗುವಾಗ ಬಂಧು ಬಳಗದವರೆಲ್ಲಾ ಹೆಗಲು ಕೊಡುತ್ತಾರೆ. ಊರಾಚೆಗೆ ಹೋದ ಮೇಲೆ ಒಂದು ಜಾಗದಲ್ಲಿ ಶವವನ್ನು ಇಳಿಸಿ ಮಡಕೆಯಲ್ಲಿ ತಂದ ಕೂಳನ್ನು ನಾಲ್ಕು ಕಡೆಗೂ ಇರಿಸಿ ಪೂಜೆ ಮಾಡಿ ಹೆಣವನ್ನು ಹಿಂದು-ಮುಂದು ಮಾಡಿಕೊಂಡು ಗುಂಡಿ ತೆಗೆದ ಜಾಗಕ್ಕೆ ತರುತ್ತಾರೆ. ಶವವನ್ನು ಹೊತ್ತುಕೊಂಡು ಬರುವಾಗ ಸತ್ತವನು ಪುರುಷನಾದರೆ ಅವನ ಹಿರಿಯ ಮಗ, ತಾಯಿಯಾದರೆ ಕಿರಿಯ ಮಗ ಕೈಯಲ್ಲಿ ಒಂದು ಕೊಳ್ಳಿ ಹಿಡಿದುಕೊಂಡು ಬಲಗೈಯಲ್ಲಿ ಕೂಳಿನ ಮಡಕೆಯನ್ನು ಹಿಡಿದುಕೊಂಡು ಬರುತ್ತಾರೆ. ಚಟ್ಟವನ್ನು ಸಿದ್ಧಪಡಿಸಲು ಹಸಿ ಬಿದಿರನ್ನೇ ತರುತ್ತಾರೆ. ಗುಂಡಿಯ ಬಳಿಗೆ ಬಂದ ಮೇಲೆ ವಿವಿಧ ಶಾಸ್ತ್ರ ಪೂಜೆಗಳನ್ನು ಮಾಡಿ ಗುಂಡಿಯಲ್ಲಿ ಮಲಗಿಸಿ ಮಣ್ಣು ಮುಚ್ಚುತ್ತಾರೆ.

ಅಲ್ಲಿಂದ ಸತ್ತ ಮೂರು ದಿನಕ್ಕೆ ಹಾಲು ತುಪ್ಪದ ಕಾರ್ಯ, ಸತ್ತ ಹನ್ನೊಂದನೆಯ ದಿನಕ್ಕೆ ತಿಥಿ ಕಾರ್ಯ ನಡೆಸುತ್ತಾರೆ. ಸತ್ತ ತಿಂಗಳಿಗೆ ಮೂರು ದಿನ ಇರುವಂತೆ ತಿಂಗಳ ತಿಥಿ ಕಾರ್ಯ ನಡೆಸುತ್ತಾರೆ. ಸತ್ತವರು ಮುತ್ತೈದೆಯಾದರೆ ವರ್ಷಕ್ಕೊಮ್ಮೆ ಕಳಸ ಪೂಜೆ ಮಾಡಿ ಮುತ್ತೈದೆಯರನ್ನು ಕರೆದು ಅವರ ನೆನಪಿನಲ್ಲಿ ಉಡುಗೊರೆ ಕೊಡುತ್ತಾರೆ. ಪುರುಷರಾದರೆ ವರ್ಷಕ್ಕೊಮ್ಮೆ ಬರುವ ಪಕ್ಷದಲ್ಲಿ ಅವರು ಇಷ್ಟಪಡುವ ಊಟೋಪಚಾರಗಳನ್ನು ಮಾಡಿ ಎಡೆ ಇಕ್ಕಿ ಪೂಜೆ ಮಾಡಿ ನೆನಪಿಸಿಕೊಳ್ಳುತ್ತಾರೆ.

೩. ಅಗಸರ ಧಾರ್ಮಿಕ ಆಚರಣೆಗಳು

೩.೧. ನಾಮಕರಣ ಪದ್ಧತಿ

ಮಗು ಹುಟ್ಟಿದ ಹನ್ನೊಂದನೆಯ ದಿನಕ್ಕೆ ಮಗುವಿಗೆ, ಬಾಣಂತಿಗೆ ಸ್ನಾನ ಮಾಡಿಸಿ ನಾಮಕರಣ ಮಾಡುತ್ತಾರೆ. ಮನೆದೇವರಿಗೆ ಪೂಜೆ ಮಾಡಿಸುತ್ತಾರೆ. ಮಡಿವಾಳ ಪುರೋಹಿತರನ್ನು ಕರೆಸಿ, ಶಾಸ್ತ್ರೋಕ್ತವಾಗಿ ಪೂಜೆ ಮಾಡಿ ತೀರ್ಥ ಪ್ರಸಾದ ಮಾಡಿ, ಮೊದಲಿಗೆ ಮಗುವಿಗೆ ಮನೆದೇವರ

ಹೆಸರಿಟ್ಟು ಕರೆಯಲು ಹೇಳುತ್ತಾರೆ. ಸೋದರಮಾವನಿಂದ ಹೆಸರು ಕಟ್ಟಿಸುತ್ತಾರೆ. ಒಂದು ವರ್ಷದ ಒಳಗಡೆ ಕೂದಲು ತೆಗೆಯುವ ಶಾಸ್ತ್ರ ಮಾಡುತ್ತಾರೆ. ವಿಶೇಷವಾಗಿ ಮಗು ಮತ್ತು ತಾಯಿಯನ್ನು ಗಂಡಿನ ಮನೆಯವರು ಕರೆದುಕೊಂಡು ಹೋಗಿ ಅವರ ಮನೆಯ ದೇವರಿಗೆ ಮುಡಿಕೊಡುವ ಶಾಸ್ತ್ರವನ್ನು ದೇವಾಲಯದ ಬಳಿ ಬಹುಪಾಲು ಮಾಡುತ್ತಾರೆ. ಸೋದರಮಾವ ಮುಡಿಕೊಡುವ ಮಗುವನ್ನು ಕಡ್ಡಾಯವಾಗಿ ಹಿಡಿದುಕೊಂಡಿರಬೇಕು. ಮುಡಿಕೊಟ್ಟ ನಂತರ ಮಡಿಯಾದ ನಂತರ ಗಂಧ ಇಲ್ಲವೇ ವಿಭೂತಿಯನ್ನು ಮಗುವಿನ ಹಣೆ ಹಾಗೂ ತಲೆಗೆ ಸವರುತ್ತಾರೆ. ಸೋದರಮಾವ ಇಲ್ಲದಿದ್ದಾಗ ಗಂಡನ ತಂಗಿ ಮಗ ಮಗುವನ್ನು ಹಿಡಿಯುತ್ತಾರೆ. ಇದು ಇಲ್ಲದಿದ್ದ ಕಡೆ ಸ್ವತಃ ತಂದೆಯೇ ಮಗುವನ್ನು ಹಿಡಿದುಕೊಂಡು ಕುಳಿತುಕೊಳ್ಳುತ್ತಾರೆ. ಅಂದು ಹೆಣ್ಣಿನ ತಾಯಿಗೆ ಮಗುವಿನ ಹಾಗೂ ಬಾಣಂತನ ಮಾಡಿದ ಸಲುವಾಗಿ ತಾಯಿಗೆ ಸೀರೆಯನ್ನು ಶಕ್ತ್ಯಾನುಸಾರ ನೀಡುವುದು ರೂಢಿಯಲ್ಲಿದೆ. ಇದೇ ಹೆಣ್ಣಿನ ಮನೆಯವರು ಮಗುವಿನ ತಂದೆ ತಾಯಿಗೆ ಹಾಗೂ ಮಗುವಿಗೆ ವಸ್ತ್ರ ಉಡುಗೊರೆ ನೀಡುತ್ತಾರೆ. ಒಂದು ವರ್ಷದ ಒಳಗೆ ಮುಡಿ ಕೊಡದಿದ್ದ ಪಕ್ಷದಲ್ಲಿ ಎರಡು ವರ್ಷವಾದ ಮೇಲೆ ಮೂರು ವರ್ಷ ತುಂಬುವುದರೊಳಗೆ ಮಂಡೆ ಕೊಡಲೇಬೇಕು.

೩.೨. ವಿವಾಹ ಪದ್ಧತಿ

ಗಂಡಿನ ಮನೆಯವರು ಹೆಣ್ಣು ನೋಡಲು ಹೋದಾಗ, ಸಾಮಾನ್ಯವಾಗಿ ೩ರಿಂದ ೫ ಜನರು ಹಣ್ಣು, ಎಲೆ, ಅಡಿಕೆ, ಹೂವು, ಸಿಹಿ ತಿಂಡಿಗಳನ್ನು ತೆಗೆದುಕೊಂಡು ಹೆಣ್ಣಿನ ಮನೆಗೆ ಹೋಗುತ್ತಾರೆ. ತಮಗೆ ಒಪ್ಪಿಗೆಯಾದರೆ ಹೆಣ್ಣಿನ ಮನೆಯವರನ್ನು ತಮ್ಮ ಮನೆಗೆ ಆಹ್ವಾನಿಸುತ್ತಾರೆ. ಇಬ್ಬರಿಗೂ ಒಪ್ಪಿಗೆಯಾದ ಮೇಲೆ ನಿಶ್ಚಿತಾರ್ಥವಿಟ್ಟುಕೊಳ್ಳುತ್ತಾರೆ. ಅವರವರ ಅನುಕೂಲಕ್ಕೆ ತಕ್ಕಂತೆ ನೂರಾರು ಜನ ಸೇರುತ್ತಾರೆ. ಊಟ ಉಪಚಾರವಾದ ಮೇಲೆ ಜೋಯಿಸರ ಸಲಹೆ ಪಡೆದು ವಿವಾಹದ ದಿನ ಗೊತ್ತುಪಡಿಸುತ್ತಾರೆ.

ಅ) ಚಪ್ಪರದ ದಿನ

ಗಂಡು ಮತ್ತು ಹೆಣ್ಣಿನ ಮನೆಗಳಲ್ಲಿ ಚಪ್ಪರ ಹಾಕಿ ಮದುವೆಯ ಸಿದ್ಧತೆ ಮಾಡಿಕೊಂಡಿರುತ್ತಾರೆ. ಹತ್ತಿಯ ಮರದ ಕೊನೆಯೊಂದನ್ನು ಕಡಿದುಕೊಂಡು ಬಂದು ಚಪ್ಪರಕ್ಕೆ ಕಟ್ಟುವುದು ವಿಶೇಷ. ಗಂಡು, ಹೆಣ್ಣಿನ ಮನೆಗೆ ದೇವತಾಕಾರ್ಯದ ಸಂಜೆಯೆ ಬರುತ್ತದೆ. ಹಳ್ಳಿಗಳಲ್ಲಿ ನಡೆಯುವ ಮದುವೆಗೆ ರಾತ್ರಿ ಶಾಸ್ತ್ರೋಕ್ತವಾಗಿ ೨೦ರಿಂದ ೩೦ ಜನ ಬಂದರೆ, ಕಲ್ಯಾಣಮಂಟಪಗಳಲ್ಲಿ ನಡೆಯುವ ಮದುವೆಗಳಿಗೆ ಹೆಚ್ಚು ಜನ ಬರುತ್ತಾರೆ. ಉಳಿದವರೆಲ್ಲ ಬೆಳಿಗ್ಗೆ ಬಂದು ಸೇರುತ್ತಾರೆ. ರಾತ್ರಿ ಬರುವಾಗ ಗಂಡಿನ ಜೊತೆ ಶಾಸ್ತ್ರದ ಕುಕ್ಕೆ (ವಿಳ್ಳೆಕುಕ್ಕೆ) ತಂದಿರುತ್ತಾರೆ. ಅದರಲ್ಲಿ ೯ ಚಿಪ್ಪು ಬಾಳೆ ಹಣ್ಣು, ೯ ಕಟ್ಟು ಎಲೆ ಅಡಿಕೆ, ೯ ಕೊಪ್ಪರಿ, ೯ ಸೇರು ಪುರಿ, ೯ ಹಚ್ಚು ಬೆಲ್ಲವಿರುತ್ತದೆ.

ಐದು ಅಥವಾ ಒಂಭತ್ತು ಜನ ಮುತ್ತೈದೆಯರು ಶಾಸ್ತ್ರ ಮಾಡುತ್ತಾರೆ. ಹೆಣ್ಣನ್ನು ಹಸೆಮಣೆಯ ಮೇಲೆ ಕೂರಿಸಿ ಮೈ, ಕೈಗೆ ಅರಿಶಿನ ತಿಕ್ಕಿ ನಂತರ ಸ್ನಾನದ ಮನೆಗೆ ಕರೆದುಕೊಂಡು ಹೋಗಿ

ಸ್ನಾನಮಾಡಿಸುತ್ತಾರೆ. ತರುವಾಯ ಅಕ್ಕಿ ಇಡುವ ಶಾಸ್ತ್ರವನ್ನು ಇದೇ ಮುತ್ತೈದೆಯರು ನಡೆಸಿಕೊಡುತ್ತಾರೆ. ಬಂದಿರುವವರಿಗೆ ಎಲೆ ಅಡಿಕೆ ನೀಡುತ್ತಾರೆ. ಹಾಗೆಯೇ ಗಂಡಿನ ಮನೆಯಿಂದ ತಂದಿರುವ ಪುರಿಯನ್ನು ಹಂಚುತ್ತಾರೆ. ಗಂಡಿನ ಕಡೆಯವರು ತಮ್ಮ ಶಾಸ್ತ್ರಪದ್ಧತಿಗಳನ್ನು ಮುಗಿಸಿಕೊಳ್ಳುತ್ತಾರೆ.

ಆ) ಮಡಿವಾಳ ಮಾಚಯ್ಯನನ್ನು ಕರೆತರುವುದು

ಹೆಣ್ಣಿನ ಮನೆಯವರು ಕಳಸವಿಡಿದ ಮುತ್ತೈದೆಯರೊಂದಿಗೆ, ಹಣ್ಣು-ಕಾಯಿ, ಗಂಧದ ಕಡ್ಡಿ, ಕರ್ಪೂರ, ಅರಿಶಿನ-ಕುಂಕುಮಗಳನ್ನಿಡಿದು ಊರಿನ ಕಲ್ಲು ಬಾವಿಯ ಬಳಿಗೆ ವಾದ್ಯಸಮೇತವಾಗಿ ಬರುತ್ತಾರೆ. ೮ರಿಂದ ೯ ವರ್ಷದ ಹೆಣ್ಣಿನ ಕುಟುಂಬದ ಹುಡುಗನೊಬ್ಬನನ್ನು ಸ್ನಾನ ಮಾಡಿಸಿಕೊಂಡು, ಕಚ್ಚೆಪಂಚೆ ಉಡಿಸಿ ಕಳಸ ಹೊರಿಸಿ ಕರೆತಂದಿರುತ್ತಾರೆ. ಬಾವಿಯ ಬಳಿ ತಾಮ್ರದ ಚೊಂಬನ್ನು ತೊಳೆದು, ಬಾವಿಯ ನೀರು ತುಂಬಿ, ವಿಳ್ಳೆ ಎಲೆ ಮಡಿಸಿ, ಹೂವನ್ನು ಸುತ್ತಿ, ಕಳಸವನ್ನು ಪೂಜಿಸುತ್ತಾರೆ. ನಂತರ ಹುಡುಗನ ತಲೆಗೆ ಟವಲ್ಲನ್ನು ಪೇಟದ ರೀತಿ ಸುತ್ತಿ ಆ ಕಳಸವನ್ನು ಹೊರಿಸುತ್ತಾರೆ. ಕಲ್ಲು ಬಾವಿಯಿಂದ ಮನೆಯವರೆಗು ಮಡಿಬಟ್ಟೆಯನ್ನು ನೆಲಕ್ಕೆ ಹಾಸಿ (ನೆರಮುಡಿ) ಅದರ ಮೇಲೆ ಕಳಸ ಹೊತ್ತ ಹುಡುಗನನ್ನು ವಾದ್ಯಗೋಷ್ಠಿಯೊಂದಿಗೆ ಕರೆತರುತ್ತಾರೆ. ಮಡಿವಾಳ ಮಾಚಯ್ಯ ಮನೆದೇವರು ಎಂದು ನಂಬಿ ಈ ಹುಡುಗನಲ್ಲಿ ಮಾಚಯ್ಯನನ್ನು ಕಂಡುಕೊಳ್ಳುತ್ತಾರೆ. ಹೀಗೆ ಮಡಿವಾಳ ಮಾಚಪ್ಪನನ್ನು ಮನೆದುಂಬಿಸಿಕೊಂಡ ನಂತರ ದಾರಾಮುಹೂರ್ತ ಸುಸೂತ್ರವಾಗಿ ನಡೆಯುತ್ತದೆ.

೩.೩. ಶವಸಂಸ್ಕಾರ ಪದ್ಧತಿ

ಸತ್ತಂತಹ ವ್ಯಕ್ತಿಯ ಸತ್ತದಿನ ಕೂಡಾ ಇಲ್ಲಿ ಪ್ರಮುಖವಾಗಿ ಲೆಕ್ಕಚಾರಕ್ಕೆ ಬರುತ್ತದೆ. ಇವರ ಪ್ರಕಾರ ಮಂಗಳವಾರ ಹಾಗೂ ಭಾನುವಾರ ದಿನಗಳು ಸತ್ತರೆ ಅವರ ನೆಂಟರಿಗೆ ಸತ್ತ ವಿಚಾರವನ್ನು ಇವರೇ ನೇರವಾಗಿ ತಿಳಿಸುವುದಿಲ್ಲ. ಕಾರಣ ಹಾಗೇ ತಿಳಿಸಿದರೆ ನೆಂಟರಿಗೆ ಅಶುಭವಾಗಬಹುದೆಂಬ ಭಾವನೆ ರೂಢಿಯಲ್ಲಿದೆ. ಆದ್ದರಿಂದ ಮೂರನೆಯ ವ್ಯಕ್ತಿಯಿಂದ ತಿಳಿಸುತ್ತಾರೆ. ಬೆಳಿಗ್ಗೆ ಸತ್ತರೆ ಸಂಜೆ ವೇಳೆಗೆ ಸಂಸ್ಕಾರ ಮಾಡಬೇಕು. ಸಂಸ್ಕಾರ ಅಂದರೆ ಹೆಣವನ್ನು ಮಣ್ಣು ಮಾಡುವುದಕ್ಕೆ ಹೆಚ್ಚಿನ ಮಾನ್ಯತೆ.

ಮಣ್ಣು ಮಾಡುವುದಕ್ಕೆ ಹೋಗುವಾಗ ಶವದ ಮೆರವಣಿಗೆ ಮೂರು ಜನ ರಕ್ತ ಸಂಬಂಧಿಗಳೂ ಒಬ್ಬ ನೆಂಟರು ಹೊರುತ್ತಾರೆ. ವಿಶೇಷವಾಗಿ ಹೆಣ ಹೊರುವ ಸಂಧರ್ಭದ ವಿಧವೆಯರಿಗೆ ಅವಕಾಶ ಕಲ್ಪಿಸುತ್ತಾರೆ. ಹೆಣ ಹೊರುವುದು ಭಾರ ಎಂದಾದಲ್ಲಿ ಹೆಣವನ್ನು ಹೂಳುವ ಗುಂಡಿಯ ಬಳಿ ಹೆಣ ಇಳಿಸುವ ಕಾರ್ಯವನ್ನಾದರೂ ವಿಧವೆ (ಸೋದರ ಸಂಬಂಧಿ) ಆಗಿರಬೇಕು. ಇಲ್ಲದಿದ್ದ ಪಕ್ಷದಲ್ಲಿ ಅನ್ಯ ವಿಧವೆಯರಿಗೂ ಇಲ್ಲಿ ಅವಕಾಶವಿದೆ. ಇದೇ ವಿಧವೆಯೇ ಸಂಜೆ ಸಮಯದಲ್ಲಿ 'ಭಾರ ಇಳಿಸುವ' ಕಾರ್ಯದಲ್ಲಿ ಹೆಣವನ್ನು ಹೊತ್ತವರ ಬೆನ್ನಿಗೆ ಎಣ್ಣೆ, ಗಂಜಲ, ನೀರು ಎಲ್ಲವನ್ನು ಹಾಕುತ್ತಾರೆ.

ಹೆಣ ಹೊರುವಾಗ ಅರ್ಧ ದಾರಿಯಲ್ಲಿ ನಿಲ್ಲಿಸುತ್ತಾರೆ. ಬಂದವರೆಲ್ಲ ಸೇರಿ ಸಣ್ಣ ಸಣ್ಣ ಕಲ್ಲು ಒಬ್ಬರಿಗೊಂದರಂತೆ ಒಂದೆಡೆ ರಾಶಿ ಹಾಕುತ್ತಾರೆ. ಕೂಳು ಮಡಕೆ (ತಲೆಗೊರವಿ) ಇಕ್ಕುವವ್ಯಕ್ತಿ (ಮಗ / ಅಳಿಯ / ಸೋದರ ಸಂಬಂಧಿ / ಗಂಡಸೆ ಮಾಡಬೇಕು) ಅವನು ಈ ಕಾರ್ಯ ಆರಂಭಿಸುತ್ತಾನೆ. ಮಣ್ಣು ಮಾಡಿದ ಮೇಲೆ ಗುಡ್ಡೆ ಮಾಡಿ ಗುಡ್ಡೆ ಒಳಗೆ ಜೀವಂತ ಕೋಳಿ ಮರಿಯನ್ನು ಸಮಾಧಿ ಮಾಡುತ್ತಾರೆ. ಗುಡ್ಡೆಯಾದ ಮೇಲೆ ತುಂಬೆ ಗಿಡದ ಸಸಿ ನೆಡುತ್ತಾರೆ.

ಅಂದು ಸಂಜೆ ಹುಳಿ ಅನ್ನ ಹಾಕಿ ಶಾಸ್ತ್ರ ಮಾಡಿ ವಾಪಸು ಬಂದು ದೀಪ ನೋಡಿ ಮನೆಗೆ ಹುಳಿ ಅನ್ನ ಊಟ ಮಾಡಿ ಅಲ್ಲಿಂದ ಹೊರಡುತ್ತಾರೆ. ಸತ್ತವರ ಮನೆಗೆ ಹೇಳಿ ಹೊರಡುವ ಸಂಪ್ರಾದಯವಿಲ್ಲ. ಶುಕ್ರವಾರ ಅಥವಾ ಅಮವಾಸ್ಯೆ ದಿನ ಸತ್ತಿದ್ದರೆ ಸಾವಿಗೆ ಬಂದ ನೆಂಟರು ಅಲ್ಲಿ ಉಳಿಯುವುದಿಲ್ಲ. ತಮ್ಮ ಮನೆಗೆ ಹೋಗುವುದಿಲ್ಲ. ಯಾವುದಾದರು ದೇವಾಲಯದಲ್ಲಿ ರಾತ್ರಿ ಉಳಿದು ಮಾರನೆಯ ದಿನ ಮನೆಗೆ ಹೋಗುತ್ತಾರೆ.

ಮದುವೆ, ಹಬ್ಬ, ಜಾತ್ರೆ ಇತ್ಯಾದಿ ಶುಭ ಕಾರ್ಯಗಳು ಇದ್ದಂತಹ ಸಂದರ್ಭ ಮೂರು, ಐದು ಅಥವಾ ಏಳನೆಯ ದಿವಸಕ್ಕೆ ತಿಥಿ ಮಾಡುತ್ತಾರೆ, ಇಲ್ಲವೆ ೧೧ನೇ ದಿವಸಕ್ಕೆ ತಿಥಿ ಮಾಡುತ್ತಾರೆ ೧೧ನೇ ದಿವಸಕ್ಕೆ ತಿಥಿ ಮಾಡುವ ಹಿನ್ನೆಲೆಯಲ್ಲಿ ೩ನೇ ದಿವಸಕ್ಕೆ ಹಾಲು ತುಪ್ಪ ಬಿಡುವ ಕಾರ್ಯ ಮಾಡುತ್ತಾರೆ. ರಕ್ತ ಸಂಬಂಧಿಗಳೆಲ್ಲ ಬರುತ್ತಾರೆ. ತಲೆಗೊರವಿ ಹಿಡಿದ ವ್ಯಕ್ತಿ ಅಂದು ಕೇಶಮುಂಡನ ಮಾಡಿಸಿಕೊಳ್ಳುತ್ತಾನೆ. ತಿಂಗಳು ತಿಥಿ ಇವರಲ್ಲಿ ವಾಡಿಕೆಯಿಲ್ಲ. ವರ್ಷದ ತಿಥಿಯ ಅಭ್ಯಾಸವಿಲ್ಲ. ಮಹಾಲಯ ಅಮವಾಸ್ಯೆಯ ದಿನ (ಮಾರ್ನಮಿ ಹಬ್ಬ) ಇವರು ಸತ್ತವರಿಗೆ ಎಡೆ ಇಡುತ್ತಾರೆ. ವಾಡಿಕೆಯೆಂತೆ ಎಲ್ಲ ವರ್ಷ ಆ ಹಬ್ಬದ ದಿನವೇ ತರ್ಪಣ ಬಿಡುತ್ತಾರೆ.

೪. ಹರಿಜನರ ಧಾರ್ಮಿಕ ಆಚರಣೆಗಳು

೪.೧. ಹೆಣ್ಣು ಮಕ್ಕಳ ಶಾಸ್ತ್ರ ಸಂಪ್ರದಾಯಗಳು

ಅ) ಸೊಪ್ಪಾಕುವ ಶಾಸ್ತ್ರ

ಹೆಣ್ಣು ಮಕ್ಕಳು ಮೈನೆರೆದಾಗ ಅವರಿಗೆ ಸಂಪ್ರದಾಯಬದ್ಧವಾಗಿ ಕೆಲವು ಶಾಸ್ತ್ರಗಳನ್ನು ಇಟ್ಟುಕೊಳ್ಳುತ್ತಾರೆ. ದಕ್ಷಿಣ ಕರ್ನಾಟಕದಾದ್ಯಂತ ಹಿಂದುಳಿದ ಜಾತಿ ಮತ್ತು ಪಂಗಡಗಳಲ್ಲಿ ಹೆಚ್ಚಾಗಿ ಈ ಶಾಸ್ತ್ರಬದ್ಧ ಆಚರಣೆಯನ್ನು ಇಟ್ಟುಕೊಳ್ಳುತ್ತಾರೆ. ಹೆಣ್ಣು ಮಕ್ಕಳು ೧೨ ರಿಂದ ೧೫ ವರ್ಷದ ಒಳಗೆ ಮೈನೆರೆಯುವುದು, ಹೆಣ್ಣಾಗುವುದು, ದೊಡ್ಡವಳಾಗುವುದು ಅಥವಾ ವಯಸ್ಸಿಗೆ ಬರುವುದು ಎಂದು ಕರೆಯುತ್ತಾರೆ. ಈ ರೀತಿ ಹೆಣ್ಣು ಮಕ್ಕಳು ಋತುಮತಿಯರಾದಾಗ ಸೊಪ್ಪಾಕುವ ಅಥವಾ ಗೂಡ್ಲಾಕುವ ಶಾಸ್ತ್ರವನ್ನು ಮಾಡುತ್ತಾರೆ. ಹೆಣ್ಣಿನ ಜೀವನದಲ್ಲಿ ಇದು ಪ್ರಥಮ ಶಾಸ್ತ್ರವಾಗಿದ್ದು, ವಿಶಿಷ್ಟತೆ ಮತ್ತು ಬಹಳ ಪ್ರಾಮುಖ್ಯತೆಯನ್ನು ಹೊಂದಿದೆ.

ಹೆಣ್ಣು ಮಕ್ಕಳು ಈ ಶಾಸ್ತ್ರಕ್ಕೆ ಒಳಪಟ್ಟ ನಂತರ ಬಹಳ ಎಚ್ಚರಿಕೆಯಿಂದ ತಾನೊಬ್ಬ ಹೆಣ್ಣು ಎಂಬ ಅರಿವಿನಿಂದ ಬದುಕಬೇಕಾಗುತ್ತದೆ. ಅಂದಿನಿಂದ ಸಮಾಜದಲ್ಲಿ ಅವಳಿಗೆ ಒಂದು ಸ್ಥಾನಮಾನ ಲಭಿಸುತ್ತದೆ. ತನ್ನ ಹಿಂದಿನ ಹುಡುಗುತನವನ್ನು ಬಿಟ್ಟು ಗಾಂಭೀರ್ಯವಾಗಿ ನಡೆದುಕೊಳ್ಳಬೇಕಾಗುತ್ತದೆ. ಬಾಲ್ಯದಿಂದ ಯಾವುದೇ ಅಡ್ಡಿ ಆತಂಕವಿಲ್ಲದೆ ಓಡಾಡಿಕೊಂಡು ಬೆಳೆದ ಈಕೆ ಈಗ ದೊಡ್ಡವಳಾದ ನಂತರ ಮುಂದೆ ಮಾನ ಅಪಮಾನದ ಆಂತಕ ಮತ್ತು ತಲ್ಲಣಗಳು ಎದುರಾಗುತ್ತವೆ. ತನ್ನ ಶೀಲ ಮತ್ತು ಮಾನ ಮರ್ಯಾದೆ ಕಾಪಾಡಿಕೊಳ್ಳುವ ಜವಾಬ್ದಾರಿ ಈಕೆಯ ಮೇಲೆಯೆ ಇರುತ್ತದೆ. ಅಷ್ಟೇ ಅಲ್ಲದೆ ಇವಳ ತಂದೆ ತಾಯಿ ಮಾತು ಮನೆಮಂದಿಗೆಲ್ಲಾ ಈ ವಿಷಯದ ಬಗ್ಗೆ ಒಂದು ರೀತಿಯ ಭಯ ಮತ್ತು ಅಂಜಿಕೆ ಇದ್ದು ಹೆಣ್ಣು ಮಕ್ಕಳ ನಡವಳಿಕೆ ಮತ್ತು ವರ್ತನೆಯ ಬಗ್ಗೆ ಸದಾ ನಿಗಾವಹಿಸಿ ಚಲನವಲನಗಳನ್ನು ಗಮನಿಸುತ್ತಿರುತ್ತಾರೆ.

ಈ ಶಾಸ್ತ್ರವನ್ನು ಕೆಲವರು ೧೫ ದಿನ ಆಚರಿಸಿದರೆ ಮತ್ತೆ ಕೆಲವರು ೧೬ ದಿನ ಇಟ್ಟುಕೊಳ್ಳುತ್ತಾರೆ. ಹಿಂದಿನ ಕಾಲದಲ್ಲಿ ಋತುಮತಿಯಾದ ಹೆಣ್ಣು ಮಕ್ಕಳನ್ನು ಮನೆಯಿಂದ ಹೊರಗೆ ಐದು ಬಗೆಯ ಸೊಪ್ಪು ಮತ್ತು ಮರದ ಕೋಲುಗಳನ್ನು ತಂದು ಅದರಿಂದ ಸಣ್ಣ ಗುಡಿಸಲನ್ನು ಸೋದರ ಮಾವನಿಂದ ನಿರ್ಮಾಣ ಮಾಡಿಸಿ ಅದರಲ್ಲಿ ಕೂರಿಸಿ ಈ ಶಾಸ್ತ್ರವನ್ನು ಮಾಡುತ್ತಿದ್ದರು. ಆದುದರಿಂದ ಈ ಶಾಸ್ತ್ರವನ್ನು ಗೂಡ್ಲಾಕುವುದು ಎಂದು ಕರೆಯುತ್ತಿದ್ದರು. ನಂತರ ಕಾಲ ಬದಲಾದಂತೆ ಈ ಶಾಸ್ತ್ರದ ಆಚರಣೆಗಳ ಮತ್ತು ಪದ್ಧತಿಗಳ ಕ್ರಮವು ಬದಲಾಗಿದೆ. ಆಧುನಿಕತೆ ಬಂದಂತೆ ನಾಗರೀಕತೆಯೂ ಬದಲಾಗುತ್ತಿದೆ. ಈ ರೀತಿಯ ಚಪ್ಪರ ಅಥವಾ ಗುಡ್ಲನ್ನು ಮನೆಯ ವರಾಂಡದ ಪಡಶಾಲೆಯಲ್ಲಿ ಅಥವಾ ನಡುಮನೆಯ ಒಂದು ಗೋಡೆಯ ಪಕ್ಕದಲ್ಲಿ ಹೆಣೆದ ತೆಂಗಿನ ಗರಿ ಒರಗಿಸಿ ಅದಕ್ಕೆ ಮೂರು ಅಥವ ೫ ಬಗೆಯ ಸೊಪ್ಪುಗಳನ್ನು ಬಳಸಿ ಚಪ್ಪರದ ರೀತಿ ಮಾಡಿ ಅದರಲ್ಲಿ ಋತುಮತಿಯಾದ ಹೆಣ್ಣು ಮಗಳನ್ನು ಕೂರಿಸಿ ಶಾಸ್ತ್ರ ಮಾಡುತ್ತಾರೆ.

ಹೆಣ್ಣು ಮಕ್ಕಳು ಮೈನೆರೆದಾಗ ಅವರ ಚಲನ ವಲನಗಳಿಂದ ತಾಯಿಗೆ ಅರ್ಥವಾಗಿ ಬಿಡುತ್ತದೆ. ಅದನ್ನು ಮೊದಲು ತಾಯಿ ನೋಡಬಾರದು. ನೋಡಿದರೆ ಕೆಟ್ಟದಾಗುತ್ತದೆ ಎಂದು ನಮ್ಮ ಜನರ ನಂಬಿಕೆ. ಆದುದರಿಂದ ಬೇರೆಯವರಿಂದ ಮಗಳು ದೊಡ್ಡವಳಾಗಿರುವುದನ್ನು ದೃಢಪಡಿಸಿಕೊಂಡು ಮುಂದಿನ ಕೆಲಸ ಕಾರ್ಯಗಳಲ್ಲಿ ತೊಡಗುತ್ತಾರೆ. ಕಲೆಯಾದ ಬಟ್ಟೆಯನ್ನು ಅಗಸನಿಗೆ ಅಥವಾ ಯಾರಿಗಾದರೂ ದಾನ ಮಾಡಿಬಿಡುತ್ತಾರೆ. ಮೈನೆರೆದ ಹೆಣ್ಣು ಮನೆಯ ತುಂಬಾ ಓಡಾಡುವ ಹಾಗಿಲ್ಲ ಮತ್ತು ಕೋಣೆ ಮನೆಯ ವಸ್ತುಗಳನ್ನು ಮುಟ್ಟುವಂತಿಲ್ಲ. ಅವಳಿಗೆ ಮತ್ತು ಅವರ ಮನೆಗೆ ಸೂತಕ ಮೈದೋರುತ್ತವೆ. ಆದುದರಿಂದ ಅದೆ ದಿನ ಸಂಜೆ ಮಗಳಿಗೆ ಬಿಸಿನೀರು ಸ್ನಾನ ಮಾಡಿಸಿ ಹೊಸಗೆ ಶಾಸ್ತ್ರ ಮತ್ತು ಸೊಪ್ಪಾಕುವ ಕಾರ್ಯಕ್ರಮವನ್ನು ಇಟ್ಟುಕೊಳ್ಳುತ್ತಾರೆ. ಅಕ್ಕಪಕ್ಕದ ಮನೆಯವರು ಮತ್ತು ನೆಂಟರಿಷ್ಟರನ್ನು, ಈ ಶಾಸ್ತ್ರಕ್ಕೆ ಕರೆದು ಕೆಲವರು ವಿಜೃಂಭಣೆಯಿಂದ ಮಾಡಿದರೆ ಮತ್ತೆ ಕೆಲವರು ಸಾಮಾನ್ಯವಾಗಿ ಗೋಪ್ಯವಾಗಿ ಮಾಡುತ್ತಾರೆ.

ಹೆಣ್ಣಿಗೆ ಸೋದರಮಾವನಾಗಬೇಕಾದ ವ್ಯಕ್ತಿ ಬಂದು ಈ ಸೊಪ್ಪಿನ ಚಪ್ಪರವನ್ನು ಹಾಕಿ ಹೆಣ್ಣನ್ನು ಹೊರಗಡೆ ತಂದು ಕೂರಿಸುತ್ತಾರೆ. ಇದು ಇಂದಿಗೂ ಎಲ್ಲಾ ವರ್ಗದವರಲ್ಲಿಯೂ ಸಾಂಪ್ರದಾಯಿಕವಾಗಿ ನಡೆದುಕೊಂಡು ಬರುತ್ತದೆ. ಸಾಮಾನ್ಯವಾಗಿ ಈ ಚಪ್ಪರವನ್ನು ಬೇವು, ಹಲಸು, ನಿಂಬೆ, ತೆಂಗಿನಗರಿ, ಬಿಲ್ವಪತ್ರೆ ಮುಂತಾದ ಸೊಪ್ಪುಗಳನ್ನು ಬಳಸಿ ಹಾಕುತ್ತಾರೆ. ನಂತರ ಈ ಹೆಣ್ಣು ಮಗಳನ್ನು ಕೂರಿಸಿ ಒಸಗೆ ಶಾಸ್ತ್ರ ಮಾಡುತ್ತಾರೆ. ಹಿಂದೂ ಸಂಪ್ರದಾಯದಲ್ಲಿ ಈ ಒಸಗೆ ಶಾಸ್ತ್ರಕ್ಕೆ ಬಹಳ ಪ್ರಾಮುಖ್ಯತೆ ಇದೆ. ಒಸಗೆ ಒಳ್ಳೆಯದರ, ಶುಭದ ಸಂಕೇತವಾಗಿದೆ.

ಒಸಗೆ ಶಾಸ್ತ್ರದಲ್ಲಿ ಮೈನೆರೆದ ಹುಡುಗಿಯರನ್ನು ಶೃಂಗಾರ ಮಾಡಿ ಹೊಸ ರೇಷ್ಮೆ ಬಟ್ಟೆಗಳು ಮತ್ತು ಒಡವೆಗಳನ್ನು ಹಾಕಿ ಅಲಂಕರಿಸಿ ಸೊಪ್ಪಿನ ಗುಡಿಸಲಿನ ಒಳಗಡೆ ಮತ್ತು ಪಕ್ಕದಲ್ಲಿ ಹಸೆಮಣೆ ಮೇಲೆ ಕೂರಿಸಿ ಶಾಸ್ತ್ರ ಮಾಡುತ್ತಾರೆ. ಇತ್ತೀಚೆಗೆ ಕೆಲವರು ಕುರ್ಚಿಯ ಮೇಲೆ ಕೂಡಿಸಿ ಶಾಸ್ತ್ರ ಮಾಡುತ್ತಾರೆ. ಹೆಣ್ಣಿನ ಮುಂದೆ ೯ ತಟ್ಟೆಗಳಲ್ಲಿ ಹಣ್ಣುಗಳು, ಕೊಬ್ಬರಿ, ತೆಂಗಿನಕಾಯಿ, ಕಳಸ, ಕನ್ನಡಿ, ಅಕ್ಕಿ, ವೀಳ್ಯ ಮುಂತಾದ ವಸ್ತುಗಳನ್ನು ತಟ್ಟೆಗಳಲ್ಲಿ ತುಂಬಿಟ್ಟು, ಸಂಬಂಧಿಕರು ಮತ್ತು ಅಕ್ಕಪಕ್ಕದ ಮನೆಯ ಮುತ್ತೈದೆಯರು ಅಕ್ಷತೆ ಕಾಳುಗಳನ್ನು ಶಾಸ್ತ್ರಬದ್ಧವಾಗಿ ಹಾಕಿ ಹರಸಿ ಹಾರೈಸುತ್ತಾರೆ. ಆಗ ಸೋಬಾನೆ ಪದ ಹಾಡುವ ಹೆಂಗಸರು ಬಹಳ ಸಂತೋಷ ಮತ್ತು ಸಂಭ್ರಮದಿಂದ ಪದ ಹಾಡುತ್ತಾರೆ. ಸಂಬಂಧಿಕರು ಮತ್ತು ನೆರೆದವರು ಹೆಣ್ಣಿಗೆ ಮುಯ್ಯನ್ನು ಕೊಡುವ ಪದ್ಧತಿ ಇದ್ದು ಹತ್ತಿರದ ಸಂಬಂಧಿಕರು ಮತ್ತು ಆತ್ಮೀಯರು ಉಡುಗೊರೆ ಕೊಡುತ್ತಾರೆ. ನಂತರ ಈ ಶಾಸ್ತ್ರ ಮುಗಿದ ಮೇಲೆ ನೆರೆದಿದ್ದ ಮುತ್ತೈದೆಯರು ಹಣ್ಣು, ತಾಂಬೂಲ ತೆಗೆದುಕೊಂಡು ಹೆಣ್ಣಿಗೆ ಅರಸಿ ಹೋಗುತ್ತಾರೆ. ಇದೇ ರೀತಿ ಮೂರು ದಿನ ಹೆಣ್ಣು ಕೂರಿಸಿ ಶಾಸ್ತ್ರ ಮಾಡುತ್ತಾರೆ. ಈ ದಿನಗಳಲ್ಲಿ ಹೆಣ್ಣು ರಾತ್ರಿಯಲ್ಲಿ ನಿದ್ದೆ ಮಡಬಾರದು. ಅದಕ್ಕಾಗಿ ರಾತ್ರಿಯಲ್ಲಿ ಸೋಬಾನೆ ಪದ ಹಾಡುವುದು ಸ್ನೇಹಿತೆಯರು ಮತ್ತು ಅತ್ತಿಗೆ ನಾದಿನಿಯರಿದ್ದರೆ ಅವರುಗಳೆಲ್ಲಾ ಸೇರಿಕೊಂಡು ಆಟಪಾಠಗಳನ್ನು ಆಡುತ್ತಾ, ಹೆಣ್ಣು ೩ ದಿನ ರಾತ್ರಿ ನಿದ್ದೆ ಮಾಡಲು ಬಿಡುವುದಿಲ್ಲ. ಬೇಕಾದರೆ ಬೆಳಿಗ್ಗೆಯಲ್ಲಿ ನಿದ್ದೆ ಮಾಡಬಹುದು. ಬೆಳಗ್ಗೆ ಬಿಸಿನೀರು ಸ್ನಾನ ಮಾಡಿಸಿ ಕೆಲವು ಪಥ್ಯದ ಅಡಿಗೆ ಮಾಡಿ ಬಡಿಸುತ್ತಾರೆ. ಉದ್ದಿನಕಾಳು, ಉಚ್ಚೆಳ್ಳೆಣ್ಣೆ ಇತ್ಯಾದಿ ಅಡುಗೆಗಳನ್ನು ಈ ಹೆಣ್ಣಿಗೆ ಮಾಡಿಕೊಡುತ್ತಾರೆ. ಮೂರನೇ ದಿನ ಸ್ನಾನ ಮಾಡಿಸಿ ಗುಡಿಸಲಿಗೆ ಹಾಕಿದ ಸೊಪ್ಪುಗಳನ್ನು ಮತ್ತು ಹೆಣ್ಣಿನ ಕೈಯಿಂದಲೇ ಹೊರಗಡೆಗೆ ಹಾಕಿಸಿ ಹೆಣ್ಣನ್ನು ಮನೆಯ ಒಳಗಡೆ ಸೇರಿಸಿಕೊಳ್ಳುತ್ತಾರೆ. ಅನಂತರ ೧೧ ರಿಂದ ೧೫ ದಿನ ಹೆಣ್ಣನ್ನು ಮನೆಯಿಂದ ಹೊರಗಡೆ ಬಿಡುವುದಿಲ್ಲ. ಕೆಲಸ ಕಾರ್ಯಗಳಿಗೆ ಕಳುಹಿಸುವುದಿಲ್ಲ. ಕಾರಣ ಹಸಿ ಮೈಗೆ ಗಾಳಿ ಹೊಕ್ಕುತ್ತದೆ ಎಂದು ಈ ರೀತಿ ಮಾಡುತ್ತಾರೆ. ಒಂದು ದಿನ ಸಂಬಂಧಿಕರನ್ನೆಲ್ಲ ಕರೆದು ಒಸಗೆ ಶಾಸ್ತ್ರವನ್ನು ಇಟ್ಟುಕೊಳ್ಳುತ್ತಾರೆ. ಈ ಕೊನೆಯ ಒಸಗೆ ಶಾಸ್ತ್ರ ಮುಗಿದ ಮೇಲೆ ಮೈನೆರೆದ ಹೆಣ್ಣಿನ ಶಾಸ್ತ್ರ ಮುಕ್ತಾಯವಾಗುತ್ತದೆ.

ಆ) ಸೀಮಂತ

ಗರ್ಭಿಣಿಯಾದ ಹೆಣ್ಣುಮಕ್ಕಳಿಗೆ ಮಾಡುವ ಒಂದು ವಿಶಿಷ್ಟ ಆಚರಣೆಯಾಗಿದೆ. ಹೊಸದಾಗಿ ಮದುವೆಯಾದ ಹೆಣ್ಣು ಗರ್ಭಿಣಿಯಾದ ಐದು ಅಥವಾ ಏಳು ತಿಂಗಳುಗಳವರೆಗೆ ಗಂಡನ ಮನೆಯಲ್ಲಿಯೇ ಇರುತ್ತಾಳೆ. ನಂತರ ಚೊಚ್ಚಲ ಹೆರಿಗೆಯನ್ನು ತವರು ಮನೆಯಲ್ಲಿ ಮಾಡಿಸುವ ಸಂಪ್ರದಾಯವಿರುವುದರಿಂದ ತಂದೆ ಮನೆಯವರು ಮತ್ತು ಮಾವನ ಮನೆಯವರು ಮಾತನಾಡಿಕೊಂಡು ಒಂದು ಶುಭ ದಿನವನ್ನು ಗೊತ್ತುಪಡಿಸಿ ಆ ದಿನ ಸಂಬಂಧಿಕರನ್ನೆಲ್ಲಾ ಕರೆದು ಗಂಡನ ಮನೆಯಲ್ಲಿ ಸೀಮಂತದ ಶಾಸ್ತ್ರವನ್ನು ಇಟ್ಟುಕೊಂಡಿರುತ್ತಾರೆ. ಚೊಚ್ಚಲ ಗರ್ಭಿಣಿಗೆ ಮಾತ್ರ ಸೀಮಂತ ಮಾಡುವ ಸಂಪ್ರದಾಯವನ್ನು ಸಂತೋಷ ಮತ್ತು ಸಂಭ್ರಮದಿಂದ ಮಾಡುತ್ತಾರೆ.

ಗರ್ಭಿಣಿ ಹೆಣ್ಣಿಗೆ ರೇಷ್ಮೆ ಸೀರೆ, ಹೂ, ಬಳೆ ಆಭರಣಗಳನ್ನೆಲ್ಲ ತೊಡಿಸಿ ಅಲಂಕಾರ ಮಾಡಿ ಹಸೆಮಣೆಯ ಮೇಲೆ ಕೂರಿಸುತ್ತಾರೆ. ಅವರ ಮುಂದೆ ಕಳಸ ಕನ್ನಡಿ, ಅಕ್ಕಿ, ಕೊಬ್ಬರಿ, ಎಲೆಅಡಿಕೆ, ಹಣ್ಣುಗಳು, ಅರಿಶಿಣ ಕುಂಕುಮ, ಸೀಗೆಕಾಯಿ ಇವುಗಳನ್ನೆಲ್ಲ ತಟ್ಟೆಯಲ್ಲಿ ಇಟ್ಟಿರುತ್ತಾರೆ. ಮೂರು ಮತ್ತು ಐದು ಜನ ಮುತ್ತೈದೆಯರು ಗರ್ಭಿಣಿ ಹೆಣ್ಣಿಗೆ ಅಕ್ಷತೆ ಹಾಕಿ, ಅರಿಶಿಣ ಕುಂಕುಮ ಇಟ್ಟು, ಆರತಿ ಬೆಳಗುತ್ತಾರೆ. ನಂತರ ಒಂದು ಟವಲಿಗೆ ಅಕ್ಕಿ, ಕೊಬ್ಬರಿ, ಬೆಲ್ಲ, ಅಡಿಕೆ, ಅರಿಶಿಣಗಳನ್ನು ಗರ್ಭಿಣಿಗೆ ಮಡಿಲು ತುಂಬುತ್ತಾರೆ. ಇವುಗಳನ್ನೆಲ್ಲ ಹಾಕಿ ತೆಗೆದು ಹಾಕಿ ತೆಗೆದು ಮೂರು ಸಾರಿ ಮುತ್ತೈದೆಯರು ಮಡಿಲು ತುಂಬುತ್ತಾರೆ. ಚೊಚ್ಚಲ ಬಸುರಿ ಗಂಡನ ಮನೆಯ ಒಳಗಡೆ ಮಡಿಲು ತುಂಬಿರುವ ವಸ್ತುಗಳನ್ನು ತೆಗೆಯುವಂತಿಲ್ಲ. ಹೊರಗೆ ಬಂದ ಮೇಲೆ ಅದನ್ನು ತೆಗೆದು ತೌರಿನವರಿಗೆ ಕೊಡಬಹುದು.

ಆರತಿ ಬೆಳಗುವಾಗ ಮುತ್ತೈದೆಯರು ಒಳ್ಳೆಯ ಗಂಡು ಮಗುವನ್ನು ಹೊತ್ತು ಬಾರವ್ವ ಎಂದು ಹಾರೈಸುತ್ತಾರೆ. ನಂತರ ಎಲ್ಲರೂ ಊಟ ಮಾಡುತ್ತಾರೆ. ಈ ಕಾರ್ಯದಲ್ಲಿ ಸಿಹಿ ಅಡುಗೆಯನ್ನು ಮಾಡಿಸುತ್ತಾರೆ. ಗರ್ಭಿಣಿ ತನ್ನ ತವರಿಗೆ ಹೊರಡುವಾಗ ಅತ್ತೆ ಮಾವ ಹಾಗೂ ಹಿರಿಯರಿಂದ ಆಶೀರ್ವಾದ ಪಡೆಯುತ್ತಾಳೆ. ಎಲ್ಲರಿಗೂ ವಂದಿಸಿ ಎಲೆ ಅಡಿಕೆ ಕೊಟ್ಟು ಊರಿನ ಕಡೆ ಹೊರಡುತ್ತಾರೆ. ತವರು ಮನೆಯಲ್ಲಿ ತಾನು ಉಂಡು ತಿಂದು ಓಡಾಡಿಕೊಂಡು ಬೆಳೆದ ವಾತಾವರಣದಲ್ಲಿ ಸಂತೋಷದಿಂದ ಇದ್ದು, ತನಗಾದ ಬಯಕೆಗಳನ್ನು ಸಂಕೋಚವಿಲ್ಲದೆ ತನ್ನ ತಾಯಿ ತಂದೆಗೆ ಹೇಳಿ ಅವರಿಂದ ಬಯಕೆಗಳನ್ನು ಈಡೇರಿಸಿಕೊಳ್ಳುತ್ತಾಳೆ. ಇದರಿಂದ ತವರು ಮನೆಯಲ್ಲಿ ಹೆರಿಗೆ ಚೆನ್ನಾಗಿ ಆಗುತ್ತದೆ ಎಂದು ಜನಪದರ ನಂಬಿಕೆಯಾಗಿದೆ. ಹೀಗೆ ಸೀಮಂತದ ಆಚರಣೆಯನ್ನು ಪ್ರತಿಯೊಂದು ವರ್ಗದವರೂ ಆಚರಿಸುತ್ತಾರೆ.

ಇ) ಹೆರಿಗೆ

ಜನಪದರ ಜೀವನದಲ್ಲಿ ಜನನ ಬಹಳ ಮುಖ್ಯ. ಇದು ಅವರ ಜೀವನದ ಪ್ರಥಮ ಘಟ್ಟ. ಹಳ್ಳಿಗಳಲ್ಲಿ ಗರ್ಭಿಣಿ ಹೆಂಗಸರು ಹೊಲ, ಮನೆ, ತೋಟ, ತುಡಕುಗಳಲ್ಲಿ ಓಡಾಡಿಕೊಂಡು ದನಕರು

ಹುಲ್ಲು ಸೊಪ್ಪು ಅಂತ ಒಂದಿಲ್ಲೊಂದು ಕೆಲಸ ಕಾರ್ಯದಲ್ಲಿ ತೊಡಗಿರುತ್ತಾರೆ. ಹಾಗೆಯೇ ಹಳ್ಳಿಗಳಲ್ಲಿ ಸಿಗುವ ಹಣ್ಣು, ಸೊಪ್ಪು, ಕಾಳುಕಡ್ಡಿ, ತರಕಾರಿಗಳನ್ನು ತಿಂದು ಆರೋಗ್ಯವಂತರಾಗಿರುತ್ತಾರೆ. ಅವರ ಮನೆಯ ಕೆಲಸಗಳನ್ನು ಅವರೇ ಮಾಡಿಕೊಂಡು ಇರುತ್ತಾರೆ. ಇದರಿಂದ ಹೆರಿಗೆ ಸುಲಭವಾಗಿ ಮತ್ತು ಚೆನ್ನಾಗಿ ಆಗುತ್ತದೆ ಎಂದು ಜನಪದರ ನಂಬಿಕೆಯಾಗಿದೆ.

ಗರ್ಭಿಣಿಯರಿಗೆ ಮೂರು ತಿಂಗಳವರೆಗೆ ತಲೆಸುತ್ತು ಊಟ ಸೇರದೆ ಇರುವುದು ಇತ್ಯಾದಿ ಲಕ್ಷಣಗಳು ಕಂಡು ಬರುತ್ತವೆ. ನಂತರ ನಾಲ್ಕರಿಂದ ಒಂಬತ್ತನೇ ತಿಂಗಳವರೆಗೆ ಊಟವನ್ನು ಚೆನ್ನಾಗಿ ಮಾಡಿಕೊಂಡು ತಿನ್ನುತ್ತಾರೆ. ಇದರಿಂದ ಗರ್ಭಿಣಿಯರು ಚೆನ್ನಾಗಿ ದುಂಡಗಾಗುತ್ತಾರೆ. ಗರ್ಭಿಣಿಯರಿದ್ದಾಗ ಹೆಣ್ಣಿಗೊಂದು ಚಾಲು ಗಂಡಿಗೊಂದು ಚಾಲು ಎಂಬಂತೆ ಲಕ್ಷಣಗಳು ಮತ್ತು ಬಯಕೆಗಳು ಕಂಡು ಬರುತ್ತದೆ. ಕೆಮ್ಮಣ್ಣು, ಹುಳಿ ಹುಣಸೆಕಾಯಿ, ಮಾವಿನಕಾಯಿ, ಮುಂತಾದ ವಸ್ತುಗಳನ್ನು ಇಷ್ಟಪಟ್ಟು ಕದ್ದುಮುಚ್ಚಿ ತಿನ್ನುತ್ತಾರೆ. ಬಯಕೆಯಾದ ಅಡುಗೆಗಳನ್ನು ಕೇಳಿ ಮಾಡಿಸಿಕೊಂಡು ತಿನ್ನುತ್ತಾರೆ. ೫ ರಿಂದ ೯ ತಿಂಗಳವರೆಗೆ ಬಸುರಿ ಹೆಂಗಸಿಗೆ ಆಹಾರವನ್ನು ಬೆರಸುತ್ತಾರೆ. ಆಹಾರ ಬೆರೆಸುವುದು ಎಂದರೆ ಮಗುವಿಗೆ ಹೊಂದಿಕೊಳ್ಳಲು ಬೇರೆ ಬೇರೆ ಆಹಾರಗಳನ್ನು ಆಗಾಗ ಕೊಡುವುದು. ಎಳ್ಳು, ಗೆಣಸು, ಗಿಣ್ಣು, ಕಾಡುಪ್ರಾಣಿ ಮಾಂಸ ಮುಂತಾದವುಗಳನ್ನು ಗರ್ಭಿಣಿಯರಿಗೆ ತಿನ್ನಿಸುತ್ತಾರೆ. ಮತ್ತು ಅವರವರ ಮನೆತನಕ್ಕೆ ಸಾಂಪ್ರದಾಯಿಕವಾಗಿ ಬೆಳೆದು ಬಂದಿರುವ ಚೆಕ್ಕೆಗಳನ್ನು ೫ ಮತ್ತು ೭ ತಿಂಗಳುಗಳಲ್ಲಿ ತಿನ್ನುತ್ತಾರೆ. ಕೆಂಬಾರದ ಚೆಕ್ಕೆ ಮತ್ತು ಅವರಕೆ ಚೆಕ್ಕೆ ಇವುಗಳನ್ನು ಗರ್ಭಿಣಿ ಹೆಂಗಸು ತಿಂದರೆ ಮುಂದೆ ಮಗುವಿಗೆ ಕಿವಿ ಸುರಿಯುವುದು, ಕೆಂಬಾರದ ಗುಳ್ಳೆ ಮುಂತಾದ ರೋಗಗಳು ಬರುವುದಿಲ್ಲ.

ಚೊಚ್ಚಲ ಹೆರಿಗೆಯಾಗಿದ್ದರೆ ತುಂಬಾ ಹೊಟ್ಟೆನೋವು ಕಾಣಿಸಿಕೊಳ್ಳುತ್ತದೆ. ಆಗ ಮನೆಯವರು ಹೆರಿಗೆ ಮಾಡಿಸಿದ ಅನುಭವವಿರುವ ಸೂಲಗಿತ್ತಿಯರನ್ನು ಕರೆತರುತ್ತಾರೆ. ಅವರು ಗರ್ಭಿಣಿ ಹೆಂಗಸಿನ ಪರಿಸ್ಥಿತಿಯನ್ನು ನಡುಮನೆ ಕೊಟ್ಟಿಗೆಮನೆ ಅಥವಾ ನೀರಿನ ಮನೆಯ ಹತ್ತಿರ ಹೆರಿಗೆ ಸ್ಥಳವನ್ನು ಸಿದ್ಧಪಡಿಸಿ ಅದಕ್ಕೆ ಬೇಕಾಗುವ ಎಲ್ಲಾ ವಸ್ತುಗಳನ್ನು ಇಟ್ಟುಕೊಳ್ಳುತ್ತಾರೆ. ಹೆರಿಗೆ ಸಮಯದಲ್ಲಿ ಕಷ್ಟವಾಗದಂತೆ ಹೊಟ್ಟೆ ಮತ್ತು ಹೊಕ್ಕಳ ಭಾಗಕ್ಕೆಲ್ಲ ಎಣ್ಣೆ ಹಾಕಿ ಆ ಭಾಗವನ್ನು ಮೃದುಗೊಳಿಸಿ ಮಗು ಹೊಟ್ಟೆಯಲ್ಲಿ ಅಡ್ಡಡ್ಡವಿದ್ದರೆ ಅದು ಸರಿಯಾಗಿ ಮತ್ತು ಸುಲಭವಾಗಿ ಹೆರಿಗೆಯಾಗುವಂತೆ ಮಾಡುತ್ತಾರೆ. ಹೆರಿಗೆ ಸಂದರ್ಭದಲ್ಲಿ ನೋವನ್ನು ಸಹಿಸಲಾರದ ಗರ್ಭಿಣಿಗೆ ಸೂಲಗಿತ್ತಿಯರು ಧೈರ್ಯ ಹೇಳಿ ಕೈಕಾಲುಗಳನ್ನು ಹಿಡಿದುಕೊಂಡು ಮಗು ಸುಲಭವಾಗಿ ಹೊರಬರುವಂತೆ ಮಾಡುತ್ತಾರೆ. ಅನಂತರ ಮಗುವಿನ ಹೊಕ್ಕಳ ಬಳ್ಳಿಯನ್ನು ಕೈಯಿಂದ ಚಿವುಟಿ ಅಥವಾ ೨ ಇಂಚಿನಷ್ಟು ಬಿಟ್ಟು ಕೊಯ್ದು ಅದರಿಂದ ರಕ್ತ ಬರದ ಹಾಗೆ ದಾರ ಕಟ್ಟುತ್ತಾರೆ. ನಂತರ ಮಗುವನ್ನು ಬಿಸಿ ನೀರಿನಿಂದ ಒರೆಸಿ ಮಗುವನ್ನು ಮೆತ್ತನೆ ಬಟ್ಟೆ ಹಾಸಿದ ಮೊರದಲ್ಲಿ ಮಲಗಿಸಿ

ಅರಿಸಿನ ಎಣ್ಣೆಯನ್ನು ಮಗುವಿನ ಬಾಯಿಗೆ ಹಾಕಿ ಸಂತೈಸುತ್ತಾರೆ. ಅದು ಮಗುವಿಗೆ ಆ ಕ್ಷಣದ ಆಹಾರವಾಗಿರುತ್ತದೆ.

ಹೆರಿಗೆಯದ ನಂತರ ಹೆಣ್ಣಿನ ಗರ್ಭದಲ್ಲಿ ಹೊರಬಂದ (ಕಲ್ಮಶ) ಸತ್ತೆಯನ್ನು ಗಂಡಸರು ನೋಡದ ಹಾಗೆ ನಾಯಿ ನರಿಗಳಿಗೆ ಸಿಗದ ಕಡೆಗೆ ತೆಗೆದುಕೊಂಡು ಹೋಗಿ ನಿಂತ ನೀರಿನಲ್ಲಿ ಮುಳುಗಿಸಿ ಕಲ್ಲನ್ನು ಹೇರುತ್ತಾರೆ. ಅಥವಾ ಹಿತ್ತಲಲ್ಲಿ ಒಂದು ಸಣ್ಣ ಗುಂಡಿ ತೋಡಿ ಹೂತಾಕಿ ಕಲ್ಲನ್ನು ಹೇರುತ್ತಾರೆ. ನಾಯಿ ನರಿ ತಿಂದರೆ ತಾಯಿ ಮಗುವಿಗೆ ದೋಷವೆಂದು ನಂಬಿಕೆ ಇದೆ. ನಂತರ ತಾಯಿಗೆ ಬಿಸಿನೀರು ಸ್ನಾನಮಾಡಿಸಿ ಮಡಿ ಬಟ್ಟೆ ಕೊಟ್ಟು ಬೆಚ್ಚಗಿನ ಹೊದಿಕೆಯನ್ನು ಹೊದಿಸಿ ಕಿವಿಗೆ ಬಟ್ಟೆ ಕಟ್ಟಿ ಶೀತವಾಗದಂತೆ ನೋಡಿಕೊಳ್ಳುತ್ತಾರೆ. ದಿನ ತಪ್ಪಿ ದಿನ ತಾಯಿ ಮಗುವಿಗೆ ಸ್ನಾನ ಮಾಡಿಸುತ್ತಾರೆ. ಮಗು ಬೆಳೆಯಲು ಅನುವಾಗುವಂತೆ ಮೈಮುಖಕ್ಕೆಲ್ಲಾ ಎಣ್ಣೆ ಹಾಕಿ ಸ್ನಾನ ಮಾಡಿಸುತ್ತಾರೆ. ಹೆರಿಗೆಯಾದ ಮಾರನೆಯ ದಿನ ಆ ಸ್ಥಳವನ್ನು ಸಾರಿಸಿ ರಂಗೋಲಿ ಇಟ್ಟು ಪೂಜೆ ಮಾಡಿ ಹೆರಿಗೆಗೆ ಬಳಸಿಕೊಂಡ ವಸ್ತುಗಳನ್ನೆಲ್ಲಾ ಇಟ್ಟು ಪೂಜೆ ಮಾಡುತ್ತಾರೆ. ೧೫ ದಿನಗಳ ನಂತರ ಮಗುವಿನ ಹೊಕ್ಕಳು ಕೊಳೆತು ಬಿದ್ದು ಹೋಗುತ್ತದೆ. ಅದನ್ನು ತೊಟ್ಟಿಲಿಗೆ ಕಟ್ಟುತ್ತಾರೆ. ಇದರಿಂದ ಮಗುವಿಗೆ ಒಳ್ಳೆಯದಾಗುತ್ತದೆಂದು ನಂಬಿಕೆ.

ಕೆಲವರು ಮಗುವಿನ ಹೊಕ್ಕಳಿನಿಂದ ಕೆಳಗೆ ಸೂಜಿಯನ್ನು ಕೈಯಣ್ಣೆ ದೀಪದಲ್ಲಿ ಕಾಯಿಸಿ ಚಿಟುಕೆ ಹಾಕುತ್ತಾರೆ. ಇದರಿಂದ ಹೊಟ್ಟೆನೋವು ಮತ್ತು ಉಷ್ಣ ಹಿಡಿಯುವುದಿಲ್ಲವೆಂದು ಅವರ ನಂಬಿಕೆ.

ಈ ರೀತಿ ಎಲ್ಲಾ ವರ್ಗದವರೂ ಹೆರಿಗೆಯ ಸಂದರ್ಭದಲ್ಲಿ ಜನಪದೀಯ ವೈದ್ಯ ಪದ್ಧತಿಯನ್ನು ಅನುಸರಿಸಿ ಹಳ್ಳಿಗಳಲ್ಲಿ ಆಚರಿಸುತ್ತಾರೆ. ನಾಗರೀಕತೆ ಬೆಳೆದಂತೆ ಆಸ್ಪತ್ರೆಗಳಿಗೆ ಹೆರಿಗೆಗಾಗಿ ಕರೆದೊಯ್ಯುತ್ತಿದ್ದಾರೆ.

ಈ) ಬಾಣಂತನ

ಬಾಣಂತನ ಇದು ಒಂದು ರೀತಿಯ ಜನಪದ ವೈದ್ಯ ಪದ್ಧತಿಯಾಗಿ ಆಚರಣೆಗೊಳ್ಳುತ್ತದೆ. ಮಗು ಹುಟ್ಟಿದ ಮೂರ್ನಾಲ್ಕು ತಿಂಗಳುಗಳವರೆಗೆ ತಾಯಿ ಮಗುವಿಗೆ ಯಾವುದೇ ರೀತಿಯ ರೋಗರುಜಿನಗಳೂ ಬರದಂತೆ ಗಮನ ವಹಿಸಲಾಗುತ್ತದೆ. ಬಾಣಂತಿಗೆ ಶಕ್ತಿಹೀನವಾಗಿ ರೋಗ ನಿರೋಧಕ ಶಕ್ತಿ ಕಡಿಮೆಯಾಗಿರುತ್ತದೆ. ಎಳೆ ಮಗುವಿನ ಪರಿಸ್ಥಿತಿಯೂ ಸೂಕ್ಷ್ಮವಾಗಿರುತ್ತದೆ. ಅದುದರಿಂದ ಬಾಣಂತಿ ತೆಗೆದುಕೊಳ್ಳುವ ಆಹಾರ ಮತ್ತು ಇರುವ ಜಾಗದ ಬಗ್ಗೆ ಜನಪದರಲ್ಲಿ ತಮ್ಮದೇ ಆದ ಕೆಲವು ರೀತಿ ನೀತಿಗಳಿರುತ್ತವೆ.

ಹೆರಿಗೆಯ ನಂತರ ಬಾಣಂತಿಗೆ ಶೀತವಾಗದಂತೆ ಎಚ್ಚರಿಕೆಯಿಂದ ಇರಬೇಕು. ದಪ್ಪವಾದ ಸ್ವೆಟ್ಟರ್‌ನಂತ ಬಟ್ಟೆಯನ್ನು ಧರಿಸಿ ಕಿವಿಗೆ ಗಾಳಿ ಹೋಗದಂತೆ ಬಟ್ಟೆ ಕಟ್ಟಿಕೊಂಡು ಆಚೆ ಈಚೆ ಓಡಾಡಬಾರದು. ಮತ್ತು ತಣ್ಣೀರನ್ನು ಮುಟ್ಟಬಾರದು. ಬಾಣಂತಿ ಸೇವಿಸಬೇಕಾದ ಆಹಾರವೆಂದರೆ

ರವೆಗಂಜಿ, ಬೇಯಿಸಿದ ಅಕ್ಕಿ ಅನ್ನ, ಅದಕ್ಕೆ ಸೀಗಡಿ, ಕೊತ್ತಂಬರಿ ಮೆಣಸಿನ ಸಾರುಗಳು ಹಾಗು ಬೆಲ್ಲ ಹುಚ್ಚೆಳ್ಳೆಣ್ಣೆ ಬೆಳ್ಳುಳ್ಳಿ, ಮೆಣಸಿನ ಪುಡಿ, ಬೆಣ್ಣೆ, ಕಾಯಿಸಿದ ತುಪ್ಪ, ಕೊಬ್ಬರಿ ಇವುಗಳನ್ನೆಲ್ಲಾ ಬಳಸಬಹುದು. ಊಟ ಮುಗಿದ ಮೇಲೆ ಬಾಣಂತಿ ಕೈಬಾಯಿ ತೊಳೆಯಲು ಮತ್ತು ಕುಡಿಯಲು ಬಿಸಿ ನೀರನ್ನೇ ಬಳಸಬೇಕು. ಹನ್ನೊಂದು ದಿನಗಳ ನಂತರ ಮೂರು ದೇವರನ್ನು ಕೂಡಿಸಿ ಪೂಜೆ ಮಾಡಿ ಸೂತಕ ಕಳೆದ ಮೇಲೆ ಮಾಂಸ ಮತ್ತು ತರಕಾರಿ ಸೊಪ್ಪುಗಳನ್ನು ತಿನ್ನಬಹುದು.

ದಿನ ತಪ್ಪಿ ದಿನ ಬಾಣಂತಿ ಮತ್ತು ಮಗುವಿಗೆ ಸ್ನಾನ ಮಾಡಿಸುತ್ತಾರೆ. ಬಾಣಂತಿ ತಲೆಯನ್ನು ಚೆನ್ನಾಗಿ ಒರೆಸಿ ಒಣಗಿಸಿ ಬೆಳ್ಳುಳ್ಳಿ ಸಾಮ್ರಾಣಿ ಹೊಗೆಯನ್ನು ತಲೆಗೆ ಕೊಟ್ಟು ಮಗುವಿನ ಮೈಯಿಗೂ ಹೊಗೆ ಕೊಡುತ್ತಾರೆ. ಇದರಿಂದ ತಾಯಿ ಮಗುವಿಗೆ ಶೀತವಾಗುವುದಿಲ್ಲ ಕೆಲವು ವೇಳೆ ಮಗುವಿಗೆ ಶೀತವಾದರೆ ಬಜೆ, ಅರಳೆಕಾಯಿ, ಜಾಯಿಕಾಯಿ, ಅರಿಶಿಣ, ಬೆಳ್ಳುಳ್ಳಿ, ಈರುಳ್ಳಿ, ಒಂದು ಕಲ್ಲು ಉಪ್ಪು, ಒಂದು ಸುತ್ತು ಮೆಣಸು ಇವುಗಳನ್ನೆಲ್ಲಾ ಒಂದು ಕಲ್ಲಿನ ಮೇಲೆ ಎದೆ ಹಾಲಿನಲ್ಲಿ ತೇಯ್ದು ಒಳ್ಳೆಯಲ್ಲಿ ಸಂಗ್ರಹಿಸಿಕೊಳ್ಳಲಾಗುತ್ತದೆ. ನಂತರ ಇದಕ್ಕೆ ಕಾಯಿಸಿದ ಕುಡುಗೋಲಿನ ತುದಿಯನ್ನು ಹಾಕಿದಾಗ ಸುಟ್ಕಾರ ಬೆಂದು ಹದವಾಗುತ್ತದೆ. ಇದನ್ನು ಮನೆಕಾರ ಎಂದು ಕರೆಯುತ್ತಾರೆ. ಮಗುವಿನ ಸ್ನಾನ ಮಾಡಿಸಿದ ಮೇಲೆ ಈ ಕಾರವನ್ನು ಮಗುವಿಗೆ ಕುಡಿಸುತ್ತಾರೆ. ಇದರಿಂದ ಮಗುವಿಗೆ ಶೀತವಾಗುವುದಿಲ್ಲ. ಮತ್ತು ಇತರ ರೋಗಗಳು ಬರುವುದಿಲ್ಲ. ಹಳ್ಳಿಗಳ ಕಡೆ ಮಕ್ಕಳಿಗೆ ಕೆಮ್ಮು ಬಂದರೆ ಹಾಲುಗಂಟಿಕೆ ಸೊಪ್ಪು ದೇವರ ತುಳಸಿ, ಎಲ್ಲವನ್ನು ಚಿಟ್ಟಳ್ಳಿನ ಎಲೆಯಲ್ಲಿ ಪೊಟ್ಟಣ ಕಟ್ಟಿ ಬೂದಿಗೆ ಹಾಕಿ ಸುಟ್ಟು ಅದನ್ನು ಬೇಯಿಸಿದ ಮೇಲೆ ಅದರ ರಸವನ್ನು ಲೇಪ ಹಾಕಿ ಹೊಟ್ಟೆಗೆ ಸ್ವಲ್ಪ ಕುಡಿಸುತ್ತಾರೆ.

ಒಣಗಿದ ಇರಳಿಕಾಯಿ ನವಿಲುಗರಿ ಸೀಳಿ ಕರಕಲು ಮಾಡಿ ಜೇನು ತುಪ್ಪದಲ್ಲಿ ಕಲಸಿ ಕುಡಿಸಿದರೆ ಕೆಮ್ಮು ನಿಲ್ಲುತ್ತದೆ. ಮಗುವಿಗೆ ಶೀತವಾಗಿ ಉಸಿರು ಎಳೆಯುತ್ತಿದ್ದರೆ ಎಳಿವಿನ ಬೇರನ್ನು ಮಗುವಿಗೆ ಉಯ್ಯುತ್ತಾರೆ. ಬಾಣಂತನದ ಸಂದರ್ಭದಲ್ಲಿ ತಮ್ಮದೇ ಆದ ಜನಪದ ವೈದ್ಯವನ್ನು ಅನುಸರಿಸುತ್ತಾರೆ. ಮೊರಕ್ಕೆ ಹಾಕಿರುವ ಮಗುವಿನ ತಲೆಗೆ ಮೆತ್ತನೆಯ ಬಟ್ಟೆಯಿಂದ ಒಂದು ಚಿಕ್ಕ ದಿಂಬನ್ನು ಮಾಡಿ ಅಂಗಾತ ಮಲಗಿಸುತ್ತಾರೆ. ಮತ್ತು ಮಗುವಿನ ತಲೆ, ಹಣೆ, ಮೂಗು, ಕೈ, ಕಾಲು ಎಲ್ಲವನ್ನೂ ಎಣ್ಣೆ ಹಾಕಿ ಸರಿಯಾಗಿ ಎಳೆದು ತೀಡಿ ಸರಿಮಾಡುತ್ತಾರೆ. ಪ್ರತಿದಿನ ತಾಯಿ ಅದನ್ನು ಆಕೆಯ ತಾಯಿ ಮತ್ತು ಹಿರಿಯರಿಂದ ಕೇಳಿ ಮಾಡುತ್ತಾಳೆ.

ಏಳು ತಿಂಗಳಿನಿಂದ ಒಂಬತ್ತು ತಿಂಗಳ ಒಳಗೆ ಗಂಡನ ಮನೆಯವರು ತಾಯಿ ಮಗುವನ್ನು ಕರೆದುಕೊಂಡು ಹೋಗಲು ಬರುತ್ತಾರೆ. ಆಗ ತಂದೆತಾಯಿ ಮಗುವಿಗೆ ಬಟ್ಟೆ ಬರೆ ಒಡವೆಗಳನ್ನು ಕೊಟ್ಟು ತೊಟ್ಟಿಲ ಸಮೇತ ಕಳುಹಿಸಿಕೊಡುತ್ತಾರೆ. ಎರಡು ವಾರಗಳ ನಂತರ ತವರು ಮನೆಯವರು ತೊಟ್ಟಿಲನ್ನು ತಿರುವಿ ಹಾಕುವ ಶಾಸ್ತ್ರಕ್ಕೋಸ್ಕರ ತಾಯಿ ಮಗುವನ್ನು ತವರಿಗೆ ಕರೆದುಕೊಂಡು ಹೋಗಿ ಶಾಸ್ತ್ರಬದ್ಧವಾಗಿ ಪೂಜೆ ಮಾಡಿ ನಂತರ ಗಂಡನ ಮನೆಗೆ ಕರೆದುಕೊಂಡು

ಬಂದುಬಿಡುತ್ತಾರೆ. ಅಲ್ಲಿಗೆ ಬಾಣಂತನ ಮುಗಿಯುತ್ತದೆ. ನಂತರ ನಾಮಕರಣ ಇತ್ಯಾದಿ ಶಾಸ್ತ್ರಬದ್ಧ ಆಚರಣೆಗಳನ್ನು ಮಾಡುತ್ತಾರೆ.

೪.೨. ನಾಮಕರಣ ಪದ್ಧತಿ

ನಾಮಕರಣ ಮನುಷ್ಯನ ಜೀವನದಲ್ಲಿ ಒಂದು ವಿಶಿಷ್ಟವಾದ ಸಂಪ್ರದಾಯ. ಏಕೆಂದರೆ ಮನುಷ್ಯನು ಸಹ ನಿಸರ್ಗದಲ್ಲಿ ಒಂದು ಪ್ರಾಣಿಯೇ ಆದರೂ ಎಲ್ಲಾ ಪ್ರಾಣಿಗಳಿಗಿಂತ ಭಿನ್ನತೆಯನ್ನು ಪಡೆದುಕೊಂಡವನಾಗಿದ್ದಾನೆ. ಅವನಿಗೆ ಸಮಾಜದಲ್ಲಿ ಅತ್ಯಂತ ಉನ್ನತ ಸ್ಥಾನಮಾನವಿದೆ. ಅವನನ್ನು ಸಮಾಜ ಒಂದು ಹೆಸರಿನಿಂದ ಗುರುತಿಸಿ ಆ ವ್ಯಕ್ತಿಯನ್ನು ಪ್ರತಿನಿಧಿಸಿ ಸೂಚಿಸುತ್ತದೆ. ಆದುದರಿಂದ ಹುಟ್ಟಿದ ಮಕ್ಕಳಿಗೆ ಒಂದು ಹೆಸರನ್ನು ಇಟ್ಟು ಆ ಹೆಸರಿನಿಂದಲೇ ಮಗುವನ್ನು ಸಮಾಜ ಪ್ರತಿನಿಧಿಸುತ್ತದೆ. ಇಂತಹ ಒಂದು ವ್ಯವಸ್ಥೆ ನಮ್ಮ ಸಮಾಜದಲ್ಲಿ ಹಿಂದಿನಿಂದಲೂ ಬೆಳೆದುಕೊಂಡು ಬಂದಿದೆ. ಇದು ನಮ್ಮ ಸಂಸ್ಕೃತಿಯಲ್ಲಿ ಶಾಸ್ತ್ರೋಕ್ತ ಆಚರಣೆಯಾಗಿದ್ದು, ಎಲ್ಲಾ ವರ್ಗದವರೂ ಈ ಸಂಪ್ರದಾಯವನ್ನು ಆಚರಿಸುತ್ತಾರೆ. ಈ ಸಮಾಜಕ್ಕೆ ಇದು ಅವಶ್ಯಕವೂ ಕೂಡ ಹೌದು.

ಮಗುವಿಗೆ ನಾಮಕರಣವನ್ನು ಮಾಡುವಾಗ ಮಗು ಹುಟ್ಟಿದಗಳಿಗೆ ನಕ್ಷತ್ರ ಮತ್ತು ಶಾಸ್ತ್ರಗಳನ್ನು ನೋಡಿಸಿ ಜೋಯಿಸರಿಂದ ಮಗುವಿನ ಹೆಸರು ಇಂತಹ ಅಕ್ಷರದಿಂದಲೇ ಪ್ರಾರಂಭವಾಗಬೇಕೆಂದು ಕೇಳಿಕೊಂಡು ಕೆಲವು ವೇಳೆ ಅವರಿಂದಲೇ ಹೆಸರನ್ನು ತಿಳಿದುಕೊಂಡು ಬಂದಿರುತ್ತಾರೆ. ಕೆಲವರು ನಾಮಕರಣ ಮಾಡಲು ಆಹ್ವಾನ ಪತ್ರಿಕೆಯನ್ನು ಹೊಡೆಸಿ ಎಲ್ಲರಿಗೂ ಹಂಚಿ ಆಹ್ವಾನಿಸಿ ವಿಜೃಂಭಣೆಯಿಂದ ನಾಮಕರಣದ ಶಾಸ್ತ್ರವನ್ನು ಮಾಡುತ್ತಾರೆ. ಮತ್ತೆ ಕೆಲವರು ತಮ್ಮ ಮನೆಯವರು ಮತ್ತು ಹತ್ತಿರದ ಸಂಬಂಧಿಕರನ್ನು ಕರೆಸಿ ತಮ್ಮ ಶಕ್ತ್ಯಾನುಸಾರ ಮಾಡುತ್ತಾರೆ. ಜನಪದರು ನಾಮಕರಣ ಮಾಡುವಾಗ ತಮ್ಮ ಮನೆತನದ ಹೆಸರಿಗೆ ಅನ್ವಯವಾಗುವಂತೆ ಮಗುವಿಗೆ ಹೆಸರನ್ನು ಇಟ್ಟು ನಾಮಕರಣ ಮಾಡುವುದು ರೂಢಿ. ಶುಭ ದಿನದಂದು ಮನೆಯನ್ನೆಲ್ಲಾ ಸಾರಿಸಿ ಗುಡಿಸಿ ಶುಚಿಗೊಳಿಸಿ ಸಂಬಂಧಿಕರನ್ನೆಲ್ಲಾ ಆಹ್ವಾನಿಸಿ ಹಿಂದಿನಿಂದ ಬೆಳೆದುಕೊಂಡು ಬಂದ ಸಂಪ್ರದಾಯದ ಪ್ರಕಾರ ಕಾರ್ಯ ಮಾಡುತ್ತಾರೆ. ಜೋಗಪ್ಪ, ದಾಸಪ್ಪ, ಗುಡ್ಡಪ್ಪ ಅಥವಾ ನೀಲಗಾರರನ್ನು ಕರೆಸಿ ಮನೆಯಲ್ಲಿ ಮೂರು ದೇವರನ್ನು ಒಡ್ಡಿಸಿ ಶಾಸ್ತ್ರೋಕ್ತವಾಗಿ ದೇವರಿಗೆ ಎಡೆ ಹಾಕಿ ಪೂಜೆ ಸಲ್ಲಿಸುತ್ತಾರೆ. ಮಗುವಿಗೆ ಹೊಸಬಟ್ಟೆ ಧರಿಸಿ ದೇವರ ಮುಂದೆ ಕೂರಿಸಿ ಜೋಗಪ್ಪ ದಾಸಪ್ಪ, ಗುಡ್ಡಪ್ಪ ಮೂರು ಜನ ಮಗುವಿಗೆ ನಾಮ ಅಥವಾ ವಿಭೂತಿಯನ್ನು ಇಟ್ಟು ಮನೆಯವರು ಹೇಳಿದ ಹೆಸರನ್ನು ಮೂರು ಸಾರಿ ಹೇಳುತ್ತಾ ತಲೆಯ ಮೇಲೆ ದೇವರನ್ನು ಇಟ್ಟು ಮಗುವಿನ ಹೆಸರು ಕರೆಯುತ್ತಾರೆ. ಮತ್ತು ಆಶೀರ್ವದಿಸಿ ಹಾರೈಸುತ್ತಾರೆ.

ನಂತರ ಮನೆಯವರು ಮತ್ತು ಬಂಧುಬಳಗದವರೆಲ್ಲಾ ಮಗುವಿಗೆ ಕಟ್ಟಿದ ಹೆಸರನ್ನು ಕರೆಯುತ್ತಾ ವಿಭೂತಿ ಮತ್ತು ನಾಮಹಚ್ಚಿ ಅರಸಿ ಆಶೀರ್ವದಿಸುತ್ತಾರೆ. ಆ ಮೇಲೆ ಬೇಕಾದರೆ

ಹುಟ್ಟಿಸರಿನ (ದೇವರ ಹೆಸರಿನ) ಜೊತೆಗೆ ತಮಗೆ ಬೇಕಾದ ಹೆಸರಿನಿಂದ ಮಗುವನ್ನು ಕರೆದು ಶಾಲೆಗೂ ಅದೇ ಹೆಸರನ್ನು ಕೆಲವರು ಕೊಡುತ್ತಾರೆ. ನಾಮಕರಣದ ನಂತರ ಎಲ್ಲರೂ ಸಿಹಿ ಊಟವನ್ನು ಮಾಡುತ್ತಾರೆ. ನಾಮಕರಣದ ಶಾಸ್ತ್ರ ಎಲ್ಲಾ ವರ್ಗಗಳಲ್ಲಿಯೂ ಕಂಡು ಬಂದು ಸಾಂಸ್ಕೃತಿಕ ಜೀವನವನ್ನು ಈ ಆಚರಣೆ ಪ್ರತಿನಿಧಿಸುತ್ತದೆ.

೪.೩. ಸೂತಕ ತೆಗೆಯುವುದು

ಜನಪದರ ಮನಸ್ಸಿನಲ್ಲಿ ಸೂತಕದ ಪರಿಕಲ್ಪನೆ ಒಂದು ಸಾಂಪ್ರದಾಯಿಕ ಅಂಶವಾಗಿದೆ. ನಮ್ಮ ಸಂಸ್ಕೃತಿಯಲ್ಲಿ ಮಡಿಮೈಲಿಗೆಗೆ ತನ್ನದೇ ಆದ ಸ್ಥಾನಮಾನವಿದ್ದು, ಇದರಿಂದ ಯಾರೂ ಸಹ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಜನನ ಮರಣ ಮತ್ತು ಮೈನೆರೆದ ಸಂದರ್ಭಗಳಲ್ಲಿ ಸಂಭವಿಸಬಹುದಾದ ದೋಷ ಅಥವಾ ಮೈಲಿಗೆಗೆ ಸೂತಕ ಎಂದು ಕರೆಯಬಹುದಾಗಿದ್ದು ಇದರಿಂದ ಉಂಟಾಗುವ ಮೈಲಿಗೆಯು ಜನಪದರಲ್ಲಿ ಒಂದು ರೀತಿಯ ಸಂಕೋಚವನ್ನು ಉಂಟು ಮಾಡುತ್ತದೆ. ಇದರಿಂದ ದೋಷ ಅಥವಾ ಅನಿಷ್ಠ ಉಂಟಾಗುತ್ತದೆಂದು ಜನಪದರ ನಂಬಿಕೆ. ಸೂತಕ ಎಂದರೆ ಅವರ ಮನಸ್ಸಿನಲ್ಲಿ ಒಂದು ರೀತಿಯ ಕಸಿವಿಸಿಯ ವಾತಾವರಣ ಉಂಟಾಗಿ ಅದು ಒಂದು ರೀತಿಯ ಭಯವೂ ಸಹ ಹೌದು. ಆದುದರಿಂದ ಸೂತಕದ ಮನೆ ಎಂದರೆ ಮಾನಸಿಕವಾಗಿ ಎಲ್ಲರೂ ಸ್ವಲ್ಪ ದೂರದಿಂದಲೇ ಗ್ರಹಿಸುತ್ತಾರೆ.

ಸೂತಕದ ಮನೆಗೆ ರಕ್ತ ಸಂಬಂಧಿಕರನ್ನು ಬಿಟ್ಟರೆ ಬೇರೆ ಯಾರೂ ಬರುವುದಿಲ್ಲ. ನೀರು ಊಟ ಉಪಚಾರವನ್ನು ಸ್ವೀಕರಿಸುವುದಿಲ್ಲ. ಮತ್ತು ಪಾತ್ರೆ ಪಗಡೆಗಳನ್ನು ಸಹ ಬೇರೆಯವರು ಮುಟ್ಟಿಸಿಕೊಳ್ಳುವುದಿಲ್ಲ. ಅಕಸ್ಮಾತ್ ಮುಟ್ಟಿಸಿಕೊಂಡು ಬಿಟ್ಟರೆ ಬೆಳಗಿ ತೊಳೆದುಕೊಳ್ಳುತ್ತಾರೆ. ಮಡಕೆ ಇಟ್ಟು ಪೂಜೆ ಮಾಡಿ ಸೂತಕವನ್ನು ಕಳೆಯುವವರೆಗೆ ಈ ಸ್ಥಿತಿ ಹಾಗೆಯೇ ಇದ್ದು, ಸೂತಕ ಕಳೆದ ನಂತರ ಮೊದಲಿನ ಸ್ಥಿತಿಗೆ ಮರುಳುತ್ತದೆ.

ಸೂತಕವನ್ನು ಕೇವಲ ಜನನ ಮರಣ ಸಂಭವಿಸಿದ ಮನೆಯವರು ಮಾತ್ರ ಕಳೆದುಕೊಳ್ಳುವುದಿಲ್ಲ. ಅವರ ರಕ್ತ ಸಂಬಂಧಿಕರೆಲ್ಲಾ ಪೂಜೆ ಮಾಡಿ ಸೂತಕ ಕಳೆದುಕೊಳ್ಳುತ್ತಾರೆ. ಈ ರೀತಿಯ ಕ್ರಿಯೆಯು ಹಳ್ಳಿಗಳಲ್ಲಿ ಒಂದು ರೀತಿಯ ಹಬ್ಬದ ವಾತಾವರಣವನ್ನು ಉಂಟು ಮಾಡುತ್ತದೆ. ಏಕೆಂದರೆ ರಕ್ತಸಂಬಂಧಿಕರು ಊರಿನ ತುಂಬಾ ಹರಡಿಕೊಂಡು ಹೆಚ್ಚು ಮನೆಗಳಾಗಿ ಬಿಟ್ಟಿರುತ್ತವೆ. ಆದುದರಿಂದ ಇಂತಹ ಹಬ್ಬದ ವಾತಾವರಣ ಕಂಡು ಬರುತ್ತದೆ.

ಜನನ ಮತ್ತು ಮೈನೆರೆಯುವುದು ಶುಭ ಸಂದರ್ಭದ ಮೈಲಿಗೆಗಳು ಮನಸ್ಸಿಗೆ ಹೆಚ್ಚು ಕಸಿವಿಸಿಯನ್ನು ಉಂಟು ಮಾಡುವುದಿಲ್ಲ. ಮರಣದಂತಹ ಅಶುಭ ಸಂದರ್ಭಗಳು ಮನಸ್ಸಿಗೆ ಹೆಚ್ಚು ಮೈಲಿಗೆಯನ್ನು ಸೃಷ್ಟಿಸುತ್ತವೆ. ಜನನದ ಸಂದರ್ಭದಲ್ಲಿ ಸೂತಕ ತಲೆದೋರುವುದು ಸಾಮಾನ್ಯವಾಗಿ ಈ ಕಾರಣಗಳಿಂದ ಇರಬಹುದಾಗಿದೆ. ಜನಪದರು ಹೇಳುವಂತೆ ಒಂಬತ್ತು ತಿಂಗಳು ಮಗು

ತಾಯಿಯ ಹೊಟ್ಟೆಯಲ್ಲಿ ರಕ್ತದ ಮುದ್ದೆಯಲ್ಲಿ ಬೆಳೆದು ಕೆಂಪು ರಂಪೆಲಿ ಬಿದ್ದು, ತಾಯಿ ರಕ್ತದಿಂದ ಹೊರಗೆ ಬಂದಿರುವುದಕ್ಕೆ ಅದು ಮೈಲಿಗೆ ಆಗಿ ಅದರ ರಕ್ತ ಸಂಬಂಧಿಕರಿಗೆಲ್ಲಾ ಮೈಲಿಗೆಯನ್ನು ಒದಗಿಸಿದೆ. ಆದುದರಿಂದ ದೇವರನ್ನು ಮಾಡಿ ಸೂತಕ ತೆಗೆಯುವುದು ಜನಪದರ ಸಂಸ್ಕೃತಿಯಲ್ಲಿ ಅವಶ್ಯಕವಾದುದಾಗಿದೆ.

ಮಗು ಜನನವಾದ ಹನ್ನೊಂದು ದಿವಸಕ್ಕೆ ಸೂತಕ ತೆಗೆಯುವುದು ರೂಢಿ. ಹಳ್ಳಿಗಳಲ್ಲಿ ಮನೆಗೆ ಸುಣ್ಣ ಬಣ್ಣ ಹೊಡೆದು ಸಾರಿಸಿ ಗುಡಿಸಿ ಮನೆಯ ವಸ್ತುಗಳನ್ನೆಲ್ಲಾ ಶುಚಿಗೊಳಿಸಿ ಮನೆ ಮಂದಿಯೆಲ್ಲಾ ಸ್ನಾನ ಮಾಡಿ ಮುಡಿಯುಟ್ಟು, ಹಳೆಮಡಕೆಗಳನ್ನು ಹೊರಹಾಕಿ ಹೊಸ ಮಡಕೆಗಳನ್ನು ತಂದು ಪೂಜೆ ಮಾಡಿ ಅಡುಗೆ ಮಾಡಲು ಉಪಯೋಗಿಸುತ್ತಾರೆ. ಮೂರು ದೇವರುಗಳನ್ನು ಕರೆಸಿ ದೇವರಿಗೆ ಎಡೆ ಇಟ್ಟು ಪೂಜೆ ಮಾಡಿಸಿ ಸೂತಕವನ್ನು ಕಳೆಯುತ್ತಾರೆ. ಕೆಲವರು ಸಿಹಿ ಅಡಿಗೆ ಮಾಡಿ ಎಡೆ ಇಕ್ಕಿದರೆ ಕೆಲವು ಮಾಂಸದ ಅಡಿಗೆಯನ್ನು ಮಾಡಿ ಎಡೆಯಿಟ್ಟು, ಪೂಜೆ ಮಾಡುತ್ತಾರೆ ಮೈನೆರೆದಾಗಲೂ ಸಹ ಸೂತಕ ತೆಗೆಯುವುದು ಸಾಮಾನ್ಯವಾಗಿದೆ. ಹನ್ನೆರಡರಿಂದ ಹದಿನೈದು ವರ್ಷದವರೆಗೆ ಹೆಣ್ಣುಮಕ್ಕಳು ಮೈನೆರೆಯುತ್ತಾರೆ. ಇದು ಶುಭದ ಸಂಕೇತವಾದರೂ ರಕ್ತದ ಮೈಲಿಗೆ ರಕ್ತಸಂಬಂಧಿಗಳಿಗೆಲ್ಲಾ ಉಂಟಾಗುತ್ತದೆ. ಈ ಸಂದರ್ಭದಲ್ಲಿ ಗುಡಿಸಲನ್ನು ಹಾಕಿ ವಸಗೆ ಶಾಸ್ತ್ರವನ್ನು ಮಾಡಲಾಗುತ್ತದೆ. ಇದೆಲ್ಲಾ ಮುಗಿದ ಮೇಲೆ ಒಂದು ದೇವರ ದಿನ ಮನೆಯವರೆಲ್ಲಾ ಬಿಸಿನೀರಿನಿಂದ ಸ್ನಾನ ಮಾಡಿ ಮನೆ ಕೋಣೆಯನ್ನೆಲ್ಲಾ ಸ್ವಚ್ಛಗೊಳಿಸಿ ಹಳೆ ಮಡಿಕೆಗಳನ್ನು ಹೊರಹಾಕಿ ಹೊಸ ಮಡಕೆ ಕುಡುಕೆಗಳನ್ನು ತಂದು ಸಂಜೆಯಲ್ಲಿ ಎಡೆ ಇಟ್ಟು ದೇವರು ಮಾಡಿ ಬಂದವರಿಗೆಲ್ಲಾ ಊಟ ಹಾಕಲಾಗುತ್ತದೆ. ಅಲ್ಲಿಗೆ ಮೈನೆರೆದ ಸೂತಕ ಕಳೆಯುತ್ತದೆ.

ಹುಟ್ಟು ಶುಭದ ಸಂಕೇತದಂತೆ ಸಾವು ಅಶುಭದ ಸಂಕೇತವಾಗಿದೆ. ಸಾವು ಸಂಭವಿಸಿದ ದಿನ ಸಾವಿನ ಮನೆಯವರಿಗೆ ಮತ್ತು ರಕ್ತಸಂಬಂಧಿಕರಿಗೆ ಸೂತಕ ಅಂಟಿಕೊಳ್ಳುತ್ತದೆ. ೧೧ನೇ ದಿನ ತಿಥಿ ಸಂಸ್ಕಾರ ಮಾಡಿದಾಗ ಅದು ಸ್ವಾಭಾವಿಕವಾಗಿ ಕಳೆದುಹೋಗುತ್ತದೆ. ಸೂತಕವಿದ್ದ ಮನೆಯವರು ಊರಿನ ಹಬ್ಬ ಹರಿದಿನ ಮತ್ತು ಶುಭಕಾರ್ಯಗಳಲ್ಲಿ ಭಾಗವಹಿಸುವಂತಿಲ್ಲ. ಮತ್ತು ಶುಭಕಾರ್ಯಗಳನ್ನು ಮಾಡುವಂತಿಲ್ಲ. ಶುಭಕಾರ್ಯ ಇಡೀ ಊರಿಗೆ ಸಂಬಂಧಿಸಿದ್ದಾದರೆ ತಿಥಿಯನ್ನು ಏಳು ಅಥವಾ ಒಂಬತ್ತು ದಿನಗಳಲ್ಲಿ ಮಾಡಿ ಮುಗಿಸಬೇಕಾಗುತ್ತದೆ. ಅಲ್ಲಿಗೆ ಸೂತಕ ಕಳೆದು ಹೋಗಿ ಊರಿನ ಕಾರ್ಯಗಳನ್ನು ನೆರವೇರಿಸಬಹುದು.

ಜನಪದರ ಆಚಾರ ವಿಚಾರ ನಡೆನುಡಿಗಳಲ್ಲಿ ಕೆಲವು ನಿರ್ಬಂಧ ನಿಯಮಗಳಿದ್ದು, ಇವು ನಮ್ಮ ಸಮಾಜವನ್ನು ಪೋಷಿಸುತ್ತವೆ. ಮತ್ತು ಸಂಸ್ಕೃತಿಯನ್ನು ಪ್ರತಿನಿಧಿಸುತ್ತವೆ. ಈ ಸೂತಕ ತೆಗೆಯುವ ಆಚರಣೆಯು ಎಲ್ಲಾ ವರ್ಗದವರಲ್ಲಿಯೂ ಆಚರಣೆಯಲ್ಲಿದೆ.

೪.೪. ವಿವಾಹ ಪದ್ಧತಿ

ಜನಪದರ ಜೀವನದಲ್ಲಿ ಮದುವೆ ಅತ್ಯಂತ ಪ್ರಮುಖವಾದ ತಾತ್ವಿಕ ಮೌಲ್ಯವಾಗಿದೆ. ಇದು ಮಾನವನ ಅಸ್ಥಿತ್ವವನ್ನು ಸಮಾಜದಲ್ಲಿ ಪ್ರತಿನಿಧಿಸುತ್ತದೆ. ಮನುಷ್ಯ ತನ್ನ ಲೈಂಗಿಕ ಬಯಕೆಯನ್ನು ಈಡೇರಿಸಿಕೊಳ್ಳಲು ಮತ್ತು ತನ್ನ ವಂಶದ ಅಭಿವೃದ್ಧಿ ಮತ್ತು ಉದ್ಧಾರಕ್ಕಾಗಿ ಮದುವೆ ಎಂಬ ಸಾಂಪ್ರದಾಯಿಕ ಆಚರಣೆಯನ್ನು ರೂಪಿಸಿಕೊಂಡಿದ್ದಾರೆ. ಮದುವೆ ಸಮಾಜದ ನೀತಿ ನಿಯಮಗಳಿಗೊಳಪಟ್ಟು ಆರೋಗ್ಯಕರ ಸಮಾಜ ಮತ್ತು ಸಂಸ್ಕೃತಿ ನಿರ್ಮಾಣಕ್ಕೆ ನಾಂದಿಯಾಗಿದೆ. ಆದುದರಿಂದ 'ಒಂದು ಒಪ್ಪಂದದ ಮೇರೆಗೆ ಮಾಡಿಕೊಂಡ ಗಂಡು ಹೆಣ್ಣುಗಳ ಲೈಂಗಿಕ ಪ್ರಕ್ರಿಯೆಯ ಸ್ವರೂಪವನ್ನು ಮದುವೆ ಎಂದು ಕರೆಯಬಹುದಾಗಿದೆ. ಮಾನವ ಲೈಂಗಿಕ ವಿಚಾರದಲ್ಲಿ ಬೇರೆ ಪ್ರಾಣಿಗಳಂತೆ ಪ್ರಚೋದನಾತ್ಮಕ ಗುಣವನ್ನು ಹೊಂದಿದವನಾದರೂ ಅವುಗಳಿಗಿಂತ ಭಿನ್ನ ಲೈಂಗಿಕ ಸಂಯೋಗ ಹೊಂದಿದ್ದಾನೆ. ಲೈಂಗಿಕತೆಯನ್ನು ವೈಯಕ್ತಿಕ ಎಂದು ಭಾವಿಸದೆ ಸಾಮಾಜಿಕ, ಸಾಂಸ್ಕೃತಿಕ ಮತ್ತು ನೈತಿಕ ವಿಚಾರಗಳೆಂದು ಪರಿಗಣಿಸಿ ಸಮಾಜದ ನೀತಿ ನಿಯಮಾವಳಿಗೊಳಪಟ್ಟು, ಮದುವೆಯಾಗಿ ಕುಟುಂಬ ಜೀವನಕ್ಕೆ ಒಳಪಡುತ್ತಾನೆ' ಇದರಿಂದ ವ್ಯವಸ್ಥಿತ ಮತ್ತು ಆರೋಗ್ಯವಂತ ಸಮಾಜ ಸೃಷ್ಟಿಯಾಗುತ್ತದೆ. ಒಮ್ಮೆ ಮಾತ್ರ ತನ್ನ ಜೀವನದಲ್ಲಿ ಬರುವಂತಹ ವಿವಾಹಕ್ಕೆ ಹೆಚ್ಚಿನ ಪ್ರಾಮುಖ್ಯತೆ ಮತ್ತು ಮಹತ್ವವನ್ನು ಜನಪದರು ಕೊಡುತ್ತಾರೆ. ತಮ್ಮದೇ ಆದ ಜಾತಿ ಧರ್ಮ ಸಮುದಾಯಗಳ, ಸಂಪ್ರದಾಯಗಳ ಪ್ರಕಾರ ಮದುವೆಯನ್ನು ಆಚರಿಸಿಕೊಳ್ಳುತ್ತಾರೆ.

ಮದುವೆ ಒಂದು ಋಣಾನುಬಂಧ. ಇಂತೋರಿಗೆ ಇಂಥವರು ಎಂದು ದೇವರು ಸೃಷ್ಟಿಸಿರುತ್ತಾನೆ. ಅದು ಹಾಗೆಯೇ ಆಗುತ್ತದೆ ಎಂದು ಹಿರಿಯರು ಹೇಳುತ್ತಾರೆ. ಮದುವೆ ಮಾಡಿಕೊಂಡು ವ್ಯಕ್ತಿ ಸಮಾಜದಲ್ಲಿ ಜವಾಬ್ದಾರಿಯುತ ವ್ಯಕ್ತಿಯಾಗುತ್ತಾನೆ. ಮತ್ತು ಒಳ್ಳೆಯ ನಾಗರೀಕನಾಗುತ್ತಾನೆ ಎಂಬ ಆಶಯ ಜನಪದರದು. ಹುಡುಗ ತಾರುಣ್ಯದಲ್ಲಿ ಪೋಲಿ ಆಡಿಕೊಂಡು ಓಡಾಡಿಕೊಂಡು ಇರುವುದನ್ನು ಹಿರಿಯರು ನೋಡಿ, "ಅದೆಷ್ಟು ದಿನ ಹೀಗೆ ಇರ್ತಿಯಾ ಇರು ಎಲ್ಲಾದ್ರೂ ಒಂದೊಳ್ಳೆ ಹೆಣ್ಣೋಡಿ ಮದುವೆ ಮಾಡಿಬಿಟ್ರೆ ಸರಿಹೋಗ್ತಿ" ಅಂತಾರೆ. ಇದರಿಂದ ಮದುವೆ ಸಂತಾನ ಮತ್ತು ಜವಾಬ್ದಾರಿಯುತ ವ್ಯಕ್ತಿತ್ವ ನಿರ್ಮಾಣದ ಉದ್ದೇಶದಿಂದ ಕೂಡಿರುವಂತಹದ್ದು ಎಂದು ಹೇಳಬಹುದು.

ಹಿಂದೆ ಜನಪದರಲ್ಲಿ ಬಾಲ್ಯ ವಿವಾಹ ಪದ್ಧತಿ ರೂಢಿಯಲ್ಲಿತ್ತು. ಹುಡುಗ ದೊಡ್ಡವನಾಗಿ ಹುಡುಗಿ ಋತುಮತಿಯಾಗುವ ಮುನ್ನವೇ ಮದುವೆ ಮಾಡಿಬಿಡುತ್ತಿದ್ದರು. ವಯಸ್ಸಾಗುವ ಹೊತ್ತಿಗೆ ನಮ್ಮ ಮಗ ನಮ್ಮೆಲ್ಲಾ ಜವಾಬ್ದಾರಿ ಹೊತ್ತು ನಮ್ಮ ಕೈಗೆ ಮೊಮ್ಮಕ್ಕಳನ್ನು ಕೊಟ್ಟರೆ ಅವುಗಳನ್ನು ಆಡಿಸಿಕೊಂಡು ಕಾಲ ಕಳೆಯಬಹುದು ಎಂದು ಮತ್ತು ಬೇಗ ಮಕ್ಕಳು ಮೊಮ್ಮಕ್ಕಳು ದೊಡ್ಡವರಾಗಿ ವ್ಯವಸಾಯದಲ್ಲಿ ತೊಡಗಿ ನಮ್ಮನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ ಎಂಬ ಉದ್ದೇಶದಿಂದ ಬೇಗನೆ ಮದುವೆ ಮಾಡಿಬಿಡುತ್ತಿದ್ದರು.

ಹಿಂದೆ ಬಹುಪತ್ನಿತ್ವ ಪದ್ಧತಿ ರೂಢಿಯಲ್ಲಿದ್ದು, ಗಂಡಸರು ಎರಡು ಮೂರು ಮದುವೆಗಳನ್ನು ಮಾಡಿಕೊಳ್ಳುತ್ತಿದ್ದರು. ಆದರೆ ಈಗ ಹಲವಾರು ಕಾನೂನುಗಳು ಬಂದು ಬಾಲ್ಯ ವಿವಾಹ ಮತ್ತು ಬಹುಪತ್ನಿತ್ವ ಪದ್ಧತಿಗಳು ಕಂಡುಬರುವುದಿಲ್ಲ. ಕೆಲವು ವರ್ಗದವರಲ್ಲಿ ವಿಧವೆಯರಿಗೆ ಮದುವೆ ಮಾಡುವ ಕೂಡಿಕೆ ಪದ್ಧತಿ ಈಗಲೂ ಕಂಡು ಬರುತ್ತದೆ.

ಮದುವೆಯಾಗುವಾಗ ಹಿಂದು ಪದ್ಧತಿಯಲ್ಲಿ ದಾಯಾದಿ ಸಂಬಂಧ ನಿಷಿದ್ಧ. ಸೋದರಮಾವನ ಮಕ್ಕಳು ಅಥವಾ ಅಕ್ಕನ ಮಕ್ಕಳನ್ನು ಮದುವೆಯಾಗಬಹುದು. ತಂಗಿಯ ಮಗಳನ್ನು ತರುವಂತಿಲ್ಲ. ಜನಪದರು ದೂರದ ಊರಿನಿಂದ ಹೆಣ್ಣನ್ನು ತರಬೇಕು ಎಂಬ ವಿಚಾರಕ್ಕೆ ಕಟ್ಟುಬಿದ್ದಂತೆ ಕಾಣುತ್ತಾರೆ. ಹತ್ತಿರದ ಊರಿನಿಂದ ದನ ತರಬೇಕು. ದೂರದೂರಿನಿಂದ ಹೆಣ್ಣನ್ನು ತರಬೇಕು ಎಂಬ ಗಾದೆ ಮಾತೇ ಬಳಕೆಯಲ್ಲಿದೆ.

ಒಂದೇ ಕುಟುಂಬಕ್ಕೆ ಮೂರು ಸಂಬಂಧಗಳನ್ನು ಮಾಡಿ ಒಂದೇ ಕುಟುಂಬಕ್ಕೆ ಹೆಣ್ಣನ್ನು ಕೊಟ್ಟು ತೆಗೆದುಕೊಂಡು ೩ ಸಾರಿ ಸಂಬಂಧವೇರ್ಪಟ್ಟಿದ್ದರೆ ನಾಲ್ಕನೇ ಸಂಬಂಧ ಮಾಡುವಹಾಗಿಲ್ಲ. ಹಾಗೆ ಮಾಡಬೇಕಾದರೆ ಒಂದು ಹಸು ಮತ್ತು ಕರುವಿನ ಮೇಲೆ ಹೊಸ ಬಟ್ಟೆ ಹೊದಿಸಿ ಪೂಜೆ ಮಾಡಿ ಕೊಟ್ಟು ಆ ದೋಷದ ಪರಿಹಾರ ಮಾಡಿ ನಂತರ ಸಂಬಂಧವನ್ನು ಮಾಡಬಹುದು. ಹಿಂದೆ ಹಿರಿಯರು ನೋಡಿದ ಹೆಣ್ಣು ಗಂಡುಗಳನ್ನು ಕಿರಿಯರು ತಿರಸ್ಕರಿಸುವಂತಿರಲಿಲ್ಲ. ಆದರೆ ಈಗ ಕಾಲ ಬದಲಾಗಿದೆ.

ಮೊದಲು ಜನಪದರಲ್ಲಿ ಮದುವೆಯ ಕಾರ್ಯ ಮೂರರಿಂದ ಐದು ದಿನಗಳವರೆಗೆ ನಡೆಯುತ್ತಿದ್ದವು. ಈಗ ನಾಗರೀಕತೆ ಬೆಳೆದಂತೆ ಕಾಲ ಬದಲಾಗಿ ಮದುವೆಯ ಹಲವಾರು ಆಚರಣೆಗಳು ಬದಲಾಗಿವೆ. ಕೆಲವು ಆಚರಣೆಗಳು ಕಣ್ಮರೆಯಾಗಿವೆ. ಈಗ ಎರಡು ದಿನಗಳಲ್ಲಿ ಮದುವೆಯ ಕಾರ್ಯ ಮುಗಿದುಬಿಡುತ್ತದೆ. ಮೊದಲನೆಯ ದಿನ ಚಪ್ಪರ ಮತ್ತು ದೇವತಾಕಾರ್ಯ. ಎರಡನೆಯ ದಿನ ಮುಹೂರ್ತ ಮತ್ತು ದೇವರನ್ನು ಬಿಡುವ ಕಾರ್ಯ. ಜೊತೆಗೆ ಐದು ದಿನದ ಶಾಸ್ತ್ರ ಮತ್ತು ತಿಂಗಳ ಶಾಸ್ತ್ರಗಳೂ ಇರುತ್ತವೆ.

ಅ) ಹೆಣ್ಣನ್ನು ನೋಡುವುದು

ಮದುವೆ ಸಂಬಂಧಿ ಆಚರಣೆಗಳಲ್ಲಿ ಹೆಣ್ಣನ್ನು ನೋಡಲು ಹೋಗುವುದು. ಪ್ರಥಮ ಹಾಗೂ ಪ್ರಮುಖವಾದ ಆಚರಣೆಯಾಗಿದೆ. ಗಂಡಿನ ಕಡೆಯವರು ಮೊದಲು ಈ ಆಚರಣೆಯಲ್ಲಿ ತೊಡಗುತ್ತಾರೆ. ನನ್ನ ಸಂಶೋಧನೆಯ ವ್ಯಾಪ್ತಿ ಪ್ರದೇಶದಲ್ಲಿ ಹಲವಾರು ಜಾತಿ ಜನಾಂಗದ ಜನರಿದ್ದು, ಸಾಮಾನ್ಯವಾಗಿ ಎಲ್ಲಾ ವರ್ಗದವರಲ್ಲೂ ಮದುವೆಯ ಆಚರಣೆಗಳು ಒಂದೇ ತೆರನಾಗಿರುತ್ತವೆ. ಇಂದಿನ ಆಧುನಿಕ ಕಾಲದಲ್ಲಿ ಹೆಣ್ಣಿಗೆ ಗಂಡನ್ನು, ಗಂಡಿಗೆ ಹೆಣ್ಣನ್ನು ಗೊತ್ತು ಮಾಡುವುದು ಹಿಂದಿನ ಕಾಲದಷ್ಟು ಕಷ್ಟವಲ್ಲ. ಆಗಿನ ಕಾಲದಲ್ಲಿ ಗಂಡು ಹೆಣ್ಣಿಗೆ ತೆರವನ್ನು ತೆತ್ತು

ಮದುವೆಯಾಗಬೇಕಿತ್ತು. ಆದರೆ ಈಗ ಇದೆಲ್ಲಾ ಬದಲಾವಣೆಯಾಗಿದೆ. ಆಧುನಿಕತೆ ಬೆಳೆದಂತೆಲ್ಲಾ ಆಚರಣೆಗಳ ರೂಪುರೇಷೆಗಳು ಬದಲಾವಣೆಯತ್ತ ಸಾಗುತ್ತಿದೆ. ಜನಪದರ ಜೀವನದಲ್ಲಿ ಆಚರಣೆಗಳು ಮಾರ್ಪಾಡುಗೊಂಡು ಪೂರ್ಣ ಪ್ರಮಾಣದಲ್ಲಿ ಸಂಪ್ರದಾಯಗಳನ್ನು ಆಚರಿಸಲಾಗುತ್ತಿಲ್ಲ. ಗಂಡಿಗೆ ಹೆಣ್ಣನ್ನು ನೋಡುವುದು ಮತ್ತು ಹೆಣ್ಣಿಗೆ ಹೂ ಮುಡಿಸುವುದು ಸಹ ಸಂಪ್ರದಾಯಗಳ ಚೌಕಟ್ಟಿನಲ್ಲಿಯೇ ಬರುತ್ತದೆ. ಹಿಂದೆ ತಮ್ಮ ಮಗನಿಗೆ ಹೆಣ್ಣನ್ನು ಗೊತ್ತುಪಡಿಸಲು ಊರೂರು ಸುತ್ತಿ ಏಳು ಜೊತೆ ಪಾದರಕ್ಷೆಗಳು ಸವೆಯುತ್ತಿದ್ದವಂತೆ. ಈ ವಿಚಾರವನ್ನು ಗಮನಿಸಿದರೆ ಆಗಿನ ಪರಿಸ್ಥಿತಿ ಹೇಗಿತ್ತು ಎಂಬುದು ಅರ್ಥವಾಗುತ್ತದೆ.

'ಹಿರಿಯರು ತಮ್ಮ ಮಕ್ಕಳಿಗೆ ಗಂಡು ಹೆಣ್ಣುಗಳನ್ನು ಹುಡುಕುವಾಗ ಸಾಲಾವಳಿ ಸಂಬಂಧವನ್ನು ನೋಡಿ ಒಳ್ಳೆಯ ಮನೆತನದಲ್ಲಿ ಕುಲಸ್ಥರೂ ಜಾತೀಕರೂ ಆಗಿರುವ ಮನೆಯಲ್ಲಿ ಹುಡುಗ ಮತ್ತು ಹುಡುಗಿಯ ಗುಣ ನಡತೆ, ರೂಪು ಎಲ್ಲವನ್ನು ನೋಡಿ ಬೀಗರಾಗುವ ವ್ಯಕ್ತಿಯ ಯೋಗ್ಯತೆ ಅಂತಸ್ತು ಇದೆಲ್ಲವನ್ನು ಗಮನಿಸುತ್ತಾರೆ' ಆಪ್ತರು ಹುಡುಗ ಮತ್ತು ಹುಡುಗಿಯ ಬಗ್ಗೆ ವಿವರ ನೀಡುತ್ತಾರೆ. ಜಾತ್ರೆ, ಉತ್ಸವ, ಹಬ್ಬ, ಹರಿದಿನ ಹಾಗೂ ಶುಭಕಾರ್ಯಗಳ ಸಂದರ್ಭದಲ್ಲಿ ಹೆಣ್ಣಿನ ಚಲನವಲನಗಳನ್ನು ಸೂಕ್ಷ್ಮವಾಗಿ ಗಮನಿಸಿ ನಂತರ ಹೆಣ್ಣನ್ನು ನೋಡಬಹುದು ಎಂಬ ಅಭಿಪ್ರಾಯಕ್ಕೆ ಬಂದು ಹೆಣ್ಣನ್ನು ನೋಡಲು ಹೋಗುತ್ತಾರೆ.

ಹೆಣ್ಣನ್ನು ನೋಡಲು ಆ ಊರಿನ ಯಜಮಾನರನ್ನು ಮುಂದಿಟ್ಟುಕೊಂಡು ಹೆಣ್ಣಿನ ಮನೆಯವರಿಗೆ ಹೇಳಿಕಳುಹಿಸುತ್ತಾರೆ. ಅವರು ಒಪ್ಪಿಗೆ ಕೊಟ್ಟರೆ ಗಂಡಿನ ತಂದೆತಾಯಿ ಮತ್ತು ತಮಗೆ ಬೇಕಾದವರನ್ನು ಕರೆದುಕೊಂಡು ಬಂದು ಹೆಣ್ಣನ್ನು ನೋಡುತ್ತಾರೆ. ಒಪ್ಪಿಗೆಯಾದರೆ ನಿಮ್ಮ ಹೆಣ್ಣು ನಮಗೆ ಒಪ್ಪಿಗೆಯಾಗಿದೆ ಎಂದು ಹೇಳಿಬಿಡುತ್ತಾರೆ. ಕೆಲವರು ಊರಿಗೆ ಹೋಗಿ ಅಲ್ಲಿಂದ ಹೇಳಿ ಕಳುಹಿಸುತ್ತೇವೆ ಎಂದು ಹೇಳುತ್ತಾರೆ. ಹೆಣ್ಣನ್ನು ನೋಡಲು ಹೋದಾಗ ಊಟ ಮಾಡುವುದಿಲ್ಲ. ಕಾಫಿ, ಟೀ, ತಂಪು ಪಾನೀಯ ಅಥವಾ ಮಜ್ಜಿಗೆ, ಷರಬತ್ತನ್ನು ಕುಡಿದು ಬರುತ್ತಾರೆ. ಗಂಡಿನ ಕಡೆಯವರ ಒಪ್ಪಿಗೆ ತಿಳಿದ ಮೇಲೆ ಹೆಣ್ಣಿನ ಕಡೆಯವರು ಗಂಡಿನ ಊರಿಗೆ ಹೋಗಿ, ಊರಿನವರಿಗೆ ಅವರ ಮನೆ ಮತ್ತು ಮನೆತನದ ಬಗ್ಗೆ ಇರುವ ಅಭಿಪ್ರಾಯವನ್ನು ತಿಳಿದು ಗಂಡಿನ ಗುಣ, ನಡತೆ, ಆಸ್ತಿಪಾಸ್ತಿ, ಕೆಲಸಕಾರ್ಯ ಎಲ್ಲವನ್ನು ನೋಡಿ ಹೆಣ್ಣನ್ನು ಕೊಡಲು ಒಪ್ಪಿಗೆ ಕೊಡುತ್ತಾರೆ. ಇತ್ತೀಚೆಗೆ ಗಂಡು ಊಟ ಬಟ್ಟೆಗೆ ಅನುಕೂಲವಾಗಿದ್ದು, ಒಳ್ಳೆಯ ನಡತೆ ಹೊಂದಿದ್ದರೆ ಹೆಣ್ಣು ಗಂಡಿಗೆ ಜೋಡಿ ಸರಿಹೊಂದಿದರೆ ಸಾಕು ಹೆಣ್ಣನ್ನು ಕೊಟ್ಟು ಮದುವೆ ಮಾಡಿಬಿಡುತ್ತಾರೆ. ಆಸ್ತಿಗೆ ಹೆಚ್ಚಿನ ಮನ್ನಣೆ ಕೊಡುವುದಿಲ್ಲ, ಹೆಣ್ಣು ಗಂಡು ಇಬ್ಬರ ಕಡೆಯವರಿಗೂ ಒಪ್ಪಿಗೆ ಆದ ಮೇಲೆ ಶಾಸ್ತ್ರವನ್ನು ಕೇಳಿ ಹೆಣ್ಣಿಗೆ ಹೂ ಮುಡಿಸಿ ಈ ಹೆಣ್ಣು ನಮ್ಮದಾಗಿದೆ ಎಂದು ಗ್ಯಾರಂಟಿ ಮಾಡಿಕೊಡುತ್ತಾರೆ. ಹೆಣ್ಣು ತಂದ ಮೇಲೆ ಮನೆಗೆ ಸರಿಯಾದ ಹೆಣ್ಣನ್ನೇ ತೆಗೆದುಕೊಂಡು ಬರಬೇಕು ಮನೆಗೆ ಮಹಾಲಕ್ಷ್ಮಿಯಾಗಿರಬೇಕು. ಸರಿಯಾಗಿ ಕುಲ ನೋಡಿ ತರ್ದೆ ಹೋದ್ರೆ ಮುಪ್ಪಾಗುವ ತನಕ ಜೊತೇಲಿ ಕಟ್ಕಂಡು ಸಾಯಕಾಯ್ತದ' ಎಂದು ಹಿರಿಯರು ಕೆಲವು ಸಂದರ್ಭದಲ್ಲಿ ಹೇಳುತ್ತಿರುತ್ತಾರೆ.

ಆ) ಶಾಸ್ತ್ರ ಕೇಳುವುದು

ಹೆಣ್ಣನ್ನು ಗಂಡಿನ ಕಡೆಯವರು ಗಂಡನ್ನು ಹೆಣ್ಣಿನ ಕಡೆಯವರು ನೋಡಿ ಒಪ್ಪಿಗೆಯಾದ ಮೇಲೆ ಮದುವೆ ಕಾರ್ಯವನ್ನು ಶಾಸ್ತ್ರೋಕ್ತವಾಗಿ ಹಮ್ಮಿಕೊಳ್ಳಲು ಪುರೋಹಿತರ ಬಳಿಗೆ ಹೋಗಿ ಶಾಸ್ತ್ರ ಕೇಳುವ ಸಂಪ್ರದಾಯ ಸಾಮಾನ್ಯವಾಗಿದೆ. ಇದನ್ನು ಹಳ್ಳಿಗಳಲ್ಲಿ ಜಾತಕ ತೆಗೆಸುವುದು ಎಂದು ಸಹ ಕರೆಯುತ್ತಾರೆ. ಗಂಡು ಹೆಣ್ಣುಗಳ ಜಾತಿಯನ್ನು ನೋಡಿ ಹೆಸರು, ರಾಶಿ, ಕುಲ, ಗೋತ್ರಗಳನ್ನು ಲೆಕ್ಕಹಾಕಿ ಜೋಯಿಸರು ಹೆಣ್ಣುಗಂಡುಗಳ ರಾಶಿಗನುಗುಣವಾಗಿ ದೇವಗಣವೋ, ರಾಕ್ಷಸಗಣವೋ ಎಂಬುದನ್ನು ಪರೀಕ್ಷಿಸಿ ಅವುಗಳ ಅಂಕಿಸಂಖ್ಯೆಗಳನ್ನು ಕೂಡಿ ಕಳೆದು ಗುಣಿಸಿ ಬಾಗಿಸಿ ಲೆಕ್ಕಾಚಾರ ಹಾಕಿ ತಾಳೆ ನೋಡುತ್ತಾರೆ. ಅದು ಸರಿಯಾಗಿ ಬಂದರೆ ವಿವಾಹಕ್ಕೆ ಒಪ್ಪಿಗೆ ಸೂಚಿಸುತ್ತಾರೆ. ಈ ಜಾತಕ ಕೇಳುವ ಶಾಸ್ತ್ರಕ್ಕೆ ಹಳ್ಳಿಯ ಕಡೆ ಹೆಸರು ಬಲ ನೋಡುವುದು ಎನ್ನುತ್ತಾರೆ. ಶಾಸ್ತ್ರ ಕೇಳುವಾಗ ಹೆಣ್ಣುಗಂಡುಗಳಿಬ್ಬರ ಕಡೆಯವರೂ ಒಟ್ಟಾಗಿ ಸೇರಿ ಜೋಯಿಸರಿಗೆ ಎಲೆ, ಅಡಿಕೆ, ಹಣ್ಣುಕಾಯಿ, ಕಡ್ಡಿ, ಕರ್ಪೂರ, ಪೂಜಾ ಸಾಮಾನುಗಳನ್ನು ಕಾಣಿಕೆ ಕೊಟ್ಟು ಶಾಸ್ತ್ರ ಕೇಳುತ್ತಾರೆ. ಇದು ಸಾಂಪ್ರದಾಯಿಕವಾಗಿ ನಮ್ಮ ಸಂಸ್ಕೃತಿಯಲ್ಲಿ ಹಿಂದಿನಿಂದಲೂ ಬೆಳೆದು ಬಂದಿದೆ.

ಇ) ಹೆಣ್ಣಿಗೆ ಹೂ ಮುಡಿಸುವುದು

ಮದುವೆ ಮಾಡಲು ಹೆಣ್ಣು ಗಂಡಿನ ಕಡೆಯವರಿಬ್ಬರಿಗೂ ಒಪ್ಪಿಗೆಯಾದ ಮೇಲೆ ಗಂಡಿನ ಕಡೆಯವರು ಒಂದು ಒಳ್ಳೆಯ ದಿನವನ್ನು ಗೊತ್ತುಮಾಡಿ ಇಂತ ದಿನ ಹೆಣ್ಣಿಗೆ ಹೂ ಮುಡಿಸಲು ಬರುತ್ತೇನೆ ಎಂದು ಮೊದಲೇ ತಿಳಿಸಿರುತ್ತಾರೆ. ಹೆಣ್ಣಿನ ಮನೆಗೆ ಹೋಗುವಾಗ ಹೂವು, ಎಲೆ, ಅಡಿಕೆ, ಅರಿಶಿಣ, ಕುಂಕುಮ, ಹಣ್ಣುಗಳು ಪೂಜಾ ಸಾಮಾನುಗಳನ್ನು ತೆಗೆದುಕೊಂಡು ೩ ಅಥವಾ ೫ ಜನ ಮುತ್ತೈದೆಯರ ಜೊತೆ ತಮಗೆ ಬೇಕಾದವರನ್ನೆಲ್ಲಾ ಗಂಡಿನ ತಂದೆತಾಯಿಗಳು ಕರೆದುಕೊಂಡು ಹೋಗುತ್ತಾರೆ. ಹೋಗುವ ದಾರಿಯಲ್ಲಿ ಶಕುನಗಳನ್ನು ಗಮನಿಸುತ್ತಾರೆ. ಕೆಟ್ಟ ಶಕುನಗಳೇ ಹೆಚ್ಚು ಕಂಡು ಬಂದರೆ ಪ್ರಯಾಣವನ್ನು ಅಲ್ಲಿಗೇ ನಿಲ್ಲಿಸಿ ಹಿಂದಿರುಗುತ್ತಾರೆ. ಒಳ್ಳೆಯ ಶಕುನಗಳಾದರೆ ಸಂತೋಷದಿಂದ ಹೊರಡಲು ಮುಂದಾಗುತ್ತಾರೆ. ಹೆಣ್ಣಿನ ಮನೆ ತಲುಪಿದ ಗಂಡಿನ ಕಡೆಯವರನ್ನು ಹೆಣ್ಣಿನ ತಂದೆತಾಯಿ ಸ್ವಾಗತಿಸಿ ಕುಳಿತುಕೊಳ್ಳಲು ಹೇಳುತ್ತಾರೆ. ಮಾತುಕತೆಗೆ ಮೊದಲು ಹೆಣ್ಣನ್ನು ಗಂಡಿನ ಬಳಗದವರು ನೋಡುವುದಕ್ಕಾಗಿ ನೀರು ಬೇಕು, ಅದುಬೇಕು, ಇದು ಬೇಕೆಂದು ಕೋಣೆಗೂ ಮನೆಗೂ ಓಡಾಡಿಸುತ್ತಾರೆ. ಹೆಣ್ಣಿನ ಕೈಕಾಲು ಮುಖ ಎಲ್ಲವನ್ನು ಗಮನಿಸಿ ಯಾವುದೇ ರೀತಿಯ ತೊಡಕು ಇಲ್ಲವೆಂದು ತಿಳಿದ ಮೇಲೆ ಮದುವೆಯ ಮಾತನ್ನು ಆರಂಭಿಸುತ್ತಾರೆ.

ಹೆಣ್ಣಿನ ಕಡೆಯವರು ಆ ಊರಿನ ಯಜಮಾನನ್ನು ಕರೆಸಿ ಮಾತುಕತೆಗೆ ಕುಳಿತುಕೊಳ್ಳುತ್ತಾರೆ. ಗಂಡಿನ ಕಡೆಯವರು ಕೆಲವು ವಸ್ತುಗಳನ್ನು ಹೆಣ್ಣಿಗೆ ಕೊಡಬೇಕಾಗುತ್ತದೆ. ಹಾಗೆ ಹೆಣ್ಣಿನ ಕಡೆಯವರು ಗಂಡಿಗೆ ಕೆಲವು ವಸ್ತುಗಳನ್ನು ಹಾಗು ಉಡುಗೊರೆಗಳನ್ನು ಕೊಡಬೇಕಾಗುತ್ತದೆ

ಎಂದು ಮಧ್ಯಸ್ಥರು ಮಾತನಾಡುತ್ತಾರೆ. ಗಂಡಿಗೆ ಕೊಡುವಂತಹ ವಸ್ತುಗಳೆಂದರೆ ಒಂದು ಜೊತೆ ವಸ್ತ್ರ, ವಾಚು, ಉಂಗುರ, ಕತ್ತಿನ ಚೈನು, ಕೈಗೆ ಚೈನು, ಮುಂತಾದ ವಸ್ತುಗಳನ್ನು ಹೆಣ್ಣಿನ ಕಡೆಯವರು ತೆರುತ್ತಾರೆ. ಹೆಣ್ಣಿಗೆ ರೇಷ್ಮೆ ಸೀರೆ, ರವಿಕೆ, ಓಲೆ, ಜುಮುಕಿ, ಮಾಂಗಲ್ಯ, ಮೂಗುಬಟ್ಟು, ಉಂಗುರ, ಕಾಲು ಚೈನು, ನೆಕ್ಲೆಸ್ ಮುಂತಾದ ವಸ್ತ್ರಾಭರಣಗಳನ್ನು ಕೊಡಬೇಕು. ಹೀಗೆ ವಸ್ತು ಒಡವೆ ಹೊಲಮನೆ ತೋಟ ಮುಂತಾದ ಮಾತುಕತೆಗಳು ನಡೆದು ಮಧ್ಯಸ್ಥರಿಂದ ಒಂದು ತೀರ್ಮಾನಕ್ಕೆ ಬಂದ ಮೇಲೆ ಎರಡೂ ಕಡೆಯವರು ಒಪ್ಪಿಗೆ ಸೂಚಿಸಿ ಪರಸ್ಪರ ಸಂತೋಷ ಪಡುತ್ತಾರೆ.

ಒಟ್ಟಿನಲ್ಲಿ ಹೆಣ್ಣಿನ ಕಡೆಯವರು ಮತ್ತು ಗಂಡಿನ ಕಡೆಯವರು ಇಬ್ಬರಿಗೂ ಒಪ್ಪಿಗೆ ಆದ ಮೇಲೆ ಗಂಡಿನ ಕಡೆಯ ಹೆಂಗಸರು ಹೆಣ್ಣಿಗೆ ಹೂ ಮುಡಿಸಿ, ಕುಂಕುಮ ಇಟ್ಟು, ಎಲೆ, ಅಡಕೆ, ಕಾಯಿ, ಹಣ್ಣು ಎಲ್ಲವನ್ನೂ ಒಂದು ತಟ್ಟೆಯಲ್ಲಿ ಇಟ್ಟು, ಹೆಣ್ಣಿಗೆ ಕೊಡುತ್ತಾರೆ. ಅಲ್ಲಿಗೆ ಒಂದು ಲೆಕ್ಕದಲ್ಲಿ ಗಂಡಿಗೆ ಹೆಣ್ಣು ನಿಶ್ಚಯವಾಯಿತೆಂದು ಅರ್ಥ. ಇಷ್ಟೆಲ್ಲಾ ಮುಗಿದ ಮೇಲೆ ಹೆಣ್ಣು ಗಂಡಿನ ಕಡೆಯವರೆಲ್ಲಾ ಒಟ್ಟಿಗೆ ಕುಳಿತು ಊಟ ಮಾಡುತ್ತಾರೆ. ನಂತರ ಊರಿಗೆ ಹೊರಡುತ್ತಾರೆ.

ಈ) ವೀಳ್ಯದ ಶಾಸ್ತ್ರ

ವೀಳ್ಯದ ಬಗ್ಗೆ ಜನಪದರಲ್ಲಿ ತಮ್ಮದೇ ಆದ ನಂಬಿಕೆ ಇದೆ. ವೀಳ್ಯ ಸತ್ಯದ ಸಂಕೇತ. ವೀಳ್ಯವನ್ನು ಕೈಯಲ್ಲಿಟ್ಟು, ಮಾತುಕೊಟ್ಟರೆ ಆ ಕಾರ್ಯ ನಡೆದೇ ನಡೆಯುತ್ತದೆ ಎಂದು ನಂಬಿಕೆ ಇದೆ. ಹೆಣ್ಣು ಗಂಡಿನ ಕಡೆಯವರು ವೀಳ್ಯವನ್ನು ಬದಲಾಯಿಸಿಕೊಂಡರೆ ಪರಸ್ಪರ ಒಪ್ಪಿಗೆಯಾಗಿದೆ. ಮುಂದಿನ ಕಾರ್ಯವನ್ನು ಎರಡೂ ಕಡೆಯವರು ನಿರಾಂತಕವಾಗಿ ಮುಂದುವರಿಸಬಹುದು ಎಂದು ಅರ್ಥ. ವೀಳ್ಯೆ ಶಾಸ್ತ್ರವನ್ನು ವೀಳ್ಯದ ಶಾಸ್ತ್ರ, ಒಪ್ಪು ವೀಳ್ಯ, ಒಪ್ಪಿಗೆ ಶಾಸ್ತ್ರ, ನಿಶ್ಚಿತಾರ್ಥ, ಎಂಗೆಂಜ್‌ಮೆಂಟ್ ಎಂದೂ ಸಹ ಕರೆಯುತ್ತಾರೆ. ಹೆಣ್ಣಿನ ಕಡೆಯವರು ಈ ಕಾರ್ಯವನ್ನು ಮಾಡುತ್ತಾರೆ.

ಗಂಡಿನ ಕಡೆಯವರು ಹೆಣ್ಣನ್ನು ಒಪ್ಪಿಕೊಂಡ ಮೇಲೆ ಹೆಣ್ಣಿನ ಮನೆಗೆ ಬಂದು ಹೆಣ್ಣಿಗೆ ಹೂಮುಡಿಸುತ್ತಾರೆ. ಹಾಗೆ ಹೆಣ್ಣಿನ ಕಡೆಯವರೂ ಗಂಡಿನ ಮನೆಗೆ ಹೋಗಿ ಎಲ್ಲರನ್ನೂ ವಿಚಾರಿಸಿ ನೋಡಿ ಬರುತ್ತಾರೆ. ಅನಂತರ ಒಂದು ಒಳ್ಳೆಯ ದಿನವನ್ನು ನೋಡಿ ಹೆಣ್ಣೋರಿಗೆ ಹೇಳಿಕಳುಹಿಸಿ ಹೆಣ್ಣಿನ ಮನೆಗೆ ಬರುತ್ತಾರೆ. ಇತ್ತೀಚೆಗೆ ವೀಳ್ಯಶಾಸ್ತ್ರವನ್ನು ಕಲ್ಯಾಣ ಮಂಟಪಗಳಲ್ಲಿ ಮಾಡಿಕೊಳ್ಳುವ ಸಂಪ್ರದಾಯ ಬೆಳೆದು ಬರುತ್ತಿದೆ.

'ಹೆಣ್ಣಿನ ಮನೆಗೆ ವೀಳ್ಯ ಶಾಸ್ತ್ರಕ್ಕಾಗಿ ಗಂಡಿನ ಮನೆಯವರು ಬರುವಾಗ ಐದು ಅಥವ ಮೂರು ಜನ ಮುತ್ತೈದೆಯರೊಡನೆ ಸಂಬಂಧಿಕರು ಸ್ನೇಹಿತರನ್ನೆ ಕರೆತರುತ್ತಾರೆ. ಬರುವಾಗ ಶಾಸ್ತ್ರಕ್ಕೆ ಬೇಕಾಗುವ ಪೂಜಾ ಸಾಮಗ್ರಿಗಳು, ಹಣ್ಣುಹಂಪಲು, ಎಲೆ ಅಡಿಕೆ, ಸೀರೆಕುಪ್ಪಸ, ಅರಿಶಿಣಕುಂಕುಮ, ಎಲ್ಲಾ ಸಾಮಾನುಗಳನ್ನು ತಟ್ಟೆಯಲ್ಲಿಟ್ಟು ತರುತ್ತಾರೆ. ಬಂದವರನ್ನು ಗೌರವದಿಂದ ಆಹ್ವಾನಿಸಿ ಕೈಕಾಲು ತೊಳೆದುಕೊಳ್ಳಲು ನೀರು ಕೊಟ್ಟು ಕುಳ್ಳಿರಿಸಿ ತಂದಿರುವ ತಟ್ಟೆ ಹಾಗೂ ಸಾಮಾನುಗಳನ್ನು ಒಂದು ಗೊತ್ತಾದ ಜಾಗದಲ್ಲಿ ಇರಿಸುತ್ತಾರೆ.'

ಗಂಡು ಮತ್ತು ಹೆಣ್ಣಿನ ಕಡೆಯ ಇಬ್ಬರೂ ಯಜಮಾನರುಗಳು ಎದುರುಬದುರಾಗಿ ಕುಳಿತುಕೊಂಡಿರುತ್ತಾರೆ. ನಡುವೆ ತಟ್ಟೆಗಳಲ್ಲಿ ಶಾಸ್ತ್ರದ ಪೂಜಾ ಸಾಮಾನುಗಳನ್ನು ಇಟ್ಟಿರುತ್ತಾರೆ. ಅವುಗಳನ್ನು ಪೂಜೆ ಮಾಡಿ ಪರಸ್ಪರ ಹೂ ಮಾಲೆಗಳನ್ನು ಹಾಕಿಕೊಂಡು ಮರ್ಯಾದೆ ಮಾಡಿಕೊಳ್ಳುತ್ತಾರೆ. ಕಳಸ ಕನ್ನಡಿ ಮತ್ತು ಇತರ ವಸ್ತುಗಳನ್ನು ತಟ್ಟೆಗಳಿಗೆ ಪೂಜೆ ಮಾಡಿ ವೀಳ್ಯವನ್ನು ಹೆಣ್ಣಿನ ಕಡೆಯವರಿಗೂ ಹೆಣ್ಣಿನ ಕಡೆಯವರು ತಂದ ವಸ್ತುಗಳನ್ನು ಗಂಡಿನ ಕಡೆಯವರಿಗೆ ಅದಲು ಬದಲು ಮಾಡಿಕೊಂಡು ವಿನಿಮಯ ಮಾಡಿಕೊಳ್ಳುವಾಗ ಗಂಡಿನ ಕಡೆಯವರು ನಿಮ್ಮ ಹೆಣ್ಣು ನಮಗೆ ಒಪ್ಪಿಗೆ ಎಂದು, ಹೆಣ್ಣಿನ ಕಡೆಯವರು ನಿಮ್ಮ ಗಂಡು ನಮಗೆ ಒಪ್ಗೆ ಎಂದೂ ಪರಸ್ಪರ ಒಪ್ಪಿಗೆ ಸೂಚಿಸುತ್ತಾರೆ.

ಒಪ್ಪು ವಿಳ್ಯ ಆದ ಮೇಲೆ ಹೆಂಗಸರು ಹೆಣ್ಣಿಗೆ ಒಡವೆ ವಸ್ತ್ರ ಹಾಕಿ ಸಿಂಗರಿಸಿ ಹಸೆಮಣೆಯ ಮೇಲೆ ಕೂರಿಸುತ್ತಾರೆ. ಐದು ಜನ ಮುತ್ತೈದೆಯರು ಕಳಸ ಕನ್ನಡಿ ಪೂಜೆ ಮಾಡಿ ಅರಿಶಿಣ ಕುಂಕುಮ ಹಚ್ಚಿ ಹೂ ಮುಡಿಸಿ ಅಕ್ಷತೆ ಇಟ್ಟು ಹೆಣ್ಣಿನ ಮುಂದೆ ಬಂದು ಶಾಸ್ತ್ರ ಮಾಡುತ್ತಾರೆ. ಹೆಣ್ಣಿನ ಒಂದು ಪಕ್ಕದಲ್ಲಿ ಚೌಕ ಹಾಕಿ ಆ ಚೌಕಕ್ಕೆ ತಾವು ತಂದಿರುವ ಹಣ್ಣುಹಂಪಲು ಸಾಮಾಗ್ರಿಗಳನ್ನು ಒಂದೊಂದಾಗಿ ಹಾಕುತ್ತಾರೆ. ಆ ಸಮಯದಲ್ಲಿ ಗಂಡು ಹೆಣ್ಣಿಗೂ, ಹೆಣ್ಣು ಗಂಡಿಗೂ ಉಂಗುರವನ್ನು ಹಾಕಿಕೊಳ್ಳುತ್ತಾರೆ. ನಂತರ ಈ ಶುಭ ಸಮಾರಂಭದ ಊಟಕ್ಕೆ ಎಲ್ಲರನ್ನೂ ಕೂರಿಸಿ ವಿಶೇಷವಾಗಿ ಸಿಹಿ ಅಡುಗೆಯನ್ನು ಮಾಡಿ ಬಡಿಸಿ ಸತ್ಕರಿಸುತ್ತಾರೆ. ಅಲ್ಲಿಗೆ ವೀಳ್ಯ ಶಾಸ್ತ್ರದ ಕಾರ್ಯ ಮುಗಿದಂತಾಗುತ್ತದೆ. ನಂತರ ಗಂಡಿನ ಕಡೆಯವರು ತಮ್ಮ ತಮ್ಮ ಊರಿಗೆ ಹೊರಡುತ್ತಾರೆ. ಮೊದಲೇ ಮದುವೆಯಾಗುವ ಸ್ಥಳದ ಮಾತುಕತೆಯಾಗಿರುತ್ತದೆ. ಇಲ್ಲದಿದ್ದರೆ ಈ ಸಮಯದಲ್ಲಿ ಅದನ್ನು ಮಾತನಾಡಿ ನಿರ್ಧರಿಸುತ್ತಾರೆ. ಮದುವೆ ಹೆಣ್ಣಿನ ಮನೆಯಲ್ಲಿಯೋ ಅಥವಾ ಕಲ್ಯಾಣ ಮಂಟಪದಲ್ಲಿಯೋ, ದೇವಸ್ಥಾನದಲ್ಲಿಯೋ ಎಂದು ತೀರ್ಮಾನವಾಗುತ್ತದೆ.

ಹೀಗೆ ಎಲ್ಲಾ ಶಾಸ್ತ್ರಗಳನ್ನು ಮುಗಿಸಿದ್ದರೂ ಕೆಲವು ಸಂದರ್ಭಗಳಲ್ಲಿ ಹೇಳಿಕೆ ಮಾತುಗಳನ್ನು ಕೇಳಿ ಅಥವಾ ಹೊಂದಾಣಿಕೆ ಕಂಡು ಬರದೆ ಮದುವೆ ನಿಲ್ಲುವ ಸಾಧ್ಯತೆಗಳು ಉಂಟು. ಆದರೆ ಅದು ಅಪರೂಪ. ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡು ಎಂಬ ಗಾದೆಗೆ ಅನುಗುಣವಾಗಿ ನಮ್ಮ ಜನಪದರು ಬದ್ಧರಾಗಿ ಕಾರ್ಯ ನಿರ್ವಹಿಸುವುದರಿಂದ ಎರಡೂ ಕಡೆಗಳಲ್ಲಿಯೂ ಕೆಲವು ತಪ್ಪುಗಳು ಕಂಡು ಬರುತ್ತವೆ. ಆದರೂ ಕಾರ್ಯ ನಿರಾಂತಕವಾಗಿ ನೆರವೇರುತ್ತದೆ.

ಉ) ಲಗ್ನ ಕಟ್ಟಿಸುವುದು

ಪರಸ್ಪರ ಎರಡೂ ಕಡೆಯವರು ಗಂಡು ಮತ್ತು ಹೆಣ್ಣುಗಳನ್ನು ಒಪ್ಪಿ ವೀಳ್ಯ ಶಾಸ್ತ್ರ ಮಾಡಿಕೊಂಡ ಮೇಲೆ ಎರಡೂ ಕಡೆಯವರೂ ಸೇರಿ ಒಂದು ಗೊತ್ತಾದ ದಿನವನ್ನು ಲಗ್ನದ ಮುಹೂರ್ತಕ್ಕೆ ಗುರುತು ಹಾಕಿಸಲು ಪುರೋಹಿತರ ಬಳಿಗೆ ಹೋಗುತ್ತಾರೆ. ಅವರಿಗೆ ಹೂ ಕಾಯಿ ಹಣ್ಣು ಪೂಜಾ ಸಾಮಾನುಗಳ ಜೊತೆಗೆ ದಕ್ಷಿಣೆಯನ್ನು ಕೊಟ್ಟು ತಮ್ಮ ಹೆಣ್ಣು ಗಂಡುಗಳ ಮದುವೆಗೆ ಒಳ್ಳೆಯ

ಲಗ್ನವನ್ನು ಕಟ್ಟಿಕೊಡಲು ಕೇಳುತ್ತಾರೆ. ಜೋಯಿಸರು ಹೆಣ್ಣು ಗಂಡಿನ ಹೆಸರು ಸಾಲಾವಳಿ ನಕ್ಷತ್ರ ಕುಲಗೋತ್ರ ರಾಶಿ ಎಲ್ಲವನ್ನೂ ಗಮನಿಸಿ ಮದುವೆಯ ಕಾರ್ಯ ನೆರವೇರಿಸಲು ಅನುಕೂಲವಾಗುವಂತೆ ಎರಡು ಮೂರು ಲಗ್ನದ ಮುಹೂರ್ತವನ್ನು ತಾಳೆ ಹಾಕಿ ಹೇಳುತ್ತಾರೆ. ಹೆಣ್ಣು ಮತ್ತು ಗಂಡಿನ ಕಡೆಯವರು ತಮಗೆ ಅನುಕೂಲವಾದ ಲಗ್ನದ ದಿನವನ್ನು ಆಯ್ಕೆ ಮಾಡಿ ಗೊತ್ತುಪಡಿಸಿಕೊಂಡು ಜೋಯಿಸರಿಂದಲೇ ಲಗ್ನಪತ್ರಿಕೆಯನ್ನು ಬರೆಸಿಕೊಂಡು ಅಚ್ಚುಹಾಕಿಸಿ ಹಂಚಿ ಎಲ್ಲರನ್ನೂ ಮದುವೆಗೆ ಆಹ್ವಾನಿಸುತ್ತಾರೆ. ಲಗ್ನ ಕಟ್ಟಿಸಿದ ಮೇಲೆ ಹೆಣ್ಣು ಮತ್ತು ಗಂಡಿನ ಮನೆಯವರು ಮಾಂಸದ ಅಡುಗೆ ಮಾಡುವಂತಿಲ್ಲ.

ಊ) ಮದುವೆ ಸಿದ್ಧತೆಗಳು

ಲಗ್ನಪತ್ರಿಕೆ ಅಚ್ಚಾದ ಮೇಲೆ ಅವುಗಳನ್ನು ತಂದು ಮನೆಯಲ್ಲಿ ಪೂಜೆ ಮಾಡಿ, ಅರಿಶಿಣದ ಅಕ್ಕಿ ಕಾಳನ್ನು ಲಗ್ನಪತ್ರಿಕೆಯಲ್ಲಿ ಹಾಕಿ, ಅರಿಶಿಣ ಕುಂಕುಮ ಬಳಿದು ಎಲ್ಲರಿಗೂ ಹಂಚಲಾಗುತ್ತದೆ. ಲಗ್ನಪತ್ರಿಕೆ ಹಂಚುವಾಗ ಬಹಳ ಜಾಗ್ರತೆಯಿಂದ ಯಾರನ್ನೂ ಮರೆಯದೆ ಹಂಚಲಾಗುತ್ತದೆ. ಇದು ಎಲ್ಲರನ್ನೂ ಮದುವೆಗೆ ಆಹ್ವಾನಿಸುವ ಬಹಳ ಮುಖ್ಯವಾದ ಕಾರ್ಯವಾಗಿದೆ. ಏಕೆಂದರೆ ನಮ್ಮ ಜನಪದರು ಕರೆಯದೆ ಎಲ್ಲಿಗೂ ಹೋಗುವ ರೂಢಿಯನ್ನು ಬೆಳಸಿಕೊಂಡಿಲ್ಲ.

ಮದುವೆ ಹತ್ತಿರವಾದಂತೆ ಅದಕ್ಕೆ ಸಂಬಂಧಿಸಿದ ಪೂರ್ವ ಸಿದ್ಧತೆಗಳನ್ನು ಹೆಣ್ಣೋರು ಮತ್ತು ಗಂಡಿನೋರು ಇಬ್ಬರ ಮನೆಗಳಲ್ಲಿಯೂ ಬಹಳ ಜಾಗರೂಕತೆಯಿಂದ ನಡೆಯುತ್ತಿರುತ್ತವೆ. ಮದುವೆಗೆ ಅಗತ್ಯವಾದ ಚಿನ್ನದ ಆಭರಣ, ಒಡವೆಗಳನ್ನು ಮತ್ತು ಹೊಸಬಟ್ಟೆ, ಬರೆಗಳನ್ನು ಸಂಬಂಧಿಕರು ಮತ್ತು ಮನೆಯವರಿಗೆಲ್ಲಾ ತರಬೇಕಾಗುತ್ತದೆ. ಅದಕ್ಕಾಗಿ ಪಟ್ಟಣಕ್ಕೆ ಹೋಗಿ ಅಗತ್ಯವಸ್ತುಗಳನ್ನೆಲ್ಲಾ ಖರೀದಿಸಿ ಬರಬೇಕಾಗಿದ್ದು, ಇದರಿಂದಾಗಿ ಮದುವೆಗೆ ಮುಂಚೆ ಒಂದು ವಾರ ಮತ್ತು ಹದಿನೈದು ದಿನಗಳಿಂದ ಹಬ್ಬದ ವಾತಾವರಣ ಸೃಷ್ಟಿಯಾಗಿರುತ್ತದೆ.

ಮದುವೆ ಎಂದ ಮೇಲೆ ಸಾಮಾನ್ಯವೇ 'ಮದುವೆ ಮಾಡಿನೋಡು, ಮನೆ ಕಟ್ಟಿನೋಡು' ಎಂಬ ಗಾದೆ ಮಾತಿನಂತೆ ಮದುವೆ ಮಾಡುವುದು ಅಷ್ಟು ಸುಲಭದ ಕೆಲಸವಲ್ಲ. ಹಳ್ಳಿಗರ ಮದುವೆಗಳಿಗೆ ಊರೆಲ್ಲಾ ನೆಂಟರೇ, ಆದ್ದರಿಂದ ಹಣಕಾಸು, ಒಡವೆ ಎಲ್ಲವೂ ಸಿದ್ಧವಿರಬೇಕಾಗುತ್ತದೆ. ಹಳ್ಳಿಗಳಲ್ಲಿ ಜನಪದರು ಮದುವೆ ಮನೆಗೆ ಸುಣ್ಣ-ಬಣ್ಣಗಳನ್ನು ಹೊಡೆಸಿ ಮನೆ ರಿಪೇರಿ ಮಾಡಿಕೊಂಡು ಮದುವೆ ಮನೆ ಎಂದು ಗುರುತಿಸುವಂತೆ ಅಲಂಕಾರ ಮಾಡಿರುತ್ತಾರೆ.

ವಿವಾಹ ಪೂರ್ವ ಸಿದ್ಧತೆಗಾಗಿ ಸೌದೆ ತಂದು ಒಡೆಸುವುದು, ಭತ್ತಕುಟ್ಟಿಸಿ ಅಕ್ಕಿ ಮಾಡಿಸುವುದು, ರಾಗಿ ಬೀಸಿ ಹಿಟ್ಟು ಮಾಡಿಸಿ, ಕಾಳುಕಡ್ಡಿ ಸಂಬಾರ ಪದಾರ್ಥಗಳನ್ನು ಸಿದ್ಧಮಾಡುವುದು. ಹಪ್ಪಳ ಒತ್ತಿ, ಉಪ್ಪಿನಕಾಯಿ ಹಾಕುವುದು, ಹೀಗೆ ಕೆಲಸ ಕಾರ್ಯಗಳಿರುತ್ತವೆ. ಸೌದೆ ತರಲು ಮನೆಗೆ ಒಬ್ಬೊಬ್ಬರನ್ನು ಕರೆದು ಹತ್ತಿರದ ಕಾಡಿನಲ್ಲಿ ಶಾಸ್ತ್ರದ ಕೊನೆಯನ್ನು ಪೂಜಿಸಿ ಕಡಿದು, ಸೌದೆಯನ್ನು

ಗಾಡಿ ಅಥವಾ ಟ್ರಾಕ್ಟರಿನಲ್ಲಿ ತರುತ್ತಾರೆ. ಊರಿನವರಿಗೆ ಸೌದೆ ಒಡೆಯುವುದಕ್ಕೆ ಬನ್ನಿ ಎಂದು ಮನೆ ಮನೆಗೆ ಕರೆಯುತ್ತಾರೆ. ಹಾಗೆಯೇ ಹೆಂಗಸರಿಗೆ ಅಕ್ಕಿ ಮಾಡೋಕೆ ಬನ್ನಿ ಎಂದು ಕರೆದು ಆಯಾಯಾ ಕೆಲಸ ಕಾರ್ಯಗಳನ್ನು ಗ್ರಾಮೀಣರು ಅನ್ಯೋನ್ಯವಾಗಿ ಮಾಡಿ ಮುಗಿಸುತ್ತಾರೆ. ಒಂದು ವೇಳೆ ಈ ಕೆಲಸ ಕಾರ್ಯಗಳಿಗೆ ಊರಿನ ಜನರನ್ನು ಕರೆಯದೆ ಇದ್ದರೆ ಅವರು ಮದುವೆ ಕಾರ್ಯದಲ್ಲಿ ಭಾಗಿಯಾಗುವುದಿಲ್ಲ. ಆದುದ್ದರಿಂದ ಮದುವೆ ಮನೆಯ ಹಿರಿಯರು ಎಲ್ಲರಿಗೂ ಸರಿಯಾಗಿ ಹೇಳಿದ್ದೀರಾ, ಅವರಿಗೆಲ್ಲಾ ಹೇಳಿದ್ರಾ, ಇವರಿಗೆ ಹೇಳಿದ್ರಾ ಅಂತ ವಿಚಾರಿಸಿಕೊಂಡು ಮರೆತಿರುವವರನ್ನು ಮತ್ತೆ ಮತ್ತೆ ಹೋಗಿ ಕರೆಯುತ್ತಾರೆ. ವಾದ್ಯ ಮತ್ತು ಇತ್ಯಾದಿ ಕೆಲಸಗಳಿಗೆ ಹೇಳಿ ಕಳುಹಿಸಿ ಇಂತಹ ದಿನ ಮದುವೆಗೆ ತಾವು ಬಂದು ಕಾರ್ಯ ನಿರ್ವಹಿಸಿಕೊಡಬೇಕೆಂದು ಹೇಳಿರುತ್ತಾರೆ.

ಹೀಗೆ ಮದುವೆಗೆ ಅಗತ್ಯವಾದ ಎಲ್ಲಾ ಸಾಧನ ಸಲಕರಣೆ ಸಾಮಾನುಗಳನ್ನು ಗಂಡಿನ ಕಡೆಯವರು ಮತ್ತು ಹೆಣ್ಣಿನ ಕಡೆಯವರಿಬ್ಬರೂ ಸಂಗ್ರಹಿಸಿ ಸಿದ್ಧ ಮಾಡಿಕೊಳ್ಳುತ್ತಾರೆ. ಹೆಣ್ಣು ಗಂಡಿನ ಬಟ್ಟೆಬರೆಗಳು ಮತ್ತು ಮಕ್ಕಳಿಗೆ ಬಂಧುಗಳಿಗೆ ಬಟ್ಟೆಬರೆ, ಹೆಣ್ಣು ಗಂಡಿನ ಒಡವೆಗಳು, ಆಹಾರ ಸಾಮಗ್ರಿಗಳನ್ನು ಸಿದ್ಧಮಾಡಿಕೊಂಡು ಮದುವೆಯ ಕಾರ್ಯಗಳಿಗೆ ಬೇಕಾದಂತಹ ಗಡಿಗೆಗಳನ್ನು ಕುಂಬಾರನಿಂದ ತರಿಸಿ ಪೆಟ್ಟಿಗೆ ಅಥವಾ ಬುಜ್ಜಣಿಗೆಗಳನ್ನು ಮಾಡಿಸಿ ಇಟ್ಟುಕೊಂಡು, ಎಲ್ಲವನ್ನು ಸಿದ್ಧಮಾಡಿಕೊಳ್ಳುತ್ತಾರೆ.

ಮದುವೆಯ ದಿನ ಗೊತ್ತಾದ ಮೇಲೆ ಹೆಣ್ಣು ಮತ್ತು ಗಂಡಿಗೆ ಕೆಲವು ನಿರ್ಬಂಧಗಳಿರುತ್ತದೆ. ಹೆಣ್ಣು ಮತ್ತು ಗಂಡು ಎಲ್ಲೆಂದರಲ್ಲಿ ಹೋಗುವ ಹಾಗಿಲ್ಲ. ಬಹಳ ಎಚ್ಚರಿಕೆಯಿಂದ ಜೊತೆಯಲ್ಲಿ ಯಾರಾದರೂ ಸ್ನೇಹಿತರ ಜೊತೆ ಓಡಾಡಬೇಕು. ಕತ್ತಲಾಗುವುದರೊಳಗೆ ಮನೆಗೆ ಬಂದು ಸೇರಿಕೊಳ್ಳಬೇಕು. ಅಪಾಯಕಾರಿ ಜಾಗಗಳಲ್ಲಿ ಓಡಾಡಬಾರದು. ಹೀಗೆ ಹಲವಾರು ನಿಬಂಧನೆಗಳಿರುತ್ತವೆ.

೩) ಅಟ್ಟಕ್ಕಿ ನೀರುಯ್ಯುವ ಶಾಸ್ತ್ರ

ಮದುವೆ ಇನ್ನೂ ಮೂರು ದಿನ ಅಥವಾ ಐದು ದಿನ ಇದೆ ಎನ್ನುವಾಗ ಹೆಣ್ಣು ಮತ್ತು ಗಂಡುಗಳಿಗೆ ಅವರವರ ಮನೆಯಲ್ಲಿ ನೀರುಯ್ಯುವ ಶಾಸ್ತ್ರವನ್ನು ಇಟ್ಟುಕೊಳ್ಳುತ್ತಾರೆ. ಗಂಡಿಗೆ ಅವರ ಊರಿನಲ್ಲಿ ಸಂಬಂಧಿಕರು ಜಾಸ್ತಿ ಇದ್ದರೆ ಹೆಚ್ಚು ದಿನ ಈ ಶಾಸ್ತ್ರ ಇರುತ್ತದೆ. ಗಂಡನ್ನು ಹಸೆ ಮಣೆಯ ಮೇಲೆ ಕೂರಿಸಿ, ಮೈಗೆ ಅರಿಶಿಣ ಹಚ್ಚಿ ತಲೆಗೆ ಹರಳೆಣ್ಣೆ ಸೀಗೆಕಾಯಿ ಹಾಕಿ, ಐದು ಜನ ಮುತ್ತೈದೆಯರು ಒಬ್ಬೊಬ್ಬರಾಗಿ ಬಂದು ಅಕ್ಷತೆ ಹಾಕಿ, ಗಂಡಿನ ಮೇಲೆ ನೀರನ್ನು ಹುಯ್ಯುತ್ತಾರೆ. ಈ ಸಂದರ್ಭದಲ್ಲಿ ಸೋಬಾನೆ ಪದವನ್ನು ಹಾಡುತ್ತಿರುತ್ತಾರೆ. ಹೀಗೆ ಶಾಸ್ತ್ರ ಮಾಡಿಸಿ ಸ್ನಾನ ಮುಗಿದ ಮೇಲೆ ಎಲೆ ಅಡಿಕೆ, ಹಣ್ಣು ಹಂಪಲುಗಳನ್ನು ಅಲ್ಲಿ ನೆರೆದಿದ್ದ ಮುತ್ತೈದೆಯರು ಮತ್ತು ಇತರರಿಗೆಲ್ಲಾ ಹಂಚುತ್ತಾರೆ. ಚಿಕ್ಕಪ್ಪ, ದೊಡ್ಡಪ್ಪ ಮುಂತಾಗಿ ಅಣ್ಣ ತಮ್ಮಂದಿರ ಮನೆಯವರ ತುಪ್ಪಾ, ಒಬ್ಬಟ್ಟು, ಸಿಹಿ

ಪಾಯಸ ಮುಂತಾದ ಅಡುಗೆಗಳನ್ನು ಮಾಡಿ ಗಂಡಿಗೆ ಊಟಕ್ಕೆ ಹಾಕುತ್ತಾರೆ. ಹೀಗೆ ಐದು ದಿನಗಳ ಕಾಲ ಪ್ರತಿದಿನ ಒಬ್ಬೊಬ್ಬರು ಅಟ್ಟಿಕ್ಕಿ ನೀರುಯ್ಯುವ ಶಾಸ್ತ್ರವನ್ನು ಇಟ್ಟುಕೊಂಡಿರುತ್ತಾರೆ.

ಹಾಗೆಯೇ ಹೆಣ್ಣಿನ ಮನೆಯಲ್ಲಿಯೂ ಸಹ ಹೆಣ್ಣಿಗೆ ನೀರಾಕುವ ಶಾಸ್ತ್ರವನ್ನು ಇಟ್ಟುಕೊಂಡಿರುತ್ತಾರೆ. ಅವರ ಅಣ್ಣ ತಮ್ಮ ವಠಾರದ ಮನೆಯವರೆಲ್ಲಾ ಅರಿಶಿಣ ಹಾಕಿ ಅಕ್ಷತೆ ಇಟ್ಟು, ಸ್ನಾನ ಮಾಡಿಸಿ ಶಾಸ್ತ್ರದ ಪ್ರಕಾರ ಮುತ್ತೈದೆಯರು ನೀರುಯ್ಯುತ್ತಾರೆ. ಮತ್ತು ಸಿಹಿ ಅಡುಗೆ ಮಾಡಿ ಬಡಿಸುತ್ತಾರೆ. ಹೀಗೆ ಅಟ್ಟಿಕ್ಕಿ ನೀರುಯ್ಯುವ ಶಾಸ್ತ್ರ ಹೆಣ್ಣು ಮತ್ತು ಗಂಡು ಇಬ್ಬರಿಗೂ ನಡೆಯುತ್ತದೆ. ಹೀಗೆ ಸಂಬಂಧಿಕರು ಮದುವೆ ಸಂದರ್ಭದಲ್ಲಿ ಅಟ್ಟಿಕ್ಕಿ ನೀರುಯ್ಯುವ ಆಚರಣೆಯನ್ನು ಬೆಳೆಸಿಕೊಂಡಿದ್ದಾರೆ.

ಋ) ದೇವತಾಕಾರ್ಯ ಅಥವಾ ಚಪ್ಪರ

ಮದುವೆ ಕಾರ್ಯದಲ್ಲಿ ದೇವತಾಕಾರ್ಯ ಬಹಳ ಪ್ರಮುಖವಾದ ಶಾಸ್ತ್ರವಾಗಿದೆ. ಇದು ಮದುವೆಯ ಹಿಂದಿನ ದಿನವಾಗಿದ್ದು, ಈ ದಿನದಲ್ಲಿ ಚಪ್ಪರ ಹಾಕುವುದು. ಹಾಲುಗಂಬ ನೆಡುವುದು ದೇವರ ನೀರನ್ನು ತರುವುದು ಮುಂತಾದ ಪ್ರಮುಖ ಶಾಸ್ತ್ರಗಳು ನಡೆಯುತ್ತವೆ. ಬೆಳಿಗ್ಗೆಯಿಂದಲೇ ಮದುವೆ ಮನೆಯ ಮುಂದೆ ಚಪ್ಪರ ಹಾಕುವ ಕಾರ್ಯಕ್ರಮವಿರುತ್ತದೆ. ಬೆಳಿಗ್ಗೆಯಿಂದ ರಾತ್ರಿಯವರೆಗೆ ಅಂದು ಹಲವಾರು ಕೆಲಸ ಕಾರ್ಯಗಳು ಶಾಸ್ತ್ರಗಳು ಇರುವುದರಿಂದ ಎಲ್ಲರೂ ಬಹಳ ಸಂಭ್ರಮ ಮತ್ತು ಸಡಗರದಿಂದ ಭಾಗಿಯಾಗುತ್ತಾರೆ. ಯಜಮಾನನ ಆಣತಿಯಂತೆ ಕಾರ್ಯನಿರ್ವಹಿಸುತ್ತಾರೆ. ಚಪ್ಪರ ಹಾಕಲು ಮನೆಮನೆಗೂ ಬರಬೇಕೆಂದು ಹೇಳಿ ಬಂದು ಕೆಲಸಗಳನ್ನು ಶುರು ಮಾಡಿಕೊಳ್ಳುತ್ತಾರೆ. ಬಿದಿರು, ಅಡಕೆಮರ, ತೆಂಗಿನಗರಿ, ಮಾವಿನಸೊಪ್ಪು ಮುಂತಾದವುಗಳನ್ನು ಚಪ್ಪರ ಹಾಕಲು ಬಳಸಿಕೊಳ್ಳುತ್ತಾರೆ. ಚಪ್ಪರದ ಮೂಲೆಗಳಿಗೆ ಎಳನೀರಿನಕಾಯಿ ಬಾಳೆಗೊನೆಗಳನ್ನು ಕಟ್ಟಿ ನೇತುಹಾಕಿ ಚಪ್ಪರವನ್ನು ಸಿಂಗರಿಸುತ್ತಾರೆ.

ಈಶಾನ್ಯ ದಿಕ್ಕಿಗೆ ಮೊದಲು ಗುಂಡಿತೋಡಿ ಒಂದು ಕಂಬಕ್ಕೆ ಅರಿಶಿಣದ ದಾರವನ್ನು ಕಟ್ಟಿ ಪೂಜೆ ಮಾಡಿ ನಿಲ್ಲಿಸುತ್ತಾರೆ. ನಂತರ ಎಲ್ಲಾ ಕಡೆಯ ಕಂಬಗಳಿಗೆ ಗುಂಡಿ ಬಗೆದು ನೆಡುತ್ತಾರೆ. ಸಾಮಾನ್ಯವಾಗಿ ಮದುವೆ ನಡೆಯುವ ಮನೆಯ ಮುಂದೆ ವಿಶಾಲವಾದ ಚಪ್ಪರ ಹಾಕಿ ಅಲ್ಲಿಯೇ ಸಿಗುವ ವಸ್ತುಗಳನ್ನು ಬಳಸಿಕೊಂಡು ಚಪ್ಪರವನ್ನು ಅಲಂಕಾರ ಮಾಡಲಾಗುತ್ತದೆ. ಮದುವೆ ಹೆಣ್ಣಿನ ಮನೆಯ ಮುಂದೆ ಮದುವೆ ನಡೆಯುತ್ತಿದ್ದರೆ ಗಂಡಿನ ಮನೆಯ ಮುಂದೆಯೂ ಸಾಧಾರಣವಾದ ಚಪ್ಪರವನ್ನು ಹಾಕಲಾಗುತ್ತದೆ. ಚಪ್ಪರದ ಮದ್ಯದಲ್ಲಿ ಹಸೆಕಂಬ, ಕಂಕಣಕಂಬ ಅಥವ ಹಾಲುಗಂಬವನ್ನು ನೆಡುತ್ತಾರೆ. ಮೂರು ಅಥವಾ ಐದು ಕವಲಿರುವ ಹಾಲುಗಳ್ಳಿಯ ಕೊನೆ ಮತ್ತು ಬಿದಿರು ಕಂಬಕ್ಕೆ ಶಾಸ್ತ್ರಬದ್ಧವಾಗಿ ಪೂಜೆ ಮಾಡಿ, ಶಾಸ್ತ್ರಬದ್ಧವಾಗಿ ಹಾಲುತುಪ್ಪ ಹಾಕಿ ಪೂಜೆ ಮಾಡಿ ಗಂಡು ಹೆಣ್ಣು ಹಸೆ ಮಂಟಪದ ಹತ್ತಿರದ ಇದನ್ನು ನೆಡುತ್ತಾರೆ. ಇದೇ ಸಂದರ್ಭದಲ್ಲಿ ಶಾಸ್ತ್ರದ ಬತ್ತವನ್ನು ಕುಟ್ಟುತ್ತಾರೆ. ವಾದ್ಯ ನಡೆಯುತ್ತಿರುವಾಗಲೇ ಮನೆಯ ಒಳಕಲ್ಲಿನಲ್ಲಿ ಒಂದಷ್ಟು

ಬೇಯಿಸಿದ ಭತ್ತ ಹಾಕಿ ಮೂರು ಅಥವಾ ಐದು ಜನ ಮುತ್ತೈದೆಯರು ತಪ್ಪೇಟು ಹಾಕದಂತೆ ಕುಟ್ಟುತ್ತಾರೆ. ಭತ್ತ ಕುಟ್ಟುವ ಮೂರು ಅಥವಾ ಐದು ಒನಕೆಗಳನ್ನು ತೊಳೆದು ಅವುಗಳ ಮೇಲಿನ ತುದಿಗೆ ಅರಿಶಿಣ ಹಚ್ಚಿ ಪೂಜೆ ಮಾಡಿ ಮುತ್ತೈದೆಯರ ಕೈಗೆ ಈ ಅಕ್ಕಿಯನ್ನೇ ಅಕ್ಷತೆ ಕಾಳಿಗೆ ಶಾಸ್ತ್ರಕ್ಕಾಗಿ ಉಪಯೋಗಿಸುತ್ತಾರೆ. ಈ ಭತ್ತಕ್ಕೆ ಅರಿಶಿಣದ ಮಿಶ್ರಣ ಮಾಡಿ ಎಲ್ಲಾ ಶಾಸ್ತ್ರಗಳಿಗೂ ಉಪಯೋಗಿಸುತ್ತಾರೆ.

ಇತ್ತೀಚಿಗೆ ಕಾಲ ಬದಲಾದಂತೆ ಆಚರಣೆ ಮತ್ತು ಸಂಪ್ರದಾಯಗಳೂ ಬದಲಾವಣೆಯಾಗುತ್ತಿವೆ. ಚಪ್ಪರದ ಬದಲು ಶಾಮಿಯಾನಗಳನ್ನು ಹಾಕುವ ಆಚರಣೆ ಕಂಡು ಬರುತ್ತಿದೆ. ಚಪ್ಪರದ ಅಲಂಕಾರಕ್ಕೆ ಬಣ್ಣಬಣ್ಣದ ಲೈಟುಗಳು ಮತ್ತು ಯಾಂತ್ರಿಕ ಅಲಂಕಾರಿಕ ವಸ್ತುಗಳಿಂದ ಸುಂದರಗೊಳಿಸಲಾಗುತ್ತದೆ.

ಎ) ಶಾಸ್ತ್ರದ ನೀರು ತರುವುದು

ಚಪ್ಪರದ ದಿನ ಸಂಜೆ ಈ ಶಾಸ್ತ್ರ ನಡೆಯುತ್ತದೆ. 'ಇದರಲ್ಲಿ ಸಂಪೂರ್ಣವಾಗಿ ಹೆಂಗಸರೇ ಭಾಗವಹಿಸಿರುತ್ತಾರೆ. ಐದು ಜನ ಮುತ್ತೈದೆಯರು ಹಸೆ ಗಡಿಗೆಗಳನ್ನು ತೆಗೆದುಕೊಂಡು ವಾದ್ಯ ಸಮೇತರಾಗಿ ಶಾಸ್ತ್ರದ ನೀರು ತರಲು ಗಂಗೆ ತಡಿಗೆ ಹೋಗುತ್ತಾರೆ'. ಹೋಗುವಾಗ ಕಳಸ ಕನ್ನಡಿ ಹಾಗೂ ಪೂಜಾ ಸಾಮಾಗ್ರಿಗಳ ಸಮೇತ ಕೆರೆ ಬಾವಿ ನದಿ ಅಥವಾ ಸಮೀಪವಿರುವ ನೀರಿನ ಜಾಗಕ್ಕೆ ಬರುತ್ತಾರೆ. ವಾದ್ಯದವರು ವಾದ್ಯ ಬಾರಿಸುತ್ತಾ ಮುಂದೆ ನಡೆದರೆ ದೇವರ ಸಾಮಾನು ಕಳಸ ಮತ್ತು ಗಡಿಗೆ ಹೊತ್ತ ಮುತ್ತೈದೆ ಹೆಂಗಸರು ಮತ್ತು ಇತರರು ಹಿಂದೆ ಹೋಗುತ್ತಾರೆ. ಹಸೆ ಗಡಿಗೆಗಳಿಗೆ ನೀರನ್ನು ತುಂಬಿ ಅವುಗಳ ಕೊರಳಿಗೆ ಅರಿಶಿಣದ ದಾರ ಕಟ್ಟಿ, ಕಳಸ ಕನ್ನಡಿ ಮತ್ತು ಪೂಜಾ ಸಾಮಾನುಗಳನ್ನು ಮಡಿ ಬಟ್ಟೆಯ ಮೇಲಿಟ್ಟು ಪೂಜೆ ಮಾಡುತ್ತಾರೆ.

ನಂತರ ಈ ಗಡಿಗೆಗಳನ್ನು ಹೊತ್ತು ವಾದ್ಯಸಮೇತ ಮೆರವಣಿಗೆಯಲ್ಲಿ ಚಪ್ಪರದ ಹಟ್ಟಿಗೆ ಬರುತ್ತಾರೆ. ಮುತ್ತೈದೆಯರು ಪೂಜೆ ಮಾಡಿ ಗಡಿಗೆಗಳಲ್ಲಿ ಶಾಸ್ತ್ರದ ನೀರನ್ನು ತರುತ್ತಾರೆ. ಈ ಶಾಸ್ತ್ರದ ನೀರನ್ನು ಅಡಿಗೆ ಮಾಡಲು ಸಿದ್ಧಪಡಿಸಿರುವ ಹಂಡೆ ಮತ್ತು ಕೊಪ್ಪರಿಕೆಗಳಿಗೆ ಸ್ವಲ್ಪಸ್ವಲ್ಪ ಹಾಕುತ್ತಾರೆ. ನಂತರ ಅಡುಗೆ ಮಾಡಲು ಪ್ರಾರಂಭಿಸುತ್ತಾರೆ. ಹಾಗೆಯೇ ಇನ್ನುಳಿದ ಕೆಲಸ ಕಾರ್ಯಗಳೂ ಸಹ ಶಾಸ್ತ್ರದ ನೀರು ತಂದ ಮೇಲೆಯೇ ಪ್ರಾರಂಭವಾಗುತ್ತದೆ.

ಏ) ಬಳೆತೊಡಿಸುವ ಶಾಸ್ತ್ರ

ಹೆಣ್ಣಿಗೆ ತನ್ನ ತೌರಿನಲ್ಲಿ ಕಂಕಣದ ಬಳೆಯನ್ನು ಮದುವೆ ಚಪ್ಪರದ ದಿನ ತೊಡಿಸುತ್ತಾರೆ. ತಾಳಿ ಹೂ ಬಳೆ ಕುಂಕುಮ ಕಾಲುಂಗುರಗಳು ಹೆಣ್ಣಿಗೆ ಮುತ್ತೈದೆತನವನ್ನು ತಂದು ಕೊಡುತ್ತವೆ. ಈ ಹಿನ್ನೆಲೆಯಲ್ಲಿ ಬಳೆತೊಡಿಸುವ ಶಾಸ್ತ್ರ ಬಹಳ ಪವಿತ್ರವಾದದ್ದು, ಮದುವೆ ಮನೆಗೆ ಬಂದ ಬಳೆಶೆಟ್ಟಿಯನ್ನು ಸ್ವಾಗತಿಸಿ ಪಡಶಾಲೆಯಲ್ಲಿ ಅಥವಾ ನಡುಮನೆಯಲ್ಲಿ ಚಾಪೆ ಹಾಸಿ ಬಳೆ ಮಾಲಾರದವನ್ನು ಇಟ್ಟು ಕುಳಿತುಕೊಳ್ಳುತ್ತಾನೆ. ಬಳೆಯನ್ನು ಮದುವೆಯ ಹೆಣ್ಣು ಪೂಜಿಸಿ

ಮರ್ಯಾದೆ ಮಾಡುತ್ತಾಳೆ. ಆಗ ಬಳೆಗಾರ ಮದವಣಗಿತ್ತಿಗೆ ಕಂಕಣದ ಕಪ್ಪು ಬಳೆಗಳನ್ನು ತೊಡಿಸುತ್ತಾನೆ. ಅವುಗಳ ಸಂಖ್ಯೆ ಇಷ್ಟೇ ಇರಬೇಕೆಂದು ನಿಯಮವಿಲ್ಲ. ಮದುವಣಗಿತ್ತಿಗೆ ಬಳೆ ತೊಡಿಸಿದ ಮೇಲೆ ಅಲ್ಲಿ ನೆರೆದ ಬಳಗದ ಹೆಂಗಸರು ಮತ್ತು ಸ್ನೇಹಿತೆಯರು ಪರಸ್ಪರ ನೀವು ತೊಟ್ಟುಕೊಳ್ಳಿ ಎಂದು ಹೇಳುತ್ತಾ ಪೀಡಿಸುತ್ತಾ ಬಳೆ ತೊಡಿಸಿಕೊಳ್ಳುತ್ತಾರೆ. ಇದು ಒಂದು ರೀತಿಯ ಸಂತೋಷ ಸೂಚಕ, ಶುಭ ವಾತಾವರಣವನ್ನು ಉಂಟುಮಾಡುತ್ತದೆ. ಬಳೆಗಾರ ಶೆಟ್ಟಿಗೆ ಹಣ್ಣುಕಾಯಿ, ಪೂಜಾ ಸಾಮಾಗ್ರಿಗಳು, ಉಡುಗೊರೆ ಮತ್ತು ದಕ್ಷಿಣೆಯನ್ನು ಕೊಟ್ಟು ಮರ್ಯಾದೆ ಮಾಡಿ ಕಳುಹಿಸುತ್ತಾರೆ.

ಐ) ಕಂಕಣ ಮತ್ತು ಬಾಸಿಂಗ ಕಟ್ಟುವುದು

ಕಂಕಣ ಮತ್ತು ಬಾಸಿಂಗ ಮದುವೆಯ ಶಾಸ್ತ್ರದಲ್ಲಿ ಮುಖ್ಯವಾದದ್ದು. ತುಂಬುದೋಳಿನ ಷರ್ಟು, ಕಚ್ಚೆ ಪಂಚೆ, ಶಲ್ಯದ ಜೊತೆಗೆ ಕಂಕಣ ಮತ್ತು ಬಾಸಿಂಗ ಕಟ್ಟಿದಾಗಲೇ ಸಂಪೂರ್ಣ ಮದುವೆಯ ಗಂಡಾಗುವುದು. ಗಂಡಿಗೆ ಕಂಕಣವನ್ನು ಅವರ ಸೋದರಮಾವ ಕಟ್ಟಿದ ನಂತರ ಪವಿತ್ರನಾಗುತ್ತಾನೆ. ಮುಂದೆ ಮದುವೆ ಕಾರ್ಯದ ಏನೇ ಕೆಲಸ ಮಾಡಬೇಕಾದರೂ ಕಂಕಣದ ಕೈಯಿಂದಲೇ ಆಗಬೇಕು.

ಕಂಕಣ ಕಟ್ಟಿದ ಗಂಡನ್ನು ಹಸೆಮಣೆಯ ಮೇಲೆ ಕೂರಿಸಿ ಅವನ ಮುಂದೆ ಕಳಸ ಕನ್ನಡಿ ಬೆಲ್ಲದ ತಟ್ಟೆ, ವಿಳ್ಯ, ಕೊಬ್ಬರಿ ಮತ್ತು ಅಕ್ಷತೆ ತಟ್ಟೆಗಳನ್ನು ಇಟ್ಟು ಗಂಡಿನಿಂದ ಪೂಜೆ ಮಾಡಿಸಿರುತ್ತಾರೆ. ಬೆಲ್ಲದ ಅಚ್ಚಿಗೆ ಅಕ್ಕಿಯನ್ನು ತುಂಬಿ ಅದರ ಮೇಲೆ ವೀಳ್ಯದೆಲೆ ಹರಿದು ಇಟ್ಟು ಸ್ವಲ್ಪ ಬಾಳೆಹಣ್ಣು ಮತ್ತು ಎಣ್ಣೆಯನ್ನು ಗಂಡಿನ ಕೈಗೆ ಸವರಿ ಬಲಭಾಗದಲ್ಲಿರುವ ಬೆಲ್ಲದ ಅಚ್ಚಿನ ಮೇಲೆ ಎಡಗೈಯನ್ನು ಎಡಭಾಗದಲ್ಲಿರುವ ಬೆಲ್ಲದ ಅಚ್ಚಿನ ಮೇಲೆ ಎಡಗೈಯನ್ನು ಅಡ್ಡವಾಗಿ ಇಡಿಸಿ ಬಲಗೈಯಿಗೆ ಐದು ಕವಲು ಕೊಂಬಿನ ಅರಿಶಿಣ ಮತ್ತು ಕಂಕಣದ ದಾರ ಕಟ್ಟಿ ಅವುಗಳ ಮೇಲೆ ಅರಿಶಿಣದ ಬಟ್ಟೆಯನ್ನು ಕಟ್ಟುತ್ತಾರೆ. ಇದು ಪರಿಶುದ್ಧತೆಯ ಸಂಕೇತವಾಗಿದ್ದು, ಕೆಲವು ವರ್ಗದವರಲ್ಲಿ ಹೆಣ್ಣು ಮತ್ತು ಗಂಡಿನ ಸೋದರಮಾವ ಕೈಗೆ ಕಂಕಣ ಕಟ್ಟುತ್ತಾನೆ. ಇದೇ ರೀತಿ ಹೆಣ್ಣಿಗೂ ಸಹ ಕಂಕಣ ಮತ್ತು ಬಾಸಿಂಗವನ್ನು ಹೆಣ್ಣಿನ ಸೋದರಮಾವ ಶಾಸ್ತ್ರ ಸಮೇತವಾಗಿ ಕಟ್ಟುತ್ತಾನೆ. ಹೆಣ್ಣು ಮತ್ತು ಗಂಡು ಬಟ್ಟೆಬರೆ ಒಡವೆಗಳನ್ನು ಧರಿಸಿ ಅಲಂಕಾರಗೊಂಡು ಕಂಕಣ ಮತ್ತು ಬಾಸಿಂಗ ಕಟ್ಟಿದ ನಂತರ ನಿಜವಾಗಿ ಮದುವೆಯ ವಧೂವರರಾಗುತ್ತಾರೆ. ನನ್ನ ಸಂಶೋಧನಾ ವ್ಯಾಪ್ತಿಯ ಎಲ್ಲಾ ವರ್ಗದವರಲ್ಲಿಯೂ ಸಹ ಕಂಕಣ ಮತ್ತು ಬಾಸಿಂಗ ಕಟ್ಟುವ ಸಂಪ್ರದಾಯವನ್ನು ನೋಡಬಹುದು.

ಒ) ಎಳವಾರ ತರುವುದು

ಗಂಡನ್ನು ದೇವಸ್ಥಾನದ ದಿಬ್ಬಣದಿಂದ ಮದುವೆ ಮನೆಗೆ ಕರೆತರುವಾಗ ವಾದ್ಯಸಮೇತವಾಗಿ ನೇರಳೆ ಸೊಪ್ಪಿನ ಗೊನೆಗೆ ಪೂಜೆ ಮಾಡಿಸಿ ಅರಿಶಿಣ ಕುಂಕುಮ ಇಟ್ಟು ಮೆರವಣಿಗೆಯಲ್ಲಿ ಕರೆತರುತ್ತಾರೆ. ನೇರಳೆ ಗೊನೆಯನ್ನು ಹೆಣ್ಣಿನ ಅಥವಾ ಗಂಡಿನ ಸೋದರಮಾವ ಆಗಬೇಕಾದಂತಹ

ವ್ಯಕ್ತಿಯ ಕೈಯಲ್ಲಿ ಇರಿಸಿ ಅವನ ಬಾಯಿಗೆ ಬಾಳೆಹಣ್ಣನ್ನು ಸುಲಿದು ಕಚ್ಚಿಸಿ ಅವನ ಹಣೆಗೆ ಅರಿಶಿಣ ಕುಂಕುಮ ಇಟ್ಟು, ಗಂಡಿನ ಜೊತೆ ಮೆರವಣಿಗೆಯಲ್ಲಿ ಕರೆತರುತ್ತಾರೆ. ಗಂಡನ್ನು ಹಸೆಮಣೆಯ ಮೇಲೆ ಕೂರಿಸಿ ಆತನ ಮುಂದೆ ಮೂರು ಕಂಚಿನ ಚೊಂಬನ್ನು ಇಟ್ಟು ಎಳವಾರ ಹಿಡಿದವನನ್ನು ಗಂಡಿನ ಹಿಂದೆ ನಿಲ್ಲಿಸಿ ಚೊಂಬಿಗೂ ಎಳವಾರಕ್ಕೂ ಅರಿಶಿಣದ ದಾರವನ್ನು ಸೂತ್ರ ಬಿಡುತ್ತಾರೆ. ಕೆಲವು ಜಾತಿಗಳಲ್ಲಿ ಪುರೋಹಿತರು ಮತ್ತು ಕೆಲವು ಜಾತಿಗಳಲ್ಲಿ ಯಜಮಾನರು ಈ ಕಾರ್ಯವನ್ನು ಮಾಡಿಸುತ್ತಾರೆ. ಇದೇ ರೀತಿ ಎಳವಾರದ ಕಾರ್ಯಕ್ರಮ ಹೆಣ್ಣಿಗೆ ನಡೆಯುತ್ತವೆ. ಶಾಸ್ತ್ರ ಮುಗಿದ ಮೇಲೆ ಹೆಣ್ಣು ಗಂಡುಗಳಿಬ್ಬರೂ ಸೇರಿ ಎಳವಾರವನ್ನು ಹಾಲುಗಂಬಕ್ಕೆ ಕಟ್ಟುತ್ತಾರೆ.

ಓ) ಕ್ಷೌರಶಾಸ್ತ್ರ

ಚಪ್ಪರದ ದಿನ ಕ್ಷೌರಿಕ ಗಂಡಿನ ಮನೆಗೆ ಬಂದು ಅವನ ಕೆಲಸಕಾರ್ಯಗಳನ್ನು ಪ್ರಾರಂಭಿಸುತ್ತಾರೆ. ಮದುಮಗನಿಗೆ ಶೇವಿಂಗ್, ಕಟಿಂಗ್ ಮಾಡಿ ಶುಚಿಮಾಡುವುದು ಇವನ ಕೆಲಸ. ಹಜಾಮ ತನ್ನ ಹಡಪದೊಂದಿಗೆ ಬಂದು ಮದುಮಗನನ್ನು ಹಸೆಮಣೆಯ ಮೇಲೆ ಕೂರಿಸಿ ಪೂಜಾ ಸಾಮಾನುಗಳನ್ನು ತಂದು ಶಾಸ್ತ್ರಬದ್ಧವಾಗಿ ಪೂಜೆ ಮಾಡಲಾಗುತ್ತದೆ. ಪೂಜೆ ಮಾಡಿದ ಸಾಮಾನುಗಳನ್ನು ಗಂಡಿನ ಹೆಗಲ ಮೇಲಿರುವ ಹೊಸ ಚೌಕವನ್ನು ಹಾಸಿ ಅದಕ್ಕೆ ಪೂಜಾ ಸಾಮಾನುಗಳನ್ನು ಕಟ್ಟಿ ಇಟ್ಟುಕೊಳ್ಳುತ್ತಾನೆ. ಆ ಚೌಕ ಹಜಾಮನಲ್ಲಿಯೇ ಉಳಿಯುತ್ತದೆ. ಗಂಡಿನ ಮುಖಕ್ಕೆ ಹಾಲನ್ನು ಸವರಿ ಕ್ಷೌರ ಮಾಡಿ ತನ್ನ ಕೆಲಸವನ್ನು ಮುಗಿಸುತ್ತಾನೆ. ನಂತರ ಗಂಡಿಗೆ ನೀರುಯ್ದು ಐದು ಜನ ಮುತ್ತೈದೆಯರು ಎಣ್ಣೆ ಶಾಸ್ತ್ರ ಮಾಡಿ ನೀರುಯ್ಯುತ್ತಾರೆ. ಹೆಣ್ಣಿನ ಮನೆಯಲ್ಲೂ ಎಣ್ಣೆ ಶಾಸ್ತ್ರವನ್ನು ಹೆಣ್ಣಿಗೂ ಸಹ ಮಾಡಿಸಲಾಗುತ್ತದೆ.

ಔ) ದಿಬ್ಬಣ ಹೊರಡುವುದು

ಹೆಣ್ಣೋರ ಮನೆಯಲ್ಲಿ ಮದುವೆ ನಡೆಯುತ್ತಿದ್ದರೆ ಗಂಡೋರು ದಿಬ್ಬಣ ಹೊರಡುತ್ತಾರೆ. ಗಂಡಿನ ಮನೆಯ ಹತ್ತಿರ ಮದುವೆ ನಡೆಯುತ್ತಿದ್ದರೆ ಹೆಣ್ಣೋರು ದಿಬ್ಬಣ ಹೊರಡುತ್ತಾರೆ. ಹೀಗೆ ಹೊರಡುವಾಗ ಊರಿನಲ್ಲಿ ಗಂಡು ಅಥವಾ ಹೆಣ್ಣು ಚಪ್ಪರದ ಮನೆಗೆ ದಿಬ್ಬಣ ಹೊರಟೈತೆ ಎಲ್ಲರೂ ಬನ್ನಿ ಎಂದು ಮನೆಮನೆಗೆ ಹೋಗಿ ಕರೆಯುತ್ತಾರೆ. ಮದುವೆ ನಡೆಯುತ್ತಿರುವ ಸ್ಥಳದ ದೂರವನ್ನು ಗಮನಿಸಿ ಅಲ್ಲಿಗೆ ಎಷ್ಟು ಹೊತ್ತಿಗೆ ತಲುಪಬಹುದೆಂದು ತಾಳೆ ಹಾಕಿ ಒಂದು ಗೊತ್ತಾದ ಸಮಯಕ್ಕೆ ಹೊರಡುತ್ತಾರೆ. ಹಿಂದಿನ ಕಾಲದಲ್ಲಿ ಎತ್ತಿನ ಗಾಡಿಯಲ್ಲಿ ದಿಬ್ಬಣ ಹೊರಡುತ್ತಿದ್ದರು. ಈಗ ಸಾರಿಗೆ ವ್ಯವಸ್ಥೆ ಚೆನ್ನಾಗಿರುವುದರಿಂದ ವಾಹನಗಳಲ್ಲಿ ಹೊರಡುತ್ತಾರೆ. ದಿಬ್ಬಣ ಹೊರಡುವಾಗ ಹಿಂದಿನ ಕಾಲದಲ್ಲಿ ಇದ್ದಂತಹ ವಿಜೃಂಭಣೆ ಉತ್ಸಾಹ ಸಡಗರಗಳು ಇಂದಿನ ಆಧುನಿಕ ದೆಸೆಯಿಂದ ಕಣ್ಮರೆಯಾಗಿವೆ. ದಿಬ್ಬಣ ಹೊರಡುವಾಗ ಬಿಜ್ಜಣಿಗೆ ಪೆಟ್ಟಿಗೆಯಲ್ಲಿ, ಬಾಳೆಹಣ್ಣು, ಎಲೆಅಡಿಕೆ, ಬಟ್ಟೆಗಳು, ಒಡವೆಗಳು ಮುಂತಾದ ಶಾಸ್ತ್ರದ ಸಾಮಾನುಗಳನ್ನು ತೆಗೆದುಕೊಂಡು ಹೊರಡುತ್ತಾರೆ. ಗಂಡಿನ ಅಕ್ಕ ಮತ್ತು ತಂಗಿಯರು ಈ ಸಾಮಾನುಗಳನ್ನು ಎತ್ತಿಕೊಂಡು ಬರಬೇಕೆಂಬ ಪದ್ಧತಿ ಇದೆ.

ದಿಬ್ಬಣದಲ್ಲಿ ಗಂಡು ಅಲಂಕಾರಗೊಂಡು ಬರುತ್ತಾನೆ. ಅವನ ಜೊತೆಯಲ್ಲಿ ಗೆಳೆಯರು ಮತ್ತು ಸಂಬಂಧಿಕರು ಧಾರೆ ಮುಗಿಯುವವರೆಗೂ ಜೊತೆಯಲ್ಲಿಯೇ ಇರುತ್ತಾರೆ. ಇವರು ಊರನ್ನು ತಲುಪಿ ಗೊತ್ತಾದ ಸ್ಥಳದಲ್ಲಿ ಇದ್ದುಕೊಂಡು ತಮ್ಮ ದಿಬ್ಬಣ ಬಂದಿರುವುದನ್ನು ಹೆಣ್ಣೋರಿಗೆ ತಿಳಿಸಲಾಗುತ್ತದೆ. ಈ ಸಮಯದಿಂದ ಗಂಡಿನ ಠೀವಿ ಬದಲಾಗುತ್ತದೆ. ಗಂಡು ಅಲಂಕಾರಭೂಷಿತವಾಗಿ ಕುದುರೆಯ ಮೇಲೆ ಕುಳಿತು ಮೆರವಣಿಗೆಯಲ್ಲಿ ಹೋಗುತ್ತಾನೆ. ಕೆಲವು ಜಾತಿಗಳಲ್ಲಿ ಎತ್ತಿನ ಗಾಡಿಯಲ್ಲಿ ಹೋಗುತ್ತಾರೆ. ಮೆರವಣಿಗೆಯ ಮುಂದೆ ವಾಲಗದವರು ಕಳಸ ಹಿಡಿದ ಮುತ್ತೈದೆಯರು ಆರತಿ ಮಾಡುವವರು ಶಾಸ್ತ್ರದ ತಟ್ಟೆಗಳನ್ನು ಹಿಡಿದು ಸಾಲಾಗಿ ಹೋಗುತ್ತಿರುತ್ತಾರೆ. ಗಂಡಿನ ಅಕ್ಕಪಕ್ಕಗಳಲ್ಲಿ ಅಕ್ಕತಂಗಿಯರು ಸ್ನೇಹಿತರು ಬರುತ್ತಿರುತ್ತಾರೆ. ಈ ದೃಶ್ಯ ನೋಡಲು ಆಕರ್ಷಕವಾಗಿರುತ್ತದೆ. ಹಾಗೆ ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿಸಿ ಈಡುಗಾಯಿ ಒಡೆಸಿ ಬರುತ್ತಾರೆ. ಈ ಸಂದರ್ಭದಲ್ಲಿ ಛತ್ರಿಯ ಮೇಲೆ ಶಾಲನ್ನು ಹೊದಿಸಿ ನಾಲ್ಕು ಮೂಲೆಗಳನ್ನು ನಾಲ್ಕು ಜನ ಹಿಡಿದು ಗಂಡಿಗೆ ಛತ್ರಿಯನ್ನು ಹಿಡಿದುಕೊಂಡು ಮದುವೆ ಮನೆಗೆ ಕರೆತರುತ್ತಾರೆ.

೨೦) ಧಾರೆಶಾಸ್ತ್ರ

ವಿವಾಹದಲ್ಲಿ ಬಹಳ ಮುಖ್ಯವಾದ ಶಾಸ್ತ್ರ ಧಾರೆಶಾಸ್ತ್ರ ಇದನ್ನು ತಾಳಿಕಟ್ಟುವುದು, ಲಗ್ನ ಮುಹೂರ್ತ ಎಂದೂ ಕರೆಯಲಾಗುತ್ತದೆ. ಜನಪದರಲ್ಲಿ ಈ ಶಾಸ್ತ್ರಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇದೆ. ಇದನ್ನು ನೋಡುವುದಕ್ಕಾಗಿಯೇ ಗಂಡು ಹೆಣ್ಣಿನ ತಂದೆ ತಾಯಿ ಸಂಬಂಧಿಕರು ಹಾಗೂ ನೆರೆಹೊರೆಯ ಬಳಗದವರೆಲ್ಲರೂ ಕಾಯುತ್ತಿರುತ್ತಾರೆ. ಮದುವೆ ಮನೆಯ ಚಪ್ಪರದ ಮಧ್ಯೆ ಹಸೆ ಮಂಟಪದಲ್ಲಿ ಹೆಣ್ಣುಗಂಡುಗಳನ್ನು ಎದುರುಬದುರಾಗಿ ಹಸೆಮಣೆ ಮೇಲೆ ನಿಲ್ಲಿಸಿರುತ್ತಾರೆ. ವಾದ್ಯ ಮೊಳಗುತ್ತಿರುತ್ತದೆ. ಪೂಜಿಸಿದ ತೆಂಗಿನಕಾಯಿಯ ಮೇಲೆ ತಾಳಿ ಇಟ್ಟು ಮದುವೆಗೆ ನೆರೆದ ಎಲ್ಲರಿಂದಲೂ ಮುಟ್ಟಿಸುತ್ತಾರೆ. ಇದು ವಧುವರರನ್ನು ಆಶೀರ್ವದಿಸಿ ಅವರ ಸಮಕ್ಷಮದಲ್ಲಿ ಧಾರಾಮುಹೂರ್ತ ನೆರವೇರುವುದಕ್ಕೆ ಸಾಕ್ಷಿ. ಮದುಮಗಳನ್ನು ಅವರ ಸೋದರ ಮಾವ ಧಾರಾ ಮಂಟಪಕ್ಕೆ ಕರೆತರುತ್ತಾನೆ. ಗಂಡು ಹಸೆಮಣೆಯ ಮೇಲೆ ಪೂರ್ವ ದಿಕ್ಕಿಗೆ ಮುಖ ಮಾಡಿ ಹೆಣ್ಣು ಪಶ್ಚಿಮ ದಿಕ್ಕಿಗೆ ಮುಖ ಮಾಡಿ ಪರಸ್ಪರ ಎದುರು ಬದುರು ನಿಂತಿರುತ್ತದೆ. ಇವರ ನಡುವೆ ಬಿಳಿಯ ಮಡಿ ಬಟ್ಟೆಯನ್ನು ಮುಖ ಕಾಣದ ಹಾಗೆ ತೆರೆ ಎಳೆಯಲಾಗಿರುತ್ತದೆ.

ಆಗ ಪುರೋಹಿತ ಅಥವಾ ಯಜಮಾನರ ಸಲಹೆಯಂತೆ ಹೆಣ್ಣುಗಂಡಿನ ತಲೆಯ ಮೇಲ ಅಕ್ಷತೆಗಳನ್ನು ಎಸೆಯುತ್ತಾ ಮೂರು ಸುತ್ತು ಪ್ರದಕ್ಷಿಣೆ ಬರುತ್ತಾಳೆ. ಈ ಸಂದರ್ಭದಲ್ಲಿ ಗಂಡಿನ ಮನೆಯವರು ಕೊಟ್ಟಿರುವ ಬಿಳಿ ಧಾರೆ ಸೀರೆಯನ್ನು ಉಡಿಸಿ ಅಥವಾ ಮೈಮೇಲೆ ಹಾಕಿ ಹಸೆಮಣೆಯ ಮೇಲೆ ನಿಲ್ಲುತ್ತಾಳೆ. ಗಂಡು ಹೆಣ್ಣಿನ ಸಂಬಂಧದ ಮಾಲೆಯಾಗಿ ಮೊದಲು ಗಂಡಿನ ಕೈಯಿಂದ ಹೆಣ್ಣಿನ ಕೊರಳಿಗೆ ಹೂ ಮಾಲೆ ಹಾಕಿಸುತ್ತಾರೆ. ನಂತರ ಗಂಡಿನ ಕೊರಳಿಗೆ ಹೆಣ್ಣಿನಿಂದ ಮಾಲೆಯನ್ನು ಹಾಕಿಸುತ್ತಾರೆ. ಇದು ಅವರ ಸಾಂಸಾರಿಕ ಜೀವನದಲ್ಲಿ ಮುಂದೆ ಸಂಯಮದಿಂದ ಸರಿಸಮಾನವಾಗಿ ನಡೆದುಕೊಂಡು ಹೋಗಬೇಕೆಂಬುದರ ಸಂಕೇತವಾಗಿದೆ. ಗಂಡು ಹೆಣ್ಣುಗಳು

ಪರಸ್ಪರ ಎಳ್ಳು ಜೀರಿಗೆಯ ಅಕ್ಷತೆಯನ್ನು ಮೂರು ಸಲ ತಲೆಯ ಮೇಲೆ ಹಾಕಿಕೊಳ್ಳುತ್ತಾರೆ. ಅಕ್ಷತೆ ಮತ್ತು ತಾಳಿಯನ್ನು ಮದುವೆಗೆ ನೆರೆದ ಎಲ್ಲಾ ಹಿರಿಯರಿಂದ ಮುಟ್ಟಿಸಿ ಗಂಡು ಹೆಣ್ಣಿನ ನಡುವೆ ಇದ್ದ ತೆರೆಯನ್ನು ಸಲ್ಲಿಸಿ ಮಾಂಗಲ್ಯ ಧಾರಣೆಗೆ ಸಿದ್ಧಮಾಡಿಕೊಳ್ಳುತ್ತಾರೆ. ತಾಳಿಕಟ್ಟುವ ಸಮಯದಲ್ಲಿ ಗಂಡು ಹೆಣ್ಣಿನ ಎಡಗಾಲನ್ನು ತನ್ನ ಬಲಗಾಲಿನಿಂದ ಮುಟ್ಟಿ ಹಿಡಿದು ಹೆಣ್ಣಿನ ಕೊರಳಿಗೆ ಮೂರು ಗಂಟುಗಳನ್ನು ಹಾಕಿ ತಾಳಿ ಕಟ್ಟುತ್ತಾನೆ. ಎಲ್ಲರೂ ಅಕ್ಷತೆಯನ್ನು ಎಸೆಯುತ್ತಾರೆ. ಮಾಂಗಲ್ಯದ ಮೂರು ಗಂಟು ಎಂದೆಂದಿಗೂ ಕಳೆದುಕೊಳ್ಳಲಾಗದ ಬಾಂಧವ್ಯದ ಸಂಕೇತವಾಗಿದೆ. ಮಾಂಗಲ್ಯಧಾರಣೆ ಮುಗಿದ ಮೇಲೆ ಪುರೋಹಿತರು ಗಂಡಿನ ಶಲ್ಯ ಮತ್ತು ಹೆಣ್ಣಿನ ಸೆರಗನ್ನು ಗಂಟುಹಾಕುತ್ತಾರೆ. ಹಿಂದುಳಿದ ವರ್ಗ ಮತ್ತು ಪಂಗಡದವರಲ್ಲಿ ಅಗ್ನಿಪ್ರದಕ್ಷಿಣೆ ಮತ್ತು ಸಪ್ತಪದಿ ಸಂಪ್ರದಾಯ ಕಂಡುಬರುವುದಿಲ್ಲ.

ಮಾಂಗಲ್ಯ ಧಾರಣೆಯ ನಂತರ ಹೆಣ್ಣುಗಂಡುಗಳನ್ನು ಎದುರು ಬದುರಾಗಿ ಕುರ್ಚಿಯ ಮೇಲೆ ಕೂರಿಸಿ ಹೆಣ್ಣಿನ ಎರಡು ಕೈಗಳನ್ನು ಗಂಡಿನ ಬೊಗಸೆಗೆ ಇಟ್ಟು ಅವರ ಕೈಯಲ್ಲಿ ಒಂದು ತೆಂಗಿನ ಕಾಯಿಯನ್ನು ಜುಟ್ಟು ಮೇಲಾಗಿ ಇಟ್ಟು ಅದಕ್ಕೆ ನಾಣ್ಯ ಸಿಕ್ಕಿಸಿ ಧಾರೆ ಎರೆಸಲು ಸಿದ್ಧರಾಗುತ್ತಾರೆ. ಹಾಲು ತುಪ್ಪ ತುಂಬಿದ ಒಂದು ಗಡಿಗೆಯನ್ನು ಎಲ್ಲರ ಕೈಯಲ್ಲೂ ಮುಟ್ಟಿಸಿ ಅಲ್ಲಿಯೂ ಇಟ್ಟಿರುತ್ತಾರೆ. ಮೊದಲು ಹೆಣ್ಣಿನ ತಂದೆತಾಯಿಗಳು ಅಕ್ಷತೆ ಹಾಕಿ ಹಾಲುತುಪ್ಪ ಬಿಟ್ಟು ಧಾರೆ ಎರೆಯುತ್ತಾರೆ. ನಂತರ ಗಂಡಿನ ತಂದೆತಾಯಿಗಳು ಅಕ್ಷತೆಹಾಕಿ ನಾಣ್ಯವಿಟ್ಟು ಹಾಲಿನ ಧಾರೆ ಎರೆಯುತ್ತಾರೆ. ಅನಂತರ ಮದುವೆಗೆ ಬಂದಿರುವ ಬಂಧುಬಳಗದವರೆಲ್ಲಾ ಹಾಲನ್ನು ಬಿಡುತ್ತಾರೆ. ಇದು ಅವರ ಕುಲದವರ ಒಪ್ಪಿಗೆ ಮತ್ತು ಆಶೀರ್ವಾದ ಎಂದು ಜನಪದರ ಆಶಯವಾಗಿದೆ.

ಹೀಗೆ ಕಂಕಣ ಕೂಡಿ ಬಂದು ಸಂಬಂಧವೇರ್ಪಟ್ಟ ಮೇಲೆ ವಧುವರರಲ್ಲಿ ಇರುವ ನಾಚಿಕೆ ದೂರವಾಗಲಿ ಎಂಬ ಉದ್ದೇಶದಿಂದ ಒಂದು ಹಾಲಿನ ಪಾತ್ರೆಗೆ ಉಂಗುರವನ್ನು ಹಾಕಿ ವಧುವರರನ್ನು ಒಂದೇ ಬಾರಿಗೆ ಹುಡುಕಲು ಬಿಡುತ್ತಾರೆ. ಯಾರು ಮೊದಲು ಎತ್ತುವಿರಿ ಎಂದು ಹುರಿದುಂಬಿಸುತ್ತಾರೆ. ಹೀಗೆ ಮೂರು ಬಾರಿ ಮಾಡಿಸಲಾಗುತ್ತದೆ. ಅನಂತರ ಸೂರ್ಯನನ್ನು ತೋರಿಸಲು ಮದುವೆ ಮಂಟಪದಿಂದ ಹೊರಗಡೆಗೆ ವಧುವರರನ್ನು ಕರೆತರುತ್ತಾರೆ. ಅಲ್ಲಿಗೆ ಧಾರಾಮುಹೂರ್ತದ ಶಾಸ್ತ್ರ ಮುಗಿಯುತ್ತದೆ.

ಅಃ) ಸೂರ್ಯನನ್ನು ನೋಡುವುದು

ಧಾರಾಮುಹೂರ್ತ ಮುಗಿದ ಮೇಲೆ ಮದುವೆ ಊಟವನ್ನು ಮಾಡಲು ಹೋಗುತ್ತಾರೆ. ಈ ಸಮಯದಲ್ಲಿ ಪುರೋಹಿತರು ಹೆಣ್ಣು ಗಂಡುಗಳನ್ನು ಮದುವೆ ಮನೆಯಿಂದ ಹೊರಗೆ ಕರೆದುಕೊಂಡು ಬಂದು ಸೂರ್ಯನಿಗೆ ಎದುರಾಗಿ ನಿಲ್ಲಿಸಿ ಸೂರ್ಯನನ್ನು ತೋರಿಸುತ್ತಾನೆ. ಇಲ್ಲಿಯ ತನಕ ಹೆಣ್ಣಿನ ಸೆರಗು ಮತ್ತು ಗಂಡಿನ ಶಲ್ಯದ ಗಂಟು ಹಾಗೆಯೇ ಇರುತ್ತದೆ. ಅದನ್ನು ಬಿಚ್ಚಿ ಸೂರ್ಯನಿಗೆ ಪೂಜಿಸಿ ಹೆಣ್ಣಿಗೆ 'ಸೂರ್ಯನನ್ನು ಕಂಡ್ಯಾ, ಚಂದ್ರನನ್ನು ಕಂಡ್ಯಾ, ಮುತ್ತಿನಂತ ಗಂಡನ್ನ ಕಂಡ್ಯಾ' ಎಂದು ಪುರೋಹಿತರು ಪ್ರಶ್ನಿಸುತ್ತಾರೆ. ಅದಕ್ಕೆ 'ಕಂಡೆ ಕಂಡೆ' ಎಂದು ಹೆಣ್ಣು ಉತ್ತರ

ನೀಡುತ್ತಾಳೆ. ಇದನ್ನು ಅರುಂಧತಿ ನಕ್ಷತ್ರ ನೋಡುವುದು ಎನ್ನುತ್ತಾರೆ. ನಂತರ ಹೆಣ್ಣುಗಂಡು ಊಟಕ್ಕೆ ಬರುತ್ತಾರೆ.

ಹಾಗೆಯೇ ಈ ಸಂದರ್ಭದಲ್ಲಿ ಹಿರಿಯರು ಸಂಬಂಧಿಕರು ಮತ್ತು ಸ್ನೇಹಿತರು ಗಂಡು ಹೆಣ್ಣಿಗೆ ಮುಯ್ಯಿನ ರೂಪದಲ್ಲಿ ಹಣ ಮತ್ತು ಹಲವಾರು ವಸ್ತುಗಳನ್ನು ಉಡುಗೊರೆಯಾಗಿ ಕೊಡುತ್ತಾರೆ. ಮುಯ್ಯಿಯನ್ನು ಹೆಣ್ಣಿನ ಕಡೆಯವರೇ ಬೇರೆ ಗಂಡಿನ ಕಡೆಯವರೇ ಬೇರೆ ಬರೆದುಕೊಳ್ಳುತ್ತಾರೆ. ಏಕೆಂದರೆ ಅವರ ಮದುವೆಯಾದಾಗ ಅಥವಾ ಇತರ ಕಾರ್ಯಕ್ರಮಗಳು ನಡೆದಾಗ ಅವರು ಏನು ಕೊಟ್ಟಿದ್ದಾರೆ. ಎಷ್ಟು ಹಣ ಮುಯ್ಯಿ ಮಾಡಿದ್ದಾರೆ ಎಂದು ನೋಡುತ್ತಾರೆ. ಗಂಡು ಹೆಣ್ಣಿನ ಕೈಗೆ ಉಡುಗೊರೆಯಾಗಿ ಕೊಡುತ್ತಾರೆ. ಗಂಡುಹೆಣ್ಣಿನ ಊಟ ಮುಗಿದ ಮೇಲೆ ನವದಂಪತಿಗಳನ್ನು ಮೆರವಣಿಗೆ ಶಾಸ್ತ್ರಕ್ಕೆ ಕರೆದುಕೊಂಡು ಹೋಗುತ್ತಾರೆ. ಇದನ್ನು ಕೆರೊಳ್ಳಿಶಾಸ್ತ್ರ ಎಂದು ಕರೆಯುತ್ತಾರೆ. ವಾದ್ಯ ಸಮೇತರಾಗಿ ವಧೂವರರನ್ನು ಕರೆದುಕೊಂಡು ಬಂದು ಗಂಗಾ ಸ್ಥಳದಲ್ಲಿ ಅರಳೀಮರ ಅಥವಾ ಬೇವಿನ ಮರದ ಕೆಳಗೆ ಚಾಪೆ ಹಾಸಿ ಕಳಸ ಕನ್ನಡಿ ದೇವರ ಗಡಿಗೆಗಳನ್ನು ಇಟ್ಟು ಪೂಜೆ ಮಾಡಿಸುತ್ತಾರೆ. ಪರಸ್ಪರ ಹೆಣ್ಣಿನಿಂದ ಗಂಡಿನ, ಗಂಡಿನಿಂದ ಹೆಣ್ಣಿನ ಕಂಕಣಗಳನ್ನು ಬಿಚ್ಚಿಸಿ ದೇವರ ಗಡಿಗೆಯ ನೀರನ್ನೆಲ್ಲಾ ಆಚೆಗೆ ಸುರಿಯುತ್ತಾರೆ. ಪುರೋಹಿತ ಅಥವಾ ಯಜಮಾನ ಮತ್ತು ಮುತ್ತೈದೆಯರು ಈ ಶಾಸ್ತ್ರ ಮಾಡಿ ಗಂಡಿನಿಂದ ಹೆಣ್ಣಿನ ಹೆಸರನ್ನು, ಹೆಣ್ಣಿನಿಂದ ಗಂಡಿನ ಹೆಸರನ್ನು ಹೇಳಿಸಿ ವಾದ್ಯಸಮೇತ ಹಿಂತಿರುಗುತ್ತಾರೆ.

ಮದುವೆಯೆಲ್ಲ ಮುಗಿದಮೇಲೆ ಕೊನೆಯಲ್ಲಿ ಹೆಣ್ಣನ್ನು ಗಂಡಿನ ಜೊತೆ ಊರಿಗೆ ಕಳುಹಿಸಿಕೊಡಬೇಕಾದ ಸಂದರ್ಭ ಬರುತ್ತದೆ. ಇಷ್ಟು ವರ್ಷಗಳ ಕಾಲ ತಂದೆತಾಯಿ ಅಣ್ಣತಮ್ಮಂದಿರೊಂದಿಗೆ ಉಂಡುತಿಂದು ಆಡಿ ಬೆಳೆದು ಈಗ ಇವರಿಂದ ಬೇರೆಯಾಗಿ ಗಂಡಿನ ಮನೆಗೆ ಹೋಗುವುದು ಹೆಣ್ಣಿಗೂ ಕಷ್ಟವಾಗುತ್ತದೆ. ಹಾಗೆ ಕಳುಹಿಸಿಕೊಡಲು ಹೆಣ್ಣಿನ ಮನೆಮಂದಿಗೂ ಕಷ್ಟವಾಗುತ್ತದೆ. ಆದರೂ ಕಳುಹಿಸಲೇ ಬೇಕಾಗಿರುವುದರಿಂದ ಹೆಣ್ಣಿನ ತಂದೆ, ತಾಯಿ, ಚಿಕ್ಕಪ್ಪ ಮತ್ತು ದೊಡ್ಡಪ್ಪ ಹೆಣ್ಣಿನ ಕೈ ಹಿಡಿದು ಗಂಡಿನ ಕಡೆಯ ಹಿರಿಯರಿಗೆ 'ಇದು ನಮ್ಮ ಮಗಳಲ್ಲ ಇನ್ನು ಮುಂದೆ ನಿಮ್ಮ ಮಗಳೆಂದು ಚೆನ್ನಾಗಿ ನೋಡಿಕೊಳ್ಳಿ ಎಂದು ಓಲೈಸುತ್ತಾರೆ' ಹಾಗೆ ಅಗಲಿ ಎಂದು ಗಂಡಿನ ಕಡೆಯವರು ಒಪ್ಪಿಕೊಳ್ಳುತ್ತಾರೆ. ಅಪ್ಪನ ಮನೆಯಿಂದ ಹೊರಟ ಹೆಣ್ಣುಮಗಳು ಬಾಗಿಲಿನಿಂದ ಹೊರಗೆ ಬಂದು ಬೊಗಸೆಯಲ್ಲಿ ಭತ್ತವನ್ನು ತುಂಬಿಕೊಂಡು ಮನೆಗೆ ಎರಚುತ್ತಾ, 'ನಮ್ಮಪ್ಪನ ಮನೆ ಹಾಲುಕ್ಕಿದಂತೆ ಉಕ್ಕಲಿ' ಎಂದೂ ಹಾರೈಸುತ್ತಾಳೆ. ಗಂಡೂ ಸಹ 'ನಮ್ಮಾವನ ಮನೆ ಹಾಲುಕ್ಕಿದಂಗೆ ಉಕ್ಕಲಿ' ಎಂದು ಹಾರೈಸಿ ಭತ್ತವನ್ನು ಎರಚುತ್ತಾನೆ. ನಂತರ ಗಂಡು ಹೆಣ್ಣುಗಳು ಹಿರಿಯರ ಕಾಲಿಗೆ ನಮಸ್ಕಾರ ಮಾಡಿ ಆಶೀರ್ವಾದ ಪಡೆದು ಎಲೆ ಅಡಿಕೆ ಕೊಟ್ಟು ಊರಿಗೆ ಪ್ರಯಾಣ ಬೆಳೆಸುತ್ತಾರೆ. ಹೆಣ್ಣಿನ ಜೊತೆ ಅವಳ ಸ್ನೇಹಿತೆ ಬರುತ್ತಾಳೆ.

ಗಂಡಿನ ಊರಿಗೆ ಬರುತ್ತಲೇ ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿಸಿಕೊಂಡು ಮನೆಗೆ ಬರುತ್ತಾರೆ. ಆಗ ಗಂಡಿನ ಅಕ್ಕತಂಗಿಯರು ಬಾಗಿಲು ತಡೆದು ಎಷ್ಟು ಕೇಳಿಕೊಂಡರೂ ಮನೆಯ ಒಳಗಡೆ ಬಿಡುವುದಿಲ್ಲ. ಕೊನೆಗೆ ನಿನಗೆ ಹುಟ್ಟಿದ ಮಗಳನ್ನು ನನ್ನ ಮಗನಿಗೆ ಕೊಡಬೇಕೆಂದು ಒಪ್ಪಿಗೆ ಪಡೆದು ಮನೆಯ ಒಳಗಡೆ ಬಿಡುತ್ತಾರೆ. ಆಗ ಹೊಸಿಲಿನಲ್ಲಿ ಒಂದು ಸೇರು ಭತ್ತ ಮತ್ತು ಅಕ್ಕಿ ಅದರ ಮೇಲೆ ಬೆಲ್ಲದ ಅಚ್ಚನ್ನು ಇಟ್ಟು ಹೊಸಿಲಿನಿಂದ ಒಳಗೆ ಬರುವ ಹೆಣ್ಣು ಬಲಗಾಲಿನಿಂದ ಒದ್ದು, ಮನೆಯೊಳಗಡೆ ಭತ್ತ ಅಕ್ಕಿ ಚೆಲ್ಲುವಂತೆ ಒಳಬರುತ್ತಾರೆ.

ಕ) ಬೀಗರೂಟ ಅಥವಾ ನೆರವಿ

ಮದುವೆಯನ್ನು ಹೆಣ್ಣಿನ ಕಡೆಯವರು ಮಾಡಿದರೆ ನೆರವಿಯನ್ನು ಗಂಡಿನ ಕಡೆಯವರು ಅಥವಾ ಮದುವೆಯನ್ನು ಗಂಡಿನ ಕಡೆಯವರು ಮಾಡಿದರೆ ನೆರವಿಯನ್ನು ಹೆಣ್ಣಿನ ಕಡೆಯವರು ಮಾಡುವ ಸಂಪ್ರದಾಯವಿದೆ. ಹಿಂದುಳಿದ ವರ್ಗದವರು ಮದುವೆಯಲ್ಲಿ ಸಿಹಿ ಊಟವನ್ನು ಮಾಡಿಸಿದರೆ ನೆರವಿಯಲ್ಲಿ ಕಾರದ ಅಡುಗೆಯನ್ನು ಮಾಡಿಸಿರುತ್ತಾರೆ. ಕೆಲವರು ಮಾತ್ರ ಸಿಹಿ ಅಡುಗೆ ಮಾಡಿಸುತ್ತಾರೆ. ಮದುವೆಯ ಕಾರ್ಯ ಎಲ್ಲಾ ಮುಗಿದ ಮೇಲೆ ಹೆಣ್ಣು ಗಂಡಿನ ಮನೆಗೆ ಹೊರಡುವಾಗ ಗಂಡಿನ ಕಡೆಯವರು ಹೆಣ್ಣನ್ನು ಕರೆದುಕೊಂಡು ಹೋಗಲು ಯಾವಾಗ ಬರುತ್ತೀರಿ ಎಂದು ಕೇಳಿ ತಿಳಿದುಕೊಂಡು ಆ ದಿನಕ್ಕೆ ಬೀಗರೂಟ ಅಥವಾ ನೆರವಿಯ ಸಿದ್ಧತೆಯನ್ನು ಮಾಡಿಕೊಳ್ಳುತ್ತಾರೆ. ಸಾಮಾನ್ಯವಾಗಿ ನೆರವಿಯನ್ನು ಮೂರು, ಐದು ಅಥವಾ ಒಂಬತ್ತು ದಿನಗಳಿಗೆ ಮಾಡುವುದು ರೂಢಿ. ನೆರವಿಗೋಸ್ಕರ ಮೊದಲೇ ಕೊಬ್ಬಿದ ಕುರಿ ಮತ್ತು ಮೇಕೆಗಳನ್ನು ಸಾಕಿರುತ್ತಾರೆ. ಅಥವಾ ಸಂತೆಯಿಂದ ತಂದು ಅವರವರ ಅಂತಸ್ಥಿಗನುಗುಣವಾಗಿ ಬರುವ ನೆಂಟರಿಗೆ ಮತ್ತು ಊರಿನವರಿಗೆ ಅಡುಗೆ ಮಾಡಿಸಿ ಊಟ ಹಾಕುತ್ತಾರೆ. ಸಾಮಾನ್ಯವಾಗಿ ಇದು ಮಧ್ಯಾಹ್ನದ ಹೊತ್ತಿನಲ್ಲಿ ನಡೆಯುತ್ತದೆ. ಏಕೆಂದರೆ ಊಟ ಮಾಡಿ ಎಲೆ ಅಡಿಕೆ ಅಗಿದು ಸಂತೃಪ್ತರಾಗಿ ಊರಿಗೆ ಹೊರಡಲು ಸಿದ್ಧರಾದಾಗ ಗಂಡು ಹೆಣ್ಣುಗಳು ಸಿದ್ಧರಾಗುತ್ತಾರೆ. ಮುತ್ತೈದೆಯರು ತವರಿಗೆ ಹೊರಟಿರುವ ಹೆಣ್ಣಿಗೆ ಹಣ್ಣು ಕಾಯಿ, ಎಲೆ ಅಡಿಕೆ, ಅಕ್ಕಿಯನ್ನು ಮಡಿಲು ತುಂಬಿ ಕುಂಕುಮ ಇಟ್ಟು ಕಳುಹಿಸುತ್ತಾರೆ. ಹೆಣ್ಣು ಗಂಡುಗಳು ತಂದೆತಾಯಿ, ಹಿರಿಯರಿಗೆಲ್ಲಾ ವಂದಿಸಿ ಆಶೀರ್ವಾದ ಪಡೆದು ಹೆಣ್ಣಿನ ಊರಿಗೆ ಹೊರಡುತ್ತಾರೆ.

ಖ) ಪ್ರಸ್ಥ ಅಥವಾ ಸೋಬನ

ಹಿರಿಯರ ಮತ್ತು ಸಮಾಜದ ಒಪ್ಪಿಗೆ ಪಡೆದು ಹೊಸ ಮದುವೆಯಾದ ದಂಪತಿಗಳು ದೈಹಿಕವಾಗಿ ಒಂದುಗೂಡುವ ಶಾಸ್ತ್ರವನ್ನು ಸೋಬನ, ಪ್ರಸ್ಥ ಅಥವಾ ಮೊದಲ ರಾತ್ರಿ ಎಂದು ಕರೆಯುತ್ತಾರೆ. 'ಮಾನವನೂ ಸಹ ಬೇರೆ ಪ್ರಾಣಿಗಳಂತೆ ಲೈಂಗಿಕ ಪ್ರಚೋದನೆ ಹೊಂದಿದವನಾದರೂ ಯೋಚನೆ ಮಾಡುವ ವಿಷಯದಲ್ಲಿ ಪ್ರಾಣಿಗಳಿಗಿಂತ ಬೇರೆಯಾಗಿದ್ದಾನೆ. ಆದುದರಿಂದಲೇ ಮಾನವನ ಲೈಂಗಿಕ ಸಂಯೋಗವನ್ನು ವೈಯಕ್ತಿಕ ಎಂದು ಭಾವಿಸದೆ ಸಾಮಾಜಿಕ, ಸಾಂಸ್ಕೃತಿಕ ಮತ್ತು ನೈತಿಕ ವಿಷಯಗಳೆಂದು ಪರಿಗಣಿಸಿ ಸಮುದಾಯದ ಅಂಗೀಕಾರವನ್ನು ಪಡೆದು ನಂತರ ಲೈಂಗಿಕ ಕ್ರಿಯೆಯಲ್ಲಿ ತೊಡಗುತ್ತಾನೆ. ಇದರಿಂದ ಆರೋಗ್ಯವಂತ ಸಮಾಜ ಸೃಷ್ಟಿಯಾಗುತ್ತದೆ.

ಈ ಶಾಸ್ತ್ರವನ್ನು ಹೆಣ್ಣು ಮತ್ತು ಗಂಡಿನ ಕಡೆಯವರು ಮಾತನಾಡಿಕೊಂಡು ಒಂದು ಶುಭದಿನವನ್ನು ಗೊತ್ತು ಮಾಡಿ ಆ ದಿನ ಸೋಬನದ ಶಾಸ್ತ್ರ ಮಾಡಲು ಸಿದ್ಧರಾಗುತ್ತಾರೆ. ಸಾಮಾನ್ಯವಾಗಿ ಇದನ್ನು ಮದುವೆಯ ರೀತಿ ಸಂಬಂಧಿಕರು ಊರಿನವರಿಗೆಲ್ಲಾ ತಿಳಿಸದೆ ಗಂಡು ಹೆಣ್ಣಿನ ಮನೆಯವರು ಸೇರಿ ಮಾಡಿಕೊಳ್ಳುತ್ತಾರೆ. ಇದು ಹೆಣ್ಣಿನ ತವರಿನಲ್ಲಿಯೇ ನಡೆಯುತ್ತದೆ.

ಸೋಬನದ ದಿನ ಸಂಜೆಯಾದ ಮೇಲೆ ಗಂಡು ಹೆಣ್ಣುಗಳನ್ನು ಹಸೆಮಣೆಯ ಮೇಲೆ ಕೂರಿಸಿ ಐದು ಜನ ಮುತ್ತೈದೆಯರು ಕಳಸಕನ್ನಡಿ, ಕಾಯಿ ಪೂಜೆ ಸಾಮಾನುಗಳನ್ನು ತಟ್ಟೆಯಲ್ಲಿ ಇಟ್ಟು ಪೂಜೆ ಮಾಡಿ ಹೆಣ್ಣಿಗೆ ಅರಿಶಿಣ ಕುಂಕುಮ ಇಟ್ಟು ಆರತಿ ಬೆಳಗುತ್ತಾರೆ. ಗಂಡಿಗೂ ಇದೇ ರೀತಿ ಪೂಜೆ ಮಾಡಿ ವಿಭೂತಿ ಇಟ್ಟು ಸೋಗಲು ಹುಯ್ಯುತ್ತಾರೆ. ಈ ಮಧ್ಯೆ ಹೆಂಗಸರು ಸೋಬನ ಕೋಣೆಯನ್ನು ಸಿದ್ಧಮಾಡಿ ಹೊಸ ಹಾಸಿಗೆ ದಿಂಬುಗಳನ್ನು ಹಾಕಿ ಹೊಸ ಬಟ್ಟೆಯನ್ನು ಇದರ ಮೇಲೆ ಹಾಸಿ ಬಿಡಿಬಿಡಿ ಹೂಗಳನ್ನು ಹರಡಿರುತ್ತಾರೆ. ಕೊಠಡಿಗೆಲ್ಲಾ ಪನ್ನೀರನ್ನು ಚಿಮುಕಿಸಿ ಸುಗಂಧ ದ್ರವ್ಯಗಳನ್ನು ಹಾಕಿ ಪರಿಮಳ ಉಂಟಾಗುವಂತೆ ಮಾಡಿರುತ್ತಾರೆ. ತಟ್ಟೆಯಲ್ಲಿ ಹಣ್ಣುಹಂಪಲು, ಸಿಹಿತಿಂಡಿಗಳನ್ನು ಇಟ್ಟು ಗಂಡನ್ನು ಮೊದಲು ಕೋಣೆಗೆ ಕಳುಹಿಸುತ್ತಾರೆ. ಅನಂತರ ಹೆಂಗಸರು ಹೆಣ್ಣನ್ನು ಈ ಕೋಣೆಯ ಒಳಗಡೆ ಕರೆದುಕೊಂಡು ಬಂದು ಬಿಟ್ಟು ಹೋಗುತ್ತಾರೆ. ಹೆಣ್ಣು ನಾಚುತ್ತಾ, ಕೈಯಲ್ಲಿ ಹಾಲಿನ ಬಟ್ಟಲನ್ನು ಹಿಡಿದು ಒಳಪ್ರವೇಶಿಸುತ್ತಾಳೆ. ಅನಂತರ ಅವರಿಬ್ಬರ ನಡುವೆ ದೈಹಿಕ ಸಂಬಂಧ ಏರ್ಪಡುತ್ತದೆ.

೪.೫. ಶವ ಸಂಸ್ಕಾರ ಪದ್ಧತಿ

ಮನುಷ್ಯನ ಪ್ರಾಣ ಹೋಗುವುದು ತಿಳಿದ ಕೂಡಲೇ ಅವನ ಬಾಯಿಗೆ ಹಾಲೂ ನೀರನ್ನು ಬಿಡುತ್ತಾರೆ. ಸಾಯುತ್ತಿರುವ ವ್ಯಕ್ತಿಯನ್ನು ಮನೆಯಿಂದ ಹೊರಗಡೆಗೆ ತಂದು ಜಗಲಿಯ ಮೇಲೆ ಮಲಗಿಸುತ್ತಾರೆ. ಪ್ರಾಣ ಹೋಗುತ್ತಿದ್ದಂತೆ ಕೈಕಾಲು ಮುರಿಯುವ ಶಾಸ್ತ್ರ ಮಾಡಿ, ಕೈ ಹಣತೆಯ ದೀಪವನ್ನು ಹಚ್ಚಿ ಶವದ ಪಕ್ಕದಲ್ಲಿಡುತ್ತಾರೆ. ಮನೆಯ ಮುಂದಿನ ಬೀದಿಯಲ್ಲಿ ಸೌದೆಯನ್ನು ಇಟ್ಟು

ಬೆಂಕಿ ಹಾಕುತ್ತಾರೆ. ಬಂಧು ಬಳಗಕ್ಕೆಲ್ಲ ಸಾವಿನ ಸುದ್ದಿಯನ್ನು ತಲುಪಿಸುತ್ತಾರೆ. ಸತ್ತ ವ್ಯಕ್ತಿಯ ಹೆಂಡತಿ, ಮಕ್ಕಳು, ಸೊಸೆಯಂದಿರು, ಅಣ್ಣ ತಮ್ಮ, ಅಕ್ಕತಂಗಿಯರು ಶವದ ಸುತ್ತ ಕುಳಿತು ಅಳುತ್ತಾರೆ. ಸಂಬಂಧಿಕರೆಲ್ಲ ಬರುತ್ತಿದ್ದಂತೆ ಮರದ ಹಲಗೆಯೊಂದರ ಮೇಲೆ ಹೆಣವನ್ನು ಕೂರಿಸಿ, ಬೆಚ್ಚಗಿನ ನೀರಿನಿಂದ ಶವಕ್ಕೆ ಸ್ನಾನ ಮಾಡಿಸುತ್ತಾರೆ. ತಣ್ಣೀರನ್ನು ಬೆರಸುವುದಿಲ್ಲ. ಸತ್ತ ವ್ಯಕ್ತಿಯ ಹೆಂಡತಿ ಬದುಕಿದ್ದರೆ ಅವಳಿಗೆ ಅವರ ಮನೆಯವರು ತಂದಿರುವ ಸೀರೆಯನ್ನುಡಿಸಿ ಶವದ ಪಕ್ಕದಲ್ಲಿ ಕೂರಿಸಿ ಶಾಸ್ತ್ರ ಮಾಡುತ್ತಾರೆ. ಹೆಂಡತಿ ಸತ್ತು ಗಂಡ ಬದುಕಿದ್ದರೆ ಗಂಡನ ಕೈಯಿಂದ ಹೆಂಡತಿಯ ಶವಕ್ಕೆ ಮೊದಲು ಪೂಜೆ ಮಾಡಿಸುತ್ತಾರೆ. ಶವದ ಕೈಯಿಂದ ಗಂಡನಿಗೆ ವೀಳ್ಯ ಕೊಡಿಸುತ್ತಾರೆ. ನಂತರ ಮಕ್ಕಳು ಸಂಬಂಧಿಕರು ಹೆಣಕ್ಕೆ ನೀರನ್ನು ಹುಯ್ದು ಪೂಜೆ ಮಾಡುತ್ತಾರೆ. ಸ್ನಾನಕ್ಕಾಗಿ ನೀರನ್ನು ಕಾಯಿಸಿದ ಒಲೆಯಲ್ಲಿಯೇ ಸ್ವಲ್ಪ ಅಕ್ಕಿಯನ್ನು ಮಡಿಕೆಯಲ್ಲಿ ಬೇಯಿಸಿ, ಅರಿಶಿಣ, ಕುಂಕುಮವನ್ನು ಅದರೊಳಕ್ಕೆ ಹಾಕುತ್ತಾರೆ. ಇದಕ್ಕೆ ಹೆಣದ ಕೂಳು ಎಂದು ಕರೆಯುತ್ತಾರೆ. ಬಿದಿರಿನಿಂದ ಸಿದ್ಧವಾಗಿರುವ ಚಟ್ಟವನ್ನು ಹೂವಿನಿಂದ ಅಲಂಕರಿಸುತ್ತಾರೆ. ಸ್ಮಶಾನಕ್ಕೆ ಹೆಣವನ್ನು ಹೊತ್ತು ಹೋಗುವಾಗ ಮೊದಲು ತಮ್ಮಟೆ ಬಾರಿಸುವರು, ನಂತರ ಸತ್ತಿರುವ ವ್ಯಕ್ತಿಯ ಮಗ ಕೂಳಿನ ಮಡಿಕೆ ಹಿಡಿದು ನಡೆಯುತ್ತಾನೆ. ಇವನ ಹಿಂದೆ ನಾಲ್ಕು ಜನ ಚಟ್ಟವನ್ನು ಹೊತ್ತು ಸಾಗುತ್ತಾರೆ. ಮತ್ತೊಬ್ಬರು ಕಡ್ಲೆಪುರಿ ಮತ್ತು ಚಿಲ್ಲರೆ ನಾಣ್ಯವನ್ನು ಶವದ ಮೇಲೆ ಎರಚುತ್ತಿರುತ್ತಾರೆ. ಊರಿನ ಆಚೆ ಮೂರು ದಾರಿ ಸೇರುವ ಸ್ಥಳದಲ್ಲಿ ಮೂರು ಸುತ್ತು ಪ್ರದಕ್ಷಿಣೆ ಹಾಕಿ ಶವದ ಚಟ್ಟವನ್ನು ಇಳಿಸಿ ಪೂಜೆ ಮಾಡುತ್ತಾರೆ. ಗುಂಡಿ ತೋಡಿದ್ದ ಸ್ಥಳಕ್ಕೆ ಶವವನ್ನು ತಂದು ಸಂಬಂಧಿಕರೆಲ್ಲರು ಸೇರಿ ಮತ್ತೊಮ್ಮೆ ಪೂಜೆ ಮಾಡಿ ಗುಂಡಿಯ ಒಳಕ್ಕೆ ಬಾಳೆ ಎಲೆಯ ಮೇಲೆ ಮಲಗಿಸುತ್ತಾರೆ. ಇದನ್ನೆ ಹೂಳುವುದು ಎಂದು ಕರೆಯುತ್ತಾರೆ. ಬಂದಿರುವ ಬಂಧುಬಳಗದವರೆಲ್ಲ ಮೂರು ಹಿಡಿ ಮಣ್ಣನ್ನು ಶವದ ಮೇಲೆ ಹಾಕುತ್ತಾರೆ. ನಂತರ ಗುಂಡಿಯನ್ನು ಮುಚ್ಚಿ ಮಟ್ಟ ಮಾಡಿ ತುಳಸಿ ಮತ್ತು ತುಂಬೆ ಗಿಡಗಳನ್ನು ನೆಟ್ಟು ನೀರನ್ನು ಹುಯ್ಯುತ್ತಾರೆ. ಗುಂಡಿ ತೋಡಲು ಹೋಗಿದ್ದ ವ್ಯಕ್ತಿಯಲ್ಲಿ ಒಬ್ಬ ಗುದ್ದಲಿಯನ್ನು ತಿರುಗಿಸಿ ಸಮಾಧಿಯ ಮೇಲೆ ಪೂರ್ವ ಪಶ್ಚಿಮವಾಗಿ ಆ ಕಡೆಯಿಂದ ಈ ಕಡೆಗೆ ಮೂರು ಬಾರಿ ಎಸೆಯುತ್ತಾನೆ. ನಂತರ ಎಲ್ಲರು ಪೂಜೆ ಮಾಡುತ್ತಾರೆ. ಹರಿಜನರ ಹಾಗು ಒಕ್ಕಲಿಗರ ಶವಸಂಸ್ಕಾರದಲ್ಲಿ ಸಾಕಷ್ಟು ಸಾಮ್ಯತೆ ಇರುವುದು ಇದರಿಂದ ತಿಳಿದು ಬರುತ್ತದೆ.

ಸತ್ತವರು ಆತ್ಮಹತ್ಯೆ ಮಾಡಿಕೊಂಡಿದ್ದರೆ, ಬಾಣಂತಿ ಸ್ತ್ರೀಯರಾಗಿದ್ದರೆ, ಮಾರಕ ಕಾಯಿಲೆಯಿಂದ ಸತ್ತಿದ್ದರೆ ಅವರನ್ನು ಸುಡುತ್ತಾರೆ. ಸುಡುವ ಸ್ಥಳದಲ್ಲಿ ಸೌದೆಯನ್ನು ಜೋಡಿಸಿರುತ್ತಾರೆ. ಆ ಸೌದೆಯ ಮೇಲೆ ಹೆಣವನ್ನು ಮಲಗಿಸಿ ಸತ್ತಿರುವ ವ್ಯಕ್ತಿಯ ಮಕ್ಕಳಿಂದ ಬೆಂಕಿ ಹಾಕಿಸುತ್ತಾರೆ. ಸೌದೆ ಚೆನ್ನಾಗಿ ಉರಿಯಲಿ ಎಂದು ಸೀಮೆ ಎಣ್ಣೆಯನ್ನು ಸೌದೆಯ ಮೇಲೆ ಎರಚುತ್ತಾರೆ. ಐದಾರು ಜನ ಸೌದೆಗಳೆಲ್ಲ ಉರಿಯುವವರೆಗೆ ಅಲ್ಲಿಯೆ ಇರುತ್ತಾರೆ. ಉಳಿದವರು ಹೊರಟು ಹೋಗುತ್ತಾರೆ.

ಹೆಣವನ್ನು ಮಣ್ಣು ಮಾಡಲು ಹೋಗಿದ್ದವರಲ್ಲಿ ದಾರಿಯಲ್ಲಿ ಹೋಗುವ ಕೆರೆ, ಬಾವಿಗಳಲ್ಲಿ ಕೈಕಾಲು ತೊಳೆದುಕೊಂಡು ಮೂರು ಸಾರಿ ಸಗಣಿ ನೀರನ್ನು ತಲೆಯ ಮೇಲೆ ಎರಚಿಕೊಂಡು ಮನೆಗೆ ಬರುತ್ತಾರೆ. ಸತ್ತ ವ್ಯಕ್ತಿಯ ಮನೆಯಲ್ಲಿ ಹೊರಗಡೆ ದೀಪವನ್ನು ಹಚ್ಚಿ ಇಟ್ಟಿರುತ್ತಾರೆ. ಎಲ್ಲರೂ ದೀಪವನ್ನು ನೋಡಿ ದೇವಸ್ಥಾನಕ್ಕೆ ಹೋಗಿ ಕೈಮುಗಿದು ಹೋಗುತ್ತಾರೆ. ವ್ಯಕ್ತಿ ಸತ್ತ ಸ್ಥಳವನ್ನು ಸಗಣಿಯಿಂದ ಸಾರಿಸಿ ಸ್ವಚ್ಛ ಮಾಡುತ್ತಾರೆ.

ತಿಥಿಯ ದಿನ ಬಂಧು ಬಳಗವೆಲ್ಲ ಸೇರಿ ಮಧ್ಯಾಹ್ನದ ಸಮಯದಲ್ಲಿ ತಿಂಡಿ ತಿನಿಸು ಹಣ್ಣು ಹಂಪಲುಗಳನ್ನು ತೆಗೆದುಕೊಂಡು ಸಮಾಧಿಯ ಸ್ಥಳಕ್ಕೆ ಬರುತ್ತಾರೆ. ಸಮಾಧಿಯ ಸುತ್ತಲಿನ ಸ್ಥಳವನ್ನು ಸ್ವಚ್ಛ ಮಾಡಿ ೧೦೧ ನಿಂಬೆ ಹಣ್ಣು, ೧೦೧ ಎಲೆ ಅಡಿಕೆ, ೧೦೧ ವಿಭೂತಿ ಉಂಡೆಗಳನ್ನು ಸಮಾಧಿಯ ಮೇಲಿಟ್ಟು ಪಕ್ಕದಲ್ಲಿ ಹಾಲಿನ ಚೊಂಬು ಹಾಗು ಎಳೆನೀರನ್ನು ಇಟ್ಟು ದೀಪವನ್ನು ಹಚ್ಚಿಸುತ್ತಾರೆ. ನಂತರ ಸತ್ತ ವ್ಯಕ್ತಿಯ ಹೆಂಡತಿಯ ಅರಿಶಿಣ, ಕುಂಕುಮವನ್ನು ಹಚ್ಚಿ, ಹೂವನ್ನು ಮುಡಿಸಿ ಬಳೆ ಒಡೆಸುವ ಶಾಸ್ತ್ರವನ್ನು ನಡೆಸಿಕೊಡುತ್ತಾರೆ. ನಂತರ ಮಗನಿಂದ ಮಡಿಕೆ ಒಡೆಸುವ ಶಾಸ್ತ್ರವನ್ನು ಮಾಡಿಸಿ ಎಲ್ಲರು ಸಮಾಧಿಯ ಪೂಜೆ ಮಾಡುತ್ತಾರೆ. ತಿಥಿಯಲ್ಲಿ ಮಾಂಸದೂಟವನ್ನು ಮಾಡಿ ಬಂಧು-ಬಳಗದವರಿಗೆ ಊಟಕ್ಕೆ ಇಡುತ್ತಾರೆ. ಮಾರನೆಯ ದಿನ ಸತ್ತವ್ಯಕ್ತಿಯ ಮನೆಯವರು ಮತ್ತು ಕೆಲವೇ ಹತ್ತಿರದ ಬಂಧುಗಳು ಸೇರಿ ಹರಿಯುವ ನೀರಿನಲ್ಲಿ ತೆಪ್ಪ ಬಿಡುವ ಪದ್ಧತಿಯಿದೆ. ಬಾಳೆಯ ದಿಂಡಿನಿಂದ ತೆಪ್ಪವನ್ನು ಕಟ್ಟುತ್ತಾರೆ. ಹಿಟ್ಟಿನ ಗೊಂಬೆಯನ್ನು ಮಾಡಿ ಅದರ ಮೇಲೆ ಮಲಗಿಸಿ, ಹಸಿ ಅಕ್ಕಿ ತಂಬಿಟ್ಟು ಎಲೆ ಅಡಿಕೆಯನ್ನು ಜೊತೆಗಿಡುತ್ತಾರೆ. ನೀರಿನ ದಡದಲ್ಲಿ ಸಗಣಿ ಮತ್ತು ಗರಿಕೆಯಿಂದ ಮಾಡಿದ ಮೂರು ಬೆನಕವನ್ನು ಇಟ್ಟು ಗಂಗೆ ಪೂಜೆ ಮಾಡುತ್ತಾರೆ. ನಂತರ ತೆಪ್ಪವನ್ನು ನೀರಿನಲ್ಲಿ ತೇಲಿ ಬಿಡುತ್ತಾರೆ. ಬಂದಿದ್ದವರಿಗೆಲ್ಲರಿಗೂ ತಾಂಬೂಲ ಮತ್ತು ತಂಬಿಟ್ಟನ್ನು ಕೊಟ್ಟು ಕಳುಹಿಸುತ್ತಾರೆ. ಹೀಗೆ ಕೆಲವು ವೈಶಿಷ್ಟ್ಯಗಳಿಂದ ತಿಥಿಯ ಆಚರಣೆ ಜರುಗುತ್ತದೆ.

೫. ಕ್ಷೌರಿಕರ ಧಾರ್ಮಿಕ ಆಚರಣೆಗಳು (ನಯನ ಕ್ಷತ್ರಿಯರು)

೫.೧. ನಾಮಕರಣ ಪದ್ಧತಿ

ಮಗು ಹುಟ್ಟಿದ ನಂತರ ಜೋಯಿಸರಿಂದ, ಮಗು ಹುಟ್ಟಿದ ರಾಶಿ, ನಕ್ಷತ್ರಗಳನ್ನು ತಿಳಿದುಕೊಂಡು ಬರುತ್ತಾರೆ. ಯಾವ ಅಕ್ಷರದಿಂದ ಹೆಸರನ್ನು ಇಡಬೇಕೆಂದು ಕೇಳಿಕೊಂಡು ಅದೇ ಅಕ್ಷರದಿಂದ ಹೆಸರನ್ನಿಡುತ್ತಾರೆ. ಸೋದರಮಾವ ಗಂಡು ಮಗುವಿಗೆ ಉಡುದಾರವನ್ನು ಕಟ್ಟಿ ಹೆಸರಿಡುತ್ತಾನೆ. ಹೆಣ್ಣು ಮಗುವಿಗೆ ಕಿವಿಯ ಬಳಿ ಜೋರಾಗಿ ಹೇಳಿ ಹೆಸರಿಡುತ್ತಾನೆ. ಕೆಲವರು ೧೧ನೇ ದಿನಕ್ಕೆ ಸೂತಕ ಬಿಡಿಸಿ ನಾಮಕರಣ ಶಾಸ್ತ್ರ ಮಾಡಿದರೆ ಮತ್ತೆ ಕೆಲವರು ಮಗುವಿಗೆ ವರ್ಷ ತುಂಬುವುದರೊಳಗೆ ಬಂಧುಬಳಗವನ್ನೆಲ್ಲ ಕರೆದು ವಿಶೇಷ ಅಡುಗೆ ಮಾಡಿಸಿ ನಾಮಕರಣ ಮಾಡುತ್ತಾರೆ.

೫.೨. ಶವ ಸಂಸ್ಕಾರ ಪದ್ಧತಿ

ಕ್ಷೌರಿಕರ ಶವಸಂಸ್ಕಾರ ಆಚರಣೆಯಲ್ಲಿನ ಕೆಲವು ವಿಶೇಷತೆಗಳನ್ನು ಇಲ್ಲಿ ಪರಿಚಯಿಸಲಾಗಿದೆ. ಇವರಲ್ಲಿಯೂ ಹೂಳುವ ಮತ್ತು ಸುಡುವ ಪದ್ಧತಿಗಳೆರಡು ಆಚರಣೆಯಲ್ಲಿವೆ. ತಂದೆಗೆ ಹಿರಿಯ ಮಗ ಕೂಳು ಹಾಕಿದರೆ ತಾಯಿಗೆ ಕಿರಿಯ ಮಗ ಕೂಳು ಹಾಕುವುದು ಕಂಡುಬರುತ್ತದೆ. ತಿಥಿಯಲ್ಲಿ ಮಾಂಸದ ಅಡುಗೆಯನ್ನು ಮಾಡುತ್ತಾರೆ. ಇವರಲ್ಲಿ ಬೆಳಿಗ್ಗೆಯ ಕೂಳು ಹಾಗೂ ಮಧ್ಯಾಹ್ನದ ಕೂಳು ಹಾಕುವುದು ರೂಢಿಯಲ್ಲಿದೆ. ಬೆಳಿಗ್ಗೆ ೧೦ ಗಂಟೆಗೆ ತಿಂಡಿ ತಿನಿಸುಗಳು, ಹಣ್ಣು ಹಂಪಲುಗಳು, ಗಂಧದ ಕಡ್ಡಿ, ಕರ್ಪೂರ, ತೆಂಗಿನಕಾಯಿಯನ್ನು ಸಮಾಧಿಯ ಬಳಿಗೆ ತೆಗೆದುಕೊಂಡು ಹೋಗಿ – ಹತ್ತಿರದ ಸಂಬಂಧಿಕರು ಪೂಜೆಯನ್ನು ಮಾಡಿಕೊಂಡು ಬರುತ್ತಾರೆ. ಮಧ್ಯಾಹ್ನ ೧ ಗಂಟೆಯ ಸುಮಾರಿಗೆ ತಿಥಿಗೆ ಬಂದಿರುವ ಬಂಧುಬಳಗದೊಂದಿಗೆ ಸಮಾಧಿಯ ಬಳಿಗೆ ಹೋಗುತ್ತಾರೆ. ಮಾಂಸದ ಸಾರು, ಅನ್ನ, ಮುದ್ದೆ, ಬೇಯಿಸಿದ ಕೋಳಿ ಮೊಟ್ಟೆ, ತಿಂಡಿ ತಿನಿಸುಗಳನ್ನು ಇಟ್ಟು ಪೂಜೆ ಮಾಡುತ್ತಾರೆ. ನಂತರ ಮನೆಗೆ ಬಂದು ದೇವರ ಕೋಣೆಯಲ್ಲಿ ಎಡೆಯಿಟ್ಟು ೧೨ ಸಾರಿ ಮಂಗಳಾರತಿ ಬೆಳಗುತ್ತಾರೆ. ತಿಥಿಗೆ ಬಂದಿರುವ ಬಂಧುಬಾಂಧವರಿಗೆ ಮಾಂಸದ ಊಟವನ್ನು ಮಾಡಿಸುತ್ತಾರೆ. ತಿಥಿಯಾದ ಬೆಳಿಗ್ಗೆ ತಿಂಗಳ ತಿಥಿ ಮಾಡುವಾಗಲು ಕೋಳಿ ಮಾಂಸವನ್ನು ತಂದು ಅಡಿಗೆ ಮಾಡಿ ಎಡೆ ಇಟ್ಟು, ದೇವರನ್ನು ಪೂಜಿಸಿ ಉಳಿದುಕೊಂಡಿರುವ ಬಂಧು ಬಳಗಕ್ಕೆ ಊಟ ಬಡಿಸುತ್ತಾರೆ. ಹೀಗೆ ಕ್ಷೌರಿಕರು ತಮ್ಮ ಸಂಪ್ರದಾಯಗಳನ್ನು ಇಂದಿಗೂ ಮುಂದುವರೆಸಿಕೊಂಡು ಬರುತ್ತಿದ್ದಾರೆ.

೬. ವಿಶ್ವಕರ್ಮರ ಧಾರ್ಮಿಕ ಆಚರಣೆಗಳು

ಸಮಾಜದ ನಿರ್ಮಾಣ ಮತ್ತು ಮುನ್ನೆಡೆಸುವಿಕೆಯಲ್ಲಿ ಜಾತಿಗಳು ಪ್ರಮುಖ ಪಾತ್ರವಹಿಸುತ್ತವೆ. ಒಂದು ಊರು ಎನಿಸಿಕೊಳ್ಳಬೇಕಾದರೆ ಹಲವು ಜಾತಿ ಜನರ ನೆಲೆಸುವಿಕೆ ಮುಖ್ಯ. ಸಮಾಜವೊಂದರ ಅಭಿವೃದ್ಧಿಗೆ ಜಾತಿಗಳು ಒಂದಕ್ಕೊಂದು ಪೂರಕವಾಗಿರುತ್ತವೆ. ಇಂತಹ ಜಾತಿಗಳಲ್ಲಿ ವಿಶ್ವಕರ್ಮ ಜಾತಿಯ ಜನರ ಸಂಪ್ರದಾಯಗಳು ವಿಶಿಷ್ಟವಾಗಿರುತ್ತವೆ.

೬.೧. ವಿಶ್ವಕರ್ಮದ ಮೂಲ

'ವಿಶ್ವಕರ್ಮ' ಎಂಬ ಪದದ ನಿಷ್ಪತ್ತಿಯನ್ನು ನೋಡಿದರೆ 'ವಿಶ್ವದ ಎಲ್ಲಾ ಕ್ರಿಯೆಯ ಮೂಲ' ಎಂಬರ್ಥ ಕಾಣಸಿಗುತ್ತದೆ. ವಿಶ್ವದ + ಕರ್ಮ = ವಿಶ್ವಕರ್ಮ. ವಿಶ್ವ = ಪ್ರಪಂಚ, ಜೀವಿಗಳ ತಾಣ, ಜಗತ್ತು, ಜೀವಜಗತ್ತು ಮೊದಲಾದ ಅರ್ಥಗಳಿವೆ. ಕರ್ಮ–ಕ್ರಿಯೆ, ಕೆಲಸ, ಸೃಷ್ಟಿ, ನಿರ್ಮಿತಿ ಎಂಬರ್ಥಗಳಿವೆ. ವಿಶ್ವಕರ್ಮನಿಂದಲೆ ವಿಶ್ವದ ಸೃಷ್ಟಿ ಎನ್ನಲಾಗಿದೆ. 'ವಿಶ್ವದ ಸೃಜನೆ ರಕ್ಷಣೆ ಆಗು–ಹೋಗುಗಳು ಯಾವನಿಂದ ಆಗುವವೋ ಅವನು ವಿಶ್ವಕರ್ಮನೆಂದು ಪಾಣಿನಿಯ 'ಅಷ್ಟಾಧ್ಯಾಯಿ'ಯಲ್ಲಿ ವರ್ಣಿಸಿದ್ದಾನೆ.

ವಿಶ್ವಕರ್ಮನೆ ಸೃಷ್ಟಿಯ ಮೂಲ ಪುರುಷ. ಈತನಿಗೆ ಪಂಚಮುಖಗಳು, ದಶಭುಜ, ದಶಬಾಹುಗಳು ಇವೆ ಎಂಬ ಉಲ್ಲೇಖ ಪುರಾಣಗಳಲ್ಲಿ ದೊರೆಯುತ್ತದೆ. ಲೋಕ ಸೃಷ್ಟಿಯ ಬ್ರಹ್ಮ ಇವನಾಗಿರುವುದರಿಂದ ಈ ಕಲ್ಪನೆ ಬಂದಿದೆ. ವಿಶ್ವಕರ್ಮನ ಪಂಚಮುಖಗಳಿಂದ ಮನು, ಮಯ, ತ್ವಷ್ಟ, ಶಿಲ್ಪಿ ಮತ್ತು ವಿಶ್ವಜ್ಞ ಎಂಬ ಐದು ಗೋತ್ರದ ಕೆಲಸಗಾರರು ಹುಟ್ಟಿ ಬಂದರು ಇವರನ್ನು ಶಿವ, ವಿಷ್ಣು, ಬ್ರಹ್ಮ, ಇಂದ್ರ, ಸೂರ್ಯ ಎಂದು ಕರೆಯುತ್ತಾರೆ.

* ಶಿವಮಯನಾದ ಕಮ್ಮಾರ (ಕಬ್ಬಿಣದ ಕೆಲಸ ಮಾಡುವವನು).
* ವಿಷ್ಣುಮಯನಾದ ಬಡಿಗ (ಮರದ ಕೆಲಸ)
* ಬ್ರಹ್ಮತ್ವಷ್ಟನಾದ ಕಂಚುಗಾರ (ಮಿಶ್ರಲೋಹದ ಕೆಲಸ ಮಾಡುವವನು ಮಿಶ್ರಲೋಹಗಳೆಂದರೆ ತಾಮ್ರ, ಸತು, ತವರ ಮತ್ತು ಪಂಚಲೋಹಗಳು)
* ಇಂದ್ರ ಶಿಲ್ಪಿಯಾದ ಶಿಲ್ಪಿ (ಕಲ್ಲು ಮತ್ತು ಮರ)
* ಸೂರ್ಯನೇ ವಿಶ್ವಜ್ಞನಾದ ಅಕ್ಕಸಾಲಿಗ (ಸುವರ್ಣಕಾರ).

ಇವರನ್ನು ಪಾಂಚಾಳರು ಎಂದೂ ಕರೆಯುತ್ತಾರೆ. ವಿಶ್ವಕರ್ಮನೆ ತನ್ನ ಮಕ್ಕಳಿಗೆ ಪಂಚವಿದ್ಯೆಗಳನ್ನು ಬೋಧಿಸಿ ಲೋಕಕಲ್ಯಾಣಕ್ಕೆ ಸಿದ್ಧಗೊಳಿಸಿದ ಎಂದು ತಿಳಿದುಬರುತ್ತದೆ. ಇವರಲ್ಲಿ ಸಾನಗಗೋತ್ರ, ಸನಾತನ ಗೋತ್ರ, ಅಹುಭವನಸ ಗೋತ್ರ, ಪ್ರತ್ನಸ ಗೋತ್ರ, ಸುವರ್ಣ ಗೋತ್ರಗಳಿವೆ. ಸ್ವಗೋತ್ರಗಳ ವೈವಾಹಿಕ ಸಂಬಂಧ ನಿಷಿದ್ಧವಾಗಿರುತ್ತದೆ. ವಿಶ್ವಕರ್ಮರಲ್ಲಿ ವೃತ್ತಿ ಭಿನ್ನತೆಗಳಿದ್ದರೂ ಸಂಪ್ರದಾಯದ ಆಚರಣೆಗಳು ಒಂದೇ ಆಗಿವೆ. ಇವುಗಳಲ್ಲಿ ವಿಶ್ವಕರ್ಮದ ಸಂಪ್ರದಾಯಗಳನ್ನು ಗಮನಿಸಿದರೆ ದ್ರಾವಿಡರ ಸಂಸ್ಕೃತಿಯಾಗಿರದೆ ಆರ್ಯಸಂಸ್ಕೃತಿಯಾಗಿದೆ. ಈ ಕಾರಣದಿಂದಾಗಿಯೇ ವಿಶ್ವಕರ್ಮರು ಕನ್ನಡ ನಾಡಿನ ಮೂಲ ನಿವಾಸಿಗಳಾಗಿರದೆ ಹೊರಗಿನಿಂದ ಬಂದವರಾಗಿರಬೇಕು ಎಂಬ ಭಾವನೆ ಬರುವುದು ನಿಜವಾದರು, ಆ ಭಾವನೆಗಳಿಗೆ ತಕ್ಕ ಆಧಾರಗಳು ಸಿಗುವುದಿಲ್ಲ. ಊರಿಗೊಬ್ಬನಾದರೂ ಓಜರು ಇರಲೇಬೇಕು. ಇವನನ್ನು ಹೊರಗಿನಿಂದ ಕರೆದು ತರಲು ಸಾಧ್ಯವಿಲ್ಲ. ಈ ಕಾರಣದಿಂದ ವಿಶ್ವಕರ್ಮರು ಇಲ್ಲಿಯ ಮೂಲ ನಿವಾಸಿಗಳಾಗಿರಲೇಬೇಕು.

ವಿಶ್ವಕರ್ಮರನ್ನು ಹೀಗೆಲ್ಲಾ ಕರೆಯುತ್ತಾರೆ. ಆಚಾರಿ, ಬಡಗಿ, ಬಡಿಗೇರ, ಕಂಬಾರ, ಪತ್ತಾರ, ಶಿಲ್ಪಿ, ಚಿನಿವಾರ, ಅಕ್ಕಸಾಲಿ, ಕಮ್ಮಾರ. ಸರ್ಕಾರವು ಸರ್ಕಾರಿ ಸವಲತ್ತುಗಳನ್ನು ನೀಡುವ ಸಲುವಾಗಿ ಈ ವಿಶ್ವಕರ್ಮ ಜನಾಂಗವನ್ನು ಎರಡು ಎ ಪ್ರವರ್ಗದಡಿಯಲ್ಲಿ ಸೇರಿಸಿದೆ. ಐದು ವೃತ್ತಿಗಳನ್ನು ನಿರ್ವಹಿಸುವ ಏಕೈಕ ಜಾತಿ ವಿಶ್ವಕರ್ಮವಾಗಿದ್ದು ಈ ಮೂಲಕ ಸಮಾಜದ ಸುಸ್ಥಿರ ನಿರ್ವಹಣೆಗೆ ಅನುವು ಮಾಡಿಕೊಡುತ್ತಿದೆ. ಇಂತಹ ವಿಶ್ವಕರ್ಮ ಜಾತಿಯ ಸಂಪ್ರದಾಯಗಳು ತುಸು ಭಿನ್ನತೆಯಿಂದ ಕೂಡಿವೆ.

ಪ್ರಮುಖ ಸಂಪ್ರದಾಯಗಳೆಂದರೆ

೧) ಜನನ ಪೂರ್ವ ಸಂಸ್ಕಾರ

೨) ಜನನ ನಂತರ ಸಂಸ್ಕಾರ (ನಾಮಕರಣವೂ ಸೇರಿದಂತೆ)

೩) ವಿವಾಹ ಸಂಪ್ರದಾಯ

೪) ಶವ ಸಂಸ್ಕಾರ

೬.೨. ನಾಮಕರಣ ಪದ್ಧತಿ

ಅ) ಜನನ ಪೂರ್ವ ಸಂಸ್ಕಾರ

ಜನನ ಸಂಸ್ಕಾರಕ್ಕೆ ಮೊದಲು ತಾಯಿಗೆ ಸೀಮಂತ ಸಂಸ್ಕಾರ ನಡೆಯುತ್ತದೆ. 'ಸೀಮಂತ' ಸಂಪ್ರದಾಯದ ಉದ್ದೇಶವೆಂದರೆ ಗರ್ಭಿಣಿ ಸ್ತ್ರೀ ದೈಹಿಕವಾಗಿ ಮತ್ತು ಮಾನಸಿಕವಾಗಿ ಆರೋಗ್ಯವಾಗಿರಬೇಕೆಂಬುದು. ಈ ಕಾರಣದಿಂದ ಅವಳ ಮನಸ್ಸಂತೋಷಪಡಿಸುವ ಸಂಪ್ರದಾಯವೇ 'ಸೀಮಂತ'. ಗರ್ಭಿಣಿ ತಾಯಿಗೆ ಏಳು ಅಥವಾ ಒಂಬತ್ತನೇ ತಿಂಗಳಿನಲ್ಲಿ ಸೀಮಂತ ನಡೆಯುತ್ತದೆ. ಇದು ಗಂಡನ ಮನೆಯಲ್ಲೆ ಆಚರಿಸುವ ಸಂಪ್ರದಾಯವಾಗಿದೆ. ಗಂಡನ ಮನೆಯವರು ಸೀಮಂತಕ್ಕೆ ಹೊಸ ಹಸಿರು ಸೀರೆ, ಹಸಿರು ಕುಪ್ಪಸಗಳನ್ನು ಉಡಿಸುತ್ತಾರೆ. ಸಿಹಿ ತಿಂಡಿ, ಬಾಳೆಹಣ್ಣು, ಕೊಬ್ಬರಿ, ಇಲ್ಲಿ ಪ್ರಮುಖವಾಗಿರುತ್ತವೆ. ಪುರೋಹಿತರ ಮಾರ್ಗದರ್ಶನದಲ್ಲಿ ಈ ಸಂಸ್ಕಾರ ನಡೆಯುತ್ತದೆ.

ಆಭರಣಗಳನ್ನು ತೊಡಿಸಿ ಶೃಂಗಾರ ಮಾಡಿ ಹಸೆಮಣೆಯ ಮೇಲೆ ಕೂರಿಸುತ್ತಾರೆ. ಅವಳ ಮುಂದೆ ಹಣ್ಣು, ಹಂಪಲು, ಕಳಸ, ಕನ್ನಡಿಗಳನ್ನು ಇರಿಸುತ್ತಾರೆ. ಕಾಯಿ, ಎಲೆ, ಅಡಿಕೆ, ಧಾನ್ಯ, ಅರಿಶಿಣವನ್ನು ಐದು ಜನ ಮುತ್ತೈದೆಯರು ಬಸುರಿ ಹೆಣ್ಣಿನ ಉಡಿ ತುಂಬಿ ಸೋಭಾನೆ ಹಾಡುತ್ತಾರೆ. ಇಲ್ಲಿ ಸಂತಾನ ಶಾಸ್ತ್ರ ಹಾಗೂ ಆರೋಗ್ಯ ಶಾಸ್ತ್ರಕ್ಕೆ ಸಂಬಂಧಿಸಿದ ಹಲವಾರು ಅಂಶಗಳನ್ನು ಕಾಣುತ್ತೇವೆ. ಗರ್ಭಿಣಿ ಸ್ತ್ರೀಯ ಮನಸ್ಸು ಸಂತೋಷಗೊಳಿಸಿ ಅವಳ ಬಯಕೆಗಳನ್ನು ತೀರಿಸುವುದು ಗಂಡ–ಹೆಂಡತಿಯರು ತಮ್ಮ ಲೈಂಗಿಕ ಚಟುವಟಿಕೆಗಳನ್ನು ನಿಯಂತ್ರಿಸಿಕೊಳ್ಳಬೇಕೆಂಬ ಆಶಯದಿಂದ ಕೂಡಿದೆ.

ಒಟ್ಟಿನಲ್ಲಿ "ದೈಹಿಕವಾಗಿ ಅತ್ಯಂತ ಸೂಕ್ಷ್ಮವಸ್ಥೆಯನ್ನು ಪಡೆಯುವ ಹಂತ ಇದಾಗಿರುವುದರಿಂದ ಈ ಸ್ಥಿತಿಯಲ್ಲಿ ಆಕೆಯನ್ನು ಆದರಿಸುವ ವಿಧಾನಗಳಲ್ಲಿ ಮನೋವೈಜ್ಞಾನಿಕ ಅಂಶಗಳು ಅಡಗಿವೆ."[೨] ಆಕೆಯ ಬಯಕೆಗಳನ್ನು ಈಡೇರಿಸುವುದರ ಮೂಲಕ ಫಲವಂತಿಕೆಯನ್ನು ಕಾಪಾಡುವ ಕೆಲಸ ಮಾಡಲಾಗುವುದು ಹಾಗೂ ಆಕೆಯು ಸದಾ ಸಂಪ್ರೀತಳಾಗಿರುವಂತೆ ಮಾಡುವುದು, ಯಾವ ಕಾರಣದಿಂದಲೂ ಆಕೆ ಮಾನಸಿಕವಾಗಿ ದೈಹಿಕವಾಗಿ ನೊಂದುಕೊಳ್ಳದಂತೆ ನೋಡಿಕೊಳ್ಳುವುದು ಎಲ್ಲಾ ಜಾತಿಯವರಲ್ಲಿ ಕಂಡುಬರುವಂತೆ ವಿಶ್ವಕರ್ಮ ಜನಾಂಗದವರಲ್ಲೂ ಕಂಡುಬರುವ ಸಾಮಾನ್ಯ ಅಂಶವಾಗಿದೆ.

ಆ) ಜನನ ನಂತರದ ಸಂಸ್ಕಾರ (ನಾಮಕರಣವು ಸೇರಿದಂತೆ)

ಜನನ ಸಂಸ್ಕಾರ ಬದುಕಿನಲ್ಲಿ ಪ್ರಮುಖವಾದುದ್ದು. ಅಳುತ್ತಾ ಈ ಲೋಕಕ್ಕೆ ಬರುವ ಮಗುವನ್ನು ನಗುತ್ತಾ ಸ್ವಾಗತಿಸುವ ಈ ಸನ್ನಿವೇಶ ಅತ್ಯಂತ ಸಂತೋಷದಾಯಕವಾದದ್ದು. ವಂಶವಾಹಿನಿಯಾಗಿ ಆಗಮಿಸುವ ಮಗುವನ್ನು ಜತನದಿಂದ ಕಾಪಾಡುವ ಸಲುವಾಗಿ ಜನಪದ ಸಮಾಜವು ತನ್ನದೇ ಆದ ಸಂಸ್ಕಾರಗಳನ್ನು ರೂಢಿಸಿಕೊಂಡು ಬಂದಿದೆ. ಈ ಸಂಸ್ಕಾರವನ್ನು ಇವರು ವೈದಿಕ ಸಂಸ್ಕೃತಿಯ ಪ್ರಕಾರವೇ ನಡೆಸುತ್ತಾರೆ. ಮಗು ಹುಟ್ಟಿದ ದಿನದಿಂದಲೆ ಸೂತಕ ಪ್ರಾರಂಭವಾಗುತ್ತದೆ. ಮಗು ಹುಟ್ಟಿದ ಹನ್ನೊಂದನೆ ದಿನ ಸೂತಕವನ್ನು ಕಳೆಯಲಾಗುತ್ತದೆ. (ಹುಟ್ಟಿದ ಸೂತಕ, ಸತ್ತ ಸೂತಕಗಳು ಇವರಲ್ಲಿ ಪ್ರಮುಖವಾದವು.)

ಸೂತಕ ಇರುವ ಸಮಯದಲ್ಲಿ ಯಾವುದೇ ಶುಭ ಸಮಾರಂಭ ಹಾಗೂ ದೇವರ ಪೂಜೆಗಳನ್ನು ಆಚರಿಸುವಂತಿಲ್ಲ. ಈ ಸೂತಕಗಳನ್ನು ಗರ್ಭಿಣಿಯ ತವರು ಮನೆಗಲ್ಲದೆ ಅವರ ದಾಯಾದಿಗಳಿಗೂ ಅನ್ವಯಿಸುತ್ತದೆ. ಆದರೆ ಗಂಡನ ಮನೆಗೆ ಅನ್ವಯಿಸುವುದಿಲ್ಲ.

ವಿಶ್ವಕರ್ಮರಲ್ಲೂ ಹೆಣ್ಣು ಮಗುವಿಗಿಂತ ಗಂಡು ಮಗು ಹುಟ್ಟಿದರೆ ಹೆಚ್ಚು ಖುಷಿಪಡುತ್ತಾರೆ. ಮಗು ಹುಟ್ಟಿದ ಹನ್ನೊಂದನೆಯ ದಿನದ ಹೊತ್ತಿಗೆ ವಾಸಿಸುವ ಮನೆಗೆ ಸುಣ್ಣ ಬಣ್ಣ ಬಳಿದು ಮನೆಯ ಎಲ್ಲಾ ವಸ್ತುಗಳನ್ನು ಸ್ವಚ್ಛಗೊಳಿಸಿ ಹನ್ನೊಂದನೆಯ ದಿನದಂದು ಪುರೋಹಿತರು ಬಂದು ಪಂಚಗವ್ಯವನ್ನು ಪ್ರೋಕ್ಷಿಸಿ ಶುದ್ಧಗೊಳಿಸಿದ ನಂತರ ಮಗು ಹುಟ್ಟಿದ ಸಮಯ, ದಿನವನ್ನು ನೋಡಿ ಮಗುವಿಗೆ ನಾಮಕರಣವನ್ನು ಮಾಡುತ್ತಾರೆ. ನಾಮಕರಣದ ಸಮಯದಲ್ಲಿ ತಟ್ಟೆಯಲ್ಲಿ ಅಕ್ಕಿಯನ್ನು ತುಂಬಿ ಹೆಸರನ್ನು ಬರೆಯುತ್ತಾರೆ. ತಂದೆಯು ಮಗುವಿನ ಕಿವಿಯಲ್ಲಿ ಮೂರು ಭಾರಿ ಹೆಸರನ್ನು ಹೇಳುತ್ತಾನೆ. ಜೇನಿನಲ್ಲಿ ಚಿನ್ನ ಮತ್ತು ಬಜೆಯನ್ನು ತೇಯ್ದು ಮಗುವಿಗೆ ನೆಕ್ಕಿಸುತ್ತಾರೆ. ಮಗುವಿಗೆ ಹೆಸರಿಡುವಾಗ ಕುಲದೇವರ, ಗ್ರಾಮದೇವರ ಇಲ್ಲವೆ ಗುರುಹಿರಿಯರ ಹೆಸರುಗಳನ್ನು ಅಥವಾ ತಮಗೆ ಪ್ರಿಯವಾದ ಹೆಸರುಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಹೆಸರಿನ ಮುಂದೆ. ಆಚಾರ್ಯ, ಆಚಾರಿ, ಚಾರಿ ಎಂಬ ಉತ್ತರ ಪ್ರತ್ಯಯಗಳನ್ನು ಸೇರಿಸುತ್ತಾರೆ. ನಾಗಪ್ಪಾಚಾರ್, ಸಣ್ಣ ಸೋಮಾಚಾರಿ, ದೊಡ್ಡ ಸುಬ್ಬಾಚಾರ್ಯ ಮೊದಲಾದಂತೆ. ಆದರೆ ಇತ್ತೀಚೆಗೆ ಜಾತಿ ಸೂತಕ ಬೇಡ ಎಂದು ಕೈಬಿಡಲಾಗುತ್ತಿದೆ. ಅದೇ ದಿನ ತೊಟ್ಟಿಲಿಗೆ ಹಾಕುವ ಶಾಸ್ತ್ರವನ್ನು ಮಾಡುತ್ತಾರೆ. ತೊಟ್ಟಿಲನ್ನು ಹೂವು. ಹೊಸ ಬಟ್ಟೆಗಳಿಂದ ಶೃಂಗರಿಸಿ ಮಗುವಿಗೂ ಹೊಸ ಬಟ್ಟೆಗಳನ್ನು ತೊಡಿಸಿ ತೊಟ್ಟಿಲಿಗೆ ಹಾಕುತ್ತಾರೆ. ಮತ್ತು ಬಂಧುಗಳಿಗೆ ಸಿಹಿ ಊಟ ಹಾಕಿಸುತ್ತಾರೆ.

ಬಾಣಂತಿ, ಮಗು ನಲವತ್ತು ದಿನಗಳವರೆಗೆ ಕಡಿಮೆ ಬೆಳಕಿರುವ ಕೋಣೆಯಲ್ಲೇ ಇರುತ್ತಾರೆ. ಅಡಿಗೆ ಮನೆ ಮತ್ತು ದೇವರ ಮನೆಗೆ ಹೋಗುವಂತಿಲ್ಲ. ಬಾಣಂತಿ ಪಥ್ಯವನ್ನು ಅನುಸರಿಸಬೇಕು. ನಲವತ್ತು ದಿನಗಳ ನಂತರ "ಗಂಗೆ ತರುವುದರ"* ಮೂಲಕ ಅಡಿಗೆ ಮನೆ ಮತ್ತು ದೇವರ ಮನೆಗಳಿಗೆ ಪ್ರವೇಶ ದೊರೆಯುತ್ತದೆ. ಹೆರಿಗೆಯಾದ ಮೂರು, ಐದು, ಅಥವಾ ಒಂಬತ್ತನೇ

ತಿಂಗಳುಗಳಲ್ಲಿ ಯಾವುದಾದರೂ ಒಂದು ಶುಭ ದಿನ ಗಂಡನ ಮನೆಗೆ ಕರೆದುಕೊಂಡು ಹೋಗುತ್ತಾರೆ. ಗಂಡನ ಮನೆಗೆ ಕಳುಹಿಸುವಾಗ ತವರು ಮನೆಯವರು ತಮ್ಮ ಮಗಳಿಗೆ ಹೊಸ ಸೀರೆ ಮತ್ತು ಕುಪ್ಪಸ ತರುತ್ತಾರೆ. ಮಗುವಿಗೂ ಹೊಸ ಬಟ್ಟೆಗಳನ್ನು, ಕಾಲ್ಗೆಜ್ಜೆ, ಬೆಳ್ಳಿ ಉಡುದಾರ, ಕಿವಿಗೆ 'ಚಿನ್ನದ ಕೊಂಡಿಲು'*, ತೊಟ್ಟಿಲುಗಳನ್ನು ತರುತ್ತಾರೆ. ಮಗುವಿಗಾಗಿ ಒಂದು ಹಸುವನ್ನೋ ಎಮ್ಮೆಯನ್ನೋ ಹೊಡೆದು ಕಳುಹಿಸುವುದು ರೂಢಿ. (ಇತ್ತೀಚಿಗೆ ಹಸು ಎಮ್ಮೆ ಹೊಡೆಯುವುದು ಕಂಡುಬರುತ್ತಿಲ್ಲ.)

ಈ ಸಂದರ್ಭವನ್ನು ವಿವರಿಸುವ ಒಂದು ಜನಪದ ತ್ರಿಪದಿ.

ತೊಟ್ಟಿಲು ಹೊತ್ಕೊಂಡು ತೌರ್ಬಣ್ಣ
ಉಟ್ಕೊಂಡು ಅಪ್ಪಕೊಟ್ಟೆಮ್ಮ ಹೊಡ್ಕೊಂಡು ತಂಗ್ಯಮ್ಮ
ತೌರೂರ ತಿಟ್ಹತ್ತಿ ತಿರುಗಿ ನೋಡ್ಯಾಳ.

ನಂತರ ಮಗುವಿಗೆ ಐದನೇ ವರ್ಷದ ಒಳಗೆ ಚೌಲ* ಬಿಡಿಸುತ್ತಾರೆ. ಎಂಟನೇ ವರ್ಷದ ನಂತರ ಬೆಸಸಂಖ್ಯೆಯ ವಯಸ್ಸಿನಲ್ಲಿ ಉಪನಯನ ಮಾಡುತ್ತಾರೆ. ಉಪನಯನದಲ್ಲಿ ಒಂಟಿ ಎಳೆಗಳ ಯಜ್ಞೋಪವೀತ ಧಾರಣೆಯಾಗುತ್ತದೆ. ದಿನಂಪ್ರತಿ ಕೆಲವು ನಿಯಮಗಳನ್ನು ಪಾಲಿಸಬೇಕು. ಬೆಳಿಗ್ಗೆ ಬೇಗ ಏಳುವುದು, ದಿನಂಪ್ರತಿ ಸ್ನಾನ, "ಗಾಯತ್ರಿ ಮಂತ್ರ"* ಪಠಣ, ದಿನಕ್ಕೆರಡು ಭಾರಿ ಸಂಧ್ಯಾವಂದನೆ, ಎಂಜಲು ಮತ್ತು ಹಳಸಿದ ಪದಾರ್ಥಗಳನ್ನು ತಿನ್ನಬಾರದು, ಸಾತ್ವಿಕ ಆಹಾರಗಳನ್ನೇ ಸೇವಿಸುವುದು, ಹಗಲಿನ ನಿದ್ದೆ ನಿಷೇಧ ಇತ್ಯಾದಿ.

೬.೩. ವಿವಾಹ ಸಂಪ್ರದಾಯ

ಭಾರತೀಯ ಹಿಂದೂ ಸಮಾಜದಲ್ಲಿ ವಿವಾಹವು ಒಂದು ಪವಿತ್ರವಾದ ಹಾಗೂ ಬಹುಮುಖ್ಯವಾದ ಸಂಪ್ರದಾಯವಾಗಿದೆ. ಅದು ಕೇವಲ ಗಂಡು ಹೆಣ್ಣು ನಡುವಿನ ಕರಾರು ಮಾತ್ರವಾಗಿರದೆ ಸಾಮಾಜಿಕ, ಭಾವಾನಾತ್ಮಕ ಸ್ವರೂಪದ್ದಾಗಿದೆ. ಸಾಮಾನ್ಯವಾಗಿ ಎಲ್ಲಾ ಸಮಾಜಗಳಲ್ಲಿಯೂ ಎಲ್ಲಾ ಕಾಲದಲ್ಲಿಯೂ ಮದುವೆಗೆ ಸಂಬಂಧಪಟ್ಟ ವೈವಿಧ್ಯಮಯವಾದ ಆಚರಣೆಗಳನ್ನು ಕಾಣುತ್ತೇವೆ. ಎಲ್ಲಾ ಸಮಾಜಗಳಲ್ಲಿಯೂ ಮದುವೆಯ ಆಶಯ ಒಂದೇ ರೀತಿಯದ್ದಾಗಿದ್ದರೂ ಅವುಗಳ ಆಚರಣೆಯಲ್ಲಿ ವಿವಿಧ ಸಾಮಾಜಿಕ ಜಾತಿ ವರ್ಗಗಳಲ್ಲಿ ಅನೇಕ ವ್ಯತ್ಯಾಸಗಳನ್ನು ಕಾಣುತ್ತೇವೆ. ಅದರಂತೆ ಹಿಂದೂ ಸಮಾಜದಲ್ಲಿನ ವಿಶ್ವಕರ್ಮ ಜಾತಿಯಲ್ಲಿ ಕೆಲವು ವ್ಯತ್ಯಾಸಗಳನ್ನು ಕಾಣುತ್ತೇವೆ.

ವಿಶ್ವಕರ್ಮ ಜಾತಿಯವರ ವಿವಾಹ ಸಂಪ್ರದಾಯದಲ್ಲಿ ಮುಖ್ಯವಾದ ಸಂಪ್ರದಾಯಗಳೆಂದರೆ:

- ಹೆಣ್ಣು ನೋಡುವ ಶಾಸ್ತ್ರ
- ನಿಶ್ಚಿತಾರ್ಥ

- ಸ್ಥಂಭ ಮುಹೂರ್ತ
- ಧಾರಾಮುಹೂರ್ತ

ಅ) ಹೆಣ್ಣು ನೋಡುವ ಶಾಸ್ತ್ರ

ವಿಶ್ವಕರ್ಮ ಜಾತಿಯವರಲ್ಲಿ ವೈದಿಕ ಪದ್ಧತಿಗೆ ಅನುಗುಣವಾಗಿಯೇ ಎಲ್ಲಾ ವಿವಾಹ ಸಂಪ್ರದಾಯಗಳು ನಡೆಯುತ್ತವೆ. ವರನ ಕಡೆಯವರೇ ವಧುವನ್ನು ಅನ್ವೇಷಣೆ ಮಾಡಿ ಹಿರಿಯರ ಮೂಲಕ ವಧುವಿನ ತಂದೆ ತಾಯಿಗಳ ಮುಂದೆ ವಿವಾಹದ ಪ್ರಸ್ಥಾಪವನ್ನು ಮಾಡುತ್ತಾರೆ. ಜಾತಕಗಳಲ್ಲಿ ಸಾಮ್ಯತೆಯನ್ನು ಗುರುತಿಸಲು ವಧು-ವರರ ಹುಟ್ಟು, ಸಮಯ, ನಕ್ಷತ್ರ, ಇತ್ಯಾದಿಗಳ ಹಿನ್ನೆಲೆಯಲ್ಲಿ ಗಂಡು ಹೆಣ್ಣಿನ ಸಂಬಂಧದ ತಾಳಿಕೆ-ಬಾಳಿಕೆಗಳನ್ನು ಗ್ರಹಿಸಲಾಗುತ್ತದೆ. ಹನ್ನೆರಡು ಸಾಂಕೇತಿಕ ಸಂಬಂಧದ ಕೂಟವನ್ನು ತಾಳೆ ಹಾಕುವುದರ ಮೂಲಕ ಪರಿಣಿತರು ಗಂಡು ಹೆಣ್ಣಿನ ನಿರ್ದಿಷ್ಟ ಸಂಬಂಧವು ಬೇಕೋ ಬೇಡವೊ ಎಂದು ನಿರ್ಧರಿಸುತ್ತಾರೆ. ಮತ್ತು ಗಂಡು ಹೆಣ್ಣಿನ ಸಂಬಂಧದ ಹಿನ್ನೆಲೆಯಲ್ಲಿ ಕೌಟುಂಬಿಕ ಸಾಮರಸ್ಯ, ಸುಖ, ಸಂತೋಷ, ಮಕ್ಕಳ ಸಂತತಿ ಪರಸ್ಪರ ಸಾಮರಸ್ಯ ಪ್ರೀತಿ ಹಾಗೂ ಅನುಸರಣೆ ಮತ್ತು ಲೈಂಗಿಕ ಸಾಮರಸ್ಯಗಳನ್ನು ಕುರಿತು ಜಾತಕದ ಲೆಕ್ಕಚಾರವೂ ಖಚಿತ ಮಾಹಿತಿಯನ್ನು ನೀಡುತ್ತದೆ ಎಂದು ಭಾವಿಸಲಾಗಿದೆ. ಜಾತಕ ಕೂಡಿಬಂದಲ್ಲಿ ಹುಡುಗನ ಮತ್ತು ಹುಡುಗಿಯ ಹಿರಿಯರು ಪರಸ್ಪರ ಕುಟುಂಬದ ಆರ್ಥಿಕ, ಸಾಮಾಜಿಕ, ಧಾರ್ಮಿಕ ಹಾಗೂ ಬೌದ್ಧಿಕ ಮಟ್ಟವನ್ನು, ಹಿನ್ನೆಲೆಯನ್ನು ಪರಿಶೀಲಿಸುತ್ತಾರೆ. ಇದು ತೃಪ್ತಿಕರವೆನಿಸಿದಲ್ಲಿ ಹುಡುಗ-ಹುಡುಗಿ ಒಪ್ಪಿದಲ್ಲಿ ನಿಶ್ಚಿತಕಾರ್ಯಕ್ಕೆ ದಿನಾಂಕವನ್ನು ಗೊತ್ತು ಮಾಡುತ್ತಾರೆ ಮತ್ತು ವರೋಪಚಾರ ಒಡವೆ-ವಸ್ತ್ರ ಇನ್ನಿತರೆ ಉಡುಗೊರೆಗಳ ಬಗ್ಗೆ ಪರಸ್ಪರ ಮಾತುಕತೆ ಆಡುತ್ತಾರೆ.

ಆ) ನಿಶ್ಚಿತಾರ್ಥ

ಹೆಣ್ಣು ನೋಡುವ ಕಾರ್ಯ ಮುಗಿದ ಮೇಲೆ ನಿಶ್ಚಿತಾರ್ಥ ಕಾರ್ಯವನ್ನು ಇಟ್ಟುಕೊಳ್ಳುತ್ತಾರೆ. ಈ ಸಂಪ್ರದಾಯವನ್ನು ಹೆಣ್ಣಿನ ಮನೆಯಲ್ಲೆ ಮಾಡುತ್ತಾರೆ. ಆ ದಿನಕ್ಕೆ ಗಂಡಿನ ಕಡೆಯವರು ಹೆಣ್ಣಿಗೆ ಬೇಕಾದ ಸೀರೆ, ಕುಪ್ಪಸ, ಪ್ರಸಾಧನ ಸಾಮಾಗ್ರಿಗಳು ಹೂವು ಹಣ್ಣು ಮತ್ತು ಬಂಧು-ಬಾಂಧವರೊಂದಿಗೆ ಹೆಣ್ಣಿನ ಮನೆಗೆ ಬರುತ್ತಾರೆ. ಹೆಣ್ಣು ಗಂಡುಗಳನ್ನು ಹಸೆಮಣೆಯ ಮೇಲೆ ಕೂರಿಸಿ ಐದು ಅಥವಾ ಒಂಬತ್ತು ಜನ ಮುತ್ತೈದೆಯರು ಇಬ್ಬರಿಗೂ ಸೋಗಲಕ್ಕಿ ಹೊಯ್ಯುತ್ತಾರೆ. ನಂತರ ಗಂಡು ಹೆಣ್ಣಿನ ಹಣೆಗೆ ಕುಂಕುಮವನ್ನಿಟ್ಟು ತಲೆಗೆ ಹೂವನ್ನು ಮುಡಿಸುತ್ತಾನೆ. ಇತ್ತೀಚೆಗೆ ಅನ್ಯಧರ್ಮಗಳ ಪ್ರಭಾವದಿಂದಾಗಿ ಗಂಡು ಹೆಣ್ಣಿನ ಬೆರಳಿಗೆ, ಹೆಣ್ಣು ಗಂಡಿನ ಬೆರಳಿಗೆ ಉಂಗುರ ತೊಡಿಸುವ ಸಂಪ್ರದಾಯ ಎಲ್ಲಾ ಹಿಂದೂ ಧರ್ಮದ ಜಾತಿಗಳಂತೆ ವಿಶ್ವಕರ್ಮದಲ್ಲೂ ರೂಢಿಗೆ ಬಂದಿದೆ. ಈ ಒಂದು ಶಾಸ್ತ್ರಕ್ಕೆ ಹಿಂದೆ "ಹೂ ಮುಡಿಸುವ ಶಾಸ್ತ್ರ" ಎಂದು ಕರೆಯುತ್ತಿದ್ದರು. ಇತ್ತೀಚೆಗೆ ಎಂಗೇಜ್‌ಮೆಂಟ್ (Engagement, ವಿವಾಹ ನಿಶ್ಚಯ) ಎಂದೇ ಎಲ್ಲರೂ ಹೇಳುತ್ತಾರೆ. ಕಾರ್ಯದ ಕೊನೆಯಲ್ಲಿ ಹುಡುಗ-ಹುಡುಗಿಯರೊಂದಿಗೆ ಎಲ್ಲಾ ಬಂಧು-ಬಾಂಧವರು ಫೋಟೋ ತೆಗಿಸುವ ಕಾರ್ಯ ಕೂಡ ನಡೆಯುತ್ತದೆ.

ಇ) ಸ್ಥಂಭ ಮುಹೂರ್ತ

ಸಂಸ್ಕೃತದ ಸ್ಥಂಭ ಕನ್ನಡದಲ್ಲಿ 'ಕಂಬ' ಎಂದಾಗುತ್ತದೆ. ಮದುವೆಯ ಹಿಂದಿನ ದಿನ ವಧುವಿನ ಮನೆಯ ಮುಂದೆ ಚಪ್ಪರ ಹಾಕಿ ಆ ಚಪ್ಪರದಡಿಯಲ್ಲಿ ಎಲ್ಲಾ ಸಂಪ್ರದಾಯಗಳನ್ನು ಮಾಡುತ್ತಾರೆ. ಚಪ್ಪರ ಹಾಕುವ ಮೊದಲು ಈಶಾನ್ಯ ಮೂಲೆಯ ಕಂಬಕ್ಕೆ ಪೂಜೆ ಸಲ್ಲಿಸುತ್ತಾರೆ. ಮದುವೆಯು ವಧುವಿನ ಸ್ವಗೃಹ ಅಥವಾ ಛತ್ರಗಳಲ್ಲಿ ನಡೆಯುತ್ತದೆ. ಛತ್ರಗಳಲ್ಲಿ ನಡೆದರೂ ಅಲ್ಲಿಯ ಎಲ್ಲಾ ಪಾರುಪತ್ಯಗಳನ್ನು ಹೆಣ್ಣಿನ ಕಡೆಯವರೇ ನೋಡಿಕೊಳ್ಳುತ್ತಾರೆ. ವಿವಾಹದ ಹಿಂದಿನ ದಿನ ರಾತ್ರಿ ಮದುವೆ ದಿಬ್ಬಣ ಹೆಣ್ಣಿನ ಮನೆಗೆ ಅಥವಾ ಛತ್ರಕ್ಕೆ ಬರುತ್ತದೆ. ಇವರನ್ನು ಹೆಣ್ಣಿನ ಕಡೆಯವರು ಮನೆತುಂಬಿಸಿಕೊಳ್ಳುತ್ತಾರೆ. ಹೆಣ್ಣಿನ ಅಣ್ಣ ಅಥವಾ ತಮ್ಮ ಮದುವೆ ಗಂಡಿನ ಪಾದಗಳನ್ನು ತೊಳೆದು ಪಾದಗಳಿಗೆ ಪೂಜೆ ಸಲ್ಲಿಸಿ ಉಪಚರಿಸುವರು. ಈ ಸಂದರ್ಭದಲ್ಲಿ ಹೆಣ್ಣಿನ ಕಡೆಯವರು ಕಳಸ, ಕನ್ನಡಿ ಹಿಡಿದ ಮುತ್ತೈದೆಯರು ಮಂಗಳವಾದ್ಯದೊಂದಿಗೆ ಗಂಡಿನ ಕಡೆಯವರನ್ನು ಇದಿರುಗೊಂಡು ಗಂಡಿನ ಕಡೆ ಕಳಸ–ಕನ್ನಡಿ ಹಿಡಿದ ಮುತ್ತೈದೆ ಮತ್ತು ಕಳಸಕ್ಕೆ ಹೆಣ್ಣಿನ ಕಡೆಯವರು ಸೋಗಲು ಹೊಯ್ದು ಕನ್ನಡಿ ತೋರಿಸಿದರೆ ಹೆಣ್ಣಿನ ಕಡೆ ಕಳಸ–ಕನ್ನಡಿ ಹಿಡಿದ ಮುತ್ತೈದೆಗೆ ಗಂಡಿನ ಕಡೆ ಕಳಸ ಹಿಡಿದವರು ಸೋಗಲು ಹೊಯ್ದು ಕನ್ನಡಿ ತೋರಿಸಿ ಎರಡೂ ಕಡೆಯವರು ಒಂದಾಗಿ ವಾದ್ಯದೊಂದಿಗೆ ಮನೆಗೆ ತೆರಳುವರು. ರಾತ್ರಿಯೇ ವೀಳ್ಯಶಾಸ್ತ್ರ ಮತ್ತು ಬಳೆಶಾಸ್ತ್ರ ನಡೆಯುತ್ತದೆ.

ಈ) ಲಗ್ನಕಟ್ಟಿಸುವುದು

ಮದುವೆಗೆ ಮೊದಲು, ಗಂಡು–ಹೆಣ್ಣು ಹಾಗೂ ಅವರ ಕಡೆಯವರು ಒಪ್ಪಿದ ನಂತರ ಹೆಣ್ಣು ಗಂಡಿನ ಕಡೆಯ ಮುಖ್ಯಸ್ಥರು ಸೇರಿ ಮದುವೆಯ ದಿನವನ್ನು ನಿಶ್ಚಯಮಾಡುತ್ತಾರೆ. ಇದನ್ನು ಬೇರೆ ಬೇರೆ ಪತ್ರಿಕೆಗಳಲ್ಲಿ ಬರೆದಿಡುತ್ತಾರೆ. ಇದನ್ನು ಲಗ್ನಪತ್ರಿಕೆ ಎನ್ನುತ್ತಾರೆ. ಒಂದು ಪತ್ರದಲ್ಲಿ ಹೆಣ್ಣು ಕೊಡುವ ಬಗ್ಗೆ ಒಪ್ಪಿಗೆ ಬರೆದು ಹೆಣ್ಣಿನ ಕಡೆಯ ಹಿರಿಯರೆಲ್ಲರೂ ಸಹಿ ಮಾಡುತ್ತಾರೆ. ಇನ್ನೊಂದು ಪತ್ರದಲ್ಲಿ ಹೆಣ್ಣನ್ನೂ ವಧುವಾಗಿ ಸ್ವೀಕರಿಸುವ ಬಗ್ಗೆ ಒಪ್ಪಿಗೆ ಬರೆದು ಗಂಡಿನ ಕಡೆಯ ಹಿರಿಯರೆಲ್ಲ ಸಹಿ ಹಾಕುತ್ತಾರೆ.

ಈ ಪತ್ರಗಳನ್ನು ಅಡಿಕೆ ವೀಳ್ಯದೆಲೆ ಜೊತೆ ಹರಿವಾಣದಲ್ಲಿಟ್ಟು ಪರಸ್ಪರ ವಿನಿಮಯ ಮಾಡಿಕೊಳ್ಳುತ್ತಾರೆ. ಈ ದಿನದಂದು ವರನ ಕಡೆಯವರು ವಧುವಿಗೆ ಹೂವು, ಸೀರೆ ಕೊಡುವ ಕ್ರಮವಿದೆ. ಅದನ್ನು ವಧು ಉಟ್ಟು ಗಂಡಿನ ಕಡೆಯವರ ಸಹಿತ ಹಿರಿಯರೆಲ್ಲರ ಕಾಲಿಗೆ ನಮಸ್ಕಾರ ಮಾಡಬೇಕು. ಹಿಂದಿನ ಕಾಲದಲ್ಲಿ ವರನು ಲಗ್ನಪತ್ರಿಕೆ ಸಮಾರಂಭಕ್ಕೆ ಬರುವ ಪದ್ಧತಿ ಇರಲಿಲ್ಲ. ಇತ್ತೀಚೆಗೆ ಗಂಡು ಭಾಗವಹಿಸುತ್ತಾನೆ. ಅಲ್ಲದೆ ಹೆಣ್ಣಿನ ಬೆರಳಿಗೆ ಉಂಗುರ ತೊಡಿಸಿ ಫೋಟೋ ತೆಗೆಸಿಕೊಳ್ಳುವವರೆಗೆ ಬದಲಾಗಿದೆ. ಅಲ್ಲದೆ ಅಂದು ಭೂರಿ ಭೋಜನವೂ ಇರುತ್ತದೆ. ವಿಶ್ವಕರ್ಮರಲ್ಲಿ ಲಗ್ನದ ಬಗ್ಗೆ ಲಿಖಿತ ಒಪ್ಪಿಗೆ ಪತ್ರ ಬರೆಸಿ ವಿನಿಮಯ ಮಾಡಿಕೊಳ್ಳುವ ಪದ್ಧತಿ ವಿಶಿಷ್ಟವಾದದ್ದು.

ಉ) ಧಾರಾಮುಹೂರ್ತ

ಧಾರಾಮುಹೂರ್ತದ ದಿನ ಪುರೋಹಿತರ ಮಾರ್ಗದರ್ಶನದಲ್ಲಿ ಎಲ್ಲ ಆಚರಣೆಗಳು ಜರುಗುತ್ತವೆ. ವಿಶ್ವಕರ್ಮದಲ್ಲಿ ಬ್ರಾಹ್ಮಣ ಪುರೋಹಿತರನ್ನು ಕರೆಸುವುದಿಲ್ಲ. ಬದಲಿಗೆ ವಿವಾಹ ಸಂಪ್ರದಾಯವನ್ನು ಚೆನ್ನಾಗಿ ಬಲ್ಲ ಹಿರಿಯ ವಿಶ್ವಕರ್ಮರೊಬ್ಬರೇ ಪೌರಹಿತ್ಯವನ್ನು ನಿರ್ವಹಿಸುತ್ತಾರೆ. ಸುರ್ಯೋದಯದ ನಂತರ ಮೊದಲಿಗೆ ಅರುಣೆ ತರುವ ಸಂಪ್ರದಾಯ ಜರುಗುತ್ತದೆ. ಹೆಣ್ಣು ಮಕ್ಕಳು ಹಾಗೂ ಮುತ್ತೈದೆಯರು ಗಂಗೆಯ ಹತ್ತಿರ ಹೋಗಿ ಗಂಗೆ ಪೂಜೆ ಸಲ್ಲಿಸಿ, ಶೃಂಗರಿಸಿದ ಮಣ್ಣಿನ ಗಡಿಗೆಗಳಿಂದ ನೀರನ್ನು ಹೊತ್ತು ಬರುತ್ತಾರೆ.

ಊ) ಕಂಕಣ ಧಾರಣೆ

"ಮುಂಗೈಗೆ ನಿರ್ದಿಷ್ಟ ರೀತಿಯ ದಾರಗಳನ್ನು ಕಟ್ಟಲಾಗುವುದೇ ಕಂಕಣಬಂಧ, ರಕ್ತಪರಿಚಲನೆಗೆ ಸಂಬಂಧಿಸಿದ ಮುಂಗೈನ ದುರ್ಬಲ ರಕ್ತನಾಳಗಳನ್ನು ನಿಯಂತ್ರಿಸುವ ಕೆಲಸವನ್ನು ಕಂಕಣಬಂಧ ಮಾಡುತ್ತದೆ."[೩] ಹೆಣ್ಣಿನ ಸೋದರ ಮಾವಂದಿರಲ್ಲಿ ಯಾರಾದರೊಬ್ಬರು ಗಂಡು ಹೆಣ್ಣಿಗೆ ಕಂಕಣಧಾರಣೆ ಮಾಡುತ್ತಾರೆ. ಇಬ್ಬರು ಪರಸ್ಪರ ಗೌರವಾದಾರಗಳಿಂದ ಕಾಣಬೇಕೆಂದೂ ಎಲ್ಲಾ ಧಾರ್ಮಿಕ ಕಾರ್ಯಗಳಲ್ಲಿ ಒಟ್ಟಾಗಿರಬೇಕೆಂದೂ ಈ ಪ್ರತಿಜ್ಞೆಗಳು ಸೂಚಿಸುತ್ತವೆ. ಅದರ ಸಂಕೇತವಾಗಿ "ಕಂಕಣ ಭಾಗ್ಯ" ಮಾಡುತ್ತಾರೆ.

ಋ) ಕಾಲುಂಗರ ಧಾರಣೆ

ಕಾಲುಂಗರವನ್ನು ಗಂಡಿನ ಕಡೆಯವರು ತರುತ್ತಾರೆ. ಇದನ್ನು ಐದು ಜನ ಮುತ್ತೈದೆಯರಿಗೆ ಮುಟ್ಟಿಸಿ ಮುತ್ತೈದೆಯರೊಬ್ಬರು ಹೆಣ್ಣಿಗೆ ಧರಿಸುತ್ತಾರೆ.

ಎ) ಕಾಶಿ ಯಾತ್ರೆ

ಮದುವೆಯ ದಿನದಂದು ನಡೆಯುವ "ಕಾಶಿ ಯಾತ್ರೆ" ಶಾಸ್ತ್ರ ಬಹು ವಿಶಿಷ್ಟವಾದದ್ದಾಗಿ ವರನಿಗೆ ಈ ಲೌಕಿಕ ಬದುಕಿನ ಬಗೆಗೆ ಜಿಗುಪ್ಸೆ, ಮಾಡಿ ಆಧ್ಯಾತ್ಮದತ್ತ ಹೊರಳುವುದು, ತಕ್ಷಣದಲ್ಲಿಯೇ ವಧುವಿನ ತಂದೆ-ತಾಯಿ ವರನ ಈ ಪರಿಸ್ಥಿತಿಯನ್ನು ಬದಲಾಯಿಸಿ ಮತ್ತೆ ಲೌಕಿಕ ಜೀವನಕ್ಕೆ ಕರೆತರುವುದೇ ಈ ಶಾಸ್ತ್ರದ ಉದ್ದೇಶ. ಧಾರೆಯೆರೆಯುವುದಕ್ಕೆ ಮೊದಲು ಈ ಒಂದು ಶಾಸ್ತ್ರ ನಡೆಯುತ್ತದೆ.

ವರನು ಲೌಕಿಕ ಜೀವನ ಬೇಡ ಎಂದು ಲೌಕಿಕವಾಗಿ ಎಲ್ಲವನ್ನು ತ್ಯಜಿಸಿ ಧಾರ್ಮಿಕ ಕ್ಷೇತ್ರಗಳ ದರ್ಶನ ಮಾಡಲು ಹೊರಟಿರುತ್ತಾನೆ. ಈ ಸಮಯದಲ್ಲಿ "ಕಿವಿಗೆ ಓಲೆ, ಕಾಲಿಗೆ ಗೆಜ್ಜೆ, ಕತ್ತಿಗೆ ಸರ ಧರಿಸಿರುತ್ತಾನೆ. ಕೈಯಲ್ಲಿ ಒಂದು ಭಿಕ್ಷಾಪಾತ್ರೆ ಇರುತ್ತದೆ. ಇದರ ಉದ್ದೇಶ ಪುರುಷತ್ವ ನಿಗ್ರಹ."[೪]

ಯಾವುದಾದರೊಂದು ದೇವಾಲಯ, ಅಥವಾ ಅರಳಿಮರದ ಕೆಳಗೆ ಕುಳಿತಿರುತ್ತಾನೆ. ವರ ವಧುವಿನ ತಂದೆ-ತಾಯಿ ವಾದ್ಯ ಸಮೇತ ಅಲ್ಲಿಗೆ ಹೋಗಿ ಯಾತ್ರೆಯನ್ನು ಕೈಬಿಟ್ಟು ಲೌಕಿಕ

ಜೀವನಕ್ಕೆ ಬನ್ನಿ, ನಮ್ಮ ಮಗಳನ್ನು ಧಾರೆಯೆರೆದು ಕೊಡುತ್ತೇವೆ ಎಂದು ಹೇಳಿ ಮನ ಒಲಿಸುತ್ತಾರೆ. ಈ ಸಂದರ್ಭದಲ್ಲಿ ಕಾಲಿಗೆ ಚಪ್ಪಲಿ, ಕೊಡೆ, ವಸ್ತ್ರ ಮೊದಲಾದ ಉಡುಗೊರೆಗಳನ್ನು ನೀಡಿ ಧಾರೆಯೆರೆಯುವ ಮಂಟಪಕ್ಕೆ ಕರೆದು ತರುತ್ತಾರೆ.

ಧಾರೆಯೆರೆಯುವ ಮಂಟಪವನ್ನು ಹಸಿರು ಚಪ್ಪರದಡಿಯಲ್ಲಿ ಹಾಕುವುದಿಲ್ಲ. ಇದಕ್ಕೊಂದು ಕಾರಣವನ್ನು ತಿಳಿಸುತ್ತಾರೆ. ಬಹಳ ಹಿಂದೆ ಹೆಣ್ಣಿನ ಸೋದರ ಮಾವ ಚಪ್ಪರಕ್ಕೆ ಗರಿ ಬಾಳೆಕಂಬ ತರಲು ಹೋದವನು ಸಮಯಕ್ಕೆ ಸರಿಯಾಗಿ ಬರಲಿಲ್ಲ. ಕುಲದ ಹಿರಿಯರೆಲ್ಲ ಕಾಯ್ದು ಕಾಯ್ದು ಬೇಜಾರಾಗಿ ಮುಹೂರ್ತದ ಹೊತ್ತಿಗೆ ಮದುವೆ ಮಾಡಿಬಿಟ್ಟರು. ಮದುವೆ ಆದ ಮೇಲೆ ಮಾವ ಬಂದ. ಆ ದಿನದಿಂದ ಈ ಜನಾಂಗದವರು ಚಪ್ಪರ ಇಲ್ಲದೆಯೆ ನಾಲ್ಕು ಅರುಣೆ ಗಡಿಗೆಗಳನ್ನು ಚೌಕಾಕಾರವಾಗಿಟ್ಟು ನಾಲ್ಕು ಅರುಣೆಗಳಿಗೂ ಹಸಿ ನೂಲು ಸೂತ್ರವನ್ನು ಎಳೆದು ಅವುಗಳ ನಡುವೆ ಧಾರೆ ಎರೆಯುತ್ತಾರೆ.

ಕನ್ಯೆಯನ್ನು ದಾನ ಮಾಡುವುದು ಕೇವಲ ಒಂದು ಹೊಣೆಗಾರಿಕೆಯನ್ನು ಕಳೆದುಕೊಳ್ಳುವ ಉದ್ದೇಶದಿಂದಲ್ಲ, ಕನ್ಯೆಯ ಪೋಷಕ ಅವಳನ್ನು ದಾನ ಮಾಡುವಾಗ ಅರ್ಥಗರ್ಭಿತವಾದ ಮಂತ್ರೋಚ್ಚಾರಣೆಯ ಮೂಲಕ ಧರ್ಮ, ಅರ್ಥ, ಕಾಮಗಳ ಪೂರೈಕೆಗಾಗಿ ಈ ದಾನವನ್ನು ಮಾಡುತ್ತಿರುವುದಾಗಿ ತಿಳಿಸಿ ಅವಳನ್ನು ಧರ್ಮ, ಅರ್ಥ, ಕಾಮಗಳ ಸಾಧನೆಯಲ್ಲಿ ತನ್ನ ಸಹಧರ್ಮಿಣಿಯಾಗಿರಲು ನಾನು ಸ್ವೀಕರಿಸುತ್ತಿದ್ದೇನೆಂದು ವರನಿಂದ ಮೂರು ಬಾರಿ ವಚನ ತೆಗೆದುಕೊಳ್ಳುತ್ತಾನೆ. ಪಿತನೇ ಕನ್ಯದಾನ ಮಾಡಲು ಅಧಿಕಾರವುಳ್ಳವನೆಂದು ಗೃಹ್ಯಸೂತ್ರ ಹೇಳುತ್ತದೆ. ಸ್ಮೃತಿಗಳು ಈ ಅಧಿಕಾರವನ್ನು ತಂದೆಯ ಆನಂತರ ಪಿತಾಮಹನಿಗೆ, ಅಣ್ಣನಿಗೆ, ಮಾತೆಗೆ ಕ್ರಮವಾಗಿ ಕೊಟ್ಟಿವೆ.

ಏ) ಮಾಂಗಲ್ಯ ಧಾರಣೆ

ಎಲ್ಲಾ ಹಿಂದೂಗಳ ಮದುವೆಯಲ್ಲೂ ಮಾಂಗಲ್ಯ ಧಾರಣೆ ಪ್ರಮುಖವಾದ ಶಾಸ್ತ್ರವಾಗಿದೆ. ಕಾಶಿ ಯಾತ್ರೆಯಿಂದ ಕರೆತಂದ ವರನನ್ನು ಧಾರಾಮಂಟಪದಲ್ಲಿ ಕೂರಿಸಿರುತ್ತಾರೆ. ವಧುವನ್ನು ಧಾರಾಮಂಟಪಕ್ಕೆ ಹೆಣ್ಣಿನ ಸೋದರ ಮಾವ ಕರೆತರುತ್ತಾರೆ. ಧಾರಾಮಂಟಪವನ್ನು ಮೂರು ಸುತ್ತು ಹಾಕಿಸಿ ಮಂಟಪದೊಳಗೆ ಪ್ರವೇಶ ಕೊಡುತ್ತಾರೆ.

ಗಂಡಿನ ಮುಂದೆ ದೊಡ್ಡದೊಂದು ತೆರೆಹಿಡಿದು ಗಂಡು ಹೆಣ್ಣಿನ ಮುಖ ಕಾಣದಂತೆ ಮಾಡುತ್ತಾರೆ. ತೆರೆಯ ಮೇಲಿನಿಂದಲೇ ಎಳ್ಳು-ಜೀರಿಗೆಯನ್ನು ಹೆಣ್ಣಿನಿಂದ ಗಂಡಿನ ತಲೆಯ ಮೇಲೂ, ಗಂಡಿನ ಕೈಯಿಂದ ಹೆಣ್ಣಿನ ತಲೆಯ ಮೇಲೂ ಹಾಕಿಸುತ್ತಾರೆ. ನಂತರ ಪರದೆಯನ್ನು ಸರಿಸಿ ಇಬ್ಬರಿಂದಲೂ ಒಬ್ಬೊಬ್ಬರಿಗೂ ಸಂಬಂಧ ಮಾಲೆಯನ್ನು ತೊಡಿಸುತ್ತಾರೆ. ಆನಂತರ ಪುರೋಹಿತರ ಮಾರ್ಗದರ್ಶನದಂತೆ ಧಾರೆಯೆರೆಯುತ್ತಾರೆ. ಹೆಣ್ಣಿನ ತಂದೆ-ತಾಯಿಯ ನಂತರ

ಗಂಡಿನ ತಂದೆ-ತಾಯಿ ಇತರೆ ಯಾರಾದರೂ ಐದು ಇಲ್ಲವೆ ಒಂಬತ್ತು ಜೋಡಿ ವಧುವರರ ಕೈಗಳಿಗೆ ಹಾಲು ಬಿಡುವ ಮೂಲಕ ಧಾರೆ ಎರೆದು ಕೊಡುತ್ತಾರೆ. ಆನಂತರ ಸಮಯವನ್ನು ನೋಡಿ ಶುಭಗಳಿಗೆಯಲ್ಲಿ ಮಾಂಗಲ್ಯ ಧಾರಣೆ ನಡೆಯುತ್ತದೆ. ಅರಿಶಿಣ ಹಚ್ಚಿದ ಹಸಿನೂಲು ದಾರಕ್ಕೆ ಮಾಂಗಲ್ಯವನ್ನು ಕಟ್ಟಿ ಆರತಿ ತಟ್ಟೆಯಲ್ಲಿ ಒಂದು ತೆಂಗಿನಕಾಯಿ ಮೇಲಿಟ್ಟು ಅಲ್ಲಿ ನೆರೆದ ಸಮಸ್ತರಿಗೆಲ್ಲ ಮುಟ್ಟಿಸುತ್ತಾರೆ. ನಂತರ ವರನ ಕೈಯಿಂದ ವಧುವಿಗೆ ಧಾರಣೆ ಮಾಡಿಸುತ್ತಾರೆ. ವಿಶ್ವಕರ್ಮ ಜನಾಂಗದಲ್ಲಿ ವಧು ಹಸೆಮಣೆಯ ಮೇಲೆ ಕುಳಿತಿರುತ್ತಾಳೆ. ವರನು ಎದ್ದು ನಿಂತು ಬಗ್ಗಿ ವಧುವಿನ ಕೊರಳಿಗೆ ಮಾಂಗಲ್ಯಧಾರಣೆ ಮಾಡುತ್ತಾನೆ. ಆ ದಾರದಲ್ಲಿ ಮೂರು ಗಂಟುಗಳನ್ನು ಹಾಕಿ ನಂತರ ವರ ಅದಕ್ಕೆ ಪೂಜೆ ಸಲ್ಲಿಸುತ್ತಾನೆ. ಈ ಸಂದರ್ಭದಲ್ಲಿ ನೆರೆದ ಜನರೆಲ್ಲ ಅಕ್ಷತೆಗಳನ್ನು ಹಾಕಿ ಹಾರೈಸುತ್ತಾರೆ. ಗಟ್ಟಿಮೇಳ ಮೊಳಗುತ್ತದೆ.

ಐ) ಸಪ್ತಪದಿ

ಮಾಂಗಲ್ಯ ಧಾರಣೆಯ ನಂತರ ಹೋಮಕುಂಡದ ಸುತ್ತ ಏಳು ಹೆಜ್ಜೆಗಳನ್ನು ಇಡುವುದು ಸಪ್ತಪದಿ. "ಸಪ್ತಪದಿಯು ಪರಸ್ಪರ ಪ್ರೀತಿಗಾಗಿ, ಕುಟುಂಬದ ಹೊರೆ ಹೊರುವ ಶಕ್ತಿಗಾಗಿ, ದೀರ್ಘಾಯುವಿಗಾಗಿ, ಆರೋಗ್ಯಕ್ಕಾಗಿ, ಧರ್ಮಪ್ರಜ್ಞೆಯ ಮಕ್ಕಳಿಗಾಗಿ, ಸತ್ಯವನ್ನು ಎತ್ತಿಹಿಡಿಯುವುದಕ್ಕಾಗಿ ಪರಸ್ಪರ ಸ್ನೇಹಕ್ಕಾಗಿ ತಾವು ಬದ್ಧರಾಗಿರುವುದಾಗಿ ಸತಿ-ಪತಿಯರಿಬ್ಬರೂ ಪ್ರತಿಜ್ಞಾಪೂರ್ವಕವಾಗಿ ಏಳು ಹೆಜ್ಜೆಗಳನಿಡುತ್ತಾರೆ."[೫]

ಹೋಮ ಕುಂಡದ ಸುತ್ತ ಮೂರು ಸುತ್ತುಗಳನ್ನು ಸುತ್ತಿಸಲಾಗುತ್ತದೆ. ಏಳೇ ಏಳು ಹೆಜ್ಜೆಗಳನ್ನು ಮಾತ್ರ ಹಾಕಿಸುವುದಿಲ್ಲ. ಇದು ಗಂಗಾ ನದಿ ತೀರದ ಆರ್ಯರಲ್ಲಿ ಮಾತ್ರ ಕಂಡುಬರುತ್ತಿದ್ದು ಕಾಲಾನಂತರದಲ್ಲಿ ಭಾರತದಲ್ಲಿ ಎಲ್ಲಾ ಭಾಗಗಳಿಗೂ ಹರಡಿದೆ. ಸಪ್ತಪದಿ ತುಳಿದ ನಂತರ ವಧುವರನಿಗೆ ಹೆಂಡತಿಯಾಗಿ ಬದಲಾಗುತ್ತಾಳೆ. ಅಲ್ಲಿಯವರೆಗೆ ಅವಳು ವಧುವಾಗಿಯೇ ಉಳಿದಿರುತ್ತಾಳೆ. ಈಶಾನ್ಯ ರಾಜ್ಯಗಳಲ್ಲಿ ಕಂಡುಬರುವ 'ನಾಗ' ಜನಾಂಗ ಬಲಿಷ್ಠರಾಗಿದ್ದರು. ಅವರು ಆರ್ಯರ ಮದುವೆ ನಡೆಯುವಾಗ ವಧುವನ್ನು ಬಲತ್ಕಾರವಾಗಿ ಕರೆದೊಯ್ಯುವ ಸಂದರ್ಭಗಳು ಇದ್ದವು. ಸಪ್ತಪದಿಯ ಏಳನೇ ಹೆಜ್ಜೆಯನ್ನಿಡುವ ಮೊದಲು ಯಾವನೇ ನಾಗ ಜನಾಂಗದವನೊಬ್ಬ ಬಂದು 'ವಧು' ನನಗೆ ಬೇಕು ಎಂದರೆ ಕಳುಹಿಸಿಕೊಡಬೇಕಾಗಿತ್ತು. ಇಲ್ಲವಾದಲ್ಲಿ ಅಲ್ಲಿ ರಕ್ತಪಾತ ನಡೆಯುತ್ತಿತ್ತು. ಸಪ್ತಪದಿ ತುಳಿದ ಬಳಿಕ ವಧುವನ್ನು ನಾಗ ಜನಾಂಗದವರಾರು ಕೇಳುತ್ತಿರಲಿಲ್ಲ ಈ ಹಿನ್ನೆಲೆಯಲ್ಲಿ ಉತ್ತರ ಭಾರತದ ಆರ್ಯರಲ್ಲಿ ಹುಟ್ಟಿಕೊಂಡ ಈ ಪದ್ಧತಿ ದಕ್ಷಿಣದ ದ್ರಾವಿಡರವರೆಗೂ ಹಬ್ಬಿದೆ ಎನ್ನುತ್ತಾರೆ.

ಒ) ಕಾಳಮ್ಮನ ಕಳಸ (ಕಾಳಿಕಾ ಪೂಜೆ)

ಮದುವೆಯ ಎಲ್ಲಾ ಶಾಸ್ತ್ರಗಳು ಮುಗಿದ ಮೇಲೆ ವಿಶ್ವಕರ್ಮರು ಕಾಳಮ್ಮನ 'ಕಳಸ ತರುವುದು' ಎನ್ನುವ ಶಾಸ್ತ್ರವೊಂದನ್ನು ನೇರವೇರಿಸುತ್ತಾರೆ. ವಿಶ್ವಕರ್ಮರಿಗೆ ವಿಶ್ವಕರ್ಮನೇ ಆದಿದೈವವಾದರೆ

ಕಾಳಿಕಾ ಮಾತೆ ಇವರ ಅದಿದೇವತೆಯಾಗಿದ್ದಾಳೆ. 'ಕಾಳಿ' ಎಂದರೆ ಪಾರ್ವತಿ ಎಂದು ಇವರು ನಂಬುತ್ತಾರೆ. "ಒಮ್ಮೆ ಶಿವ-ಪಾರ್ವತಿಯರಲ್ಲಿ ಯಾರು ಅಂದವಾಗಿದ್ದಾರೆಂಬ ಬಗ್ಗೆ ಚರ್ಚೆ ಆರಂಭವಾಯಿತು. ಅಲ್ಲಿಗೆ ದೇವಾನುದೇವತೆಗಳೆಲ್ಲ ಸೇರಿದರು ಅವರನ್ನು ಕೇಳಲಾಯಿತು. 'ಶಿವ-ಪಾರ್ವತಿಯರಲ್ಲಿ ಯಾರು ಅಂದವಾಗಿದ್ದಾರೆ?' ಎಂದು. ಅದನ್ನು ದೇವತೆಗಳೆಲ್ಲ ಚಿಂತಿಸಿ ತಮ್ಮ ಉತ್ತರದಿಂದ ಶಿವ ಎಲ್ಲಿ ಕೋಪಗೊಳ್ಳುವನೋ ಎಂದು ಹೆದರಿ ನಿಮ್ಮ ಪ್ರಶ್ನೆಗೆ ನಾರದನನ್ನು ಪ್ರಶ್ನಿಸಿದಾಗ ಆತನೂ ಉತ್ತರಿಸಿದೆ ವಿಶ್ವಕರ್ಮನನ್ನು ಪ್ರಶ್ನಿಸಿದರೆ ಉತ್ತರಿಸಬಲ್ಲ ಎಂದು ಸಲಹೆ ಕೊಡುತ್ತಾನೆ. ವಿಶ್ವಕರ್ಮನನ್ನು ಕರೆಸಿ ಪ್ರಶ್ನಿಸಿದಾಗ ಅವನೂ ಉತ್ತರಿಸದೆ ಚೆನ್ನಾಗಿ ಹೊಳೆಯುವ ತ್ರಿಶೂಲವೊಂದನ್ನು ತಯಾರಿಸಿ ತಂದು ನಿಮ್ಮ ನಿಮ್ಮ ಮುಖವನ್ನು ನೀವೇ ನೋಡಿಕೊಳ್ಳಿ ಎಂದು ಕೊಡುತ್ತಾನೆ. ಅದರ ಸಹಾಯದಿಂದ ತಮ್ಮ ಸೌಂದರ್ಯವನ್ನು ನೋಡಿ ಸಂತಸಪಟ್ಟ ಶಿವ "ನಿನಗೆ ಏನು ವರ ಬೇಕು ಕೇಳಿಕೋ ಎನ್ನುತ್ತಾನೆ" ಅದಕ್ಕೆ ವಿಶ್ವಕರ್ಮ ನನಗೆ ಸಕಲವೂ ಇರುವುದರಿಂದ ಯಾವ ವರವೂ ಬೇಡ ಎನ್ನುತ್ತಾನೆ. ಕುಪಿತನಾದ ಶಿವ 'ಹಾಗಾದರೆ ನಿನಗೆ ದರಿದ್ರ ಉಂಟಾಗಲಿ' ಎಂದು ಶಪಿಸುತ್ತಾನೆ. ಪ್ರತಿಯಾಗಿ ವಿಶ್ವಕರ್ಮನೂ ಆತನಿಗೆ. "ನೀನು ಗುಂಡ್ಕಕಲ್ಲಾಗು" ಎಂದು ಶಾಪ ನೀಡಿದನು. ಶಿವ ಗುಂಡುಕಲ್ಲಾದಾಗ ಪಾರ್ವತಿಯು ನನ್ನ ಪತಿ ನನಗೆ ಬೇಕೆಂದು ಕೇಳಿಕೊಳ್ಳುವುದರೊಂದಿಗೆ "ನಿನಗೆ ಪೂರ್ಣ ದರಿದ್ರ ಉಂಟಾಗದಿರಲಿ" ಎಂದು ವರ ನೀಡಿದಳಂತೆ. ಅಂದಿನಿಂದ ವಿಶ್ವಕರ್ಮರು ತಾವೆಷ್ಟೆ ಸಂಪಾದಿಸಿದರೂ ಕೈಯಲ್ಲಿ ಉಳಿಯದೆ ಅತಿ ಬಡವರೂ ಅಲ್ಲದೆ ಅತಿ ಶ್ರೀಮಂತರೂ ಅಲ್ಲದೆ ಮಧ್ಯಮ ಸ್ಥಿತಿಯಲ್ಲಿ ಕಾಲಕಳೆಯುತ್ತಿದ್ದಾರೆ. ಪಾರ್ವತಿಯು ಇವರಿಗೆ ವರ ನೀಡಿದ ಪರಿಣಾಮವಾಗಿ ಇವರು ಪಾರ್ವತಿಯನ್ನು ಕಾಳಿ ಎಂದು ಕರೆದು ಮದುವೆ ಮುಗಿದ ನಂತರ "ಕಾಳಿಕಾ ದೇವಿ" ಪೂಜೆ ಎಂದು ಪಾರ್ವತಿಗೆ ಪೂಜೆ ಸಲ್ಲಿಸುತ್ತಾರೆ."[೬] ಇದನ್ನು ಕಾಳಮ್ಮನ ಕಳಸ ತರೋದು ಎಂದು ಕರೆಯುತ್ತಾರೆ. ಇದರೊಂದಿಗೆ ವಿಶ್ವಕರ್ಮರ ಶಾಸ್ತ್ರಗಳು ಮುಗಿದು ವಧು-ವರರು ಶಾಸ್ತ್ರೋಕ್ತವಾಗಿ ಸತಿ-ಪತಿಗಳಾಗುತ್ತಾರೆ. ಕೊನೆಯದಾಗಿ ಮದುಮಗಳನ್ನು ಕೈ ಹಿಡಿದು ಕೊಡುವುದು/ಕೊಟ್ಟಾಡುವುದು ಎಂದು ಕರೆಯಲಾಗುತ್ತದೆ.

ಹುಟ್ಟಿನಿಂದ-ಮದುವೆಯವರೆಗೆ ತಂದೆ-ತಾಯಿಯೊಂದಿಗೆ ತನ್ನದೇ ಮನೆಯಲ್ಲಿ ಬೆಳೆದ ಹೆಣ್ಣು ಮದುವೆಯಾಗಿ "ಕೊಟ್ಟ ಹೆಣ್ಣು ಕುಲಕ್ಕೆ ಹೊರಗು" ಎಂಬಂತೆ ಅನ್ಯರ ಮನೆಗೆ ಹೋಗುವಾಗ ಅವಳನ್ನು ಕಳುಹಿಸಿ ಕೊಡುವ ಸಂದರ್ಭವನ್ನು ಕೈ ಹಿಡಿದು ಕೊಡುವುದು/ಕೊಟ್ಟಾಡುವುದು ಎಂದು ಕರೆಯುತ್ತಾರೆ. ಜನಪದರು ಇದೊಂದು ಕರುಣರಸ ಉಕ್ಕುವ ಸಂದರ್ಭವಾಗಿದೆ. ಹೆಣ್ಣಿನ ಕಡೆಯ ಮುಖ್ಯಸ್ಥರೊಬ್ಬರು ಹೆಣ್ಣಿನ ಕೈಯನ್ನು ಹಿಡಿದು ಗಂಡಿನ ಕಡೆಯ ಮುಖ್ಯಸ್ಥರೊಬ್ಬರ ಕೈಯಲ್ಲಿಟ್ಟು 'ಇವಳು ನಮ್ಮ ಮಗಳಲ್ಲ; ನಿಮ್ಮ ಮಗಳು ಎಂದು ಭಾವಿಸಿ ಪ್ರೀತಿ-ಆದರಗಳಿಂದ ನೋಡಿಕೊಳ್ಳಿ' ಎಂದು ಹೇಳುತ್ತಾರೆ. ಅದೇ ರೀತಿ ಗಂಡಿನ ಕಡೆಯವರಲ್ಲೊಬ್ಬರು ಗಂಡಿನ ಕೈಹಿಡಿದು ಹೆಣ್ಣಿನ

ಕಡೆಯ ಮುಖ್ಯಸ್ಥರೊಬ್ಬರ ಕೈಯಲ್ಲಿಟ್ಟು 'ಇವನು ನಮ್ಮ ಮಗನಲ್ಲ; ನಿಮ್ಮ ಮಗ' ಎಂದು ಹೇಳುತ್ತಾರೆ.

ಈ ಸಂದರ್ಭದಲ್ಲಿ ಹೆಣ್ಣಿನ ತಾಯಿಯ ಮಾತು ಎಂದರೆ "ಹೆಣ್ಣು ಮಗಳನ್ನು ಹಡೆದು ಗಂಡು ಮಗನನ್ನು ಪಡೆದೆ" ಈ ಸಂದರ್ಭ ಎಂತಹ ಕಲ್ಲೆದೆಯವರ ಕಣ್ಣಲ್ಲು ನೀರು ತರಿಸುತ್ತದೆ. ಆ ದಿನವೆ ಗಂಡಿನ ಮನೆಗೆ ಹೆಣ್ಣನ್ನು ಕರೆದುಕೊಂಡು ಹೋಗುತ್ತಾರೆ.

೬.೪. ಶವಸಂಸ್ಕಾರ ಪದ್ಧತಿ

ಎಲ್ಲಾ ಜಾತಿ-ವರ್ಗ-ಜನಾಂಗಗಳ ಸಾವಿನ ಸಂದರ್ಭವು ಆಚರಣೆಗಳಿಂದ ಕೂಡಿದ್ದು, ಸೃಷ್ಟಿಯ ಪ್ರತಿಯೊಂದು ಜೀವಕುಲಕ್ಕೂ ಒಂದು ಅಂತ್ಯವಿದೆ. ಆ ಅಂತ್ಯವೆ ಸಾವು ಅಥವಾ ಮರಣ. ಜನನ ಆಕಸ್ಮಿಕವಾದರೂ ಮರಣ ಖಚಿತ. ಇದು ವ್ಯಕ್ತಿಯೊಂದಿಗೆ ಜಗತ್ತಿಗೆ ಸಂಬಂಧವನ್ನು ಕೊನೆಗೊಳಿಸುತ್ತದೆ. ಸಾವಿನಾಚೆಯ (ಪರ) ಬದುಕನ್ನು ಕುರಿತು ಶಿಷ್ಟ ಸಮಾಜದಲ್ಲಿ ಹಿಂದಿನಿಂದಲೂ ಜಿಜ್ಞಾಸೆ ನಡೆದಿದೆ. ಜನಪದ ಸಮಾಜದಲ್ಲೂ ಇದರ ಬಗ್ಗೆ ಕುತೂಹಲವಿದ್ದು ಸ್ವರ್ಗ-ನರಕಗಳ ಉಲ್ಲೇಖವಿದ್ದರೂ ಹೆಚ್ಚಿನ ಮಹತ್ವ ನೀಡದೆ ತಮ್ಮದೇ ಆದ ಪರಿಕಲ್ಪನೆಗಳನ್ನು ಹೊಂದಿದ್ದಾರೆ. ಸಾಮಾನ್ಯವಾಗಿ ಸತ್ತ ವ್ಯಕ್ತಿ ಇದೇ ಲೋಕದಲ್ಲಿ ಹುಟ್ಟುತ್ತಾನೆ, ದೇವರ ರೂಪದಲ್ಲಿ ಕುಟುಂಬವನ್ನು ರಕ್ಷಿಸುತ್ತಾನೆ ಎಂದು ಭಾವಿಸಲಾಗುತ್ತದೆ. ಭೂಮಿಯಲ್ಲಿ ಹುಟ್ಟಿದ ಮಾನವ ಜೀವಿಯೊಂದು ಈ ಲೋಕದಲ್ಲಿ ತ್ಯಜಿಸಿ ಹೋಗುವಾಗ ಸಹ ಮಾನವರು ಅವನನ್ನು ಗೌರವದಿಂದ ಕಳುಹಿಸಿಕೊಡುವುದು ಸಹಜ. ಹಾಗಾಗಿ ಪ್ರತಿಯೊಂದು ಸಮುದಾಯವು ತನ್ನದೇ ಆದ ಸಂಪ್ರದಾಯ ಹೊಂದಿದೆ. ಅದರಂತೆ ವಿಶ್ವಕರ್ಮ ಜಾತಿಯವರಲ್ಲಿನ ಮರಣ ಸಂಪ್ರದಾಯಗಳು ಹೇಗಿವೆ ಎಂಬುದನ್ನು ಪರಿಶೀಲಿಸಲಾಗಿದೆ.

ಆಕಸ್ಮಿಕ ಮರಣದ ಸಂದರ್ಭಗಳಲ್ಲಿ ಸಂಪ್ರದಾಯವನ್ನು ಆಚರಿಸಲು ಸಾಧ್ಯವಾಗುವುದಿಲ್ಲವಾದರು ಮರಣೋತ್ತರ ಸಂಸ್ಕಾರಗಳನ್ನು ನಡೆಸುತ್ತಾರೆ. ಸಹಜ ಸಾವು ಸಂಭವಿಸಿದಾಗ ವ್ಯಕ್ತಿಯು ಮನೆಯೊಳಗೆ ಸಾಯಲು ಬಿಡುವುದಿಲ್ಲ. ಜೀವ ಹೋಗುವ ಸಂದರ್ಭದಲ್ಲಿ ಹೊರಗೆ, ಕೊನೆಯುಸಿರು ಎಳೆಯುವಾಗ ಕುಟುಂಬದವರು ಬಾಯಿಗೆ ನೀರು ಬಿಡುತ್ತಾರೆ. ಕೆಲವರು ಹಾಲನ್ನು ಬಿಡುತ್ತಾರೆ ಈ ಸಂದರ್ಭದಲ್ಲಿ "ನೀನು ಸ್ವರ್ಗಕ್ಕೆ ಹೋಗು" ಎಂದು ಹೇಳುವುದುಂಟು. ವ್ಯಕ್ತಿ ಹುಟ್ಟಿದ ವಾರದಂದು ಅಥವಾ ಸೋಮವಾರ ಸತ್ತರೆ ಸ್ವರ್ಗ ಪ್ರಾಪ್ತಿ ಎಂಬ ನಂಬಿಕೆ ಇದೆ. ಜೀವ ಹೋದ ಮೇಲೆ ಕೈಕಾಲುಗಳನ್ನು ಮಡಿಸಿ ಬಿಳಿ ಬಟ್ಟೆಯನ್ನು ಶವದ ಮೇಲೆ ಹೊದಿಸುತ್ತಾರೆ. ಶವದ ತಲೆಯ ಕಡೆ ಎಣ್ಣೆ ದೀಪವನ್ನು ಹಚ್ಚಿಡುತ್ತಾರೆ. ಒಂದು ತಟ್ಟೆಯಲ್ಲಿ ಅಕ್ಕಿಯನ್ನು ತುಂಬಿ ಅದರ ಮೇಲೆ ಕುಡುಗೋಲನ್ನು ಇಟ್ಟು ಶವದ ಎದೆಯ ಮೇಲೆ ಇಡುತ್ತಾರೆ. ಶವದ ಕಾಲಿನ ಕಡೆ ಹಿಡುಗಲು (ಪೊರಕೆ) ಅಥವಾ ಹಾರೆಯನ್ನು ಇಡುತ್ತಾರೆ.

ತಮ್ಮ ಬಂಧುಗಳಿಗೆ ಸುದ್ದಿ ಮುಟ್ಟಿಸುತ್ತಾರೆ. ಈ ಸಂದರ್ಭದಲ್ಲಿ ಸತ್ತು ಹೋದರು ಎಂದು ಹೇಳುವುದಿಲ್ಲ 'ತೀರಿಕೊಂಡರು, ದೈವಾದೀನರಾದರು, ಸ್ವರ್ಗಸ್ಥರಾದರು' ಎಂದೇ ಸುದ್ದಿ ಮುಟ್ಟಿಸುತ್ತಾರೆ. ಬಂಧುಗಳು ಸ್ನೇಹಿತರು ನೆರೆ-ಹೊರೆಯವರೆಲ್ಲರೂ ಸೇರಿದ ಮೇಲೆ ಸಂಸ್ಕಾರ ಕ್ರಿಯೆಗಳು ಪ್ರಾರಂಭವಾಗುತ್ತವೆ. ವಿಶ್ವಕರ್ಮರು ವೈದಿಕ ಸಂಪ್ರದಾಯದಲ್ಲೆ ಸಂಸ್ಕಾರ ಮಾಡುತ್ತಾರೆ. ಇವರಲ್ಲಿ ಶವವನ್ನು ಸುಡುವುದು ಮತ್ತು ಹೂಳುವುದು ಎರಡೂ ಪದ್ಧತಿಗಳೂ ರೂಢಿಯಲ್ಲಿವೆ. "ಸುಡುವುದು" ನಾಶ ಎಂಬ ಅರ್ಥದಲ್ಲಿಯೂ "ಹೂಳುವುದು" ಹುಟ್ಟು ಎಂಬರ್ಥದಲ್ಲಿಯೂ ಕಂಡುಬರುತ್ತದೆ. ಹೂಳುವುದನ್ನು 'ಡಫನ್' ಮಾಡುವುದು, 'ಮಣ್ಣು ಮಾಡುವುದು' ಎಂದು ಕರೆಯುತ್ತಾರೆ.

ಹೆಣವನ್ನು ಶೃಂಗಾರ ಮಾಡುವುದು ಸಾಮಾನ್ಯ. ಮನೆಯ ಹೊರಗೆ ನೀರು ಕಾಯಿಸಿ ಸ್ನಾನ ಮಾಡಿಸುತ್ತಾರೆ. ಮದುವೆಯ ದಿನದಂದು ಮಾಡಿದ ಶೃಂಗಾರವನ್ನೇ ಶವ ಸಂಸ್ಕಾರದ ದಿನವೂ ಮಾಡುತ್ತಾರೆ. ಹೆಂಗಸಾದರೆ ಹಣೆಗೆ ಕುಂಕುಮ, ಗಂಡಾದರೆ ಹಣೆಗೆ ವಿಭೂತಿ, ನಾಮ ಎರಡನ್ನೂ ಇಡುತ್ತಾರೆ. ಹಣೆಗೆ ನಾಣ್ಯವೊಂದನ್ನು ಅಂಟಿಸುತ್ತಾರೆ. ಬಾಯಿಗೆ ಅರೆದ ತಾಂಬೂಲವನ್ನು ಹಾಕುತ್ತಾರೆ. ಮೃತ ವ್ಯಕ್ತಿ ಪುರುಷನಾದರೆ ಪತ್ನಿ ಇದ್ದರೆ ಅವಳನ್ನು ಶೃಂಗರಿಸಿ ಶವ ಹಾಗೂ ಪದ್ಧತಿಯನ್ನು ಮದುವೆಯ ರೀತಿಯಲ್ಲೆ ಹಸೆಮಣೆಯ ಮೇಲೆ ಕುಳ್ಳರಿಸುವ ಪರಿಪಾಠವುಂಟು. ಶವವನ್ನು ಪೂಜಿಸಿದ ಬಳಿಕ ಪತ್ನಿಗೆ ಮಡಲಕ್ಕಿ ತುಂಬುತ್ತಾರೆ. ಈ ದಿನ ಬಂಧು-ಬಾಂಧವರೆಲ್ಲರು ಹೂವು, ಹಣ್ಣು, ಕಾಯಿ, ಗಂಧದ ಕಡ್ಡಿ, ಕರ್ಪೂರ ತಂದು ಪೂಜಿಸುತ್ತಾರೆ. ಹತ್ತಿರದ ಬಂಧುಗಳು ಹೊಸ ಸೀರೆ ತರುವುದು ಇದೆ. ವಿಶ್ವಕರ್ಮರೆ ಶವ ಯಾತ್ರೆಗಾಗಿ ಬಿದಿರು ಚಟ್ಟವನ್ನು ತಯಾರಿಸುತ್ತಾರೆ. ನಾಲ್ಕು ಜನರು ಹೆಗಲಿನ ಮೇಲೆ ಹೊರಲು ಅನುಕೂಲ ಇರುವಂತೆ ತಯಾರಿಸುತ್ತಾರೆ.

ಸತ್ತ ವ್ಯಕ್ತಿಯ ಗಂಡು ಮಕ್ಕಳಲ್ಲಿ ಹಿರಿಯ ಮಗ ಅಗ್ನಿಕುಂಡವನ್ನು ಹಿಡಿದು ಶವಯಾತ್ರೆಯ ಮುಂಭಾಗದಲ್ಲಿ ಹೊರಡುತ್ತಾನೆ. ಉಳಿದ ಗಂಡು ಮಕ್ಕಳು ಮತ್ತು ಬಂಧುಗಳು ಶವವನ್ನು ಹೊತ್ತುಕೊಂಡು ಹೊರಡುತ್ತಾರೆ. ವಿಶ್ವಕರ್ಮರು ಊರೊಟ್ಟಿನ ಸ್ಮಶಾನಗಳಲ್ಲಿ ಅಂತ್ಯಕ್ರಿಯೆ ಮಾಡುವುದಿಲ್ಲ. ಅವರವರ ಜಮೀನಿನ ಯಾವುದಾದರೊಂದು ಭಾಗದಲ್ಲೆ ಅಂತ್ಯಕ್ರಿಯೆ ಮಾಡುತ್ತಾರೆ. ಶವಯಾತ್ರೆ ಮಾಡುವಾಗ ಶವದ ಮೇಲೆ ಪುರಿ ಮತ್ತು ನಾಣ್ಯಗಳನ್ನು ಎಸೆಯುತ್ತಾರೆ. ಶವಯಾತ್ರೆಯ ನಡುವೆ 'ಎರೆಗಂಜಿಶಾಸ್ತ್ರ' ಮಾಡುತ್ತಾರೆ. ಹೆಣವನ್ನು ಇಳಿಸಿ, ಅದರ ಮುಂದೆ ಈಗಾಗಲೇ ಬೇಯಿಸಿ ತಂದಿರುವ ಅನ್ನವನ್ನು ಹಾಕುತ್ತಾರೆ. ದೇಹದಿಂದ ಜೀವ ಹೋಗಿದ್ದರೂ ಜೀವವಿರುವ ದೇಹಕ್ಕಾಗುವ ದಣಿವು-ನೋವು, ಸಂತೋಷ ಮೊದಲಾದವುಗಳನ್ನು ಅದಕ್ಕೂ ಅನ್ವಯಿಸುತ್ತಾನೆ. ಅವುಗಳಲ್ಲಿ ದೀರ್ಘ ಪ್ರಯಾಣದಿಂದ ಹಸಿವು, ಅದನ್ನು ನೀಗಿಸಿಕೊಳ್ಳಲು ಈ ಎರೆಗಂಜಿ ಇರಬೇಕು.

ಶವವನ್ನು ಗುಂಡಿಯ (ಗುದ್ದ) ಹತ್ತಿರ ಚಿತೆಯ ಹತ್ತಿರ ತಂದಾಗ ಚಿತೆಯ ಮೇಲೆ/ಗುಂಡಿಯ ಒಳಗೆ ಬಾಳೆ ಎಲೆಯನ್ನು ಹಾಸಲಾಗುತ್ತದೆ. ಶವಕ್ಕೆ ಅಗ್ನಿ ಸ್ಪರ್ಶ ಅಥವಾ ಮಣ್ಣು ಹಾಕುವ ಮೊದಲು ಉಡುಗೆ-ತೊಡುಗೆಗಳನ್ನು ತೆಗೆದು ಬಿಳಿಯ ಬಟ್ಟೆಯಲ್ಲಿ ಮುಚ್ಚುತ್ತಾರೆ. ಮುತ್ತೈದೆಯಾದರೆ ಮಾಂಗಲ್ಯದ ಚೂರೊಂದನ್ನು ಬಾಯಿಗೆ ಹಾಕುತ್ತಾರೆ. ವಿಧವೆಯಾಗಿದ್ದರೆ ಮೂಗುಬೊಟ್ಟಿನ ಚೂರನ್ನು ಬಾಯಿಗೆ ಹಾಕುತ್ತಾರೆ. ಮೃತನ ಹೆಂಡತಿ ಇದ್ದರೆ ಸ್ಮಶಾನದಲ್ಲಿಯೇ ಬೇರೊಬ್ಬ ವಿಧವೆಯಿಂದ ಆಕೆಯ ಬಳೆ, ಕುಂಕಮ, ಹೂವನ್ನು ತೆಗೆಸುತ್ತಾರಾದರೂ ತಿಥಿಯ ದಿನದವರೆಗೆ ಆಕೆ ಬಳೆ, ಕುಂಕುಮ ಮತ್ತು ಹೂವನ್ನು ಧರಿಸಬಹುದು.

ಮೃತನ ಮನೆಯಲ್ಲಿ ಶವ ತೆಗೆದ ಕೂಡಲೇ ಮನೆಯಲ್ಲಿ ಗುಡಿಸಿ ಸಾರಿಸಿ ಶುಚಿಗೊಳಿಸುವರು, ಹಣತೆಯೊಂದನ್ನು ನಡುಮನೆಯಲ್ಲಿ ಹಚ್ಚಿಟ್ಟು ಅಕ್ಕಿಯನ್ನು ತುಂಬಿದ ತಟ್ಟೆಯನ್ನು ಬಾಗಿಲ ಬಳಿ ಇಡುವರು. ಶವಸಂಸ್ಕಾರ ಮುಗಿಸಿ ಬಂದ ಬಂಧು-ಬಾಂಧವರು ಕೆರೆ, ಹೊಳೆ, ಕಾಲುವೆ, ಬೋರ್‌ವೆಲ್ ಎಲ್ಲಾದರೂ ನೀರುಮುಟ್ಟಿ ಬರುವರು. ಅವರಿಗೆ ಹುಳಿಯ ವಸ್ತುವನ್ನು ತಿನ್ನಲು ನೀಡುವರು. ಮೃತನ ಮನೆ ಹತ್ತಿರ ಬಂದು ಸಗಣಿ ತುಳಿದು ದೀಪ ನೋಡಿ ಅಕ್ಕಿಯನ್ನು ಎಡಗೈಯಲ್ಲಿ ಹಿಡಿದು ಹಿಂದೆ ತಿರುಗಿ ಮನೆಯ ಮೇಲೆ ಎರಚಿ ಹೋಗುತ್ತಾರೆ. ಹನ್ನೆರಡು ದಿನಗಳವರೆಗೆ ಸತ್ತ ಮನೆಯಲ್ಲಿ ಸೂತಕ ಆಚರಿಸುವರು. ಸತ್ತ ಮೂರನೆ ದಿನಕ್ಕೆ ಚಿತೆಯಾಗಿದ್ದರೆ, ನದಿ ಸಂಗಮದಲ್ಲಿ ಅಸ್ಥಿ ಬಿಡುವರು. ಹೂಳಿದ್ದರೆ ಆ ಗುದ್ದದ ಬಳಿ ಹಾಲುತುಪ್ಪ ಬಿಡುವರು. ಹನ್ನೆರಡನೆ ದಿನಕ್ಕೆ ತಿಥಿ ಮಾಡುವರು. ಈ ಸಂದರ್ಭದಲ್ಲಿ ತಂದೆಯಾಗಿದ್ದರೆ ಹಿರಿಯ ಮಗ ತಲೆ ಬೋಳಿಸಿಕೊಂಡು ಎಲ್ಲಾ ಕಾರ್ಯಗಳಲ್ಲಿ ಪಾಲ್ಗೊಳ್ಳುವನು. ತಾಯಿಯಾಗಿದ್ದರೆ ಕಿರಿಯ ಮಗ ತಲೆ ಬೋಳಿಸಿಕೊಂಡು ಎಲ್ಲಾ ಕಾರ್ಯಗಳಲ್ಲಿ ಪಾಲ್ಗೊಳ್ಳವನು. ಯಜ್ಞೋಪವೀತವನ್ನು ಇಂದು ಬದಲಿಸಬೇಕು. (ಎಲ್ಲಾ ಸೂತಕಗಳನ್ನು ತೆಗೆಯುವಾಗಲೂ ಯಜ್ಞೋಪವೀತವನ್ನು ಬದಲಿಸಬೇಕು) ತಿಥಿಯ ದಿನ ಪ್ರಾಣ ಹೋದ ಸ್ಥಳದಲ್ಲಿ ಅಥವಾ ನಡುಮನೆಯಲ್ಲಿ ಮೃತರ ಹೆಸರು ಹೇಳಿ ಕಳಸ ಹೂಡಿ ಪೂಜಿಸುವರು. ಮೃತ ವ್ಯಕ್ತಿ ಧರಿಸುತ್ತಿದ್ದ ಉಡುಪು-ಆಭರಣಗಳನ್ನು ಇಟ್ಟು ಪೂಜಿಸಿ ಎಡೆ ಇಡುವರು. ಈ ಸಂದರ್ಭದ ಎಲ್ಲಾ ಬಂಧುಗಳಿಗೆ ಆಮಂತ್ರಣ ಪತ್ರಿಕೆ ನೀಡಿ ಆಮಂತ್ರಣ ನೀಡುವರು. ವಿಶ್ವಕರ್ಮರಲ್ಲಿ ಮಾಂಸಹಾರಿ (ಮಿಶ್ರಹಾರಿ) ಮತ್ತು ಶಾಖಾಹಾರಿಗಳಿದ್ದು ತಿಥಿಯ ದಿನ ಮಾಂಸಹಾರಿಗಳಾದರೆ ಮಾಂಸಹಾರ ಮತ್ತು ಸಸ್ಯಹಾರಗಳೆರಡನ್ನು ಮಾಡಿದರೆ, ಶಾಖಾಹಾರಿಗಳು ಸಸ್ಯಹಾರದ ಅಡುಗೆಯನ್ನು ಮಾತ್ರ ಮಾಡುವರು. ಮೃತ ವ್ಯಕ್ತಿ ಮದ್ಯಪಾನ, ಧೂಮಪಾನ ಮಾಡುವುದಿದ್ದರೆ ಎಡೆ ಇಡುವುದಿದೆ. ಸಮಾಧಿಯ ಬಳಿ ಎಡೆ ಇಟ್ಟಾಗ ಕಾಗೆ ಬಂದು ಕಚ್ಚಿದ ನಂತರ ಉಳಿದವರು ಪ್ರಸಾದ ಎಂಬಂತೆ ಸ್ವೀಕರಿಸುವರು. ಸತ್ತವರೆ ಕಾಗೆಯಾಗಿ ಬರುವರೆಂಬ ನಂಬಿಕೆ ಇದೆ. ಪ್ರತಿ ವರ್ಷ ಸತ್ತ ದಿನಕ್ಕೆ ಅನುಗುಣವಾಗಿ ವರ್ಷದ ತಿಥಿ ಎಂದು ಆಚರಿಸುವುದು ಇದೆ. ಶವ ಸಂಸ್ಕಾರ ಮತ್ತು ತಿಥಿ ಮಾಡದಿದ್ದಲ್ಲಿ ಅವರಿಗೆ ಸದ್ಗತಿ ದೊರಕುವುದಿಲ್ಲ,

ಅಂತರಪಿಶಾಚಿಯಾಗಿ ಅಲೆಯುತ್ತಾರೆ ಎಂಬ ನಂಬಿಕೆ ಇರುವುದರಿಂದ ಈ ಎಲ್ಲಾ ಸಂಪ್ರದಾಯಗಳು ಮಹತ್ವ ಪಡೆದುಕೊಳ್ಳುತ್ತವೆ.

❖ ❖ ❖

ಅಡಿ ಟಿಪ್ಪಣಿಗಳು

೧. ಸಂಸ್ಕಾರ ಮಹೋದಧಿಃ (ಮಹಾಪ್ರಬಂಧ), ಡಾ. ಸ್ವಚ್ಛಂದಂ ಎ. ಅನಂತ ನರಸಿಂಹಾಚಾರ್, ಪು. ೩೪೨.
೨. ಚಾಮರಾಜನಗರ ಸುತ್ತಿನ ಲಂಬಾಣಿ ಸಂಸ್ಕೃತಿ – ಡಾ. ಮಹಾದೇವಿ ಬಾಯಿ : ಪು. ೧೯೪.
೩. ಕನ್ನಡ ವಿಷಯ ವಿಶ್ವಕೋಶ (ಜಾನಪದ) – ಪುಟ ೬೨೮.
೪. ನಂಜುಂಡಾಚಾರ್, ೬೩ ವರ್ಷ, ಐಕನಹಳ್ಳಿ.
೫. ಕನ್ನಡ ಜಾನಪದ ವಿಷಯ ವಿಶ್ವಕೋಶ ಪುಟ. ೬೨೮.
೬. ಗ್ರಾಮೀಣ ವೃತ್ತಿಗಳು (ಸಂ) ದೇವೇಂದ್ರ ಕುಮಾರ ಹಕಾರಿ ಮತ್ತು ಇತರರು. ಪುಟ. ೬೨
   * **ಗಂಗೆ ತರುವುದು** : ಬಾಣಂತಿಯು ಮಿಂದು ಮಡಿಯುಟ್ಟು ನೀರಿನ ಮೂಲದ ಹತ್ತಿರ ಹೋಗಿ ಗಂಗೆಗೆ ಪೂಜೆ ಸಲ್ಲಿಸಿ ಬಿಂದಿಗೆಯೊಂದರಲ್ಲಿ ನೀರು ಹೊತ್ತು ಬರುತ್ತಾಳೆ. ಅಂದಿನಿಂದ ಅವಳಿಗೆ ಅಡಿಗೆ ಮನೆ ಮತ್ತು ದೇವರ ಮನೆಗಳಿಗೆ ಪ್ರವೇಶ ದೊರೆಯುತ್ತದೆ.
   * **ಚಿನ್ನದ ಕೊಂಡಿಲು** : ಗಂಡಾಗಲಿ ಹೆಣ್ಣಾಗಲಿ ಮಗುವಿನ ಕಿವಿಗೆ ಧರಿಸುವ ಒಂದು ವಿಧದ ಆಭರಣ.
   * **ಚೌಲ** : ಮನೆ ದೇವರಿಗೆ ಮುಡಿ ಕೊಡುವುದು.

ಅಧ್ಯಾಯ – ೫

ಐಕನಹಳ್ಳಿಯಮ್ಮ ಮತ್ತು ಇತರ ಗ್ರಾಮದೇವತೆಗಳು

೧. ಐಕನಹಳ್ಳಿಯಮ್ಮ

ಐಕನಹಳ್ಳಿಯಮ್ಮ ಐಕನಹಳ್ಳಿಯ ಪ್ರಧಾನ ಗ್ರಾಮದೇವತೆ. ಊರಿನ ಹೊರಭಾಗದಲ್ಲಿರುವ ಕೆರೆಯ ಬಳಿ ಐಕನಹಳ್ಳಿಯಮ್ಮನ ದೇವಾಲಯವಿದೆ. ಸಾಮಾನ್ಯವಾಗಿ ಗ್ರಾಮದೇವತೆ ಊರಿನ ಮಧ್ಯಭಾಗದಲ್ಲಿರುತ್ತಾಳೆ. ಆದರೆ ಇವಳು ಶಕ್ತಿ ದೇವತೆಯಾಗಿ ಊರಿನ ರಕ್ಷಕಳಾಗಿ ಹೊರಗೆ ನೆಲಸಿದ್ದಾಳೆ ಎಂದು ಭಕ್ತರು ನಂಬಿದ್ದಾರೆ. ಪ್ರತಿ ಶುಕ್ರವಾರ ವಿಶೇಷವಾದ ಪೂಜೆ ನಡೆಯುತ್ತದೆ. ಇದರ ಅರ್ಚಕರು ಒಕ್ಕಲಿಗರಾಗಿರುವುದು ಗಮನಿಸಬೇಕಾದ ಸಂಗತಿ. ಕಷ್ಟಗಳನ್ನು ಪರಿಹರಿಸುತ್ತಾಳೆ ಎಂದು ನಂಬಿಕೊಂಡಿರುವ ಭಕ್ತರು ಬೇರೆ ಬೇರೆ ಊರುಗಳಿಂದ ಪ್ರತಿ ಶುಕ್ರವಾರ ಬರುತ್ತಾರೆ. ಆ ದಿನ ದೇವತೆಯು ಅರ್ಚಕನ ಮೈಮೇಲೆ ಬಂದು ಭಕ್ತರ ಕಷ್ಟಸುಖಗಳನ್ನು ಆಲಿಸಿ, ಸಮಸ್ಯೆಗಳಿಗೆ ಪರಿಹಾರ ನೀಡುತ್ತಾಳೆ. ಭಕ್ತರು ಹರಕೆಗಳನ್ನು ಕಟ್ಟಿಕೊಳ್ಳುವುದು ಸಾಮಾನ್ಯವಾಗಿದೆ.

ದೀಪಾವಳಿಯ ಹಬ್ಬದ ಕೆಂಡಕೊಂಡದ ದಿನ (ಹಣ್ಣುಕಾಯಿ ಹಬ್ಬ) ಭಕ್ತರು ಕೊಟ್ಟಿರುವ ಆಭರಣಗಳೆಲ್ಲವನ್ನು ಹಾಕಿ ಹೊಸ ಸೀರೆಯನ್ನುಡಿಸಿ ದೇವತೆಯನ್ನು ಅಲಂಕಾರ ಮಾಡುತ್ತಾರೆ. ಸಹಸ್ರಾರು ಸಂಖ್ಯೆಯ ಭಕ್ತ ಸಮೂಹ ಈ ಕ್ಷಣವನ್ನು ಕಣ್ತುಂಬಿಕೊಳ್ಳುತ್ತದೆ. ಐಕನಹಳ್ಳಿಯಮ್ಮನ ಮಕ್ಕಳಾದ ಚಿಕ್ಕಯ್ಯ, ದೊಡ್ಡಯ್ಯ ತಾಯಿಯ ಮೆರೆಯುವ ವಿಗ್ರಹದೊಂದಿಗೆ ಬರುತ್ತಾರೆ. ತಾಯಿಯ ಸನ್ನಿಧಿಯಲ್ಲಿ ಕೆಂಡಕೊಂಡ ತುಳಿದು, ಕುಣಿದು ಸಂತೃಪ್ತರಾಗುತ್ತಾರೆ. ಭಕ್ತರು ಪ್ರತಿ ಶುಕ್ರವಾರ ಐಕನಹಳ್ಳಿಯಮ್ಮನಿಗೆ ಮೊಸರನ್ನ, ಅವರೆಕಾಳು, ಅನ್ನ, ಸಾರು ಮುಂತಾದ ತಳಿಗೆ (ನೈವೇದ್ಯ) ಕೊಟ್ಟು ಪೂಜೆ ಮಾಡಿಸಿಕೊಂಡು ಹೋಗುತ್ತಾರೆ. ಐಕನಹಳ್ಳಿಯ ಗ್ರಾಮಸ್ಥರು ಗ್ರಾಮದೇವತೆಯಾದ ಐಕನಹಳ್ಳಿಯಮ್ಮನನ್ನೇ ಹೆಚ್ಚಾಗಿ ನಂಬಿಕೊಂಡಿದ್ದಾರೆ.

ಅನುಗ್ರಹ ದೇವತೆಯಾದ ಐಕನಹಳ್ಳಿಯಮ್ಮನ ಮಗ ವೀರಭದ್ರಸ್ವಾಮಿ. ಇವನು ದೊಡ್ಡಯ್ಯ ಮತ್ತು ಚಿಕ್ಕಯ್ಯನ ರೂಪದಲ್ಲಿ ಮೆರೆಯುತ್ತಾನೆ. ಇತರ ಜಾತಿಯವರೂ ಈ ದೇವತೆಗೆ ನಡೆದುಕೊಳ್ಳುತ್ತಾರೆ. ವೀರಭದ್ರಸ್ವಾಮಿ ಪಕ್ಕದ ತುಳಸಿ ಎಂಬ ಗ್ರಾಮದಲ್ಲಿದ್ದು ಹರಿಜನರು ಇವನನ್ನು ಪೂಜಿಸುತ್ತಾರೆ. ಪ್ರತಿ ಶುಕ್ರವಾರ ಅವ್ವ ಮಗನಿಗೆ ಸಂಜೆಯ ವೇಳೆ ಪೂಜೆ ನಡೆಯುತ್ತದೆ.

ದೀಪಾವಳಿಯ ಹಬ್ಬದ ಸಂದರ್ಭದಲ್ಲಿ ಬೆಲ್ಲದ ಅನ್ನ, ಮೊಸರನ್ನ ನೈವೇದ್ಯ ಮಾಡಿ, ಗಂಗೆ ಪೂಜೆ ಮಾಡಿ ನಂತರ ಸಿಡಿ ಮರ ಕಡಿಯುತ್ತಾರೆ. ಮೂರು – ನಾಲ್ಕು ವರ್ಷಗಳಿಗೊಮ್ಮೆ ಹೊಸ ಮರವನ್ನು ಕಡಿಯುವುದು ವಾಡಿಕೆ. ಸಿಡಿ ಅಚರಣೆಯ ದಿನ ವೀರಮಕ್ಕಳನ್ನು ತುಳಸಿ ಗ್ರಾಮಕ್ಕೆ ಹೋಗಿ ಐಕನಹಳ್ಳಿಯ ಗ್ರಾಮಸ್ಥರು ಕರೆತರುತ್ತಾರೆ. ಐಕನಹಳ್ಳಿ ಅಮ್ಮನ ಸನ್ನಿಧಿಯಲ್ಲಿ ಸಿಡಿಮರಕ್ಕೆ ವೀರಮಕ್ಕಳಲ್ಲಿ ಒಬ್ಬರನ್ನು ಸಾಂಪ್ರದಾಯಿಕವಾಗಿ ಕಟ್ಟುತ್ತಾರೆ. ಮೂರು ಸುತ್ತು ಸುತ್ತಿದ ಮೇಲೆ, ಸಿಡಿಮರಕ್ಕೆ ಮೇಕೆಯೊಂದನ್ನು ಬಲಿ ಕೊಡುತ್ತಾರೆ. ನಂತರ ವೀರಮಕ್ಕಳು ಮಾಂಸಹಾರವನ್ನು ಸಿದ್ಧಪಡಿಸಿಕೊಂಡು ಪ್ರಸಾದ ಸ್ವೀಕರಿಸುತ್ತಾರೆ. ಮೂರು ದಿನ ಜಾತ್ರೆ ಸೇರಿರುತ್ತದೆ.

ವೀರಭದ್ರಸ್ವಾಮಿಯ ಮೆರೆಯುವ ದೇವರುಗಳಾದ ದೊಡ್ಡಯ್ಯ, ಚಿಕ್ಕಯ್ಯ ಮುಖವಾಡಗಳಿಗೆ ಬಣ್ಣ ತುಂಬುವವರು ಬದುಕಿ ಉಳಿಯುವುದಿಲ್ಲ ಎಂಬ ನಂಬಿಕೆಯಿದೆ. ಹೀಗಾಗಿ ವಯಸ್ಸಾದವರನ್ನು ಬಣ್ಣ ಹಾಕಲು ಕೇಳುತ್ತಾರೆ. ಬಣ್ಣವನ್ನು ತುಂಬಬೇಕಾದರೆ ಎದುರಿಗೆ ನೂಲಿನ ಎಳೆ ಬಿಟ್ಟು, ಬಾಳೆಕಂಬ ಕಡಿದು ಕಪ್ಪು ಹೋತವನ್ನು ಕಡಿದು, ಕನ್ನಡಿಯನ್ನು ವಾರೆಯಾಗಿ ಹಿಡಿದು ಬಣ್ಣ ತುಂಬಬೇಕು. ಕೆರೆಯ ಹತ್ತಿರ ಮಣ್ಣಿನ ಕುಡಿಕೆ ತಡೆಹೊಡೆಯಲು ಬಳಸುವ ತಾಮ್ರದ ತಗಡು, ಕೋಳಿ ಮೊಟ್ಟೆಯಿಟ್ಟು ವಿದ್ಯುಕ್ತವಾಗಿ ತಡೆಹೊಡೆದು ನಂತರ ಬಣ್ಣಹಾಕಬೇಕೆಂಬ ನಂಬಿಕೆಯಿದೆ. ಈ ಮುಖವಾಡಗಳನ್ನು ವೀರ ಮಕ್ಕಳನ್ನು ಬಿಟ್ಟು ಬೇರೆಯವರು ಧರಿಸಲು ಸಾಧ್ಯವಾಗುವುದಿಲ್ಲ. ದೇವತೆಯ ರಕ್ಷಕರಾದ ಚಿಕ್ಕಯ್ಯ ದೊಡ್ಡಯ್ಯ ಮುಖವಾಡ ಧರಿಸುತ್ತಾರೆ. ಕರ್ನಾಟಕದ ಬೇರೆ ಕಡೆ ಇದನ್ನು ಸೋಮ ಎಂದು ಕರೆಯುತ್ತಾರೆ.

ಅ) ಐಕನಹಳ್ಳಿಯಮ್ಮ ಮತ್ತು ಭಕ್ತರು

ಮನೆಯಲ್ಲಿ ಮಗು ಜನಿಸಿದ ಮೇಲೆ ಐದು ತಿಂಗಳಿಂದ ಒಂದು ವರ್ಷದ ಒಳಗೆ ಐಕನಹಳ್ಳಿಯಮ್ಮನಿಗೆ ಮೊದಲ ತಲೆಮುಡಿಯನ್ನು ಕೊಡಬೇಕು. ನಂತರ ಯಾವ ದೇವರಿಗಾದರೂ ಕೊಡಬಹುದು. ಸಾಮಾನ್ಯವಾಗಿ ಹಬ್ಬದ ಸಂದರ್ಭದಲ್ಲಿ ಹೆಚ್ಚು ಹಾಗೂ ಉಳಿದಂತೆ ಶುಕ್ರವಾರದ ದಿನ ಮಕ್ಕಳ ಮುಡಿಕೊಡುವ ಸಂಪ್ರದಾಯ ನಡೆಯುತ್ತದೆ. ಐಕನಹಳ್ಳಿಯಮ್ಮನಿಗೆ ಶುಕ್ರವಾರ ಪೂಜಾ ದಿನ. ಶುಕ್ರವಾರ ಮಡಿಯಾದ ಶುದ್ಧ ಹಾಲು, ಬೆಣ್ಣೆ, ಮೊಸರನ್ನು ತಳಿಗೆ ಕೊಟ್ಟು ಪೂಜೆ ಮಾಡಿಸುತ್ತಾರೆ. ಈ ವಾರ ಹಾಲು ಕೊಡದಿದ್ದರೆ ಮುಂದಿನ ವಾರ ಎರಡು ವಾರದನ್ನು ಸೇರಿಸಿ ಕೊಡಬೇಕು. ಯಾರ ಮನೆಯಲ್ಲಿ ಜಾನುವಾರುಗಳು ಹಾಲು ಕೊಡುತ್ತಿರುತ್ತವೆಯೋ ಅಂತಹವರಿಗೆ ಈ ನಿಯಮ ಅನ್ವಯವಾಗುತ್ತದೆ. ಪೂಜಾರಿಯ ಮನೆಯವರು ಹಾಲನ್ನು ಹೆಪ್ಪುಮಾಡಿ, ಮಜ್ಜಿಗೆ ಕಡೆದು, ಬೆಣ್ಣೆ ತೆಗೆದು, ತುಪ್ಪ ತಯಾರಿಸಿ ದೀಪ ಹಚ್ಚುತ್ತಾರೆ. ಮೊದಲು ಬೆಳೆದ ದವಸಧಾನ್ಯಗಳನ್ನು ತಳಿಗೆಯ ರೂಪದಲ್ಲಿ ಕೊಡಲೇಬೇಕು. ತರಕಾರಿ, ಕಾಳು, ಅವರೆಕಾಳಿನ ಕಾಲದಲ್ಲಿ ಚಿಲಕವರೆ ಸಾರುಮಾಡಿ, ಅನ್ನ ಮುದ್ದೆಯೊಂದಿಗೆ ತಳಿಗೆ ಕೊಟ್ಟು ಬರುತ್ತಾರೆ. "ಹೊಸ ಫಲ (ಹಣ್ಣು) ಯಾವುದು ಬಂದರೂ ಅದನ್ನು ತಳಿಗೆಯ ರೂಪದಲ್ಲಿ

ಕೊಡುತ್ತಾರೆ. ಎಮ್ಮೆ, ಹಸು ಕರುಹಾಕಿದಾಗ ಸಕ್ಕರೆ, ಬೆಲ್ಲ, ಗಿಣ್ಣಾಲು ತೆಗೆದುಕೊಂಡು ಹೋಗಿ ಕೊಟ್ಟು ದೇವಸ್ಥಾನದಲ್ಲಿ ಪೂಜೆ ಮಾಡಿಸಿಕೊಂಡು ಬರುತ್ತಾರೆ. ಗೌರಿ ಹಬ್ಬ, ಶಿವರಾತ್ರಿ, ಯುಗಾದಿ, ದೀಪಾವಳಿಯಲ್ಲಿ ತಮ್ಮ ಮನೆಯಲ್ಲಿ ತಯಾರಿಸಿದ ವಿಶೇಷ ಅಡುಗೆಗಳನ್ನು ತಳಿಗೆ ರೂಪದಲ್ಲಿ ಕೊಟ್ಟುಬರುತ್ತಾರೆ. ಯುಗಾದಿ ಹಬ್ಬದಲ್ಲಿ ಒಬ್ಬಟ್ಟು, ಹುಳಿಅನ್ನ ನಾಲ್ಕೈದು ಕುಕ್ಕೆ ತುಂಬಿರುತ್ತದೆ."[೧]

ಗ್ರಾಮದ ಹೆಣ್ಣುಮಕ್ಕಳು ಹಾಗೂ ಊರಿಗೆ ಬರುವ ಸೊಸೆಯರು ಮದುವೆಯಲ್ಲಿ ಬಿಜಣಿಗೆ ಪೆಟ್ಟಿಗೆ ಮೇಲೆ ಇಡುವ ಸೀರೆಯನ್ನು ಐಕನಹಳ್ಳಿಯಮ್ಮನಿಗೆ ಕೊಡಬೇಕು. ಮನೆಯ ಹಿರಿಯ ಮಕ್ಕಳಿಗೆ ಸಹಜವಾಗಿ ಪೂಜೆ ಕಟ್ಟಿಸುತ್ತಾರೆ. ಸಂಸಾರದಲ್ಲಿ ಆರ್ಥಿಕ ತೊಂದರೆಯಿದ್ದು ತುಂಬಾ ಕಷ್ಟವಿದ್ದರೆ ಕಿರಿಯ ಮಗನ ಮದುವೆಯಲ್ಲಾದರೂ ಪೂಜೆ ಕಟ್ಟಿಸಬೇಕು. ಹೆಣ್ಣು ಮಕ್ಕಳ ಮದುವೆಯಲ್ಲಿ ಈ ಸಂಪ್ರದಾಯವಿಲ್ಲ. ಮದುವೆ ಮುಗಿದ ಮುಂದಿನ ಶುಕ್ರವಾರ ತಮ್ಮ ಶಕ್ತ್ಯಾನುಸಾರ ಪೂಜಾ ಸಾಮಗ್ರಿಗಳನ್ನು ತರುತ್ತಾರೆ. ಎಲೆಯಿಂದ ಅಲಂಕಾರ ಮಾಡಿ ಬಾಳೆಕಂದುಗಳನ್ನು ಐಕನಹಳ್ಳಿಯಮ್ಮನ ಗುಡಿಗೆ ಎರಡು ಕಡೆಗೂ ನಿಲ್ಲಿಸುತ್ತಾರೆ. ಎಲೆ, ಹಣ್ಣು, ತೆಂಗಿನಕಾಯಿ, ಕರ್ಪೂರ, ಹಾರ, ಹೂವು, ಗಂಧದ ಕಡ್ಡಿ, ಅರಿಶಿಣ, ಕುಂಕುಮ ಮೊದಲಾದ ಪೂಜಾಸಾಮಗ್ರಿಗಳನ್ನು ತೆಗೆದುಕೊಂಡು ಹೋಗಿ ಪೂಜೆ ಮಾಡಿಸುತ್ತಾರೆ. ಅನಂತರ ಸತ್ಯಮ್ಮ, ಲಕ್ಕಮ್ಮ, ಬೋರೇದೇವರು, ವೀರಭದ್ರಸ್ವಾಮಿ ಹಾಗು ಐಕನಹಳ್ಳಿಯಮ್ಮನಿಗೆ ತಲಾ ಒಂದೊಂದರಂತೆ ಐದು ಮೇಕೆಯನ್ನು ಬಲಿಕೊಡುತ್ತಾರೆ. ಈ ಮರಿಬಲಿಗಳು ಐಕನಹಳ್ಳಿಯಮ್ಮನ ಸೇವಕನಾದ ಚಿಕ್ಕಯ್ಯನಿಗೆ ಎಂದು ಜನ ನಂಬಿಕೊಂಡಿದ್ದಾರೆ.

ಆ) ಐಕನಹಳ್ಳಿಯಮ್ಮನಿಗೆ ಸಂಬಂಧಿಸಿದ ಐತಿಹ್ಯಗಳು

೧. "ಕಲ್ಯಾಣಿಯೊಂದರಲ್ಲಿ ಏಳು ಜನ ಅಕ್ಕತಂಗಿಯರು ಸ್ನಾನ ಮಾಡುತ್ತಿದ್ದಾಗ, ಕೃಷ್ಣನು ಅವರ ಬಟ್ಟೆಗಳನ್ನು ಆಲದ ಮರಕ್ಕೆ ನೇತುಹಾಕುತ್ತಾನೆ. ತಮ್ಮ ದಿವ್ಯಶಕ್ತಿಯಿಂದ ಗಿಡವೊಂದನ್ನು ಸೃಷ್ಟಿಸಿ ಅದರ ಎಲೆಗಳನ್ನು ಸುತ್ತಿಕೊಂಡು ದಿಕ್ಕಾಪಾಲಾಗಿ ಅಕ್ಕತಂಗಿಯರು ಓಡಿ ಹೋಗುತ್ತಾರೆ. ಹಿರಿಯವಳಾದ ತಲಕಾಡಿನ ತಂದ್ರಮ್ಮ ತನ್ನ ಇತರ ಸಹೋದರಿಯರಿಗೆ ಬೇರೆಬೇರೆ ದಿಕ್ಕಿಗೆ ಹೋಗಿ ನೆಲೆಯಾಗಿ ಎಂದು ಸಲಹೆ ಕೊಡುತ್ತಾಳೆ. ಚನ್ನರಾಯಪಟ್ಟಣದಮ್ಮ, ದೊಡ್ಡತರಹಳ್ಳಿಯಮ್ಮ, ಚಿಕ್ಕತರಹಳ್ಳಿಯಮ್ಮ, ಐಕನಹಳ್ಳಿಯಮ್ಮ, ಭಾರತೀಪುರದಮ್ಮ ಹಾಗೂ ದಡಿಘಟ್ಟದಮ್ಮ ಅಕ್ಕನ ಸಲಹೆಯಂತೆ ಬೇರೆ ಬೇರೆ ಕಡೆ ನೆಲಸುತ್ತಾರೆ."[೨]

೨. "ಸುಮಾರು ೨೫ ವರ್ಷಗಳ ಹಿಂದೆ ಹೇಮಗಿರಿ ಹೊಳೆಯಲ್ಲಿ ಐಕನಹಳ್ಳಿಯಮ್ಮನ ಮೆರೆಸುವ ಅಡ್ಡದೇವರನ್ನು (ಉತ್ಸವಮೂರ್ತಿ) ತೊಳೆಯಲು ಹೋಗಿದ್ದರು. ಓಲೆ, ತಾಳಿ ಮೊದಲಾದಂತಹ ಆಭರಣಗಳನ್ನು ಬೆಳಗಲು ಹುಣಸೆಹಣ್ಣು ಮರೆತುಹೋಗಿದ್ದರಂತೆ. ಹೊಳೆಯ ಬಳಿ ಎಲ್ಲಿಯೂ ಸಿಗದಿದ್ದಾಗ, ಅಮ್ಮನನ್ನು ಬೇಡಿಕೊಂಡರಂತೆ. ಆಗ ಕಿತ್ತಲೆ ಹಣ್ಣಿನ ತೊಳೆಯ

ರೀತಿಯಲ್ಲಿ ಹುಣಸೆಹಣ್ಣು ಕಾಣಿಸಿತಂತೆ. ಆದರಿಂದ ದೇವರನ್ನು ಶುದ್ಧಮಾಡಿದರಂತೆ. ನಂತರ ಹೆಣ್ಣು ಮಕ್ಕಳ ಜೊತೆ ಕಳಸಹೊರಿಸಿಕೊಂಡು ತಮಟೆ, ಓಲಗಗಳೊಂದಿಗೆ ಊರಿಗೆ ಕರೆತಂದರಂತೆ."[೩]

೩. "ಪ್ರತಿವರ್ಷ ದೀಪಾವಳಿ ಹಬ್ಬದ ಸಂದರ್ಭದಲ್ಲಿ ಐಕನಹಳ್ಳಿಯಮ್ಮನ ಸೀರೆಗಳನ್ನು ತೊಳೆಯಬೇಕು. ಒಮ್ಮೆ ಐಕನಹಳ್ಳಿ ಕೆರೆಯಲ್ಲಿ ನೀರಿಲ್ಲದಿದ್ದಾಗ, ಮಡಿವಾಳರ ಸಿದ್ದಣ್ಣ ಸೀರೆಗಳನ್ನು ದಮ್ಮನಿಂಗಳ ಗ್ರಾಮದ ಕೆರೆಯಲ್ಲಿ ತೊಳೆದುಕೊಂಡು ಬಂದು, ದೇವಸ್ಥಾನದಲ್ಲಿ ಅವುಗಳನ್ನು ಇಟ್ಟು ಬಂದು ಮನೆಯಲ್ಲಿ ಮಲಗಿದನಂತೆ. ಐಕನಹಳ್ಳಿಯಮ್ಮ ಕನಸಿನಲ್ಲಿ ಬಂದು ನನ್ನ ಒಂದು ಸೀರೆಯನ್ನು ಏಕೆ ಬಿಟ್ಟುಬಂದಿದ್ದೀಯ ಎಂದು ಪ್ರಶ್ನೆ ಮಾಡಿದಳು. ನಾನು ನಿನ್ನ ಜೊತೆಯಲ್ಲಿ ಬರುತ್ತೀನಿ ನಡಿ ಎಂದು ಮಡಿವಾಳನನ್ನು ಕರೆದುಕೊಂಡು ಹೋಗಿ ಸೀರೆಯನ್ನು ತರಿಸಿಕೊಂಡು ಬಂದಳು."[೪] ಅವಳು ತೊಟ್ಟುಕೊಂಡಿದ್ದ ಸೀರೆಯಲ್ಲಿ ಗೆಜ್ಜೆಯಿಂದಾಗಿ ಶಬ್ದವಾಗುತ್ತಿತ್ತು. ಐಕನಹಳ್ಳಿಯಮ್ಮನಿಗೆ ಸೀರೆಯ ಮೇಲೆ ಇಷ್ಟೊಂದು ವ್ಯಾಮೋಹವಿತ್ತು.

೪. "ದೀಪಾವಳಿ ಹಬ್ಬಕ್ಕೆ ಪ್ರತಿಯೊಬ್ಬರ ಮನೆಯಲ್ಲಿಯೂ ಶ್ಯಾವಿಗೆ ಮಾಡಿ ಐಕನಹಳ್ಳಿಯಮ್ಮನಿಗೆ ತಳಿಗೆ ಕೊಡಬೇಕು. ದೇವಮ್ಮನೆಂಬುವವಳು ಶ್ಯಾವಿಗೆಯನ್ನು ಸಿದ್ಧಪಡಿಸಿ ಒಂದು ಕಡೆ ತೆಗೆದಿಟ್ಟಳು. ತಳಿಗೆ ಕೊಡುವಾಗ ಶ್ಯಾವಿಗೆ ಕೊಡುವದನ್ನು ಮರೆತಳು. ರಾತ್ರಿ ಮಲಗಿದ್ದ ಸಮಯದಲ್ಲಿ ದೇವಮ್ಮನ ಕನಸಿಗೆ ಬಂದ ಐಕನಹಳ್ಳಿಯಮ್ಮ, ನಾನು ನಿನಗೆ ಅಷ್ಟೊಂದು ಬಡತನ ಕೊಟ್ಟಿದ್ದೀನ? ಶ್ಯಾವಿಗೆ ಕೊಡಲಿಲ್ಲವಲ್ಲ? ಕೊಟ್ಟಿದ್ದರೆ ನಾವು ಅಕ್ಕ-ತಂಗಿಯರೆಲ್ಲ ಹಂಚಿಕೊಂಡು ಊಟಮಾಡುತ್ತಿರಲಿಲ್ಲವೆ? ಎಂದು ಪ್ರಶ್ನಿಸುತ್ತಾಳೆ. ಅಂದಿನಿಂದ ಮಾಡಿದ ತಪ್ಪನ್ನು ತಿದ್ದಿಕೊಂಡ ದೇವಮ್ಮ ತನ್ನ ಕರ್ತವ್ಯವನ್ನು ಮುಂದುವರೆಸಿಕೊಂಡು ಬರುತ್ತಿದ್ದಾಳೆ."[೫]

೫. "ಜಯಮ್ಮನೆಂಬುವಳ ಮದುವೆಯಲ್ಲಿ ಐಕನಹಳ್ಳಿಯಮ್ಮನಿಗೆ ಸೀರೆ ಕೊಟ್ಟಿರಲಿಲ್ಲ. ಅವರ ತಾಯಿ ಮಲಗಿದ್ದಾಗ ಕನಸಿನಲ್ಲಿ ಐಕನಹಳ್ಳಿಯಮ್ಮ ಒಂದು ಸೀರೆ ಕೇಳಿದಳು. ಅನಂತರ ಸೀರೆ ಕೊಟ್ಟು ಅವಳ ಆಶೀರ್ವಾದ ಪಡೆದುಕೊಂಡರಂತೆ."[೬]

೬. "ಚೆನ್ನಮ್ಮನ ದೇವಕ್ಕ ಎಂಬುವಳು ದೀಪಾವಳಿ ಹಬ್ಬವಾದ ಮೂರು ದಿನಕ್ಕೆ ವಡೆಯನ್ನು ಮಾಡಿಕೊಂಡು ತಿಂದು ಕಡಲೆ ಹೊಲವನ್ನು ಕಾಯಲು ಹೋಗಿದ್ದಳಂತೆ. ಹೊಲದ ಬಳಿ ನಿದ್ದೆ ಮಾಡುತ್ತಿದ್ದಾಗ ಐಕನಹಳ್ಳಿಯಮ್ಮ ಕೆನ್ನೆಗೊಂದು ಏಟು ಒಡೆದು ವಡೆಯನ್ನು ನನಗ್ಯಾಕೆ ಕೊಡಲಿಲ್ಲ ಎಂದು ಪ್ರಶ್ನೆ ಮಾಡಿದಳಂತೆ. ಮುಂದಿನ ಶುಕ್ರವಾರ ವಡೆ ಪಾಯಸ ಮಾಡಿ ತಳಿಗೆ ಕೊಟ್ಟು ಬಂದರಂತೆ."[೭]

೭. "ಒಮ್ಮೆ ಪೂಜಾರಿ ಪುಟ್ಟಣ್ಣನ ಅಪ್ಪ ಸಣ್ಣೇಗೌಡ ಶುಕ್ರವಾರ ಊರಿನ ಕೆರೆಯ ಬಳಿ ಇರುವ ಐಕನಹಳ್ಳಿಯಮ್ಮನನ್ನು ಪೂಜೆ ಮಾಡಿಕೊಂಡು ಬರುವಾಗ, ಹಿತ್ತಾಳೆಯ ಚೊಂಬನ್ನು ಬಿಟ್ಟು

ಬಂದರಂತೆ. ನಂತರ ನೆನಪಾಗಿ ದೇವಸ್ಥಾನಕ್ಕೆ ಚೊಂಬು ತರಲು ಹೋದರಂತೆ. ಅಲ್ಲಿ ಐಕನಹಳ್ಳಿಯಮ್ಮನ ಅಕ್ಕ ತಂಗಿಯರೆಲ್ಲ ಊಟ ಮಾಡಲು ಸೇರಿಕೊಂಡಿದ್ದರಂತೆ. ಊಟ ಮಾಡುವಾಗ ಚಂಬು ತೆಗೆದುಕೊಂಡು ಬರಲು ಬಂದಿರುವ ಪೂಜಾರಯ್ಯನಿಗೆ ದೇವಿಯು ಮನೆಗೆ ಹೋಗುವವರೆಗೂ ತಿರುಗಿ ನೋಡಬೇಡವೆಂದು ಹೇಳಿ ಕಳುಹಿಸುತ್ತಾಳೆ."[೮]

೮. "ದೀಪಾವಳಿ ಹಬ್ಬದ ದಿನ ಐಕನಹಳ್ಳಿಯಮ್ಮನಿಗೆ ಅವಳ ಒಡವೆಗಳನ್ನು ಧರಿಸುತ್ತಾರೆ. ೧೫-೨೦ ವರ್ಷದ ಹಿಂದೆ, ಕಳ್ಳರು ಒಡವೆ ಬಿಚ್ಚಿಕೊಳ್ಳಲು ಕಾದು ಕುಳಿತಿದ್ದರಂತೆ. ಒಡವೆ ಬಿಚ್ಚಲು ಸಿದ್ಧವಾದ ಅವರನ್ನು ನೋಡಿ ವೀರಭದ್ರಸ್ವಾಮಿ (ಚಿಕ್ಕಯ್ಯ) ಆ ಕಳ್ಳರನ್ನು ಓಡಿಸಿ ಊರಿನವರನ್ನು ಕರೆದುಕೊಂಡು ಹೋಗಿ ಒಡವೆ ಬಿಚ್ಚಿಸಿಕೊಂಡು, ಅದನ್ನು ಹೊತ್ತು ಕೊಂಡಿರುವವರನ್ನು ಮುಂದೆ ಬಿಟ್ಟುಕೊಂಡು ಪೂಜಾರಿಯ ಮನೆಗೆ ತಂದು ಇಡಿಸಿದರಂತೆ. ರಾಮಚಂದ್ರನೆಂಬ ಆಚಾರಿ ಸ್ವಲ್ಪ ಚಿನ್ನವನ್ನೂ ಕದಿಯದೆ ದೇವರ ಒಡವೆಗಳನ್ನು ಮಾಡಿಕೊಟ್ಟಿದ್ದನಂತೆ."[೯]

೨. ಇತರ ಗ್ರಾಮದೇವತೆಗಳು

೧. ವೀರಭದ್ರಸ್ವಾಮಿ

ಐಕನಹಳ್ಳಿಯಮ್ಮನ ದ್ವಾರಪಾಲಕರಂತೆ ಇದ್ದ ಆಕೆಯ ಮಕ್ಕಳಾದ ದೊಡ್ಡಯ್ಯ, ಚಿಕ್ಕಯ್ಯ ತುಳಸಿ ಗ್ರಾಮದಲ್ಲಿ ನೆಲಸಿದ್ದಾರೆಂದು ಜನಪದರು ನಂಬಿದ್ದಾರೆ. ಹೀಗಾಗಿ ಐಕನಹಳ್ಳಿಗೂ ಮತ್ತು ತುಳಸಿಗೂ ನಿಕಟವಾದ ಸಂಬಂಧವಿದೆ. ಶುಕ್ರವಾರ ಐಕನಹಳ್ಳಿಯಮ್ಮನಿಗೆ ಪೂಜೆಯಾಗುವುದಕ್ಕೆ ಮೊದಲು ವೀರಭದ್ರಸ್ವಾಮಿ ದೇವಾಲಯಕ್ಕೆ ಪೂಜೆಯಾಗುತ್ತದೆ. ನನಗಿಂತ ಮೊದಲು ನನ್ನ ಮಕ್ಕಳಿಗೆ ಪೂಜೆಯಾಗಲಿ ಎಂದು ತಾಯಿ ಹೇಳಿರುವುದರಿಂದ ಈ ಪದ್ಧತಿಯಿದೆ. ವೀರಭದ್ರಸ್ವಾಮಿಯ ದೇವಾಲಯವನ್ನು ಪೂಜಿಸುವವರು ಹರಿಜನರು (ದೊಡ್ಡಯ್ಯ, ಚಿಕ್ಕಯ್ಯನ ಸೋಮನ ಮುಖವಾಡ ಧರಿಸುವ ಕುಟುಂಬದವರು) ಇವರಿಗೆ ಕಂಕಣವನ್ನು ಕಟ್ಟಿರುವುದರಿಂದ ನಾವು ಕೂಡ ಪೂಜಾರಿಗಳೆ ಆಗಿದ್ದೀವಿ. ಹರಿಜನರಲ್ಲಿ ಶ್ರೇಷ್ಠರು ಎನ್ನುತ್ತಾರೆ. ಸೋಮನ ಮುಖವಾಡಗಳನ್ನು ಇವರನ್ನು ಬಿಟ್ಟರೆ ಮತ್ತಾರು ಧರಿಸುವಂತಿಲ್ಲ. ಐಕನಹಳ್ಳಿಯ ಹಿರಿಯ ಮಕ್ಕಳಿಗೆ ಮದುವೆಯಾದಾಗ ಪೂಜೆ ಕಟ್ಟಿಸುತ್ತಾರೆ. ಚಿಕ್ಕಯ್ಯ, ದೊಡ್ಡಯ್ಯನ ಸೋಮನ ಮುಖವಾಡಗಳನ್ನು ಇಡುವ ಈ ಗುಡಿಯಲ್ಲಿಯೆ ಐಕನಹಳ್ಳಿಯಮ್ಮನ ಮೆರೆಯುವ ದೇವರ ವಿಗ್ರಹವನ್ನು ಇಟ್ಟಿದ್ದಾರೆ. ಪ್ರತಿ ಶುಕ್ರವಾರ ಭಕ್ತರ ಸಂಖ್ಯೆ ಹೆಚ್ಚಾಗಿರುತ್ತದೆ.

ದೀಪಾವಳಿ ಹಬ್ಬದ ಸಂದರ್ಭದಲ್ಲಿ ಸಿಡಿಹಬ್ಬದ ದಿನ ಇಲ್ಲಿಂದ ದೇವರನ್ನು ಐಕನಹಳ್ಳಿ ಗ್ರಾಮಸ್ಥರೆ ಬಂದು ತೆಗೆದುಕೊಂಡು ಹೋಗುತ್ತಾರೆ. ಹಣ್ಣು ಕಾಯಿ ಹಬ್ಬವಾದ ಮೇಲೆ ಊರಾಡಿಸಿ ನಂತರ ವಾಪಸ್ಸು ತಂದಿಡುತ್ತಾರೆ. ಹೀಗಾಗಿ ಇವೆರಡು ಗ್ರಾಮಕ್ಕು ಸಾಂಸ್ಕೃತಿಕವಾಗಿ ನಂಟಿದೆ.

ಅ) ವೀರಭದ್ರಸ್ವಾಮಿಗೆ ಸಂಬಂಧಿಸಿದ ಐತಿಹ್ಯಗಳು

೧. "ಸುಮಾರು ೩೦ ವರ್ಷಗಳ ಹಿಂದೆ ಮಾರನಾಯಕನಹಳ್ಳಿಯ ಗೌಡರೊಬ್ಬರು ಮನೆ ಕಟ್ಟುವಾಗ ದೇವಸ್ಥಾನಕ್ಕೆ ಬಂದು ಪೂಜೆ ಮಾಡಿಸಿ, ಗೃಹ ಪ್ರವೇಶಕ್ಕೆ ಊರಿಗೆ ದೇವರನ್ನು ತಂದು ಮರಿಬಲಿ ಕೊಟ್ಟು ಕಳುಹಿಸಿ ಕೊಡುತ್ತೇನೆಂದು ಹೇಳಿ ಹಾಗೆ ನಡೆದುಕೊಳ್ಳಲಿಲ್ಲ. ನಂತರ ಬೇರೆಯವರು ಊರಿಗೆ ದೇವರನ್ನು ತೆಗೆದುಕೊಂಡು ಹೋದಾಗ ಚಿಕ್ಕಯ್ಯ ಆ ಗೌಡರ ಮನೆಯಿಂದ ಮುಂದಕ್ಕೆ ಮೂರು ಹೆಜ್ಜೆ ಹಾಕಲಿಲ್ಲ. ಆಗ ತಪ್ಪಾಯಿತೆಂದು ಹಣ ಕೊಟ್ಟು ಕುರಿ ತಂದು ಬಲಿಕೊಟ್ಟು ತಪ್ಪು ಕಾಣಿಕೆ ಕಟ್ಟಿದರು."[೧೦]

೨. "ಮಾರನಾಯಕನಹಳ್ಳಿಯ ಕರ್ಯಪ್ಪಣ್ಣ ಎಂಬುವವರು ೩೦೦ ಕುರಿ ಸಾಕಿದ್ದರು. ದೇವರು ಮನೆಯ ಬಳಿ ಬಂದಾಗ ಮರಿ ಬಲಿ ಕೊಡಲ್ಲ ಕೋಳಿ ಬಲಿ ಕೊಡುತ್ತೇನೆಂದು ಹಠ ಮಾಡಿದ. ಚಿಕ್ಕಯ್ಯ ಹೂ ಕಿತ್ತು ಕೊಟ್ಟು ಬಂದ. ಅವನ ಮನೆಯ ಒಂದು ಕುರಿಯು ಉಳಿಯಲಿಲ್ಲ. ಹೆಂಡತಿ ಸತ್ತಳು, ಈಗ ಅವರ ಮಕ್ಕಳು ಐಕನಹಳ್ಳಿಗೆ ಬಂದು ಪ್ರತಿ ವರ್ಷ ಪೂಜೆ ಮಾಡಿಸಿಕೊಂಡು ಹೋಗುತ್ತಿದ್ದಾರೆ."[೧೧]

೩. "ಐಕನಹಳ್ಳಿಯ ಕೆಂಗಪ್ಪನ ನಂಜಪ್ಪನವರು ವೀರಮಕ್ಕಳನ್ನು ನೀವೆ ಅಲ್ಲ ದೇವರನ್ನು ಧರಿಸುವವರು, ನಾವು ಧರಿಸುತ್ತೇವೆಂದು ಸೋಮನನ್ನು ಧರಿಸಿ ಕುಣಿಯಲು ಪ್ರಯತ್ನಿಸಿದರು. ಈ ಕಾರಣಕ್ಕಾಗಿ ಅವರ ಮಕ್ಕಳು ಬುದ್ಧಿಗೆಟ್ಟು ಹೋದರು."[೧೨]

೪. "ತುಳಸಿ ಗ್ರಾಮದ ಸಣ್ಣ ಕಾಳಪ್ಪನ ಅಣ್ಣಯ್ಯರಿಗೆ ೮ ವರ್ಷದಿಂದ ಮಕ್ಕಳಿರಲಿಲ್ಲ. ದೇವರನ್ನು ಪ್ರಾರ್ಥಿಸಿಕೊಂಡರು. ಈಗ ಅವರಿಗೆ ಮಗುವನ್ನು ವೀರಭದ್ರ ಕರುಣಿಸಿದ್ದಾನೆ ಎಂದು ನಂಬಿಕೊಂಡಿದ್ದಾರೆ."[೧೩]

೨. ಭೈರವೇಶ್ವರ

ಐಕನಹಳ್ಳಿ ಗ್ರಾಮದ ಕೆಲವರಿಗೆ ಶ್ರೀ ಆದಿಚುಂಚನಗಿರಿಯಲ್ಲಿ ನೆಲೆಸಿರುವ ಭೈರವೇಶ್ವರ ಮನೆ ದೇವರಾಗಿದ್ದಾನೆ. ಈ ಕಾರಣಕ್ಕಾಗಿ ಭೈರವನ ಭಕ್ತರೆಲ್ಲ ಸೇರಿ ದೇವಾಲಯ ನಿರ್ಮಿಸಿಕೊಂಡಿದ್ದಾರೆ. ಭಾನುವಾರ ವಿಶೇಷ ಪೂಜೆ ನಡೆಯುತ್ತದೆ. ಈ ದೇವರನ್ನು ಪೂಜಿಸುತ್ತಿರುವ ಕುಟುಂಬದವರು ಅಗಸರು. (ಮಡಿವಾಳರು) ಮೊದಲಿದ್ದ ಹಳೆಯ ದೇವಾಲಯವನ್ನು ಈಗ ಜೀರ್ಣೋದ್ಧಾರ ಮಾಡಿಸಿದ್ದಾರೆ. ಹಬ್ಬ ಹರಿದಿನಗಳಲ್ಲಿ ತುಳಸಿ, ಐಕನಹಳ್ಳಿ ಕೊಪ್ಪಲು, ಭದ್ರನ ಕೊಪ್ಪಲು ಸೇರಿದಂತೆ ಸುತ್ತಮುತ್ತಲ ಗ್ರಾಮದ ಭಕ್ತರು ಬಂದು ಪೂಜೆ ಮಾಡಿಸಿಕೊಂಡು ಹೋಗುತ್ತಾರೆ. ಈ ದೇವಾಲಯದಲ್ಲಿರುವ ತ್ರಿಶೂಲವನ್ನು ಶ್ರೀ ಆದಿಚುಂಚನಗಿರಿಯ ಪೀಠಾಧ್ಯಕ್ಷರಾಗಿದ್ದ ದಿವಂಗತ ಶ್ರೀಶ್ರೀಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು ಕೊಟ್ಟಿದ್ದರೆಂದು ಹೇಳುತ್ತಾರೆ. ಅರ್ಚಕ ರಾಮಶೆಟ್ಟಿಯವರಿಗೆ ಗ್ರಾಮದ ಮುಖಂಡರ ಸಮ್ಮುಖದಲ್ಲಿ ಸ್ವಾಮೀಜಿಯವರು ಕಂಕಣಕಟ್ಟಿದ್ದರು. ಅಂದಿನಿಂದ ಇಂದಿನವರೆಗೂ ಅರ್ಚಕರಾಗಿ ರಾಮಶೆಟ್ಟಿಯವರೇ ಕಾರ್ಯನಿರ್ವಹಿಸುತ್ತಿದ್ದಾರೆ.

ಅ) ಭೈರವೇಶ್ವರ ಗ್ರಾಮದಲ್ಲಿ ನೆಲೆಸಿದ ಹಿನ್ನೆಲೆ

ಜೋಗಿಗಳೆಂದು ಕರೆಸಿಕೊಳ್ಳುವ, ಅರ್ಚಕರ ಕುಟುಂಬದ ಪೂರ್ವಿಕರಾದ ನಂಜಮ್ಮ ಎಂಬುವವರು ಭೈರವೇಶ್ವರನ ಪರಮಭಕ್ತೆ. ತನ್ನ ಗಂಡ ಸಿದ್ಧಯ್ಯನನ್ನು ಆದಿಚುಂಚನಗಿರಿಗೆ ಕರೆದುಕೊಂಡುಹೋಗಿ, ದೇವರ ಸನ್ನಿಧಿಯಲ್ಲಿ ಕಿವಿಚುಚ್ಚಿಸಿ, ಭೈರವನ ಸಂಕೇತವಾದ ತ್ರಿಶೂಲವೊಂದನ್ನು ಗ್ರಾಮಕ್ಕೆ ತಂದು ಪೂಜಿಸಲು ಪ್ರಾರಂಭಿಸಿದರು. ಭೈರವನ ವಿಶೇಷ ಪೂಜಾದಿನವಾದ ಭಾನುವಾರ ಮನೆ ಸಾರಿಸಿ, ಮನೆಯ ಪಾತ್ರೆಗಳನ್ನು ತೊಳೆದು ಮನೆಮಂದಿಯೆಲ್ಲ ಸ್ನಾನಮಾಡಿಕೊಂಡು, ಬಹಳ ಭಯ ಭಕ್ತಿಯಿಂದ ಪೂಜಿಸುತ್ತಿದ್ದರು. ಈ ಕುಟುಂಬದ ಬಸಪ್ಪನವರು ಬೆಳಿಗ್ಗೆಯಿಂದ ಸಂಜೆಯವರೆಗೆ ಉಪವಾಸವಿದ್ದು ತಮ್ಮ ಮನೆಯಲ್ಲಿ ಭೈರವನನ್ನು ಪೂಜಿಸುತ್ತಿದ್ದರು. ಇತ್ತೀಚೆಗೆ ಗ್ರಾಮದಲ್ಲಿದ್ದ ಹಳೆಯ ಭೈರವನ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿಸಿದ್ದಾರೆ. ಬಸಪ್ಪನವರು ನಿಧನರಾದ ಮೇಲೆ ಅವರ ಮಗ ರಾಮಯ್ಯರವರನ್ನು ಊರಿನ ಗ್ರಾಮಸ್ಥರು ಶ್ರೀ ಆದಿಚುಂಚನಗಿರಿಗೆ ಕರೆದುಕೊಂಡು ಹೋಗಿ ಶ್ರೀಬಾಲಗಂಗಾಧರ ಸ್ವಾಮೀಜಿಯವರ ಬಳಿ ಕಂಕಣ ಕಟ್ಟಿಸಿದ್ದಾರೆ. ಕಂಕಣ ಕಟ್ಟಿಸಿಕೊಳ್ಳಲು ಹೋದಾಗ ೫ ಚಿಪ್ಪು ಬಾಳೆಹಣ್ಣು, ೫ ಕವಳಿಗೆ ವಿಳ್ಳೆದೆಲೆ, ೫ ತೆಂಗಿನಕಾಯಿ, ೫ ಸೇರು ಅಕ್ಕಿ, ೧ ಕೆ.ಜಿ. ಸೇಬು, ೧ ಕೆ.ಜಿ. ದ್ರಾಕ್ಷಿಯನ್ನು ತೆಗೆದುಕೊಂಡು ಹೋಗಬೇಕು. ಕಂಕಣ ಕಟ್ಟಿಸಿಕೊಳ್ಳುವ ವ್ಯಕ್ತಿಯು ತಲೆ ಕೂದಲನ್ನು ಮುಡಿಕೊಟ್ಟು, ಕಿವಿ ಚುಚ್ಚಿಸಿಕೊಳ್ಳಬೇಕು. ನಂತರ ೫ ಕಳಸವನ್ನು ಸಿದ್ಧಪಡಿಸಿಕೊಂಡು, ಪೂಜಾ ಸಾಮಾನುಗಳನ್ನು ಅದರ ಮುಂದೆ ಜೋಡಿಸುತ್ತಾರೆ. ಶ್ರೀಕಾಲಭೈರವೇಶ್ವರ ಸ್ವಾಮಿಯ ಬಳಿ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು 'ಶ್ರೀಕಾಲಭೈರವೇಶ್ವರ ಸ್ವಾಮಿಯೆ ನಮಃ' ಎಂದು ಸ್ತೋತ್ರ ಹೇಳಿ ಅವರ ಬಳಿ ಇರುವ ತ್ರಿಶೂಲದಲ್ಲಿ ಕಂಕಣ ಕಟ್ಟಿಸಿಕೊಳ್ಳುವ ವ್ಯಕ್ತಿಯ ಕಿವಿ ಚುಚ್ಚುತ್ತಾರೆ. ನಂತರ ಭೈರವನ ಸಂಕೇತವಾದ ತ್ರಿಶೂಲವೊಂದನ್ನು ನೀಡುತ್ತಾರೆ. ಕಂಕಣಕಟ್ಟಿಸಿಕೊಂಡ ವ್ಯಕ್ತಿ ಭೈರವೇಶ್ವರನನ್ನು ಪೂಜೆ ಮಾಡುವ ಅವಕಾಶ ಪಡೆಯುತ್ತಾರೆ. ಈ ತ್ರಿಶೂಲವನ್ನು ಗ್ರಾಮದ ಭೈರವೇಶ್ವರನ ದೇವಸ್ಥಾನದಲ್ಲಿಟ್ಟು ಪೂಜಿಸುತ್ತಾರೆ.

ಆ) ಭೈರವನ ಒಕ್ಕಲಿನವರ ಸಂಪ್ರದಾಯ

ಭೈರವೇಶ್ವರನನ್ನು ಮನೆದೇವರೆಂದು ಪೂಜಿಸುವ ಕುಟುಂಬದವರು ತಮ್ಮ ಮಕ್ಕಳ ಮದುವೆಗಳಲ್ಲಿ, ಗೃಹಪ್ರವೇಶಗಳಲ್ಲಿ, ತಿಥಿಗಳಲ್ಲಿ ಮನೆಗೆ ದೇವರ ತ್ರಿಶೂಲವನ್ನು ತರಿಸಿಕೊಂಡು ಪೂಜಿಸುತ್ತಾರೆ. 'ಭೈರವನ ಬುಕ್ತಿ' ಎಂದು ಕರೆಯುವ ಈ ಆಚರಣೆ ವಿಶಿಷ್ಟವಾದದ್ದು. ಮನೆಯಲ್ಲಿರುವ ದೇವರ ಫೋಟೋ ಮುಂದೆ ನೆಲವನ್ನು ಮತ್ತೊಮ್ಮೆ ಸಾರಿಸುತ್ತಾರೆ. ಮೂರು ಬಾಳೆ ಎಲೆಗಳನ್ನು ಹಾಸಿ ಅದರ ಮುಂದೆ ಅಕ್ಕಿ ಸುರಿದು, ಅರ್ಚಕರು ತಂದ ತ್ರಿಶೂಲವನ್ನು ಇಡುತ್ತಾರೆ. ಮನೆಯಲ್ಲಿ ಸಿದ್ಧಪಡಿಸಿರುವ ಅನ್ನ, ಸಾರು, ಪಾಯಸ, ಪಲ್ಯಗಳು ಮೊದಲಾದ ಆಹಾರ ಪದಾರ್ಥಗಳನ್ನು ಬಾಳೆ ಎಲೆಗಳ ಮೇಲಿಟ್ಟು ಎಡೆ ಇಡುತ್ತಾರೆ. ಜನರಿಗೆ ಊಟಕ್ಕೆ ಕೊಡುವುದಕ್ಕಿಂತ

ಮುಂಚೆ ಈ ಆಚರಣೆ ಕಡ್ಡಾಯವಾಗಿ ನಡೆಯುತ್ತದೆ. ಬೇರೆ ಕುಟುಂಬದವರು ಇಂತಹ ಸಂದರ್ಭಗಳಲ್ಲಿ ಈ ದೇವರನ್ನು ಮನೆಗೆ ತರಿಸಿ ಪೂಜಿಸುವ ಪದ್ಧತಿಯಿಲ್ಲ.

ಮದುವೆಯಾದ ಮಾರನೆಯದಿನ ನಡೆಯುವ ಬೀಗರ ಊಟದ ದಿನ ಭೈರವನ ತ್ರಿಶೂಲದ ಮುಂದೆಯೇ ಮರಿಬಲಿ ಕೊಡುತ್ತಾರೆ. ಮರಿಯ ತಲೆಯನ್ನು ಅರ್ಚಕರಿಗೆ ನೀಡುತ್ತಾರೆ. ಉಳಿದ ಒಳಬಂಡಾರದಲ್ಲಿ ಮಾಂಸದ ಸಾರು, ಕಳ್ಳು ಗೊಜ್ಜು, ಅನ್ನ, ಮುದ್ದೆ ಇತ್ಯಾದಿ ಆಹಾರಗಳನ್ನು ಸಿದ್ಧಪಡಿಸಿಕೊಂಡು, ಊರಿನ ಜನಕ್ಕೆ, ನೆಂಟರಿಷ್ಟರಿಗೆ ಊಟಕ್ಕೆ ಕೊಡುವ ಮುಂಚೆ, ಮನೆಯಲ್ಲಿ 'ಭೈರವನ ಬುಕ್ತಿ' ಆಚರಣೆ ಮಾಡುತ್ತಾರೆ. ಮತ್ತೆ ಕೆಲವರು ಕೊಳವೆ ಬಾವಿಗಳನ್ನು ಕೊರೆಸಿ ನೀರು ಬಂದಾಗ, ಗಂಡು ಮಗು ಜನಿಸಿದಾಗ ಹರಕೆ ಕಟ್ಟಿಕೊಂಡಾಗ ತಮ್ಮ ಶಕ್ತಾನುಸಾರ ಭಾನುವಾರದ ದಿನ ಶ್ರೀ ಆದಿಚುಂಚನಗಿರಿಗೆ ಹೋಗಿ ಭೈರವನಿಗೆ ಪೂಜೆ ಮಾಡಿಸಿ, ಪರ ಮಾಡಿ ಬಂದು ಬಳಗಕ್ಕೆ ಊಟ ಹಾಕುತ್ತಾರೆ. ಕೆಲವು ಸಂದರ್ಭಗಳಲ್ಲಿ ಬೀಗರ ಊಟಗಳನ್ನು, ಮಕ್ಕಳ ನಾಮಕರಣದ ಕಾರ್ಯಗಳನ್ನು ಭೈರವನ ಸನ್ನಿಧಿಗೆ ಹೋಗಿ ಮಾಡುತ್ತಾರೆ. ಭೈರವೇಶ್ವರನ ಒಕ್ಕಲಿನವರು ಉದ್ಯೋಗಕ್ಕಾಗಿ ನಗರ ಪ್ರದೇಶಗಳಲ್ಲೇ ನೆಲೆಸಿರುವವರಿದ್ದಾರೆ. ಇವರು ಹೊಸ ಮನೆಕಟ್ಟಿ ಗೃಹಪ್ರವೇಶ ಮಾಡುವಾಗ, ಕೆಲವರು ಐಕನಹಳ್ಳಿ ಗ್ರಾಮದಿಂದ ಭೈರವನನ್ನು ಕರೆಸಿಕೊಂಡು 'ಭೈರವನ ಬುಕ್ತಿ' ನೀಡುತ್ತಾರೆ. ಕೆಲವೊಮ್ಮೆ ಆದಿಚುಂಚನಗಿರಿಯ ಸನ್ನಿಧಿಗೆ ಹೋಗಿ ಪರ ಮಾಡಿಕೊಂಡು ಬರುತ್ತಾರೆ.

ಇ) ಇತರರು ನಡೆದುಕೊಳ್ಳುವ ಬಗೆ

ಐಕನಹಳ್ಳಿಯ ಭೈರವೇಶ್ವರನ ದೇವಾಲಯದಲ್ಲಿ ಪ್ರತಿ ಭಾನುವಾರ ವಿಶೇಷ ಪೂಜೆ ನಡೆಯುತ್ತದೆ. ಊರಿನ ಗ್ರಾಮಸ್ಥರಲ್ಲದೆ ಅಕ್ಕ-ಪಕ್ಕದ ಗ್ರಾಮಗಳಾದ ಐಕನಹಳ್ಳಿ ಕೊಪ್ಪಲು, ತುಳಸಿ. ಭದ್ರನ ಕೊಪ್ಪಲುಗಳಿಂದ ಭಕ್ತರು ಬರುತ್ತಾರೆ. ಹಣ್ಣು, ಕಾಯಿ, ಗಂಧದ ಕಡ್ಡಿ, ಕರ್ಪೂರ, ಹಣ್ಣು ತುಪ್ಪ ತಂದು ಪೂಜೆ ಮಾಡಿಸಿ, ಹಳಸಿನ ತೊಳೆ ಚರ್ಪು, ಕೋಸಂಬರಿ, ಕಡಲೆ ಸಕ್ಕರೆ ಮೊದಲಾದ ಪ್ರಸಾದವನ್ನು ಹಂಚುತ್ತಾರೆ. ಶಿವರಾತ್ರಿ, ಯುಗಾದಿ, ಗೌರಿಹಬ್ಬ, ದೀಪಾವಳಿಗಳಲ್ಲಿ ಭಕ್ತರ ಸಂಖ್ಯೆ ಹೆಚ್ಚು.

ಶಿವರಾತ್ರಿಯ ದಿನ ದೇವಸ್ಥಾನದ ಮುಂದೆ ಚಪ್ಪರ ಹಾಕಿ, ಎಳನೀರನ್ನು ಚಪ್ಪರಕ್ಕೆ ಕಟ್ಟಿ, ಅಲಂಕಾರ ಮಾಡುತ್ತಾರೆ. ಹಾಲು ಮೊಸರು, ಜೇನಿನ ಅಭಿಷೇಕ ಮಾಡಿಸುತ್ತಾರೆ. ಗ್ರಾಮಸ್ಥರೆಲ್ಲ ಜಾಗರಣೆಯಿದ್ದು ಹರಿಕಥೆ ಮಾಡಿಸುತ್ತಾರೆ. ಬಂಡಿಹಬ್ಬ, ದೀಪಾವಳಿ ಮತ್ತು ಬಲಿಪೂಜೆ ಮಾಡಿಸುವಾಗ ಭೈರವನ ಸನ್ನಿಧಿಯಲ್ಲಿ ಮರಿಬಲಿ ಕೊಡುತ್ತಾರೆ. ಗ್ರಾಮದ ಹಿರಿಯ ಮಕ್ಕಳ ಮದುವೆಯಾದಾಗ ಪೂಜೆ ಕಟ್ಟಿಸುವ ಸಂಪ್ರದಾಯವಿದೆ. ವಧು-ವರರು ಹಾಗು ಬಂಧು-ಮಿತ್ರರೆಲ್ಲ ದೇವಾಲಯಕ್ಕೆ ಬಂದು ಪೂಜೆ ಮಾಡಿಸುತ್ತಾರೆ, ಮರಿಬಲಿ ಕೊಡುತ್ತಾರೆ. ನಂತರ ಶನಿವಾರ ಬೀಗರ ಔತಣಕ್ಕೆ ವ್ಯವಸ್ಥೆ ಮಾಡಿಕೊಳ್ಳುತ್ತಾರೆ.

೩. ಬಸವೇಶ್ವರ

ಐಕನಹಳ್ಳಿಯಿಂದ ಕಿಕ್ಕೇರಿಗೆ ಹೋಗುವ ದಾರಿಯಲ್ಲಿ ಬಸವೇಶ್ವರನ ದೇವಾಲಯವಿದೆ. ಬಸವಣ್ಣ ಮತ್ತು ಈಶ್ವರ ಇಬ್ಬರು ಇಲ್ಲಿರುವುದರಿಂದ, ಇದು ಬಸವೇಶ್ವರನ ದೇವಾಲಯವಾಗಿದೆ. ದೇವಾಲಯದ ಹಿಂಭಾಗದಲ್ಲಿ ತುಳಸಿ ಕೆರೆಯಿದೆ. ದೇವಾಲಯದ ಎದುರಿಗೆ ಸ್ವಲ್ಪ ದೂರದಲ್ಲೆ ಭದ್ರನಕೊಪ್ಪಲು ಗ್ರಾಮವಿದೆ. ಹೀಗಾಗಿ ಬಸವೇಶ್ವರ ತುಳಸಿ, ಐಕನಹಳ್ಳಿ, ಭದ್ರನಕೊಪ್ಪಲಿನ ಮಧ್ಯೆ ಇರುವ ತ್ರಿವೇಣಿ ಸಂಗಮವಾಗಿದೆ. ಪಕ್ಕದಲ್ಲಿಯೇ ಬಸವೇಶ್ವರ ಪ್ರೌಢಶಾಲೆ ಇದೆ. ಮೊದಲು ಪುರಾತನವಾದ ದೇವಾಲಯವಿತ್ತು. ಈಗ ಶ್ರೀ ಆದಿಚುಂಚನಗಿರಿ ಮಠದವರೇ ವಹಿಸಿಕೊಂಡು ಸುಂದರವಾದ ಭವ್ಯ ದೇವಾಲಯವನ್ನು ನಿರ್ಮಿಸಿಕೊಟ್ಟಿದ್ದಾರೆ. ಗ್ರಾಮಸ್ಥರು ಭಕ್ತಾದಿಗಳಿಂದ ದೇವಾಲಯ ಕಟ್ಟಲು ಹಣವನ್ನು ಸಂಗ್ರಹಿಸಿಕೊಟ್ಟಿದ್ದರು. ಈ ದೇವಾಲಯದಲ್ಲಿ ಪ್ರತಿದಿನ ಬೆಳಿಗ್ಗೆ ಪೂಜೆ ನಡೆಯುತ್ತದೆ. ಸೋಮವಾರದ ದಿನ ವಿಶೇಷ ಪೂಜೆ ನಡೆಯುತ್ತದೆ. ಶಿವರಾತ್ರಿಯ ದಿನ ಭಕ್ತರು ಜಾಗರಣೆಯಿದ್ದು, ಪರ ಮಾಡುವುದರಿಂದ ಇಡೀ ದಿನ ಪೂಜೆ ನಡೆಯುವುದು. ಮದುವೆ ಮುಂತಾದ ಶುಭ ಸಂದರ್ಭದಲ್ಲಿಯು ವಿಶೇಷ ಪೂಜೆ ಪುರಸ್ಕಾರಗಳು ನಡೆಯುತ್ತವೆ. ಈ ದೇವಾಲಯವನ್ನು ಪೂಜಿಸುವ ಅರ್ಚಕರು ಬ್ರಾಹ್ಮಣರಾಗಿದ್ದಾರೆ.

೪. ಹೆತ್ತಪ್ಪ – ಮುತ್ತಪ್ಪ

"ಹೆತ್ತಪ್ಪ ಮುತ್ತಪ್ಪನನ್ನು ಐಕನಹಳ್ಳಿ ಗ್ರಾಮದ ರಕ್ಷಕರೆಂದೇ ಭಕ್ತರು ತಿಳಿದಿದ್ದಾರೆ. ಊರಿನ ಇಬ್ಬರು ಅಣ್ಣ ತಮ್ಮಂದಿರು ರಾತ್ರಿಯ ವೇಳೆ ಜೋಳದ ಹೊಲ ಕಾಯುವುದಕ್ಕೆ ಹೋಗಿದ್ದರು. ಅಣ್ಣ ಜೋಳದ ಹೊಲದಲ್ಲಿದ್ದಾಗ ಚಿಕ್ಕ ತಮ್ಮ ಅವನನ್ನು ಕಳ್ಳನೆಂದು ತಿಳಿದು ಅವನನ್ನು ಕತ್ತರಿಸುತ್ತಾನೆ. ನಂತರ ನನ್ನ ಅಣ್ಣನನ್ನು ನಾನೇ ಕತ್ತರಿಸಿದೆನಲ್ಲ ಎಂದು ತಾನು ಕೂಡ ಕುತ್ತಿಗೆಯನ್ನು ಕತ್ತರಿಸಿಕೊಂಡು ಜೀವ ಬಿಡುತ್ತಾನೆ. ಅವರು ಸಾಕಿದ ನಾಯಿಯು ತನ್ನಷ್ಟಕ್ಕೆ ತಾನೇ ಜೀವಬಿಟ್ಟಿತಂತೆ. ಊರಿನ ರಂಗಸ್ಥಳದ ಬಳಿಯಿರುವ ಲಕ್ಕಮ್ಮನ ದೇವಸ್ಥಾನದ ಪಕ್ಕದಲ್ಲಿ ಹೆತ್ತಪ್ಪ–ಮುತ್ತಪ್ಪ ಮತ್ತು ನಾಯಿಯನ್ನು ಚಿತ್ರದಲ್ಲಿ ಕೆತ್ತಿಸಿದ್ದಾರೆ."[೧೪] ಸಂಕ್ರಾಂತಿ ದಿನವನ್ನು ಅವರ ಹುಟ್ಟಿದ ದಿನವೆಂದು ಭಾವಿಸಿರುವ ಗ್ರಾಮಸ್ಥರು ಮಾಂಸದ ಸಾರು, ಎರಡು ರಾಗಿ ಮುದ್ದೆ, ಅನ್ನವನ್ನು ತಂದು ತಳಿಗೆ ಕೊಟ್ಟು ಪೂರ್ವಿಕರನ್ನು ಪೂಜಿಸುತ್ತಾರೆ. ಈ ಪ್ರಸಾದವನ್ನು ಹರಿಜನರು, ಅಗಸರು, ಕ್ಷೌರಿಕರು ಹಂಚಿಕೊಳ್ಳುತ್ತಾರೆ.

೫. ಸತ್ಯಮ್ಮ

"ಕಾಳಯ್ಯನ ಅಣ್ಣಯ್ಯಣ್ಣನೆಂಬುವನಿಗೆ ಮಕ್ಕಳಿಲ್ಲದಿರುವ ಕಾರಣ ಕನ್ನಂಬಾಡಿಯಿಂದ ಗಂಗೆಯನ್ನು ತಂದು, ಕೆರೆಯ ಏರಿಯ ಮೇಲೆ ಕಲ್ಲಿಟ್ಟು ಗುಡಿಕಟ್ಟಿಸಿ ಪೂಜೆ ಮಾಡಿಸಿದರು. ಆಗ ಗಂಡು ಮಗುವಾಯಿತು. ಈ ದೇವರನ್ನೇ ಸತ್ಯಮ್ಮನೆಂದು ನಂಬಿಕೊಂಡಿರುವ ಗ್ರಾಮಸ್ಥರು ಪೂಜಿಸಿಕೊಂಡು ಬರುತ್ತಿದ್ದಾರೆ."[೧೫] ಅಕ್ಕಿ, ಮೆಣಸು, ಬೆಳ್ಳುಳ್ಳಿ, ಉಪ್ಪು ಹಾಕಿ ಮಾಡಿದ ಉಗ್ಗೆದ

ಅನ್ನ ಮಾಡಿ, ತಂಬಿಟ್ಟು ಮಾಡಿ, ಕನ್ನಂಬಾಡಮ್ಮನ ಹಬ್ಬದ ದಿನ ಪೂಜೆ ಮಾಡುತ್ತಾರೆ. ಉಗ್ರ ದೇವತೆಯನ್ನು ತೃಪ್ತಿ ಪಡಿಸುವುದು ಪ್ರಾಚೀನ ಆಚರಣೆ ಊರಿನ ನಾಲ್ಕು ಗುಂಪಿನವರು ತಲಾ ಒಂದು ಹೋತವನ್ನು ಬಲಿ ಕೊಡುತ್ತಾರೆ. ಹಾಗೂ ಮಕ್ಕಳ ಮದುವೆಗಳಲ್ಲಿ ಪೂಜೆ ಕಟ್ಟಿಸಿದಾಗ ಒಂದು ಕಪ್ಪು ಹೋತವನ್ನು ಬಲಿ ಕೊಡುತ್ತಾರೆ. ಕಪ್ಪು ಹೋತ ಬಲಿಗೆ ಶ್ರೇಷ್ಠವೆಂಬುದು ಜನಪದರ ನಂಬಿಕೆ.

೬. ಕನ್ನಂಬಾಡಮ್ಮ

ಊರಿನ ಅರಳೀಮರದ ಪಕ್ಕದಲ್ಲಿ ಕಲ್ಲಿನ ಕಟ್ಟೆಯೊಂದರ ಮೇಲೆ ಕನ್ನಂಬಾಡಮ್ಮನ ಗುಡಿಯಿದೆ. ಮೈಸೂರಿನ ಕನ್ನಂಬಾಡಿ ಕಾಳಮ್ಮನನ್ನು ಕನ್ನಂಬಾಡಮ್ಮನೆಂದು ಪೂಜಿಸುತ್ತಾರೆ. ಯುಗಾದಿ ಹಬ್ಬವಾದ ಮುಂದಿನ ಮಂಗಳವಾರ ಮನೆಯನ್ನು ಗುಡಿಸಿ, ಸಾರಿಸಿ, ಸ್ನಾನ ಮಾಡಿಕೊಂಡು ಅಡಿಗೆ ಮನೆಗೆ ಹೋಗಿ ಅಡಿಗೆ ಮಾಡುತ್ತಾರೆ. ತಂಬಿಟ್ಟು ಮಾಡಿಕೊಂಡು ಅದಕ್ಕೆ ಹೂವು ಮುಡಿಸಿಕೊಂಡು ಉಗ್ಗಿದ ಅನ್ನ ಮಾಡಿಕೊಂಡು ದೇವಸ್ಥಾನದ ಬಳಿಗೆ ತಲೆಯ ಮೇಲೆ ಹೊತ್ತುಕೊಂಡು ಬರುತ್ತಾರೆ. ಇದನ್ನು 'ಮಡೆ' ಎಂದು ಕರೆಯುತ್ತಾರೆ. ಮಡೆ ಹೋಗುವಾಗ ಮಡಿವಾಳರು ರಸ್ತೆಗೆ ಸೀರೆ ಬಿಡುತ್ತಾರೆ. ಆ ಸೀರೆಯ ಮೇಲೆಯೆ ಇವರು ನಡೆಯಬೇಕು. ದೇವಸ್ಥಾನದ ಬಳಿ ಚಿಕ್ಕ ತಂಬಿಟ್ಟಿನ ಉಂಡೆಗಳನ್ನು ಬುಟ್ಟಿಗೆ ಹಾಕಿ ಪೂಜೆ ಮಾಡುತ್ತಾರೆ. ರವದೀವಿಗೆ (ದೊಡ್ಡ ತಂಬಿಟ್ಟಿನ ಉಂಡೆ)ಯನ್ನು ತಾವೇ ಮನೆಗೆ ವಾಪಸ್ಸು ತರುತ್ತಾರೆ. ಅವರೆಕಾಳು, ಮೊಸರನ್ನದ ತಳಿಗೆ ಕೊಟ್ಟು ಪೂಜೆ ಮಾಡಿಸುತ್ತಾರೆ. ನಂತರ ಕಪ್ಪು ಹೋತವನ್ನು ಬಲಿ ಕೊಡುತ್ತಾರೆ.

೭. ಲಕ್ಕಮ್ಮ (ಲಕ್ಷ್ಮಿ ದೇವಿ)

ಐಕನಹಳ್ಳಿ ಗ್ರಾಮದ ರಂಗದ ಬೀದಿಯಲ್ಲಿ ಲಕ್ಕಮ್ಮನ ಗುಡಿಯಿದೆ. ಪ್ರತಿದಿನ ಪೂಜೆ ನಡೆಯುತ್ತದೆ. ಶುಕ್ರವಾರದ ದಿನ ವಿಶೇಷ ಪೂಜೆಯಿದೆ. ಬೆಳಿಗ್ಗೆ ಮತ್ತು ಸಂಜೆ ಎರಡು ವೇಳೆಯಲ್ಲು ಪೂಜೆ ಮಾಡುವವರು ಬ್ರಾಹ್ಮಣರಾಗಿದ್ದಾರೆ. ಮದುವೆ, ಮುಂಜಿ, ನಾಮಕರಣ ಮುಂತಾದ ಸಂದರ್ಭಗಳಲ್ಲಿ ಉಳಿದಂತೆ ದೀಪಾವಳಿ, ರಂಗದ ಹಬ್ಬ ಮೊದಲಾದ ಹಬ್ಬಗಳಲ್ಲಿ ಭಕ್ತರು ಹೆಚ್ಚಾಗಿ ಬರುತ್ತಾರೆ. ದೀಪಾವಳಿ ಹಬ್ಬದಲ್ಲಿ ತುಳಸಿ ಗ್ರಾಮದಿಂದ ತಂದ ಐಕನಹಳ್ಳಿಯಮ್ಮನ ಮೆರೆಯುವ ದೇವರು ಸೋಮನ ಮುಖವಾದ (ದೊಡ್ಡಯ್ಯ, ಚಿಕ್ಕಯ್ಯ) ಹಾಗು ರಂಗದ ಹಬ್ಬದಲ್ಲಿ ತಂದ ಬಸವೇಶ್ವರನ ಮೆರೆಯುವ ದೇವರನ್ನು ಲಕ್ಕಮ್ಮನ ಗುಡಿಯಲ್ಲಿ ಇಡುತ್ತಾರೆ. ಇದರ ಪಕ್ಕದಲ್ಲಿಯೇ ಊರಿನ ಕಾವಲುಗಾರರು ಎಂದು ನಂಬಿರುವ ಹೆತ್ತಪ್ಪ ಮತ್ತು ಮುತ್ತಪ್ಪನ ವಿಗ್ರಹಗಳಿವೆ.

೮. ಚಿಕ್ಕಮ್ಮ

ಚಿಕ್ಕಮ್ಮನ ಗುಡಿಯು ಊರಿನ ಹೊರಭಾಗದಲ್ಲಿರುವ ಕೆರೆಯ ಬಳಿ ಇದೆ. ಇದರ ಎಡಭಾಗಕ್ಕೆ ಊರಿನ ಪ್ರಧಾನ ಗ್ರಾಮದೇವತೆಯಾದ ಐಕನಹಳ್ಳಿಯಮ್ಮನ ದೇವಾಲಯವಿದೆ. ಐಕನಹಳ್ಳಿಯಮ್ಮನಿಗೆ ಪೂಜೆಯಾಗುವ ಶುಕ್ರವಾರ ವಿಶೇಷವಾದ ಪೂಜೆ ನಡೆಯುತ್ತದೆ. ಉಳಿದ

ದಿನಗಳಲ್ಲಿ ಪೂಜೆ ನಡೆಯುವುದಿಲ್ಲ. ಚಿಕ್ಕಮ್ಮನನ್ನು ಪೂಜೆ ಮಾಡುವವರು ತುಳಸಿಯಲ್ಲಿರುವ ಹರಿಜನರ ಕುಟುಂಬದವರು. (ಚಿಕ್ಕಯ್ಯ ದೊಡ್ಡಯ್ಯ ಸೋಮನ ಮುಖವಾಡವನ್ನು ಧರಿಸುವವರು) ದೀಪಾವಳಿ ಹಬ್ಬದ ಸಂದರ್ಭದಲ್ಲಿ ಚಿಕ್ಕಮ್ಮನ ಗುಡಿಗು ವಿಶೇಷ ಪೂಜೆ ನಡೆಯುತ್ತದೆ. ಐಕನಹಳ್ಳಿಯಮ್ಮನ ದೇವಾಲಯಕ್ಕೆ ಬಂದ ಭಕ್ತರೆಲ್ಲರು ಚಿಕ್ಕಮ್ಮನಿಗೂ ಪೂಜೆ ಮಾಡಿಸಿಕೊಂಡು ಹೋಗುತ್ತಾರೆ. ಸಾಮಾನ್ಯ ಕಲ್ಲುಗಳೆ ಚಿಕ್ಕಮ್ಮನ ವಿಗ್ರಹಗಳ ಸ್ಥಾನ ಪಡೆದುಕೊಂಡಿವೆ.

೯. ಮಾರಮ್ಮ

ಐಕನಹಳ್ಳಿ ಗ್ರಾಮದ ಹೆಬ್ಬಾಗಿಲಿನಿಂದ ಸ್ವಲ್ಪ ದೂರದಲ್ಲಿ ಮಾರಮ್ಮ ನೆಲೆಸಿದ್ದಾಳೆ. ಕರಿಕಲ್ಲೊಂದನ್ನೆ ಮಾರಮ್ಮನೆಂದು ಪೂಜಿಸಿಕೊಂಡು ಬರುತ್ತಿದ್ದಾರೆ. ಮಾರಮ್ಮನನ್ನು ಭಕ್ತರು ಬಹಳ ಭಯ ಭಕ್ತಿಯಿಂದ ಪೂಜಿಸುತ್ತಾರೆ. ಮಕ್ಕಳಿಗೆ ಅಮ್ಮ, ಕುರ, ದಡಾರಗಳಾದಾಗ ಮೊಸರನ್ನವನ್ನು, ಬೇವಿನ ಸೊಪ್ಪನ್ನು, ತೆಗೆದುಕೊಂಡು ಹೋಗಿ ಮಾರಮ್ಮನನ್ನು ಪೂಜಿಸುತ್ತಾರೆ. ಉಳಿದಂತೆ ಮಾರಿ ಹಬ್ಬದ ದಿನ ಗ್ರಾಮಸ್ಥರೆಲ್ಲ ಒಟ್ಟಾಗಿ ಸೇರಿ ಪಂಜನ್ನು ಹಿಡಿದು, ತಂಬಿಟ್ಟು ಮತ್ತು ಅವರೇಕಾಳನ್ನು ತಂದು ಪೂಜಿಸುತ್ತಾರೆ.

❖ ❖ ❖

ಅಡಿ ಟಿಪ್ಪಣಿಗಳು

೧. ರಂಗಮ್ಮ, ಐಕನಹಳ್ಳಿ, ೫೬ ವರ್ಷ.
೨. ಕೆಂಪಮ್ಮ, ಐಕನಹಳ್ಳಿ, ೭೫ ವರ್ಷ.
೩. ಶಿವರತ್ನಮ್ಮ, ತುಳಸಿ, ೩೮ ವರ್ಷ.
೪. ರಾಜಮ್ಮ, ತುಳಸಿ, ೪೫ ವರ್ಷ.
೫. ಸರೋಜಮ್ಮ, ಐಕನಹಳ್ಳಿ, ೪೮ ವರ್ಷ.
೬. ಸಣ್ಣಮ್ಮ, ಐಕನಹಳ್ಳಿ, ೭೪ ವರ್ಷ.
೭. ನಾಗಮ್ಮ, ಐಕನಹಳ್ಳಿ, ೫೭ ವರ್ಷ.
೮. ಮಹಾದೇವಮ್ಮ, ತುಳಸಿ, ೬೦ ವರ್ಷ.
೯. ಪುಟ್ಟಮ್ಮ, ತುಳಸಿ, ೬೫ ವರ್ಷ.
೧೦. ಕೃಷ್ಣಯ್ಯ, ತುಳಸಿ, ೫೨ ವರ್ಷ.
೧೧. ತಮ್ಮಯ್ಯ, ತುಳಸಿ, ೫೫ ವರ್ಷ.
೧೨. ಸುಬ್ಬಣ್ಣ, ತುಳಸಿ, ೬೨ ವರ್ಷ.
೧೩. ಅಣ್ಣಯ್ಯಪ್ಪ, ತುಳಸಿ, ೭೬ ವರ್ಷ.
೧೪. ಕೆಂಪಮ್ಮ, ಐಕನಹಳ್ಳಿ, ೭೫ ವರ್ಷ.
೧೫. ಲಕ್ಷ್ಮಣ, ಐಕನಹಳ್ಳಿ, ೫೨ ವರ್ಷ.

ಅಧ್ಯಾಯ - ೬

ಐಕನಹಳ್ಳಿಯ ಹಬ್ಬ ಹರಿದಿನಗಳು

ಮಾನವ ಕಾಲಕಾಲಕ್ಕನುಗುಣವಾಗಿ ಜೀವನ ಕ್ರಮಗಳನ್ನು ಬದಲು ಮಾಡಿಕೊಂಡು ಬರುತ್ತಿದ್ದರೂ. ಸಂಪ್ರದಾಯ ಆಚರಣೆಗಳನ್ನು ನಂಬಿಕೊಂಡೇ ಬದುಕುತ್ತಿದ್ದಾನೆ. ಹಬ್ಬಗಳು ಸಾಮಾನ್ಯ ಜನ ಜೀವನದ ನಡುವೆ ಸಂಭ್ರಮವನ್ನು ಹೆಚ್ಚಿಸುತ್ತವೆ. ಮನಸ್ಸಿಗೆ ಮುದ ನೀಡಿ ಲವಲವಿಕೆಯನ್ನು ತರುತ್ತವೆ. ಮಕ್ಕಳಿಂದ ಮುದುಕರವರೆಗೆ ಆ ದಿನ ಉತ್ಸಾಹದಿಂದ ಇದ್ದು ಉಂಡು ತಿಂದು ನಲಿಯುತ್ತಾರೆ. ನಾವು ಬೆಳೆಸಿಕೊಂಡ ಆತ್ಮೀಯ ಭಾವನೆ ಪ್ರಕಟವಾಗುತ್ತದೆ. ಹಬ್ಬ ಹರಿದಿನಗಳು ಒಂದು ನಾಡಿನ ಸಾಂಸ್ಕೃತಿಕ ವಾತಾವರಣವನ್ನು ಅನಾವರಣಗೊಳಿಸುತ್ತವೆ. ದೇವರ ಬಗೆಗಿನ ಭಕ್ತಿ ಹೆಚ್ಚಿಸುತ್ತವೆ. ಹಬ್ಬಗಳ ಆಚರಣೆಗೆ ಜಾತಿ-ಮತಗಳ ಎಲ್ಲೆಯಿಲ್ಲವಾದರು ಸ್ವರೂಪವದಲ್ಲಿ ವ್ಯತ್ಯಾಸಗಳಿವೆ. ಗ್ರಾಮೀಣರ ನಾಡಿ ಮಿಡಿತಗಳು ಹಬ್ಬ ಹರಿದಿನಗಳಲ್ಲಿ ಮೇಳವಿಸುತ್ತವೆ.

ಬಂಧು-ಬಳಗದವರೆಲ್ಲ ಒಟ್ಟಾಗಿ ಸೇರಿ ಸಂಭ್ರಮಪಡುವ ಹಬ್ಬಗಳು ವಿಶೇಷತೆಯನ್ನು ಉಳಿಸಿಕೊಂಡಿವೆ. ಮನೆಯನ್ನು ಶುಚಿ ಮಾಡಿ, ತಳಿರುತೋರಣಗಳನ್ನು ಕಟ್ಟಿ, ರಂಗವಲ್ಲಿ ಹಾಕಿ. ಹೊಸ ಬಟ್ಟೆಯುಟ್ಟು, ನಲಿಯುವ ಕ್ಷಣಕ್ಕಾಗಿ ನಮ್ಮ ಜನಪದರು ಕಾತರದಿಂದ ಕಾಯುತ್ತಿರುತ್ತಾರೆ. ಪ್ರದೇಶದಿಂದ ಪ್ರದೇಶಕ್ಕೆ, ವರ್ಗದಿಂದ ವರ್ಗಕ್ಕೆ ಒಂದೊಂದು ಹಬ್ಬವೂ ವಿಭಿನ್ನ ಸ್ವರೂಪವನ್ನು ಪಡೆದುಕೊಂಡಿರುತ್ತವೆ.

೧. ದೀಪಾವಳಿ

ದೀಪಾವಳಿಯು ಕತ್ತಲೆಯನ್ನು ಹೋಗಲಾಡಿಸಿ ಬೆಳಕನ್ನು ಕೊಡುವ ದೀಪಗಳ ಹಬ್ಬ. ಈ ಬೆಳಕಿನ ಹಬ್ಬಕ್ಕೆ ಉತ್ತರ, ದಕ್ಷಿಣ ಎಂಬ ಪ್ರಾದೇಶಿಕತೆಯ ಸೀಮೆಗಳಿಲ್ಲ. ಇಡೀ ದೇಶವೇ ಉತ್ಸಾಹದಲ್ಲಿ ಮುಳುಗುವ ಸಮಯ. ಆಚರಣೆಯಲ್ಲಿ ಮಾತ್ರ ಅಲ್ಪ ಸ್ವಲ್ಪ ವೆತ್ಯಾಸಗಳಿವೆ. ಉತ್ತರ ಭಾರತದವರಿಗೆ ದೀಪಾವಳಿ ಐದು ದಿನಗಳ ಹಬ್ಬವಾದರೆ, ದಕ್ಷಿಣದವರಿಗೆ ಇದು ಮೂರು ದಿನಗಳ ಸಂಭ್ರಮ. ಇದು ಪ್ರತಿ ವರ್ಷ ಅಕ್ಟೋಬರ್ ಇಲ್ಲವೇ ನವೆಂಬರ್ ತಿಂಗಳಲ್ಲಿ ಬರುತ್ತದೆ. ಉತ್ತರ ಭಾರತದಲ್ಲಿ ಶ್ರೀರಾಮಚಂದ್ರನು ಲಂಕಾಧಿಪತಿ ರಾವಣನನ್ನು ಸಂಹಾರ ಮಾಡಿ, ವನವಾಸ ಮುಗಿಸಿ ಸೀತೆಯೊಡನೆ ಅಯೋಧ್ಯೆಗೆ ವಾಪಸ್ಸಾದ ದಿನವೇ ದೀಪಾವಳಿ. ಅದರ ನೆನಪಿಗಾಗಿ ದೀಪಗಳನ್ನು ಹಚ್ಚಿ ರಾಮ ಸೀತೆಯರನ್ನು ಸ್ವಾಗತಿಸುತ್ತಾರೆ. ಅಯೋಧ್ಯೆಯ ಅರಸನಾದ ಶ್ರೀರಾಮಚಂದ್ರನ ಪಟ್ಟಾಭಿಷೇಕದ

ರಾತ್ರಿಯಂದು ಅಯೋಧ್ಯೆಯ ಪ್ರಜೆಗಳು ಸಂಭ್ರಮದಿಂದ ತಮ್ಮ ಮನೆಗಳನ್ನು ಇಡೀ ಪಟ್ಟಣದ ಬೀದಿಗಳನ್ನು ದೀಪಗಳಿಂದ ಅಲಂಕರಿಸಿದರಂತೆ ಎಂಬ ನಂಬಿಕೆಯೂ ಇದೆ.

ಮತ್ತೊಂದು ಕತೆಯ ಪ್ರಕಾರ ದೀಪಾವಳಿ ಬಲಿ ಚಕ್ರವರ್ತಿಯ ಸಂಹಾರವನ್ನೂ ಸೂಚಿಸುತ್ತದೆ. ಭಗವಾನ್ ಶ್ರೀ ವಿಷ್ಣುವು ವರಹಾವತಾರ ತಳೆದು ಅಸುರನಾದ ಬಲಿ ಚಕ್ರವರ್ತಿಯನ್ನು ತುಳಿದು ಪಾತಾಳಕ್ಕೆ ಕಳುಹಿಸಿದನು. ಈ ಸಂಭ್ರಮವೇ ದೀಪಾವಳಿ. ಬೆಳಕಿನ ಹಬ್ಬದಲ್ಲಿ ದೀಪಗಳನ್ನು ಉರಿಸುವುದೇ ಚೆಂದ. ಮನೆಯ ಸುತ್ತ ಮನೆಯ ಗೋಡೆಯ ಮೇಲೆ ಮನೆಯ ಮುಂದೆ ದೀಪಗಳನ್ನು ಬೆಳಗಿದಾಗ ಮನಃಶಾಂತಿ ಸಿಗುತ್ತದೆ. ಕಾಲಕಾಲಕ್ಕೆ ಪರಮಾತ್ಮನು ಧರ್ಮದ ರಕ್ಷಣೆಗಾಗಿ ಭೂಲೋಕದಲ್ಲಿ ಅವತಾರವೆತ್ತಿ ಧರ್ಮ ಕಂಟಕರನ್ನು ನಾಶಮಾಡುತ್ತಾನೆ ಎಂಬ ನಂಬಿಕೆಯಿದೆ. ಈ ಹಿನ್ನೆಲೆಯಲ್ಲಿ ಬೆಳಕಿನ ಹಬ್ಬವಾದ ದೀಪಾವಳಿಗೆ ವಿಶಿಷ್ಟ ಸ್ಥಾನವಿದೆ. ಸಿಹಿ ಇಲ್ಲದೇ ದೀಪಾವಳಿ ಇಲ್ಲ. ಸ್ನೇಹಿತರಿಗೆ, ಬಂಧುಗಳಿಗೆ ಹಬ್ಬದ ಶುಭಾಶಯದ ಜೊತೆಗೆ ಸಿಹಿ ತಿಂಡಿ ವಿನಿಮಯ ಮಾಡಲೇಬೇಕು. ದೀಪಾವಳಿ ಎಂದರೆ ಬೆಳಕಿನ ಜೊತೆಗೆ ಪಟಾಕಿಯೂ ಬೇಕು.

ಐಕನಹಳ್ಳಿಯಲ್ಲಿ ಆಚರಿಸುವ ದೀಪಾವಳಿ ಹಬ್ಬ ಹಲವು ಕಾರಣಗಳಿಂದಾಗಿ ಗಮನ ಸೆಳೆಯುತ್ತದೆ.

ಅ) ಐಕನಹಳ್ಳಿಯಮ್ಮ ಮತ್ತು ವೀರಮಕ್ಕಳು

"ಐಕನಹಳ್ಳಿಯಮ್ಮ ಭಕ್ತರ ಪಾಲಿಗೆ ಪಾರ್ವತಿಯ ಪ್ರತಿರೂಪ. ಪಕ್ಕದ ಸಾಸಲು ಗ್ರಾಮದಲ್ಲಿ ನೆಲೆಸಿರುವ ಸೊಂಬಪ್ಪ (ಶಂಭು=ಶಿವ) ಸರ್ಪವಾಗಿ ಬಂಡೆಯ ಮೇಲಿಂದ ಹರಿದು ಐಕನಹಳ್ಳಿಯಮ್ಮನ ಸನ್ನಿಧಿಗೆ ಬಂದಿದ್ದ ಎಂದು ಭಕ್ತಸಮೂಹ ನಂಬಿಕೊಂಡಿದೆ. ವೀರಭದ್ರಸ್ವಾಮಿಯ ಪ್ರತಿರೂಪ ದೊಡ್ಡಯ್ಯನನ್ನು ಗಣೇಶನಿಗೆ, ಚಿಕ್ಕಯ್ಯನನ್ನು ಸುಬ್ರಹ್ಮಣ್ಯನಿಗೆ ಹೋಲಿಸಿದ್ದಾರೆ."[೧] ದೇವಿಯ ಮಹತ್ವ ಹೆಚ್ಚಿಸಲು ಭಕ್ತರು ಈ ರೀತಿ ಕಥೆ ಕಟ್ಟಿರುವುದು ಸ್ಪಷ್ಟವಾಗುತ್ತದೆ. ಒಮ್ಮೆ ಚಿಕ್ಕಯ್ಯ ತಾಯಿಯೊಂದಿಗೆ ತಳಿಗೆ (ಆಹಾರ) ವಿಷಯಕ್ಕಾಗಿ ಮುನಿಸಿಕೊಂಡು ತುಳಸಿ ಗ್ರಾಮದಲ್ಲಿ ನೆಲೆಯೂರಿದನಂತೆ. ಐಕನಹಳ್ಳಿಯಮ್ಮ ಮತ್ತು ದೊಡ್ಡಯ್ಯ ಅವನನ್ನು ಕರೆಯಲು ಹೋದರು. ಚಿಕ್ಕಯ್ಯ ಬರುವುದಿಲ್ಲವೆಂದು ಹೇಳಿದ್ದರಿಂದ ಐಕನಹಳ್ಳಿಯಮ್ಮ ಮಕ್ಕಳನ್ನು ತುಳಸಿಯಲ್ಲಿ ಬಿಟ್ಟು ತಾನು ಐಕನಹಳ್ಳಿಯಲ್ಲಿ ನೆಲೆಸುತ್ತಾಳೆ. ಸಾಮಾನ್ಯವಾಗಿ ಭೈರವ, ಹನುಮಂತ ಮೊದಲಾದ ದೇವರುಗಳು ಊರಿನ ಹೊರಗಿರುತ್ತಾರೆ. ಆದರೆ ಸ್ತ್ರೀ ದೇವತೆ ಐಕನಹಳ್ಳಿಯಮ್ಮನನ್ನು ಊರಿನ ರಕ್ಷಕ ದೇವತೆ ಎಂದು ಪರಿಭಾವಿಸಿ ಊರಿನ ಹೊರಗೆ ಸ್ಥಾಪಿಸಿದ್ದಾರೆ.

ದೊಡ್ಡಯ್ಯ ಮತ್ತು ಚಿಕ್ಕಯ್ಯನ ಮುಖವಾಡಗಳನ್ನು ಧರಿಸುವವರೇ ವೀರಮಕ್ಕಳು. ಹರಿಜನರೊಳಗೆ ವಂಶಪಾರಂಪರ್ಯವಾಗಿ, ಕಂಕಣ ಕಟ್ಟಿಸಿಕೊಂಡಿದ್ದವರು ಮಾತ್ರ ಈ ಅರ್ಹತೆ ಪಡೆದುಕೊಂಡಿದ್ದಾರೆ. ಗಂಡು ಮಕ್ಕಳ ಮದುವೆಯ ಸಂದರ್ಭದಲ್ಲಿ ಈ ವಂಶದ ಹಿರಿಯರು ಅವಶ್ಯಕತೆಗನುಗುಣವಾಗಿ ಈ ಪದ್ಧತಿ ನಡೆಸಿಕೊಂಡು ಬರುತ್ತಿದ್ದಾರೆ. ಮದುವೆಯ ಚಪ್ಪರದ ದಿನ

ಮಧ್ಯಾಹ್ನ ಬ್ರಾಹ್ಮಣ ಪುರೋಹಿತರೊಬ್ಬರ ಮುಂದಾಳತ್ವದಲ್ಲಿ ಕೆರೆಯ ಬಳಿಯ ದೇವರ ಮಂಟಪಕ್ಕೆ ಬರುತ್ತಾರೆ. ಶಾಸ್ತ್ರಕ್ಕೆ ಸಂಬಂಧಿಸಿದ ಸಾಮಾನುಗಳನ್ನು ಮುತ್ತೈದೆಯರು ತರುತ್ತಾರೆ. ಕಂಕಣ ಕಟ್ಟಿಸಿಕೊಳ್ಳುವವರನ್ನು ಆ ಮಂಟಪದ ಮುಂದೆ ಕೂರಿಸಿ, ಐದು ಜನ ಮುತ್ತೈದೆಯರಿಂದ ಶಾಸ್ತ್ರ ಮಾಡಿಸಿ, ಕಂಕಣಕಟ್ಟಿ ಬಾಳೆಹಣ್ಣು ತುಪ್ಪ ಸಕ್ಕರೆ ಬೆರೆಸಿದ ಪ್ರಸಾದವನ್ನು ಕೊಡುತ್ತಾರೆ. ಚಿಕ್ಕಯ್ಯನ ಕಂಕಣ ಕಟ್ಟಿಸಿದ್ದವರಿಗೆ ಚಿಕ್ಕಯ್ಯನ ಪೆಟ್ಟಿಗೆ ಹೊರಿಸುತ್ತಾರೆ. ದೊಡ್ಡಯ್ಯನ ಕಂಕಣ ಕಟ್ಟಿಸಿದ್ದವರಿಗೆ ದೊಡ್ಡಯ್ಯನ ಪೆಟ್ಟಿಗೆ ಹೊರಿಸುತ್ತಾರೆ. ನಂತರ ವೀರಭದ್ರಸ್ವಾಮಿ ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿ ಕಂಕಣ ಬಿಚ್ಚಿಸಿ ನಂತರ ಮನೆಗೆ ಕರೆದೊಯ್ಯುತ್ತಾರೆ. ತಮ್ಮ ಗುಂಪಿನಲ್ಲಿ ಉನ್ನತವೆಂದು ಗುರುತಿಸಿಕೊಳ್ಳಲು ಇಲ್ಲಿ ಧಾರ್ಮಿಕ ಪರಿವೇಃ ಕೊಟ್ಟಿರುವ ಹಾಗೆ ಕಾಣುತ್ತದೆ.

ಆ) ವೀರ ಮಕ್ಕಳ ಸಿದ್ಧತೆ

ಐಕನಹಳ್ಳಿಯ ದೀಪಾವಳಿ ಹಬ್ಬ ವೈಶಿಷ್ಟ್ಯಪೂರ್ಣವಾದುದು. "ಆಯುಧ ಪೂಜೆ ಕಳೆದ ನಂತರ ಬರುವ ಶುಕ್ರವಾರದಿಂದ ಚಿಕ್ಕಯ್ಯ ಮತ್ತು ದೊಡ್ಡಯ್ಯನ ಮುಖವಾಡ ಧರಿಸುವ ವೀರಮಕ್ಕಳು ಮನೆಬಿಟ್ಟು ವೀರಭದ್ರಸ್ವಾಮಿ ದೇವಸ್ಥಾನಕ್ಕೆ ಬರುತ್ತಾರೆ. ಅಂದಿನಿಂದ ಸುಮಾರು ೧೫ ದಿನಗಳ ಕಾಲ ಇವರ ಊಟ ಸ್ನಾನ ಮನೆಯಲ್ಲಾದರೆ, ನಿದ್ರೆ ಮಾತ್ರ ದೇವಸ್ಥಾನದಲ್ಲಿ ನಡೆಯುತ್ತದೆ. ಈ ಸಂದರ್ಭದಲ್ಲಿ ಯಾವ ದುಶ್ಚಟಗಳು ಅವರಿಗೆ ಇರುವಂತಿಲ್ಲ."[೨] ಪ್ರತಿ ದಿನ ಪೂಜೆ ಪುರಸ್ಕಾರಗಳು ನಡೆಯುತ್ತವೆ. ಆ ದಿನ ವೀರ ಮಕ್ಕಳು ಧರಿಸುವ ಬಟ್ಟೆಗಳನ್ನು ಮಡಿವಾಳರು ತೊಳೆಯುತ್ತಾರೆ. ಇಂತಹ ಸೌಲಭ್ಯ ಹಬ್ಬದ ಸಂದರ್ಭದಲ್ಲಿ ವೀರಮಕ್ಕಳಿಗೆ ಸಿಗುತ್ತದೆ.

ಇ) ವೀರ ಮಕ್ಕಳಿಗೆ ಕಂಕಣ ಕಟ್ಟುವ ಪದ್ಧತಿ

ಐಕನಹಳ್ಳಿಯಮ್ಮನ ಮಕ್ಕಳಾದ ಚಿಕ್ಕಯ್ಯ, ದೊಡ್ಡಯ್ಯನ ಮುಖವಾಡಗಳನ್ನು ಧರಿಸುವ ಮೂರು ಕುಟುಂಬಗಳಿವೆ. ಈ ಕುಟುಂಬದ ಹಿರಿಯ ಮತ್ತು ಕಿರಿಯ ಮಕ್ಕಳಿಗೆ ಕಂಕಣ ಕಟ್ಟುವ ಪದ್ಧತಿಯಿದೆ. ನಡುಕಲ ಮಕ್ಕಳಿಗೆ ಕಂಕಣ ಕಟ್ಟುವುದಿಲ್ಲ. ದೇವರನ್ನು ಧರಿಸುತ್ತಿರುವವರಿಗೆ ವಯಸ್ಸು ಆಗಿ ಧರಿಸಲು ಸಾಧ್ಯವಿಲ್ಲ ಎನ್ನುವುದಕ್ಕೆ ಮೊದಲು ಅವರ ಮಕ್ಕಳಿಗೆ ಕಂಕಣಕಟ್ಟಿ ಸಿದ್ಧ ಮಾಡಬೇಕು. ಸಾಮಾನ್ಯವಾಗಿ ಈ ಕುಟುಂಬಗಳ ಹಿರಿಯ ಮತ್ತು ಕಿರಿಯ ಮಕ್ಕಳ ಮದುವೆಯಲ್ಲಿ ಕಂಕಣಕಟ್ಟುವ ಪದ್ಧತಿಯನ್ನು ನೆಡಸಿಕೊಂಡು ಬರುತ್ತಿದ್ದಾರೆ. ಗಂಡಿನ ಮದುವೆಯ ಚಪ್ಪರದ ದಿನ ಮಧ್ಯಾಹ್ನ ೩ ಗಂಟೆಗೆ ತುಳಸಿ ಕೆರೆಯ ಮಂಟಪದ ಬಳಿಗೆ ಕುಟುಂಬದವರೆಲ್ಲ ಸೇರಿ ದೊಡ್ಡಯ್ಯ, ಚಿಕ್ಕಯ್ಯ ದೇವರನ್ನು ತೆಗೆದುಕೊಂಡು ಹೋಗುತ್ತಾರೆ. ಜೋಯಿಸರನ್ನು ಬರಮಾಡಿಕೊಂಡಿರುತ್ತಾರೆ. ಮಜ್ಜನ ಶಾಸ್ತ್ರದ ಸಾಮಾನುಗಳನ್ನು ಮುತ್ತೈದೆಯರ ಜೊತೆ ಬಿದರಿನ ಕುಕ್ಕೆಗಳಲ್ಲಿ ಒರಿಸಿಕೊಂಡು ಕರೆದುಕೊಂಡು ಹೋಗುತ್ತಾರೆ. ಮಂಟಪದ ಬಳಿ ದೇವರನ್ನು ಇಡುತ್ತಾರೆ. ದೇವರ ಮುಂದೆ ಗಂಡನ್ನು ಕೂರಿಸಿ ಮುತ್ತೈದೆಯರ ಕೈಯಲ್ಲಿ ಶಾಸ್ತ್ರ ಮಾಡಿಸಿ, "ಗಂಡಿಗೆ ಚಿಕ್ಕಯ್ಯನ ಕಂಕಣ ಕಟ್ಟುವುದಾದರೆ ಕೆಂಪು ಮುಖವಾಡದ ಮೇಲೆ ಮೊದಲು ಎಲೆಯ ಕಂಕಣವಿಟ್ಟು ಪೂಜಿಸಿ ನಂತರ ಅದನ್ನು ಗಂಡಿಗೆ ಕಟ್ಟುತ್ತಾರೆ. ಅದೇ ರೀತಿ ದೊಡ್ಡಯ್ಯನ ಕಂಕಣ ಕಟ್ಟುವುದಾದರೆ ಅರಿಶಿನ ಮುಖವಾಡದ ಮೇಲೆ

ಮೊದಲು ಕಂಕಣವನ್ನಿಟ್ಟು ಪೂಜಿಸಿ ನಂತರ ಕಟ್ಟುತ್ತಾರೆ. ಯಾರು ಯಾವ ಕಂಕಣವನ್ನು ಕಟ್ಟಿಸಿಕೊಂಡಿರುತ್ತಾರೊ ಅದೇ ಮುಖವಾಡವನ್ನು ಧರಿಸಿಕೊಳ್ಳಬೇಕು."[೩] ಈ ಸಂದರ್ಭದಲ್ಲಿ ಐಕನಹಳ್ಳಿಯ ಗ್ರಾಮಸ್ಥರು ತಂದಿದ್ದ ಮೊಸರನ್ನದ ತಳಿಗೆಯನ್ನು ಅಲ್ಲಿ ನೆರೆದಿದ್ದ ಭಕ್ತಾದಿಗಳಿಗೆ ಪ್ರಸಾದವಾಗಿ ಕೊಡುತ್ತಾರೆ.

ಕಂಕಣ ಕಟ್ಟಿಸಿಕೊಂಡವರನ್ನು ತುಳಸಿ ಕೆರೆಯ ಬಳಿಯಿಂದ ವೀರಭದ್ರ ಸ್ವಾಮಿ ದೇವಾಲಯದ ಬಳಿಗೆ ಕರೆದು ತರುವಾಗ ಬಾಳೆ ಹಣ್ಣು, ತುಪ್ಪ, ಸಕ್ಕರೆ ಬೆರಸಿ ಮಣೇವು ಹಾಕುವ ಶಾಸ್ತ್ರ ಮಾಡುತ್ತಾರೆ. ದೇವಸ್ಥಾನ ತಲುಪಿದ ಮೇಲೆ ಅಕ್ಕಿಯಿಂದ ಹಸೆ ಬರೆದು ಹಸೆಯ ಮೇಲೆ ಗಂಡನ್ನು ಕೂರಿಸಿ ಕಂಕಣ ಬಿಚ್ಚಿಸುವ ಶಾಸ್ತ್ರ ನಡೆಯುತ್ತದೆ. ಅಲ್ಲಿ ದೇವರು ಮೈದುಂಬುವುದು ಕಂಡುಬರುತ್ತದೆ. ನಂತರ ಮನೆಗೆ ಹೋಗಿ ಮಜ್ಜನ ಶಾಸ್ತ್ರ ನೆರವೇರಿಸುತ್ತಾರೆ. ಪಟ್ಟ ತುಂಬಿದ ತಾಲಿಯನ್ನು ಹಾಕಿಕೊಂಡು ಹೊರಗಡೆ ಹೋಗುವಂತಿಲ್ಲ. ಹೀಗೆ ಕಂಕಣ ಕಟ್ಟಿಸಿಕೊಂಡವರು ಚಿಕ್ಕಯ್ಯ ಮತ್ತು ದೊಡ್ಡಯ್ಯನ ಮುಖವಾಡ ಧರಿಸಬೇಕು.

ಈ) ಸಂಪ್ರಕ್ಷಿಣೆ

ನರಕ ಚತುರ್ದಶಿಯ ದಿನ ಸಂಜೆ ಐಕನಹಳ್ಳಿಯ ದೇವತಾಕಾರ್ಯಕ್ಕೆ ನೇಮಕವಾಗಿರುವ ಒಂದು ಪಂಗಡದವರು ಮನೆಗೊಬ್ಬರಂತೆ ತುಳಸಿ ಗ್ರಾಮಕ್ಕೆ ಬರುತ್ತಾರೆ. ೫ ಚಿಪ್ಪು ಬಾಳೆ ಹಣ್ಣು, ೫ ತೆಂಗಿನ ಕಾಯಿ, ೫ ಸೇರು ಅಕ್ಕಿ, ೧ ಅಚ್ಚು ಬೆಲ್ಲ, ಗೋಡುಂಬೆ, ದ್ರಾಕ್ಷಿ, ಉತ್ತುತ್ತೆ, ಜೇನು ತುಪ್ಪ ಎಲ್ಲ ಹಾಕಿ ತಳಿಗೆ ಮಾಡುತ್ತಾರೆ. ಈ ಪೂಜಾ ಸಾಮಾನುಗಳನ್ನು ಐಕನಹಳ್ಳಿಯ ಗ್ರಾಮಸ್ಥರು ತಂದಿರುತ್ತಾರೆ. ಟಮಟೆ, ವಾದ್ಯ, ಪಂಜುಗಳೊಂದಿಗೆ ಚಿಕ್ಕಯ್ಯ, ದೊಡ್ಡಯ್ಯನ ಮುಖವಾಡಗಳು, ಐಕನಹಳ್ಳಿಯಮ್ಮನ ಅಡ್ಡೆ ದೇವರನ್ನು ತೆಗೆದುಕೊಂಡು ಹೋಗಿರುತ್ತಾರೆ. ದೇವರನ್ನು ಗಂಗೆಯಲ್ಲಿ ತೊಳೆದು, ಪುರೋಹಿತರಿಂದ ಪುಣ್ಯ ಮಾಡಿಸಿ ತೀರ್ಥ ಪ್ರಸಾದ ಸ್ವೀಕರಿಸಿ ಮತ್ತೆ ವೀರಭದ್ರ ಸ್ವಾಮಿಯ ದೇವಸ್ಥಾನಕ್ಕೆ ಬಂದು ಪೂಜೆ ಮಾಡುತ್ತಾರೆ.

ಉ) ಸಿಡಿಹಬ್ಬ

ಬಲಿಪಾಡ್ಯಮಿಯ ದಿನ ಮನೆಯನ್ನು ಶುಚಿಗೊಳಿಸಿ, ದನಕರುಗಳನ್ನು ಮೈತೊಳೆದು ಸಿಂಗರಿಸುತ್ತಾರೆ. ತಮ್ಮ ಜಮೀನುಗಳ ನಾಲ್ಕು ಮೂಲೆಗಳಿಗೆ ಮನೆಯಿಂದ ತೆಗೆದುಕೊಂಡು ಹೋದ ಬೂದಿಯಿಂದ ನೇಗಿಲು, ನೊಗ, ಎತ್ತುಗಳ ಆಕಾರ ಬರೆದು ಸಿಂಗರಿಸುತ್ತಾರೆ. ಮನೆಗೆ ಬರುವಾಗ ತಮ್ಮ ಹೊಲದಲ್ಲಿ ಬೆಳೆದ ಉತ್ರಾಣಿ, ಹುಚ್ಚೆಳ್ಳು, ಹೂ, ಅಣ್ಣೆ ಹೂವುಗಳನ್ನು ತಂದು ಮನೆಯ ಬಾಗಿಲ ಬಳಿ ಸಿಂಗರಿಸುತ್ತಾರೆ. ನಡುಮನೆಗೆ ಹೂವುಗಳನ್ನು ಚೆಲ್ಲುತ್ತಾರೆ.

ಸಿಡಿಹಬ್ಬದ ಆಚರಣೆ ದಿನ (ಬಲಿಪಾಡ್ಯಮಿ) ವೀರಮಕ್ಕಳು ಆಹಾರ ಸೇವಿಸುವುದಿಲ್ಲ. ಚಂಡುಮಲ್ಲಿಗೆ ಹೂವಿನ ಹಾರಕಟ್ಟಿ, ಸಿರಿಗಂಧ ತೇದಿರುತ್ತಾರೆ. ತಳಿಗೆ ಸಿದ್ಧಪಡಿಸಲು ನೀರನ್ನು ಕೆರೆಯಿಂದ ತಂದ ಮೇಲೆ ಐಕನಹಳ್ಳಿಯಿಂದ ತಂದ ದವಸ ಧಾನ್ಯಗಳಿಂದ ತಳಿಗೆ ಸಿದ್ಧಪಡಿಸಿಕೊಂಡು,

ಸ್ನಾನ ಮಾಡಿಕೊಂಡು, ಗಂಧ ಬಳಿದುಕೊಂಡು ಚಂಡು ಹೂವಿನ ಹಾರ ಹಾಕಿಕೊಂಡು ಅಲಂಕಾರ ಮಾಡಿಕೊಳ್ಳುತ್ತಾರೆ. ವೀರಭದ್ರ ದೇವರ ಗದ್ದಿಗೆಯ ಮೇಲೆ ಹೂವಿನಹಾರ, ಹೊಸಬಟ್ಟೆ, ಹಣ್ಣುಕಾಯಿ, ದೇವರಬೆತ್ತ, ಸಿಡಿಕೊಂಡಿ (ಕಬ್ಬಿಣದ ಕೊಂಡಿ), ಐಕನಹಳ್ಳಿಯಮ್ಮನಿಗೆ ತೆಗೆದುಕೊಂಡು ಹೋಗುವ ತಳಿಗೆಯನ್ನಿಟ್ಟು ಪೂಜೆ ಮಾಡುತ್ತಾರೆ. ದೇವರನ್ನು ಮೆರೆಸುವ ಗುಡ್ಡರು ಪಕ್ಕದ ಹಿರಿಕರಳೆ ಗ್ರಾಮದಿಂದ ಬಂದಿರುತ್ತಾರೆ. ತುಳಸಿ ಗ್ರಾಮದ ವೀರಮಕ್ಕಳು ಹಾಗೂ ಭಕ್ತಾದಿಗಳೆಲ್ಲ ಒಟ್ಟಾಗಿ 'ಹಾಲಿಯೇ' ಎಂದು ಜೈಕಾರ ಕೂಗುತ್ತ ಐಕನಹಳ್ಳಿಗೆ ಹೊರಡುತ್ತಾರೆ. ದೇವರ ಒಕ್ಕಲಿನವರು ವೀರಮಕ್ಕಳಿಗೆ ತಮ್ಮ ತಮ್ಮ ಮನೆ ಬಾಗಿಲಿನಲ್ಲಿ ವಿಳ್ಯದೆಲೆ ಅಡಿಕೆಕೊಟ್ಟು ಬೀಳ್ಕೊಡುತ್ತಾರೆ.

ಐಕನಹಳ್ಳಿಯ ಹರಿಜನರು ಕೂಡ ಅಲಂಕರಿಸಿಕೊಂಡು ತಳಿಗೆಯೊಂದಿಗೆ ಸಿದ್ಧರಾಗಿರುತ್ತಾರೆ. ವೀರಮಕ್ಕಳು ಬಂದ ತಕ್ಷಣ ಗ್ರಾಮದ ಹೊರಭಾಗದಲ್ಲಿ ಸಿಗುವ ಹಳ್ಳಿಗರ ಸಾಕು ಪ್ರಾಣಿಗಳನ್ನು ರಕ್ಷಿಸುವ ಕನ್ನಂಬಾಡಮ್ಮನ ದರ್ಶನ ಪಡೆದು 'ಹಾಲಿಯೆ' ಎಂದು ಜೈಕಾರ ಕೂಗಿ, ನಂತರ ರಂಗಸ್ಥಳದಲ್ಲಿರುವ ಲಕ್ಕಮ್ಮನ (ಲಕ್ಷ್ಮಿ) ದೇವಸ್ಥಾನದ ಬಳಿಗೆ ಬರುತ್ತಾರೆ. ಭಕ್ತಸಾಗರವೇ ಅಲ್ಲಿ ನೆರೆದಿರುತ್ತಾರೆ. ಅರ್ಚಕರು ಲಕ್ಕಮ್ಮನಿಗೆ ಪೂಜೆಮಾಡಿ ವೀರಮಕ್ಕಳಿಗೆ ತೀರ್ಥಹಾಕುತ್ತಾರೆ. ತಮ್ಮ ಹರಕೆ ತೀರಿಸಲು ಬಂದ ಹೆಣ್ಣು ಮಕ್ಕಳು ಬಾಯಿಬೀಗ ಚುಚ್ಚಿಕೊಳ್ಳುತ್ತಾರೆ. ತರುವಾಯ ಬಂಡಿ (ಚಿಕ್ಕಕೊಂಟೆ ಮರದ ಗಾಡಿಯ)ಯನ್ನು ನಿಲ್ಲಿಸಿಕೊಂಡು ಅದರ ಮುಂದೆ ಮೇಕೆಬಲಿಕೊಡುತ್ತಾರೆ. ನಂತರ ಬಂಡಿಯಲ್ಲಿ ತಳಿಗೆ (ಅನ್ನ, ಅವರೆಕಾಳು, ಶ್ಯಾವಿಗೆ) ಕುಕ್ಕೆಗಳನ್ನಿಟ್ಟುಕೊಂಡು ಅದರ ಹಿಂದೆ ವೀರಮಕ್ಕಳು, ಬಾಯಿಬೀಗ ಚುಚ್ಚಿಸಿಕೊಂಡವರು, ಭಕ್ತಾದಿಗಳು ಹೊರಡುತ್ತಾರೆ. ಗ್ರಾಮದಲ್ಲಿರುವ ಬೋರೇದೇವರ ಗುಡಿಗೆ ಪ್ರದಕ್ಷಿಣೆಹಾಕಿ ಜೈಕಾರ ಕೂಗುತ್ತಾ ಊರಾಚೆಯ ಐಕನಹಳ್ಳಿಯಮ್ಮನ ಗುಡಿಯ ಬಳಿಗೆ ಬರುತ್ತಾರೆ. ಕೆರೆಯ ಪಕ್ಕದಲ್ಲಿರುವ ದೊಡ್ಡಮ್ಮ ಚಿಕ್ಕಮ್ಮನ ದೇವಸ್ಥಾನಗಳಿಗೆ ಪ್ರದಕ್ಷಿಣೆ ಮಾಡಿ, ಐಕನಹಳ್ಳಿಯಮ್ಮನ ಗುಡಿಯನ್ನು ವೀರಮಕ್ಕಳು ಮೂರು ಸುತ್ತು ಸುತ್ತುತ್ತಾರೆ.

ಬಾದ್ರಿ ಮರ ನೀರಿರುವ ಕಡೆ ಗಟ್ಟಿಯಾಗಿ ಮತ್ತು ಎತ್ತರವಾಗಿ ಬೆಳೆಯುವ ಮರವಾದ್ದರಿಂದ ಇದನ್ನು ಸಿಡಿ ಮರವಾಗಿ ಬಳಸಿಕೊಳ್ಳುತ್ತಾರೆ. ಆಳೆತ್ತರದ ಕಲ್ಲನ್ನು ನೆಲದೊಳಗಿನಿಂದ ನಿಲ್ಲಿಸಿ, ಅದರ ಮೇಲೆ ಸಿಡಿ ಮರವನ್ನು ಕಟ್ಟಿ ಅದು ಸುತ್ತುವಂತೆ ವ್ಯವಸ್ಥೆ ಮಾಡಿಕೊಂಡಿರುತ್ತಾರೆ. ಸಿಡಿ ಮರಕ್ಕೆ ತಳಿಗೆಯನ್ನಿಟ್ಟು ಅರ್ಚಕರ ಕೈಯಲ್ಲಿ ಪೂಜೆ ಮಾಡಿಸಿ, ಮೇಕೆ ಬಲಿಕೊಟ್ಟು ಉಪವಾಸವಿದ್ದ ವೀರಮಕ್ಕಳಲ್ಲಿ ಒಬ್ಬರನ್ನು ಸಿಡಿಮರಕ್ಕೆ ಕಟ್ಟಿ ಜೈಕಾರ ಕೂಗುತ್ತಾ ಸುತ್ತಿಸುತ್ತಾರೆ. ಹಿಂದೆ ವೀರಮಕ್ಕಳಿಗೆ ಬೆನ್ನಿಗೆ ಕಬ್ಬಿಣದ ಕೊಂಡಿ (ಸಿಡಿಕೊಂಡಿ) ಯನ್ನು ಹಾಕುತ್ತಿದ್ದರು. ಈಗ ಹಗ್ಗವನ್ನು ಉಪಯೋಗಿಸಿ ಕಟ್ಟುತ್ತಾರೆ. ಉಗ್ರದೇವತೆಯನ್ನು ಉಗ್ರ ಆಚರಣೆ ಮೂಲಕ ಒಲಿಸಿಕೊಳ್ಳುವ ಪೂಜಾಕ್ರಮವಿದು. ನಂತರ ಭಕ್ತರ ಬಾಯಿಬೀಗ ಬಿಚ್ಚಿಸಿ, ವೀರ ಮಕ್ಕಳಿಗೆ ಪ್ರಸಾದವನ್ನು ಕೊಡುತ್ತಾರೆ. ಆದರೆ ಚಿಕ್ಕಯ್ಯ, ದೊಡ್ಡಯ್ಯನ ಮುಖವಾಡ ಧರಿಸುವ ವೀರಮಕ್ಕಳು ಆ ದಿನ ತುಳಸಿಗ್ರಾಮದ ಒಕ್ಕಲಿಗರ ಮನೆಗಳಲ್ಲಿ ಊಟಮಾಡಿ, ತಮ್ಮ ಮನೆ ಸೇರಿಕೊಳ್ಳುತ್ತಾರೆ. ಐಕನಹಳ್ಳಿಯಲ್ಲಿ ಭಕ್ತರು ಶ್ಯಾವಿಗೆ, ಅನ್ನ ಊಟಮಾಡಿ ಸಂಭ್ರಮ ಆಚರಿಸುತ್ತಾರೆ.

ಊ) ಹಣ್ಣು-ಕಾಯಿ ಹಬ್ಬ

ಸಿಡಿಹಬ್ಬದ ಮರುದಿನ ಬೆಳಿಗ್ಗೆ ವೀರಭದ್ರ ಸ್ವಾಮಿ ಹಾಗೂ ಐಕನಹಳ್ಳಿಯಮ್ಮನ ಅಲಂಕಾರ ನಡೆಯುತ್ತದೆ. ಮಧ್ಯಾಹ್ನ ಹಲವು ಊರುಗಳಿಂದ ಬಂದ ಭಕ್ತಾದಿಗಳು ಹಣ್ಣುಕಾಯಿ ತಂದು ದೇವರಿಗೆ ಪೂಜೆ ಮಾಡಿಸುತ್ತಾರೆ. ಐಕನಹಳ್ಳಿಯಲ್ಲಿ ಬುಡಿಯಪ್ಪನ ಪಂಗಡ, ಹುಚ್ಚಮ್ಮನ ಪಂಗಡ, ತೋಪಣ್ಣಯ್ಯನ ಪಂಗಡ, ಕೆಂಗಪ್ಪನ ಪಂಗಡಗಳೆಂಬ ನಾಲ್ಕು ಗುಂಪುಗಳು ನಾಲ್ಕು ವರ್ಷಕ್ಕೊಮ್ಮೆ ದೇವರನ್ನು ಮೆರೆಸುವ ಜವಾಬ್ದಾರಿ ಹೊರುತ್ತಾರೆ. ಸಂಜೆ ನಾಲ್ಕು ಗಂಟೆಯ ಸುಮಾರಿಗೆ ಈ ನಿರ್ಧಿಷ್ಟ ಪಂಗಡದವರು ದೇವರನ್ನು ಐಕನಹಳ್ಳಿಗೆ ತೆಗೆದುಕೊಂಡು ಹೋಗುವ ಸಲುವಾಗಿ ತುಳಸಿ ಗ್ರಾಮಕ್ಕೆ ಬರುತ್ತಾರೆ. ದೇವರನ್ನು ಅಲಂಕರಿಸಿಕೊಂಡು, ವೀರಭದ್ರಸ್ವಾಮಿ ಗುಡಿಗೆ ಪೂಜೆ ಮಾಡಿಕೊಂಡು, ಐಕನಹಳ್ಳಿಯಮ್ಮನನ್ನು (ಕುದುರೆ ಮೇಲೆ ಕುಳಿತಿರುವ ವಿಗ್ರಹ) ಅಡ್ಡೆಮಾಡಿ ನಾಲ್ಕು ಜನ ಹೆಗಲಮೇಲೆ ಕುಳ್ಳಿರಿಸಿಕೊಂಡು ದೊಡ್ಡಯ್ಯ ಚಿಕ್ಕಯ್ಯರನ್ನು ದ್ವಾರಪಾಲಕರಾಗಿ ಕರೆದುಕೊಂಡು ಹೊರಡುತ್ತಾರೆ. ದೇವಿಯ ಗುಡಿಯ ಮುಂದೆ ಭಕ್ತಾದಿಗಳು ಸೇರಿರುತ್ತಾರೆ. ಗುಡ್ಡಗಳು ಅಲ್ಲಿ ಕತ್ತಿ ಹಿಡಿದು ಕುಣಿದ ಮೇಲೆ, ಮೊದಲೇ ಸಿದ್ಧವಾಗಿದ್ದ ಕೆಂಡಕೊಂಡವನ್ನು ತುಳಿದು ದೊಡ್ಡಯ್ಯ ಚಿಕ್ಕಯ್ಯರು ಕುಣಿಯುತ್ತಾರೆ. ಭಕ್ತರು ಈ ದೃಶ್ಯವನ್ನು ಕಣ್ತುಂಬಿಕೊಳ್ಳುತ್ತಾರೆ. ನಂತರ ಐಕನಳ್ಳಿಯಮ್ಮ ಮತ್ತು ಮಕ್ಕಳ ವಾಗ್ದಾನ ನಡೆಯುತ್ತದೆ. ಊರಿಗೆ ಏನಾದರು ತೊಂದರೆಗಳಾಗಿದ್ದರೆ ಅದನ್ನು ಹೇಗೆ ಪರಿಹರಿಸಿಕೊಳ್ಳಬೇಕೆಂದು ಗ್ರಾಮದ ಪ್ರಮುಖರನ್ನು ಕೂರಿಸಿಕೊಂಡು ದೊಡ್ಡಯ್ಯ ಮತ್ತು ಚಿಕ್ಕಯ್ಯ ತಿಳಿ ಹೇಳುತ್ತಾರೆ. ತರುವಾಯ ಚಿಕ್ಕಯ್ಯ ತನ್ನ ತಾಯಿ ಐಕನಹಳ್ಳಿಯಮ್ಮನ ಆಭರಣಗಳನ್ನು ಬಿಚ್ಚಿಸಿಕೊಂಡು ಊರೊಳಕ್ಕೆ ದೊಡ್ಡಯ್ಯನೊಂದಿಗೆ ಹೆಜ್ಜೆ ಹಾಕುತ್ತಾನೆ. ರಂಗಸ್ಥಳದಲ್ಲಿರುವ ಲಕ್ಕಮ್ಮನ ದೇವಸ್ಥಾನದಲ್ಲಿ ಐಕನಹಳ್ಳಿಯಮ್ಮನ ಅಡ್ಡೆದೇವರು ಹಾಗೂ ಚಿಕ್ಕಯ್ಯ, ದೊಡ್ಡಯ್ಯ ಮುಖವಾಡಗಳನ್ನಿಡುತ್ತಾರೆ.

ಬೆಳಿಗ್ಗೆ ಲಕ್ಕಮ್ಮನ ಗುಡಿಯ ಮುಂದೆ ಕೆಂಡಕೊಂಡ ಹಾಕಿ ಸಿದ್ಧಮಾಡುತ್ತಾರೆ. ಭಕ್ತಾದಿಗಳ ನಡುವೆ ದೊಡ್ಡಯ್ಯ, ಚಿಕ್ಕಯ್ಯ ಕೊಂಡಹಾಯ್ದು ಕುಣಿಯುತ್ತಾರೆ. ಊರಿನ ಹೆಬ್ಬಾಗಿಲಿನ ಬಳಿ ಚಿಕ್ಕಯ್ಯನನ್ನು ಮುಂದೆ ನಿಲ್ಲಿಸಿಕೊಂಡು ಮೇಕೆಯೊಂದನ್ನು ಬಲಿಕೊಡುತ್ತಾರೆ. ಅಲ್ಲಿಂದ ಊರೊಳಗೆ ಪ್ರತಿಯೊಂದು ಮನೆಗಳಲ್ಲು ಪೂಜೆ ನಡೆಯುತ್ತದೆ. ದೇವರು ಊರಾಡುವಾಗ ಹರಕೆಯನ್ನು ಕಟ್ಟಿಕೊಂಡಿದ್ದವರು ಸೀರೆ, ಚಿನ್ನದ ಆಭರಣಗಳನ್ನು ಐಕನಹಳ್ಳಿಯಮ್ಮನಿಗೆ ಕೊಟ್ಟರೆ, ಚಿಕ್ಕಯ್ಯನಿಗೆ ಮೇಕೆ ಬಲಿಕೊಡುತ್ತಾರೆ. ದೊಡ್ಡಯ್ಯನಿಗೆ ಬಾಳೆಹಣ್ಣು ತುಪ್ಪ ಸಕ್ಕರೆ ಪ್ರಸಾದ (ಮಣವು)ವನ್ನು ಸಿದ್ಧಪಡಿಸಿ ಕೊಡುತ್ತಾರೆ. ಕೊನೆಯಲ್ಲಿ ಕನ್ನಂಬಾಡಮ್ಮನ ದೇವಾಲಯದ ಬಳಿ ಮೇಕೆ ಬಲಿ ಕೊಟ್ಟು ಹರಿಜನರ ಕಾಲೋನಿಯಲ್ಲಿ ಪೂಜೆಮಾಡಿಸಿಕೊಂಡು ತರುವಾಯ ಪಕ್ಕದ ಭದ್ರನಕೊಪ್ಪಲು ಗ್ರಾಮದಲ್ಲಿ ಊರಾಡುತ್ತಾರೆ. ಶುಕ್ರವಾರ ತುಳಸಿಯಲ್ಲಿ ಊರಾಡುವಾಗ ಮನೆ ಮನೆಗಳಲ್ಲು ಪೂಜೆ ಮಾಡಿಸುತ್ತಾರೆ. ಬಲಿಕೊಟ್ಟ ಮರಿಯಿಂದ ತಯಾರಿಸಿದ ಆಹಾರವನ್ನು ಸಿಡಿಕೊಂಡಿ ಹಾಗೂ ಬಾಯಿಬೀಗಕ್ಕೆ ಎಡೆ ಮಾಡುತ್ತಾರೆ. ಇಷ್ಟು ಕಾರ್ಯಗಳು ನಡೆಯುವವರೆಗೂ ಗುಡ್ಡರು ಹಾಡುತ್ತ ದೇವರನ್ನು ಮೆರೆಸುತ್ತಾರೆ. ಮೆರೆಯುವ ದೇವರು ಹಾಗೂ ಚಿಕ್ಕಯ್ಯ, ದೊಡ್ಡಯ್ಯ ವೀರಭದ್ರಸ್ವಾಮಿ ಗುಡಿ (ಮೂಲಸ್ಥಾನ), ಸೇರಿಕೊಳ್ಳುತ್ತಾರೆ.

ತುಳಸಿ ಗ್ರಾಮದ ವೀರಭದ್ರ ಸ್ವಾಮಿ ಗುಡಿಯ ಬಳಿ ಮರಿಬಲಿ ಕೊಡುತ್ತಾರೆ. ವೀರಮಕ್ಕಳು ಬಾಡೂಟ ಮಾಡಿ ಸಿಡಿಕೊಂಡಿ, ಬಾಯಿಬೀಗಕ್ಕೆ ಎಡೆ ಮಾಡಬೇಕು. ನೆಂಟರಿಷ್ಟರೆಲ್ಲ ಒಟ್ಟಿಗೆ ಊಟಕ್ಕೆ ಕೂರಿಸುತ್ತಾರೆ. ಎಲ್ಲರು ಒಟ್ಟಾಗಿ ಸೇರಿ ಹರಿಗೆಜ್ಜೆ, ಸರಗೆಜ್ಜೆ, ಸರಕೆ ಸಾವಿರ ಗೆಜ್ಜೆ, ಸರ್ಪದ ಮೇಲೆ ಸೈನ್ಯ ಮಾಡಿಕೊಂಡು ನಂದಿ ಮೇಲೆ ಮುಹೂರ್ತ ಮಾಡಿಕೊಂಡು ಬರುವ ನಂಜುಂಡೇಶ್ವರನಿಗೆ ಒಂದು ಸಲ ಉಘೇ ಎಂದು ಹೇಳುತ್ತಾರೆ. ಲಕ್ಕಮ್ಮನಿಗೆ ಉಘೇ ಅನ್ನಿ, ಐಕನಹಳ್ಳಿಯಮ್ಮನಿಗೆ ಉಘೇ ಅನ್ನಿ, ವೀರಭದ್ರಸ್ವಾಮಿಗೆ ಉಘೇ ಅನ್ನಿ, ಮಾರಮ್ಮನಿಗೆ ಒಂದು ಸಾರಿ ಮ್ಯಾ ಅನ್ನಿ ಎಂದು ಹೇಳಿ ನಂತರ ಊಟ ಮಾಡುತ್ತಾರೆ.

ಋ) ಗುಡ್ಡರು

ದೇವರನ್ನು ಹಾಡಿನ ಮೂಲಕ ವಾಲಿಸುವ, ಮೆರೆಸುವ ದೇವರ ಗುಡ್ಡಗಳು ಹಿರಿಕರಳೆ ಗ್ರಾಮದಿಂದ ಸಿಡಿ ದಿನ ಐಕನಹಳ್ಳಿಗೆ ಬರುತ್ತಾರೆ. ಐಕನಹಳ್ಳಿಯಮ್ಮನ ಗುಡಿಯ ಬಳಿ ಕೆಂಡಕೊಂಡ ಹಾಕಿ ಸಿದ್ಧ ಮಾಡಿಕೊಂಡಿರುತ್ತಾರೆ. ಸಹಸ್ರಾರು ಭಕ್ತರು ಸೇರಿರುತ್ತಾರೆ. ಗುಡ್ಡಗಳು ಐಕನಹಳ್ಳಿಯಮ್ಮನನ್ನು ಕರೆದಂತೆ ಹಾಡುತ್ತಾರೆ.

ನೀಲಿ ಎಲ್ಲೆ ನೀಲಿ ಎಲ್ಲೆ
ನೀಲಿ ಎಲ್ಲೆ ಮಾದೇವಿ ನೀಲಿ ಎಲ್ಲೆ
ಪುಟ್ಟ ಪಾದದೋಳೆ ನೀಲಿ ಎಲ್ಲೆ
ಗಂಗಯ್ಯ ದಡದಲ್ಲಿ ನೀಲಿ ಎಲ್ಲೆ
ಲಿಂಗದ ಗದ್ದಿಗೂಡಿ ನೀಲಿ ಎಲ್ಲೆ
ಅಮ್ಮ ಬಾರೆ ಅಮ್ಮ ಬಾರೆ
ಅಮ್ಮ ಬಾರೆ ದ್ಯಾವಮ್ಮ ಬಾರೆ
ಚಿಕ್ಕಯ್ಯ ದೊಡ್ಡಯ್ಯಗೆ ಅಮ್ಮ ಬಾರೆ
ಮುಂದು ಬಾಗಾರಯ್ಯಗೆ ಅಮ್ಮ ಬಾರೆ

ನಂತರ ಚಿಕ್ಕಯ್ಯ-ದೊಡ್ಡಯ್ಯಗೆ ಮೈದುಂಬುತ್ತದೆ ಎಂಬ ನಂಬಿಕೆ. ನಂತರ ೧ ಗಂಟೆ ದೇವರನ್ನು ಕುಣಿಸುತ್ತಾರೆ. ಮಾರನೆಯ ದಿನ ದೇವರು ಊರಾಡಿ, ಗುಡಿ ತಲುಪುವವರೆಗೂ ಇದೇ ರೀತಿ ಚಿಕ್ಕಯ್ಯ, ದೊಡ್ಡಯ್ಯನನ್ನು ಕುಣಿಸುತ್ತಾರೆ.

ಚಿಕ್ಕಯ್ಯ ಮತ್ತು ದೊಡ್ಡಯ್ಯ ತುಳಸಿ ಗ್ರಾಮದಲ್ಲಿ ನೆಲಸಿರುವುದಕ್ಕೆ ಗುಡ್ಡರು ಐತಿಹ್ಯವೊಂದನ್ನು ಹೇಳುತ್ತಾರೆ. ಭೂಮಿಯ ಒಡಲಿನಿಂದಲೇ ಮೂಡಿದ ಇವರು ಒಂದು ಮಗುವಿನ ಮೇಲೆ ಬಂದು ಅಡಿಕೆ ವನದಲ್ಲಿದ್ದೀವಿ ನಮ್ಮನ್ನು ಊರಿಗೆ ಕರೆದುಕೊಂಡು ಬನ್ನಿ ಎಂದು ಹೇಳಿದರಂತೆ. ಪೂಜೆ ಸಾಮಾನುಗಳನ್ನು ತೆಗೆದುಕೊಂಡು ಹೋಗಿ ಪೂಜಿಸಿ, ಗುಡ್ಡಗಳು ಹಾಡಿನ ಮೂಲಕ ವಾಲಾಡಿಸಿಕೊಂಡು ತುಳಸಿ ಗ್ರಾಮಕ್ಕೆ ಕರೆತಂದರಂತೆ.

ಊರಿಗೆ ಮೂಡಲಾಗಿ ಉತ್ತ ಮೂಡಲಾಗಿ
ಹುತ್ತದ ಮೇಲೆ ಹುಲಿ ಮಲಗಿ
ಹುತ್ತದ ಮೇಲೆ ಹುಲಿ ಮಲಗಿ
ಭೀಮರಾಜ ಪಟ್ಟಣದಲ್ಲಿ ಚಿಕ್ಕಯ್ಯ ದೊಡ್ಡಯ್ಯ
ಚೆಟ್ಟಿನೆಂದು ಲೊಟಿಗೆ ಮುರಿದಾರು

ಹೀಗೆ ಗುಡ್ಡಗಳಿಲ್ಲದೆ ದೀಪಾವಳಿ ಮುಗಿಯುವುದಿಲ್ಲ. ವೀರಮಕ್ಕಳು ಮತ್ತು ಗುಡ್ಡರ ನಡುವೆ ಹೆಣ್ಣನ್ನು ಕೊಡುವ ಮತ್ತು ತರುವ ಸಂಪ್ರದಾಯ ಹಿಂದಿನಿಂದಲೂ ಬೆಳೆದುಕೊಂಡು ಬಂದಿದೆ.

ಎ) ಮಾರನಾಯಕನಹಳ್ಳಿಯ ಭಕ್ತರು

ಹೊಳೇನರಸಿಪುರ ತಾಲ್ಲೂಕಿನ ಮಾರನಾಯಕನಹಳ್ಳಿಯಲ್ಲಿ, ಐಕನಹಳ್ಳಿಯಿಂದ ವಲಸೆ ಬಂದು ನೆಲಸಿದವರಿದ್ದಾರೆ. ಯುಗಾದಿ ಹಬ್ಬವಾದ ನಂತರ ಅಥವಾ ಅದಕ್ಕೂ ಮೊದಲು ಐದು ವರ್ಷಕ್ಕೊಮ್ಮೆ ಐಕನಹಳ್ಳಿ ಗ್ರಾಮಸ್ಥರ ಒಪ್ಪಿಗೆ ಪಡೆದು. ಮಾರನಾಯಕನಹಳ್ಳಿಗೆ ಬುಧವಾರ ಐಕನಹಳ್ಳಿಯಮ್ಮ ಮತ್ತು ದೊಡ್ಡಯ್ಯ, ಚಿಕ್ಕಯ್ಯನನ್ನು ತರುತ್ತಾರೆ. ಜೊತೆಯಲ್ಲಿ ಐಕನಹಳ್ಳಿಯವರು ಮನೆಗೊಂದು ಜನ ಹೋಗುತ್ತಾರೆ. ಆ ದಿನ ತುಳಸಿಯ ವೀರಭದ್ರಸ್ವಾಮಿಯ ಗುಡಿಯಲ್ಲಿ ಪೂಜೆ ಮಾಡಿಸಿ, ನಂತರ ಐಕನಹಳ್ಳಿಯಮ್ಮನ ಗುಡಿಯಲ್ಲಿ ಪೂಜೆ ಮಾಡಿಸಿ, ಅಡ್ಡೆ ದೇವರನ್ನು ಹೆಗಲ ಮೇಲೆಯೇ ಹೊತ್ತುಕೊಂಡು ಮಾರನಾಯಕನಹಳ್ಳಿಗೆ ಹೋಗುತ್ತಾರೆ. ಮಾರನಾಯಕನಹಳ್ಳಿಯ ಊರಾಚೆಯ ಹೊಳೆಯ ಬಳಿ ದೇವರನ್ನು ತೊಳೆದು ಶೃಂಗಾರ ಮಾಡಿ ಮೇಕೆಯೊಂದನ್ನು ಬಲಿಕೊಟ್ಟು ಹೊಸ ಮಡಿಕೆಯಲ್ಲಿ ಮಾಡಿದ ಮಾಂಸದೂಟವನ್ನು ಬಾಳೆ ಎಲೆಯ ಮೇಲೆಟ್ಟು ಪೂಜೆ ಮಾಡುತ್ತಾರೆ. ಚಿಕ್ಕಯ್ಯ ಅದನ್ನು ಕದ್ದು ತಿನ್ನುವ ಶಾಸ್ತ್ರ ನಡೆಯುತ್ತದೆ. ಇದಕ್ಕೆ ಪಾಶಣ ಎಂದು ಕರೆಯುತ್ತಾರೆ. ಬ್ರಾಹ್ಮಣರ ಕೈಯಲ್ಲಿ ಮಾಡಿಸಿದ ತಳಿಗೆಯನ್ನು ದೊಡ್ಡಯ್ಯನಿಗೆ ಕೊಡುತ್ತಾರೆ. ಆಗ ಚಿಕ್ಕಯ್ಯನು ಜೊತೆಗಿದ್ದು ತಿನ್ನುತ್ತಾನೆ. ಭಕ್ತರು ಪ್ರಸಾದ ಸ್ವೀಕರಿಸುತ್ತಾರೆ.

ಊರಿನ ಹೆಬ್ಬಾಗಿಲ ಬಳಿ ಮೇಕೆಯೊಂದನ್ನು ಬಲಿಕೊಡುತ್ತಾರೆ. ಬೆಳಿಗ್ಗೆ ಚಿಕ್ಕಯ್ಯ ದೊಡ್ಡಯ್ಯನನ್ನು ಧರಿಸುವ ವೀರಮಕ್ಕಳು ಹೊಳೆಯಲ್ಲಿ ಸ್ನಾನ ಮಾಡಿ ಬರುತ್ತಾರೆ. ಸಿದ್ಧಪಡಿಸಿದ ಕೆಂಡ ಹಾಯ್ದು, ಚಿಕ್ಕಯ್ಯ ದೊಡ್ಡಯ್ಯರು ಊರಾಡುತ್ತಾರೆ. ಭಕ್ತರು ಹರಕೆ ತೀರಿಸಿಕೊಳ್ಳುತ್ತಾರೆ. ವಾಪಸ್ಸು ಬರುವಾಗ ಹೊಳೆಯ ಬಳಿ ಪ್ರತಿ ಐದು ವರ್ಷಕ್ಕೆ ದೇವರನ್ನು ತರುತ್ತೇವೆಂದು ತಪ್ಪು ಹರಕೆ ಕಟ್ಟಿಕೊಳ್ಳುತ್ತಾರೆ. ಶುಕ್ರವಾರ ತುಳಸಿಗೆ ಬಂದಾಗಲು ಕೆಂಡಕೊಂಡ ಹಾಕಿ, ಕುಣಿಸಿ ಮೇಕೆ ಬಲಿ ಕೊಟ್ಟು ಮೂಲ ಸ್ಥಾನಕ್ಕೆ ದೇವರನ್ನಿಡುತ್ತಾರೆ.

ಏ) ಬಲಿಪೂಜೆ (ಪರ)

ಸಾಮಾನ್ಯವಾಗಿ ಪ್ರತಿ ಐದು ವರ್ಷಕ್ಕೊಮ್ಮೆ ಈ ಆಚರಣೆ ನಡೆಯುತ್ತದೆ. ತುಳಸಿ ಕೆರೆಯ ಬಳಿ ಇರುವ ಮಂಟಪದ ಹತ್ತಿರ, ಗ್ರಾಮದಲ್ಲಿರುವ ಐದು ಗ್ರಾಮ ದೇವತೆಗಳ ಸಂಕೇತವಾಗಿ ಐದು

ಮೇಕೆಯನ್ನು ಬಲಿಕೊಡುತ್ತಾರೆ. ದೊಡ್ಡಯ್ಯನಿಗೆ ಗೊತ್ತಾಗದ ಹಾಗೆ ವಾದ್ಯದ ಸದ್ದು ಮಾಡದೆ ಚಿಕ್ಕಯ್ಯನನ್ನು ಕರೆದುಕೊಂಡು ಹೋಗಿ ಹೊಸ ಮಡಿಕೆಯಲ್ಲಿ ತಯಾರಿಸಿದ ಪ್ರಸಾದವನ್ನು (ಪಾಶಣ) ಬಾಳೆ ಎಲೆಯ ಮೇಲೆ ಬಡಿಸುತ್ತಾರೆ. ಆಗ ತೆರೆಯ ಮರೆಯಲ್ಲಿ ಯಾರಿಗೂ ಗೊತ್ತಾಗದ ಹಾಗೆ ಚಿಕ್ಕಯ್ಯ ತಿನ್ನುತ್ತಾನೆ. ನಂತರ ವಾದ್ಯದ ಶಬ್ದದೊಂದಿಗೆ ದೊಡ್ಡಯ್ಯ ಮತ್ತು ಚಿಕ್ಕಯ್ಯರಿಬ್ಬರನ್ನು ಕರೆದುಕೊಂಡು ಹೋಗಿ ಮೊಸರನ್ನ ತಳಿಗೆ ಕೊಡುತ್ತಾರೆ. ಚಿಕ್ಕಯ್ಯ ಸಾಲಲಿಲ್ಲವೆಂದು ಅದನ್ನು ತಿನ್ನುತ್ತಾನೆ. ತರುವಾಯ ಭಕ್ತರೆಲ್ಲರು ಮಾಂಸಾನ್ನ ಪ್ರಸಾದ ಸ್ವೀಕರಿಸುತ್ತಾರೆ.

ರಾತ್ರಿ ಚಿಕ್ಕಯ್ಯನನ್ನು ಕರೆದುಕೊಂಡು ಹೋಗಿ ಐಕನಹಳ್ಳಿ ಗ್ರಾಮದ ನಾಲ್ಕು ಮೂಲೆಗಳಿಗು ಒಂದೊಂದು ಮೇಕೆ ಬಲಿ ಕೊಡುತ್ತಾರೆ. ನಿಂಬೆಹಣ್ಣು, ಮಣ್ಣಿನ ಕುಡಿಕೆ, ಹರಿಶಿನ, ಕುಂಕುಮ, ಮಂತ್ರಾಕ್ಷತೆ ಹಾಗೂ ಮೇಕೆಯ ತಲೆ ಕಾಲನ್ನು ಎಲ್ಲ ದಿಕ್ಕಿಗೂ ಗುಂಡಿಯೊಳಕ್ಕೆ ಹಾಕಿ ಮುಚ್ಚುತ್ತಾರೆ. ಊರಿಗೆ ಬಿಕ್ಕಟ್ಟಾಗಲಿ ಯಾವುದೇ ತೊಂದರೆ ಬರದಿರಲಿ ಎಂಬ ಕಾರಣಕ್ಕಾಗಿ ಹೀಗೆ ಮಾಡುತ್ತಾರೆ. ಬೆಳಿಗ್ಗೆ ಊರಲ್ಲೆಲ್ಲ ಪೂಜೆ ಮಾಡಿಸಿಕೊಂಡು ತುಳಸಿ ಗ್ರಾಮದ ಮೂಲ ಸ್ಥಾನಕ್ಕೆ ದೇವರನ್ನಿಡುತ್ತಾರೆ.

ಐ) ಪೂಜೆ ಕಟ್ಟಿಸುವುದು

ಐಕನಹಳ್ಳಿಯಮ್ಮ ಹಾಗೂ ವೀರಭದ್ರಸ್ವಾಮಿಯ ಒಕ್ಕಲಿನವರು ಹಿರಿಯ ಗಂಡು ಮಕ್ಕಳ ಮದುವೆಯಲ್ಲಿ ಪೂಜೆ ಮಾಡಿಸುತ್ತಾರೆ. ಇದನ್ನು ಪೂಜೆ ಕಟ್ಟಿಸುವುದು ಎಂದು ಕರೆಯುತ್ತಾರೆ. ಮದುವೆಯಾದ ನಂತರ ಬರುವ ಶುಕ್ರವಾರ ವಧು-ವರರು ತಮ್ಮ ಕುಟುಂಬದವರೊಂದಿಗೆ ತುಳಸಿ ದೇವಸ್ಥಾನಕ್ಕೆ ಬರುತ್ತಾರೆ. ೩ ಬಾಳೆಕಂದು, ೫ ಕಟ್ಟು ಎಲೆ, ೫ ಸೇರು ಅಕ್ಕಿ, ೧ ಲೋಟ ಎಣ್ಣೆ, ೩ ಎಳನೀರು, ೫ ಮಾರು ಹೂವು, ೧ ಹಾರು, ೧ ಚಿಪ್ಪು ಹಣ್ಣು, ೧ ತೆಂಗಿನಕಾಯಿ, ೧ ಪೊಟ್ಟಣ ಕರ್ಪೂರ, ೧ ಪೊಟ್ಟಣ ಗಂಧದಕಡ್ಡಿ ತಂದು ಪೂಜೆ ಮಾಡಿಸುತ್ತಾರೆ. ನಂತರ ಮೇಕೆಯೊಂದನ್ನು ಬಲಿಕೊಡುತ್ತಾರೆ. ಐಕನಹಳ್ಳಿಗೆ ದೇವರನ್ನು ಕರೆದುಕೊಂಡು ಹೋಗಿ ನಂತರ ಐಕನಹಳ್ಳಿಯಮ್ಮನ ಗುಡಿಗೆ ಹೋಗಿ ಪೂಜೆ ಮಾಡಿಸಿ ಅಲ್ಲೊಂದು ಮೇಕೆ ಬಲಿಕೊಡುತ್ತಾರೆ. ತರುವಾಯ ಬೋರಪ್ಪನಿಗೆ, ಲಕ್ಕಮ್ಮನಿಗೆ, ಕನ್ನಂಬಾಡಮ್ಮನಿಗೆ ತಲಾ ಒಂದೊಂದು ಮೇಕೆ ಬಲಿಕೊಟ್ಟು ಬೀಗರ ಔತಣಕ್ಕೆ ಸಿದ್ಧರಾಗುತ್ತಾರೆ. ಹೀಗಾಗಿ ಶನಿವಾರವೇ ಬೀಗರ ಔತಣಗಳು ನಡೆಯುತ್ತವೆ. ಈ ಸಂಪ್ರದಾಯವನ್ನು ಚಾಚೂತಪ್ಪದೇ ಪಾಲಿಸಿಕೊಂಡು ಬರುತ್ತಿದ್ದಾರೆ.

೨. ಸಂಕ್ರಾಂತಿ

ಸಂಕ್ರಾಂತಿ ನಾಡಿಗೆ ಸುಗ್ಗಿಯನ್ನು ನೀಡುವ ಸಂಭ್ರಮದ ಹಬ್ಬ. ವರ್ಷಪೂರ್ತಿ ಮೈಮುರಿದು ದುಡಿದ ರೈತನ ಮೊಗದಲ್ಲಿ ಮಂದಹಾಸ ಮೂಡಿಸುವ ಹಬ್ಬ. ರೈತರು ತಾವು ಬೆಳೆದ ಫಸಲುಗಳನ್ನು ಕಟಾವು ಮಾಡಿ ಹೊಲದ ಬದುಗಳ ಮೇಲೆ ಅಥವಾ ಕಣಗಳಲ್ಲಿ ರಾಗಿ ಮೆದೆ, ಉಚ್ಚುಳ್ಳು ಗುಡ್ಡೆ, ಉರುಳಿ ಗುಡ್ಡೆ, ಭತ್ತದ ಮೆದೆಗಳನ್ನು ಹೊಟ್ಟಿರುತ್ತಾರೆ. ಕೆಲವರು ಕಣಗಳಲ್ಲಿ ದವಸ ಧಾನ್ಯಗಳನ್ನು

ಸ್ವಚ್ಛ ಮಾಡಿಕೊಂಡು, ರಾಶಿ ಪೂಜೆ ಮಾಡಿ ಕಣಜಗಳಲ್ಲಿ ಸಂಗ್ರಹಿಸಿರುತ್ತಾರೆ. ಹಿತ್ತಲುಗಳಲ್ಲಿ ಪ್ರಾಣಿಗಳಿಗಾಗಿ ಹುಲ್ಲಿನ ಮೆದೆ ಹಾಕಿರುತ್ತಾರೆ. ಅವರೆ ಕಾಳಿನ ಸೊಗಡು ಆಕರ್ಷಿಸುತ್ತದೆ. ಅವರೆಕಾಯಿ ಬೇಯಿಸಿ ಜಮೀನಿನ ಬಳಿ ಹುಲ್ಲಿನ ಮೆದೆಗಳ ಬಳಿಗೆ ಹೋಗಿ ಪೂಜೆ ಮಾಡಿ ಅವರೆಕಾಯನ್ನು ಮೆದೆಗಳ ಮೇಲೆ ಎರಚುತ್ತಾರೆ. ಹೊಸ ವರ್ಷದ ಸಂಭ್ರಮಕ್ಕೆ ಮತ್ತಷ್ಟು ಮೆರಗು ನೀಡುವುದು ಜನವರಿ ಮಧ್ಯಭಾಗದಲ್ಲಿ (೧೪ ಅಥವಾ ೧೫ರಂದು) ಬರುವ ಸಂಕ್ರಾಂತಿ ಹಬ್ಬ. ಜಗತ್ತಿಗೆ ಬೆಳಕನ್ನು ನೀಡುವ ಸೂರ್ಯನು ಪ್ರತಿದಿನ ಪೂರ್ವದಲ್ಲಿ ಹುಟ್ಟುತ್ತಾನಾದರೂ, ಅವನ ಉದಯದ ಬಿಂದುಗಳು ವರ್ಷದ ಅರ್ಧಕಾಲ ಪೂರ್ವದಿಂದ ಉತ್ತರ ಬದಿಗೂ, ಇನ್ನರ್ಧ ವರ್ಷ ದಕ್ಷಿಣ ಬದಿಗೂ ಇರುತ್ತವೆ. ಹೀಗೆ ಸೂರ್ಯನು ದಕ್ಷಿಣದಿಂದ ಉತ್ತರಕ್ಕೆ ಚಲಿಸುವ ಅವಧಿಗೆ 'ಉತ್ತರಾಯಣ' ಎಂದೂ, ಉತ್ತರದಿಂದ ದಕ್ಷಿಣಕ್ಕೆ ಚಲಿಸುವ ಅವಧಿಗೆ 'ದಕ್ಷಿಣಾಯನ' ಎಂದು ಹೆಸರು. ಸೂರ್ಯನು ದಕ್ಷಿಣದಿಂದ ಉತ್ತರಕ್ಕೆ ಚಲಿಸುವ ಕಾಲಕ್ಕೆ ವಿಶೇಷ ಮಹತ್ವವಿದೆ. ಸೂರ್ಯದೇವನು ರಾಶಿ ಗತಿಯನ್ನು ಬದಲಾಯಿಸಿ ಮಂದಗಮನನಾಗಿ ಸಂಚರಿಸುತ್ತಾನೆ. ಇದರಿಂದ ಹಗಲು ಹೆಚ್ಚಾಗಿ ಕತ್ತಲಿನ ಸಮಯ ಕಡಿಮೆಯಿರುತ್ತದೆ.

ಸಂಕ್ರಾಂತಿಯಂದು ರೈತರು ವರ್ಷವಿಡೀ ತಮ್ಮ ವ್ಯವಸಾಯ ಕ್ಷೇತ್ರದಲ್ಲಿ ದುಡಿದು ಧಾನ್ಯ ಸಮೃದ್ಧಿಗೆ ಕಾರಣವಾಗುವ ದನ-ಕರುಗಳನ್ನು ಮೈತೊಳೆದು ಅಲಂಕರಿಸುತ್ತಾರೆ. ಮನೆಯಲ್ಲಿರುವ ಎಮ್ಮೆ, ಕುರಿ, ಮೇಕೆ, ಮೊದಲಾದ ಪ್ರಾಣಿಗಳನ್ನು ಮೈ ತೊಳೆಯುತ್ತಾರೆ. ಎತ್ತುಗಳ ಕೊಂಬುಗಳನ್ನು ಎರೆದು ನುಣುಪಾಗಿಸಿ ಹರಳೆಣ್ಣೆ ಹಚ್ಚುತ್ತಾರೆ. ಚೂಪಾದ ಕೊಂಬಿನ ತುದಿಗೆ ನಿಂಬೆ ಹಣ್ಣುಗಳನ್ನು ಸಿಕ್ಕಿಸುತ್ತಾರೆ. ಬಣ್ಣ ಬಣ್ಣದ ಹೂವುಗಳು, ರಂಗುರಂಗಾದ ಟೇಪುಗಳನ್ನು ಸುತ್ತುತ್ತಾರೆ. ಮೈಗೆ ಅರಿಶಿನ ಹಚ್ಚುತ್ತಾರೆ. ಹಣೆ, ಬೆನ್ನು, ಬಾಲ, ಕಾಲಿಗೆಲ್ಲ ಕುಂಕುಮ ಹಚ್ಚಿ, ಕೊರಳಿಗೆ ಗೆಜ್ಜೆ ಕಟ್ಟಿ, ದನಕರುಗಳನ್ನು ಹೆಣ್ಣನ್ನು ಸಿಂಗರಿಸುವಂತೆ ಸಿಂಗರಿಸಿ, ಊರಾಚೆಯ ಬಯಲಲ್ಲಿ ನಿಲ್ಲಿಸಿಕೊಂಡಿರುತ್ತಾರೆ. ಎಲ್ಲರೂ ಒಂದೆಡೆ ಸೇರಿದ ಮೇಲೆ ಅರ್ಚಕರು ಪೂಜೆ ಮಾಡಿ ದೇವರ ತೀರ್ಥವನ್ನು ಎರಚುತ್ತಾರೆ. ನಂತರ ಹುಲ್ಲನ್ನು ಸಾಲಾಗಿ ಹರಡಿ ಬೆಂಕಿ ಹಚ್ಚುತ್ತಾರೆ. ಅದು ಹದವಾಗಿ ಉರಿಯುವಾಗ ತಮ್ಮ ದನಗಳನ್ನು ಉತ್ಸಾಹದಿಂದ ಓಡಿಸಿಕೊಂಡು ಬಂದು ಬೆಂಕಿಯ ಮೇಲೆ ನುಗ್ಗಿಸುತ್ತಾರೆ. ದನಗಳನ್ನು ಕಾಡುವ ಕೀಟಗಳಿಂದಲೂ, ಸಾಂಕ್ರಾಮಿಕ ರೋಗಗಳಿಂದಲೂ ರಕ್ಷಿಸಲು ಪುರಾತನ ಗೋಪಾಲಕರು ರೂಪಿಸಿಕೊಂಡಿದ್ದ ಕ್ರಮಗಳು. ಇಂಥ ಸಂಪ್ರದಾಯಗಳಿಂದ ಉಳಿದುಕೊಂಡು ಬಂದಿವೆ.

ನಮ್ಮ ಹಿರಿಯರು ಹಬ್ಬಗಳ ಆಚರಣೆಯನ್ನು ಅಗಾಧ ತಿಳುವಳಿಕೆಯಿಂದ ಮಾಡಿದ್ದಾರೆ. ಆಯಾಯ ಕಾಲದಲ್ಲಿ ಬೆಳೆಯುವ ಧವಸ ಧಾನ್ಯಗಳು ಮತ್ತು ಮನುಷ್ಯನ ಆರೋಗ್ಯಕ್ಕೆ ಅನುಕೂಲವಾಗುವಂತಹ ಅಡುಗೆಗಳನ್ನೂ ಒಂದೊಂದು ಹಬ್ಬಕ್ಕೂ ನಿಗದಿ ಮಾಡಿದ್ದಾರೆ. ಅಂತೆಯೇ ಈ ಸಂಕ್ರಾಂತಿ ಹಬ್ಬದ ಮಾಸದಲ್ಲಿ ಚಳಿ ಹೆಚ್ಚು, ಚಳಿಗಾಲದಲ್ಲಿ ಮನುಷ್ಯನ ಶರೀರಕ್ಕೆ ಹೆಚ್ಚಿನ ಜಿಡ್ಡಿನ ಅವಶ್ಯಕತೆ ಇದೆ.

ಸಂಕ್ರಾಂತಿ ದಿನ ಎಳ್ಳು ಬೆಲ್ಲಕ್ಕೆ ಹೆಚ್ಚು ಪ್ರಧಾನ್ಯ. 'ಎಳ್ಳು ಬೆಲ್ಲ ತಿಂದು ಒಳ್ಳೆಯ ಮಾತನಾಡು' ಎಂಬ ನಾಣ್ನುಡಿಯೂ ಇದೆ. ಅದರಂತೆ ಸಣ್ಣಗೆ ಹಚ್ಚಿದ ಬೆಲ್ಲ ಮತ್ತು ಕೊಬ್ಬರಿ ಜೊತೆಗೆ ಹುರಿದ ಶೇಂಗಾ ಮತ್ತು ಎಳ್ಳು, ಹುರಿಗಡಲೆಯನ್ನು ಬೆರಸಿ ಎಳ್ಳು ತಯಾರು ಮಾಡುತ್ತಾರೆ. ಇದರ ಜೊತೆಗೆ ಸಕ್ಕರೆ ಅಚ್ಚು, ಬಾಳೆಹಣ್ಣು, ತೆಂಗಿನಕಾಯಿ, ಕಬ್ಬನ್ನು ಹೆಣ್ಣು ಮಕ್ಕಳು ಮನೆಮನೆಗೆ ಹಂಚಿ ಶುಭಾಶಯ ಕೋರುತ್ತಾರೆ. ಐಕನಹಳ್ಳಿಯ ಗ್ರಾಮಸ್ಥರು ರಂಗಸ್ಥಳದ ಲಕ್ಷ್ಮಿದೇವಿಯ ಪಕ್ಕದಲ್ಲಿರುವ ಹೆತ್ತಪ್ಪನಿಗೆ ಮಾಂಸದ ಅಡಿಗೆಯ ನೈವೇದ್ಯದಿಂದ ಪೂಜೆ ಮಾಡುತ್ತಾರೆ. ಪ್ರಸಾದವನ್ನು ಹರಿಜನರು, ಅಗಸರು, ಕ್ಷೌರಿಕದ ಜನಾಂಗದವರಿಗೆ ಹಂಚುತ್ತಾರೆ. ಸಂಕ್ರಾಂತಿ ಹಬ್ಬ ಈ ಕಾರಣಕ್ಕಾಗಿಯು ಗ್ರಾಮದಲ್ಲಿ ತನ್ನ ವೈಶಿಷ್ಟ್ಯತೆಯನ್ನು ಉಳಿಸಿಕೊಂಡಿದೆ.

೩. ಯುಗಾದಿ

ಯುಗಾದಿಯೆಂದರೆ ಇಡೀ ಪ್ರಕೃತಿ ನವ ವಧುವಿನಂತೆ ಕಂಗೊಳಿಸುವ ಸಮಯ. ಮಾನವನು ಶರೀರ ಮತ್ತು ಮನಸ್ಸುಗಳನ್ನು ತೊಳೆದುಕೊಂಡು ಬದುಕಿನ ಹೊಸ ಅರ್ಥಕ್ಕೆ ಸಂಕಲ್ಪಗೈಯುವ ಶುಭ ಘಳಿಗೆ. ಯುಗಾದಿ ವರ್ಷದ ಆರಂಭದ ದಿನ. ಬಹಳ ಹಿಂದಿನಿಂದಲೂ ಯುಗಾದಿ ಹಬ್ಬವನ್ನೂ ಕ್ರಮಬದ್ಧವಾಗಿ ಆಚರಿಸಿಕೊಂಡು ಬರುತ್ತಿದ್ದಾರೆ. ಮುಂಜಾನೆಯೇ ಎದ್ದು ಮನೆಯನ್ನು ಸಾರಿಸಿ, ರಂಗೋಲಿ ಇಡುವ ಮೂಲಕ ಹೆಂಗಸರು ಸಂಭ್ರಮಿಸಿದರೆ, ಗಂಡಸರು ತೋಟದಿಂದ ತಂದ ಮಾವಿನ ಸೊಪ್ಪಿನಿಂದ ಬಾಗಿಲಿಗೆ ತೋರಣ ಕಟ್ಟುತ್ತಾರೆ. ಬೇವಿನ ಗೊಂಚಲನ್ನೂ ನೇತು ಬಿಡುತ್ತಾರೆ. ಮನೆಯವರೆಲ್ಲ ಮೈಗೆ ಎಣ್ಣೆ ಹಚ್ಚಿಕೊಂಡು ಮೈಯನ್ನೂ ಒಣಗಿಸಿಕೊಂಡು ಸ್ನಾನ ಮಾಡಿ ಹೊಸ ಬಟ್ಟೆ ಧರಿಸುತ್ತಾರೆ. ಬೇವು–ಬೆಲ್ಲವನ್ನೂ ಸವಿಯುತ್ತಾರೆ. ಜೀವನದಲ್ಲಿ ಕಷ್ಟ ಸುಖಗಳು ಸಮಪಾಲು ಇರಲೆಂಬುದರ ಸೂಚಕವಾಗಿ ಅತ್ಯಂತ ಕಹಿ ಗುಣವನ್ನು ಹೊಂದಿರುವ ಬೇವಿನ ಜೊತೆ ಬೆಲ್ಲವನ್ನು ಸವಿಯುವುದು ವಾಡಿಕೆ. ಇದರಿಂದ ದೇಹವು ಶುದ್ಧಿಯಾಗುವುದು. ಪಾಯಸ, ಹೊಬ್ಬಟ್ಟು ಸವಿಯುವುದು ಇದ್ದೇ ಇದೆ.

ರೈತರು ಯುಗಾದಿಯಂದು ಹೊನ್ನಾರಿನ ಆಚರಣೆಯನ್ನು ಚಾಚುತಪ್ಪದೇ ಪಾಲಿಸುತ್ತಾರೆ. ಹಬ್ಬದೂಟವಾದ ಮೇಲೆ ಸಂಜೆ ಎತ್ತುಗಳನ್ನು ಗ್ರಾಮದ ದೇವಸ್ಥಾನದ ಅಂಗಳಕ್ಕೆ ಕರೆದೊಯ್ಯುತ್ತಾರೆ. ಗ್ರಾಮದ ರೈತರು ತಮ್ಮ ಎತ್ತುಗಳಿಗೆ ಸಾಮೂಹಿಕವಾಗಿ ಪೂಜೆ ಸಲ್ಲಿಸುತ್ತಾರೆ. ಊರ ದೇವರ ಜಮೀನಿನಲ್ಲಿ ಯುಗಾದಿ ದಿನ ಯಾವ ರೈತ ಮೊದಲು ಉಳುಮೆ ಆರಂಭಿಸಬೇಕು ಎಂಬುದನ್ನು ಗ್ರಾಮ ಸಮಿತಿಯವರು ಹಬ್ಬದ ಮುನ್ನಾದಿನ ಹೊಸ ಪಂಚಾಂಗವನ್ನೂ ನೋಡಿಸಿ ನಿರ್ಧರಿಸಿರುತ್ತಾರೆ. ಈ ವ್ಯಕ್ತಿ ಹೊನ್ನಾರು ಹೂಡಿ ಉಳುಮೆ ಮಾಡುತ್ತಾನೆ. ಉಳಿದ ರೈತರು ಹೊನ್ನಾರನ್ನು ಹಿಂಬಾಲಿಸಿಕೊಂಡು ಒಟ್ಟಿಗೆ ಸೇರಿ ಜಮೀನನ್ನು ಸಾಮೂಹಿಕವಾಗಿ ಉಳುಮೆ ಮಾಡುತ್ತಾರೆ. ಹೊಸ ವರ್ಷದ ಬೇಸಾಯದ ಮೊದಲ ದಿನವಿದು. ಇಡೀ ವರ್ಷ ಬೇಸಾಯ ಸುಗಮವಾಗಿ ನಡೆಯಲೆಂಬ ಆಶಯದೊಂದಿಗೆ ಈ ಆಚರಣೆ ಬೆಳೆದುಕೊಂಡು ಬಂದಿದೆ.

ಗ್ರಾಮದಲ್ಲಿ ಯುಗಾದಿ ಹಬ್ಬದ ದಿನ ರಾತ್ರಿ ರಂಗದ ಕುಣಿತ (ರಂಗದ ಹಬ್ಬ) ವಿರುತ್ತದೆ. ಬಸವೇಶ್ವರನನ್ನೂ ಅಲಂಕಾರಗೊಂಡ ತೇರಿನ ಮೇಲೆ ಕೂರಿಸುತ್ತಾರೆ. ಇಡೀ ರಾತ್ರಿ ರಂಗದ ಕುಣಿತದೊಂದಿಗೆ ಸಂಭ್ರಮಿಸುತ್ತಾರೆ. ಬಂಧು ಬಳಗದವರು ಭಾಗಿಯಾಗುತ್ತಾರೆ. ಸಾಮಾನ್ಯವಾಗಿ ಸುತ್ತಮುತ್ತಲ ಹಳ್ಳಿಗಳಲ್ಲಿ ಬೇರೊಂದು ದಿನ ಸುಗ್ಗಿಯ ಕುಣಿತವಿದ್ದರೆ, ಇಲ್ಲಿ ಮಾತ್ರ ಯುಗಾದಿ ಹಬ್ಬದಂದೇ ಆಚರಿಸಿಕೊಂಡು ಬಂದಿರುವುದು ವಿಶೇಷವಾಗಿದೆ.

ಹಬ್ಬದ ಸಂದರ್ಭದಲ್ಲಿ ಎರಡು ಮೂರು ದಿನ ಇಸ್ಪೀಟ್ ಆಟ, ಚೌಕಾಬಾರವನ್ನೂ ಹಣಕಟ್ಟಿಕೊಂಡು ಆಡಿ ತಮ್ಮ ಅದೃಷ್ಟವನ್ನು ಪರೀಕ್ಷಿಸುತ್ತಾರೆ. ಕೆಲವರು ಚೆಂಡಾಟ, ಚಿಣ್ಣಿದಾಂಡು, ನೆಡಸುವ ಮನೆ, ಅಳ್ಳಿಗುಳಿ ಮನೆ ಆಟಗಳ ಮೂಲಕ ಸಂತೋಷವಾಗಿ ಕಾಲಕಳೆಯುತ್ತಾರೆ. ಹಬ್ಬ ಮುಗಿದ ಮಾರನೆಯ ದಿನ ವರ್ಷದೊಡ್ಕು (ಮಾಂಸದೂಟ) ಮಾಡುತ್ತಾರೆ. ಆಡು-ಕುರಿ, ಕೋಳಿಗಳನ್ನು ಕೊಯ್ದು ಮಾಂಸಾಹಾರವನ್ನು ಮಾಡಿಕೊಂಡು ತಿನ್ನುತ್ತಾರೆ.

೪. ಗೌರಿ-ಗಣೇಶನ ಹಬ್ಬ

ಗೌರಿ ಹಬ್ಬವು ವಿಶೇಷವಾಗಿ ಹೆಣ್ಣು ಮಕ್ಕಳ ಹಬ್ಬ. ಹೆಣ್ಣು ಮಕ್ಕಳಿಗೆ ತವರಿನ ನೆನಪನ್ನು ತರುವ ಸಂದರ್ಭ. ಗೌರಿಪೂಜೆ ಮಾಡಿ ಇಷ್ಟಾರ್ಥ ಕೋರಿಕೊಳ್ಳುವ ಶುಭ ದಿನ. ಶಿವ ಪುರಾಣದ ಕಥೆಯಂತೆ ಶಿವನು ವಿಷವನ್ನೂ ಕುಡಿದಾಗ ಪಾರ್ವತಿಯ ಪ್ರಾರ್ಥನೆ ಮತ್ತು ಯಜ್ಞಯಾಗಾದಿಗಳೇ ಗೌರಿಹಬ್ಬದ ಆಚರಣೆಯ ಪ್ರತೀಕ. ಮಂದರ ಪರ್ವತವನ್ನು ಕಡೆಗೋಲನ್ನಾಗಿಸಿ ಸರ್ಪವನ್ನು ಹಗ್ಗ ಮಾಡಿಕೊಂಡು ದೇವತೆಗಳು ಒಂದು ಕಡೆ, ರಾಕ್ಷಸರು ಮತ್ತೊಂದು ಕಡೆ ಸಮುದ್ರ ಮಂಥನ ಮಾಡಿದಾಗ ಬಂದ ವಿಷವನ್ನು ದೇವತೆಗಳು ಮತ್ತು ಅಸುರರು ಕುಡಿಯಲು ನಿರ್ಧರಿಸಿದಾಗ ಶಿವನು ಆ ವಿಷವನ್ನು ಕುಡಿಯಲು ಯತ್ನಿಸುತ್ತಾನೆ. ಈ ಸುದ್ಧಿ ತಿಳಿದ ತಕ್ಷಣ ಮಿಂಚಿನಂತೆ ಕಾರ್ಯತತ್ಪರಳಾದ ಗೌರಿಯು ಹಲವಾರು ಪೂಜಾ ವಿಧಾನಗಳಲ್ಲಿ ತೊಡಗುತ್ತಾಳೆ. ಶಕ್ತಿಮಾತೆಯಾಗಿ ಶಿವನ ಕಂಠದಲ್ಲಿರುವ ವಿಷವನ್ನೂ ಹೋಗಿ ತಡೆಯುತ್ತಾಳೆ. ಅದು ಅಲ್ಲಿಂದ ಅಮೃತವಾಗಿ ಪರಿವರ್ತನೆಗೊಂಡು ಶಿವನ ಉದರ ಸೇರುತ್ತದೆ. ಹೀಗೆ ಗೌರಿಯು ತನ್ನ ಪತಿಯನ್ನು ಉಳಿಸಿಕೊಂಡಳೆಂದು ಪ್ರತೀತಿಯಿದೆ. ಪಾರ್ವತಿಯು ತನ್ನ ತವರು (ದಕ್ಷ ಬ್ರಹ್ಮನ) ಮನೆಗೆ ತೆರಳಿ ತನ್ನ ತವರು ಸುಖವಾಗಿರಲೆಂದು ಹರಸಿ ಬಂದಳೆಂಬ ಕಥೆಯಿದೆ. ಈ ಹಿನ್ನೆಲೆಯನ್ನು ಸಂಪ್ರದಾಯವಾಗಿರಿಸಿಕೊಂಡು ನಮ್ಮ ಸಂಸ್ಕೃತಿಯನ್ನು ಗಟ್ಟಿಗೊಳಿಸುವ ತವರು ಮತ್ತು ಗಂಡನ ಮನೆಗೆ ಮಧುರಬಾಂಧವ್ಯ ಬೆಸೆಯುವ ಪ್ರತೀಕವಾಗಿ ಗೌರಿ ಹಬ್ಬವನ್ನೂ ಆಚರಿಸಲಾಗುತ್ತಿದೆ. ಹೊಸದಾಗಿ ಮದುವೆಯಾದ ಮಗಳು-ಅಳಿಯನನ್ನು ಮನೆಗೆ ಹಬ್ಬಕ್ಕೆ ಕರೆದು ಆತಿಥ್ಯ ನೀಡುತ್ತಾರೆ.

ಸುಮಂಗಲಿಯರು ಮತ್ತು ಅವಿವಾಹಿತ ಹೆಂಗೆಳೆಯರು ಸ್ನಾನಾದಿ ಕರ್ಮಗಳಿಂದ ಶುಭ್ರವಾಗಿ, ಉಪವಾಸ ಮಾಡಿ, ಹೊಸ ಬಟ್ಟೆ ತೊಟ್ಟು ಗೌರಿಯಲ್ಲಿ ತಮ್ಮ ಇಷ್ಟಾರ್ಥ ಸೇವೆಗಳ

ಹರಕೆಯನ್ನಿಡುತ್ತಾರೆ. ಅವಿವಾಹಿತ ಹೆಂಗೆಳೆಯರು ಭವಿಷ್ಯದಲ್ಲಿ ಸೂಕ್ತ ವರನನ್ನು ಅನುಗ್ರಹಿಸುವಂತೆ ಕೋರುವುದು ಸಾಮಾನ್ಯ. ಇನ್ನು ಸುಮಂಗಲಿಯರು ತವರು ಮನೆಯ ಮತ್ತು ಗಂಡನ ಸುಖ ಬಯಸಿ ಮುತ್ತೈದೆಯರಿಗೆ ಬಾಗಿನ ಕೊಟ್ಟು ದೇವಿಯನ್ನು ಬೇಡುತ್ತಾರೆ.

ಬಾಗಿನದಲ್ಲಿ ಸೀರೆ, ಕುಪ್ಪಸ, ಅರಿಶಿನ, ಕುಂಕುಮ, ಹಸಿರು ಬಳೆ, ಕಾಲುಂಗುರ, ಅರಿಶಿನದಾರ, ಹೂ-ಹಣ್ಣು, ತೆಂಗಿನಕಾಯಿ, ಸಿಹಿ ತಿಂಡಿಗಳಿರುತ್ತವೆ. ಸಾಮಾನ್ಯವಾಗಿ ಬಿದಿರಿನ ಮೊರದಲ್ಲಿ ಬಾಗಿನದ ವಸ್ತುಗಳನ್ನೂ ನೀಡುತ್ತಾರೆ. ತವರು ಮನೆಗೆ ಹೆಣ್ಣು ಮಕ್ಕಳು ಬರುವುದು ರೂಢಿ. ಆಗದಿದ್ದರೆ ಅರಿಶಿನ ಕುಂಕುಮಕ್ಕೆ ಹಣ ನೀಡುತ್ತಾರೆ. ಅಣ್ಣ-ತಮ್ಮಂದಿರು ತಮ್ಮ ಸಹೋದರಿಯರಿಗೆ ಬಾಗಿನವನ್ನು ಕೊಟ್ಟು ಬರುತ್ತಾರೆ. ಗೌರಿ ಹಬ್ಬದ ದಿನ ಸಹೋದರರು ಬರುವುದನ್ನೇ ಕಾಯುತ್ತ ಕುಳಿತಿದ್ದ ಹೆಂಗೆಳೆಯರು ಸಂಭ್ರಮಿಸುತ್ತಾರೆ. ಗೌರಿ ಗಣೇಶನನ್ನು ಎಲ್ಲರೂ ಮನೆಗಳಲ್ಲಿಡುವುದಿಲ್ಲ. ಕೆಲವು ಮನೆಗಳಲ್ಲಿ ಮಾತ್ರ ಇಡುವುದರಿಂದ ಉಳಿದವರು ಇದ್ದವರ ಮನೆಗೆ ಹೋಗಿ ಪೂಜೆಯಲ್ಲಿ ಭಾಗವಹಿಸುತ್ತಾರೆ.

ಪ್ರತಿವರ್ಷ ಮಣ್ಣಿನ ಗಣೇಶನ ಮೂರ್ತಿಯನ್ನು ತಂದು ವಿಶೇಷವಾಗಿ ಅಲಂಕರಿಸಿದ ಒಂದು ಮಂಟಪದಲ್ಲಿ ಕೂರಿಸುವರು. ಬಣ್ಣ ಬಣ್ಣದ ತಳಿರು ತೋರಣಗಳಿಂದ ಹಾಗೂ ವಿದ್ಯುದ್ದೀಪಗಳಿಂದ ಮಂಟಪವನ್ನು ಅಲಂಕರಿಸಿ, ಗಣೇಶನ ಪೂಜೆ ಚೆನ್ನಾಗಿ ಆಗಬೇಕೆಂದು ಎಚ್ಚರ ವಹಿಸುತ್ತಾರೆ. ಮೋದಕಗಳನ್ನು ಮಾಡಿ ಅರ್ಪಿಸುತ್ತಾರೆ. ಅಕ್ಕಿ ಹಿಟ್ಟು, ಬೆಲ್ಲ, ಕಾಯಿತುರಿ, ಏಲಕ್ಕಿ, ದ್ರಾಕ್ಷಿ, ಗೋಡಂಬಿ ಮೊದಲಾದ ಪದಾರ್ಥಗಳಿಂದ ಕಡುಬು ತಯಾರಿಸಲಾಗುತ್ತದೆ. ಕೆಲವರು ಪುರೋಹಿತರನ್ನು ಕರೆಸಿ ಪೂಜೆ ಮಾಡಿಸುತ್ತಾರೆ. ಗಣಪತಿಯನ್ನೂ ಕೆಲವರ ಮನೆಯಲ್ಲಿ ಮೂವತ್ತಾರು ಗಂಟೆಗಳವರೆಗೆ ಮಾತ್ರ ಇಟ್ಟಿರುತ್ತಾರೆ. ಇನ್ನು ಕೆಲವರು ಐದರಿಂದ ಒಂಭತ್ತು ದಿನಗಳ ಕಾಲ ಪೂಜಿಸುತ್ತಾರೆ. ಪ್ರತಿ ದಿನವೂ ಬೆಳಿಗ್ಗೆ ಮತ್ತು ಸಂಜೆ ಪ್ರಾರ್ಥನೆ, ಆರತಿ ನಡೆಯುತ್ತದೆ, ಪ್ರಸಾದ ವಿನಿಯೋಗವಾಗುತ್ತದೆ. ಎಷ್ಟು ಸಡಗರದಿಂದ ಗಣೇಶನನ್ನು ಮನೆಗೆ ತರುತ್ತಾರೊ ಅಷ್ಟೇ ವೈಭವದಿಂದ ಗಣಪತಿ ವಿಸರ್ಜನೆ ನಡೆಯುತ್ತದೆ. ಗ್ರಾಮದಲ್ಲಿ ಸಾಮಾನ್ಯವಾಗಿ ಊರಿನ ಯುವಕರು ಹಿರಿಯರ ಸಲಹೆಯೊಂದಿಗೆ ರಂಗಸ್ಥಳದಲ್ಲಿ ಗೌರಿಗಣೇಶನನ್ನು ಕೂರಿಸಿರುತ್ತಾರೆ. ಸಾರ್ವಜನಿಕವಾಗಿ ಇರಿಸಿದ ಗಣೇಶನನ್ನು ಬಿಡುವ ದಿನ ವಿಶೇಷ ಪೂಜೆ ನಡೆಯುತ್ತದೆ. ಊರಿನ ಪ್ರಮುಖ ಬೀದಿಗಳಲ್ಲಿ ವಾದ್ಯ ಮೇಳಗಳ ನಡುವೆ ಮೆರವಣಿಗೆ ಮಾಡಿ, ಅನ್ನದಾನ ಏರ್ಪಡಿಸಿ ನಂತರ ಗಣೇಶನನ್ನು ಕೆರೆ, ಕಟ್ಟೆ, ಬಾವಿಗಳಲ್ಲಿ ವಿಸರ್ಜಿಸುತ್ತಾರೆ.

೫. ಪಿತೃಪಕ್ಷ (ಮಾಳದಬ್ಬ)

ಸತ್ತವರ ನೆನಪಿನಲ್ಲಿ ವರ್ಷಕ್ಕೊಮ್ಮೆ ಆಚರಿಸುವ ಪದ್ಧತಿಯನ್ನು ಮಹಾಲಯ ಅಮಾವಾಸ್ಯೆ, ಪಿತೃಪಕ್ಷ, ಮಾರ್ನ್ಲಮಿ ಹಬ್ಬ, ಮಾಳದ ಹಬ್ಬ ಎಂಬ ಬೇರೆ ಬೇರೆ ಹೆಸರುಗಳಿಂದ ಕರೆಯುವ ಪಿತೃಪಕ್ಷ

ಬಹುಮುಖ್ಯವಾದ ಹಬ್ಬ. ಭಾದ್ರಪದ ಮಾಸದ ಹುಣ್ಣಿಮೆಯಿಂದ ಅಮಾವಾಸ್ಯೆಯವರೆಗಿನ ದಿನಗಳು ಅಂದರೆ ಕೃಷ್ಣಪಕ್ಷ. ಈ ದಿನಗಳಲ್ಲಿ ಸ್ವರ್ಗ ಹಾಗೂ ನರಕಗಳ ಬಾಗಿಲು ತೆರೆದಿರುತ್ತದೆ ಎಂಬ ನಂಬಿಕೆಯಿದೆ. ಆದ್ದರಿಂದ ಈ ಸಮಯದಲ್ಲಿ ಸ್ವರ್ಗ-ನರಕಗಳಲ್ಲಿ ವಾಸಿಸುವ ನಮ್ಮ ಪೂರ್ವಜರು ಭೂಲೋಕಕ್ಕೆ ಬರುತ್ತಾರೆ. ಈ ಪಿತೃಗಳಿಗೆ ತರ್ಪಣಾದಿಗಳನ್ನೂ ಕೊಟ್ಟು ಸತ್ಕರಿಸಿ ಅವರ ಋಣವನ್ನು ಕಡಿಮೆ ಮಾಡಿಕೊಳ್ಳುವುದು ಕರ್ತವ್ಯ. ಪಿತೃ ಪಕ್ಷವು ಹುಣ್ಣಿಮೆಯ ನಂತರ ಆರಂಭವಾದರೂ ಬಹುತೇಕ ಮಂದಿ ಅಮವಾಸ್ಯೆಯಂದೇ ಆಚರಿಸುತ್ತಾರೆ. ಎಲ್ಲಾ ಸಮುದಾಯದವರೂ ಹಬ್ಬದ ಸಡಗರದಲ್ಲಿ ಮುಳುಗೇಳುತ್ತಾರೆ. ಒಂದು ವರ್ಗ ಶ್ರಾದ್ಧ, ತರ್ಪಣಗಳನ್ನು ಆಚರಿಸುತ್ತಾರೆ. ಇದನ್ನೆಲ್ಲಾ ಅರಿಯದ ಹೆಚ್ಚು ಜನರು ತಮ್ಮ ಹಿರಿಯರು ಧರಿಸುತ್ತಿದ್ದ ವಸ್ತುಗಳನ್ನು, ಉದಾಹರಣೆಗೆ : ಮದ್ಯಪಾನಿಗಳಾಗಿದ್ದರೆ ಮಧ್ಯಪಾನ, ಬೀಡಿ ಸೇದುತ್ತಿದ್ದರೆ ಬೀಡಿ, ಹೊಗೆಸೊಪ್ಪು, ಹೊಸಬಟ್ಟೆಗಳನ್ನೂ ಇಟ್ಟು ಅದರ ಮುಂದೆ ಬಾಳೆ ಎಲೆ ಹಾಸುತ್ತಾರೆ. ಅದರ ತುಂಬಾ ಬಗೆಬಗೆಯ ಆಹಾರಗಳನ್ನು ಮಾಡಿ ಎಡೆ ಇಟ್ಟು ಪೂಜೆ ಮಾಡುತ್ತಾರೆ. ಅಂದು ಮನೆಯ ಹಿರಿಯರು ಉಪವಾಸವಿದ್ದು ಹಬ್ಬದ ಆಚರಣೆಯಲ್ಲಿ ಪಾಲ್ಗೊಳ್ಳುತ್ತಾರೆ. ನಂತರ ಸ್ವಲ್ಪ ಸಮಯ ಮನೆಯವರೆಲ್ಲಾ ಹೊರಗೆ ಬಂದು ಬಾಗಿಲು ಮುಚ್ಚಿ ಆತ್ಮಗಳು ಬಂದು ಹೋದ ನಂತರ (ನಂಬಿಕೆ) ಬಾಗಿಲು ಬಡಿದು ತೆರೆದು ನಂತರ ಎಲ್ಲರೂ ಒಟ್ಟಾಗಿ ಕುಳಿತು ಊಟ ಮಾಡುತ್ತಾರೆ.

ಪಿತೃಪಕ್ಷವನ್ನು ಎಲ್ಲಾ ಗ್ರಾಮಗಳಲ್ಲಿ ಒಂದೇ ದಿನ ಆಚರಿಸುವುದಿಲ್ಲ. ಮಹಾಲಯ ಅಮಾವಾಸ್ಯೆಯಂದು ಕೆಲವರು ಮಾಡಿದರೆ, ಮತ್ತೆ ಕೆಲವರು ಅದರ ಒಂದು ವಾರ, ಹದಿನೈದು ದಿನ ಮೊದಲು ಅಥವಾ ನಂತರದಲ್ಲಿ ಒಂದೊಂದು ಕಡೆ ಒಂದೊಂದು ದಿನ ಹಬ್ಬ ನಡೆಯುತ್ತದೆ. ಹೀಗಾಗಿ ಬಂಧು ಮಿತ್ರರನ್ನು ಹಬ್ಬಕ್ಕೆ ಕರೆದು ಆತಿಥ್ಯ ನೀಡುತ್ತಾರೆ. ಮಾರನೆಯ ದಿನ ಮನೆ-ಮನೆಗಳಲ್ಲಿ ಆಡು-ಕುರಿ-ಕೋಳಿಗಳನ್ನೂ ಕೊಯ್ದು ಅದ್ಧೂರಿ ಮಾಂಸದೂಟ ತಯಾರಿಸುತ್ತಾರೆ. ಈ ಹಬ್ಬ ಕಳೆಗುಂದದೆ ನಡೆದುಕೊಂಡು ಬರುತ್ತಿದೆ.

೬. ಬಂಡಿಹಬ್ಬ

ಗೌರಿ ಹಬ್ಬಕ್ಕೆ ಮೊದಲು ಬರುವ ಶುಕ್ರವಾರ ಸಾಮಾನ್ಯವಾಗಿ ಬಂಡಿಹಬ್ಬದ ಆಚರಣೆ ನಡೆಯುತ್ತದೆ. ಐಕನಹಳ್ಳಿಯಮ್ಮನ ವಾರದ ದಿನ (ಪೂಜಾ ದಿನ) ಶುಕ್ರವಾರವಾಗಿರುವುದರಿಂದ ಈ ದಿನವೇ ಸಂಪ್ರದಾಯದಂತೆ ಈ ಹಬ್ಬ ಜರುಗುತ್ತದೆ. ರೈತರಿಗೆ ವರ್ಷವಿಡೀ ಸಹಕಾರಿಯಾಗುವ ಬಂಡಿಯನ್ನು (ಎತ್ತಿನಗಾಡಿ) ತೊಳೆದು ಮಾವಿನ ತಳಿರು ತೋರಣ, ಬಾಳೆಯ ಕಂದಿನಿಂದ ಅಲಂಕರಿಸುತ್ತಾರೆ. ಸುಣ್ಣ ಕೆಮ್ಮಣ್ಣುಗಳನ್ನು ಬಳಿಯುತ್ತಾರೆ. ಹೆಂಗಸರು ಮನೆಗಳನ್ನೂ ಸಾರಿಸಿ, ತಾವು ಸ್ನಾನ ಮಾಡಿಕೊಂಡು ಅನ್ನ, ಸಾರು, ಮುದ್ದೆ, ಮೊಸರನ್ನವನ್ನು ಸಿದ್ಧಪಡಿಸಿಕೊಂಡಿರುತ್ತಾರೆ. ಸುಮಾರು ಸಂಜೆ ೫ ಗಂಟೆಗೆ ಸಸ್ಯಹಾರ ತಳಿಗೆಯನ್ನು ಬಂಡಿಯ ಮುಂದೆ ನಿವೇದನೆಗೆ ಇಡುತ್ತಾರೆ. ಹಣ್ಣು ಕಾಯಿಗಳೊಂದಿಗೆ ಗಂಧದ ಕಡ್ಡಿ ಹಚ್ಚಿ ಪೂಜಿಸುತ್ತಾರೆ. ಗ್ರಾಮದಲ್ಲಿ ಬುಡಿಯಪ್ಪನಾರ

ಪಂಗಡ, ಹುಚ್ಚಮ್ಮನಾರ ಪಂಗಡ, ತೋಪಯ್ಯನ ಪಂಗಡ. ಕೆಂಗಪ್ಪನ ಪಂಗಡವೆಂಬ ನಾಲ್ಕು ಗುಂಪುಗಳಿವೆ. ವರ್ಷಕ್ಕೆ ಒಂದು ಗುಂಪಿನವರು ದೇವರ ಕಾರ್ಯದ ಉಸ್ತುವಾರಿ ವಹಿಸಿಕೊಳ್ಳುತ್ತಾರೆ. ಇವರ ಮುಂದಾಳತ್ವದಲ್ಲಿ ಬಂಡಿಗೆ ಮರಿ ಬಲಿ ಕೊಡುತ್ತಾರೆ. ಬಂಡಿಯ ಬಳಿ ಇರುವ ತಳಿಗೆಯನ್ನು ಮಡಿವಾಳರು, ಅಗಸರು, ಕ್ಷೌರಿಕರು, ಹರಿಜನರಿಗೆ ಹಂಚುತ್ತಾರೆ. ತಾವು ಬಳಸುವ ಬಂಡಿಯ ನೆಪದಲ್ಲಿ ಹಬ್ಬದೂಟವನ್ನುಂಡು ಸಂಭ್ರಮಿಸುತ್ತಾರೆ.

೭. ಹೆಡಿಗೆ ಪರ

ಹೆಡಿಗೆ ಪರವೆಂಬ ಹಬ್ಬದ ಆಚರಣೆ ಎಲ್ಲ ಸಮುದಾಯದವರನ್ನೂ ಒಂದೆಡೆ ಬೆಸೆಯುತ್ತದೆ. ದೇವತಾ ಕಾರ್ಯಗಳನ್ನು ನಡೆಸುವ ಜವಾಬ್ದಾರಿ ಹೊತ್ತ ಗುಂಪಿನವರು ಊರಿನ ಪ್ರತಿಯೊಂದು ಮನೆಯಿಂದ ತಡಣಿಕಾಳು (ಅಲಸಂದೆ), ಮೂಲಂಗಿ, ಅಕ್ಕಿ, ಎಳ್ಳು, ಉಚ್ಚಳ್ಳೆಣ್ಣೆಯನ್ನು ಸಂಗ್ರಹಿಸುತ್ತಾರೆ. ಊರಾಚೆಯಿರುವ ಬಸವೇಶ್ವರ ದೇವರ ಸನ್ನಿಧಿಯಲ್ಲಿ ಕೆರೆಯ ಅಂಗಳದ ಎದುರಿಗೆ ಗ್ರಾಮಸ್ಥರೆಲ್ಲ ಸೇರುತ್ತಾರೆ. ದೇವರಿಗೆ ಹಣ್ಣುಕಾಯಿ ತಂದು ಪೂಜೆ ಸಲ್ಲಿಸಿ ರಾತ್ರಿ ಊರಿನ ಜನವೆಲ್ಲ ಊಟ ಮಾಡುತ್ತಾರೆ. ಎಲ್ಲರು ಒಂದೆಡೆ ಸೇರಿ ಆಚರಿಸುವ ಪರವೇ 'ಹೆಡಿಗೆ ಪರ' ವೆಂದು ಕರೆಸಿಕೊಂಡಿದೆ. ಸಾಮಾನ್ಯವಾಗಿ ತಾವು ಬೆಳೆದ ಹೊಸ ದವಸ ಧಾನ್ಯಗಳನ್ನು ದೇವರಿಗೆ ಅರ್ಪಿಸಿ, ಪ್ರಸಾದ ಸ್ವೀಕರಿಸುವ ಈ ಪದ್ಧತಿ ನಿರಂತರವಾಗಿ ನಡೆದುಕೊಂಡು ಬಂದಿದೆ.

೮. ಕಾರ ಹಬ್ಬ

ಆಷಾಢ ಮಾಸದ ಮೊದಲ ಸೋಮವಾರ ಕಾರ ಹಬ್ಬ ಆಚರಿಸುತ್ತಾರೆ. ರೈತನ ಜೊತೆಯಲ್ಲಿ ದುಡಿಮೆಯಲ್ಲಿ ಸಹಕರಿಸುವ ಎತ್ತುಗಳನ್ನು ಪೂಜಿಸುವ ಹಬ್ಬ. ಸೋಮವಾರ ಎತ್ತುಗಳಿಗೆ ಬಿಡುವು. ವಾರಪೂರ್ತಿ ದುಡಿದು ವಿಶ್ರಾಂತಿ ಪಡೆಯುವ ಸಮಯ. ಬೆಳಿಗ್ಗೆ ದನಕರುಗಳನ್ನು ಕೆರೆ, ಕಟ್ಟೆಗಳ ಬಳಿ ಮೈ ತೊಳೆದುಕೊಂಡು ಚೆನ್ನಾಗಿ ಮೇಯಿಸಿಕೊಂಡು ಬರುತ್ತಾರೆ. ಸಂಜೆಯ ವೇಳೆಗೆ ಹಾರು ಮುಟ್ಟಿದ ಸಾಮಾನುಗಳಾದ ನೇಗಿಲು, ಕುಂಟೆ, ನೊಗ, ಹಲುಬೆ, ಗೆಣೆಮರಗಳನ್ನೂ ತೊಳೆದಿಡುತ್ತಾರೆ. ಹೊಲವನ್ನು ಉತ್ತಿರುವ ಸಾಮಾನುಗಳನ್ನೂ ಹಾರು ಮುಟ್ಟಿದ ಸಾಮಾನುಗಳೆನ್ನುತ್ತಾರೆ. ಈ ಎಲ್ಲಾ ಪದಾರ್ಥಗಳಿಗೆ ಹಾಗು ಮನೆಯ ಕಿಟಕಿ, ಬಾಗಿಲುಗಳು, ಕಂಬಗಳಿಗೆ ಸುಣ್ಣ (ಬಿಳಿ) ಮತ್ತು ಕೆಮ್ಮಣ್ಣು (ಕೆಂಪು) ಪಟ್ಟಿ ಬಳಿಯುತ್ತಾರೆ.

ನಡುಮನೆಯಲ್ಲಿ ಬಾಳೆದೆಲೆ ಹಾಕಿ ದೋಸೆ, ಕಡುಬು, ಹಳಸಿನ ಹಣ್ಣಿನ ತೊಳೆಗಳನ್ನಿಟ್ಟು, ಹೋರಿ ಪದವಿಡುತ್ತಾರೆ. ಅಂದರೆ ಎತ್ತನ್ನು ಮನೆಯ ಮುಂಬಾಗಿಲಿನಿಂದ ಜೋಪಾನವಾಗಿ ಮನೆಯೊಳಕ್ಕೆ ಎಳೆದು ತರುತ್ತಾರೆ. ಕಾಲಿಗೆ ಹಾಗು ಕೊರಳಿಗೆ ಕಕ್ಕೆಸೊಪ್ಪಿನ ಹಾರವನ್ನು ಕಟ್ಟುತ್ತಾರೆ. ಕಾಲು ತೊಳೆದು ಅರಿಶಿನ, ಕುಂಕುಮವನ್ನಿಟ್ಟು ಪೂಜೆ ಮಾಡುತ್ತಾರೆ. ಹಸುವಿಗೆ ಆಹಾರವನ್ನೂ ತಿನ್ನಿಸಿ ನಂತರ ಅದರ ಬಾಯಿಯಿಂದ ಆ ಪ್ರಸಾದವನ್ನು ತೆಗೆದುಕೊಂಡು ಮನೆಯವರೆಲ್ಲರು

ಸ್ವೀಕರಿಸುತ್ತಾರೆ. ಗೃಹಿಣಿ ತನ್ನ ಮಾಂಗಲ್ಯವನ್ನು ಅದರ ಪಾದಕ್ಕೆ ಮುಟ್ಟಿಸಿ ಆಶೀರ್ವಾದ ಪಡೆದುಕೊಳ್ಳುತ್ತಾಳೆ. ಹಸು ಮನೆಯೊಳಕ್ಕೆ ಬರುವಾಗ ಸಗಣಿ ಹಾಕಬೇಕು ಇಲ್ಲವೇ ಗಂಜಲವನ್ನಾದರು ಉಯ್ಯಬೇಕು. ಆಗ ಮಾತ್ರ ತಮ್ಮ ಪೂಜೆಗೆ ಪ್ರತಿಫಲ ಸಿಗುತ್ತದೆ ಎಂಬ ನಂಬಿಕೆ. ಹೀಗೆ ಕಾರ ಹಬ್ಬದ ನೆಪದಲ್ಲಿ ತಾವು ಸಾಕಿದ ಗೋವುಗಳನ್ನು ಪೂಜಿಸಿ ಪಾವನರಾಗುತ್ತಾರೆ. ತಮ್ಮ ಮನೆಯಲ್ಲಿ ಹಸುಗಳನ್ನು ಸಾಕಿಲ್ಲದ ರೈತರು ಅಕ್ಕ-ಪಕ್ಕದ ಮನೆಯವರ ಹಸುಗಳನ್ನು ಕರೆದುತಂದು ಪೂಜಿಸುತ್ತಾರೆ. ಈ ಕಾರಣಕ್ಕಾಗಿ ಕಾರಹಬ್ಬ ತನ್ನ ವೈಶಿಷ್ಟ್ಯತೆಯನ್ನು ಇನ್ನೂ ಉಳಿಸಿಕೊಂಡಿದೆ.

೯. ಮುನಿಯಪ್ಪ

ನಮ್ಮಲ್ಲಿ ಹಬ್ಬ ಹರಿದಿನಗಳು, ಜಾತ್ರೆ ಉತ್ಸವಗಳನ್ನು ಆಚರಿಸುವುದು ಯುಗಯುಗಗಳಿಂದ ನಡೆದುಕೊಂಡು ಬಂದಿರುವ ಪದ್ಧತಿ. ಈ ಎಲ್ಲ ಆಚರಣೆಗಳ ಹಿಂದೆ ನಾನಾ ಧಾರ್ಮಿಕ ಹಿನ್ನೆಲೆಗಳಿವೆ. ಆದುದರಿಂದಲೇ ನಾವು ಇಂತಹ ಆಚರಣೆಗಳನ್ನು ಅತ್ಯಂತ ಶ್ರದ್ಧಾಭಕ್ತಿಗಳಿಂದ ನಡೆಸಿಕೊಂಡು ಬರುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ನೋಡುವುದಾದರೆ ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಆಚರಿಸುವ ಹಬ್ಬಗಳಿಗೆ ಹೆಚ್ಚಿನ ಜನಪದ ನಂಬಿಕೆಗಳಿರುವುದು ಗೋಚರವಾಗುತ್ತದೆ. ಅದರಲ್ಲೂ ಪ್ರಮುಖವಾಗಿ ಹಳ್ಳಿಗಳಲ್ಲಿ ಆಚರಿಸುವ ಮುನಿಯಪ್ಪನ ಹಬ್ಬ.

ಮೊದಲಿಗೆ ಈ ಹಬ್ಬದ ಹಿನ್ನೆಲೆಯನ್ನು ತಿಳಿಯಹೊರಟರೆ 'ಮುನಿ' ಸಂಸ್ಕೃತದಿಂದ ಬಂದಿರುವ ಪದ. 'ಮುನಿ' ಎಂದರೆ ಮುನಿಸು, ಸಿಟ್ಟು, ಕೋಪ ಎಂದು ನಾವು ಅರ್ಥೈಸಿಕೊಳ್ಳಬಹುದು. ಅಂತೆಯೇ ಏಕಾಂತದಲ್ಲಿ ಒಂಟಿಯಾಗಿ ಕುಳಿತು (ಮೌನವಾಗಿ) ತಪಸ್ಸು ಮಾಡುವ ವ್ಯಕ್ತಿಗೂ 'ಮುನಿ' ಎನ್ನುವರು. ಮುನಿಶ್ರೇಷ್ಠ, ಮುನಿವರ್ಯ, ಮುನೀಂದ್ರ ಹೀಗೆ ನಾನಾ ಹೆಸರುಗಳಿಂದಲೂ ಕರೆಯುವರು. ಉದಾಹರಣೆಗೆ ನಾರದಮುನಿ, ಗೌತಮ ಮುನಿ, ಮಾರ್ಕಾಂಡೇಯ ಮುನಿ ಇವರೆಲ್ಲರೂ ಏಕಾಂತದಲ್ಲಿ ಕುಳಿತು ಮೌನವಾಗಿ ತಪಸ್ಸು ಮಾಡಿರುವುದಕ್ಕೆ ಪುರಾಣಗಳಲ್ಲಿ ದಾಖಲೆಗಳು ಸಿಗುತ್ತವೆ.

ಮುನಿಯಪ್ಪ ಹಬ್ಬದ ಕುರಿತು ಗ್ರಾಮದ ಹಿರಿಯರು ದಂತಕಥೆಗಳನ್ನು ಹೇಳುವುದುಂಟು. ಯಾವುದೋ ಒಂದು ಊರಿನ ನಿಗದಿತ ಸ್ಥಳದಿಂದ ಅಂದರೆ ದೇಗುಲದ ಮುಂದಿರುವ ಅರಳೀಮರವೋ ಬೇವಿನ ಮರವೋ ಅಥವಾ ಬೃಹದಾಕಾರದ ಕೋವೆಗಳಿಲ್ಲದ ಹುತ್ತದಿಂದಲೋ ಬೇರೆ ಕಡೆಯ ಮತ್ತೊಂದು ಇಂಥದೇ ಒಂದು ಸ್ಥಳಕ್ಕೆ ಮುನಿ ಸಂಚಾರವಿದೆ. ಓರ್ವ ಮುನಿಯನ್ನು ಪಲ್ಲಕ್ಕಿಯಲ್ಲಿ ಕೂರಿಸಿಕೊಂಡು ನಡುರಾತ್ರಿಯಲ್ಲಿ ಎಲ್ಲರೂ ಮಲಗಿರುವ ಹೊತ್ತಿನಲ್ಲಿ ಯಾರಿಗೂ ಗೋಚರಿಸದಂತೆ ಅವರ ಶಿಷ್ಯಂದಿರು ಮತ್ತೊಂದೆಡೆಗೆ ಆಗಾಗ್ಗೆ ಸಂಚರಿಸುತ್ತಾರೆ. ಆ ವೇಳೆಯಲ್ಲಿ ತಕ್ಕಮಟ್ಟಿನ ವಾದ್ಯಗಳನ್ನು ಬಳಸುತ್ತಾರೆ. ಆ ಸಂದರ್ಭದಲ್ಲಿ ಹಾದಿಯುದ್ದಕ್ಕೂ ಪ್ರಖರವಾದ ಬೆಳಕು ಮೂಡಿರುತ್ತದೆಂತಲೂ ಹೇಳುತ್ತಾರೆ. ಆ ಸಂಚಾರಕ್ಕೆ ಯಾರೂ ಎದುರಾಗಬಾರದು ಎಂದು ಎಚ್ಚರಿಸುತ್ತಾರೆ. ಆಗೊಮ್ಮೆ ಎದುರಾದರೆ ಅಂತಹವರಿಗೆ ತೊಂದರೆಯಾಗುತ್ತದೆ ಎಂಬುದು ಜನಪದರ ನಂಬಿಕೆ. ಅದನ್ನು ನೋಡಲೆತ್ನಿಸಿದ ಕೆಲವರು ಭಯಭೀತರಾಗಿ ಪ್ರಾಣ ಕಳೆದುಕೊಳ್ಳುವ ಹಂತಕ್ಕೂ

ತಲುಪಿದ್ದಾರೆ ಎನ್ನುತ್ತಾ ಅದರ ದಿಟ್ಟಗೆ ಮನುಷ್ಯರು ಬೀಳಲೇಬಾರದೆಂದು ಇಂದಿಗೂ ಕೂಡಾ ಹೇಳುವವರಿದ್ದಾರೆ.

ಮತ್ತೆ ಹಲವರು ತಮ್ಮ ಹೊಲಗಳಲ್ಲಿ ಹುತ್ತವಿದ್ದರೆ ಅದನ್ನು ಹಾಳುಗೆಡವದೆ ಉಳಿಸಿಕೊಂಡು ವರುಷಕ್ಕೊಮ್ಮೆ ಮುನಿಯಪ್ಪನ ಹಬ್ಬ ಆಚರಿಸುತ್ತಾರೆ. ಮುನಿಯಪ್ಪನನ್ನು ಮಾಡದಿದ್ದರೆ ಆ ಜಾಗದಲ್ಲಿ ಉತ್ತಮ ಬೆಳೆ ಆಗುವುದಿಲ್ಲ. ಮುನಿಯಪ್ಪನ ಪೂಜಾ ಕೈಂಕರ್ಯ ಸಲ್ಲಿಸಿದ್ದೇ ಆದಲ್ಲಿ ಒಳ್ಳೆಯ ಫಸಲು ಬರುತ್ತದೆ ಎಂಬುದು ಜನಪದರ ನಿಚ್ಚಳವಾದ ನಂಬಿಕೆ. ಈ ಪೂಜಾ ಕಾರ್ಯದಲ್ಲಿ ಹಲವೆಡೆ ಸಿಹಿ ಊಟವನ್ನು ಇಲ್ಲವೇ ಮಾಂಸಾಹಾರವನ್ನು ಹೊಲದಲ್ಲಿಯೇ ಸಿದ್ಧತೆ ಮಾಡಿ ಹುತ್ತದ ಬಳಿಯೇ ದೇವರಿಗೆ ಎಡೆಯಿಟ್ಟು, ನಂತರ ಅಲ್ಲಿಯೇ ಎಲ್ಲರೂ ಊಟ ಮಾಡುತ್ತಾರೆ. ಮಿಕ್ಕ ಆಹಾರವನ್ನು ಮನೆಗೆ ಹಿಂತಿರುಗಿ ತರುವಂತಿಲ್ಲ ಎಂಬ ರೂಢಿಯನ್ನು ಅವರು ಅನುಸರಿಸಿಕೊಂಡು ಬಂದಿದ್ದಾರೆ. ಈ ಒಂದು ಆಚರಣೆಯನ್ನೇ ಹಳ್ಳಿಗರು ಮುನಿಯಪ್ಪನನ್ನು ಮಾಡುತ್ತೇವೆ ಎನ್ನುತ್ತಾರೆ.

ಬಹಳಷ್ಟು ಕಡೆ ಹುತ್ತವನ್ನೇ 'ಮುನೇಶ್ವರ'ವೆನ್ನುತ್ತ ಅದಕ್ಕೆ ಮನೆಯ ಯಜಮಾನ ಇಲ್ಲವೇ ಆತನ ಹಿರಿಯ ಮಗ ಪ್ರತಿ ಶನಿವಾರ ಮಡಿಮೈಲಿಗೆ ಅನುಸರಿಸುತ್ತ ಪೂಜಾವಿಧಿ ನಡೆಸುತ್ತಾರೆ. ಅದನ್ನು ಯಾವುದೇ ಕಾರಣಕ್ಕೂ ನಿಲ್ಲಿಸುವಂತಿಲ್ಲ. ನಿಲ್ಲಿಸಿದರೆ ಅದು ಅಶುಭದ ಸಂಕೇತ. ಅಂತಹ ಸಮಯದಲ್ಲಿ ಅವರ ಹೊಲದಲ್ಲಿ ಹಾಡುಹಗಲಲ್ಲೇ ನಾಗರಹಾವು ಕಾಣಿಸಿಕೊಳ್ಳುತ್ತದೆ. ರಾತ್ರಿ ಕನಸಲ್ಲಿ ನಾಗರ ಮನೆಯವರಿಗೆಲ್ಲ ದುಃಸ್ವಪ್ನವಾಗಿ ಕಾಡುತ್ತದೆ ಎಂಬ ಪ್ರತೀತಿಯಿದೆ. ಮನೆಯ ಯಜಮಾನತಿ ಹಾವಿನಾಕಾರದ ಚಿನ್ನದ ಒಡವೆ ನಾಗರ ಮಾಡಿಸಿಕೊಂಡು ಸದಾಕಾಲ ಕೊರಳಲ್ಲಿ ಧರಿಸಿರುವುದನ್ನು ಕಾಣಬಹುದು. ಆಕೆ ತಪ್ಪದೇ ನಾಗಪೂಜೇ ನಡೆಸಬೇಕು. ಆಕೆಯ ಕಾಲಾನಂತರ ಆ ಪಟ್ಟಕ್ಕೆ ಬರುವ ಯಜಮಾನತಿ ಈ ಪದ್ಧತಿಯನ್ನು ನಡೆಸಿಕೊಂಡು ಬರುತ್ತಿರುವುದು ರೂಢಿಯಲ್ಲಿದೆ.

ಒಟ್ಟಿನಲ್ಲಿ ಇದು ಹಳ್ಳಿಯ ಮುಗ್ಧ ಜನರು ಪದ್ಧತಿಯಂತೆ ನಡೆಸಿಕೊಂಡು ಬಂದಿರುವ ಸತ್‌ಸಂಪ್ರದಾಯ. ಏಕೆಂದರೆ ರೈತಾಪಿ ವರ್ಗದವರಿಗೆ ಮಾತ್ರವಲ್ಲದೆ ಸರ್ವರಿಗೂ ದೇವರು ಬೆಳಕು, ಶಾಖ, ಗಾಳಿ, ಮಳೆ, ಮರಗಿಡಗಳು, ಫಲಪುಷ್ಪಗಳು, ದವಸ ಧಾನ್ಯಗಳು, ಕಚ್ಚಾ ಖನಿಜಗಳು – ಹೀಗೆ ಸಕಲವನ್ನೂ ಪ್ರಕೃತಿದತ್ತವಾಗಿ ಕರುಣಿಸಿದ್ದಾನೆ. ಈ ಎಲ್ಲವನ್ನು ಒದಗಿಸಿರುವ ಆ ಭಗವಂತನಿಗೆ ಜನರು ಯಾವ ಕಾಣಿಕೆಯನ್ನಾಗಲಿ, ಸುಂಕವನ್ನಾಗಲಿ ಪಾವತಿಸುವುದಿಲ್ಲ. ಇಷ್ಟೆಲ್ಲವನ್ನು ಪುಕ್ಕಟೆಯಾಗಿ ಕರುಣಿಸಿರುವ ದಯಾಮಯನಿಗೆ ವಿನಮ್ರವಾಗಿ, ಭಕ್ತಿಪೂರ್ವಕವಾದ ಕೃತಜ್ಞತೆ ಸಮರ್ಪಿಸಬೇಕಾದುದು ಮನುಷ್ಯ ಧರ್ಮ. ಈ ಒಂದು ವಿಧೇಯ ಮನೋಭಾವದಿಂದ ದೇವರು ಕೊಟ್ಟಿದ್ದು ಮೊದಲು ಆತನಿಗೆ ಅರ್ಪಣೆಯಾಗಲಿ ಎಂದು ಸಲ್ಲಿಸುವ ಪೂಜೆಗೆ ಗ್ರಾಮೀಣ ಪ್ರದೇಶಗಳಲ್ಲಿ 'ಮುನಿಯಪ್ಪ' ಎಂದು ಕರೆಯುತ್ತಾರೆ. ಈ ಹಬ್ಬವನ್ನು ನಮ್ಮ ಜನಪದರು ರಾಶಿಯ ಸಮಯದಲ್ಲಿ ಆಚರಿಸಿ ಸಂಭ್ರಮಿಸುವುದನ್ನು ಕಾಣಬಹುದಾಗಿದೆ.

೧೦. ಶಿವರಾತ್ರಿ ಹಬ್ಬ

ಶಿವನನ್ನು ಪೂಜಿಸುವವರೆಲ್ಲರೂ ಸೋಮವಾರದ ದಿನ ವಿಶೇಷ ಪೂಜೆ ಮಾಡಿಕೊಂಡು ಬರುತ್ತಾರೆ. ವರ್ಷಕ್ಕೊಮ್ಮೆ ಬರುವ ಶಿವರಾತ್ರಿ ಹಬ್ಬವನ್ನು ಇಲ್ಲಿ ಕೆಲವು ವಿಶೇಷಗಳೊಂದಿಗೆ ಆಚರಿಸುತ್ತಾರೆ. ಮುಂಜಾನೆ ಬೇಗ ಎದ್ದು ಮನೆಯನ್ನು ಸಾರಿಸಿ, ಮನೆಯ ಅಂಗಳವನ್ನು ಶೃಂಗರಿಸಿ ಮನೆಯವರೆಲ್ಲ ಸ್ನಾನ ಮಾಡಿಕೊಂಡು ಮಡಿಬಟ್ಟೆ ಹಾಕಿಕೊಳ್ಳುತ್ತಾರೆ. ಕೆಲವರು ಶಿವರಾತ್ರಿಯ ದಿನ ಉಪವಾಸವಿರುತ್ತಾರೆ. ಊರಿನ ಹೊರಭಾಗದಲ್ಲಿರುವ ಬಸವೇಶ್ವರನ ಗುಡಿಗೆ ಹಣ್ಣುಕಾಯಿಗಳನ್ನು ತೆಗೆದುಕೊಂಡು ಹೋಗಿ ಪೂಜೆ ಮಾಡಿಸಿಕೊಂಡು ಬರುತ್ತಾರೆ. ಗ್ರಾಮದ ಯುವಕರ ಗುಂಪು ಹಿರಿಯರ ಮಾರ್ಗದರ್ಶನದಲ್ಲಿ ಪ್ರತಿ ಮನೆಯಲ್ಲಿಯು ತರಕಾರಿ, ತೆಂಗಿನ ಕಾಯಿ, ರಾಗಿಹಸೀಟು, ಅಕ್ಕಿ, ಸಾಂಬಾರ ಪದಾರ್ಥಗಳನ್ನು ಸಂಗ್ರಹಿಸುತ್ತಾರೆ. ಚಿಕ್ಕ ಹುಡುಗರು ಎಣ್ಣೆಯ ಡಬ್ಬದಲ್ಲಿ ಪ್ರತಿ ಮನೆಯಿಂದ ಒಂದು ಕಪ್ಪು ದೀಪದ ಎಣ್ಣೆ ಸಂಗ್ರಹಿಸುತ್ತಾರೆ. ಇದನ್ನು ದೇವಸ್ಥಾನದಲ್ಲಿ ದೀಪ ಹಚ್ಚಲು ಬಳಸುತ್ತಾರೆ.

ಶಿವರಾತ್ರಿಯ ದಿನ ರಾತ್ರಿ ಊರಿನ ಭಕ್ತಾದಿಗಳೆಲ್ಲ ಬಸವೇಶ್ವರನ ಗುಡಿಯ ಬಳಿ ಸೇರುತ್ತಾರೆ. ದೇವಾಲಯವನ್ನು ತಳಿರುತೋರಣ. ಹೂವುಗಳಿಂದ ಹಾಗು ವಿದ್ಯುತ್ ದೀಪಗಳಿಂದ ಅಲಂಕರಿಸಿರುತ್ತಾರೆ. ಭಕ್ತಾದಿಗಳಿಂದ ಸಂಗ್ರಹಿಸಿದ ವಸ್ತುಗಳಿಂದ ಆಹಾರವನ್ನು ತಯಾರಿಸುತ್ತಾರೆ. ದೇವರಿಗೆ ಮೊದಲ ಪೂಜೆಯಾದ ಮೇಲೆ ಮುದ್ದೆ ಹಾಗು ಅವರೆಕಾಳು ಸಾರು, ಪಾಯಸ, ಅನ್ನದಿಂದ ಕೂಡಿದ ಪ್ರಸಾದವನ್ನು ಭಕ್ತರೆಲ್ಲ ಸೇರಿ ಊಟ ಮಾಡುತ್ತಾರೆ. ಇದನ್ನು ಶಿವರಾತ್ರಿಯ ಪರವೆಂದು ಕೂಡ ಕರೆಯುತ್ತಾರೆ. ನಂತರ ಇಡೀ ರಾತ್ರಿ ಜಾಗರಣೆಯಿದ್ದು ಶಿವನನ್ನು ಪ್ರಾರ್ಥಿಸುತ್ತಾರೆ. ಹೀಗೆ ಐಕನಹಳ್ಳಿ ಗ್ರಾಮದ ಶಿವರಾತ್ರಿಯ ಆಚರಣೆ ಕೆಲವು ವಿಶೇಷತೆಗಳನ್ನು ಮೈಗೂಡಿಸಿಕೊಂಡಿದೆ.

೧೧. ಉಪವಾಸದ ಹಬ್ಬ

ಆಷಾಢ ಮಾಸದಲ್ಲಿ ಬರುವ ಏಕಾದಶಿಯ ದಿನ ಈ ಹಬ್ಬವನ್ನು ಆಚರಿಸುತ್ತಾರೆ. ಬೇರೆ ಹಬ್ಬಗಳಂತೆ ಈ ಹಬ್ಬಕ್ಕು ಮನೆಯನ್ನು ಸಾರಿಸಿ, ಮನೆಯವರೆಲ್ಲ ಸ್ನಾನ ಮಾಡಿಕೊಂಡು ಸಿದ್ಧವಾಗುತ್ತಾರೆ. ಇದು ಉಪವಾಸದ ಹಬ್ಬವಾದರು ಮನೆಮಂದಿಯೆಲ್ಲ ಉಪವಾಸವಿರುವುದು ಕಡಿಮೆ. ಕುಟುಂಬದ ಹಿರಿಯರಲ್ಲಿ ಒಬ್ಬರು ಉಪವಾಸವಿರುತ್ತಾರೆ. ತಂಬಿಟ್ಟು, ಉಪ್ಪಿಟ್ಟು, ಹಳಸಿನ ಹಣ್ಣಿನ ಫಲಾಹಾರ, ರಸಾಯನಗಳನ್ನು ತಯಾರಿಸಿಕೊಂಡು ಮನೆಯವರೆಲ್ಲ ಸೇರಿ ಒಟ್ಟಾಗಿ ಊಟ ಮಾಡುತ್ತಾರೆ. ಇನ್ನಾವುದೇ ವೈಶಿಷ್ಟ್ಯಗಳು ಈ ಹಬ್ಬದಲ್ಲಿ ಕಾಣುವುದಿಲ್ಲ.

೧೨. ಕಾರ್ತಿಕ ಸೋಮವಾರ

ಪ್ರಸಿದ್ಧವಾದ ಸಾಸಲು ಶಂಭುಲಿಂಗೇಶ್ವರನ ದೇವಾಲಯ ಐಕನಹಳ್ಳಿಗೆ ಎರಡು ಮೈಲಿಗಳಷ್ಟು ಹತ್ತಿರದಲ್ಲಿಯೇ ಇದೆ. ಈ ಕಾರಣಕ್ಕಾಗಿ ಕಾರ್ತಿಕ ಸೋಮವಾರವನ್ನು ಚಾಚುತಪ್ಪದೆ ಆಚರಿಸಿಕೊಂಡು ಬರುತ್ತಿದ್ದಾರೆ. ಮುಂಜಾನೆಯೆ ಎದ್ದು ಎಲ್ಲರು ಸ್ನಾನ ಮಾಡಿಕೊಂಡು, ಹೂವು, ಹಣ್ಣು, ಕರ್ಪೂರ, ಗಂಧದಕಡ್ಡಿ, ತೆಂಗಿನಕಾಯಿ ಮೊದಲಾದ ಪೂಜಾ ಸಾಮಗ್ರಿಗಳೊಂದಿಗೆ ಸಾಸಲಿಗೆ ಬರುತ್ತಾರೆ. ಶಂಭುಲಿಂಗೇಶ್ವರನ ಗುಡಿಯ ಪಕ್ಕದಲ್ಲಿರುವ ಕೊಳದಲ್ಲಿ ಮತ್ತೊಮ್ಮೆ ಮೈ ಮೇಲೆ ನೀರನ್ನು ಹಾಕಿಕೊಂಡು ಒದ್ದೆಯಾದ ಬಟ್ಟೆಯಲ್ಲಿಯೆ ದೇವಸ್ಥಾನದ ಅಂಗಳಕ್ಕೆ ಬರುತ್ತಾರೆ. ಗಂಧದ ಕಡ್ಡಿಗಳನ್ನು ಹಚ್ಚಿಕೊಂಡು ಎಲ್ಲರು ಕೈಯಲ್ಲಿ ಹಿಡಿದು ದೇವರ ಗುಡಿಯನ್ನು ಮೂರು ಸುತ್ತು ಭಕ್ತಿಯಿಂದ ಸುತ್ತುತ್ತಾರೆ. ನಂತರ ದೇವಾಲಯದೊಳಕ್ಕೆ ಹೋಗಿ ಪೂಜಾ ಸಾಮಗ್ರಿಗಳನ್ನು ಕೊಟ್ಟು ಪೂಜೆ ಮಾಡಿಸಿಕೊಂಡು, ಮಂಗಳಾರತಿ ತೆಗೆದುಕೊಂಡು, ತೀರ್ಥವನ್ನು ಸ್ವೀಕರಿಸುತ್ತಾರೆ. ಈ ಸಂದರ್ಭದಲ್ಲಿ ಕೆಲವರು ದೇವರಿಗೆ ಮುಡಿಯನ್ನು ಕೊಟ್ಟು ಹರಕೆ ತೀರಿಸುತ್ತಾರೆ. ಚಿಕ್ಕಮಕ್ಕಳಿಗೆ ೩ ವರ್ಷ ತುಂಬುವುದರೊಳಗೆ ಒಮ್ಮೆಯಾದರು ಮುಡಿಯನ್ನು ಕೊಡುವುದನ್ನು ರೂಢಿಸಿಕೊಂಡಿದ್ದಾರೆ. ನಂತರ ಹುತ್ತದ ಬಳಿಗೆ ಹೋಗಿ ಹುತ್ತಕ್ಕೆ ಹಾಲುತುಪ್ಪವನ್ನು ಎರೆದು, ಹಣ್ಣುಕಾಯಿ, ಹಣ್ಣನ್ನು ಹುತ್ತದ ಮುಂದೆ ಇಟ್ಟು ತಾವೇ ಪೂಜೆ ಮಾಡುತ್ತಾರೆ. ಈ ರೀತಿ ಮಾಡುವುದರಿಂದ ಸರ್ಪದೋಷ ನಿವಾರಣೆಯಾಗುತ್ತದೆ ಎಂಬ ನಂಬಿಕೆ ದಟ್ಟವಾಗಿದೆ. ಹಾಗು ಮಕ್ಕಳಿಗೆ ತಲೆಯಲ್ಲಿ ಗಾಯಗಳು ಆಗುವುದಿಲ್ಲವೆಂದು ಹೇಳುತ್ತಾರೆ. ನಂತರ ಕಡ್ಲೆಪುರಿ, ಮಿಠಾಯಿಗಳನ್ನು ತೆಗೆದುಕೊಂಡು ಊರಿಗೆ ಮರಳುತ್ತಾರೆ. ಅಕ್ಕಪಕ್ಕದ ಮನೆಯವರಿಗೆ ಪ್ರಸಾದವನ್ನು ಕೊಟ್ಟು ಸಂಭ್ರಮಿಸುತ್ತಾರೆ. ಕಾರ್ತಿಕ ಮಾಸದ ಕಡೆಯ ಸೋಮವಾರ ಸಾಸಲಿನ ಶಂಭುಲಿಂಗೇಶ್ವರ ಗುಡಿಗೆ ಹೋಗಿ ಪೂಜೆ ಮಾಡಿಸುವುದು ಹೆಚ್ಚಾಗಿ ಕಂಡುಬರುತ್ತದೆ.

೧೩. ಕಾರೆಮೆಳೆ ಸಿಂಗಮ್ಮನ ಹಬ್ಬ

ಕಾರೆಮೆಳೆಗಳು ಹೆಚ್ಚಾಗಿರುವ ಭಾಗದಲ್ಲಿ ಈ ಗುಡಿಯಿರುವುದರಿಂದ ಈ ಹೆಸರು ಬಂದಿದೆ. ಇದು ಐಕನಹಳ್ಳಿಯಿಂದ ಮಾದಾಪುರಕ್ಕೆ ಹೋಗುವ ರಸ್ತೆಯಲ್ಲಿ ಮೂರು ಮೈಲಿ ದೂರದಲ್ಲಿದೆ. ಕಾರ್ತಿಕ ಸೋಮವಾರದ ಬೆಳಿಗ್ಗೆ ಬರುವ ಮಂಗಳವಾರ ಇಲ್ಲಿ ಜಾತ್ರೆ ನಡೆಯುತ್ತದೆ. ಸಿಂಗಮ್ಮನಿಗೆ ಹಣ್ಣು ಕಾಯಿಗಳನ್ನು ತೆಗೆದುಕೊಂಡು ಹೋಗಿ ಪೂಜೆ ಮಾಡಿಸುತ್ತಾರೆ. ಹರಕೆ ಕಟ್ಟಿಕೊಂಡಿದ್ದವರು ಕುರಿ, ಕೋಳಿಗಳನ್ನು ದೇವರಿಗೆ ಒಪ್ಪಿಸಿ, ಬಂಧುಬಳಗವನ್ನೆಲ್ಲ ಕರೆದು ಪರ ಮಾಡಿ ಊಟಕ್ಕೆ ಹಾಕುತ್ತಾರೆ. ಮತ್ತೆ ಕೆಲವರು ಕೋಳಿಯನ್ನು ಬಲಿಕೊಟ್ಟು ಮನೆಗೆ ತೆಗೆದುಕೊಂಡು ಬಂದು ಅಡಿಗೆ ಮಾಡಿ ಎಲ್ಲರು ಸೇರಿ ಊಟ ಮಾಡುತ್ತಾರೆ. ಸಾಮಾನ್ಯವಾಗಿ ಕಾರ್ತಿಕ ಮಾಸದಲ್ಲಿ ಮಾಂಸಾಹಾರವನ್ನು ಸೇವಿಸುವುದಿಲ್ಲ. ಕಾರ್ತಿಕ ಸೋಮವಾರ ಮುಗಿದ ಮಾರನೆಯ ದಿನವೇ ಈ ಹಬ್ಬ ಬರುವುದರಿಂದ ಕಾರೆಮೆಳೆ ಸಿಂಗಮ್ಮನ ಹಬ್ಬ ಹೆಚ್ಚು ಮಹತ್ವ ಪಡೆದುಕೊಂಡಿದೆ.

೧೪. ನಾಗರ ಪಂಚಮಿ

ಜನವರಿ ತಿಂಗಳಲ್ಲಿ ಬರುವ ಮೊದಲ ಶನಿವಾರ ನಾಗರ ಪಂಚಮಿಯನ್ನು ಆಚರಿಸುತ್ತಾರೆ. ಬೇರೆ ಹಬ್ಬಗಳಂತೆ ಈ ಹಬ್ಬಕ್ಕು ಮನೆಯನ್ನು ಸಾರಿಸಿ, ಮನೆಯವರೆಲ್ಲ ಸ್ನಾನ ಮಾಡಿ ಮಡಿಯಾದ ಬಟ್ಟೆಯನ್ನು ಧರಿಸುತ್ತಾರೆ. ತಮ್ಮ ತಮ್ಮ ಜಮೀನುಗಳ ಬಳಿ ಇರುವ ಹುತ್ತವನ್ನು ಅಗೆದು ಅದರ ಕೋವೆಗಳು (ರಂಧ್ರಗಳು) ಚೆನ್ನಾಗಿ ಕಾಣುವಂತೆ ಸಿದ್ಧಪಡಿಸಿರುತ್ತಾರೆ. ೨೫–೩೦ ಕುಟುಂಬಗಳು ಒಟ್ಟಾಗಿ ಒಂದು ಹುತ್ತವನ್ನು ಪೂಜೆ ಮಾಡುತ್ತಾರೆ. ರಾತ್ರಿ ೭ ಗಂಟೆ ಸುಮಾರಿಗೆ ಹಾಲು, ಚಿಗಣಿ, ತಂಬಿಟ್ಟು, ಉಗ್ಗಿದ ಅನ್ನ, ಹಣ್ಣು, ಕಾಯಿ, ಬಾಳೆಯ ಎಲೆಗಳನ್ನು ತೆಗೆದುಕೊಂಡು ಹುತ್ತದ ಬಳಿಗೆ ಹೋಗುತ್ತಾರೆ. ಹುತ್ತಕ್ಕೆ ಸ್ವಲ್ಪ ದೂರದಲ್ಲಿ ಗಂಡಸರು ಹುಚ್ಚೆಳ್ಳು ಕಡ್ಡಿ ಅಥವಾ ಸೋಗೆಯ ಗರಿಗಳಲ್ಲಿ ಬೆಂಕಿ ಹಾಕುತ್ತಾರೆ. ಹೆಂಗಸರು ಹುತ್ತಕ್ಕೆ ನೀರನ್ನು ಹಾಕಿ, ಬಾಳೆ ಎಲೆ ಇಟ್ಟು, ಹಣ್ಣು ಹಂಪಲು, ಆಹಾರ ಪದಾರ್ಥಗಳನ್ನು ಜೋಡಿಸುತ್ತಾರೆ. ನಾಗರ ತಾಳಿಯನ್ನಿಡುತ್ತಾರೆ. ಬಾಳೆಹಣ್ಣನ್ನು ಹುತ್ತಕ್ಕೆ ಮುರಿದು ಹಾಕಿ ಹಾಲನ್ನು ಸುರಿಯುತ್ತಾರೆ. ನಂತರ ಪೂಜೆ ಮಾಡಿ ಎಲ್ಲಾ ಕುಟುಂಬದವರ ಪ್ರಸಾದವನ್ನು ಬೆರೆಸಿ ಭಕ್ತರಿಗೆಲ್ಲ ಹಂಚುತ್ತಾರೆ. ನಂತರ ಮನೆಗೆ ಬಂದು ಉಗ್ಗಿದ ಅನ್ನವನ್ನು ಹುಚ್ಚೆಳ್ಳು ಎಣ್ಣೆಯೊಂದಿಗೆ ಬೆರೆಸಿಕೊಂಡು ಊಟ ಮಾಡಿ ಸಂತೃಪ್ತರಾಗುತ್ತಾರೆ.

೧೫. ಕನ್ನಂಬಾಡಮ್ಮನ ಹಬ್ಬ

ಕನ್ನಂಬಾಡಮ್ಮನ ಹಬ್ಬವನ್ನು ಯುಗಾದಿ ಹಬ್ಬವಾದ ನಂತರ ಬರುವ ಮಂಗಳವಾರದಂದು ಆಚರಿಸುತ್ತಾರೆ. ಗ್ರಾಮದಲ್ಲಿರುವ ಪ್ರತಿ ಕುಟುಂಬದಲ್ಲು ಒಬ್ಬರು ಹೆಣ್ಣು ಮಕ್ಕಳು ಅಥವಾ ಹೆಂಗಸರು ಉಪವಾಸವಿರುತ್ತಾರೆ. ಉಗ್ಗಿದ ಅನ್ನ, ತಂಬಿಟ್ಟುಗಳನ್ನು ಸಿದ್ಧ ಮಾಡಿಕೊಂಡಿರುತ್ತಾರೆ. ಸಂಜೆ ೫ ಗಂಟೆಯ ಸುಮಾರಿಗೆ ಮಡೆ ಹೊರಡುವ ಮುನ್ನ ಸ್ವಲ್ಪ ತೆಳುವಾಗಿ ಮಾಡಿದ (ರವೆದಿವಿಗೆ) ತಂಬಿಟ್ಟನ್ನು ಇಟ್ಟಿಗೆಯ ಆಕಾರದಲ್ಲಿ ಮಾಡಿಕೊಂಡು ಅದಕ್ಕೆ ಅಡಿಕೆಯ ಹೊಂಬಾಳೆ ಮತ್ತು ಕಣಗಲ ಹೂವನ್ನು ಸಿಗಿಸುತ್ತಾರೆ. ರವೆದಿವಿಗೆ ಮೇಲೆ ಮಣ್ಣಿನಿಂದ ಮಾಡಿದ ಹಣತೆ (ಕೈಹಣತೆ)ಯನ್ನು ಹಚ್ಚಿ ಇಡುತ್ತಾರೆ. ಅಷ್ಟೊತ್ತಿಗಾಗಲೇ ರಂಗದ ಬೀದಿಯಲ್ಲಿ ಹಿಂಡುಹಿಂಡಾಗಿ ಜನ ಸೇರಿರುತ್ತಾರೆ. ಉಪವಾಸವಿದ್ದ ಹೆಣ್ಣು ಮಕ್ಕಳಿಗೆ ಸೀರೆಯುಡಿಸಿಕೊಂಡು ಅಲಂಕಾರ ಮಾಡಿ ಪಾತ್ರೆಯೊಳಗೆ ಜೋಡಿಸಿಟ್ಟ ಪೂಜಾ ಸಾಮಗ್ರಿಗಳನ್ನು ತಲೆಯ ಮೇಲೆ ಒರಿಸಿಕೊಂಡು ರಂಗದ ಬೀದಿಗೆ ಕರೆತರುತ್ತಾರೆ. ತಲೆಯ ಮೇಲೆ ಹೊತ್ತುಕೊಂಡ ರವೆದಿವಿಗೆಯ ಸಾಲನ್ನೆ ಮಡೆ ಎಂದು ಜನಪದರು ಕರೆದಿದ್ದಾರೆ.

"ಮಡಿವಾಳರು ರಸ್ತೆಯುದ್ದಕ್ಕು ಮಡಿಬಟ್ಟೆಯನ್ನು ಹಾಸಿಕೊಂಡು ಹೋಗುತ್ತಾರೆ. ಅದರ ಮೇಲೆ ಮಡೆಯನ್ನು ಒತ್ತಿರುವ ಹುಡುಗಿಯರು ಒಬ್ಬರ ನಂತರ ಒಬ್ಬರಂತೆ ಸಾಲಾಗಿ ನಿಂತುಕೊಳ್ಳುತ್ತಾರೆ. ನಂತರ ನಿಧಾನವಾಗಿ ನಡೆಯುತ್ತ ಕನ್ನಂಬಾಡಮ್ಮನ ಗುಡಿಯವರೆಗೂ ಬರುತ್ತಾರೆ."[೪] ಈ

ದೃಶ್ಯವನ್ನು ನೋಡುವುದೇ ಒಂದು ಚೆಂದ. ನಂತರ ಗುಡಿಯ ಮುಂಭಾಗದ ಮೈದಾನದಲ್ಲಿ ಎಲ್ಲರು ಕುಳಿತುಕೊಳ್ಳುತ್ತಾರೆ. ಅರ್ಚಕರು ಪೂಜೆ ಮಾಡಿ ತೀರ್ಥ ಎರಚುತ್ತಾರೆ. ಅಷ್ಟೊತ್ತಿಗಾಗಲೇ ಗ್ರಾಮದ ನಾಲ್ಕು ಪಂಗಡದವರು (ಬುಡಿಯಪ್ಪನ ಪಂಗಡ, ತೋಪಯ್ಯನ ಪಂಗಡ, ಹುಚ್ಚಮ್ಮನ ಪಂಗಡ, ಕೆಂಗಪ್ಪನ ಪಂಗಡ) ಒಂದೊಂದು ಹೋತವನ್ನು ಹಿಡಿದುಕೊಂಡು ನಿಂತಿರುತ್ತಾರೆ. ಅವುಗಳನ್ನು ಕನ್ನಂಬಾಡಮ್ಮನಿಗೆ ಒಪ್ಪಿಸಿ ಬಲಿಕೊಡುತ್ತಾರೆ. (ಇದಕ್ಕು ಮೊದಲು ಊರಿನ ಕೆರೆಯ ಬಳಿಯಿರುವ ಸತ್ಯಮ್ಮನ ಗುಡಿಯ ಮುಂದೆ ಒಂದು ಮರಿಯನ್ನು ಬಲಿಕೊಟ್ಟಿರುತ್ತಾರೆ.) ನಂತರ ತಮ್ಮ ತಮ್ಮ ಮನೆಗಳಿಗೆ ಮರಳುತ್ತಾರೆ. ತಮ್ಮ ಶಕ್ತಾನುಸಾರ ಬಂಧುಮಿತ್ರರನ್ನು ಹಬ್ಬಕ್ಕೆ ಆಹ್ವಾನಿಸಿರುತ್ತಾರೆ. ಮರಿಯ ಮಾಂಸವನ್ನು ಹಂಚಿಕೊಂಡು (ಪಾಲಾಕಿಕೊಂಡು) ಮಾಂಸಾಹಾರವನ್ನು ಮಾಡಿಕೊಂಡು ಊಟ ಮಾಡುತ್ತಾರೆ.

೧೬. ಮಾರಮ್ಮನ ಹಬ್ಬ

ಮಾರಮ್ಮನ ಹಬ್ಬವನ್ನು ಸಾಮಾನ್ಯವಾಗಿ ಬಯಲುಸೀಮೆಯ ಎಲ್ಲಾ ಗ್ರಾಮಗಳಲ್ಲು ಆಚರಿಸುತ್ತಾರೆ. ಇದು ಭಯದಿಂದ ಹುಟ್ಟಿಕೊಂಡಿರುವ ಹಬ್ಬವಾಗಿದೆ. ಕಜ್ಜಿ, ಕುರ, ದಡಾರ, ಪ್ಲೇಗು, ಅಮ್ಮಗಳಾಗಿ ತೊಂದರೆಯಾದಾಗ ಮಾರಮ್ಮನಿಗೆ ಮೊರೆಹೋಗುತ್ತಾರೆ. ಇವಳನ್ನು ಪೂಜಿಸಿದರೆ ಸಾಕು ಪ್ರಾಣಿಗಳಿಗೂ ತೊಂದರೆಯಾಗುವುದಿಲ್ಲ ಎಂಬ ನಂಬಿಕೆಯಿದೆ. ಯುಗಾದಿ ಹಬ್ಬಕ್ಕಿಂತ ಮೊದಲು ಬರುವ ಗುರುವಾರ ಅಥವಾ ಭಾನುವಾರ ಮಾರಿಹಬ್ಬವನ್ನು ಆಚರಿಸುತ್ತಾರೆ. ಊರಿನ ಹೆಬ್ಬಾಗಿಲನ್ನು ದಾಟಿದ ಸ್ವಲ್ಪ ದೂರದಲ್ಲಿ ಕರಿಕಲ್ಲೊಂದಿದೆ. ಇದನ್ನೆ ಮಾರಿ ದೇವತೆಯಾಗಿ ಪೂಜಿಸುತ್ತಾ ಬಂದಿದ್ದಾರೆ. "ಮಾರಿ ಹಬ್ಬಕ್ಕೆ ಹೊಸ ಬಟ್ಟೆಗಳನ್ನೇನು ಧರಿಸುವುದಿಲ್ಲ. ಸಂಜೆಯ ಮೆರವಣಿಗೆಗೆ ಪಂಜು ಮಾಡಲು ಹುಡುಗರು ಕವೆ ಇರುವ ಅರಳೀಕಡ್ಡಿಯನ್ನೋ ಅಥವಾ ಉದ್ದನೆಯ ಸಣ್ಣ ಬಿದಿರನ್ನೋ ಸಿದ್ಧ ಮಾಡಿಕೊಳ್ಳುತ್ತಾರೆ. ಹರಿದ ಬಟ್ಟೆಯಿಂದ ಸಣ್ಣ ಸಿಂಬಿಗಳನ್ನು ಮಾಡಿಕೊಳ್ಳುತ್ತಾರೆ. ಅದನ್ನು ಸೀಮೆ ಎಣ್ಣೆಯಲ್ಲಿ ಅದ್ದಿ ಚಿಪ್ಪಿನ ಕಂಟದಲ್ಲಿ ನೆನಸಿ ಇಟ್ಟುಕೊಂಡಿರುತ್ತಾರೆ."[೫] ಹೆಂಗಸರು ತಂಬಿಟ್ಟು (ಗಟ್ಟಿಯಾದ ಚಿಕ್ಕ ಉಂಡೆ) ರವೆದಿವಿಗೆ (ತೆಳುವಾದ ಆಯುತಾಕಾರದ ದೊಡ್ಡ ಉಂಡೆ) ಹಾಗು ಒಣಗಿದ ಅವರೇ ಕಾಳುಗಳನ್ನು ಬೇಯಿಸಿ ಸಿದ್ಧಮಾಡಿಕೊಂಡಿರುತ್ತಾರೆ. ಸಂಜೆ ೭ ಗಂಟೆಯ ಸುಮಾರಿಗೆ ಹೆಂಗಸರು ಪೂಜಾ ಸಾಮಾನುಗಳ ಜೊತೆಯಲ್ಲಿ ಮಾರಮ್ಮನ ಕಲ್ಲಿನ ಬಳಿ ಬರುತ್ತಾರೆ. ಹುಡುಗರು ಪಂಜುಗಳನ್ನು ಹಿಡಿದುಕೊಂಡು ಬರುತ್ತಾರೆ. ಮಾರಮ್ಮನಿಗೆ ಪೂಜಾರಿ ಇಲ್ಲದಿರುವುದರಿಂದ ಭಕ್ತಾದಿಗಳೆಲ್ಲರೂ ಸೇರಿ ಪೂಜೆ ಮಾಡುತ್ತಾರೆ. ಹುಡುಗರು ಸ್ವಲ್ಪ ದೂರದಲ್ಲಿ ಪಂಜುಗಳಿಗೆ ಬೆಂಕಿ ಹಚ್ಚಿಸಿಕೊಂಡು ಬೇರೊಬ್ಬರ ಪಂಜನ್ನು ಕೆಡವಲು ಪ್ರಯತ್ನಿಸುತ್ತ ಆಟವಾಡುತ್ತಾರೆ. ಪಂಜುಗಳು ಹುರಿದ ಮೇಲೆ ತಮ್ಮ ಪೋಷಕರೊಂದಿಗೆ ಮನೆಗೆ ಬರುತ್ತಾರೆ. ಅವರೇಕಾಳು ತಂಬಿಟ್ಟು ತಿಂದು ಅನ್ನಸಾರು ಊಟ

ಮಾಡುತ್ತಾರೆ. ಮಾರಮ್ಮನ ಹಬ್ಬಕ್ಕೆ ವಿಶೇಷವಾದ ಮತ್ತಾವುದೇ ಅಡುಗೆಯಿರುವುದಿಲ್ಲ. ತಂಬಿಟ್ಟನ್ನ ವಾರ, ಹದಿನೈದು ದಿನಗಳ ಕಾಲ ಇಟ್ಟುಕೊಂಡು ತಿನ್ನುತ್ತಾರೆ.

೧೭. ಆಯುಧ ಪೂಜೆ ಮತ್ತು ವಿಜಯದಶಮಿ ಹಬ್ಬ

ನಮ್ಮ ನಾಡಹಬ್ಬವಾದ ವಿಜಯದಶಮಿ ಹಬ್ಬವನ್ನು ಗ್ರಾಮದಲ್ಲಿ ಆಚರಿಸುತ್ತಾರೆ. ಪ್ರತಿಯೊಬ್ಬರು ತಾವು ದಿನನಿತ್ಯ ಬಳಸುವ ಸೈಕಲ್, ಸ್ಕೂಟರ್, ಕಾರು ಮುಂತಾದ ವಾಹನಗಳು ಹಾಗು ಮನೆಯಲ್ಲಿರುವ ಟಿ.ವಿ., ಫ್ರಿಡ್ಜ್, ಟೇಪ್‌ರಿಕಾರ್ಡರ್, ರೇಡಿಯೋ, ಐರನ್‌ಬಾಕ್ಸ್, ಮಿಕ್ಸಿ, ಗ್ರೈಂಡರ್ ಮುಂತಾದ ಎಲೆಕ್ಟ್ರಾನಿಕ್ ಉಪಕರಣಗಳನ್ನು ತೊಳೆದು ಅರಿಶಿಣ ಕುಂಕಮ ಹಚ್ಚಿ, ಹೂ ಮುಡಿಸಿ ಪೂಜೆ ಮಾಡುತ್ತಾರೆ. ವಾಹನಗಳನ್ನು ಮನೆಯ ಮುಂದೆ ಸಾಲಾಗಿ ನಿಲ್ಲಿಸಿ ಕಬ್ಬಿನ ಗರಿ, ಶಾವಂತಿಗೆ ಹೂವು, ನಿಂಬೆ ಹಣ್ಣುಗಳಿಂದ ಅಲಂಕರಿಸುತ್ತಾರೆ. ಅರಿಶಿಣ ಕುಂಕುಮವನ್ನು ಹಚ್ಚಿ ಪೂಜೆ ಮಾಡುತ್ತಾರೆ. ಬೂದಗುಂಬಳ ಕಾಯಿಯನ್ನು ಒಂದು ಭಾಗದಲ್ಲಿ ತೂತ ಮಾಡಿ ಅದರೊಳಕ್ಕೆ ಚಿಲ್ಲರೆ ನಾಣ್ಯ ಹಾಗು ಕುಂಕುಮವನ್ನು ತುಂಬಿರುತ್ತಾರೆ. ಅದರ ಮೇಲೆ ಕರ್ಪೂರವನ್ನು ಇಟ್ಟುಕೊಂಡು ವಾಹನಕ್ಕೆ ಬೆಳಗಿ (ನೀವಳಿಸಿ) ರಸ್ತೆಯಲ್ಲಿ ಒಡೆದು ಹಾಕುತ್ತಾರೆ. ಚಿಕ್ಕ ಹುಡುಗರು ಚಿಲ್ಲರೆ ಹಣವನ್ನು ತೆಗೆದುಕೊಳ್ಳಲು ಕಿತ್ತಾಡುತ್ತಿರುವ ದೃಶ್ಯ ಸಾಮಾನ್ಯವಾಗಿರುತ್ತದೆ. ನಂತರ ಕಡ್ಲೆ ಪುರಿ, ಬಾಳೆಹಣ್ಣು, ಜೊತೆಗೆ ಲಾಡು, ಪೇಡ, ಮುಂತಾದ ಯಾವುದಾದರು ಒಂದು ಸಿಹಿ ಪದಾರ್ಥವನ್ನು ನೆರೆದಿದ್ದವರಿಗೆ ಪ್ರಸಾದವಾಗಿ ಹಂಚುತ್ತಾರೆ. ಅಂಗಡಿ ಮುಂಗಟ್ಟುಗಳನ್ನು ಇಟ್ಟಿಕೊಂಡಿರುವವರು ತಮಗೆ ಬೇಕಾಗಿರುವವರನ್ನೆಲ್ಲ ಪೂಜೆಗೆ ಕರೆದು ಸ್ವಲ್ಪ ದೊಡ್ಡ ಪ್ರಮಾಣದಲ್ಲಿಯೇ ಹಬ್ಬ ಆಚರಿಸುತ್ತಾರೆ. ವ್ಯಾನು, ಲಾರಿ, ಬಸ್ ಮುಂತಾದ ದೊಡ್ಡ ವಾಹನಗಳನ್ನು ಹೊಂದಿರುವವರು ಪೂಜೆಯಾದ ಮೇಲೆ ಊರಿನ ಹುಡುಗರನ್ನು ವಾಹನದಲ್ಲಿ ಕೂರಿಸಿಕೊಂಡು ಒಂದು ಜಾಲಿ ರೈಡ್ ಬರುತ್ತಾರೆ. ಈ ಕಾರಣಕ್ಕಾಗಿ ಇಲ್ಲಿ ಆಚರಿಸುವ ಈ ಹಬ್ಬ ಹುಡುಗರನ್ನು ಹೆಚ್ಚು ಸೆಳೆಯುತ್ತದೆ.

೧೮. ತಿಪ್ಪಮ್ಮನ ಹಬ್ಬ

ತಿಪ್ಪಮ್ಮನ ಹಬ್ಬವನ್ನು ಕಡೆ ಕಾರ್ತಿಕ ಸೋಮವಾರದ ದಿನ ಸಂಜೆ ಆಚರಿಸುತ್ತಾರೆ. ಊರಿನ ಹೊರಭಾಗದಲ್ಲಿ ಅಥವಾ ತಮ್ಮ ಹತ್ತಿರದ ಜಮೀನಿನ ಬಳಿ ರಸ್ತೆ ಬದಿಯಲ್ಲಿ ಪ್ರಾಣಿಗಳ ಕಸವನ್ನು ಸಂಗ್ರಹಿಸುತ್ತಾರೆ. ತಾವು ಬೆಳೆಗಳಿಗೆ, ಹೊಲ, ಗದ್ದೆ, ತೋಟಕ್ಕೆ ಈ ಗೊಬ್ಬರವನ್ನು ಹಾಕುತ್ತಾರೆ. ಈ ಕಾರಣಕ್ಕಾಗಿ ತಿಪ್ಪಮ್ಮನಿಗೆ ಒಂದು ಹಬ್ಬವನ್ನು ಮಾಡುತ್ತಾರೆ. ಆ ದಿನ ರಾಗಿರೊಟ್ಟಿ, ಕುಂಬಳಕಾಯಿ ಪಲ್ಯವನ್ನು ಸಿದ್ಧಮಾಡಿಕೊಳ್ಳುತ್ತಾರೆ. ತಿಪ್ಪೆಯ ಬಳಿಗೆ ಹಣ್ಣು, ಕಾಯಿ, ಎಳ್ಳು, ಜೀರಿಗೆಯನ್ನು ತೆಗೆದುಕೊಂಡು ಹೋಗಿ ಎಲ್ಲವನ್ನು ಇಟ್ಟು, ಕೈಹಣತೆ (ಮಣ್ಣಿನ ದೀಪ) ಹಚ್ಚಿ ಪೂಜೆ ಮಾಡುತ್ತಾರೆ.

ತಿಪ್ಪೆ ಇಲ್ಲದವರು ಮನೆಯ ಹೊರಗಡೆಯ ಕಿಟಕಿಯ ಬಳಿ ಸಗಣಿಯನ್ನಿಟ್ಟು ಅದರ ಮುಂದೆ ಮೇಲೆ ಹೇಳಿದ ಎಲ್ಲಾ ಪೂಜಾ ಸಾಮಗ್ರಿಗಳನ್ನಿಟ್ಟು ಪೂಜೆ ಮಾಡುತ್ತಾರೆ. ಜನಪದರ ಸಂಸ್ಕೃತಿಯ ಸಂಬಂಧಗಳು ನಮಗೆ ಇಂತಹ ಹಬ್ಬಗಳಿಂದ ತಿಳಿದುಬರುತ್ತವೆ.

❖ ❖ ❖

ಅಡಿ ಟಿಪ್ಪಣಿಗಳು

೧. ದೇವಮ್ಮ, ಐಕನಹಳ್ಳಿ, ೬೫ ವರ್ಷ.
೨. ಕೃಷ್ಣಯ್ಯ, ತುಳಸಿ, ೫೨ ವರ್ಷ.
೩. ತಮ್ಮಯ್ಯ, ತುಳಸಿ, ೫೫ ವರ್ಷ.
೪. ರಂಗಕ್ಕ, ಐಕನಹಳ್ಳಿ, ೫೬ ವರ್ಷ.
೫. ಗಂಗಡಿಕಾರ ಒಕ್ಕಲಿಗರು, ಡಾ. ನಲ್ಲೂರು ಪ್ರಸಾದ್, ಪುಟ. ೧೫೨.

ಅಧ್ಯಾಯ – ೭

ಗ್ರಾಮದ ಜಾನಪದ ಸಾಹಿತ್ಯ, ಕಲೆ, ಜನಪದ ವೈದ್ಯ, ಅಡುಗೆ–ಉಡುಗೆ ಮತ್ತು ಜನಪದ ಆಟಗಳು

೧. ಗ್ರಾಮದ ಜನಪದ ಸಾಹಿತ್ಯ

ಮಾನವ ಭಾಷೆಯನ್ನು ಬಳಕೆಗೆ ತಂದುಕೊಂಡ ನಂತರದಲ್ಲಿ ತನ್ನ ಭಾವನೆಗಳಿಗೆ ಕಾವ್ಯದ ರೂಪ ಕೊಡಲು ಪ್ರಾರಂಭಿಸಿದ. ಯಾವುದೇ ಪರಿಸರದಲ್ಲಿ ಬದುಕುತ್ತಿರುವ ವ್ಯಕ್ತಿಯು ತನ್ನ ನೋವು–ನಲಿವುಗಳನ್ನು, ಅನುಭವಗಳನ್ನು ಸನ್ನಿವೇಶಕ್ಕೆ ತಕ್ಕಂತೆ ಹೊರಹಾಕಿದ. ಅನಕ್ಷರಸ್ಥ ಸಮುದಾಯದ ಆಸ್ತಿಯಾಗಿರುವ ಜನಪದ ಸಾಹಿತ್ಯ ಶತಶತಮಾನಗಳಿಂದ ಉಳಿದು ಬೆಳೆದುಕೊಂಡು ಬಂದಿದೆ. ಪ್ರತಿಭಾ ಸಂಪನ್ನನಾದ ಭಾವತೀವ್ರತೆಯೇ ಜನಪದ ಗೀತೆಗಳ ಮೂಲಸತ್ವವಾಗಿದ್ದು, ಇವುಗಳನ್ನು ಜನಪದರು ಕೇಳಿಸಿಕೊಂಡು, ನೆನಪಿನಲ್ಲಿಟ್ಟುಕೊಂಡು, ಹಾಡುವವರೊಂದಿಗೆ ಧ್ವನಿಗೂಡಿಸಿಕೊಂಡು ಕಲಿಯುತ್ತಾರೆ. ಹೀಗೆ ಅವು ತಲೆಮಾರಿನಿಂದ ತಲೆಮಾರಿಗೆ ಜೀವಂತವಾಗಿ ಉಳಿದುಕೊಂಡು ಬಂದಿವೆ.

ವೃತ್ತಿ ಬದುಕಿನ ನಾಮಕರಣ, ವಿವಾಹ, ಇಂತಹ ಸಂದರ್ಭಗಳ ಆಚರಣೆಗಳಲ್ಲಿ ಹಾಡುಗಳು ಇದ್ದೇ ಇರುತ್ತವೆ. ಜನಪದ ಗೀತೆಗಳು ಆಯಾ ಜನಪದರ ಸಂಸ್ಕೃತಿಯನ್ನು ಚೆನ್ನಾಗಿ ತೆರೆದು ತೋರುತ್ತದೆ. ಜನಪದರು ತಮ್ಮ ಬದುಕಿನ ಬವಣೆಗಳನ್ನು ಜೀವನಾದರ್ಶಗಳನ್ನು ವಿಶೇಷವಾಗಿ ಜನಪದ ಗೀತೆಗಳಲ್ಲಿಯೇ ತೋಡಿಕೊಂಡಿದ್ದಾರೆ. ತಾವು ಪೂಜಿಸುವ, ತಮ್ಮ ಗ್ರಾಮದಲ್ಲಿ ನೆಲೆಸಿರುವ ಗಂಡು ದೇವರನ್ನು, ಹೆಣ್ಣು ದೇವರನ್ನು ಕುರಿತ ಪೂಜೆ ಪುರಸ್ಕಾರ, ಮೆರವಣಿಗೆ ಇತ್ಯಾದಿ ಸಂದರ್ಭದಲ್ಲಿ ಹಾಡುಗಳನ್ನು ಹಾಡುವ ಸಂಪ್ರದಾಯವಿದೆ. ಇವುಗಳು ನಮ್ಮ ಪೂರ್ವಜರ ಆಲೋಚನಾ ವಿಧಾನಕ್ಕೆ ಹಿಡಿದ ಕನ್ನಡಿಗಳಾಗಿವೆ.

೧.೧. ಜನಪದ ಗೀತೆಗಳು

ಅ) ಐಕನಹಳ್ಳಿಯಮ್ಮನನ್ನು ಕುರಿತ ಹಾಡುಗಳು

ಐಕನಹಳ್ಳಿಯಮ್ಮ ಭಕ್ತರ ಪಾಲಿಗೆ ಶಕ್ತಿ ದೇವತೆಯು ಹೌದೂ ಅನುಗ್ರಹ ದೇವತೆಯು ಹೌದು. ದ್ಯಾವಮ್ಮ ಎಂದು ಕೂಡ ಈಕೆಯನ್ನು ಕರೆದುಕೊಂಡಿದ್ದಾರೆ. ಐಕನಹಳ್ಳಿಯಮ್ಮನು ದೊಡ್ಡಂಚಿನ

ಸೀರೆಯನ್ನುಟ್ಟುಕೊಂಡು, ಸರ್ಪವನ್ನು ಕೊರಳಿಗೆ ಸುತ್ತಿಕೊಂಡು, ತುಂಬಿದ ತಾಲಿ ಹಾಕಿಕೊಂಡು, ತನ್ನ ಸುತ್ತ ಸರ್ಪದ ಕೋಟೆಯನ್ನು ನಿರ್ಮಿಸಿಕೊಂಡು ವಾಸ ಮಾಡುತ್ತಿರುವುದನ್ನು ಜನಪದರು ಜನಪದ ಗೀತೆಯಲ್ಲಿ ಪರಿಚಯಿಸುವ ರೀತಿ ವಿಶಿಷ್ಟವಾಗಿದೆ.

೧

ಹತ್ತು ಕಣ್ಣಿನೋಳೆ ಹದಿನಾರು ಬುಜದೋಳೆ
ಉತ್ತುದಕೋವಲ್ಲಿ ಇರುವೋಳೆ
ಸಾವಕ್ಕಿ ಸಣ್ಣ ಸೀರೆ ದ್ಯಾವಮ್ಮಗೆ
ಮುಂದೆರಡು ಜೀನ ಕುದುರೆ
ಉತ್ತುದ ಕೋವಲ್ಲಿ ಇರುವೋಳೆ ದ್ಯಾವಮ್ಮ
ಸುತ್ತ ಬಿಟ್ವಾಳೆ ಸರ್ಪಾನ
ಸರ್ಪಾನ ಕೋಟೆ ಕಾಣೆ
ದ್ಯಾವಮ್ಮಗೆ ಸಣ್ಣ ನೂಲಿನ ಮಾಲೆ ಕಾಣೆ
ಸುತ್ತ ಬಿಟ್ವಾಳೆ ಸರ್ಪಾನ ದೇವಮ್ಮ
ಮಕ್ಕಳು ಬಂದಾವೆ ಎದುರ್‍ಯಾವೆ
ಸರ್ಪಾನ ಕೋಟೆ ಕಾಣೆ
ದ್ಯಾವಮ್ಮಗೆ ಸಣ್ಣ ನೂಲಿನ ಮಾಲೆ ಕಾಣೆ
ಸರ್ಪದ ಕಲ್ಲೊಡ್ಡಿ ಮಲ್ಲಿಗೆ ಕುಯ್ಯೋಳೆ
ನಿಲ್ಲೆ ನಾ ಬಾಲೆ ಬರುತೀನಿ
ಸರ್ಪಾನ ಕೋಟೆ ಕಾಣೆ
ದ್ಯಾವಮ್ಮಗೆ ಸಣ್ಣ ನೂಲಿನ ಮಾಲೆ ಕಾಣೆ
ಎಲೆಲಾ ಬಾಲೆ ನಿಲ್ಲೆ ನಾ ಬರುತೀನಿ
ನೀ ಕೂದ ಮಲ್ಲೀಗೆ ಸರಿಪಾಲು
ಸರ್ಪಾನ ಕೋಟೆ ಕಾಣೆ
ದ್ಯಾವಮ್ಮಗೆ ಸಣ್ಣ ನೂಲಿನ ಮಾಲೆ ಕಾಣೆ
ಮೂಗುತಿ ಮುಂಬಾರ ಎಣೆಗಂಟನ ಹಿಂಬಾರ
ದೊಡ್ಡ ಗುಂಡಿನ ಸ್ವಾರ ಎದಿಬಾರ
ಸರ್ಪಾನ ಕೋಟೆ ಕಾಣೆ
ದ್ಯಾವಮ್ಮಗೆ ಸಣ್ಣ ನೂಲಿನ ಮಾಲೆ ಕಾಣೆ
ದೇವಮ್ಮ ಅದ್ಯಾಳೆ ದೇವಗಿರಿ ಬಣ್ಣವ
ಹಾವ ಸುತ್ಯಾಳೆ ಕೊರಳೀಗೆ
ಸರ್ಪಾನ ಕೋಟೆ ಕಾಣೆ

ದ್ಯಾವಮ್ಮಗೆ ಸಣ್ಣ ನೂಲಿನ ಮಾಲೆ ಕಾಣೆ
ಹತ್ತಿ ಹಣ್ಣಂಗೆ ತುಂಬಿದ ತಾಲಿ ಪೂರ
ಸುತ್ತ ಕುಳಿತವರೆ ಶರಣರು
ಸರ್ಪಾನ ಕೋಟೆ ಕಾಣೆ
ದ್ಯಾವಮ್ಮಗೆ ಸಣ್ಣ ನೂಲಿನ ಮಾಲೆ ಕಾಣೆ
ಸುತ್ತ ಕೂತವರೆ ಶರಣರು ಶಿವಬಸವರು
ಗಂಧ ಸೇರೂವ ಕೊಡುಬಾರೆ
ಸರ್ಪಾನ ಕೋಟೆ ಕಾಣೆ
ದ್ಯಾವಮ್ಮಗೆ ಸಣ್ಣ ನೂಲಿನ ಮಾಲೆ ಕಾಣೆ
ಚಿಕ್ಕೊಳೆ ದೊಡ್ಡೋಳೆ
ಚಿಕ್ಕರಸಿ ಕೊಟ್ಟ ಕುದುರೇಯ
ಸರ್ಪಾನ ಕೋಟೆ ಕಾಣೆ
ದ್ಯಾವಮ್ಮಗೆ ಸಣ್ಣ ನೂಲಿನ ಮಾಲೆ ಕಾಣೆ
ದೊಡ್ಡಂಚಿನ ಸೀರೆ ಕಣ ಕಾಲಿಗೆ ಅರಿಶಿನ
ಸರ್ಪಾನ ಕೋಟೆ ಕಾಣೆ
ದ್ಯಾವಮ್ಮಗೆ ಸಣ್ಣ ನೂಲಿನ ಮಾಲೆ ಕಾಣೆ
ದ್ಯಾವಮ್ಮ ಮರತೋರ ಮನಿಯ ಮುರಿದಾಳೆ
ದ್ಯಾವಮ್ಮ ಮರತೋರ ಮನಿಯ ಮುರಿದಾಳೆ
ದ್ಯಾವಮ್ಮ ತಿಂಗಳ ಬಾಣತಿ ಬರಿದೇವಿ
ತಿಂಗಳ ಬಾಣತನಕ್ಕೆ ನೀರಿಲ್ಲ
ತೆಂಗಿನ ಮರಕೆ ಹದವಿಲ್ಲೊ
ಬಾಳೆಯ ಮರಕೆ ತಿಂಗಳಿಂದ ನೀರಿಲ್ಲ
ತಿಂಗಳ ಬಾಣತಿ ಬರಿದೇವಿ.
ಹಳಸಿನ ಮರಕೆ ನೀರಿಲ್ಲ ವರುಷಾದ್ರು ನೀರಿಲ್ಲ
ವರ್ಷದ ಬಾಣತಿ ಬರಿದೇವಿ
ವರ್ಷದ ಬಾಣತನಕೆ ನೀರಿಲ್ಲ
ಹಳಸಿನ ಮರಕ್ಕೆ ಹದವಿಲ್ಲೋ
ಮಾವಬೈತಾನೆ ಮನಿಗೋಗೆ
ದೇವಮ್ಮ ನಿಮ್ಮತ್ತೆ ಬೈತಾಳೆ ಮನಿಗೋಗೆ.

ದೀಪಾವಳಿ ಹಬ್ಬವನ್ನು ಐಕನಹಳ್ಳಿಯಲ್ಲಿ ಮೂರು ದಿನಗಳ ಕಾಲ ಅದ್ದೂರಿಯಾಗಿ ಆಚರಿಸುತ್ತಾರೆ. ಹಬ್ಬಕ್ಕೆ ಸಾರುವ ರೀತಿ, ಬಾಳೆಯ ಚಪ್ಪರ ಹಾಕಿ, ಹೂವನ್ನು ತಂದು ಐಕನಹಳ್ಳಿಯಮ್ಮನನ್ನು ಪೂಜಿಸುವ ರೀತಿಯನ್ನು ವರ್ಣಿಸಿದ್ದಾರೆ. ಕಂಬದಲ್ಲಿ ಜ್ಯೋತಿ

ಉರಿಯುವುದನ್ನು ಕಂಡು ಸಂಭ್ರಮಿಸಿದ್ದಾರೆ. ಸಾಲು ತೆಂಗಿನ ಮರದ ತೆಂಗಿನ ಕಾಯಿ ತಂದು ಪೂಜೆ ಮಾಡಿ, ಇಡುಗಾಯಿ ಹಾಕಿ, ಎಳೆನೀರಿನ ಕೋಡಿ ಹರಿಸುವ ಭಕ್ತರ ಭಕ್ತಿಯ ಪರಾಕಾಷ್ಠತೆಯನ್ನು ಪರಿಚಯಿಸಿದ್ದಾರೆ. ಜೋಡಡ್ಡೆಯ ಮೇಲೆ ಮೆರೆಯುವ ಐಕನಹಳ್ಳಿಯಮ್ಮನಿಗೆ ಭಕ್ತರು ಕೈ ಮುಗಿದು ಪುನೀತರಾಗುತ್ತಾರೆ. ಕುಂಕುಮದ ಬಣ್ಣ ಸೀರೆ ಹುಟ್ಟು, ತನ್ನ ಮಕ್ಕಳಾದ ಚಿಕ್ಕಯ್ಯ, ದೊಡ್ಡಯ್ಯನು ತುಳಿಯುವ ಕೆಂಡ ಕೊಂಡ ಹಾಗು, ಅವರ ಕುಣಿತವನ್ನು ನೋಡಿ ಸಂತೃಪ್ತಳಾಗುವ ಕ್ಷಣವನ್ನು ವಿವರಿಸಿದ್ದಾರೆ.

೨

ಹಿಡಿ ಅಕ್ಕಿ ಮಡಿಜೋತಾರ
ದ್ಯಾವಮ್ಮಗೆ ಜಡಿಯೆಲ್ಲ ರವುರೋತರ
ಗೋರಿಕಳೆಲ್ಲ ಈರುಮುರಿ ಈರಣ್ಣ
ಊರಾಡಿ ಗುಡಿಗೆ ಹೋಗುವಾಗ
ಹಬ್ಬಕ್ಕೆ ಹೋಗುತೀನಿ ದ್ಯಾವಮ್ಮ
ತಾಯಿ ದ್ಯಾವಮ್ಮನ ಶಿವಪೂಜೆ
ಹಿಡಿ ಅಕ್ಕಿ ಮಡಿ ಜೋತಾರ
ದ್ಯಾವಮ್ಮಗೆ ಜಡಿಯೆಲ್ಲ ರವುರೇತರ
ಹಬ್ಬಕ್ಕೆ ಸಾರ್‍ಯಾರಲ್ಲೆ
ಈ ಊರ ಅಣ್ಣೈದಿರು ಬಾಳೆ ಚಪ್ಪರೂಡಿ
ದೇವರ ಮಾಡ್ಯಾರಲ್ಲೆ
ಅರಮನೆಗೆ ಜೋಜೋಕಟ್ಟಾರೆ ಹೊರಗೆ
ಕುದುರಿಗೆ ಮೇಲ್ಬುರಿ ಕುಸಲೆ ಸುಮಾಗಿರಿ
ಸ್ವಾಮಿ ಬಂದಾನೆ ಗುಡಿಗೆ
ಹಬ್ಬಕ್ಕೆ ಸಾರ್‍ಯಾರಲ್ಲೆ
ಈ ಊರ ಅಣ್ಣೈದಿರು ಬಾಳೆ ಚಪ್ಪರೂಡಿ
ದೇವರ ಮಾಡ್ಯಾರಲ್ಲೆ
ಹೂವಾವೆ ತುಳಸಿ ಕೆರೆಯಲ್ಲಿ
ಹೂವಾವೆ ತುಳಸಿ ಕೆರೆಯಲ್ಲಿ
ಹೂವರಳಿ ಬಾಯೆ ಬಿಡುತಾವೆ
ಹಬ್ಬಕ್ಕೆ ಸಾರ್‍ಯಾರಲ್ಲೆ
ಈ ಊರ ಅಣ್ಣೈದಿರು ಬಾಳೆ ಚಪ್ಪರೂಡಿ
ದೇವರ ಮಾಡ್ಯಾರಲ್ಲೆ
ದುಂಡಿಗೆ ಮಲ್ಲಿಗೆಸಾರ ಕಂಡಿರಿ

ದ್ಯಾವಮ್ಮನ ಹೊರಮೈಯ್ಯ
ಕಂಬದಲ್ಲಿ ಜ್ಯೋತಿ ಉರಿಯೋದ
ಸಾಲು ತೆಂಗಿನ ಮರ
ಕೊಂಬಾನೆ ಕೊಂಟೆಗೆ ಎಳೆಗಾಯಿ
ಹಬ್ಬಕ್ಕೆ ಸಾರ್‍ಯಾರಲ್ಲೆ
ಈ ಊರ ಅಣ್ಣೈದಿರು ಬಾಳೆ ಚಪ್ಪರೂಡಿ
ದೇವರ ಮಾಡ್ಯಾರಲ್ಲೆ
ಕೊಂಬೆ ಕೊಂಬೆಗೆ ಎಳೆಗಾಯಿ ದ್ಯಾವಮ್ಮ
ಹಬ್ಬದೊತ್ತಿಗೆ ಹಣ್ಣುಗಾಯಿ
ಇಡುಗಾಯಿ ಇಡುಸೇವು
ಎಳೆನೀರು ಕೋಡಿ ಹರಿಸೇವು
ನಾಕೂರ ಮೇಲೆ ಯಾಕು ಬಂದೆ ದ್ಯಾವಮ್ಮ
ನಾಕೂರರ ಕಣ್ಣು ನಿನ ಮ್ಯಾಲೆ
ಹಬ್ಬಕ್ಕೆ ಸಾರ್‍ಯಾರಲ್ಲೆ
ಈ ಊರ ಅಣ್ಣೈದಿರು ಬಾಳೆ ಚಪ್ಪರೂಡಿ
ದೇವರ ಮಾಡ್ಯಾರಲ್ಲೆ
ಕಾಡು ಮಲ್ಲಿಗೆ ಹೂವ ಜೋಡಿಸಿ ಮಾಲೆಕಟ್ಟಿ
ಜೋಡಡ್ಡೆ ಮೇಲೆ ಮೆರಿಯೋಳೆ
ಹಬ್ಬಕ್ಕೆ ಸಾರ್‍ಯಾರಲ್ಲೆ
ಈ ಊರ ಅಣ್ಣೈದಿರು ಬಾಳೆ ಚಪ್ಪರೂಡಿ
ದೇವರ ಮಾಡ್ಯಾರಲ್ಲೆ
ಜೊಡಡ್ಡೆ ಮೇಲೆ ಮೆರಿಯೋ ದೇವಮ್ಮಗೆ
ಜೋಡಿಸಿ ಕೈಯ್ಯ ಮುಗಿದೇವು
ಜೋಡಿಸಿ ಕೈಯ್ಯ ಮುಗಿದೇವು ಅನ್ನೋವತ್ತಿಗೆ
ಅಲ್ಲಿಂದ ಮಾಲೆ ಕಳಿಸ್ಯಾರೆ
ಹಬ್ಬಕ್ಕೆ ಸಾರ್‍ಯಾರಲ್ಲೆ
ಈ ಊರ ಅಣ್ಣೈದಿರು ಬಾಳೆ ಚಪ್ಪರೂಡಿ
ದೇವರ ಮಾಡ್ಯಾರಲ್ಲೆ
ಎಲ್ಲಿಂದ ಬರುವರು ಏಳು ಕೋಟಿ ಜಂಗುಮರು
ಮುಂದೆ ಬರುವೋರು ನಮ್ಮ ಗುರುವು
ನಮ್ಮ ಗುರುವಿನ ಪಾದಾಕೆ
ಇಲ್ಲಿಂದ ಕೈಯ್ಯ ಮುಗಿದೇವು

ಉತ್ತ ಹೊಲದಲ್ಲಿ ಅಳಿಯೋರ್‍ಯಾರೆ
ಕುಂಕುಮದ ಸೀರೆ ನರಿಗೋಳೆ
ಕುಂಕುಮದ ಸೀರೆ ನರಿಗೋಳೆ ದ್ಯಾವಮ್ಮ
ಕುಂತು ನೋಡ್ಯಾಳೆ ಕುಣುತಾವ.

ಐಕನಹಳ್ಳಿಯಮ್ಮನಿಗೆ ದೊಡ್ಡಯ್ಯ, ಚಿಕ್ಕಯ್ಯ ಇಬ್ಬರು ಮಕ್ಕಳು. ಆಕೆ ತನ್ನ ಕಿರಿಯ ಮಗ ಚಿಕ್ಕಯ್ಯನನ್ನು ನೋಡಿಕೊಳ್ಳುವ ರೀತಿಯನ್ನು ಜನಪದರು ವರ್ಣಿಸಿದ್ದಾರೆ.

೩

ಸರ್ಪಾನ ಕೋಟೆ ಕಾಣೆ
ದ್ಯಾವಮ್ಮಗೆ ಸಣ್ಣನೂಲಿನ ಮಾಲೆ ಕಾಣೆ
ಎಲ್ಲಿಗೆ ಹೋಗಿದ್ದೊ ಎತಲಾಗಿ ಹೋಗಿದ್ದೊ
ಪಲ್ಲಕ್ಕಿ ರಾಯನ ಕಿರಿತಮ್ಮ
ಸರ್ಪಾನ ಕೋಟೆ ಕಾಣೆ
ದ್ಯಾವಮ್ಮಗೆ ಸಣ್ಣ ನೂಲಿನ ಮಾಲೆ ಕಾಣೆ
ಪಲ್ಲಕಿ ರಾಯನ ಕಿರಿತಮ್ಮ ಚಿಕ್ಕಯ್ಯ
ಮಲ್ಲಿಗೆ ಮಂಚ ಹೊರಗಿದ್ದ
ಜಡೆಯ ಜಂಗುಮ ಜತೆಯಲ್ಲೆ ಹೊರಟಾನೆ
ಮಾಯಾ ಸಮುದ್ರ ಮಗುದಾವ
ಮಾಯಾ ಸಮುದ್ರ ಮಗದ ಬೇಲಿಯ ಮೇಲೆ ಹೂ ಕಂಡು
ಜಡಿಯ ವದಿರ್‍ಯಾನೆ, ಕಾಕದ ಬಂಟ ಕೆರೆಯ ಕೋಡಿಲೊಂಟ
ಹುಲ್ಲೂರು ಸೀಮೆ ದೊರಿ ಮಗ
ಹುಲ್ಲೂರು ಸೀಮೆ ದೊರಿ ಮಗ ಕಣವೆ ಬಾಗಿಲಿಗೆ ಕದವಾದೊ.

ಐಕನಹಳ್ಳಿಯಮ್ಮನಿಗೆ ಹೂವು ಎಂದರೆ ಪಂಚಪ್ರಾಣ. ಚಿಕ್ಕ ಮಕ್ಕಳು ತುಳಸಿ ಮತ್ತು ಐಕನಹಳ್ಳಿಯ ಕೆರೆಯ ಬಳಿ ಬೆಳೆದಿರುವ ಹೂ ತಂದು ಪೂಜಿಸಬೇಕು ಎಂಬ ಅಶಯವನ್ನು ಈ ರೀತಿ ವ್ಯಕ್ತಪಡಿಸಿದ್ದಾರೆ.

೪

ಹೂವಿಲ್ಲ ಅಂತ
ದೇವರ ಪೂಜೆ ಬಿಟ್ಟು
ಹೂವಾವೆ ಐಕನಹಳ್ಳಿ ಜಲದಲ್ಲಿ
ಐಕನಹಳ್ಳಿ ದ್ಯಾವಮ್ಮ
ಒಕ್ಕಳ ಕುದುರೆ ಚಕ್ಕೆದುರ ಬಿಸಾಲ

ಚಿಕ್ಕ ಮಕ್ಕಳೋಗಿ ಕೊಯ್ದ ತನ್ನಿ
ಚಿಕ್ಕ ಮಕ್ಕಳೋಗಿ ಕೊಯ್ದ ತನ್ನಿ ದ್ಯಾವಮ್ಮನ
ಹೂವಿಲ್ಲ ಅಂತ ದೇವರ ಪೂಜೆ ಬಿಟ್ಟು
ಹೂವಾವೆ ಐಕನಹಳ್ಳಿ ಜಲದಲ್ಲಿ
ಹೂವಾವೆ ಐಕನಹಳ್ಳಿ ಜಲದಲ್ಲಿ ದ್ಯಾವಮ್ಮ
ಹೂವರಳಿ ಬಾಯ ಬಿಡುತಾವೆ
ಹೂವರಳಿ ಬಾಯ ಬಿಡುತಾವೆ ದ್ಯಾವಮ್ಮನ
ಗಂಡು ಮಕ್ಕಳೋಗಿ ಕೊಯ್ದು ತನ್ನಿ

ಐಕನಹಳ್ಳಿಯಮ್ಮನಿಗೆ ಪ್ರಿಯವಾದ ಸೀರೆಯನ್ನು ಭಕ್ತರು ನರಸೀಪುರದಿಂದ ತಂದು ಕೊಟ್ಟಾಗ, ಮಡಿವಾಳೆ ಅದನ್ನು ದೇವರಿಗೆ ಧರಿಸಿ ಮೆರಸಬೇಕೆಂಬ ಪದ್ಧತಿಯನ್ನು ಹಾಡಿನಲ್ಲಿ ಪರಿಚಯಿಸಿದ್ದಾರೆ. ಬಂಗಾರವನ್ನು ಕೊಡು ಎಂದು ವಿನಮ್ರವಾಗಿ ಭಕ್ತರು ಬೇಡಿಕೊಳ್ಳುವುದು ಇದೆ.

೫

ಸಾವಕ್ಕಿ ಸಣ್ಣ ಸೀರೆ ದೇವಮ್ಮಗೆ ಮುಂದೆರಡು ಜೀನ ಕುದುರೆ
ದ್ಯಾವಮ್ಮ ಅತ್ಯಾಳೆ ಅಳ್ಳಿಮರವ
ಅತ್ತಿ ನೊಡ್ಯಾಳೆ ಪರುಸೇಯ
ಸಾವಕ್ಕಿ ಸಣ್ಣ ಸೀರೆ ದೇವಮ್ಮಗೆ ಮುಂದೆರಡು ಜೀನ ಕುದುರೆ
ದ್ಯಾವಮನ್ನೋಳು ಏನುಟ್ಟು ಮೆರೆದಾಳೆ
ಸಾವಕ್ಕಿ ಸಣ್ಣ ಸೀರೆ ದೇವಮ್ಮಗೆ ಮುಂದೆರಡು ಜೀನ ಕುದುರೆ
ಸಾಮ್ರಾಣಿ ಗಮ್ಮಂದೊ ಯಾರುಂಡರಮ್ಮ ಮನೆಯಲ್ಲಿ
ಯಾರುಂಡರಮ್ಮ ದ್ಯಾವಮ್ಮ ಮನೆಯಲ್ಲಿ
ತಾವುಂಡರು ಬಾಳೆ ಎಲೆಯಲ್ಲಿ
ಸಾವಕ್ಕಿ ಸಣ್ಣ ಸೀರೆ ದೇವಮ್ಮಗೆ ಮುಂದೆರಡು ಜೀನ ಕುದುರೆ
ಪುಟ್ಟಾಣಿ ಮೊಗದೊಳು ಬೊಟ್ಟು ಗಂದಾದ ಹಣೆಯೋಳ
ಸಾವಕ್ಕಿ ಸಣ್ಣ ಸೀರೆ ದೇವಮ್ಮಗೆ ಮುಂದೆರಡು ಜೀನ ಕುದುರೆ
ಬೊಟ್ಟು ಗಂದಾದ ಹಣೆಯೋಳೆ ದ್ಯಾವಮ್ಮಗೆ
ಪೋರ ದುಂಡಿಗೆ ಮಲ್ಲಿಗೆ ಸ್ವಾರ
ಕಂಡೀನಿ ದ್ಯಾವಮ್ಮನ ಒಲುಮೇಯ
ಸಾವಕ್ಕಿ ಸಣ್ಣ ಸೀರೆ ದೇವಮ್ಮಗೆ ಮುಂದೆರಡು ಜೀನ ಕುದುರೆ
ಕಂಡಿನಿ ದ್ಯಾವಮ್ಮನ ಪರಸೇಯ ಐಕನಹಳ್ಳಿ ಮರತೋರ ಮನೆಯ ಮುರಿದೇನು
ನರಸೀಪುರದಿಂದ ತರಿಸ್ಯಾರೆ ಬಣ್ಣಾವ
ತಾಯಿ ದ್ಯಾವಮ್ಮನ ಮುಸಡೀಗೆ

ಸಾವಕ್ಕಿ ಸಣ್ಣ ಸೀರೆ ದೇವಮ್ಮಗೆ ಮುಂದೆರಡು ಜೀನ ಕುದುರೆ
ನರಸೀಪುರದಿಂದ ತರಿಸ್ಯಾರೆ ಬಣ್ಣಾವ
ಮುಚ್ಚಿಕೊಂಡೋಗೆ ಮಡಿವಾಳೆ
ಮುಚ್ಚಿಕೊಂಡೋಗೆ ಮಡಿವಾಳೆ ಆ ಬಣ್ಣ
ನಂದಿ ಮರದಡಿಯಣ್ಣ ಮಡಿ ಮಾಡಿ
ಮುಚ್ಚಿಕೊಂಡೋಗೊ ಮಡಿವಾಳೆ ಆ ಬಣ್ಣ ದೇವಮ್ಮ
ಧರಿಸಿ ಮೆರೆದಾಳೆ, ದೇವಮ್ಮ ಹುಟ್ಟು ಮೆರೆದಾಳೆ ಆ ಬಣ್ಣ
ಕರಸಿ ನೋಡ್ಯಾರೆ ದೊರೆಗೋಳು,
ಸಾವಕ್ಕಿ ಸಣ್ಣ ಸೀರೆ ದೇವಮ್ಮಗೆ ಮುಂದೆರಡು ಜೀನ ಕುದುರೆ
ನೋಡಿದರೆ ನಂದರು ಚಿಕ್ಕಯ್ಯ ಎಳೆಸಿ ನೋಡಿದರೆ ಪರಿಬಾಳೆ
ದ್ಯಾವಮ್ಮನ್ನೋಳು ಏನುಟ್ಟು ಮೆರೆದಾಳೆ
ಕಾಗುಟ್ಟು ಕರುದ ಮುಸಗಿಟ್ಟು
ಸಾವಕ್ಕಿ ಸಣ್ಣ ಸೀರೆ ದೇವಮ್ಮಗೆ ಮುಂದೆರಡು ಜೀನ ಕುದುರೆ
ಹಾಲರವಿ ಕೊಡೇ ಮೊಲೆಬಾಗುವ ಕೊಡೆ
ಬಂಗಾರ ಕೊಡೆ ಮನಿತುಂಬ
ಸಾವಕ್ಕಿ ಸಣ್ಣ ಸೀರೆ ದೇವಮ್ಮಗೆ ಮುಂದೆರಡು ಜೀನ ಕುದುರೆ
ಬೆಳ್ಳಿ ತಲಿದೋಳೇ ಚೆಲ್ಲಿದ ನರಿಗೋಳ ಕಲ್ಲು ಮೇಲೆ ಕಾಯ ತೊಳಿಯೋಳೆ
ಬಂಗಾರ ಕೊಡೆ ಮನಿತುಂಬ.

ಆ) ಚಿಕ್ಕಯ್ಯ ದೊಡ್ಡಯ್ಯನ ಹಾಡುಗಳು

ತುಳಸಿ ಗ್ರಾಮದಲ್ಲಿ ನೆಲೆಸಿದ ಚಿಕ್ಕಯ್ಯ, ದೊಡ್ಡಯ್ಯರು ಐಕನಹಳ್ಳಿಯಮ್ಮನ ಸನ್ನಿಧಿಗೆ ಬಂದಾಗ ನಿನ್ನ ಮಕ್ಕಳಿಗೆ ಪಟ್ಟವೇನೆ ಎಂದು ಪ್ರಶ್ನಿಸುತ್ತ ಮೆರೆಸುತ್ತಾರೆ. ಕೆಂಪು ಮುಖದ ಚಿಕ್ಕಯ್ಯನು ಕುಣಿಯುವ ಸೊಬಗನ್ನು ವರ್ಣಿಸುತ್ತಾರೆ.

೧

ಜಾತಿಯ ತೋಳಿ ನೋನೆ ನೀತಿಂದ ಬರುವೋನೆ
ಜ್ಯೋತಿಯ ಹೂವ ಮುಡಕೊಂಡು
ಚಿಕ್ಕಯ್ಯ ದೊಡ್ಡಯ್ಯ ಜಂಬೂರ ಜಾತಾರದೊಡನೆ ಬರುವೋನೇ
ದೀಪ ತಂದ ಮೇಲೆ ಪಾದ ತೊಳದ ಮೇಲೆ
ಬಾಗಿಲಿಗೆ ನೀರು ಹರಿದಾವೆ
ಬಾಗಿಲಿಗೆ ನೀರು ಚಿಕ್ಕಯ್ಯ ದೊಡ್ಡಯ್ಯ
ಪಟ್ಟಾಣೆ ತರಿಸೀವಿ ಪುಟ್ಟಾಣಿ ಮಗದೋಳ
ಐಕನಹಳ್ಳಿ ಹೊನ್ನಾರಗಿತ್ತಿ ಪಟ್ಟವೇನೆ ನಿನ್ನ ಮಗದೀರಿಗೆ

ಐಕನಹಳ್ಳಿ ಹೊನ್ನಾರಗಿತ್ತಿ ಪಟ್ಟವೇನೆ ನಿನ್ನ ಮಗದೀರಿಗೆ
ಊರಿಂದ ಮೂಡಲಾಗಿ ಹುತ್ತ ಮೂಡಲಾಗಿ
ಹುತ್ತದ ಮೇಲೆ ಹುಲಿ ಮಲಗಿ
ಹುತ್ತದ ಮೇಲೆ ಹುಲಿ ಮಲಗಿ
ಭೀಮರಾಜ ಪಟ್ಟಣದಲ್ಲಿ ಚೆಟ್ಟನೆಂದು
ಚಿಕ್ಕಯ್ಯ ದೊಡ್ಡಯ್ಯನ ಲೊಟಿಗೆ ಮುರುದಾವೆ
ಅಳಸಿನ ಮರದೊಡೆಯ ನಿಲ್ಲಿಸೇಯ ಕುದುರೇಯ
ಕರಸೇಯ ನಿನ್ನ ಕುಲದೋರ
ಕರಸೇಯ ನಿನ್ನ ಕುಲದೋರ
ಚಿಕ್ಕಯ್ಯ ದೊಡ್ಡಯ್ಯನ ಮರಿಬ್ಯಾಡ
ಅಂಕದ ಆಲದ ಮರ ಬಿಂಕದ ಗೋಣಿ ಮರ,
ಕೆಂಪಣ್ಣಾ ಹಾಕಿದ ಕರಿಬೇವು
ಕೆಂಪಣ್ಣಾ ಹಾಕಿದ ಕರಿಬೇವಿನ ಮರದಡಿ
ಕೆಂಪಾನೆ ಸೋಮಾ ಕುಣಿದಾನೆ.

ಚಿಕ್ಕಯ್ಯನನ್ನು ಒಲಿಸಿಕೊಳ್ಳುವುದು ಅಷ್ಟು ಸುಲಭದ ಮಾತಲ್ಲ. ಅವನ ಸ್ವಭಾವ ಹಾಗು ಭಕ್ತರ ಭಕ್ತಿಭಾವಗಳನ್ನು ವಿಶ್ಲೇಷಿಸಿದ್ದಾರೆ. ವೀರಭದ್ರಸ್ವಾಮಿ ಗುಡಿಯಲ್ಲಿ ಜ್ಯೋತಿ ಉರಿಯುವಾಗ ಚಿಕ್ಕಯ್ಯ ನೀನು ಯಾರಿಗೆ ಒಲಿಯುತ್ತೀಯ ಎಂದು ಪರಿಪರಿಯಾಗಿ ಕೇಳಿಕೊಳ್ಳುತ್ತಾರೆ.

೨

ಯಾರೀಗೆ ಒಲಿದಯೋ ಸ್ವಾಮಿ ನೀ ಯಾರೀಗೇ ನಲಿದಿಯೋ
ಸಣ್ಣ ಮರಳಲಿ ಗೆಜ್ಜೆ ಸುರುದಾಗ ಯಾರೀಗೆ ಒಲದಿಯೋ
ಸಣ್ಣ ಮರಳಲಿ ಗೆಜ್ಜೆ ಸುರುದಾಗ ಸ್ವಾಮಿ ಯಾರೀಗೆ ಒಲದಿಯೋ
ಊರೆಲ್ಲ ಹೂವಿನ ಪೂಜೆ ಬಿದ್ದೊ
ಸಣ್ಣ ಮರಳಲಿ ಗೆಜ್ಜೆ ಸುರುದಾಗ ಸ್ವಾಮಿ ಯಾರೀಗೆ ಒಲದಿಯೋ
ಹೂವಾವೆ ತುಳಸಿ ಕೆರೆಯಲ್ಲಿ ಸ್ವಾಮಿ ಯಾರೀಗೆ ಒಲದಿಯೋ
ಹೂವಾವೆ ತುಳಸಿ ಕೆರೆಯ ಏರಿಯ ಮ್ಯಾಲೆ
ಸಣ್ಣ ಮರಳಲಿ ಗೆಜ್ಜೆ ಸುರುದಾಗ ಸ್ವಾಮಿ ಯಾರೀಗೆ ಒಲದಿಯೋ
ಹೂವರಳಿ ಬಾಯ ಬಿಡುತಾವೆ ಸ್ವಾಮಿ ಯಾರೀಗೆ ಒಲದಿಯೋ
ಯಾರೀಗೆ ಹೂವರಳಿ ಬಾಯ ಬಿಡುತಾವೆ ಸ್ವಾಮಿ ಯಾರೀಗೆ ಒಲದಿಯೋ
ಸಣ್ಣ ಗೆಜ್ಜೆ ಸುರುದಾಗ ಯಾರೀಗೆ ಒಲಿದಿಯೋ
ಕಂಡುಗ ಅಕ್ಕಿಯ ಪೋರ ದುಂಡು ಮಲ್ಲಿಗೆ ಸ್ವಾರ
ಕಂಡೆರಚಿ ಕೈಯನ ಒಳಮೈಯ್ಯ ಸ್ವಾಮಿ ಯಾರಿಗೆ ಒಲದಿಯೋ

ಕಂಡೆರಚಿ ಕೈಯನ ಒಳಮೈಯ್ಯ ಸ್ವಾಮಿ ಯಾರಿಗೆ ಒಲದಿಯೋ
ವೀರಭದ್ರಪ್ಪ ಸ್ವಾಮಿ ಗುಡಿಯಲ್ಲಿ ಜ್ಯೋತಿ ಉರಿಯೋದ
ಐಕನಹಳ್ಳಿ ಚಂದ ಅರಳಳ್ಳಿ ಮರ ಚಂದ
ಸಣ್ಣ ಮರಳಲಿ ಗೆಜ್ಜೆ ಸುರುದಾಗ ಸ್ವಾಮಿ ಯಾರೀಗೆ ಒಲದಿಯೋ
ಅಲ್ಲಿ ದೇವಮ್ಮನ ಗುಡಿ ಚಂದ ಸ್ವಾಮಿ ಯಾರಿಗೆ ಒಲದಿಯೋ
ಅಲ್ಲಿ ದೇವಮ್ಮನ ಗುಡಿ ಚಂದ ಚಿತ್ತಾರ ನ್ಯಾರೆ ಕಡಿದೋರು
ಚಿತ್ತಾರ ನ್ಯಾರೆ ಕಡದೋರು ಸ್ವಾಮಿ ಯಾರೀಗೇ ಒಲದಿಯೋ
ಚಿತ್ತಾರ ಕಡದೋರು ನಾವಲ್ಲ ತಾವಲ್ಲ
ಸಣ್ಣ ಮರಳಲಿ ಗೆಜ್ಜೆ ಸುರುದಾಗ ಸ್ವಾಮಿ ಯಾರೀಗೆ ಒಲದಿಯೋ
ಹಿಂದಿನ ಕಾಲದ ಹಳಬಾರು ಸ್ವಾಮಿ ಯಾರೀಗೆ ಒಲದಿಯೋ
ಹಿಂದಿನ ಕಾಲದ ಹಳಬಾರ ಹೆಣ್ಣು ಮಕ್ಕಳು
ಸಣ್ಣ ಮರಳಲಿ ಗೆಜ್ಜೆ ಸುರುದಾಗ ಸ್ವಾಮಿ ಯಾರೀಗೆ ಒಲದಿಯೋ
ಕರಿ ಎಮ್ಮೆ ಕೊಟ್ಟು ಕಡಿಸ್ಯಾರೆ
ಸ್ವಾಮಿ ಯಾರೀಗೆ ಒಲದಿಯೊ
ಬಾಯಿ ಬೀಗದೋರು ಬಂದು ಬಾಗಿಲಲ್ಲಿ ನಿಂದವರೆ
ಸಣ್ಣ ಮರಳಲಿ ಗೆಜ್ಜೆ ಸುರುದಾಗ ಸ್ವಾಮಿ ಯಾರೀಗೆ ಒಲದಿಯೋ
ಎಷ್ಟೊತ್ತು ನಿನ್ನ ಐಬೋಗ ಸ್ವಾಮಿ ಯಾರೀಗೆ ಒಲದಿಯೋ
ಯಾರೀಗೆ ಒಲಿದಿಯೋ ಸ್ವಾಮಿ ನೀ ಯಾರೀಗೇ ನಲಿದೀಯೋ
ಸಣ್ಣ ಮರಳಲಿ ಗೆಜ್ಜೆ ಸುರುದಾಗ ಯಾರೀಗೆ ಒಲದಿಯೋ.

ದೀಪಾವಳಿ ಹಬ್ಬದಲ್ಲಿ ಚಿಕ್ಕಯ್ಯ ಮತ್ತು ದೊಡ್ಡಯ್ಯ ತನ್ನ ತಾಯಿ ಐಕನಹಳ್ಳಿಯಮ್ಮನ ಸನ್ನಿಧಿಗೆ ಬಂದಾಗ ಸಂಭ್ರಮದಿಂದ ಹಲವು ರೀತಿಯಲ್ಲಿ ಹೊಗಳುತ್ತ, ರೇಗಿಸುತ್ತ ಹಾಡಿ ಭಕ್ತಿ ಸಮೂಹ ನಲಿಯುತ್ತದೆ. ಚಿಕ್ಕಯ್ಯನ ಸ್ವಭಾವ ವಿಶಿಷ್ಟವಾದುದು. ದೊಡ್ಡಯ್ಯನ ಸ್ವಭಾವವೇ ಬೇರೆ ರೀತಿಯದು. ಇವರಿಬ್ಬರನ್ನು ಊರಾಡಿಸುವಾಗ ಹಾಡುವ ಹಾಡುಗಳು ಗಮನ ಸೆಳೆಯುತ್ತವೆ.

೩

ಚಿಕ್ಕೋನು ದೊಡ್ಡನೇ ಚಿಕ್ಕರಸಿ ಕೊಟ್ಟ ಕುದರೇಯ
ಮರದಂಡಿ ಗಿಳಿ ಕೂಗ್ಯಾವೆ, ಚಿಕ್ಕಯ್ಯನ ನರಿಗೆಲ್ಲ ನವಿಲ್ಯಾಡ್ಯಾವೆ
ಯಾಕು ಬಂದೋ ಚಿಕ್ಕಯ್ಯ ನಾಕೂರರ ಕಣ್ಣು ನಿನ ಮ್ಯಾಲೆ
ಮರದಂಡಿ ಗಿಳಿ ಕೂಗ್ಯಾವೆ, ಚಿಕ್ಕಯ್ಯನ ನರಿಗೆಲ್ಲ ನವಿಲ್ಯಾಡ್ಯಾವೆ
ನಾಕೂರರ ಕಣ್ಣು ನಿನ ಮ್ಯಾಲೆ ಚಿಕ್ಕಯ್ಯ ಮೈಯತುಂಬ
ಮರದಂಡಿ ಗಿಳಿ ಕೂಗ್ಯಾವೆ, ಚಿಕ್ಕಯ್ಯನ ನರಿಗೆಲ್ಲ ನವಿಲ್ಯಾಡ್ಯಾವೆ
ಮರದಂಡಿ ಗಿಳಿ ಕೂಗ್ಯಾವೆ, ಚಿಕ್ಕಯ್ಯನ ನರಿಗೆಲ್ಲ ನವಿಲ್ಯಾಡ್ಯಾವೆ

ನಾಕೂರರ ಕಣ್ಣು ನಿನ ಮ್ಯಾಲೆ ಚಿಕ್ಕಯ್ಯ ಮೈಯತುಂಬ
ಮರದಂಡಿ ಗಿಳಿ ಕೂಗ್ಯಾವೆ, ಚಿಕ್ಕಯ್ಯನ ನರಿಗೆಲ್ಲ ನವಿಲ್ಯಾಡ್ಯಾವೆ
ಚಿಕ್ಕೋನು ದೊಡ್ಡನೇ ಚಿಕ್ಕರಸಿ ಕೊಟ್ಟ ಕುದುರೇಯ
ಚಿಕ್ಕರಸಿ ಕೊಟ್ಟ ಕುದರೆ ಮೇಲೆ ಕೂತುಕೊಂಡು
ದೊಡ್ಡಯ್ಯ ದಾಳಿ ಹೊರಟಾನೆ
ಮರದಂಡಿ ಗಿಳಿ ಕೂಗ್ಯಾವೆ, ಚಿಕ್ಕಯ್ಯನ ನರಿಗೆಲ್ಲ ನವಿಲ್ಯಾಡ್ಯಾವೆ
ಬನ್ನಿ ಬಂದೋಗಿ ಚಿಕ್ಕಯ್ಯ ನಮ್ಮ ಮನೆತನಕ
ಮರದಂಡಿ ಗಿಳಿ ಕೂಗ್ಯಾವೆ, ಚಿಕ್ಕಯ್ಯನ ನರಿಗೆಲ್ಲ ನವಿಲ್ಯಾಡ್ಯಾವೆ
ಬಡತಾನ ಬಂದಾವೆ ಬಂದೋಗಿ ನಮ್ಮ ಮನೆತನಕ
ಬನ್ನಿ ಚಿಕ್ಕಯ್ಯ ಬಂದೋಗಿ ನಮ್ಮ ಮನೆತನಕ
ಮರದಂಡಿ ಗಿಳಿ ಕೂಗ್ಯವೆ, ಚಿಕ್ಕಯ್ಯನ ನರಿಗೆಲ್ಲ ನವಿಲ್ಯಾಡ್ಯಾವೆ.

೪

ಚೆಲುವಳ್ಳಿ ಚಿಕ್ಕಯ್ಯ ಸುತ್ತಿಬಂದ ಕಣಿವೇಯ
ಕಣಿವೆ ಕೆಳಗಾಲ ಮಲೆನಾಡ
ಕಣಿವೆ ಕೆಳಗಾಲ ಮಲೆನಾಡ ಮುದ್ದಿನ ಮಗಳ
ಮಂಚದ ಸೈವಾಗಿ ಕರೆ ತಂದ
ಒಂದು ಗದ್ದಿಗೆ ಮೇಲೆ ಮೂರು ಜನ ಕೂತುಕೊಂಡು
ಒಬ್ಬರಿಗೊಬ್ಬರು ಮಿಸಿಗ್ಯಾರೆ ಚಿಕ್ಕಯ್ಯ

೫

ಊರಿಗೆ ಮೂಡಲಾಗಿ ಉತ್ತ ಮೂಡಲಾಗಿ
ಉತ್ತದ ಮೇಲೆ ಹುಲಿ ಮಲಗಿ
ಹುತ್ತದ ಮೇಲೆ ಹುಲಿ ಮಲಗಿ
ಭೀಮರಾಜಪಟ್ಟಣದಲ್ಲಿ ಚಿಕ್ಕಯ್ಯ ದೊಡ್ಡಯ್ಯ
ಚೆಟ್ಟನೆಂದು ಲೊಟೆಗೆ ಮುರಿದಾರು

೬

ಎಲ್ಲಿ ಕುಣಿದು ಎಲ್ಲಿ ಮೆರೆದೊ,
ಸ್ವಾಮಿ ನೀನು ಮಲ್ಲಿಗೆ ಹೂವಿನ ವನದೊಳಗೆ
ಬರುವ ಚಿಕ್ಕಯ್ಯನ ಕಾವಿ ಒಳದಾವೆ ಬಿಸಲೀಗೆ
ಎಲ್ಲಿ ಕುಣಿದು ಎಲ್ಲಿ ಮೆರೆದೊ
ಸ್ವಾಮಿ ನೀನು ಮಲ್ಲಿಗೆ ಹೂವಿನ ವನದೊಳಗೆ
ಸ್ವಾಮಿ ನೀನು ಬರುವ ಚಿಕ್ಕಯ್ಯನ ಪಟ್ಟ ಒಳದಾವೆ ಬಿಸಲೀಗೆ

೭

ಏಳಯ್ಯ ಏಳು ಸ್ವಾಮಿ
ಏಳು ಕಳಸದ ಮ್ಯಾಲೆ ಎಷ್ಟೊತ್ತು ಸುಖ ನಿದ್ರೆ
ಏಳಯ್ಯ ಗುಡಿಗೆ ಹೋಗೋಣ
ಬಂದೋಗಿ, ಚಿಕ್ಕಯ್ಯ ಬಂಗಾರದಾಣೆ ಬಡತಾನ
ಏಳಯ್ಯ ಏಳು ಸ್ವಾಮಿ
ಏಳು ಕಳಸದ ಮ್ಯಾಲೆ ಎಷ್ಟೊತ್ತು ಸುಖ ನಿದ್ರೆ
ಮೂಡಲಾಗಿ ಬರುವ ಹೊಳಚಮದ
ಚಿಕ್ಕಯ್ಯನ ಇಳ್ಹೊತ್ತಿನ ಪೂಜೆ ಬಲು ಚಂದ
ಬಾರೋ ಚಿಕ್ಕಯ್ಯ ಊರಾಡಾಕೋಗೋನ
ಸ್ವಾಮಿ ಬಾಗೂರ ನವಿಲೇನು
ಏಳಯ್ಯ ಏಳು ಸ್ವಾಮಿ
ಏಳಯ್ಯ ಊರಾಡಾಕೋಗೋನ.

ಇ) ಗುಡ್ಡರು ಐಕನಹಳ್ಳಿಯಮ್ಮನನ್ನು ಮೆರೆಸುವ ಹಾಡು

ಗುಡ್ಡರು ಹಾಡಿನ ಮೂಲಕ ಐಕನಹಳ್ಳಿಯಮ್ಮನನ್ನು ವಾಲಾಡಿಸಿ ಮೆರೆಸುತ್ತಾರೆ. ಐಕನಹಳ್ಳಿಯಮ್ಮನ ಮಕ್ಕಳಾದ ದೊಡ್ಡಯ್ಯ, ಚಿಕ್ಕಯ್ಯರಿಗೆ ಮೈದುಂಬುತ್ತದೆ. ದೀಪಾವಳಿ ಹಬ್ಬದ ಸಂದರ್ಭದಲ್ಲಿ ಗುಡ್ಡರ ಹಾಡಿನಿಂದ ದೊಡ್ಡಯ್ಯ ಚಿಕ್ಕಯ್ಯರು ಕೆಂಡಕೊಂಡ ತುಳಿದು ಸಂತೃಪ್ತರಾಗುತ್ತಾರೆ. ಕುಣಿದು ಕುಪ್ಪಳಿಸುತ್ತಾರೆ.

೧

ನೀಲಿ ಎಲ್ಲೆ ನೀಲಿ ಎಲ್ಲೆ
ನೀಲಿಕರ ಮಾದೇವಿ ನೀಲಿ ಎಲ್ಲೆ
ಮೂಗೂತಿ ಮುಂಬಾರ ನೀಲಿ ಎಲ್ಲೆ
ಎಡಕಟ್ಟು ಹಿಂಬಾರ ನೀಲಿ ಎಲ್ಲೆ

ನೀಲಿ ಎಲ್ಲೆ ನೀಲಿ ಎಲ್ಲೆ
ನೀಲಿಕರ ಮಾದೇವಿ ನೀಲಿ ಎಲ್ಲೆ
ದೊಡ್ಡಗುಂಡಿನ ಸರ ನೀಲಿ ಎಲ್ಲೆ
ಎದೆ ಭಾರ ಮಾದೇವಿಗೆ ನೀಲಿ ಎಲ್ಲೆ

ನೀಲಿ ಎಲ್ಲೆ ನೀಲಿ ಎಲ್ಲೆ
ನೀಲಿಕರ ಮಾದೇವಿ ನೀಲಿ ಎಲ್ಲೆ
ಪುಟ್ಟ ಪಾದದವಳೆ ನೀಲಿ ಎಲ್ಲೆ
ಮರಿಗಾಳಿಯ ಗಂಡ ನೀಲಿ ಎಲ್ಲೆ

ನೀಲಿ ಎಲ್ಲೆ ನೀಲಿ ಎಲ್ಲೆ
ನೀಲಿಕರ ಮಾದೇವಿ ನೀಲಿ ಎಲ್ಲೆ
ದಾರವತಿ ಪಟ್ಟಣವ ನೀಲಿ ಎಲ್ಲೆ
ನೀರಾಗಿ ಬೆರಸಿದ್ದೆ ನೀಲಿ ಎಲ್ಲೆ

ನೀಲಿ ಎಲ್ಲೆ ನೀಲಿ ಎಲ್ಲೆ
ನೀಲಿಕರ ಮಾದೇವಿ ನೀಲಿ ಎಲ್ಲೆ
ಅಕ್ಕಿ ಹೊಂಬಾಳೆ ನೀಲಿ ಎಲ್ಲೆ
ಅಡಕಟ್ಟೆ ಮಂಡೆ ನೀಲಿ ಎಲ್ಲೆ

ನೀಲಿ ಎಲ್ಲೆ ನೀಲಿ ಎಲ್ಲೆ
ನೀಲಿಕರ ಮಾದೇವಿ ನೀಲಿ ಎಲ್ಲೆ
ಕಿಕ್ಕೇರಿ ತೋಟದ ನೀಲಿ ಎಲ್ಲೆ
ಅಕ್ಕಿಯ ಹೊಂಬಾಳೆ ನೀಲಿ ಎಲ್ಲೆ

ನೀಲಿ ಎಲ್ಲೆ ನೀಲಿ ಎಲ್ಲೆ
ನೀಲಿಕರ ಮಾದೇವಿ ನೀಲಿ ಎಲ್ಲೆ
ಅರೆಗಣ್ಣಿನ ಕಿರುಜಾಣೆ ನೀಲಿ ಎಲ್ಲೆ
ಕಣ್ಣ ತೆರೆದು ನೋಡವ್ವ ನೀಲಿ ಎಲ್ಲೆ

ನೀಲಿ ಎಲ್ಲೆ ನೀಲಿ ಎಲ್ಲೆ
ನೀಲಿಕರ ಮಾದೇವಿ ನೀಲಿ ಎಲ್ಲೆ
ನಾವು ಯಾರ ಕರೆದೇವು ನೀಲಿ ಎಲ್ಲೆ
ನೀನೇನ ಮಾಡುತ್ತೀಯೆ ನೀಲಿ ಎಲ್ಲೆ

ನೀಲಿ ಎಲ್ಲೆ ನೀಲಿ ಎಲ್ಲೆ
ನೀಲಿಕರ ಮಾದೇವಿ ನೀಲಿ ಎಲ್ಲೆ
ಗಂಗೆಯ ದಡದಲ್ಲಿ ನೀಲಿ ಎಲ್ಲೆ
ಲಿಂಗಗದ್ದಿಗೂಡಿ ನೀಲಿ ಎಲ್ಲೆ

ನೀಲಿ ಎಲ್ಲೆ ನೀಲಿ ಎಲ್ಲೆ
ನೀಲಿಕರ ಮಾದೇವಿ ನೀಲಿ ಎಲ್ಲೆ
ಕಾದಕಲ್ಲಿನ ಮೇಲೆ ನೀಲಿ ಎಲ್ಲೆ
ಕಂಚಿನ ನಿಂಬೆ ಹಣ್ಣು ನೀಲಿ ಎಲ್ಲೆ

ನೀಲಿ ಎಲ್ಲೆ ನೀಲಿ ಎಲ್ಲೆ
ನೀಲಿಕರ ಮಾದೇವಿ ನೀಲಿ ಎಲ್ಲೆ

ಬೆಳ್ಳಿ ಬೆತ್ತದ ಕೋಲು ನೀಲಿ ಎಲ್ಲೆ
ಹಣೆಗಂಡಿನಾಸಾರ ನೀಲಿ ಎಲ್ಲೆ
ನೀಲಿ ಎಲ್ಲೆ ನೀಲಿ ಎಲ್ಲೆ
ನೀಲಿಕರ ಮಾದೇವಿ ನೀಲಿ ಎಲ್ಲೆ.

೨

ಎದ್ದು ಬಾರೆ ಎದ್ದು ಬಾರೆ
ರಾಯರ ದೇವಿ ಎದ್ದು ಬಾರೆ
ದೇವರಿಗೆ ಮೂರುಮಾತು ಎದ್ದು ಬಾರೆ
ರಾಯರಿಗೆ ಮೂರುಮಾತು ಎದ್ದು ಬಾರೆ
ಸರದಾರ ಕುದುರೆಗೆ ಎದ್ದು ಬಾರೆ
ಸರದಾರ ದರವಾಸ ಎದ್ದುಬಾರೆ

ಎದ್ದು ಬಾರೆ ಎದ್ದು ಬಾರೆ
ರಾಯರ ದೇವಿ ಎದ್ದು ಬಾರೆ
ವಾಲಾಡಿಗೆ ಹೋಗಿದ್ದೆ ಎದ್ದು ಬಾರೆ
ಅರಳು ಮರಳಾಗಿ ಬಂದೆ ಎದ್ದು ಬಾರೆ
ಹಾಕಿದುದ್ದು ಒಲ್ಲಲ್ಲೆ ಎದ್ದು ಬಾರೆ
ಬಸಿದು ಬೇಳೆ ಸಾರು ಎದ್ದು ಬಾರೆ

ಎದ್ದು ಬಾರೆ ಎದ್ದು ಬಾರೆ
ರಾಯರ ದೇವಿ ಎದ್ದು ಬಾರೆ
ಗಂಗೆನು ದಡದಲ್ಲಿ ಎದ್ದು ಬಾರೆ
ಲಿಂಗ ಗದ್ದುಗೆ ಮಾಡಿ ಎದ್ದು ಬಾರೆ
ನಾವ್ಯಾರ ಕರೆದೇವು ಎದ್ದು ಬಾರೆ
ನೀನ್ಯಾಕೆ ಸುಮ್ಮನಿದ್ದಿ ಎದ್ದು ಬಾರೆ

ಎದ್ದು ಬಾರೆ ಎದ್ದು ಬಾರೆ
ರಾಯರ ದೇವಿ ಎದ್ದು ಬಾರೆ
ದೇವಿ ದೇವಿ ಅನ್ನೋರು ೭೭ ಮಂದಿ ಎದ್ದು ಬಾರೆ
ಲಕ್ಷ್ಮಿ ಲಕ್ಷ್ಮಿ ಅನ್ನೋರು ೧೭ ಮಂದಿ ಎದ್ದು ಬಾರೆ
ನಾವೇಕೆ ಬಂದೇವು ಎದ್ದು ಬಾರೆ
ಅರೆಗಣ್ಣಿನ ಕಿರುಜಾಣೆ ಎದ್ದು ಬಾರೆ
ಎದ್ದು ಬಾರೆ ಎದ್ದು ಬಾರೆ
ರಾಯರ ದೇವಿ ಎದ್ದು ಬಾರೆ.

ಈ) ಬಸವೇಶ್ವರನ ಪದಗಳು

ಉತ್ತರ ದಿಕ್ಕಿನಿಂದ ಬಂದ ಬಸವೇಶ್ವರರು ಗ್ರಾಮದಲ್ಲಿ ಐಕ್ಯವಾದರು ಎಂದು ಭಕ್ತಸಮೂಹ ನಂಬಿಕೊಂಡಿದೆ. ಬಸವಣ್ಣನನ್ನು ಕುರಿತಂತೆ ಪದಗಳನ್ನು ಕಟ್ಟಿದ್ದಾರೆ. ಬಸವಣ್ಣನ ಸೌಂದರ್ಯ ಅವನನ್ನು ಕೆತ್ತಿರುವ ಬಗೆ ಶಿವಶರಣರು ನಡೆದುಕೊಳ್ಳುವ ರೀತಿಯನ್ನು ವರ್ಣಿಸಿದ್ದಾರೆ.

೧

ಬಾರೋ ಬಸವಣ್ಣ ಬಾರೋ ಬಸವಣ್ಣ
ಊರಾಡಾಕೋಗೋಣ ಸ್ವಾಗೇ ಬಾಗೂರ ನವಿಲೇಯ
ಸ್ವಾಗೇ ಬಾಗೂರ ನವಿಲೆ ಏರಿಯ ಮೇಲೆ
ನೋಡಿ ಬರುವೋನ ಬಾರೋ ಬಸವಣ್ಣ
ಕೆಬ್ಬೆ ಹೊಲದಲ್ಲಿ ಕೆಬ್ಬೆ ಹೊಲದಲ್ಲಿ
ಉಜ್ಜ ಚಂಡಾಡೋನೆ ಗೊಬ್ಬರದ ಗಾಡಿ ಹೊಡೆಯೋನೆ
ಗೊಬ್ಬರದ ಗಾಡಿ ಹೊಡೆಯೊ ಬಸವಣ್ಣಾಗೆ
ಉಬ್ಬು ತಿಕ್ಕವಳೆ ಶ್ರೀಗೌರಿ
ಉದ್ದಿನ ಕಾಯನಂಗೆ ತಿದ್ಯರೆ ಚೆನ್ನ ಬಸವಾನ
ದುದ್ದಾದಲ್ಲವರೆ ಶರಣಾರು
ದುದ್ದಾದಲ್ಲವರೆ ಶರಣರು ಶಿವ ಭಕುತಾರು
ತಿದ್ಯಾರೆ ಚೆನ್ನ ಬಸವಾನ
ಮಾಗಿ ಕಾಯನಂಗೆ ಮಾಗಿ ಕಾಯನಂಗೆ
ಮಾಡ್ಯವರೆ ಬಸವಾನ ಮಾಗೂಡಿಲವರೆ ಶರಣಾರು
ಮಾಗೂಡಿಲವರೆ ಶರಣರು ಶಿವ ಭಕುತಾರು
ಹೆಸರಕಾಯಂಗೆ ಹೆರದವರೆ ಬಸವನ
ಹೆರಗದಲ್ಲವರೆ ಶರಣೆರು
ಹೆರಗದಲ್ಲವರೆ ಶರಣೆರು ಶಿವಗಂಗೆರು
ಹೆರದವರೆ ಸಣ್ಣ ಬಸವನ
ಕಡಲೆ ಕಾಯಂಗೆ ಕಡದವರೆ ಬಸವನ
ಕಡಗದಲ್ಲವರೆ ಶರಣರು
ಕಡಗದಲ್ಲವರೆ ಶರಣರು ಶಿವಗಂಗೆರು
ಕಡದವರೆ ಸಣ್ಣ ಬಸವನ
ಕುಂಬಳಕಾಯಂಗೆ ಮಾಡ್ಯಾರೆ ಶರಣರು
ಕುಂದೂರಲ್ಲವರೆ ಶರಣರು
ಕುಂದಾರಲ್ಲವರೆ ಶರಣರು ಶಿವ ಭಕುತಾರು

ಮಾಡ್ಯವರೆ ಚೆನ್ನ ಬಸವಾನ
ಕುದುರೆ ಕುಣಿದಾವೊ
ಕುಣಿಗಲ್ ಏರಿಯ ಮೇಲೆ
ನೀರು ಕುದಿದಾವೊ ಕೆರೆಯಲ್ಲಿ
ಬಸವಣ್ಣನ ಲಿಂಗ ಕುಗಿಸಾವೊ ಎದೆ ಎತ್ತಿ
ಮಾಡ್ಯವರೆ ಚೆನ್ನ ಬಸವಾನ
ಬಸವನ ಬೈದೀರ ಬಸವನ ಬೈದೀರ
ಹಸಗೆಟ್ಟ ಮೂಗಯ್ಯ ಸುತ್ತೇಳು ಲೋಕ ಸಲುವೋನ
ಸುತ್ತೇಳು ಲೋಕ ಸಲವೋ ಬಸವಣ್ಣಾನ

ಬಸವಣ್ಣನಿಗೆ ಪೂಜೆ ಮಾಡುವ ಸನ್ನಿವೇಶ, ಅಲ್ಲಿ ಬಳಸುವ ಪೂಜಾ ಸಾಮಾನುಗಳ ವರ್ಣನೆಯು ಈ ಹಾಡಿನಲ್ಲಿ ಕಂಡುಬರುತ್ತದೆ.

೨

ಹಳ್ಳಕೊಳ್ಳದ ನೀರು
ಬೆಳ್ಳಿಯ ಕೈ ಚೊಂಬು
ಅಲ್ಲಿ ಬಸವಂಗೆ ಶಿವ ಪೂಜೆ
ಅಲ್ಲಿ ಬಸವಂಗೆ ಶಿವ ಪೂಜೆ
ನಡಿವಾಗ ಬೆಳ್ಳಿಯ ಗಂಟೆ ತಳಿರೆಂದೊ
ತುಂಬಿದ ಏರಿಯ ಮೇಲೆ
ತೂಬೆತ್ತನವನು ಇವನ್ಯಾರೊ
ಗಂಗಮ್ಮ ತಾಯಿ ನಿನ ಮಗ
ಗಂಗಮ್ಮ ತಾಯಿ ನಿನ ಮಗ
ವೀರಣ್ಣ ಒಮ್ಮೆಲೆಗೆ
ನೀರ ಬಿಡುತಾನೆ
ಬ್ಯಾಸಗೆ ಬಿಸಲಲ್ಲಿ ಯಾಕೊಂಟೊ ಬಸವಣ್ಣ
ನೀ ಬಾಡಿ ನಿನ್ನ ಮುಖ ಬಾಡಿ
ನೀ ಬಾಡಿ ನಿನ್ನ ಮುಖ ಬಾಡಿ
ಕೈಲಿರೊವೊ ಚಿಗುರೆಲೆ ಬಾಡಿ ತರಗಾದೊ
ಸಾಸಲ ಸೊಂಬಯ್ಯ ಹೊಳಗೇರಿ ದೇವಯ್ಯ
ಇಬ್ಬರು ಕಣಿವೆ ಇಳಿವಾಗ ಇಬ್ಬರು ಕಣಿವೆ ಇಳಿವಾಗ
ತುಳಸಿಯ ಹೆಬ್ಬುಲಿ ಬಸವಣ್ಣ ಎದುರಾದ
ಸಂತೆ ದಾರಿಯಲಿ ಸಾಲು ತೆಂಗಿನ ಮರ

ಗರಿಗರಿಗೆಲ್ಲ ಎಳೆಗಾಳಿ ಗರಿಗರಿಗೆಲ್ಲ ಎಳೆಗಾಳಿ ಬಸವಣ್ಣ
ನಮ್ಮಪ್ಪ ಬಂದಂಗೆ ಇಡುಗಾಯಿ.

ಜೋಡಡ್ಡೆಯ ಮೇಲೆ ಕುಳಿತುಕೊಂಡ ಬಸವಣ್ಣ ಮುಖವನ್ನು ಸಪ್ಪಗೆ ಮಾಡಿಕೊಂಡಾಗ ಅವನನ್ನು ಭಕ್ತರು ಒಲಿಸಿಕೊಳ್ಳುವ ರೀತಿಯನ್ನು ವರ್ಣಿಸಿದ್ದಾರೆ.

೩

ಯಾಕೋ ಬಸವಣ್ಣ ಯಾಕೋ ಬಸವಣ್ಣ
ಮುಖವೆಲ್ಲ ಸಪ್ಪಗೆ ನೋಡಕೆ ಬಂದೋರು ನಗುತಾರೆ
ನೋಡಕೆ ಬಂದೋರು ನಗುತಾರೆ ಬಸವಣ್ಣ
ಕಾಲಿಗೆ ಬಿದ್ದೇನು ಕಲಿಯಾಗೋ
ಕಾಡು ಮಲ್ಲಿಗೆ ಹೂವ ಕಾಡುಮಲ್ಲಿಗೆ ಹೂವ
ಜೋಡಿ ಮಾಲೆಯ ಕಟ್ಟಿ ಜೋಡಡ್ಡೆ ಮೇಲೆ ಮೆರೆಯೋನೆ
ಜೋಡಡ್ಡೆ ಮೇಲೆ ಜೋಡಡ್ಡೆ ಮೇಲೆ ಮೆರೆಯೋ
ಬಸವಣ್ಣಾಗೆ ಜೋಡೀಸಿ ಕೈಯ್ಯ ಮುಗಿದೇವು
ಹಾಲಜಾಲದ ಹೂವೇ ಹಾಲಜಾಲದ ಹೂವೇ
ಯಾವಾಗ ಪರಿಮಳ ಕಾವಳ ಬಿದ್ದು ಬಿಸಿಲೇರಿ
ಕಾವಳ ಬಿದ್ದು ಬಿಸಿಲೇರಿ ಬರುವಾಗ
ಕಾಯಿ ಮೊಗ್ಗೆಲ್ಲ ಪರಿಮಳ
ಬಸವ ನಿನ ಗುಡಿಗೆ ಬಸವ ನಿನ ಗುಡಿಗೆ
ಬಿಸಲು ತಾಕಿತಲ್ಲೊ ಎಸಳೆಯ ಒಡ್ಯವನೆ ಎಳೆನಾಗ
ಎಸಳೆಯ ಒಡ್ಯವನೆ ಎಸಳೆಯ ಒಡ್ಯವನೆ ಎಳೆನಾಗ
ಬಲೆಯೆ ಬೀಸವ್ವಳೆ ಗೌರಾಜಿ
ಹಳ್ಳಿಯ ಬಸವಣ್ಣ ಹಳ್ಳಿಯ ಬಸವಣ್ಣ
ಇಳ್ಳಿದು ಬರುವಾಗ ಬೆಳ್ಳಕ್ಕಿ ಹಿಂಡು ಬೆದರ್‍ಯಾವೊ
ಬೆಳ್ಳಕ್ಕಿ ಹಿಂಡು ಬೆಳ್ಳಕ್ಕಿ ಹಿಂಡು ಬೆದರ್‍ಯಾವೊ ಬಸವಣ್ಣ
ಬೆಳ್ಳಿ ಉಂಗುರದ ಬೆಳಕೀಗೇ
ಯಾಕೋ ಬಸವಣ್ಣ ಯಾಕೋ ಬಸವಣ್ಣ
ಮುಖವೆಲ್ಲ ಸಪ್ಪಾಗೆ ನೋಡಕೆ ಬಂದೋರು ನಗುತಾರೆ
ನೋಡಕೆ ಬಂದೋರು ನಗುತಾರೆ ಬಸವಣ್ಣ
ಕಾಲಿಗೆ ಬಿದ್ದೇನು ಕಲಿಯಾಗೋ
ಅಂದಕ್ಕೆ ಅರಕಲಗೂಡು
ಚೆಂದಕ್ಕೆ ನರಸೀಪುರ

ಗೊಂಬಿ ಚಿತ್ತರುದ ಮಡಿಕೇರಿ
ಗೊಂಬಿ ಚಿತ್ತರುದ ಮಡಿಕೇರಿ
ಮಡಿಕೇರಿ ಉರು ಮುಂದೆ
ಕಂಬ ಕಂಬಕೆ ಮರಿ ಊರು ಮುಂದೆ
ಹೊಳೆಯ ದಡದಲಿ ಎಳೆಯ ಬೇವಿನ ಮರ
ಎಳೆಯದಾರದೇನು ಕಿರಿಗೈಯ್ಯಿ
ಎಳೆಯದಾರದೇನು ಕಿರಿಗಂಚಿನ ದೊಡ್ಡ ಮಾವ
ಚೆಲುವಾದರೇನು ಮದುವಿಲ್ಲ.
ಗದುಗೆ ಮೇಗಲಿಂದ ಎದು ಬಾರೊ ಬಸವಣ್ಣ
ಇದ್ದಾರೆ ನಿನಗೆ ಶಿವನಾಗೆ
ಮಗ್ದು ತಂದಿದೀನಿ ಮಡಿ ಬಾರೋ
ಆಲದ ಕಾಯಂಗೆ ಕಾಲಿಗೆ ಗೆಜ್ಜೆ ಕಟ್ಟಿ ರಂಗ ಬರುವೋನೋ
ಬಾರೊ ಬಸವಣ್ಣ ಊರಾಡಕೋಗೋಣ
ಸಾಗೆ ಬಾಗೂರು ನವುಲೇಯ
ಸಾಗೆ ಬಾಗೂರು ನವಿಲೆ ದೊಡ್ಡೇರಿಯ
ಹಾಗುರುವ ನೋಡಿ ಬರುವಾನ
ಅಣ್ಣ ಮಲಗ್ಯವನೆ ಅಣ್ಣಯ್ಯ ಮಲಗ್ಯವನೆ
ಅಣ್ಣ ಬಸವಣ್ಣ ಮಲಗ್ಯವನೆ
ಅಣ್ಣ ಬಸವಣ್ಣ ಮಲಗ್ಯವನೆ ನನ್ನೂರ
ಹನ್ನೆರಡು ಅಂಕಣದ ಗರಡಿಲಿ
ಅಪ್ಪ ಮಲಗ್ಯವನೆ ಅಪ್ಪಾಜಿ ಮಲಗ್ಯವನೆ
ಅಪ್ಪ ಬಸವಣ್ಣ ಮಲಗ್ಯವನೆ
ಅಪ್ಪ ಬಸವಯ್ಯ ಮಲಗ್ಯವನೆ
ನನ್ನೂರ ಎಪ್ಪತ್ತು ಅಂಕಣದ ಗರಡಿಲಿ
ಈಗ ಬಂದವನ್ಯಾರೊ ತಂದವನ್ಯಾರೊ
ಬಾಗಿಲಿಗೆ ನೀರ ಹರುದಾರಿ
ಬಾಗಿಲಿಗೆ ನೀರು ಹರುದಾವೊ ಬಣಸೀಯ
ಬಾಗಿಲೀಗೆ ಬಣಸೀಯ ನೀರು ಹರಿದಾವೆ ತೇರು ಹರಿದಾವೆ
ನಂಜನಗೂಡಿಗೆ ನಾಕೈದು ಬಾಗಿಲು
ನಂದಿಕೋಲೈದು ಮಠವೈದು
ನಂಜನಗೂಡ ಹಾದೀಲಿ ಕಲ್ಲಿಲ್ಲ ಮುಳ್ಳಿಲ್ಲ
ನಾನಿವೆ ಕಾಳ ಗಿಡುವಿಲ್ಲ ನಂಜಯ್ಯ

ಉಗುರಿ ಬುಗುರಿ ತಿರುಗುತ ಬಸವಣ್ಣ
ಕುದುರೆಲ್ಲೊ ಕುದುರೆ ಮರಿಯೆಲ್ಲೊ
ಬ್ಯಾಸಿಗೆ ಬಿಸುಲಲ್ಲಿ ಹ್ಯಾಕೊಂಟ್ರೋ ಬಸವಣ್ಣ
ನೀ ಬಾಡಿ ನಿನ್ನ ಮುಖ ಬಾಡಿ,
ನೀ ಬಾಡಿ ನಿನ್ನ ಮುಖ ಬಾಡಿ ಕೈಲಿರಿವೊ
ಚಿಗುರೆಲೆ ಬಾಡಿ ತರಗಾದೊ
ಕೆಬ್ಬೆ ಹೊಲದಲ್ಲಿ ಗುಬ್ಬಿ ಚಂಡಾಡೋನೊ
ಗೊಬ್ಬುರದ ಗಾಲಿ ಹೊಡೆಯೊನೋ
ಗೊಬ್ಬುರದ ಗಾಲಿ ಹೊಡಿಯೊ ಬಸವಣ್ಣ
ಉಬ್ಬು ತಿದ್ದವಳೆ ಶ್ರೀಗೌರಿ
ಭತ್ತಕೆ ಚಿಗುರಾಸೆ ಬಿದಿರಿಗೊಂದು ಎಲೆ ಆಸೆ
ಹೆಣ್ಣ ಮಕ್ಕಳಿಗೆ ತವರಾಸೆ,
ಹೆಣ್ಣ ಮಕ್ಕಳಿಗೆ ತವರಾಸೆ ಬಸವಣ್ಣ
ನಿನ್ನಾಸೆ ನಮಗೆ ಅನುಗಾಲ

ಬದುಕಿನ ವಿವಿಧ ಘಟ್ಟಗಳಲ್ಲಿ ಪಾಲಿಸುತ್ತ ಬಂದಿರುವ ಹಲವಾರು ಆಚರಣೆಗಳಿಗೆ ಹಿನ್ನೆಲೆಯಾಗಿ ಪ್ರಚಲಿತವಾಗಿರುವ ಹಾಡುಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತವೆ. ಇವು ಸಂಬಂಧಪಟ್ಟ ಆಚರಣೆಯ ಸ್ವರೂಪ, ಉದ್ದೇಶಗಳನ್ನು ಸೂಕ್ಷ್ಮವಾಗಿ ಬಿಂಬಿಸುತ್ತವೆ. ಆಚರಣೆಗೆ ಸಂಬಂಧಿಸಿದ ಕೆಲವು ಹಾಡುಗಳನ್ನು ಈ ಮುಂದೆ ವಿಶ್ಲೇಷಿಸಲಾಗಿದೆ.

ಮದುವೆ ಹಾಗು ಅದಕ್ಕೆ ಪೂರಕವಾದ ಶಾಸ್ತ್ರಗಳಿಗೆ ಸಂಬಂಧಿಸಿದ ಪದವೇ ಸೋಬಾನೆ ಪದ. ಶಾಸ್ತ್ರ ಮಾಡುವಾಗ ಸೋಬಾನ ಹಾಡಬೇಕಾಗುತ್ತದೆ. ಸೋಬಾನೆಯ ಪದಗಳು ಮದುವೆಯ ರೀತಿ-ನೀತಿಗಳನ್ನು ವಿವರಿಸುತ್ತವೆ. ಮದುವೆಯ ಆಚರಣೆಗಳನ್ನು ಹಾಡುಗಳಲ್ಲಿ ವರ್ಣಿಸಲಾಗಿದೆ. ಮದುವೆ ಆಚರಣೆಗಳನ್ನು ಅನುಸರಿಸಿ ಹಾಡುಗಳು ಸಾಗುವುದರಿಂದ ಈ ಹಾಡುಗಳಲ್ಲೂ ಒಂದು ಕ್ರಮಬದ್ಧತೆ ಇದೆ. ಸಾಮಾನ್ಯವಾಗಿ ಇಂತಹ ಸಾಂಪ್ರದಾಯಿಕ ಹಾಡುಗಳ ವಸ್ತು, ಭಾಷಾ ಗಾಂಭೀರ್ಯತೆ ಬದಲಾಗುವುದಿಲ್ಲ.

ಉ) ಸೋಬಾನೆ ಪದ

ಸೋಬಾನೆ ಹೇಳಿಕೆ ಸಿರಿಗಿನ ಮುತ್ತೈದಿರ
ರಾಗ ರಾಗ ಪಾಡೀರೆ ರಮಣೀರ ಸೋಬಾನ
ರಾಗ ರಾಗ ಪಾಡೀರೆ ರಮಣೀರ ಬನ್ನೀರೇ
ಚಂದದ ಅರಗಿಣಿಯ ಮದುವೀಗೆ ಸೋಬಾನ
ಮುದ್ದು ಅರಗಿಣಿಯ ಮದುವೀಗೆ ಸೋಬಾನ

ಮುದ್ದು ಅರಗಿಣಿಯ ತೂಗೇ ಮಂಚಕ್ಕೆ ಸೋಬಾನ ಬನ್ನೀರೇ
ಬೇಗ ಹೇಳಿ ನಮಿಗೆ ಅವಸರ ಸೋಬಾನ
ಬೇಗ ಹೇಳಿ ನಮಿಗೆ ಅವಸರ ಸೋಬಾನ
ಬೇಗ ಹೇಳಿ ನಮಿಗೆ ಅವಸರ ಮೇಲುಕೋಟೆ ಸೋಬಾನ ಬನ್ನೀರೇ
ಬೋಗಿನ ತೇರು ಹೊರಟಾವೆ ಸೋಬಾನ
ಬೋಗಿನ ತೇರು ಹೊರಟಾವೆ ಸೋಬಾನ
ಬೋಗಿನ ತೇರು ಯಾರ್‍ಯಾರು ಬರಬೇಕು ಸೋಬಾನ ಬನ್ನೀರೇ
ಕಗ್ಗೆ ಕಾಮಣ್ಣ ದೇವಗೆ ಹೇಳಿ ಸೋಬಾನ
ಕಗ್ಗೆ ಕಾಮಣ್ಣ ದೇವಗೆ ಪರ್ವತಕೇಳಿ ಸೋಬಾನ ಬನ್ನಿರೇ
ಹಳ್ಳದ ಕಾಯಿ ಬೆಲ್ಲಗ ಬೆತ್ತ ಸೋಬಾನ
ಹಳ್ಳದ ಕಾಯಿ ಬೆಲ್ಲದ ಬೇವಿನ ಕಾಯಿ ಸೋಬಾನ ಬನ್ನಿರೇ
ನಲ್ಲಿಯ ಕಾಯಿ, ನೆಲಗಡಲೆ ಸೋಬಾನ
ನಲ್ಲೀಯಕಾಯಿ ನೆಲಗಡ ಮಾಗುಡಿ ಬೇರು ಸೋಬಾನ ಬನ್ನಿರೇ
ಅಲ್ಲಿ ಚಲುವಯ್ಯಗೆ ಕಟ್ಟಬುತ್ತಿ ಸೋಬಾನ
ಕಟ್ಟಬುತ್ತಿ ಕಟ್ಟಿಕೊಂಡು, ಕೈಲೊಂದ ಹಿಡಕೊಂಡು ಸೋಬಾನ ಬನ್ನಿರೇ
ಹದಿನೆಂಟಾಪುರಕ್ಕೆ ಹೆಣ್ಣೀಗೋದ ಸೋಬಾನ
ಹದಿನೆಂಟಪುರುದೋರು ಮತ್ತೆ ಸೋದರರದೋರು ಸೋಬಾನ ಬನ್ನಿರೇ
ಹೆಣ್ಣಿನ ಮೇಲೆ ಹೆಣ್ಣ ಕೊಡದಂತೆ ಸೋಬಾನ
ಹೆಣ್ಣಿನ ಮೇಲೆ ಹೆಣ್ಣ ಕೊಡದಂತೆ ಚಲುವಯ್ಯ ಸೋಬಾನ ಬನ್ನಿರೇ
ಲೆಗ್ಗೆ ಚೆಂಡಾಡಿ ಗೆದ್ದೆ ಬಾರೋ ಸೋಬಾನ
ಲೆಗ್ಗೆ ಚೆಂಡಾಡಿ ಯಾರ್‍ಯಾರು ಗೆಲುಬೇಕೋ ಸೋಬಾನ ಬನ್ನಿರೇ
ಸೋಲೀಂದ್ರ ತಂಗೆ ಸೂಲನಾರಿ ಸೋಬಾನ
ಸೋಲೀಂದ್ರನ ತಂಗೆ ಸೂಲನಾರಿ ಮೀದ ನೀರು ಸೋಬಾನ ಬನ್ನಿರೇ
ಕಣ್ಣಿರೆ ತುಂಬಿ ಕಾಡಿಗೆ ಹರುದೋ ಸೋಬಾನ
ಕಣ್ಣಿರೆ ತುಂಬಿ ಕಾಡಿಗೆ ಹರುದೋ ಸೋಬಾನ
ಕಣ್ಣಿರೆ ತುಂಬಿ ಕಾಡಿಗೆ ಹರುದೋ ನೀರು ಸೋಬಾನ
ಅಂದ ಕೋಲಾಡಿ ಬೆಳದಾವೆ ಸೋಬಾನ
ಅಂದ ಕೋಲಾಡಿ ಬೆಳೆದಂತೆ ಬತ್ತಾವ ಸೋಬಾನ ಬನ್ನಿರೆ
ಚಿನ್ನದ ಕೊಡದಲ್ಲಿ ಕೂರಿಸಾರೆ ಸೋಬಾನ
ಚಿನ್ನದ ಕೊಡದಲ್ಲಿ ಕೂರಿಸಿದ ಬತ್ತಾವ, ಸೋಬಾನ
ರನ್ನದ ಕಟ್ಟಲ್ಲಿ ಬಿಗಿಸ್ಯಾರೆ ಸೋಬಾನ
ರನ್ನದ ಕಟ್ಟಲ್ಲಿ ಬಿಗಿದಂತ ಬತ್ತಾವ ಸೋಬಾನ ಬನ್ನೀರೆ

ಗಂಧದ ಮರದಲ್ಲಿ ಹದ ಮಾಡಿ ಸೋಬಾನ
ಗಂಧದ ಮರದಲ್ಲಿ ಹಸಮಾಡಿದ ಭತ್ತಾವ ಸೋಬಾನ ಬನ್ನಿರೇ
ಇದುವೇ ನಾಗುರುದ ಹೊಲಸಾಣ ಸೋಬಾನ
ಇದುವೇ ನಾಗುರುದ ಹೊಲಸಾಣ ಉಗ್ಗೆವ ಸೋಬಾನ ಬನ್ನಿರೇ
ಮಾನ್ಯ ಮಹರಾಯ ಉಣ ಬಾರೋ ಸೋಬಾನ
ಹುಟ್ಟಾನೆ ಹುಟ್ಟಾನೆ ಕಂಡಾನೆ ಕೇಳ್ಯಾನೆ ಸೋಬಾನ ಬನ್ನೀರೇ
ಚಂದ್ರವತಿಯೆಂಬ ಕೊಡಲೀಯ ಸೋಬಾನ
ಚಂದ್ರಾವತಿಯೆಂಬೋ ಕೊಡಲೀಯ ತಕ್ಕೊಂಡು ಸೋಬಾನ ಬನ್ನೀರೇ
ಹೋದಾನೆ ಹೊಂಟ ಹೊಳೀಗಂಟ ಸೋಬಾನ
ಹೋದಾನೆ ಹೊಂಟ ಹೊಳಿಗಂಟ ಚಲುವಯ್ಯ ಸೋಬಾನ ಬನ್ನೀರೇ
ಕಡದಾನೆ ಹನ್ನೆರಡ ಕಾವಿಗೋಳ ಸೋಬಾನ
ಕಡಿದಾನೆ ಹನ್ನೆರಡ ಕಾವಿಗೋಳ ಚಲುವಯ್ಯ ಸೋಬಾನ ಬನ್ನೀರೇ
ಕಟಿಸ್ಯಾನೆ ನಂದಿ ಅರಮನೆಯ ಸೋಬಾನ
ಸೋಬಾನ ಅನ್ನೋದು ಯಾರಮ್ಮ ಮಾಡಿದೋರು ಸೋಬಾನ ಬನ್ನೀರೇ
ನಾರಾಯಣ ಬಲ್ಲ ಶಿವ ಬಲ್ಲ ಸೋಬಾನ
ದೇವರು ಮೇಲವನೆ ಬಸವಯ್ಯ ಸೋಬಾನ
ದೇವರು ಮೇಲವನೆ ಬಸವಯ್ಯನ ಪಾದಾಕೆ ಸೋಬಾನ ಬನ್ನೀರೇ
ದೇವರು ಮೇಲವನೆ ಶಾರಣನ್ನೆ ಸೋಬಾನ
ದೇವರು ಮೇಲವನೆ ಶಾರಣನ್ನೆ ಕಟ್ಟಿದಮ್ಮ ಸೋಬಾನ ಬನ್ನೀರೇ
ಬಾಲನ ಹಡೆದಮ್ಮ ಜತನವೇ ಸೋಬಾನ
ಬಾಲನ ಹಡೆದಮ್ಮ ಜತನವೇ ಅಲ್ಲಿ ಹಬ್ಬ ಸೋಬಾನ
ಸುವ್ವಾರಿ ಬಾಣ ಬಿಡುತಾರೆ ಸೋಬಾನ
ಸರ್ಪನೆಂಬೋಳು ಬಾಳ ಸಾಸರಗಾತಿ ಸೋಬಾನ ಬನ್ನೀರೇ
ಬಾರಮ್ಮ ಮಗನ ಮದವೀಗೆ ಸೋಬಾನ
ಬಾರಮ್ಮ ಮಗನ ಮದವೀಗೆ ಬಾಳಿಕಂಬ ಸೋಬಾನ ಬನ್ನೀರೇ
ಯಾವ ಮೂಲೆಲ್ಲಿ ನಿಲಾಕಬೇಕು ಸೋಬಾನ
ಯಾವ ಮೂಲೇಲಿ ನಿಲಾಕಬೇಕು ನಂಜನಗೂಡ ಸೋಬಾನ ಬನ್ನೀರೇ
ದೇವರ ಸಮನಾಗಿ ನಿಲಾಕಬೇಕು ಸೋಬಾನ
ದೇವರ ಸಮನಾಗಿ ನಿಲಾಕಬೇಕು ಸೋಬಾನ

ಹುಡುಗಿ ಮೈ ನೆರೆದಾಗ ಅವಳು ಹಾಕಿದ್ದ ಬಟ್ಟೆಯನ್ನು ಮಡಿವಾಳರಿಗೆ ಕೊಡುವುದು ಪದ್ಧತಿ. ಸೋದರ ಮಾವ ಹತ್ತಿ ಸೊಪ್ಪು, ಮಾವಿನಸೊಪ್ಪು, ಹಲಸಿನ ಸೊಪ್ಪನ್ನು ತಂದು ಗುಡಿಸಲನ್ನು

ಹಾಕುತ್ತಾನೆ. ಚಿಗಣಿ, ತಂಬಿಟ್ಟು, ಕೊಬ್ಬರಿ, ಬೆಲ್ಲ, ಬಾಳೆಹಣ್ಣುಗಳನ್ನಿಟ್ಟು ಶಾಸ್ತ್ರ ಮಾಡುತ್ತಾರೆ. ಈ ಹಿನ್ನೆಲೆಯಲ್ಲಿ ಹಾಡುವ ಹಾಡು ಗಮನ ಸೆಳೆಯುತ್ತದೆ.

ಊ) ಮೈನೆರೆದಾಗ ಹೇಳುವ ಹಾಡು

ಬಾಲೆ ಮೈನೆರೆದು ಬಾಕಲಲಿ ನಿಂತವಳೆ,
ಬಾಚಿಕೊಂಡು ಹೋಗೋ ಮಡಿವಾಳಿ
ರೆಂಬೆ ಮೈನೆರೆದು ತೊಟ್ಟೀಲಿ ನಿಂತವಳೆ
ಸುತ್ತಿಕೊಂಡು ಹೋಗೋ ಮಡಿವಾಳಿ
ಆರಂಕಣದಟ್ಟೀಲಿ ತೊಟ್ಟೀ ಪಡಸಾಲೆಲಿ ಕುಟ್ಟಾಳೆ ಎಳ್ಳು
ಚಿಗಳೀಯಾ ಸೋಬಾನವೇ.
ಕುಟ್ಟಾಳೆ ಎಳ್ಳು ಚಿಗಳೀಯ ತೆಂಬಿಟ್ಟುಂಡೆಯ
ಮಾಡಾಳೆ ಮಗಳ ಹೊಸಗೇಯಾ
ಹತ್ತಂಕಣದಟ್ಟೀಲಿ ತೊಟ್ಟಿ ಪಡಸಾಲೇಲಿ
ಕುಟ್ಟಾಳೆ ಎಳ್ಳು ಚಿಗಳೀಯ ತೆಂಬಿಟ್ಟು ಉಂಡೆಯ
ಮಾಡಾಳೆ ಮಗಳೆ ಹೊಸಗೇಯಾ ಏರಿ ಚಿನ್ನದೇರಿ,
ಏರಿ ರನ್ನದೇರಿ ಏರಿಂದ ಕೆಳಗೆ ಎಲೆತೋಟ
ಏರಿಂದ ಕೆಳಗೆ ಎಲೆತೋಟದಲ್ಲಿರುವ
ಮಾವಯ್ಯನ ಕೇಳೋಳೆ ಹೊಸಗೇಯಾ
ಹೊಸಗೇಯ ಕೇಳೋಳೆ ಉಸುನಗು ನಕ್ಕಾನೆ
ಎಸಳೆ ಮಲ್ಲಿಗೆಯ ಕುಯಿಸಾನೆ
ಎಸಳೆ ಮಲ್ಲಿಗೆ ಕುಯಿಸಿ ದಂಡೆ ಕಟ್ಟಿ
ಸೊಸೆಯ ಬಳಿಗೆ ಕಳಿಸ್ಯಾನೆ
ಏರಿ ಚಿನ್ನದೇರಿ ಏರಿ ರನ್ನದೇರಿ ಏರಿಂದ ಕೆಳಗೆ ಹೂ ತೋಟ
ಏರಿಂದ ಕೆಳಗೆ ಹೂವಿನ ತೋಟದ ಮಾವನ ಹೊಸಗೆ
ಕೇಳಳೆ ಉಸುನಗುವ ನಕ್ಕಾನೆ.
ಎಸಳು ಮಲ್ಲಿಗೆ ದಂಡೆ ಕಟ್ಟಿ ಸೊಸೆಯಾರ ಬಳಿಗೆ ಕಳಿಸ್ಯಾನೆ
ಗೂಡಿಗೆ ಎದುರಾಗಿ ಊಡಮ್ಮ ಆಸೆಗೋಳ
ಕಂಬಕ್ಕೆದುರಾಗಿ ಊಡಮ್ಮ ಆಸೆಗೋಳ ಕಂಬಕ್ಕೆದುರಾಗಿ
ಅರಗಿಣಿ ಪುಣೆಗಿಳಿ ಶೃಂಗಾರದ ನುಡಿಯ ನುಡಿದಾವೆ
ನುಡಿಯ ನುಡಿದಾವೆ ಒಡದು ಮಾತಾಡವೆ
ಧರ್ಮದಣ್ಣಯ್ಯನ ಮನೆ ಮುಂದೆ

ಮೈನೆರೆದ ಹುಡುಗಿಗೆ ಮಡಿಲು ತುಂಬುವ ಶಾಸ್ತ್ರ ನಡೆಯುವಾಗ ಹೇಳಲಾಗುವ ಹಾಡಿನಲ್ಲಿ

ಅವಳನ್ನು ಹೊಗಳುತ್ತಾರೆ. ಮುತ್ತೈದೆಯರು ಬಗೆಬಗೆಯ ಹಣ್ಣು ಹಂಪಲುಗಳನ್ನಿಟ್ಟು ಮಡಿಲು ತುಂಬುವ ರೀತಿ ವಿಶಿಷ್ಟವಾಗಿದೆ.

ಖ) ಮಡಲು ತುಂಬುವಾಗ

ಹಣ್ಣ ಹಣ್ಣು ಬಾಳೆ ಹಣ್ಣು ಅಕ್ಕ ಮಡಲ ದುಂಬಿರೆ
ಅಕ್ಕ ಮಡಲ ದುಂಬಿರೆ ಚಂದದಿಂದ ತುಂಬಿರಮ್ಮ ಚಂದ್ರಕಾಂತಿಗೆ
ಹಣ್ಣ ಹಣ್ಣು ಸೇವೆ ಹಣ್ಣು ಅಕ್ಕ ಮಡಲ ದುಂಬಿರೆ
ಅಕ್ಕ ಮಡಲ ದುಂಬಿರೆ ಚಂದದಿಂದ ತುಂಬಿರಮ್ಮ ಚಂದ್ರಕಾಂತಿಗೆ
ಹಣ್ಣು ಹಣ್ಣು ದ್ರಾಕ್ಷಿ ಹಣ್ಣು ಅಕ್ಕ ಮಡಲ ದುಂಬಿರೆ
ಅಕ್ಕ ಮಡಲ ದುಂಬಿರೆ ಚಂದದಿಂದ ತುಂಬಿರಮ್ಮ ಚಂದ್ರಕಾಂತಿಗೆ
ಹಣ್ಣ ಹಣ್ಣು ಕಿತ್ತಾಳೆ ಹಣ್ಣು ಅಕ್ಕ ಮಡಲ ದುಂಬಿರೆ
ಅಕ್ಕ ಮಡಲ ದುಂಬಿರೆ ಚಂದದಿಂದ ತುಂಬಿರಮ್ಮ ಚಂದ್ರಕಾಂತಿಗೆ
ಹಣ್ಣು ಹಣ್ಣು ನಿಂಬೆ ಹಣ್ಣು ಅಕ್ಕ ಮಡಲ ದುಂಬಿರೆ
ಅಕ್ಕ ಮಡಲ ದುಂಬಿರೆ ಚಂದದಿಂದ ತುಂಬಿರಮ್ಮ ಚಂದ್ರಕಾಂತಿಗೆ
ಮಡಲ ದುಂಬಿರೆ ಹುಡಿಗೆ ಜಾಣೆರ
ಮಡಲ ದುಂಬಿರೆ ಹುಡಿಗೆ ಜಾಣೆರ
ಕಡಲೆ, ಕರ್ಜೂರ, ಕರ್ಪೂರದಿಳ್ಳೆವು ಮಡಿಲ ದುಂಬಿರೆ,
ಬಾಳೆ ವನಕೋದೆ ಬಾಳೆ ಹಣ್ಣು ತಂದೆ
ಬಾಳೆ ವನಕೋದೆ ಬಾಳೆಯ ಹಣ್ಣು ತಂದೆ
ರಾಜ ರುಕ್ಮಿಣಿ ಸೀತಾ ದೇವಿಗೆ ಮಡಲ ತುಂಬಿರೆ
ಕಿತ್ತಳೆ ವನಕೋದೆ ಕಿತ್ತಳೆ ಹಣ್ಣು ತಂದೆ
ಕಿತ್ತಳೆ ವನಕೋದೆ ಕಿತ್ತಳೆ ಹಣ್ಣು ತಂದೆ
ರಾಜ ರುಕ್ಮಿಣಿ ಸೀತಾ ದೇವಿಗೆ ಮಡಲ ತುಂಬಿರೆ
ನಿಂಬೆ ವನಕೋದೆ ನಿಂಬೆ ಹಣ್ಣು ತಂದೆ
ನಿಂಬೆ ವನಕೋದೆ ನಿಂಬೆ ಹಣ್ಣು ತಂದೆ
ರಾಜ ರುಕ್ಮಿಣಿ ಸೀತಾ ದೇವಿಗೆ ಮಡಲ ತುಂಬಿರೆ.

ಮದುವೆ ಶಾಸ್ತ್ರದ ಆಚರಣೆಗಳಲ್ಲಿ ಶಾಸ್ತ್ರದ ಭತ್ತ ಕುಟ್ಟುವುದು ಒಂದು. ಮದುವೆಯಾಗುವ ಹೆಣ್ಣು ಮುಂದೆ ಈ ರೀತಿ ಭತ್ತ ಕುಟ್ಟುವುದನ್ನು ಪರಿಚಯ ಮಾಡಿಕೊಳ್ಳಲಿ ಎಂಬುದು ಈ ಆಚರಣೆಯ ಉದ್ದೇಶವಿರಬಹುದು. ನಂತರ ಮಣ್ಣಿನಿಂದ ಸಿದ್ಧವಾದ ಕಪ್ಪು ಗಡಿಗೆಗಳನ್ನು ತೆಗೆದುಕೊಂಡು ಶಾಸ್ತ್ರದ ನೀರನ್ನು ತರಲು ಮುತ್ತೈದೆಯರು ದೇವಸ್ಥಾನದ ಬಳಿಯಿರುವ ಕಲ್ಲು ಬಾವಿಗೆ ಹೋಗುತ್ತಾರೆ. ಆಗ ಹಾಡುವ ಹಾಡಿದು.

ಎ) ಶಾಸ್ತ್ರದ ನೀರು ಹಾಕುವಾಗ

ಅಂದಾಕೆ ಒಲೆಯಾಕಿ ಚಂದಾಕೆ ಒಲೆ ಕೊರೆದಿ
ಗಂಧದ ಸೌದೆ ಒಲೆಗಿಕ್ಕಿ ಸೋಬಾನವೇ
ಗಂಧದ ಸೌದೆ ಒಲೆಗಿಕ್ಕಿ ಕಾದ ನೀರ ಎರೆದರೆ
ಮಾನ್ಯೋರ ಮಗಳಿಗೆ ಸೋಬಾನವೇ
ಕೊಪ್ಪರಿಕೆ ನೀರು ಉಕ್ಕುಕ್ಕಿ ಕಾಯುವಾಗ
ಪಚ್ಚೆ ತೆನೆಯಾಕಿ ಘಮ ಘಮ
ಪಚ್ಚೆ ತೆನೆಯಾಕಿ ಘಮ ಘಮ ಕಾದ ನೀರ ಎರೆದರೆ
ಮಾನ್ಯೋರ ಮಗಳಿಗೆ ಸೋಬಾನವೇ
ಆಯಕೆ ಒಲೆಯಾಕಿ ಚಾಯಾಕೆ ಒಲೆ ಕೊರೆದು
ಗುಢಾಣದ ನೀರು ಗುಳುಗುಟ್ಟಿ ಕಾಯುವಾಗ
ಈಜಿ ಪಚ್ಚೆ ತೆನೆಯಾಕಿ ಘಮ ಘಮ
ಪಚ್ಚೆ ತೆನೆಯಾಕಿ ಘಮ ಘಮ ಕಾದ ನೀರ
ಎರೆದರೆ ಮಾನ್ಯೋರ ಮಗಳಿಗೆ
ಬಾಲೆಗೆ ಊದ ನೀರು ಬಾಕಲಲ್ಲಿ ನಿಂತವೆ
ಬಾಕಲ ದಾಟಿ ಮಣೆ ದಾಟಿ,
ನಿಂಬೆ ವಾಲಾಡಿ ಬೆಳೆದಾವೆ
ರಂಬೆಗೂದ ನೀರು ತೊಟೀಲಿ ನಿಂತವೆ ತೊಟ್ಟಿದಾಟಿ ಮನೆದಾಟಿ
ತೊಟ್ಟಿದಾಟಿ ಮನೆದಾಟಿ ಹೋದ ನೀರು ಬಾಳೆ ವಾಲಾಡಿ ಬೆಳೆದಾವು

ಮದುವೆಯ ದಿನ ತನ್ನೂರಿನಿಂದ ನೆರೆಬಂದ ಗಂಡು, ಹೆಣ್ಣಿನ ಮನೆಯ ಚಪ್ಪರದಟ್ಟೀಲಿ ನಿಂತಾಗ ಈ ಹಾಡು ಹಾಡುತ್ತಾರೆ. ಧಾರೆ ಹುಯ್ಯುವ ಬಂಧು ಬಳಗದವರ ಪರಿಚಯ, ತಾಲಿ ಕಟ್ಟುವ ರೀತಿ, ವೇಷಭೂಷಣಗಳನ್ನು ವರ್ಣಿಸುತ್ತಾರೆ.

ಏ) ಮದುವೆ ದಿನ

ಚಪ್ಪರದಟ್ಟೀಲಿ ನಿಂತಿರೋ ಗಂಡಿಗೆ
ಅಕ್ಕಿಲ್ಲವೇನೆ ಅವನಿಗೆ ಸೋಬಾನವೇ
ಚಪ್ಪರದಟ್ಟೀಲಿ ನಿಂತಿರೋ ಅವನಿಗೆ
ತಂಗಿ ಇಲ್ಲವೇನೇ ಸೋಬಾನವೇ
ತಂಗಿ ಇಲ್ಲವೇನೆ ಅವನಿಗೆ ಮದುವಣನಿಗೆ
ವಲ್ಲಿ ಮುಂಜರಗ ಮುದುರಾಕಿ
ಚಪ್ಪದರಟ್ಟೀಲಿ ನಿಂತಿರೋ ಗಂಡಿಗೆ ಅಕ್ಕಿಲವೇನೆ ಅವನಿಗೆ
ಧಾರೆ ಹೊತ್ತಿಗೆ ಯಾರು ಯಾರು ಬರಬೇಕು

ದಾರದ ಕೊರಳ ಹಿಡಿಯಣ್ಣ ಸೋಬಾನ
ಕಂಕಣದಟ್ಟಿಗೆ ಯಾರ್ಯಾರು ಬರಬೇಕು ಕಂಕಣದ ಹಿರಿಯಣ್ಣ
ಸೋದರ ಮಾವ ಕಂಕಣದ ಹೊತ್ತಿಗೆ ಬರಬೇಕು
ತಾಳಿ ಕಟ್ಟುವಾಗ ತಾಯಿಗೆ ನಗು ಬಂದು
ತಾಳಿ ಕಟ್ಟಿ ಹೆಣ್ಣು ಕರಕೊಂಡು ಸೋಬಾನವೇ.
ತಾಳಿ ಕಟ್ಟಿ ಹೆಣ್ಣ ಕರಕೊಂಡು ಹೋಗುವಾಗ
ತಾಯಿಗೆ ಕಂಡಗ ದುಃಖ ಬಂದವು ಸೋಬಾನವೇ
ಬಣ್ಣ ಉಡಿಸುವಾಗ ಅವರಪ್ಪನಿಗೆ ನಗು ಬಂದು
ಬಣ್ಣ ಉಡುಕೊಂಡಿರೋಳ ಅಪ್ಪನಿಗೆ ಬಂಧವು ಕಂಡಗ
ದುಃಖ ಕಪ್ಪು ಇಕ್ಕುವಾಗ ಅವರಣ್ಣನಿಗೆ ನಗು ಬಂದು
ಕಪ್ಪು ಇಕ್ಕಿ ಕರಕೊಂಡು ಹೋಗುವಾಗ ಅವರಣ್ಣನಿಗೆ
ಅವರಣ್ಣನಿಗೆ ನಗು ಬಂದು ಸೋಬಾನವೇ
ತಾಳಿ ಬಂದವೆ ಅವರ ತಾಯಮ್ಮನ ಬರೇಳೆ
ತಾಳಿಯ ಮೇಲೆ ಕಳಸಾವ ಸೋಬಾನವೇ
ತಾಳಿಯ ಮೇಲೆ ಕಳಸಾವು ಬಂದಾವೆ
ತಾಯಮ್ಮನ ಬರಹೇಳೆ ಸೋಬಾನವೇ
ಬಣ್ಣ ಬಂದಾವೆ ಅವರಪ್ಪನ ಬರಹೇಳಿ
ಬಣ್ಣದ ಮೇಲೆ ಬುಗುರಿ ಏಳಿ ಸೋಬಾನವೇ
ಬಣ್ಣದ ಮೇಲೆ ಬುಗುರಿ ಏಳವೆ
ಅವರಪ್ಪನ ಬರಹೇಳಿ ಸೋಬಾನವೇ
ಕಪ್ಪು ಬಂದವೆ ಅವರಣ್ಣನ ಬರಹೇಳಿ
ಕಪ್ಪಿನ ಮೇಲೆ ಭರಣಿ ಬಂದವೆ ಸೋಬಾನವೇ
ಕಪ್ಪಿನ ಮೇಲೆ ಭರಣಿಯು ಬಂದವೇ ಸೋಬಾನವೇ.

ಮದುವೆಯ ಸಂಭ್ರಮ, ಸಡಗರಗಳೆಲ್ಲ ಮುಗಿದ ಮೇಲೆ ಮತ್ತೊಂದು ಕರುಳು ಹಿಂಡುವ ಪ್ರಸಂಗ ಎದುರಾಗುತ್ತದೆ. ಹಲವು ವರ್ಷಗಳಿಂದ ತವರು ಮನೆಯಲ್ಲಿ ಬೆಳೆದ ಹೆಣ್ಣನ್ನು ಗಂಡನ ಮನೆಗೆ ಕಳುಹಿಸುವಾಗ ಹಾಡುವ ಹಾಡಿದು. ಅಪ್ಪ, ಅವ್ವ, ಅಣ್ಣನ ಸಂಬಂಧಗಳನ್ನು ನೆನಪಿಸುತ್ತಾರೆ. ಹೆಣ್ಣನ್ನು ಚೆನ್ನಾಗಿ ನೋಡಿಕೊಳ್ಳಿ ಎಂದು ಗಂಡಿನ ಮನೆಯವರನ್ನು ಬೇಡಿಕೊಳ್ಳುತ್ತಾರೆ.

ಐ) ಹೆಣ್ಣು ಕಳುಹಿಸುವುದು

ನಾರಿ ನಿಮ್ಮಮ್ಮ ವಾರಗಿತ್ತಿ
ನಾರಿ ನಿಮ್ಮಮ್ಮ ವಾರಗಿತ್ತಿ
ನಾರಿ ನಿಮ್ಮವ್ವ ವಾರಿಗಿತ್ತಿ ಕಂದಮ್ಮ

ಅಪ್ಪನ ಮನೆ ಬದುಕಲಿ
ಅಪ್ಪನ ಮನೆ ಬದುಕಲಿ ಅಂತ ಹೇಳಿ
ಹವಳ ಚೆಲ್ಯಾಳೆ ನಡುಮನಿಗೆ
ಹವಳ ಚೆಲ್ಯಾಳೆ ನಡುಮನಿಗೆ
ಹತ್ತು ಅಂಕಣದ ಕಡ್ಡೀಯ ಅರಿವಾಣ
ಬಾಲ ನಿಮ್ಮತ್ತೆ ವಾರಗಿತ್ತಿ
ಬಾಲ ನಿಮ್ಮತ್ತೆ ವಾರಗಿತ್ತಿ ಮದಿವಣ್ಣಿ
ಮಾವನ ಮನೆ ಬದುಕಲಿ
ಮಾವನ ಮನೆ ಬದುಕಲಿ ಅಂತ ಹೇಳಿ
ಮುತ್ತ ನೆಟ್ಟಾನೆ ನಡುಮಲ್ಲಿ
ಅಪ್ಪನೀ ಕೇಳು ಅಪ್ಪಾಜಿ ನೀ ಕೇಳು
ಅಪ್ಪ ನಿನ ಮನೆ ಎರವಲ್ಲ
ಅಪ್ಪ ನಿನ ಮನೆ ಎರವಲ್ಲ ಅಂತ ಹೇಳಿ
ತುಪ್ಪ ಚೆಲ್ಲಾಳೆ ನಡು ಮನಿಗೆ
ಅವ್ವ ಕೇಳು ಅವ್ವಾಜಿ ನೀ ಕೇಳು
ಅವ್ವ ನಿನ ಮನೆ ಎರವಲ್ಲ
ಅವ್ವ ನಿನ ಮನೆ ಎರವಲ್ಲ ಅಂತ ಹೇಳಿ
ಹೂವ ಚೆಲ್ಲಾಳೆ ನಡುಮನಿಗೆ
ಅಣ್ಣ ನೀ ಕೇಳು ಅಣ್ಣಯ್ಯ ನೀ ಕೇಳು
ಅಣ್ಣ ನಿನ ಮನೆ ಎರವಲ್ಲ
ಅಣ್ಣ ನಿನ ಮನೆ ಎರವಲ್ಲ ಅಂತ ಹೇಳಿ
ಎಣ್ಣೆ ಚಲ್ಯಾಳೆ ನಡುಮನಿಗೆ
ತುಪ್ಪ ಅನ್ನವ ನಿಮ್ಮಪ್ಪನಕೂಟೆ ಉಣ್ಣವ್ವ
ತುಪ್ಪ ಅನ್ನವ ಇನ್ನೊಂದ ತುತ್ತ ಮಿಗಲಾಗಿ
ಇನ್ನೊಂದ ತುತ್ತ ಮಿಗಲಾಗಿ ಉಣ್ಣವ್ವ
ನಿಮ್ಮಪ್ಪನ ಕೇಳೆ ಕುದರೇಯ
ನಿಮ್ಮಪ್ಪನ ಕೇಳೆ ಕುದರೇಯ ಕಂದಮ್ಮ
ನಿಮ್ಮಪ್ಪ ಮರಳಲ್ಲಿ ನಡಿಸ್ಯಾನೆ
ನಿಮ್ಮಪ್ಪ ಮರಳಲ್ಲಿ ನಡಿಸ್ಯಾನೆ
ಹಾಲು ಅನ್ನವ ನಿಮ್ಮವ್ವನಕೂಟ ಉಣ್ಣವ್ವ
ಹಾಲು ಅನ್ನವ ಇನ್ನೊಂದ ತುತ್ತ ಮಿಗಲಾಗಿ
ಇನ್ನೊಂದು ತುತ್ತ ಮಿಗಲಾಗಿ ಉಣ್ಣವ್ವ

ನಿಮ್ಮವ್ವನ ಕೇಳೆ ಕುದರೇಯ
ತುಪ್ಪದಲಿ ಉಂಡಾಳೆ ತುಪ್ಪದಲಿ ಕೈ ತೊಳದಾಳೆ
ಅವರ ಅಪ್ಪಾಗೆ ಹೇಳಾದೆ ಹೊರಟಾಳೆ
ಹಾಲಲಿ ಉಂಡಾಳೆ ಹಾಲಲಿ ಕೈ ತೊಳದಾಳೆ
ಅವರ ಅವ್ವಗೆ ಹೇಳದೆ ಹೊರಟಾಳೆ
ಎಣ್ಣೇಲಿ ಉಂಡಾಳೆ, ಎಣ್ಣೇಲಿ ಕೈ ತೊಳದಾಳೆ
ಅವರಣ್ಣಗೆ ಹೇಳದೆ ಹೊರಟಾಳೆ
ಅಡುಗೆ ಕೋಣೆಗೆ ಹೋಗ್ತಾಳೆ ಅವರವ್ವ
ಅಡುಗೆ ಕೋಣೇಲಿ ಮಗಳಿಲ್ಲ,
ಅಡುಗೆ ಕೋಣೇಲಿ ಮಗಳಿಲ್ಲ ಅಂತ ಹೇಳಿ
ಅಡದವ್ವಗ ದುಃಖ ಹೆರಿಗ್ಯಾದೋ
ಬಳೆಯ ತೊಡುವಾಗ ಬಳೆಗಾರಗೆ ಎಚ್ಚರ
ಬಳೆ ತೊಡೆಸಿ ಮಗಳ ಕರಕಂಡು
ಬಳೆ ತೊಡೆಸಿ ಮಗಳ ಕರಕೊಂಡು ಹೋಗುವಾಗ
ಬಳೆಗಾರಿಗೆ ದುಃಖ ಹೆರಿಗ್ಯಾದೋ
ಬುಟ್ಟರೆ ನಮ್ಮ ಬಾಲೆ ಬಟ್ಟೆ ಹುಡುಕು ಬರದು
ಒಳ್ಳೆ ಬುದ್ಯದೆ ಅವಳಲಿ
ಒಳ್ಳೆ ಬುದ್ಯದೆ ಸಭೆಗಳಿರ
ಬಾಲಣ್ಣನ ಸಮಕೆ ಸಲವಿರಿ
ಒಂದೇಯ ವರುಷ ಸಲವಿರಿ
ಒಂದೇಯ ವರುಷ ಸಲವಿರಿ ಸಭೆಗಳಿರ
ಅಯ್ಯೋ ನಮ್ಮೆಣ್ಣು ಅಬಲೆಯು
ಅಯ್ಯೋ ನಮ್ಮೆಣ್ಣು ಅಬಲೆಯು ಕುಂಡೋಯ್ತಿರಿ
ಒಡಯದೆ ಬಯ್ಯದೆ ಸಲವಿರಿ
ನಾವೇಕೆ ಒಡಯನ ನಾವೇಕೆ ಬಯ್ಯೋನ
ನಾವೇಕೆ ಒಡಯನ ನಮ್ಮಮ್ಮಗಂಜಿ ನಮಿಗಂಜಿ
ನಮ್ಮಮ್ಮ ಗಂಜಿ ನಮಗಂಜಿ ಬದುಕಿದರೆ
ಬಾಲಣ್ಣನ ಸಮಕೆ ಸಲವೇವು
ಎರಡೆಯ ವರುಷ ಸಲವಿರಿ
ಎರಡೆಯ ವರುಷ ಸಲವಿರಿ ಸಭೆಗಳಿರ
ಒಡೆಯದೆ ಬಯ್ಯದೆ ಸಲವಿರಿ
ನಾವೇಕೆ ಒಡಿಯನ ನಾವೇಕೆ ಬಡಿಯನ

ನಮ್ಮಮ್ಮ ಗಂಜಿ ನೆರಿಗಂಜಿ
ನಮ್ಮಮ್ಮ ಗಂಜಿ ನೆರಿಗಂಜಿ ಬದುಕಿದರೆ
ಬಾಲಣ್ಣನ ಸಮಕೆ ಸಲವೇವು
ಹತ್ತಿಮರ ಗಂಟ ಬಲ್ಲಿರೆ ನನ ಗೆಳತಿರ
ಅಲ್ಲಿಂದಿತ್ತಾಕೆ ಬರವಿರಿ
ಅಲ್ಲಿಂದಿತ್ತಾಕೆ ಬರವಿರಿ ನನ್ನ ಗೆಳತಿರ
ನಮ್ಮವ್ವನ ಸುಮ್ಮನೆ ಇರಹೇಳಿ
ಅಳ್ಳಿಮರಗಂಟ ಬಲ್ಲಿರೆ ನನ್ನ ಗೆಳತಿರ
ಅಲ್ಲಿಂದಿತ್ತಾಕೆ ಬರವಿರಿ,
ಅಲ್ಲಿಂದಿತ್ತಾಕೆ ಬರವಿರಿ ನನ್ನ ಗೆಳತಿರ
ನಮ್ಮಪ್ಪನ ಸುಮ್ಮನೆ ಇರಹೇಳಿ
ಗುಡ್ಡ ಮರಿಯಾದೊ ಗುಲಗಂಜಿ ಮರೆಯಾದೊ
ಒಡ್ಡಿದಾ ತುರುಬು ಮರೆಯಾದೊ
ಒಡ್ಡಿದಾ ತುರುಬು ಮರೆಯಾದೊ ಕಂದವ್ವ
ಬುಂಟು ಹೊಂಟೆ ನಿನ್ನ ಬಳುಗವ
ಬುಂಟು ಹೊಂಟೆ ನಿನ್ನ ಬಳುಗವ ನಮ್ಮವ್ವ
ಕಡೆಗಣ್ಣಲಿ ನೀರ ಬಿಡುತಾಳೆ
ಬೆಟ್ಟಕೆ ಬಿದುರಾಸೆ ಬಿದುರೀಗೆ ಎಲಿಯಾಸೆ
ನಿಮ್ಮಾಸೆ ನನಿಗೆ ಬಿಡದಲ್ಲೇ
ನಿಮ್ಮಾಸೆ ನನಿಗೆ ಹಡೆದವ್ವ
ನಡುಮಲ್ಲಿ ನವಲ ಬರೆದಿವಿನಿ
ನಡುಮಲ್ಲಿ ನವಲ ಬರೆದಿವಿನಿ ಹಡೆದವ್ವ
ಅದನೋಡಿ ನನ್ನ ಮರಿಯವ್ವ ಹಡೆದವ್ವ
ಯಾಲಕ್ಕಿ ಬಾಳೆ ಎಲೆಗೆ ಸುಣ್ಣವಕೊಳ್ಳಿ
ಬೂದುವೆ ಕೊಳ್ಳೆ ಮಡಲಿಗೆ ಕಂದವ್ವ
ಬೂದುವೆ ಕೊಳ್ಳೆ ಮಡಲಿಗೆ ಕಂದವ್ವ
ಚಿಗುರೆಲೆ ಕೊಳ್ಳೆ ಮಡಲಿಗೆ
ಚಿಗುರೆಲೆ ಕೊಳ್ಳೆ ಬುಟ್ಟು ಹೊಂಟೆ ನಿನ್ನ ಬಳುಗವ
ಬುಟ್ಟು ಹೊಂಟೆ ನಿನ್ನ ಬಳುಗುವ
ನಿಮ್ಮಪ್ಪ ಕಡೆಗಣ್ಣಲಿ ನೀರ ಬಿಡುತಾನೆ
ಹರಗಿದ್ದ ಹೊಲಕ್ಕೆ ಹವಳ ಸಾಲಿಟ್ಟಂಗೆ
ಅವಳಡೆದವ್ವನ ಹೊಟ್ಟೆ ಬಗಿದಿದೆ

ಉತ್ತಹೊಲದಲ್ಲಿ ಹವಳ ಸಾಲಿಟ್ಟಂಗೆ
ಅವಳ ಹಡೆದವ್ವನ ಹೊಟ್ಟೆ ಬಿಗಿದಿದೆ.
ಉತ್ತ ಹೊಲದಲ್ಲಿ ಮುತ್ತು ಸಾಲಿಟ್ಟಂಗೆ
ಅವಳ ಹೆತ್ತವ್ವನ ಹೊಟ್ಟೆ ಬಿಗಿದಿದೆ
ಒಂದಚ್ಚು ಪಡಿ ಭತ್ತ ಮಡುಲಲಿ ಕಟ್ಟಕೊಂಡು
ಒಂದಷ್ಟು ಪಡಿ ಭತ್ತ ಆಗೋಗಿ ಆಗ ಉಣ ಬೇಡ
ಆಗೋಗಿ ಆಗ ಉಣಬೇಡ
ಆಗೋಗಿ ಆಗ ಉಣಬೇಡ ಕಂದಮ್ಮ
ತವರೀಗೆ ಬಡತನ ಬರುತದೆ
ಮಾವಿನ ಮರದಡಿ ಮಾವ ಕೂತುಕೊಂಡು
ಮಾವ ಕೂಗಿದರೆ ಧನಿ ತೋರೆ
ಮಾವ ಕೂಗಿದರೆ ಧನಿ ತೋರೆ ಪುಟುಮುದ್ದೆ
ಮಾವನ ಪಡೆದಲ್ಲೆ ಶಿವನಿಂದ
ಹತ್ತಿ ಮರದಡಿ ನಿಮ್ಮ ಅತ್ತೆ ಕೂತುಕೊಂಡು
ಹತ್ತಿ ಮರದಡಿ ನಿಮ್ಮ ಅತ್ತೆ ಕೂತುಕೊಂಡು
ನಿಮ್ಮತ್ತೆ ಕೂಗಿದರೆ ಧನಿ ತೋರೆ
ನಿಮ್ಮತ್ತೆ ಕೂಗಿದರೆ ಧನಿ ತೋರೆ ಪುಟು ಮುದ್ದೆ
ನಿಮ್ಮತೆ ಪಡೆದಲ್ಲೆ ಶಿವನಿಂದ
ಮಲ್ಲಿಗೆ ಮರದಡಿ ನಿಮ್ಮ ಮೈದ ಕೂತುಕೊಂಡು
ಮೈದ ಕೂಗಿದುರೆ ಧನಿ ತೋರೆ
ಮೈದ ಕೂಗಿದುರೆ ಧನಿ ತೋರೆ ಪುಟುಮುದ್ದೆ
ಮೈದನ ಪಡೆದಲ್ಲೆ ಶಿವನಿಂದ
ಹೂವಿಲ್ಲ ಸಾಲಕ್ಕೆ ಕೊನೆಯಿಲ್ಲ
ಜಾಲಿಯ ಮರವು ನೆರಳಲ್ಲ
ಜಾಲಿಯ ಮರವು ನೆರಳಲ್ಲ ಕಂದಮ್ಮ
ತಾಯಿಯ ಮನೆಯು ಸ್ಥಿರವಲ್ಲ
ಕಿತ್ತಲೆ ಹಣ್ಣ ಕಿರುದಾನ ಮಾಡಿದಂಗೆ
ಬೀಗ್ರೆ ನಿಮ್ಮ ಕೈಗೆ ಕೊಡತೀವಿ
ಬೀಗ್ರೆ ನಿಮ್ಮ ಕೈಗೆ ಸಭಿಗಳಿರ
ಬಾಲೆ ನಿಮ ಕೈಲಿ ಕೊಡುತೀವಿ ಸಭೆಗಳಿರ
ಬಾಲಣ್ಣನ ಸಮಕೆ ಸಲವಿರಿ,

೧.೨. ಗಾದೆಗಳು

ಜನಸಾಮಾನ್ಯರ ವಿಶ್ವಕೋಶವೂ ಆಗಿರುವ ಗಾದೆಗಳು ಅನಕ್ಷರಸ್ಥ ಜನಸಮುದಾಯದ ಆಳವಾದ ಜೀವನಾನುಭವಗಳಾಗಿವೆ. ಗಾದೆಗಳು ಎಂದಿಗೂ ತಮ್ಮ ಉಜ್ವಲತೆಯನ್ನು ಕಳೆದುಕೊಳ್ಳದೆ ಹೊಳೆಯುತ್ತಿರುವುದಕ್ಕೆ ನಿರಂತರವಾಗಿ ಚಾಲನೆಯಲ್ಲಿರುವುದೇ ಕಾರಣವಾಗಿದೆ. ಗಾದೆಯು ನಮ್ಮ ಅರಿವಿನ ಜಗತ್ತನ್ನು ವಿಸ್ತರಿಸುತ್ತವೆ. ಜೊತೆಗೆ ಜನಸಾಮಾನ್ಯರ ಬಾಳನ್ನು ರೂಪಿಸುವ ಕೈ ಹಿಡಿದು ನಡೆಸುವ ದಾರಿದೀಪಗಳಾಗಿವೆ. ಪ್ರಮುಖವಾದ ಕೆಲವು ಗಾದೆಗಳನ್ನು ಚರ್ಚಿಸಲಾಗಿದೆ.

"ಊರ ದನ ಕಾದು ದೊಡ್ಡ ಗೌಡ ಅನ್ನಿಸ್ಕೊಂಡ"

ದೊಡ್ಡ ಗೌಡ ಅಂದರೆ ಊರಿನ ಯಜಮಾನ ಎಂದರ್ಥ. ಊರಿನ ಮುಖಂಡನಿಗೆ ತಿಳಿವಳಿಕೆ ಇರಬೇಕು. ಆಗ ಮಾತ್ರ ಅವನಿಗೆ ಯೋಗ್ಯತೆಯಿರುತ್ತದೆ. ಇವುಗಳಿಲ್ಲದೆ ಊರಿನವರೆಲ್ಲರ ದನಕರುಗಳನ್ನು ಮೇಯಿಸಿಕೊಂಡು ಬರುವ ಕೆಲಸವನ್ನು ಮಾಡಿಕೊಂಡು ಎಲ್ಲರಿಗೂ ಸಹಾಯ ಮಾಡಿ ಅವರ ಪ್ರೀತಿ ಗಳಿಸಲು ಪ್ರಯತ್ನಿಸಿದಂತಾಗುತ್ತದೆ. ಇದರಿಂದ ಅವನು ಊರಿನ ಯಜಮಾನನೆಂದು ಕರೆಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಈ ಗಾದೆಯು ಗೌಡನ ಅಸಮರ್ಥತೆಯನ್ನು ತಿಳಿಸುತ್ತದೆ.

"ಅತ್ತೆಗೊಂದು ಕಾಲ ಸೊಸೆಗೊಂದು ಕಾಲ"

ಕಾಲ ಒಂದೆಡೆ ನಿಲ್ಲುವುದಿಲ್ಲ, ಸದಾ ತಿರುಗುತ್ತಿರುತ್ತದೆ. ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ಕಾಲ ಬಂದೇ ಬರುತ್ತದೆ. ಇಂದು ಸೊಸೆಯಾದವಳು ನಾಳೆ ಅತ್ತೆಯೂ ಆಗುತ್ತಾಳೆ. ಸೊಸೆಯನ್ನು ಪೀಡಿಸುವ ಅತ್ತೆಯು ಹಿಂದೊಮ್ಮೆ, ತಾನೂ ಸೊಸೆಯಾಗಿದ್ದಾಗ ಅತ್ತೆಯಿಂದ ಶೋಷಣೆಗೆ ಒಳಗಾದವಳೇ ಆಗಿರುತ್ತಾಳೆ. ಯಾರೂ ತಮ್ಮ ಈಗಿನ ಸ್ಥಿತಿಯೇ ಕೊನೆಯ ತನಕ ಸ್ಥಿರವಾಗಿರುತ್ತದೆಂದು ಭ್ರಮೆಯಲ್ಲಿ ಬದುಕಬೇಕಿಲ್ಲ. ಕಷ್ಟ ಸುಖಗಳು ರಾತ್ರಿ–ಹಗಲುಗಳಂತೆ ಬರುತ್ತವೆ, ಹೋಗುತ್ತವೆ. ಸ್ವಾರ್ಥ, ಅಹಂಕಾರವನ್ನು ಬಿಟ್ಟು ಮನುಷ್ಯ ಬದುಕಲು ಆರಂಭಿಸಿದರೆ ಪ್ರತಿಯೊಬ್ಬ ಮನುಷ್ಯನೂ ನೆಮ್ಮದಿಯಿಂದ ಜೀವನವನ್ನು ಮಾಡಬಹುದು.

"ಊರೆಲ್ಲ ನೆಂಟರು ಹಣದ ಗಂಟಿದ್ದರೆ"

ಸಿಹಿ ಕಂಡಾಗ ಸಾಲು ಇರುವೆಗಳು ಬಂದು ಮುತ್ತಿಕೊಳ್ಳುತ್ತವೆ. ಮುಗಿದ ಮೇಲೆ ತಮ್ಮ ಹಾದಿ ಹಿಡಿದು ಹೊರಟುಹೋಗುತ್ತವೆ. ಹಣ ಎಂದರೆ ಹೆಣವೂ ಬಾಯಿ ಬಿಡುವುದುಂಟು. ಹಣ ಮನುಷ್ಯನನ್ನು ಕುಣಿಸುತ್ತದೆ. ನಂತರ ಹಣವೇ ಅವನನ್ನು ಅಳಿಸಿಹಾಕುತ್ತದೆ. ಅಧಿಕಾರ ಇದ್ದಾಗ ನೂರಾರು ಜನರು ಬಂಧುಗಳೆಂದು, ಗೆಳೆಯರೆಂದು ಹೇಳಿಕೊಳ್ಳುತ್ತಾರೆ. ಅಧಿಕಾರ ಕಳೆದುಹೋದ ನಂತರ ಎಲ್ಲರೂ ದೂರವಾಗುತ್ತಾರೆ. ಹಣ ಇದ್ದರೆ ಎಲ್ಲರೂ ನೆಂಟರಾದರು ಹಣವಿಲ್ಲದಾಗ ಯಾರು ನಮ್ಮೊಂದಿಗೆ ಉಳಿಯುವುದಿಲ್ಲ ಎಂಬ ಆಶಯವಿದೆ.

ಅ) ಸಂಬಂಧಿ ವಾಚಕ ಗಾದೆಗಳು

೧. ಆರು ದೋಸೆ ಕೊಟ್ಟರೆ ಅತ್ತೆ ಕಡೆಗೆ ಮೂರು ದೋಸೆ ಕೊಟ್ಟರೆ ಮಾವನ ಕಡೆಗೆ
೨. ಬಾಳೆ ಕಡಿಯಾಕೆ ನನ್ನ ಗಂಡ ಗೂಳಿ ಅಂತಿದ್ಲಂತೆ
೩. ಅಪ್ಪನ ಕಾಲದಿಂದ ಕಾಣೆ ಉಪ್ಪಾಕಿದ ಗಂಜಿಯ
೪. ಅಳು ನೋಡಿದ್ರೆ ಗಟಾನುಗಟಿ ಒಳಗೆ ನೋಡಿದ್ರೆ ಲೊಟಾಪಿಟಿ
೫. ಊರು ಮೇಲೆ ಊರು ಬಿದ್ದರೆ ಶ್ಯಾನುಭೋಗನ ಸಾಟಕ್ಕೇನು
೬. ಒಲ್ಲದ ಗಂಡನ್ಗೆ ಮೊಸರಲ್ಲಿ ಕಲ್ಲು
೭. ಅತ್ತೇದ ಅಳಿಯ ದಾನ ಮಾಡಿದಂಗೆ
೮. ಅಕ್ಕ ನನ್ನೋಳಾದ್ರು ಭಾವ ನನ್ನೋನೆ
೯. ಯೋಗಿ ಪಡೆದದ್ದು ಯೋಗಿಗೆ ಜೋಗಿ ಪಡೆದದ್ದು ಜೋಗಿಗೆ
೧೦. ಆತುರಕ್ಕೆ ಅತ್ತೆ ಕೆಡಿಕೊಂಡ್ನಂತೆ
೧೧. ಕುಣಿಲಾರದ ಸೂಳೆ ನೆಲ ಡೊಂಕು ಎಂದ್ಲಂತೆ
೧೨. ಅಜ್ಜಿಗೆ ಅರಿವೆ ಚಿಂತೆಯಾದರೆ ಮೊಮ್ಮಗಳಿಗೆ ಗಂಡನ ಚಿಂತೆ
೧೩. ಕೂಸು ಹುಟ್ಟೋಕು ಮೊದಲೆ ಕುಲಾವಿ ಹೊಲಸಿದರಂತೆ

ಆ) ಅಂಗಾಂಗ ಸಂಬಂಧಿ ಗಾದೆಗಳು

೧. ಚಿನ್ನದ ಸೂಜಿ ಅಂತ ಕಣ್ಣಿಗೆ ಚುಚ್ಚಿಕೊಳ್ಳಕ್ಕೆ ಆಗುತ್ತ
೨. ಕೊಚ್ಚೆ ಮೇಲೆ ಕಲ್ಲಾಕಿ ಮುಖಕ್ಕೆ ಹಾರಿಸಿಕೊಂಡಂಗೆ ಆಯ್ತು
೩. ಅವನ ಕಾಲ ದಸೀಲಿ ನುಸಿ ಬುದ್ಧಿ ಬರುತ್ತೆ
೪. ಹಣ್ಣು ತಿಂದೋನು ನುಣುಚಿಕೊಂಡ ಸಿಪ್ಪೆ ತಿಂದೋನು ಸಿಕ್ಕಾಕಿಕೊಂಡ
೫. ಕುಂಡಗಣ್ಣಿಗಿಂತ ಮೆಳ್ಳಗಣ್ಣಿವಾಸಿ
೬. ಕಂಡದ್ದ ಕಂಡಂಗೆ ಹೇಳಿದ್ರೆ ಕಣ್ಣಿಗೆ ಕಡ್ಡಿ ಚುಚ್ಚಿದಂಗೆ ಆಡ್ತಾರೆ
೭. ಚಿನ್ನದ ಕತ್ತಿ ಅಂತ ಮೂಗು ಕುಯ್ಕೊಳಕಾದೀತೆ
೮. ವಾಲೆ ಇದ್ದೋಳು ವಾಲೆ ಇಕ್ಕೊಂಡ್ರೆ ವಾಲಿಲ್ಲದೋಳು ಕಿವಿ ಕಿತ್ಕೊಂಡ್ಲಂತೆ
೯. ದಂಡಿಗೆ ಹೆದರಲಿಲ್ಲ ದಾಳಿಗೆ ಹೆದರಲಿಲ್ಲ, ಕುಂಡ್ಮೈದ ನಿನ್ನ ಕುಂಟಸಾಟಕ್ಕೆ ಹೆದರೇನೆ
೧೦. ಸಾಟಕ್ಕೆ ಹೆದರಿ ಸೀರೆ ಉಡದೆ ಇರೋಕಾದೀತ
೧೧. ನೀರಿಗೆ ಬೆಳ್ಳೆಟ್ಟೆ ಚೀಪದಂಗಾಯ್ತು
೧೨. ಬಾಯಿಗೆ ರುಚಿ ತಿಕ್ಕೆ ಫಜೀತಿ
೧೩. ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂವು
೧೪. ಜೇನು ಬಿಚ್ಚಿದವನು ಕೈಯ ನೆಕ್ಕದೆ ಇರತಾನ
೧೫. ಕಾಮಾಲೆ ಕಣ್ಣೋನ್ಗೆ ಕಾಣೋದೆಲ್ಲ ಹಳದಿ

೧೬. ಮೀಸೆ ಮೂಡೋ ಹೈದನಿಗೆ ದೇಶ ಕಾಣದು, ಮೊಲೆ ಮೂಡೋ ಹೆಣ್ಣಿಗೆ ನೆಲ ಕಾಣದು
೧೭. ಪಾಪಿ ಸಮುದ್ರಕ್ಕೋದ್ರು ಮೊಣಕಾಲ್ಲುದ್ದ ನೀರು
೧೮. ಹಣೆ ಬರಕ್ಕೆ ಹೊಣೆ ಯಾರು?
೧೯. ಉಚ್ಚೆ ಕುಡಿದರೂ ತನ್ನಿಚ್ಚೇಲಿ ಕುಡಿಬೇಕು, ದೇಸಾಂತ್ರ ಹೋದ್ರು ಸ್ವತಂತ್ರ ಹೋಗಬೇಕು.
೨೦. ಬಡವನ ಕೋಪ ದವಡೆಗೆ ಮೂಲ

ಇ) **ಪ್ರಾಣಿಪಕ್ಷಿ ಸಂಬಂಧಿ ಗಾದೆಗಳು**

೧. ಕೊಟ್ಟೋನು ಕೋಡಂಗಿ ಈಸಿಕೊಂಡೋನು ವೀರಭದ್ರ
೨. ತಿವಿಯುವ ಎತ್ತಿನ ಮುಂದೆ ಹೋಗಬೇಡ, ಒದೆಯೋ ಕತ್ತೆಯ ಹಿಂದೆ ಹೋಗಬೇಡ
೩. ಕತ್ತೆಗೇನು ಗೊತ್ತು ಕಸ್ತೂರಿ ವಾಸನೆ
೪. ನಾಯಿ ಬಾಲ ಯಾವತ್ತಿಗು ಡೊಂಕು
೫. ಗಿಳಿನ ಸಾಕಿ ಗಿಡುಗನಿಗೆ ಕೊಟ್ಟಂಗೆ ಆಯ್ತು
೬. ಕೆಂಬೂತ ಕುಣಿಯಕೋಗಿ ಪುಕ್ಕ ತರ್‍ಕೊತಂತೆ
೭. ಕೋತಿಗೆ ಹೇಳಿದ್ದಕ್ಕೆ ಕೋತಿ ಬಾಲಕ್ಕೆ ಹೇಳಿತಂತೆ
೮. ಬೆಕ್ಕಿಗೆ ಗಂಟೆ ಕಟ್ಟುವವರು ಯಾರು
೯. ಎತ್ತೀತು ಅಂದ್ರೆ ಕೊಟ್ಗೆಗೆ ಕಟ್ಟು ಅಂತಿದ್ರಂತೆ
೧೦. ಎತ್ತು ಏರಿಗೆಳೆದರೆ ಕೋಣ ನೀರಿಗೆಳೆಯಿತು
೧೧. ಎಮ್ಮೆಗೆ ಈಯೋ ದುಃಖ ಕೋಣನಿಗೆ ಕೊಸೆಯೋ ದುಃಖ
೧೨. ಬೆಕ್ಕಿಗೆ ಚೆಲ್ಲಾಟ ಇಲಿಗೆ ಪ್ರಾಣ ಸಂಕಟ
೧೩. ಹೆತ್ತೋರ್‍ಗೆ ಹೆಗ್ಣ ಮುದ್ದು ಕೂಡಿದೋರಿಗೆ ಕೋಡಗ ಮುದ್ದು
೧೪. ಹಾವಿನ ಮಚ್ಚರ ಹನ್ನೆರಡು ವರುಷ
೧೫. ಹಿಟ್ಟು ಹಳಸಿತ್ತು ನಾಯಿ ಕಾದಿತ್ತು
೧೬. ಎಂಜಲ ಕೈಯಲ್ಲಿ ಕಾಗೆ ಓಡಿಸೋ ಜನ

ಈ) **ಸಂಕೀರ್ಣ ಗಾದೆಗಳು**

೧. ಹಗ್ಗದ ಕಾಸು ಅಂತ ಮುಗ್ಗಲುಳ್ಳಿ ತಿನ್ನೋಕಾದೀತ
೨. ಒಗ್ಗಿದ ಕತ್ತೆ ಅಗಸಗಿತ್ತಿತಾಕೆ ಹೋಯ್ತಿತಂತೆ
೩. ಗಾಣಗಿತ್ತಿ ಅಯ್ಯೋ ಅಂದ್ರೆ ಮಗುವಿನ ನೆತ್ತಿ ತಣ್ಣಗಾದೀತೆ
೪. ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ
೫. ಹೊಲೇನ ಹೊಟ್ಟೇಲಿ ಹಾಕಿ ಮಾದಿಗನ ಹೊಟ್ಟೇಲಿ ತಗೀತಾಳೆ
೬. ಹೊಲೆಯ ಮಾಡಿದ್ದು ಹೆಂಡಕ್ಕೆ, ಒಕ್ಕಲಿಗ ಮಾಡಿದ್ದು ದಂಡಕ್ಕೆ ಹಾರುವ ಮಾಡಿದ್ದು ಪಿಂಡಕ್ಕೆ

೭. ಮಳೆ ಹುಯ್ದರೆ ಕೇಡೋ ಮಕ್ಕಳಾದರೆ ಕೇಡೋ

೮. ಅತ್ತದ ಮಳೆ ಎತ್ತಿಂದಾರು ಬತ್ತದೆ

೯. ಕಂಟ ಚಿತ್ತೆ ಮಳೆ ಕಣ್ಣು ಕಾಣದೆ ಸುರಿತದೆ

೧೦. ಕೊಟ್ಟೆಣ್ಣು ಕುಲಕ್ಕೆ ಹೊರಗು

೧೧. ಸಂತೆ ಸೇರೇಕು ಮೊದ್ಲೆ ಗಂಟು ಕಳ್ಳರು ಸೇರಿದ್ರು

೧೨. ರಾತ್ರಿ ಕಂಡ ಬಾವಿಗೆ ಹಗಲು ಬಿದ್ದಾಗೆ ಆಯ್ತು

೧೩. ದಾಕ್ಷಿಣ್ಯಕ್ಕೆ ಬಸಿರಾಗಿ ಹೆರೋಕೆ ಜಾಗಿಲ್ಲ ಅಂದಂಗಾಯ್ತು

೧೪. ಥೂ ಅಂದ್ರೆ ನನ್ನ ಬಾ ಅಂದ್ರು ಅಂತ

೧೫. ನಿನ್ನ ಯಾಸಕ್ಕಷ್ಟು ದೋಸೆ ಹುಯ್ಯ

೧೬. ಬೆಂಕಿ ಇಲ್ಲದೆ ಹೊಗೆಯಾಡುವುದಿಲ್ಲ

೧೭. ಊರಿಗೆ ಬಂದೋಳು ನೀರಿಗೆ ಬರಲ್ವೆ

೧೮. ಮಾಡಿದ ಹೊಲ ನೋಡದೆ ಕೆಡ್ತು

೧೯. ಮನೆ ಮನೆ ಮುದ್ದೆ ಮಾರಿಗುಡಿನಲ್ಲಿ ನಿದ್ದೆ

೨೦. ಬೇಸಾಯ ನೀಸಾಯ, ನಿನ್ ಮನೆ ಮಕ್ಕಳೆಲ್ಲ ಸಾಯ

೨೧. ಮಂತ್ರಕ್ಕೆ ಮಾವಿನ ಕಾಯಿ ಉದುರೀತೆ

೨೨. ಉಪ್ಪು ಕೊಟ್ಟೋನ ಮುಪ್ಪಿನ ತನಕ ನೆನಿ

೨೩. ಕಬ್ಬಿಣದಂಗಡೀಲಿ ನೊಣಕ್ಕೇನು ಕೆಲಸ ಅಂತ

೨೪. ಹೂವಿನಿಂದ ನಾರು ಸ್ವರ್ಗಕ್ಕೆ ಸೇರದಂಗೆ

೨. ಜನಪದ ಪ್ರದರ್ಶನ ಕಲೆಗಳು

ಮಾನವನ ಸಾಂಸ್ಕೃತಿಕ ಬದುಕನ್ನು ಜನಪದ ಪ್ರದರ್ಶನ ಕಲೆಗಳು ತಿಳಿಸಿಕೊಡುತ್ತವೆ. ಗ್ರಾಮೀಣ ಜನಪದರ ಬದುಕಿನ ಅವಿಭಾಜ್ಯ ಅಂಗವಾದ ಈ ಕಲೆಗಳು ಕೇವಲ ಮನೋರಂಜನೆಗಷ್ಟೆ ಮೀಸಲಾಗಿಲ್ಲ. ಇವು ಜನಪದರ ಗ್ರಾಮ ಜೀವನದ ಉಸಿರಾಗಿ ಮನಸ್ಸಿಗೆ ಉಲ್ಲಾಸವನ್ನು ತಂದುಕೊಡುತ್ತವೆ. ಜನಪದ ಕಲೆಗಳು ಜನಪದದ ಕಲಾತ್ಮಕ ಅಭಿವ್ಯಕ್ತಿ. ವರ್ಣರಂಜಿತವಾದ ವೇಷಭೂಷಣ, ಸುಮಧುರ ವಾದ್ಯಮೇಳ, ಸಂಭಾಷಣೆ, ಹಾಡುಗಾರಿಕೆ, ಕುಣಿತ, ಅಭಿನಯ ಮೊದಲಾದ ಅಂಶಗಳನ್ನು ತನ್ನಲ್ಲಿ ಅಡಗಿಸಿಕೊಂಡಿದೆ. ಜನಪದ ಕಲೆಗಳು ಸಮುದಾಯದ ಬದುಕಿನ ಮೌಲ್ಯಗಳನ್ನು ಒಳಗೊಂಡಿರುವ ಸಂಸ್ಕೃತಿಯ ಕುರುಹುಗಳು ಆಗಿವೆ. ಕೆಲವು ಜನಪದ ಕಲೆಗಳು ಒಂದು ಪ್ರದೇಶಕ್ಕೆ ಮಾತ್ರ ಸೀಮಿತವಾದರೆ ಮತ್ತೆ ಕೆಲವು ಸಾರ್ವತ್ರಿಕ ಜನಪ್ರಿಯತೆಯನ್ನು ಪಡೆದುಕೊಂಡಿವೆ. ಐಕನಹಳ್ಳಿ ಗ್ರಾಮದಲ್ಲಿ ಕೋಲಾಟ, ಮಳೆರಾಯನ ಕುಣಿತ, ರಂಗದ ಕುಣಿತ,

ಸೋಮನ ಕುಣಿತ, ನಾಟಕ ಕಲೆ ಮುಂತಾದವುಗಳನ್ನು ಕಾಣಬಹುದಾಗಿದೆ. ಇವುಗಳನ್ನು ಕುರಿತು ಸಂಕ್ಷಿಪ್ತವಾಗಿ ಪರಿಚಯಿಸಲಾಗಿದೆ.

ಅ) ಕೋಲಾಟ

ಜನಪದ ಪ್ರದರ್ಶನಗಳಲ್ಲಿ ಕೋಲಾಟ ಬಹು ಜನಪ್ರಿಯವಾದ ಕಲೆಯಾಗಿದೆ. ದಿನವೆಲ್ಲ ದುಡಿದ ಜನಪದರು ಸುಗ್ಗಿಯ ದಿನಗಳಲ್ಲಿ, ಬೆಳದಿಂಗಳ ರಾತ್ರಿಗಳಲ್ಲಿ ಮನೋರಂಜನೆಗಾಗಿ ಕೋಲಾಟವಾಡುತ್ತಾರೆ. ಇಂಥ ಸಾಮೂಹಿಕ ಕೋಲಾಟಗಳೆಂದರೆ ಒಂದು ನಯನ ಮನೋಹರ ದೃಶ್ಯ. ಕೈಯಲ್ಲಿ ಹಿಡಿಯಲು ಅನುಕೂಲವಾಗುವಂತೆ ಸುಲಭ ಅಳತೆಯ ಕೋಲುಗಳನ್ನು ಹಿಡಿದು, ಕಾಲಿಗೆ ಗೆಜ್ಜೆ ಕಟ್ಟಿ, ಹಾಡುಗಳನ್ನು ಹಾಡುತ್ತಾ, ಕುಣಿಯುತ್ತಾ, ಕೋಲು ಹುಯ್ಯುವ ರೀತಿ ಹಿರಿಯರು ಕಿರಿಯರೆಲ್ಲರನ್ನು ಆಕರ್ಷಿಸುತ್ತದೆ. ಕೋಲಾಟ ಕಲೆ ಉತ್ತಮ ವ್ಯಾಯಾಮದ ಸಾಧನವಾಗಿ ಆಟಗಾರರ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಸಹಕಾರಿಯಾಗುತ್ತದೆ.

ಕೋಲಾಟವಾಡುವಾಗ ವ್ಯಕ್ತಿಗಳು ಸಮಸಂಖ್ಯೆಯಲ್ಲಿರಬೇಕು. ಕೋಲು ಹಿಡಿಯುವ ಮುನ್ನ ಕಲಾವಿದರುಗಳೆಲ್ಲಾ ವರ್ತುಲಾಕಾರದಲ್ಲಿ ಸೇರಿ ರಂಗದ ಮಧ್ಯೆ ಕೋಲುಗಳನ್ನು ಇರಿಸಿ, ಪೂಜಿಸಿ, ಕೋಲು ಮೇಳದ ಗುರುವಿಗೆ ವಂದಿಸಿ ಕೋಲಾಟವಾಡಲು ಪ್ರಾರಂಭಿಸುತ್ತಾರೆ. ಪಕ್ಕದಲ್ಲಿರುವವರ ಕೋಲಿಗೆ ಹೊಡೆಯುವುದು, ಎದುರಿನಲ್ಲಿರುವವರ ಕೋಲಿಗೆ ಹೊಡೆಯುವುದು, ತಮ್ಮದೇ ಕೋಲುಗಳನ್ನು ಬಡಿಯುವುದು, ಒಂದು ಹಗ್ಗವನ್ನು ಸೊಂಟಕ್ಕೆ ಸುತ್ತಿಕೊಂಡು ಕೋಲಾಟವಾಡುವುದು, ಒಬ್ಬರಿಗೊಬ್ಬರು ಕೋಲು ಕೊಡುವುದು ಹೀಗೆ ಹಲವು ರೀತಿಯಲ್ಲಿ ಆಡುತ್ತಾರೆ. ಕೋಲನ್ನು ಹಿಡಿದಿರುವ ಸಂಗಾತಿಗಳು ಕೋಲುಗಳಿಗೆ ವಿವಿಧ ವಿನ್ಯಾಸಗಳಲ್ಲಿ, ಲಯಗಳಲ್ಲಿ ತಾಕಿಸುತ್ತ, ಹಾಡುತ್ತ ಕುಣಿಯುವ ಕುಣಿತವೇ ಕೋಲಾಟ. ಮೊಳಕಾಲಿನವರೆಗೆ ಎತ್ತಿ ಕಟ್ಟಿದ ಏರುಗಚ್ಚೆ, ಅಂಗಿ, ಸೊಂಟಕ್ಕೆ ಅಡ್ಡಲಾಗಿ ಸುತ್ತಿದ ವಸ್ತ್ರ ಇವಿಷ್ಟು ವೇಷಭೂಷಣಗಳು. ಕೆಲವರು ತಲೆಗೆ ಟವಲ್ಲನ್ನು ಸುತ್ತಿಕೊಳ್ಳುತ್ತಾರೆ. ಕೋಲಾಟದಲ್ಲಿ ದಮ್ಮಡಿ ಹಾಗು ತಾಳಗಳನ್ನು ಹಿಮ್ಮೇಳದ ವಾದ್ಯಗಳಾಗಿ ಬಳಸಿಕೊಳ್ಳುತ್ತಾರೆ. "ಕೋಲಾಟವು ಮೇಲುನೋಟಕ್ಕೆ ಲೌಕಿಕ ಕಲೆಯಾಗಿ ಗೋಚರಿಸಿದರೂ, ಒಳಹೊಕ್ಕು ನೋಡಿದಾಗ ಇದೊಂದು ಸಾಹಸ ಕಲೆ. ದೊಣ್ಣೆ ವರಸೆ, ಕತ್ತಿ ವರಸೆಗಳಂತೆ ಶಾರೀರಿಕ ಬಲ ಮತ್ತು ಬುದ್ಧಿಯ ಕೌಶಲ್ಯಗಳೆರಡೂ ಕೋಲಾಟದಲ್ಲಿ ಅಭಿವ್ಯಕ್ತಗೊಳ್ಳುತ್ತವೆ. ಕೋಲಾಟದ ಹೆಜ್ಜೆಯ ಗತ್ತುಗಳು, ಸೊಂಟದ ಬಾಗು-ಬಳುಕುಗಳು, ಕೈಚಳಕ, ಹಾರುವಿಕೆ, ಕುಪ್ಪಳಿಸುವಿಕೆ, ಜಿಗಿತ ಎಲ್ಲವೂ ಸಾಹಸ ಕಲೆಯಲ್ಲಿ ಪ್ರದರ್ಶನಗೊಳ್ಳುವಂತಹ ಚಟುವಟಿಕೆಗಳಾಗಿವೆ."[೧] "ತಂಡದ ನಾಯಕ ದಮ್ಮಡಿ ಬಡಿಯುತ್ತ ಹಿಮ್ಮೇಳವನ್ನು ನುಡಿಸುತ್ತಿದ್ದರೆ ಕಲಾವಿದರು ಅದರ ಲಯಕ್ಕೆ ತಮ್ಮ ಕೋಲು ಹಾಗು ಗೆಜ್ಜೆಗಳನ್ನು ಸಮಗೊಳಿಸಿ ಕುಣಿಯುತ್ತ ಹಾಡನ್ನು ಪುನರಾವರ್ತಿಸುತ್ತಾ ನಾನಾ ಭಂಗಿಗಳಲ್ಲಿ ಕುಣಿಯುತ್ತಾರೆ. ಐತಿಹಾಸಿಕ ವ್ಯಕ್ತಿ ಮತ್ತು ಘಟನೆಗಳನ್ನು ಗ್ರಾಮದೇವತೆಗಳನ್ನು ಒಳಗೊಂಡ ದೀರ್ಘ ಕಥನಗೀತೆಗಳನ್ನು ಲಾವಣಿ

ಪದಗಳನ್ನು ಕೋಲಾಟ ಪದಗಳು ಒಳಗೊಂಡಿರುವುದುಂಟು."[೨] ನಂಜನಗೂಡಿನ ನಂಜುಂಡೇಶ್ವರ, ಮಲೆ ಮಹದೇಶ್ವರ, ಆದಿಚುಂಚನಗಿರಿಯ ಭೈರವ, ಪಿರಿಯಾಪಟ್ಟಣದ ಕಾಳಗ ಮುಂತಾದವು ಕೋಲಾಟದ ಕಥಾವಸ್ತುಗಳಾಗುವುದು ಉಂಟು. ಹೀಗೆ ಕೋಲಾಟವು ಒಳ್ಳೆಯ ಮನೋರಂಜನೆಯ ಜೊತೆಗೆ ವ್ಯಾಯಾಮವನ್ನು ನೀಡಿ ಮನುಷ್ಯನನ್ನು ಉಲ್ಲಾಸಗೊಳಿಸುತ್ತದೆ. ಕೋಲಾಟವನ್ನು ಚೆನ್ನಾಗಿ ಕಲಿತುಕೊಂಡಿರುವವರು ಕೋಲಾಟದ ಗುರುಗಳಾಗಿ ಈ ಕಲೆಯನ್ನು ಉಳಿಸಿ ಬೆಳೆಸಿಕೊಂಡು ಬರುತ್ತಿದ್ದಾರೆ.

ಆ) ನಾಟಕ ಕಲೆ

ನಾಟಕ ಕಲೆ ಜನಪದರಿಗೆ ಕರಗತವಾಗಿಬಿಟ್ಟಿದೆ. ನಾಸಿಂಗನಹಳ್ಳಿಯ ಗೋವಿಂದಪ್ಪ ಮಾಸ್ಟರು ಕಳೆದ ೩೫–೪೦ ವರ್ಷಗಳಿಂದ ಗ್ರಾಮದ ಕಲಾವಿದರಿಗೆ ನಾಟಕ ಕಲಿಸುತ್ತಿದ್ದಾರೆ. ಸಾಮಾನ್ಯವಾಗಿ ಪ್ರತಿವರ್ಷ ದೀಪಾವಳಿ ಹಬ್ಬದ ಸಂದರ್ಭದಲ್ಲಿ ನಾಟಕವನ್ನು ಪ್ರದರ್ಶಿಸುತ್ತಾರೆ. ಪೌರಾಣಿಕ ನಾಟಕಗಳಾದ ಸತ್ಯವ್ರತ ಶನಿಮಾತ್ಮ, ಕುರುಕ್ಷೇತ್ರ, ಸಂಪೂರ್ಣ ರಾಮಾಯಣ, ಪಾಂಡವ ವಿಜಯ, ಶ್ರೀಕೃಷ್ಣ ಸಂಧಾನ ಮೊದಲಾದ ನಾಟಕಗಳ ಜೊತೆಗೆ ಬಸ್ ಕಂಡೆಕ್ಟರ್, ಮುದುಕನ ಮದುವೆ ಸೇರಿದಂತೆ ಹಲವು ಸಾಮಾಜಿಕ ನಾಟಕಗಳನ್ನು ಆಡಿ ಪ್ರೇಕ್ಷಕರನ್ನು ರಂಜಿಸುತ್ತಾರೆ. ಹಬ್ಬಕ್ಕೆ ಬರುವ ಬಂಧು ಬಳಗವನ್ನು ಸಂತಸ ಪಡಿಸುವ ಮಾರ್ಗವಾಗಿ ನಾಟಕದ ಕಲೆಯನ್ನು ರೂಢಿಸಿಕೊಂಡು ಬಂದಿದ್ದಾರೆ.

ಇ) ಮಳೆರಾಯನ ಕುಣಿತ

ಒಕ್ಕಲಿಗರ ಪ್ರಮುಖ ವೃತ್ತಿ ವ್ಯವಸಾಯ. ಇವರು ಬೆಳೆಗಳನ್ನು ಬೆಳೆಯಲು ಮಳೆಯನ್ನೆ ಹೆಚ್ಚು ಆಶ್ರಯಿಸಿದ್ದಾರೆ. ಕೆಲವು ಸಾರಿ ಬೆಳೆಗೆ ಮಳೆಯ ಅವಶ್ಯಕತೆಯಿದ್ದಾಗ ಮಳೆ ಬರುವುದಿಲ್ಲ. ಬೆಳೆಗಳನ್ನು ಕಟಾವು ಮಾಡುವ ಸಂದರ್ಭದಲ್ಲಿ ಮಳೆಯ ಅವಶ್ಯಕತೆಯಿರುವುದಿಲ್ಲ ಆಗ ಮಳೆ ಸುರಿದು ತೊಂದರೆ ಕೊಡುತ್ತದೆ. ಇದು ಒಕ್ಕಲಿಗನ ಬದುಕಿನ ಮೇಲೆ ದುಷ್ಪರಿಣಾಮವನ್ನು ಬೀರುತ್ತದೆ. ಇಂತಹ ಮಳೆರಾಯನನ್ನು ಕುರಿತಾದ ಕುಣಿತವನ್ನೆ "ಮಳೆರಾಯನ ಕುಣಿತ" ಎನ್ನುತ್ತಾರೆ. ಜೇಡಿ ಮಣ್ಣಿನಿಂದ ತಯಾರಿಸಿದ ಮಳೆರಾಯನ ವಿಗ್ರಹವನ್ನು ಹಲಗೆಯೊಂದರಲ್ಲಿಟ್ಟು ಹೂಗಳಿಂದ ಅಲಂಕರಿಸಿ ಗ್ರಾಮದ ಮನೆ ಮನೆಯ ಮುಂದೆ ಹೋಗಿ ನಿಂತು "ಹುಯ್ಯೊ ಹುಯ್ಯೊ ಮಳೆರಾಯ ಹೂವಿನ ತೋಟಕ್ಕೆ ನೀರಿಲ್ಲ" ಎಂದು ಹಾಡುತ್ತಾ ಕುಣಿಯುತ್ತಾರೆ. ಊರಿನ ಹೆಣ್ಣು ಮಕ್ಕಳು ಮನೆಯಲ್ಲಿದ್ದ ಅಲ್ಪಸ್ವಲ್ಪ ನೀರನ್ನು ತಂದು ವಿಗ್ರಹದ ಮೇಲೆ ಹಲಗೆಯನ್ನು ಹೊರುವವರ ಮೇಲೆ ಸುರಿದು ದವಸ ಧಾನ್ಯಗಳನ್ನು ದಾನವಾಗಿ ನೀಡುತ್ತಾರೆ. ಹೀಗೆ ಮಳೆರಾಯನ ಕುಣಿತವು ಒಕ್ಕಲಿಗರ ಬದುಕಿನಲ್ಲಿ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ.

ಈ) ರಂಗದ ಕುಣಿತ

ರಂಗದ ಕುಣಿತವನ್ನು ಸುಗ್ಗಿಯ ಕುಣಿತವೆಂದು ಕೂಡ ಕರೆಯುತ್ತಾರೆ. ಭೂಮಿಗೆ ಬಿತ್ತಿದ ಬೆಳೆ ಫಸಲನ್ನು ನೀಡಿದಾಗ, ವರ್ಷದ ದುಡಿಮೆಯ ಫಲವಾಗಿ ದವಸಧಾನ್ಯಗಳು ಮನೆಯ ಕಣಜ ಸೇರುವ ಮನೆ ಮಂದಿಗೆಲ್ಲಾ ನೆಮ್ಮದಿ ವಿಶ್ರಾಂತಿಯನ್ನು ನೀಡುವ ಕಾಲವಾಗಿದೆ. ಗ್ರಾಮ ದೇವತೆಯ ದೇವಾಲಯದ ಅಂಗಳದಲ್ಲಿ, ಊರಿನ ರಂಗದ ಬೀದಿಯಲ್ಲಿ ತಮಟೆ, ನಗಾರಿಗಳ ಸದ್ದಿಗೆ ಹೆಜ್ಜೆ ಹಾಕಿ ಕುಣಿಯುವಾಗ ತಲೆದೂಗುವ ಮಂದಿಯೆ ಇಲ್ಲ. ತಮ್ಮಟೆಯನ್ನು ಬಾರಿಸುವವರು ಒಬ್ಬರಾದರೆ, ಕುಣಿಯುವವರು ಹಲವರು. ಟವಲ್ಲನ್ನು ಕೈಯಲ್ಲಿ ಹಿಡಿದು, ಇನ್ನೊಂದು ಕೈಯನ್ನು ಸೊಂಟದ ಮೇಲಿಟ್ಟು ಯುವಕರು, ವಯಸ್ಕರೆಲ್ಲರು ಸೇರಿ ಕುಣಿಯುತ್ತಾರೆ. ರಂಗದ ಕುಣಿತದ ಸಂದರ್ಭದಲ್ಲಿ ಗ್ರಾಮದೇವತೆಗಳಿಗೆ ಸಂಬಂಧಿಸಿದ ಗೀತೆ, ಲಾವಣಿ, ಕಥೆಗಳನ್ನು ಹಾಡುತ್ತ ಕುಣಿಯುತ್ತಾರೆ. ಐಕನಹಳ್ಳಿ ಗ್ರಾಮದಲ್ಲಿ ರಂಗದ ಕುಣಿತ ಯುಗಾದಿ ಹಬ್ಬದ ದಿನ ಇಡೀ ರಾತ್ರಿ ನಡೆಯುತ್ತದೆ. ಸುತ್ತಮುತ್ತಲ ಹತ್ತಾರು ಹಳ್ಳಿಗಳಲ್ಲಿ ರಂಗದ ಹಬ್ಬವನ್ನು ಯುಗಾದಿ ಹಬ್ಬದ ನಂತರ ಬರುವ ಶನಿವಾರಗಳಂದು ಆಚರಿಸುತ್ತಾರೆ.

ಉ) ಸೋಮನ ಕುಣಿತ

ಗ್ರಾಮಗಳನ್ನು ರಕ್ಷಿಸುವ ಗ್ರಾಮ ದೇವತೆಗಳಿಗೆ ಅಂಗರಕ್ಷಕರಿದ್ದಾರೆ. ಹಬ್ಬ ಮತ್ತು ಉತ್ಸವಗಳನ್ನು ಮಾಡುವಾಗ ಸೋಮಗಳ ಮುಖವಾಡವನ್ನು ಹಾಕಿಕೊಂಡು ಕುಣಿಯುತ್ತಾರೆ. ಕೆಂಪು ಮುಖವಾಡವನ್ನು ಧರಿಸಿದವನನ್ನು ಚಿಕ್ಕಯ್ಯ ಎಂದು, ಅರಿಶಿಣದ ಮುಖವಾಡವನ್ನು ಧರಿಸಿರುವನನ್ನು ದೊಡ್ಡಯ್ಯ ಎಂದು ಕರೆಯುತ್ತಾರೆ. ಈ ಮುಖವಾಡಗಳನ್ನು ಎಲ್ಲರು ಧರಿಸುವಂತಿಲ್ಲ. ಕಂಕಣವನ್ನು ಕಟ್ಟಿಸಿಕೊಂಡಿರುವ ತುಳಸಿಯ ಹರಿಜನರ ಕುಟುಂಬದವರು ಮಾತ್ರ ಧರಿಸಿಕೊಳ್ಳಲು ಸಾಧ್ಯ. ಇವರು ವೀರಭದ್ರಸ್ವಾಮಿ ದೇವಸ್ಥಾನದ ಅರ್ಚಕರು ಆಗಿದ್ದಾರೆ. ಧಾರ್ಮಿಕ ಹಿನ್ನೆಲೆಯನ್ನು ಹೊಂದಿರುವ ಸೋಮನ ಕುಣಿತ ಶಕ್ತಿ ದೇವತೆಗಳಿಗೆ ಸಂಬಂಧಿಸಿದ ಕುಣಿತವಾಗಿದೆ. ದೇವತೆಗಳ ಉತ್ಸವಗಳಲ್ಲಿ ದೇವಿಯ ಹಿಂದೆ ಸೋಮಗಳ ಉತ್ಸವವೂ ಇರುತ್ತದೆ. ಸೋಮನ ಮುಖವಾಡಕ್ಕೆ ಬಣ್ಣ ಬಳಿದು, ಕಮಾನು ಕಟ್ಟಿ, ಸೀರೆ ಉಡಿಸಿ, ಅಲಂಕಾರ ಮಾಡಿ ತಯಾರು ಮಾಡುತ್ತಾರೆ. ಸೋಮನನ್ನು ಕುಣಿಸುವ ಜವಾಬ್ದಾರಿಯನ್ನು ಪ್ರತಿವರ್ಷ ಊರಿನ ಒಂದೊಂದು ಪಂಗಡದವರು ವಹಿಸಿಕೊಳ್ಳುತ್ತಾರೆ.

೩. ಕರಕುಶಲ ಕಲೆಯಾಗಿ ರಂಗೋಲಿ

ಜನಪದ ಕರಕುಶಲ ಕಲೆಗಳಲ್ಲಿ ರಂಗೋಲಿ ಪ್ರಮುಖವಾದುದು. ಪ್ರತಿದಿನ ಮನೆಯ ಮುಂಬಾಗಿಲನ್ನು ಗುಡಿಸಿ ಸಗಣಿ ನೀರುಗಳನ್ನು ಹಾಕಿ ರಂಗೋಲಿಗಳನ್ನು ಹಾಕುವ ಪದ್ಧತಿ ಗ್ರಾಮದ ಎಲ್ಲ ಜನಾಂಗಗಳಲ್ಲು ಕಂಡುಬರುತ್ತದೆ. ಮನೆಯ ಮುಂಭಾಗದ ಅಂಗಳದಲ್ಲಿ, ಹೊಸ್ತಿಲಲ್ಲಿ, ದೇವರ ಮುಂದೆ, ಮದುವೆ, ಪೂಜೆ ಮುಂತಾದ ಸಂದರ್ಭಗಳಲ್ಲಿ ಹಲವು

ವಿನ್ಯಾಸಗಳಲ್ಲಿ ರಂಗುರಂಗಿನ ರಂಗೋಲಿಯನ್ನು ಹಾಕುತ್ತಾರೆ. ರಂಗೋಲಿಯು ಜನಪದ ಜೀವನ ರೀತಿಗಳನ್ನು, ನಂಬಿಕೆಗಳನ್ನು, ಧಾರ್ಮಿಕ ವಿಚಾರ ಆಚಾರಗಳನ್ನು ಪ್ರತಿನಿಧಿಸುತ್ತದೆ. ವಿವಿಧ ಜನಾಂಗದ ಜನರು ವಿವಿಧ ರೀತಿಯ ರಂಗವಲ್ಲಿಯನ್ನು ಇಟ್ಟರೂ ಒಂದಲ್ಲ ಒಂದು ರೀತಿಯಲ್ಲಿ ಸಾಮ್ಯತೆಯನ್ನು ಕಾಣಬಹುದು. ಸಾಮಾನ್ಯವಾಗಿ ರಂಗೋಲಿ ಹಾಕುವುದು ಸ್ತ್ರೀಯರು. ಕೆಲವು ವಿಶಿಷ್ಟ ಸಂಪ್ರದಾಯಗಳಲ್ಲಿ ಪುರುಷರೂ ಸಹ ರಂಗೋಲಿಯನ್ನು ಹಾಕುತ್ತಾರೆ. ಗ್ರಾಮೀಣ ಹೆಣ್ಣು ಮಕ್ಕಳ ಜಾಣ್ಮೆ, ಕೈಚಳಕ, ಅದ್ಭುತ ರಮ್ಯ ಕಲ್ಪನೆಗಳು ರಂಗೋಲಿಯಲ್ಲಿ ಕಲಾತ್ಮಕವಾಗಿ ಅಭಿವ್ಯಕ್ತಿಗೊಳ್ಳುತ್ತವೆ. ಇದು ಜನ ಜೀವನದ ಪ್ರತಿಬಿಂಬವಾಗಿದೆ.

ರಂಗೋಲಿಯನ್ನು ಬಿಡಿಸಲು ಕೆಲವು ಸಾಮಗ್ರಿಗಳು ಬೇಕಾಗುತ್ತವೆ. ಪ್ರಮುಖವಾಗಿ ಬಿಳಿಯ ರಂಗೋಲಿ ಪುಡಿ, ಅಕ್ಕಿ ಹಿಟ್ಟು, ಇದ್ದಿಲ ಪುಡಿಗಳನ್ನು ಬಳಸುವುದುಂಟು. ಇತ್ತೀಚೆಗೆ ರಂಗೋಲಿಗೆ ಹೊಳಪನ್ನು ಕೊಡಲು ಕಲ್ಲು ಉಪ್ಪು, ಬಗೆಬಗೆಯ ಬಣ್ಣಗಳು, ಹೂವುಗಳನ್ನು ಬಳಸುತ್ತಾರೆ. "ರಂಗೋಲಿಯನ್ನು ಇಡುವ ಉದ್ದೇಶ, 'ಪ್ರೇತಗಳು' ಬಾರದಿರಲಿ ಎಂದು. ಪ್ರೇತಗಳು ರಂಗೋಲಿಯನ್ನು ದಾಟಿ ಬರುವುದಿಲ್ಲ ಎನ್ನುವ ನಂಬಿಕೆ ಇದೆ. ಹೆಣ್ಣು ರಂಗೋಲಿ ದಾಟಬಾರದು ಎನ್ನುವ ನಿಯಮವಿದೆ. ಸೀತೆ ಲಕ್ಷ್ಮಣ ಹಾಕಿದ ಗೀರು ದಾಟಿ ಕಷ್ಟಕ್ಕೆ ಗುರಿಯಾದಳು ಎನ್ನುವ ಪೌರಾಣಿಕ ಹಿನ್ನೆಲೆ ನೀಡುತ್ತಾರೆ. ರಾತ್ರಿ ಮನೆಯ ಮುಂದೆ ಕೆಟ್ಟ ಗ್ರಹಗಳು ತಿರುಗಬಹುದೆಂದು ಗುಡಿಸಿ, ಸಗಣಿಯಿಂದ ಸಾರಿಸಿ, ರಂಗೋಲಿ ಇಟ್ಟು ಆ ಸ್ಥಳವನ್ನು ಶುದ್ಧಿಗೊಳಿಸುತ್ತಾರೆ."[೩] ಮನೆಯ ಮುಂದೆ ರಂಗೋಲಿ ಹಾಕುವುದು ಮನೆಗೆ ಶೋಭೆಯನ್ನು ತರುತ್ತದೆ. ರಂಗೋಲಿ ಹಾಕುವ ಗರತಿಯ ಮನದ ಸೌಂದರ್ಯಾಭಿರುಚಿಯನ್ನು ತೋರಿಸುತ್ತದೆ.

೪. ಜನಪದ ಆಟಗಳು

ಜನಪದ ಆಟಗಳು ತಲತಲಾಂತರದಿಂದ ಬೆಳೆದು ಬಂದಿವೆ. ಮಾನವನ ಬದುಕಿನಲ್ಲಿ ಈ ಆಟಗಳಿಗೆ ಪ್ರಧಾನವಾದ ಸ್ಥಾನವಿದೆ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಜೀವನದಲ್ಲಿ ವಿವಿಧ ಆಟಗಳೊಂದಿಗೆ ಉತ್ತಮ ಸಂಬಂಧಗಳನ್ನು ಇಟ್ಟುಕೊಂಡೆ ಬೆಳೆದಿದ್ದಾನೆ. ಈ ಜನಪದ ಆಟಗಳು ಮನುಷ್ಯರ ಬಾಲ್ಯದ ಅವಶ್ಯಕತೆಗಳಲ್ಲಿ ಒಂದಾಗಿ ಬೆರೆತಿವೆ. ಇವು ಮನೋರಂಜನೆಯ ಉದ್ದೇಶವನ್ನು ಹೊಂದಿದ್ದರು ಹಲವು ಸಾಮಾಜಿಕ ಸಂಬಂಧಗಳನ್ನು ಹೊಂದಿವೆ ಎಂಬುದು ಸತ್ಯ. ಜನಪದ ಆಟಗಳಲ್ಲಿಯೂ ಹೊರಾಂಗಣ ಆಟ ಹಾಗು ಒಳಾಂಗಣ ಆಟಗಳಿವೆ. ಮನೆಯ ಒಳಗೆ ಆಡುವ ಆಟಗಳು ಒಳಾಂಗಣ ಆಟಗಳಾದರೆ, ಮನೆಯ ಹೊರಗೆ ಆಡುವ ಆಟಗಳು ಹೊರಾಂಗಣ ಆಟಗಳಾಗಿವೆ. ಕೆಲವು ಜನಪದ ಆಟಗಳನ್ನು ಗಂಡು ಮಕ್ಕಳು ಮಾತ್ರ ಆಡಿದರೆ, ಕೆಲವನ್ನು ಹೆಣ್ಣು ಮಕ್ಕಳು ಮಾತ್ರ ಆಡುತ್ತಾರೆ. ಇನ್ನಷ್ಟು ಜನಪದ ಆಟಗಳನ್ನು ಗಂಡು-ಹೆಣ್ಣು, ಕಿರಿಯರು-ಹಿರಿಯರು ಎಂಬ ಭೇದವಿಲ್ಲದೆ ಎಲ್ಲಾರು ಒಟ್ಟಾಗಿ ಆಡುವ ಮೂಲಕ ಸಂಭ್ರಮಿಸುತ್ತಾರೆ.

೪.೧ ಗಂಡು ಮಕ್ಕಳ ಜನಪದ ಆಟಗಳು

ಅ) ಚಿನ್ನಿದಾಂಡಿನ ಆಟ

ಬಯಲು ಸೀಮೆಯ ಗ್ರಾಮಗಳಲ್ಲಿ ಚಿನ್ನಿದಾಂಡಿನ ಆಟ ಪ್ರಸಿದ್ಧವಾದದ್ದು. ಚಿನ್ನಿ ಮತ್ತು ದಾಂಡುಗಳು ಈ ಆಟದ ಪರಿಕರಗಳು. ಒಂದರಿಂದ ಎರಡು ಅಡಿ ಉದ್ದದ ಸರಿಯಾಗಿ ಹಿಡಿಯಲು ಸಿಗುವ ಕೋಲನ್ನು ದಾಂಡು ಎಂದು ಹಾಗು ಒಂದು ಗೇಣು ಉದ್ದದ ಎರಡು ಕಡೆಯೂ ಚೂಪಾಗಿ ಕೆತ್ತಿದ ಕೋಲನ್ನು 'ಚಿನ್ನಿ' ಎಂದು ಕರೆಯಲಾಗುತ್ತದೆ. ಸಾಮಾನ್ಯವಾಗಿ ಗಟ್ಟಿಯಾದ, ಹೆಚ್ಚುಕಾಲ ಬಾಳಿಕೆ ಬರುವ ಗಬ್ಬಳಿ ಮರದ ಕೋಲಿನಿಂದಲೇ ಇವುಗಳನ್ನು ತಯಾರಿಸಿಕೊಳ್ಳುತ್ತಾರೆ. ಅಗತ್ಯಕ್ಕೆ ಅನುಗುಣವಾಗಿ ಕೆಲವರು ಬೇವು-ಹೊಂಗೆ ಮರಗಳ ಕೋಲಿನಿಂದಲು ಸಿದ್ಧಪಡಿಸಿಕೊಳ್ಳುತ್ತಾರೆ. ಲಭ್ಯವಿರುವ ಆಟಗಾರರನ್ನು ಎರಡು ತಂಡಗಳಾಗಿ ವಿಭಾಗಿಸಿಕೊಳ್ಳಲಾಗುತ್ತದೆ. ಹೀಗಾಗಿ ಕನಿಷ್ಠ ಇಬ್ಬರಿಂದ ಗರಿಷ್ಠ ಎಷ್ಟು ಮಂದಿಯಾದರು ಈ ಆಟದಲ್ಲಿ ಭಾಗವಹಿಸಬಹುದು.

ನಂತರ ಒಂದೆರಡು ಇಂಚು ಆಳ ಮತ್ತು ಅಗಲದ ಗುಂಡಿಯೊಂದನ್ನು ಮಾಡಿಕೊಳ್ಳುತ್ತಾರೆ. ಚಿನ್ನಿಯನ್ನು ಅದರ ಮೇಲಿಟ್ಟು ದಾಂಡಿನಿಂದ ಒಂದು ತುದಿಯನ್ನು ಕುಟ್ಟಿ ಜೋರಾಗಿ ಹೊಡೆಯುತ್ತಾರೆ. ದಾಂಡಿನಿಂದ ಚಿನ್ನಿಯನ್ನು ಹೊಡೆಯಲು ಒಂದು ತಂಡ ನಿಂತರೆ ಮತ್ತೊಂದು ತಂಡ ಚಿನ್ನಿಯನ್ನು ಕ್ಯಾಚ್ ಹಿಡಿಯಲು ಮೈದಾನದಲ್ಲಿ ನಿಂತಿರುತ್ತಾರೆ. ಆದ್ದರಿಂದ ಮೇಲ್ನೋಟಕ್ಕೆ ಇದು ಕ್ರಿಕೆಟ್ ಆಟದ ಸ್ವರೂಪವನ್ನು ಹೋಲುತ್ತದೆ. ದಾಂಡಿನಿಂದ ಹೊಡೆದಾಗ ಚಿನ್ನಿಯನ್ನು ಹಿಡಿದುಕೊಂಡರೆ ಆಟಗಾರನ ಆಟ ಅಲ್ಲಿಗೆ ಮುಗಿಯುತ್ತದೆ. ಇಲ್ಲದಿದ್ದರೆ ಆಟ ಮುಂದುವರೆಯುತ್ತದೆ. ಚಿನ್ನಿ ಎಷ್ಟು ದೂರಕ್ಕೆ ಹೋಗಿರುತ್ತದೆಯೊ ಅದನ್ನು ದಾಂಡಿನಿಂದ ಅಳತೆ ಮಾಡುತ್ತಾರೆ. ಸಹಜವಾಗಿ ಪ್ರತಿಯೊಬ್ಬ ಆಟಗಾರನಿಗೂ ಚಿನ್ನಿಯನ್ನು ಮೂರು ಸಲ ಹೊಡೆಯಲು ಅವಕಾಶವಿರುತ್ತದೆ. ಸಮಯದ ಅಭಾವವಿದ್ದರೆ ಒಂದೇ ಅವಕಾಶವೆಂದು ಎರಡು ತಂಡದವರು ತೀರ್ಮಾನ ಮಾಡಿಕೊಳ್ಳುವುದುಂಟು. ನಂತರ ಇನ್ನೊಂದು ತಂಡಕ್ಕೆ ಚಿನ್ನಿಯನ್ನು ಹೊಡೆಯುವ ಕೆಲಸ ಸಿಗುತ್ತದೆ. ೨೦ ದಾಂಡಿನ ಅಳತೆಗೆ ಒಂದು ಬ್ಯಾಂಕ್ ಎಂದು ಲೆಕ್ಕ ಹಾಕಲಾಗುತ್ತದೆ. ಹೆಚ್ಚು ದೂರ ಚಿನ್ನಿಯನ್ನು ಹೊಡೆದ ತಂಡವನ್ನು ಗೆದ್ದರೆಂದು ಘೋಷಿಸಲಾಗುತ್ತದೆ. ಸೋತ ಕಡೆಯವರು ಗೆದ್ದವರನ್ನು ಹೆಗಲ ಮೇಲೆ ಕೂರಿಸಿಕೊಂಡು ಕೂಸು ಹೊರಬೇಕು. ಅಥವಾ ಚಿನ್ನಿ ಬಿದ್ದಿದ್ದ ಭಾಗದಿಂದ ಗುಂಡಿಯವರೆಗೂ ಕುಂಟಬೇಕು. ಆಗ ಗೆದ್ದವರು ಜೈಕಾರ ಕೂಗುತ್ತ ಸೋತವರನ್ನು ಜರಿಯುತ್ತಾರೆ.

ಆ) ಮರಕೋತಿ ಆಟ

ಹಳ್ಳಿಗಾಡಿನ ಗಂಡುಮಕ್ಕಳು ಇಷ್ಟಪಡುವ ಆಟವಿದು. ಮರವನ್ನು ಹತ್ತಲು ಬಲ್ಲವರು ಮಾತ್ರ ಈ ಆಡಲು ಸಾಧ್ಯ. ಆಟಕ್ಕೆ ಮೊದಲು ಚಪ್ಪಾಳೆಯನ್ನು ಹಾಕುವುದರ ಮೂಲಕ ಕಳ್ಳನನ್ನು ನಿರ್ಧರಿಸುತ್ತಾರೆ. ಉಳಿದವರೆಲ್ಲ ಕೋತಿಗಳಂತೆ ಮರದ ರಂಬೆ ಕೊಂಬೆಗಳನ್ನು ಜಿಗಿದು

ಸಂಭ್ರಮಿಸುತ್ತಾರೆ. ಈ ಕೋತಿಗಳಲ್ಲಿ ಒಬ್ಬನು ಒಂದು ಮೊಳದುದ್ದದ ಕೋಲನ್ನು ತಂದು ಮರದ ಕೆಳಗೆ ಒಂದು ವೃತ್ತವನ್ನೂ ಬರೆಯುತ್ತಾನೆ. ನಂತರ ಆ ಕೋಲನ್ನು ಕಾಲಿನ ಸಂದಿಯಿಂದ ತೂರಿಸಿ ದೂರಕ್ಕೆ ಎಸೆದು ಮರವನ್ನು ಏರಿ ಕುಳಿತುಕೊಳ್ಳುತ್ತಾನೆ. ಕಳ್ಳನು ಆ ಕೋಲನ್ನು ಹುಡುಕಿ ತಂದು ಮರದ ಬುಡದಲ್ಲಿ ವೃತ್ತದೊಳಗಿಟ್ಟು ಮರಹತ್ತಿ ಯಾರನ್ನಾದರು ಹಿಡಿಯಬೇಕು. ಹಾಗೆ ಹಿಡಿಸಿಕೊಂಡವನು ಮುಂದಿನ ಆಟಕ್ಕೆ ಕಳ್ಳನಾಗುತ್ತಾನೆ. ಮೊದಲು ಕಳ್ಳನಾಗಿದ್ದವನು ಕೋಲೆಸೆದು ನಂತರ ಮರವನ್ನೇರಿ ಕುಳಿತುಕೊಳ್ಳುತ್ತಾನೆ. ಹಿಡಿಯುವವನು ಮರದ ಮೇಲಿರುವ ಯಾರನ್ನಾದರೂ ಮುಟ್ಟುವ ಮೊದಲೇ ಮರದಿಂದ ಯಾರಾದರು ದುಮುಕಿ ಕೋಲು ಮುಟ್ಟಿದರೆ ಆಗ ಕಳ್ಳನಾಗಿದ್ದವನೇ ಮತ್ತೆ ಕೋಲನ್ನು ತಂದು ಗೆರೆಯೊಳಗಿಟ್ಟು ನಂತರ ಮರದ ಮೇಲಕ್ಕೆ ಹತ್ತಿ ಬೇರೆಯವರನ್ನು ಹಿಡಿಯಬೇಕಾಗುತ್ತದೆ. ಈ ಆಟ ಶರೀರಕ್ಕೆ ಕಸರತ್ತು ನೀಡುವ ಆಟವಾಗಿದೆ. ಹುಡುಗರು ದನಕರು ಮೇಯಿಸುವಾಗ ಈ ಆಟವನ್ನು ಆಡಿ ಸಂಭ್ರಮಿಸುತ್ತಾರೆ. ಕುಮಾರವ್ಯಾಸನು ತನ್ನ ಕಾವ್ಯದಲ್ಲಿ ಪಾಂಡವರು ಮತ್ತು ಕೌರವರು ಮರಕೋತಿಯಾಟ ಆಡುವ ಪ್ರಸಂಗವನ್ನು ಚಿತ್ರಿಸಿದ್ದಾನೆ.

ಇ) ಲಗೋರಿ ಆಟ

ಗ್ರಾಮೀಣ ಭಾಗದ ಗಂಡು ಮಕ್ಕಳ ಅಚ್ಚುಮೆಚ್ಚಿನ ಆಟಗಳಲ್ಲಿ ಲಗೋರಿ ಆಟವೂ ಒಂದು. ಸಮತಟ್ಟಾದ ವಿಶಾಲ ಬಯಲಿನಲ್ಲಿ ಮಕ್ಕಳೆಲ್ಲಾ ಸೇರುತ್ತಾರೆ. ಲಗೋರಿ ಆಟದಲ್ಲಿ ಯಾವಾಗಲು ಎರಡು ತಂಡಗಳಿರುತ್ತವೆ. ಎರಡು ತಂಡದ ನಾಯಕರು ತಮಗೆ ಬೇಕಾದ ಸದಸ್ಯರನ್ನು ಸಮಸಂಖ್ಯೆಯಲ್ಲಿ ಆಯ್ಕೆ ಮಾಡಿಕೊಳ್ಳುತ್ತಾರೆ. ನಂತರ ನಾಣ್ಯವೊಂದನ್ನು ಚಿಮ್ಮಿ ಟಾಸ್ ಹಾಕಿ ಯಾರು ಮೊದಲು ಆಟವಾಡಬೇಕೆಂಬುದನ್ನು ನಿರ್ಧರಿಸುತ್ತಾರೆ. ಚಪ್ಪಟೆಯಾಕಾರದ ೫-೬ ಕಲ್ಲುಗಳನ್ನು ಕ್ರಮವಾಗಿ ಜೋಡಿಸುತ್ತಾರೆ. ಇದನ್ನು 'ಲಗ್ಗೆ' ಎಂದು ಕರೆಯಲಾಗುತ್ತದೆ. ಚೆಂಡನ್ನು ಪಡೆದುಕೊಂಡವರು ೪-೫ ಮಾರು ದೂರದ ಗೆರೆಯ ಬಳಿ ನಿಂತು ಸರದಿಯ ಪ್ರಕಾರ ಲಗ್ಗೆಗೆ ಗುರಿಯಿಟ್ಟು ಹೊಡೆಯಬೇಕಾಗುತ್ತದೆ. ಒಬ್ಬೊಬ್ಬರಿಗೂ ಮೂರು ಬಾರಿ ಮಾತ್ರ ಅವಕಾಶ. ಈ ಅವಕಾಶದಲ್ಲಿ ಲಗ್ಗೆಯನ್ನು ಉರುಳಿಸಬೇಕು. ಲಗ್ಗೆಯನ್ನು ಉರುಳಿಸದೆ ಪುಟ ನೆಗೆದ ಚೆಂಡನ್ನು ಕಾಯುವವನು ಹಿಡಿದುಕೊಂಡರೆ ಚೆಂಡು ಹೊಡೆಯುವವನ ಅವಕಾಶ ಕೊನೆಯಾಗುತ್ತದೆ. ಹೊಡೆಯುವವರ ತಂಡದಲ್ಲಿ ಯಾರು ಲಗ್ಗೆಯನ್ನು ಬೀಳಿಸದಿದ್ದರೆ ಅವರು ಸೋತಂತಾಗುತ್ತದೆ.

ಇನ್ನೊಂದು ತಂಡದವರು ಬಿದ್ದ ಕಲ್ಲುಗಳನ್ನು ಮೊದಲಿನಂತೆ ಜೋಡಿಸಿ ಇಡಬೇಕಾಗುತ್ತದೆ. ಲಗ್ಗೆ ಕಲ್ಲುಗಳನ್ನು ಒಂದರ ಮೇಲೆ ಒಂದರಂತೆ ಸೇರಿಸಿ ಇಡುವಾಗ ವಿರೋಧಿ ಗುಂಪು ಅವರಿಗೆ ಚೆಂಡಿನಿಂದ ಹೊಡೆಯಲು ಮುಂದಾಗುತ್ತಾರೆ. ಹೊಡೆಯುವ ತಂಡದ ಒಬ್ಬನ ಬಳಿ ಚಂಡಿರುತ್ತದೆ. ಆದರೂ ಹೊಡೆಯುವ ತಂಡದ ಪ್ರತಿಯೊಬ್ಬರು ತಮ್ಮ ಬಳಿಯೇ ಚೆಂಡಿದೆ ಎನ್ನುವಂತೆ ನಟಿಸುತ್ತಾ ಎದುರಾಳಿಗಳನ್ನು ಹೊಡೆಯಲು ಅಟ್ಟಾಡಿಸಿಕೊಂಡು ಹೋಗುತ್ತಾರೆ. ಚೆಂಡನ್ನು ಪಡೆದ ತಂಡ

ಅಷ್ಟು ಸುಲಭವಾಗಿ ಸೋಲೊಪ್ಪಿಕೊಳ್ಳುವುದಿಲ್ಲ. ಚೆಂಡಿನ ಏಟು ಲಗ್ಗೆ ಕಾಯುವವರಿಗೆ ತಗುಲಿದರೆ ಚೆಂಡು ಇರುವವರು ಗೆದ್ದಂತೆ. ಚೆಂಡಿನ ಏಟು ತಿನ್ನದೆ ಲಗ್ಗೆಯನ್ನು ಕಟ್ಟಿದರೆ ಹೊಡೆಯುವವರು ಸೋತಂತೆ. ನಂತರ ಆಟ ಮೊದಲಿನಂತೆಯೆ ಆರಂಭವಾಗುತ್ತದೆ. ಮೊದಲು ಈ ಆಟಕ್ಕೆ ಬಟ್ಟೆಯಿಂದ ಒಲಿದು ಮಾಡಿದ ಚೆಂಡನ್ನು ಉಪಯೋಗಿಸುತ್ತಿದ್ದರು. ಈಗ ರಬ್ಬರ್ ಚೆಂಡನ್ನು ಉಪಯೋಗಿಸುತ್ತಾರೆ. ಚೆಂಡನ್ನು ಬೀಸಿ ಹೊಡೆಯುವ ಪ್ರಯತ್ನ ಒಂದೆಡೆಯಿದ್ದರೆ ಮತ್ತೊಂದೆಡೆ ಏಟನ್ನು ತಪ್ಪಿಸಿಕೊಳ್ಳುವ ಚಾತುರ್ಯತೆಯಿದೆ.

ಈ) ಬುಗುರಿ ಆಟ

ಬುಗುರಿಯು ಆಟ ಒಂದು ಮನೋರಂಜನೆಯ ಜಾನಪದ ಆಟ. ಈ ಆಟವನ್ನು ಹೆಚ್ಚಾಗಿ ೬ ವರ್ಷದಿಂದ ೧೬ ವರ್ಷದ ಹುಡುಗರು ಆಡುತ್ತಾರೆ. ಕೆಲವೊಮ್ಮೆ ದೊಡ್ಡವರು ಚಿಕ್ಕ ಮಕ್ಕಳ ಜೊತೆಗೆ ಮನೋರಂಜನೆಗಾಗಿ ಈ ಆಟವನ್ನು ಆಡುವುದುಂಟು. ಬುಗುರಿ ಮರದಿಂದ ಮಾಡಿದ ವರ್ತುಲಾಕಾರದ ವಸ್ತು. ಇದರ ಮೇಲ್ಭಾಗದ ಸುತ್ತಳತೆ ೩ ರಿಂದ ೫ ಅಂಗಲವಿದ್ದರೆ, ತಳದ ಸುತ್ತಳತೆ ೧/೫ ಅಂಗುಲವಿರುತ್ತದೆ. ಈ ಬುಗುರಿಯ ತಳಭಾಗಕ್ಕೆ ಒಂದು ಮೊಳೆ ಹಾಕಿರುತ್ತಾರೆ. ಈ ಮೊಳೆಯ ಸಹಾಯದಿಂದಲೇ ಬುಗುರಿ ತಿರುಗುತ್ತದೆ. ಬುಗುರಿಯನ್ನು ತಿರುಗಿಸಿ ಆಟ ಆಡಲು ಐದಾರು ಅಂಗುಲ ಉದ್ದದ ದಪ್ಪ ದಾರಬೇಕು. ಈ ದಾರವನ್ನೂ ಬುಗುರಿಗೆ ಸುತ್ತಿ ಜೋರಾಗಿ ಎಳೆದು ನೆಲದ ಮೇಲೆ ಬಿಟ್ಟರೆ ಅದು ಗುಂಯ್ ಗುಟ್ಟುತ್ತ ಸುತ್ತಲು ಪ್ರಾರಂಭಿಸುತ್ತದೆ. ಹೀಗೆ ತಿರುಗುವ ಬುಗುರಿಯನ್ನು ದಾರದ ಸಹಾಯದಿಂದ ಅಂಗೈಗೆ ತೆಗೆದುಕೊಳ್ಳಬಹುದು. ಆಗ ಅದು ಅಂಗೈಮೇಲು ಸುತ್ತುತ್ತಿರುತ್ತದೆ. ಇದನ್ನು ಒಂದು ಕೈಯಿಂದ ಮತ್ತೊಂದು ಕೈಗೆ ವರ್ಗಾಯಿಸಬಹುದು.

ಆಟಕ್ಕೆ ಮೊದಲು ಎರಡು ಮೂರು ಅಡಿ ಅಂತರದಲ್ಲಿ ಒಂದು ವೃತ್ತವನ್ನು ಕಡ್ಡಿಯಿಂದ ಬರೆಯಬೇಕು. ಇದರ ಮಧ್ಯದಲ್ಲಿ ಒಂದು ಮರದ ಕಡ್ಡಿಯನ್ನು ಇಡಬೇಕು. ನಂತರ ಆಟವಾಡಲು ಸೇರಿಕೊಂಡಿರುವ ಯಾರಾದರೊಬ್ಬರು ಸುತ್ತು ವರಿದಿರುವ ಬುಗುರಿಯಿಂದ ವೃತ್ತದಿಂದ ಹೊರಕ್ಕೆ ಕದಲಿಸಬೇಕು. ಈ ರೀತಿ ಕದಲಿಸಿದ ಅನಂತರ ಎಲ್ಲ ಆಟಗಾರರೂ ಕೂಡಲೇ ಆಡುತ್ತಿರುವ ಬುಗುರಿಯನ್ನು ದಾರದಿಂದ ಮೇಲೆತ್ತಿ ಅಪೀಟು ಎನ್ನುತ್ತಾರೆ. ಯಾರು ಕೊನೆಯಲ್ಲಿ ಎತ್ತುತ್ತಾರೊ ಅವರು ಸೋತಂತೆ. ಸೋತವರು ಬುಗುರಿಯನ್ನು ವೃತ್ತದೊಳಕ್ಕೆ ಇಡಬೇಕು. ಉಳಿದವರು ವೃತ್ತದಲ್ಲಿರುವ ಬುಗುರಿಗೆ ಸರದಿಯ ಪ್ರಕಾರ ಹೊಡೆಯುತ್ತಿರುತ್ತಾರೆ. ಈ ರೀತಿ ಹೊಡೆಯುತ್ತಿರುವಾಗ ವೃತ್ತದಲ್ಲಿರುವ ಬುಗುರಿ ವೃತ್ತದಿಂದ ಹೊರಕ್ಕೆ ಹೋದರೆ ತಕ್ಷಣ ಎಲ್ಲರೂ ಅಪೀಟ್ ಎತ್ತಬೇಕು. ಕೊನೆಯಲ್ಲಿ ಎತ್ತಿದವನು ಸೋತಂತಾಗುತ್ತದೆ. ಸೋತವರು ತಮ್ಮ ಬುಗುರಿಯನ್ನು ವೃತ್ತದಲ್ಲಿಡಬೇಕು. ಉಳಿದವರು ಒಬ್ಬೊಬ್ಬರಾಗಿ ವೃತ್ತದಲ್ಲಿರುವ ಬುಗುರಿಗೆ ಮೊಳೆಯಿಂದ ಹೊಡೆದು ಗುಳಿ ಬೀಳಿಸುತ್ತಾರೆ. ಈ ರೀತಿ ಗುಳಿ ಬೀಳಿಸುವುದಕ್ಕೆ 'ಗುನ್ನ' ಎನ್ನುತ್ತಾರೆ. ಹೀಗೆ ಗುನ್ನ ಪ್ರಧಾನವಾದ ಈ ಆಟಕ್ಕೆ 'ಗುನ್ನದ ಆಟ' ಎಂದು ಕರೆಯುತ್ತಾರೆ.

'ತಲಾರಿ' ಎಂಬ ಮತ್ತೊಂದು ಆಟವಿದೆ. ಈ ಆಟದಲ್ಲಿ ಮೊದಲು ಎರಡು ಪಟ್ಟಿಗಳನ್ನು ಉದ್ದಕ್ಕೆ ಎಳೆದಿರುತ್ತಾರೆ. ಒಂದು ಪಟ್ಟಿಯಲ್ಲಿ ಮರದ ಕಡ್ಡಿಯಿರುತ್ತದೆ. ಪ್ರತಿಯೊಬ್ಬ ಆಟಗಾರನು ತನ್ನ ಬುಗುರಿಯಿಂದ ಅದನ್ನು ಪಟ್ಟಿಯಿಂದ ಹೊರಕ್ಕೆ ಕದಲಿಸಲು ಪ್ರಯತ್ನಿಸುತ್ತಾರೆ. ಅದು ಹೊರಕ್ಕೆ ಬಂದ ಕೂಡಲೆ ಎಲ್ಲರೂ ಅಪೀಟು ತೆಗೆದುಕೊಳ್ಳಬೇಕು. ಯಾರು ಕೊನೆಯಲ್ಲಿ ಅಪೀಟು ತೆಗೆದುಕೊಳ್ಳುತ್ತಾನೋ ಅವನು ಸೋತಂತೆ. ಸೋತವರು ತಮ್ಮ ಬುಗುರಿಯನ್ನು ಮೊದಲು ಪಟ್ಟಿಯ ಬಳಿ ಇಡಬೇಕು. ಉಳಿದವರು ಒಬ್ಬೊಬ್ಬರಾಗಿ ಒಡೆದು ಮತ್ತೊಂದು ಪಟ್ಟೆಯ ಬಳಿಗೆ ಅದನ್ನು ತಲುಪಿಸಬೇಕು. ಹೀಗೆ ಹೊಡೆಯುವಾಗ ಹೊಡೆಯುವವರ ಬುಗುರಿ ಸುತ್ತುತ್ತಿರಬೇಕು. ಹಾಗು ಸೋತಿರುವವರ ಬುಗುರಿಗೆ ಅದು ತಗುಲಬೇಕು. ಒಂದು ವೇಳೆ ತಗುಲದಿದ್ದರೆ ಸುತ್ತುತ್ತಿರುವ ಬುಗುರಿಯನ್ನು ಕೈಗೆ ತೆಗೆದುಕೊಂಡಾದರೂ ಅದಕ್ಕೆ ತಗುಲಿಸಬೇಕು. ಇಲ್ಲದಿದ್ದರೆ ಅವರು ಸೋತಂತೆ. ಹೀಗೆ ಒಂದು ಪಟ್ಟೆಯಿಂದ ಮತ್ತೊಂದು ಪಟ್ಟೆಯ ಬಳಿಗೆ ಬುಗುರಿಯನ್ನು ತಲುಪಿಸುವಾಗ ಎಲ್ಲರೂ ಸಾಮಾನ್ಯವಾಗಿ ಸೋಲು ಗೆಲುವುಗಳಾಗುತ್ತಿರುತ್ತವೆ. ಕೊನೆಯಲ್ಲಿ ವೃತ್ತವನ್ನು ದಾಟಿಸುವಾಗ ಯಾರು ಸೋತಿರುತ್ತಾರೊ ಅವರ ಬುಗುರಿಗೆ ಉಳಿದವರೆಲ್ಲೂ 'ಗುನ್ನ' ಹೊಡೆಯುತ್ತಾರೆ. ಮೊದಲ ಬಾರಿ ಒಂದು ಗುನ್ನ ಹೊಡೆಯಬೇಕು ಹಾಗೆಯೇ ಒಂದೊಂದು ಸುತ್ತಿನ ಸೋಲಿಗೆ ಒಂದು ಗುನ್ನ ಜಾಸ್ತಿಯಾಗುತ್ತಿರುತ್ತದೆ. ಹೀಗೆ ಗುನ್ನ ಹೊಡೆದು ಕೆಲವು ವೇಳೆ ಬುಗುರಿಗಳು ಸೀಳಿ ಹೋಗುತ್ತವೆ.

ಉ) ಟೋಪಿ ಆಟ

ಶಾಲಾ ಮಕ್ಕಳು ಬಿಡುವಿನ ವೇಳೆಯಲ್ಲಿ ಆಡುವ ಆಟಗಳಲ್ಲಿ ಟೋಪಿ ಆಟವೂ ಒಂದು. ಆಟಗಾರರು ಸುತ್ತಲೂ ವೃತ್ತಾಕಾರವಾಗಿ ಕುಳಿತುಕೊಳ್ಳುತ್ತಾರೆ. ಅವರೆಲ್ಲರು ತಲೆಯನ್ನು ಮೇಲೆತ್ತದೆ ಯಾವ ಕಡೆಯೂ ನೋಡದೆ ನೆಲಕ್ಕೆ ಬಗ್ಗಿ ಕೂರಬೇಕಾಗುತ್ತದೆ. ಯಾರಾದರು ಒಬ್ಬರು ಎದ್ದು ನಿಂತು ಟೋಪಿಯನ್ನು ತೆಗೆದುಕೊಂಡು ಕುಳಿತಿರುವವರಿಗೆ ಅನುಮಾನ ಬಾರದಂತೆ ಸುತ್ತಲೂ ಮೂರು ಬಾರಿ ಸುತ್ತಿ ಯಾರಿಗೂ ಗೊತ್ತಾಗದಂತೆ ಯಾರಾದರೊಬ್ಬನ ಹಿಂದೆ ಟೋಪಿಯನ್ನು ಹಾಕಿ ತನ್ನ ಜಾಗದಲ್ಲಿ ನಿಶಬ್ಧವಾಗಿ ಕೂರುತ್ತಾನೆ. ಒಂದೆರಡು ನಿಮಿಷಗಳಲ್ಲಿ ಟೋಪಿಯು ಯಾರ ಹಿಂದೆ ಇದೆಯೋ ಅವನು ಏಳದಿದ್ದರೆ ಹಾಕಿದವನೇ ಎದ್ದು ಅವನ ಬಳಿಗೆ ಹೋಗಿ ಆ ಟೋಪಿಯಿಂದಲೇ ಅವನ ಬೆನ್ನಿನ ಮೇಲೆ ರಪ್ ಎಂದು ಬಾರಿಸುತ್ತಾನೆ. ಆಗ ಅವನಿಗೆ ತನ್ನ ಹಿಂದೆ ಟೋಪಿ ಇದ್ದದ್ದು ತಿಳಿಯುತ್ತದೆ. ಅತ್ಯಂತ ಸೂಕ್ಷ್ಮಮತಿಯಾದವನು ಟೋಪಿಯು ತನ್ನ ಹಿಂದೆಯೇ ಇದೆಯೆಂದು ಖಚಿತಪಡಿಸಿಕೊಂಡು ತನಗೆ ಏಟು ಬೀಳುವ ಮೊದಲೇ ಎಚ್ಚೆತ್ತುಕೊಂಡು ಟೋಪಿಯನ್ನು ತೆಗೆದುಕೊಂಡು ತಾನು ಸುತ್ತುತ್ತಾನೆ. ಹೀಗೆ ಟೋಪಿ ಆಟ ಮಕ್ಕಳಿಗೆ ಮನೋರಂಜನೆಯನ್ನು ನೀಡುತ್ತದೆ.

ಊ) ಅಪ್ಪಾಲೆ ತಿಪ್ಪಾಲೆ

ಹುಡುಗರೆಲ್ಲ ಕೈಚಾಚಿ ಗರಗರನೆ ತಿರುಗುತ್ತಾರೆ. ಆಗ ಅಪ್ಪಾಲೆ, ತಿಪ್ಪಾಲೆ ಎಂದು ಪದ ಹೇಳುತ್ತಾರೆ. ಹೆಚ್ಚು ಹೊತ್ತು ತಿರುಗಿದಾಗ ತಲೆ ಸುತ್ತಿದಂತಾಗುತ್ತದೆ. ಆಗ ಒಬ್ಬೊಬ್ಬರೇ ನೆಲಕ್ಕೆ ಬೀಳುತ್ತಾರೆ. ನೆಲಕ್ಕೆ ಬೀಳದವರು ಗೆಲ್ಲುತ್ತಾರೆ. ಈ ಆಟವನ್ನು ಮಕ್ಕಳು ಆಡುವುದು ಕಂಡುಬರುತ್ತದೆ.

ಋ) ಗೋಲಿಯಾಟ

ಗಂಡು ಮಕ್ಕಳ ಜಾನಪದ ಆಟಗಳಲ್ಲಿ ಪ್ರಸಿದ್ಧವಾದ ಆಟವಿದು. ಗೋಲಿ ಆಟವಾಡಲು ನೆಲ ಸಮತಟ್ಟಾಗಿರಬೇಕು. ಇಂತಹ ಜಾಗದಲ್ಲಿ ೨ ಅಂಗುಲ ಉದ್ದ-ಅಗಲವಿರುವ ಗುಂಡಿಯೊಂದನ್ನು ತೆಗೆಯುತ್ತಾರೆ. ಇದನ್ನು 'ಬದ್ದು' ಎನ್ನುತ್ತಾರೆ. ಬದ್ದಿನಿಂದ ಸುಮಾರು ೧೨-೧೫ ಅಡಿ ದೂರದಲ್ಲಿ ಒಂದು ಗೆರೆ ಹಾಕಿ ಗುರುತು ಮಾಡುತ್ತಾರೆ. ಗೆರೆಯ ಆಚೆ ನಿಂತು ಆಟಗಾರರು ಒಬ್ಬರ ನಂತರ ಒಬ್ಬರಂತೆ ಬದ್ದಿನ ಕಡೆಗೆ ತಮ್ಮ ಗೋಲಿಯನ್ನು ಉರುಳಿಸಬೇಕು. ಬದ್ದಿಗೆ ಹತ್ತಿರ ಗೋಲಿಯನ್ನು ಬೀಳಿಸಿದವನಿಂದ ಆಟ ಆರಂಭವಾಗುತ್ತದೆ. ನಂತರ ಉಳಿದವರ ಸರದಿ. ಬೆರಳಿನಿಂದ ಗೋಲಿಯನ್ನು ಮೀಟಿ ಅದು ಬದ್ದಿಗೆ ಬೀಳುವಂತೆ ಮಾಡಬೇಕು. ಹೀಗೆ ಬಿದ್ದ ಗೋಲಿಗಳನ್ನು ಅವನು ಗೆದ್ದುಕೊಳ್ಳುತ್ತಾನೆ. ಗೋಲಿಗಳು ಮುಕ್ತಾಯವಾಗುವ ತನಕ ಆಟ ಮುಂದುವರೆಯುತ್ತದೆ.

ಗೋಲಿಗಳಿಂದ ಗೋಪುರ ಆಟ ಆಡಬಹುದು. ಒಬ್ಬ ಆಟಗಾರ ತನ್ನಲ್ಲಿರುವ ಗೋಲಿಗಳನ್ನು ಹತ್ತಿರ ಹತ್ತಿರ ಒಂದು ಸಾಲು ಜೋಡಿಸಿ ಅದರ ಮೇಲೆ ಇನ್ನೊಂದು ಸಾಲು ಜೋಡಿಸಿ ಗೋಪುರ ಮಾಡಿ ಅದರ ಸುತ್ತ ವೃತ್ತ ಎಳೆಯುತ್ತಾನೆ. ಉಳಿದ ಆಟಗಾರರು ಒಂದು ನಿರ್ದಿಷ್ಟ ದೂರದಲ್ಲಿ ನಿಂತು ಒಬ್ಬರಾದ ಮೇಲೆ ಒಬ್ಬರಂತೆ ಗೋಪುರದ ಕಡೆಗೆ ಗೋಲಿಯಿಂದ ಹೊಡೆಯಬೇಕು. ಒಬ್ಬ ಆಟಗಾರ ಎಷ್ಟು ಸಾರಿಯಾದರೂ ಗೋಲಿಯಿಂದ ಹೊಡೆಯಬಹುದು. ಆದರೆ ಒಂದು ಸಲ ಹೊಡೆಯುವುದಕ್ಕೆ ಒಂದು ಗೋಲಿಯನ್ನು ಗೋಪುರ ಜೋಡಿಸಿದವನಿಗೆ ಕೊಡಬೇಕು. ಆಟಗಾರ ಹೊಡೆದಾಗ ಎಷ್ಟು ಗೋಲಿಗಳು ವೃತ್ತದ ಗೆರೆಯಿಂದ ಹೊರಕ್ಕೆ ಬರುತ್ತವೋ ಅಷ್ಟು ಗೋಲಿಗಳು ಹೊಡೆದವನಿಗೆ ಸೇರುತ್ತವೆ. ಅವನ ಸರದಿ ಮುಗಿದ ನಂತರ ಪುನಃ ಗೋಪುರ ಕಟ್ಟಿ ಎರಡನೆಯ ಆಟಗಾರನಿಗೆ ಅವಕಾಶ ಕೊಡಬೇಕು.

ಇನ್ನೊಂದು ವಿಧದಲ್ಲಿ ಉದ್ದಕ್ಕೆ ಒಂದು ಗೆರೆ ಎಳೆಯಬೇಕು. ಅದರ ಮೇಲೆ ಒಂದೆರಡು ಅಂಗುಲ ಅಂತರದಲ್ಲಿ ಎಲ್ಲ ಆಟಗಾರರು ಒಂದು ಅಥವಾ ಹೆಚ್ಚು ಗೋಲಿಗಳನ್ನು ಇಡುತ್ತಾರೆ. ಈ ಗೆರೆಯಿಂದ ೮ ಅಡಿ ದೂರದಲ್ಲಿ ಇನ್ನೊಂದು ಗೆರೆ ಹಾಕಬೇಕು. ಒಬ್ಬೊಬ್ಬ ಆಟಗಾರನು ಈ ಗೆರೆಯ ಹಿಂದೆ ನಿಂತುಕೊಂಡು ಒಂದು ಬಾರಿ ತನ್ನಲ್ಲಿರುವ ಗೋಲಿಯಿಂದ ಆ ಗೋಲಿಗಳತ್ತ ಗುರಿಯಿಟ್ಟು ಹೊಡೆಯಬೇಕು. ಯಾವುದಾದರೂ ಗೋಲಿಗೆ ಹೊಡೆದರೆ ಅದು ಹೊಡೆದವನಿಗೆ ಸಿಗುತ್ತದೆ. ಏಟು ಬೀಳದಿದ್ದರೆ ಆಡಿದವನು ಒಂದು ಗೋಲಿ ಕೊಡಬೇಕು.

ಮತ್ತೊಂದು ಆಟದಲ್ಲಿ ಸಮತಟ್ಟಾದ ಜಾಗದಲ್ಲಿ ವೃತ್ತಾಕಾರವಾಗಿ ಒಂದು ಗೆರೆಯನ್ನು ಎಳೆಯುತ್ತಾರೆ. ವೃತ್ತದ ಒಂದು ಕಡೆಗೆ ೩-೪ ಅಡಿ ದೂರದಲ್ಲಿ ಅಡ್ಡ ಗೆರೆಯೊಂದನ್ನು ಎಳೆಯಲಾಗುತ್ತದೆ. ಮೇಲಿನ ಆಟದಂತೆ ಕ್ರಮವಾಗಿ ಒಬ್ಬೊಬ್ಬರು ಆಡುವುದೆಂದು ನಿರ್ಧಾರ ಮಾಡಿಕೊಂಡಿರುತ್ತಾರೆ. ನಂತರ ಮೊದಲನೆಯ ಆಟಗಾರನಾದವನು ತಲಾ ಒಂದು ಅಥವಾ ಎರಡರಂತೆ ಗೋಲಿಗಳನ್ನು ಕೂಡಿಸಿ ಗೆರೆಯ ಹಿಂಭಾಗದಲ್ಲಿ ಕುಳಿತುಕೊಂಡು ವೃತ್ತದಲ್ಲಿ ಹರವುತ್ತಾನೆ. ನಂತರ ಅಲ್ಲಿಯ ಒಂದು ಗೋಲಿಗೆ ಗುರಿಯಿಟ್ಟು ಹೊಡೆಯುತ್ತಾನೆ. ಹೊಡೆದರೆ ಗೋಲಿಗಳೆಲ್ಲವು ಅವನ ಪಾಲಿನವಾಗುತ್ತವೆ. ಹೊಡೆಯದಿದ್ದರೆ ನಂತರದವನು ಆಡುತ್ತಾನೆ. ಹೀಗೆ ಯಾರು ಹೊಡೆಯುತ್ತಾರೆಯೋ ಆ ಗೋಲಿಗಳೆಲ್ಲವು ಅವರ ಪಾಲಾಗುತ್ತವೆ. ಆಟಗಾರನು ಗೋಲಿಗಳನ್ನು ಎಸೆದಾಗ ವೃತ್ತದ ಹೊರ ಹೋದ ಗೋಲಿಗಳು ಆಟದ ಸ್ಪರ್ಧೆಯಲ್ಲಿ ಬರುವುದಿಲ್ಲ. ಆಟಗಾರ ಗುರಿಯಿಟ್ಟು ಹೊಡೆದ ಗೋಲಿಗಳೆರಡು ವೃತ್ತ ದಾಟಬೇಕು ಎಂಬ ನಿಯಮವಿದೆ.

ಗುಂಡಿ ಆಟದಲ್ಲಿ ಆಟಗಾರರು ಗೋಲಿಗಳನ್ನು ಗುಂಡಿಯ ಕಡೆಗೆ ಎಸೆಯಬೇಕು. ಒಂದು ಪಕ್ಷ ಎಸೆದಾಗಲೆ ಗೆರೆಯೊಳಕ್ಕೆ ಬಿದ್ದುಬಿಟ್ಟರೆ ಅದನ್ನು ಎತ್ತಿ ಗುಂಡಿಯೊಳಕ್ಕೆ ಇಡುವರು. ಆ ಮೇಲೆ ಉಳಿದವರು ಗುಂಡಿಗೆ ಬಿದ್ದ ಗೋಲಿಯನ್ನು ಮುಟ್ಟಿಕೊಂಡು ಹೋಗುವಂತೆ ಹೊಡೆಯಬೇಕು. ಹಾಗಾಗದಿದ್ದರೆ ಆ ಗೋಲಿಯನ್ನು ಗುಂಡಿಗೆ ಇಡಬೇಕಾಗುತ್ತದೆ. ಹೇಗೆ ಮೂರು ಬಾರಿ ಹೊಡೆದರೆ ಆ ಗೋಲಿ ಅವನಿಗೆ ಸೇರುತ್ತದೆ. ಹೀಗೆ ಗೋಲಿಗಳನ್ನು ಗೆದ್ದುಕೊಳ್ಳುವುದೇ ಒಂದು ಸಂಭ್ರಮ.

ಎ) ಉಪ್ಪುಪ್ಪು ಕಡ್ಡಿ ಆಟ

ಈ ಆಟವನ್ನು ಹೆಚ್ಚಾಗಿ ಗಂಡು ಮಕ್ಕಳು ಆಡುತ್ತಾರೆ. ಉಪ್ಪುಪ್ಪು ಕಡ್ಡಿ ಆಟವಾಡಲು ಒಂದು ಬೆಂಕಿ ಕಡ್ಡಿಯಷ್ಟು ಉದ್ದದ ಕಡ್ಡಿ ಹಾಗು ಒಂದಷ್ಟು ಮರಳು ಬೇಕಾಗುತ್ತದೆ. ಮರಳನ್ನು ಮೂರು-ನಾಲ್ಕು ಗೇಣು ಉದ್ದಕ್ಕೆ ಜೋಡಿಸುತ್ತಾರೆ. ಅದರೊಳಕ್ಕೆ ಬೆಂಕಿ ಕಡ್ಡಿಯ ತುಂಡನ್ನು ಹೂತುಹಾಕುತ್ತಾರೆ. ಎದುರಾಳಿಯು ಆ ಕಡ್ಡಿಯನ್ನು ಎಲ್ಲಿ ಹೂತಿದೆ ಎಂಬುದನ್ನು ಗುರುತಿಸಿ ಅದರ ಮೇಲೆ ತನ್ನ ಎರಡು ಕೈ ಬೆರಳುಗಳನ್ನು ಕೂಡಿಸಿ ಇಡಬೇಕು. ಕಡ್ಡಿಯನ್ನು ಹೂತು ಹಾಕಿದ್ದವನು ಮರಳನ್ನು ಕೆದಕುತ್ತಾ ಬರುತ್ತಾನೆ. ಆಗ ಕಡ್ಡಿ ಕೈ ಬೆರಳು ಮಡಗಿದವನ ಸ್ಥಳದಲ್ಲಿ ಇದ್ದರೆ ಅವನು ಗೆಲ್ಲುತ್ತಾನೆ. ಕೆದಕಿದವನಿಗೆ ಸಿಕ್ಕರೆ ಇವನು ಗೆದ್ದಂತಾಗುತ್ತದೆ. ಈ ಆಟವು ಒಂದು ರೀತಿಯಲ್ಲಿ ಚುರುಕುತನವನ್ನು ಪ್ರದರ್ಶಿಸುತ್ತದೆ. ಎದುರಾಳಿಯು ಮರಳನ್ನು ಸಾಲು ಮಾಡುತ್ತಿರುವ ಹಾಗೆ ಮಾಡುತ್ತಲೇ ಅದರೊಳಗೆ ಕಡ್ಡಿಯನ್ನು ಹೂತಿರುತ್ತಾನೆ. ಇದನ್ನು ಹುಡುಕುವುದು ಕೂಡ ಒಂದು ಕಲೆಯಾಗಿದೆ.

ಐ) ಬಸವನ ಆಟ

ಗಂಡು ಮಕ್ಕಳಿಗೆ ಪ್ರಿಯವಾದ ಈ ಆಟದಲ್ಲಿ ತಂಡವಿರುವುದಿಲ್ಲ. ಇಬ್ಬರು ಪರಸ್ಪರ ಎದುರಾಳಿಗಳಾಗಿ ಆಟವಾಡುತ್ತಾರೆ. ೩ ಇಂಚಿನ ಗುಂಡಿಯೊಂಚನ್ನು ತೆಗೆಯಬೇಕು. ಅಲ್ಲಿಂದ ೩

ದಾಪು (ಕಾಲಿನ ಅಳತೆ) ಅಳತೆ ಮಾಡಿ ಒಂದು ಗೆರೆಯನ್ನು ಹಾಕಬೇಕು. ಅಲ್ಲಿಂದ ಕಲ್ಲನ್ನು ಕಾಲಿನ ಸಂದಿಯಿಂದ ಗುಂಡಿಯ ಕಡೆಗೆ ಎಸೆಯಬೇಕು. ಯಾರು ಗುಂಡಿಯೊಳಕ್ಕೆ ಕಲ್ಲನ್ನು ಎಸೆಯುವನೋ ಅವನನ್ನು ಇನ್ನೊಬ್ಬ ಗೆರೆಯ ಬಳಿಯಿಂದ ಗುಂಡಿಯವರೆಗೆ ಬೆನ್ನಿನ ಮೇಲೆ ಕೂರಿಸಿಕೊಂಡು ಹೋಗಬೇಕು. ನಂತರ ಮತ್ತೆ ಆಟ ಮುಂದುವರೆಯುತ್ತದೆ.

ಐ) ಅಗಸನ ಆಟ

ಒಂದು ದೊಡ್ಡ ವೃತ್ತವನ್ನು ರಚಿಸಿ ಮಧ್ಯೆ ಒಂದು ಗೂಟವನ್ನು ನೆಡುತ್ತಾರೆ. ಅದಕ್ಕೆ ಒಂದು ಹಗ್ಗವನ್ನು ಸುತ್ತಲೂ ತಿರುಗಲು ಸಾಧ್ಯವಾಗುವಂತೆ ಕಟ್ಟುತ್ತಾರೆ. ಆಟಗಾರರೆಲ್ಲರೂ ಒಂದು ಟವಲನ್ನು ಗೂಟದ ಬುಡದಲ್ಲಿ ಇಡುತ್ತಾರೆ. ಒಬ್ಬ ಈ ಹಗ್ಗವನ್ನು ಹಿಡಿದುಕೊಂಡು ವೃತ್ತದ ಪರಿಧಿಯ ಸುತ್ತಲೂ ಸುತ್ತತೊಡಗುತ್ತಾನೆ. ಸುತ್ತಲಿದ್ದ ಆಟಗಾರರು ಅವನಿಗೆ ಸಿಕ್ಕದಂತೆ ತಮ್ಮ ತಮ್ಮ ಬಟ್ಟೆಗಳನ್ನು ತೆಗೆದುಕೊಂಡು ಆತ ತಿರುಗುತ್ತಿರುವಾಗ ರಪರಪನೆ ಅವನ ಬೆನ್ನಿನ ಮೇಲೆ ಟವಲ್‌ಗಳಿಂದ ಹೊಡೆಯುತ್ತಿರುತ್ತಾರೆ. ಆ ಏಟಿನಿಂದ ಎಷ್ಟು ನೋವಾದರೂ ಆತ ಸಹಿಸಿಕೊಳ್ಳಬೇಕು. ತಿರುಗುತ್ತಿರುವಾಗ ಅಕಸ್ಮಾತ್ ಆತನ ಕೈಗೆ ಯಾರದಾದರೂ ಬಟ್ಟೆ ಸಿಕ್ಕರೆ ಆತ ಹಗ್ಗವನ್ನು ಹಿಡಿದು ಸುತ್ತಬೇಕಾಗುತ್ತದೆ. ನಂತರ ಆಟ ಪುನರಾವರ್ತನೆಯಾಗುತ್ತದೆ.

ಒ) ಕೋಲು ಹಾರಿಸುವ ಆಟ

ಗ್ರಾಮದ ಬೀದಿ, ಮೈದಾನ, ಕೆರೆಯಂಗಳ ಹೀಗೆ ತಮಗೆ ಇಷ್ಟವಾಗುವ ಕಡೆ ೬ ರಿಂದ ೧೬ ವರ್ಷದ ಹುಡುಗರು ಈ ಆಟವನ್ನು ಆಡುತ್ತಾರೆ. ಈ ಆಟಕ್ಕೆ ನಾಲ್ಕು ಅಥವಾ ಐದು ಅಡಿ ಉದ್ದದ ಕೋಲುಗಳು ಬೇಕು. ಎಷ್ಟು ಜನ ಬೇಕಾದರು ಈ ಆಟವನ್ನು ಆಡಬಹುದು. ಹಿತಕರ ವಾತಾವರಣವಿದ್ದರೆ ಮೈಲಿಗಟ್ಟಲೆ ದೂರ ಹೋಗಿ ಬರಬಹುದು. ಇದರಲ್ಲಿ ಒಬ್ಬ ಕೋಲು ಕಾಯುವವನು. ಉಳಿದವರೆಲ್ಲರೂ ಅವನ ಕೋಲನ್ನು ಹಾರಿಸುವುದಕ್ಕಾಗಿ ಹೊಂಚು ಹಾಕುತ್ತಿರುತ್ತಾರೆ. ಕಾಯುವವರು ಯಾರೆಂದು ಚಪ್ಪಾಳೆ ಹಾಕಿ ನಿರ್ಧರಿಸುತ್ತಾರೆ. ಪ್ರಾರಂಭದಲ್ಲಿ ಕೋಲು ಹಾರಿಸುವವರು ಕಾಯುವವನ ಕೋಲನ್ನು ಚಿಮ್ಮುತ್ತಾರೆ. ಕಾಯುವವನು ಇವರನ್ನು ಮುಟ್ಟಲು ಪ್ರಯತ್ನಿಸುತ್ತಾನೆ. ಇವರೆಲ್ಲರು ತಮ್ಮ ಕೋಲುಗಳನ್ನು ಕಲ್ಲಿನ ಮೇಲೆಯೇ ಇಟ್ಟುಕೊಂಡಿರಬೇಕು. ಕಲ್ಲಿನ ಮೇಲೆ ಕೋಲು ಇಡದವನ ಕೋಲನ್ನು ಕೋಲು ಕಾಯುವವನು ಮುಟ್ಟಿದರೆ ಅವನು ಸೋತಂತಾಗುತ್ತದೆ. ಕೋಲು ಕಾಯುತ್ತಿರುವನ ಕೈಗೆ ಸಿಗದಂತೆ ಕೋಲನ್ನು ಮುಂದೆ ತಳ್ಳಿಕೊಂಡೆ ಹಾರಿಸಿಕೊಂಡೆ ಹೋಗಬೇಕು. ಹೀಗೆ ಹೋಗುವಾಗ ಎಲ್ಲೋ ಒಂದು ಕಡೆ ಕಾಯುವವನು ಗೆಲ್ಲುತ್ತಾನೆ. ಆಗ ಅವನು ಮೊದಲು ಹೊರಟ ಸ್ಥಾನವನ್ನು ಕುಂಟಿಕೊಂಡು ಕೈಯನ್ನು ಬೆನ್ನಿನ ಹಿಂದೆ ಕಟ್ಟಿಕೊಂಡು ಕಾಲು ಬಿಡದಂತೆ ಆಟ ಪ್ರಾರಂಭಿಸಿದ ಸ್ಥಳವನ್ನು ಸೇರುತ್ತಾನೆ. ಉಳಿದ ಆಟಗಾರರು ಇವನನ್ನೆ ಹಿಂಬಾಲಿಸುತ್ತಿರುತ್ತಾರೆ. ಆತ ಕಾಲನ್ನು ಬಿಟ್ಟರೆ ಅವನ ಕಾಲಿನ ಮೇಲೆ ಹೊಡೆಯುತ್ತಾರೆ. ತನ್ನ ಕೋಲು ಕಲ್ಲಿನ ಮೇಲೆ ಇಲ್ಲದಿರುವಾಗ ಕಾಯುವವನು

ಹಿಡಿದರೆ ಮುಟ್ಟಿಸಿಕೊಂಡವನು ಕೋಲನ್ನು ಕಾಯುವವನಾಗುತ್ತಾನೆ. ಮತ್ತೆ ಆಟ ಮುಂದುವರೆಯುತ್ತದೆ.

ಓ) ಕುದುರೆ ಆಟ

ಹುಡುಗರೆಲ್ಲ ಸೇರಿ ಸಮನಾದ ಎರಡು ತಂಡಗಳನ್ನು ಮಾಡಿಕೊಳ್ಳುತ್ತಾರೆ. ಎರಡು ತಂಡದಲ್ಲಿಯೂ ಒಬ್ಬೊಬ್ಬ ನಾಯಕನಿರುತ್ತಾನೆ. ಇವರಿಬ್ಬರೂ ಟಾಸ್ ಹಾಕಿ ಯಾರು ಆಟ ಆಡಬೇಕು ಯಾರು ಹಿಡಿಯಬೇಕು ಎಂಬುದನ್ನು ನಿರ್ಧರಿಸುತ್ತಾರೆ. ಒಂದು ಉದ್ದನೆಯ ಗೆರೆಯನ್ನು ಎಳೆಯುತ್ತಾರೆ. ಗೆರೆಯ ಆಚೆ ಒಂದು ತಂಡ ಗೆರೆಯ ಈಚೆ ಮತ್ತೊಂದು ತಂಡ ನಿಂತುಕೊಳ್ಳುತ್ತವೆ. ಈ ಆಟದ ಮುಖ್ಯ ಸಾಧನ ಟವಲ್ (ಚೌಕ). ಈ ಚೌಕವನ್ನು ಸುತ್ತಿ ಚೂಪಾದ ತುದಿಗೆ ಒಂದು ದಾರಕಟ್ಟುವರು. ಟಾಸ್ ಗೆದ್ದ ತಂಡದ ಒಬ್ಬ ಸದಸ್ಯ ಚೌಕದ ತುದಿಯನ್ನು ತನ್ನ ಬಲಗಾಲಿನ ಹೆಬ್ಬೆರಳು ಹಾಗೂ ಪಕ್ಕದ ಬೆರಳುಗಳ ಮಧ್ಯೆ ಸಿಕ್ಕಿಸಿ ಗೆರೆಗೆ ಸಮೀಪದಿಂದ ಎರಡು ಕೈಗಳನ್ನು ಊರಿ ರಭಸದಿಂದ ಮುಂದಕ್ಕೆ ಎಸೆಯಬೇಕು. ಹಾಗೆ ಎಸೆಯುವಾಗ ಬಟ್ಟೆ ಹಾಕಿದ ಗೆರೆಯಿಂದ ಹೊರಗೆ ಹೋಗದೆ ಒಳಗೆ ಬಿದ್ದರೆ ಅದು ಲೆಕ್ಕಕ್ಕಿಲ್ಲ. ಒಬ್ಬನಿಗೆ ಮೂರು ಅವಕಾಶಗಳಿರುತ್ತವೆ. ಆ ಮೂರರಲ್ಲು ಚೌಕವನ್ನು ಗೆರೆಯಿಂದ ಹೊರಗೆ ಎಸೆಯದಿದ್ದರೆ ಅವನು ತನ್ನ ಕಡೆಯ ಮತ್ತೊಬ್ಬರಿಗೆ ಆಟವನ್ನು ಬಿಟ್ಟುಕೊಡಬೇಕಾಗುತ್ತದೆ. ಅವನು ಎಸೆದಾಗ ಏನಾದರೂ ಎದುರು ಪಕ್ಷದವರು ಅದನ್ನು ಹಿಡಿದುಕೊಂಡರೆ ಆಟ ಆಡುವವನು ಔಟಾಗಬೇಕಾಗುತ್ತದೆ. ನೆಲಕ್ಕೆ ಬಿಟ್ಟರೆ ಪಾಯಿಂಟು ಲೆಕ್ಕ ಹಾಕುತ್ತಾರೆ. ಕೂಡಲೇ ಸೋತವರು ಒಬ್ಬರನ್ನು ಕುದುರೆಯಂತೆ ನಿಂತು ತನ್ನ ಬೆನ್ನಿನ ಮೇಲೆ ಕೂರಿಸಿಕೊಳ್ಳಬೇಕಾಗುತ್ತದೆ. ಆಟ ಮುಂದುವರೆಯುತ್ತಿರುತ್ತದೆ. ಸೋತವರು ಬಟ್ಟೆಯನ್ನು ಹಿಡಿದು ಅಟವಾಡುತ್ತಿದ್ದವನನ್ನು ಔಟ್ ಮಾಡಿಬಿಟ್ಟರೆ ಆಗ ಕುದುರೆ ಕೂತಿದ್ದವನು ಮೇಲೆದ್ದು ತನ್ನ ಗುಂಪನ್ನು ಸೇರಿಕೊಳ್ಳುತ್ತಾನೆ. ನಂತರ ಎಸೆಯುತ್ತಿದ್ದ ಪಕ್ಷ ಹಿಡಿಯುವುದಕ್ಕೂ, ಹಿಡಿಯುತ್ತಿದ್ದ ಪಕ್ಷ ಎಸೆಯುವುದಕ್ಕು ನಿಂತುಕೊಳ್ಳುತ್ತದೆ. ಹೀಗೆ ಆಟ ನಿರಂತರವಾಗಿ ಸಾಗುತ್ತದೆ. ಎರಡು ತಂಡಗಳ ಒಪ್ಪಿಗೆಯ ನಂತರ ಆಟ ನಿಲ್ಲಿಸಬಹುದು.

೪.೨. ಹೆಣ್ಣು ಮಕ್ಕಳ ಜನಪದ ಆಟಗಳು

ಅ) ಅಣ್ಣೆ ಕಲ್ಲಾಟ

ಹೆಣ್ಣು ಮಕ್ಕಳ ಒಳಾಂಗಣದ ಆಟಗಳಲ್ಲಿ 'ಅಣ್ಣೆ ಕಲ್ಲಾಟ' ಪ್ರಸಿದ್ಧವಾಗಿದೆ. ದುಂಡುಗಿರುವ ನುಣುಪಾದ ಐದು ಕಲ್ಲುಗಳನ್ನು ಬಳಸಿ ಎಷ್ಟು ಜನವಾದರು ಈ ಆಟವನ್ನು ಆಡಬಹುದು. ಕನಿಷ್ಠ ಇಬ್ಬರು ಇರಲೇಬೇಕು. ಆಟವನ್ನು ಪ್ರಾರಂಭಿಸುವ ಆಟಗಾರ್ತಿ ಮೊದಲು ಐದು ಕಲ್ಲುಗಳನ್ನು ತನ್ನ ಕೈಯಿಂದ ಅಲುಗಿಸಿ ನೆಲಕ್ಕೆ ಎಸೆಯುತ್ತಾಳೆ. ನಂತರ ಐದರಲ್ಲಿ ಒಂದು ಕಲ್ಲನ್ನು ಮೇಲಕ್ಕೆಸೆದು ಅದು ಕೆಳಕ್ಕೆ ಬೀಳುವುದರೊಳಗೆ ನೆಲದಲ್ಲಿರುವ ಉಳಿದ ನಾಲ್ಕು ಕಲ್ಲಿನಲ್ಲಿ ಒಂದನ್ನು ಎತ್ತಿಕೊಂಡು ಬೀಳುತ್ತಿರುವ ಕಲ್ಲನ್ನು ಹಿಡಿದುಕೊಳ್ಳುತ್ತಾಳೆ. ಮೇಲಿಂದ ಬೀಳುವ ಕಲ್ಲು ಕೈತಪ್ಪಿದರೆ ಆಟ

ಸೋತಂತೆ. ಇದೇ ರೀತಿ ಐದು ಸಲ ಆಡುವುದಕ್ಕೆ ಗುಚ್ಚಿ ಆಟ ಎನ್ನುತ್ತಾರೆ. ಗೆದ್ದವಳು ಸೋತವಳಿಗೆ ಆಕೆ ಎಷ್ಟು ಕಲ್ಲುಗಳನ್ನು ಗೆದ್ದಿದ್ದಾಳೋ ಅಷ್ಟು ಏಟನ್ನು ಹೊಡೆಯುತ್ತಾಳೆ. ಅಣೆ ಕಲ್ಲಾಟ ಆಡುವಾಗ, ಕೈಗೆ ಕೈ, ಕಲ್ಲಿಗೆ ಕಲ್ಲು ತಾಗಬಾರದು. ಹೀಗೆ ತಾಗಿದರೆ 'ಜುಮುಕ್' ಎನ್ನುತ್ತಾರೆ. ಜುಮುಕ್ ಎಂದರೆ ಆಟ ಹೋದಂತೆ.

ಒಂದು ಕಲ್ಲಿನ ಆಟವಾದ ಮೇಲೆ ಎರಡು ಕಲ್ಲಿನ ಆಟ ಆಡುತ್ತಾರೆ. ಆಗ ಮೇಲೆ ಒಂದು ಕಲ್ಲನ್ನು ಎಸೆದು ಎರಡೆರಡು ಕಲ್ಲುಗಳನ್ನು ಎತ್ತಬೇಕು. ಹೀಗೆ ಐದು ಬಾರಿ ಆಟವಾಡುತ್ತಾರೆ. ಎರಡು ಕಲ್ಲಿನ ಆಟವಾದ ಮೇಲೆ ಮೂರು ಕಲ್ಲಿನ ಆಟ. ಆಟವಾಡುವವರು ಒಂದು ಕಲ್ಲನ್ನು ಮೇಲೆಸೆದು ನೆಲದ ಮೇಲಿರುವ ಮೂರು ಕಲ್ಲುಗಳನ್ನು ಎತ್ತಬೇಕು. ನಂತರ ನಾಲ್ಕು ಕಲ್ಲಿನ ಆಟ. ಒಂದು ಕಲ್ಲನ್ನು ಮೇಲೆಸೆದು ನಾಲ್ಕು ಕಲ್ಲುಗಳನ್ನು ಎತ್ತಬೇಕು. ಅಣ್ಣೆಕಲ್ಲು ಆಡಲು ಯಾರೂ ಜೊತೆಗೆ ಸಿಗದಿದ್ದಾಗ ಬೇಸರ ಕಳೆಯಲು ಒಬ್ಬರೇ ಆಡುವ ಹೆಣ್ಣು ಮಕ್ಕಳು ಇದ್ದಾರೆ.

ಆ) ಹಗ್ಗ ಜಿಗಿತದ ಆಟ

ಹೆಣ್ಣು ಮಕ್ಕಳಿಗೆ ಬಹಳ ಇಷ್ಟವಾದ ಆಟವಿದು. ಸಾಮಾನ್ಯ ಉದ್ದದ ಅಗ್ಗವನ್ನು ತೆಗೆದುಕೊಂಡು ಅದರ ಎರಡು ತುದಿಗಳನ್ನು ಎರಡು ಕೈಯಲ್ಲಿ ಹಿಡಿಯುತ್ತಾರೆ. ಮೇಲೆ ಜಿಗಿದು ಹಗ್ಗ ಕಾಲಿನ ಕೆಳಗಿನಿಂದ ಹಾದು ತಲೆಯ ಮೇಲೆ ಬಂದು ಮತ್ತೆ ಮೊದಲಿನಂತೆಯೇ ಕಾಲಿನಡಿ ಹಾದು ಹೋಗುವಂತೆ ನೋಡಿಕೊಳ್ಳುತ್ತಾರೆ. ಈ ಆಟದಲ್ಲಿ ಮಕ್ಕಳ ಜಾಣ್ಮೆಯ ಅರಿವಾಗುತ್ತದೆ. ಕೈ ನೀಡಿಕೊಂಡು ಹಗ್ಗವನ್ನು ಸುತ್ತಿಸುತ್ತ ಜಿಗಿತದ ಗತಿಗೆ ಅನುಗುಣವಾಗಿ ಕೈಯಿಂದ ಹಗ್ಗ ಸುತ್ತಿಸಬೇಕಾಗುತ್ತದೆ. ಹಗ್ಗವನ್ನು ಜಿಗಿಯುತ್ತ ಓಡುವುದು ಸಾಧ್ಯವಿದೆ. ಈ ಆಟದಲ್ಲಿ ಸ್ಪರ್ಧೆಯನ್ನು ಕಟ್ಟಿ ಯಾರು ಹೆಚ್ಚು ಸಲ ಜಿಗಿಯುತ್ತಾರೆಯೋ ಅವರು ಗೆದ್ದಂತೆ ಆಗುತ್ತದೆ.

ಇ) ಕುಂಟೋ ಬಿಲ್ಲೆ

ಕುಂಟೋ ಬಿಲ್ಲೆ ಆಟ ಆಡಲು ಚೌಕಾಕಾರದ ನಾಲ್ಕು ಅಥವಾ ಆರು ಮನೆಗಳನ್ನು ಎರಡು ಸಾಲಾಗಿ ಬರೆದುಕೊಳ್ಳುತ್ತಾರೆ. ಹೆಂಚಿನ ಇಲ್ಲವೇ ಮಡಿಕೆಯ ಒಂದು ಚೂರನ್ನು ತೆಗೆದುಕೊಂಡು ಸಮನಾಗಿ ಉಜ್ಜಿ ಆಟವಾಡಲು 'ಬಚ್ಚ'ವನ್ನು ಮಾಡಿಕೊಳ್ಳುತ್ತಾರೆ. ಅದನ್ನು ಮೊದಲನೆಯ ಮನೆ, ಎರಡನೇ ಮನೆ ಹೀಗೆ ಮನೆಗಳಿಗೆ ಎಸೆದು ಪಕ್ಕದ ಸಾಲಿನ ಮನೆಗೆ ಕುಂಟುತ್ತಾ ಹೋಗಿ ಕೊನೆಯ ಮನೆಯಲ್ಲಿ ಕಾಲನ್ನು ಬಿಟ್ಟು, ಮತ್ತೆ ಪಕ್ಕದ ಸಾಲಿನಲ್ಲಿ ಕುಂಟುತ್ತಾ ಬಂದು, ಬಚ್ಚವನ್ನು ಒದ್ದು, ಕೊನೆಯ ಮನೆಯಿಂದ ಬಚ್ಚ ಇರುವಲ್ಲಿಗೆ ನೆಗೆದು ಅದನ್ನು ತುಳಿಯಬೇಕು. ಹೀಗೆ ಎಲ್ಲ ಮನೆಗಳಲ್ಲಿ ಎರಡು ಸಾಲುಗಳಲ್ಲಿ ಆಡುತ್ತಾರೆ. ನಂತರ ಅಂಗೈನಲ್ಲಿ ಬಚ್ಚವನ್ನು ಹಿಡಿದು ಒಂದೊಂದು ಮನೆಯಿಂದಲೂ ಬಚ್ಚವನ್ನೂ ದೂರಕ್ಕೆ ಎಸೆದು, ಕೊನೆಯ ಮನೆಯಿಂದ ನೆಗೆದು ಬಚ್ಚವನ್ನು ಕಾಲಿನಿಂದ ತುಳಿಯುತ್ತಾರೆ. ನಂತರ ಹಣೆಯ ಮೇಲಿಟ್ಟು, ಕುಂಟುವ ಕಾಲಿನ ಮೇಲೆ ಬಚ್ಚವನ್ನು ಇಟ್ಟು ಚುಂಟುತ್ತಾರೆ. ಎಲ್ಲ ಮನೆಗಳಿಗು ಕುಂಟಿದ ಮೇಲೆ ಹಿಂದಕ್ಕೆ ತಿರುಗಿಕೊಂಡು ತಲೆಯ

ಮೇಲಿಂದ ಬಚ್ಚವನ್ನು ಹಿಂದಿರುವ ಮನೆಗಳಿಗೆ ಎಸೆಯುತ್ತಾರೆ. ಬಚ್ಚ ಮನೆಯಲ್ಲಿ ಎಲ್ಲಾದರೂ ಬಿದ್ದರೆ ಅದು ಅವರ ಮನೆ. ಅದಕ್ಕೆ ಕತ್ತರಿಯಾಕಾರದ ಗುರುತು ಹಾಕುತ್ತಾರೆ. ಹೀಗೆ ಎಲ್ಲ ಮನೆಗಳಿಗೂ ಹಿಂದಿನಿಂದ ಬಚ್ಚವನ್ನು ಎಸೆಯುತ್ತಾರೆ. ಬಚ್ಚ ಮನೆಗೆ ಬೀಳದೆ ಹೊರಬಿದ್ದರೆ ಅಥವಾ ಗೆರೆಯ ಮೇಲೆ ಬಿದ್ದರೆ ಅವರು ಸೋಲುವುದರಿಂದ ಇನ್ನೊಬ್ಬರಿಗೆ ಆಟ ಬಿಟ್ಟುಕೊಡಬೇಕು. ಹೀಗೆ ಇನ್ನೊಬ್ಬರು ಇದೇ ಕ್ರಮದಲ್ಲಿ ಕುಂಟುತ್ತಾರೆ. ಮೊದಲವರ ಮನೆಗೆ ಬಚ್ಚವನ್ನು ಹಾಕುವಂತಿಲ್ಲ. ಆ ಮನೆಯನ್ನು ತುಳಿಯದೆ ದಾಟಿ ಹೋಗಬೇಕು. ಹಣೆಯ ಮೇಲೆ ಕಾಲಿನ ಮೇಲೆ ಅಂಗೈ ಮೇಲೆ ಬಚ್ಚವನ್ನು ಇಟ್ಟು ಕುಂಟುತ್ತಾ ಬಂದು ಮುಂದಕ್ಕೆ ಎಸೆದು ಕೊನೆಯ ಮನೆಯೇ ಒಂಟಿ ಕಾಲಿನಲ್ಲಿ ನಿಂತು ಹೆಚ್ಚು ಮನೆಗಳನ್ನು ತಮ್ಮದಾಗಿಸಿಕೊಂಡವರು ಗೆದ್ದಂತೆ.

ಈ) ಕಣ್ಣುಮುಚ್ಚಾಲೆ

ಕಣ್ಣುಮುಚ್ಚಾಲೆ ಆಟದಲ್ಲಿ ಒಬ್ಬರು ಕಣ್ಣನ್ನು ಕಟ್ಟಿಸಿಕೊಳ್ಳುತ್ತಾರೆ. ಮತ್ತೊಬ್ಬರು ಕಣ್ಣನ್ನು ಕಟ್ಟಿ ಎಲ್ಲರನ್ನು ನೋಡಿಕೊಳ್ಳುವ ವ್ಯಕ್ತಿಯಿರುತ್ತಾರೆ. ಉಳಿದವರೆಲ್ಲರು ಆಟದಲ್ಲಿ ಭಾಗವಹಿಸುತ್ತಾರೆ. ಕಣ್ಣುಮುಚ್ಚಾಲೆ ಆಟದಲ್ಲಿ ಹಿಡಿಯುವವರು ಯಾರು ಎಂಬುದನ್ನು ಚಪ್ಪಾಳೆ ಹಾಕಿ ನಿರ್ಧರಿಸಬಹುದು ಅಥವಾ ಯಾರಾದರೊಬ್ಬರು ಒಪ್ಪಿಕೊಂಡು ಹಿಡಿಯಬಹುದು. ಕಣ್ಣನ್ನು ಕಟ್ಟಿಸಿಕೊಂಡಿರುವವರನ್ನು ಹಿಡಿದ ವ್ಯಕ್ತಿಯು 'ಕಣ್ಣೆ ಮುಚ್ಚೆ, ಕಾಡೆಗೂಡೆ ಉದ್ದಿನ ಮೂಟೆ ಉರುಳೇ ಹೋಯ್ತು, ನಮ್ಮಯ ಹಕ್ಕಿ ಬಿಟ್ಟೆ ಬಿಟ್ಟೆ ನಿಮ್ಮಯ ಹಕ್ಕಿ ಅವಿತುಕೊಳ್ಳಿ' ಎಂದು ಹೇಳುತ್ತಾನೆ. ಆ ವೇಳೆಗೆ ಉಳಿದವರೆಲ್ಲ ಅಡಗಿಕೊಳ್ಳುತ್ತಾರೆ. ಕಣ್ಣು ಕಟ್ಟಿದ ಹುಡುಗ ಉಳಿದ ಹಕ್ಕಿಗಳನ್ನು ಹುಡುಕುತ್ತ ಹೊರಡುತ್ತಾನೆ. ಆಕಸ್ಮಿಕವಾಗಿ ಯಾರಾದರು ಸಿಕ್ಕಿಬಿದ್ದರೆ ಕಣ್ಣು ಕಟ್ಟಿಸಿಕೊಳ್ಳುವುದು ಅವರ ಸರದಿಯಾಗುತ್ತದೆ. ಕಣ್ಣು ಕಟ್ಟಿಸಿಕೊಂಡವನು ಎಡವಿ ಬೀಳದಂತೆ, ಡಿಕ್ಕಿ ಹೊಡೆದು ಒಡೆದುಕೊಳ್ಳದಂತೆ ಅಡುವ ಉದ್ದೇಶಕ್ಕಾಗಿ ಒಂದು ವಿಶಾಲವಾದ ಕೋಣೆಯಲ್ಲಿ, ಅಥವಾ ಸಮತಟ್ಟಾದ ಬಯಲು ಪ್ರದೇಶವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಬಹುತೇಕ ಎಲ್ಲ ಕಡೆಯು ಕಂಡುಬರುವ ಈ ಆಟವನ್ನು ಗ್ರಾಮದ ಹುಡುಗರು ಆಡಿ ನಲಿಯುತ್ತಾರೆ. ಇದನ್ನು ಹೆಣ್ಣು ಮಕ್ಕಳಷ್ಟೆ ಅಲ್ಲದೆ, ಗಂಡು ಮಕ್ಕಳು ಆಡುವುದು ಉಂಟು.

ಉ) ಅಳಿಗುಳಿ ಮಣೆ

ಅಳಿಗುಳಿ ಮಣೆಯನ್ನು ಹೆಚ್ಚಾಗಿ ಹೆಣ್ಣು ಮಕ್ಕಳು ಕೂಡಿ ಆಡುತ್ತಾರೆ. ಮರದಿಂದ ಮಾಡಿದ ಈ ಮಣೆಯಲ್ಲಿ ಎರಡು ಸಾಲಿನಲ್ಲಿ ಏಳು ಗುಳಿಗಳನ್ನು ಮಾಡಿ ಅವುಗಳಲ್ಲಿ ಐದೈದು ಹುಣಸೇ ಬೀಜಗಳನ್ನು ತುಂಬಿರುತ್ತಾರೆ. ಇವುಗಳಿಗೆ ಕೊಂತ ಎನ್ನುತ್ತಾರೆ. ಇಬ್ಬರು ಸೇರಿ ಆಟವಾಡುವಾಗ ಒಂದು ಕಡೆಯ ಸಾಲನ್ನು ಒಬ್ಬರು, ಮತ್ತೊಂದು ಕಡೆಯ ಸಾಲನ್ನು ಮತ್ತೊಬ್ಬರು ತಮ್ಮದೆಂದು ಕರೆದುಕೊಳ್ಳುತ್ತಾರೆ. ಆಟವನ್ನು ಪ್ರಾರಂಭಿಸುವವರು ತಮ್ಮ ಕಡೆಯ ಗುಳಿಗಳಲ್ಲಿ ಯಾವುದಾದರು ಒಂದನ್ನು ತೆಗೆದು ಮುಂದಿನ ಗುಳಿಗಳಿಗೆ ಹಾಕಿಕೊಂಡು ಹೋಗುತ್ತಾರೆ. ಕಾಳು ಮುಗಿದಾಗ

ಮುಂದಿನ ಗುಳಿಯ ಕಾಳುಗಳನ್ನು ತೆಗೆದುಕೊಂಡು ಮತ್ತೆ ಅದರ ಮುಂದಿನ ಮನೆಗಳಿಗೆ ಹಾಕುತ್ತ ಹೋಗಬೇಕು. ನಡುವೆ ಎಲ್ಲೋ ಖಾಲಿ ಮನೆ ಸಿಗುತ್ತದೆ. ಆಗ ಕಾಳು ಅಲ್ಲಿಗೆ ಮುಗಿಯದಿದ್ದರೆ ಗುಳಿಯನ್ನು ಸವರಿ ಮುಂದಿನ ಮನೆಯ ಕೊಂತಗಳನ್ನು ತಮ್ಮ ಕಾಳುಗಳೆಂದು ತೆಗೆದುಕೊಳ್ಳಬೇಕು. ಖಾಲಿ ಮನೆಗಳಿಗೆ ನಾಲ್ಕು ಕಾಳುಗಳು ಒಂದುಗೂಡಿದ್ದಾಗ 'ಕರುಕಟ್ಟಿದೆ' ಎಂದು ಅವನ್ನು ಆ ಸಾಲಿನ ಒಡೆಯರು ತೆಗೆದುಕೊಳ್ಳಬಹುದು. ಹೀಗೆ ಆಡುವಾಗ ಎಲ್ಲಾದರೂ ಎರಡು ಮನೆ ಖಾಲಿ ಸಿಕ್ಕರೆ ಅವರು ಆಡುವಂತಿಲ್ಲ. ಮುಂದಿನವರು ಆಡಬೇಕಾಗುತ್ತದೆ. ಹೀಗೆ ಆಟ ಎಲ್ಲ ಕಾಳುಗಳು ಮುಗಿಯುವವರೆಗೂ ಮುಂದುವರಿದು ಕೊನೆಯಾಗುತ್ತದೆ. ಯಾರೋ ಒಬ್ಬರು ಹೆಚ್ಚು ಕಾಳುಗಳನ್ನು ಗೆದ್ದಿರುತ್ತಾರೆ. ಇನ್ನೊಬ್ಬರಿಗೆ ಮನೆಗಳನ್ನು ತುಂಬಿಸಲು ಕಾಳು ಉಳಿಯದಿದ್ದಾಗ ಆಗುವಷ್ಟನ್ನು ತುಂಬಿಸಿ ಉಳಿದವುಗಳನ್ನು 'ಪಿಗ್ಗಿ ಬಿದ್ದಿವೆ' ಎಂದು ಕಾಗದದ ಚೂರುಗಳನ್ನು ಇಟ್ಟು ಉಳಿದ ಮನೆಗಳಲ್ಲೇ ಆಟವನ್ನು ಮುಂದುವರಿಸಬೇಕು. ಹೀಗೆ ಕೊನೆಯವರೆಗೂ ಆಡಿ ಒಂದು ಮನೆಯನ್ನು ತುಂಬಿಸಲಾರದಷ್ಟು ಕಾಳುಗಳನ್ನು ಉಳಿಸಿಕೊಳ್ಳದವನು ಸೋಲುತ್ತಾನೆ.

ಊ) ಚೌಕಬಾರ

ಗ್ರಾಮೀಣ ಆಟಗಳಲ್ಲಿ ಚೌಕಬಾರ ಬಹು ಜನಪ್ರಿಯವಾಗಿದೆ. ಇದನ್ನು ಇಬ್ಬರು ಅಥವಾ ನಾಲ್ಕು ಜನ ಆಡುತ್ತಾರೆ. ಚೌಕಬಾರದಲ್ಲಿ ಎರಡು ರೀತಿಯಿದೆ. ಐದು ಮನೆಯನ್ನು ಬರೆದುಕೊಂಡು, ನಾಲ್ಕು ಕಾಯಿಗಳನ್ನು ಇಟ್ಟುಕೊಂಡು ಆಡುವುದು. ಏಳು ಮನೆಯನ್ನು ಬರೆದುಕೊಂಡು ಆರು ಕಾಯಿಗಳನ್ನಿಟ್ಟುಕೊಂಡು ಆಡುವುದು. ಐದು ಮನೆಯ ಆಟದಲ್ಲಿ ನಾಲ್ಕು ಕಟ್ಟೆಮನೆ, ಒಂದು ಹಣ್ಣಿನ ಮನೆ ಇರುತ್ತದೆ. ಆಟವನ್ನು ಪ್ರಾರಂಭಿಸುವವರು ಕವಡೆಗಳನ್ನು ಬಳಸಿಕೊಂಡು (ಐದು ಮನೆಗೆ ನಾಲ್ಕು, ಏಳು ಮನೆಗೆ ಆರು) ಅವನ್ನು ಚೆನ್ನಾಗಿ ಕುಲುಕಿ ನೆಲದ ಮೇಲೆ ಹಾಕಿದಾಗ. ಅವು ಹೇಗೆ ಬೀಳುತ್ತವೆಯೋ ನೋಡಿಕೊಂಡು ಒಂದು, ಎರಡು ಏಣಿಸಿಕೊಂಡು ಕಾಯಿಗಳನ್ನು ನಡೆಸಬೇಕು. ಒಮ್ಮೊಮ್ಮೆ ನಾಲ್ಕು ಕವಡೆಗಳು ಅಂಗಾತಬಿದ್ದರೆ ಅದನ್ನು 'ಚೌಕ' ಎಂದು ಹೇಳಿ, ನಾಲ್ಕು ಮಕಾಡೆ ಬಿದ್ದರೆ 'ಬಾರ' ಎಂದು ಹೇಳಿ ಅವುಗಳಿಗೆ ಕ್ರಮವಾಗಿ ನಾಲ್ಕು, ಎಂಟು ಎಂದು ತಿಳಿದು ಅಷ್ಟು ಮನೆಗಳನ್ನು ಎಣಿಸಿ ಕಾಯಿಯನ್ನು ಚಲಾಯಿಸಬಹುದು. ಕಾಯಿಗಳು ಹಣ್ಣಿನ ಮನೆಗೆ ಹೋಗಬೇಕಾದರೆ ಒಳಗೆ ಪ್ರವೇಶಿಸಬೇಕು. ಆದರೆ ಎದುರಾಳಿಯು ಕಾಯಿಯನ್ನು ಹೊಡೆದಾಗ ಮಾತ್ರ ಅದು ಒಳಕ್ಕೆ ಪ್ರವೇಶಿಸುವಂತಿಲ್ಲ. ಬೇಗ ಈ ಅವಕಾಶ ದೊರೆತು ಒಳ ಪ್ರವೇಶಿಸಿ ಯಾರು ತಮ್ಮ ಎಲ್ಲ ಕಾಯಿಗಳನ್ನು 'ಹಣ್ಣು' ಮಾಡಿಕೊಳ್ಳುತ್ತಾರೋ ಅವರೇ ಗೆದ್ದಂತಾಗುತ್ತದೆ. ಕಾಯಿಯನ್ನು ಹೊಡೆಯಲು ಸಾಧ್ಯವಾಗದಿದ್ದವರು ಹೊರಗೆ ಸುತ್ತಬೇಕಾಗುತ್ತದೆ. ಕಟ್ಟೆ ಮನೆಗಳಲ್ಲಿ ಹೊಡೆಯುವಂತಿಲ್ಲ. ಚೌಕ ಮತ್ತು ಬಾರ ಬಿದ್ದಾಗ ಹಾಗೂ ಕಾಯಿಯನ್ನು ಹೊಡೆದಾಗ ಮತ್ತೊಂದು ಆಟಕ್ಕೆ ಅವಕಾಶವಿದೆ. ಇದೇ ರೀತಿಯಲ್ಲಿ ಆರು ಕಾಯಿಯ ಆಟವನ್ನು ಆರು ಕವಡೆಯನ್ನು ಉಪಯೋಗಿಸಿ ಆಡಬೇಕು. ಇಲ್ಲಿ ಎರಡೆರಡು ಕಾಯಿಗಳನ್ನು ಜೊತೆಯಲ್ಲೇ

ನಡೆಸುವ ಅವಕಾಶವಿದೆ. ಅದಕ್ಕೆ ಆಟಕ್ಕೆ ಮೊದಲೇ ಒಪ್ಪಂದ ಮಾಡಿಕೊಂಡಿರಬೇಕಾಗುತ್ತದೆ. ಚೌಕಾಬಾರ ಆಟವನ್ನು ಹೆಣ್ಣು ಮಕ್ಕಳು ಹೆಚ್ಚಾಗಿ ಆಡುತ್ತಾರೆ.

೩) ಬಳೆಚೂರಿನ ಆಟ

ಇಬ್ಬರು ಹೆಣ್ಣು ಮಕ್ಕಳು ಎದುರುಬದುರು ಕುಳಿತುಕೊಂಡು ಆಡುವ ಆಟವಿದು. ಒಡೆದು ಹೋದ ಬಳೆಯ ಚೂರುಗಳೇ ಈ ಆಟದ ಸಾಮಗ್ರಿಗಳು. ಇಬ್ಬರು ಸಮನಾದ ಬಳೆ ಚೂರುಗಳನ್ನು ಹಂಚಿಕೊಳ್ಳುತ್ತಾರೆ. ಆಟಕ್ಕೆ ನಿರ್ದಿಷ್ಟವಾದ ಬಳೆ ಚೂರುಗಳನ್ನು ಕಟ್ಟಿಕೊಳ್ಳುತ್ತಾರೆ. ಅವುಗಳನ್ನು ನೆಲದ ಮೇಲಿಟ್ಟು ಬಾಯಿಂದ ಜೋರಾಗಿ ಗಾಳಿ ಊದುತ್ತಾರೆ. ಹೀಗೆ ಮಾಡಿದಾಗ ಆ ಬಳೆ ಚೂರುಗಳು ಸುತ್ತಲೂ ಚದುರುತ್ತವೆ. ಆಟ ಪ್ರಾರಂಭಿಸಿದವರು ಬಳೆಯ ಚೂರುಗಳನ್ನು ಒಂದು ಮತ್ತೊಂದಕ್ಕೆ ತಗುಲದಂತೆ ಆಯ್ದುಕೊಳ್ಳಬೇಕು. ತಗುಲಿದರೆ ಅವರು ಸೋಲುತ್ತಾರೆ. ಇನ್ನೊಬ್ಬರು ಆಟವನ್ನು ಮುಂದುವರೆಸುತ್ತಾರೆ. ಈ ರೀತಿ ಕೊನೆಯವರೆಗೂ ಆಡಿದಾಗ ಯಾರು ಹೆಚ್ಚು ಬಳೆಯ ಚೂರುಗಳನ್ನು ಗೆದ್ದಿರುತ್ತಾರೊ ಅವರು ವಿಜಯಿಗಳಾಗುತ್ತಾರೆ.

೪) ಕುಂಟಾಟ

ಹೆಣ್ಣು ಮಕ್ಕಳು ಇಷ್ಟಪಡುವ ಆಟಗಳಲ್ಲಿ ಕುಂಟಾಟವು ಒಂದು. ಇದರಿಂದ ಮನಸ್ಸಿಗೆ ಆನಂದವಷ್ಟೆ ಅಲ್ಲ ಕಾಲಿಗೆ ವ್ಯಾಯಾಮವಾಗುತ್ತದೆ. ಮನೆಯ ಮುಂದಿನ ಅಂಗಳದಲ್ಲಿ ಸೇರಿ ಚಪ್ಪಾಳೆಯನ್ನು ಹಾಕುವ ಮೂಲಕ ಕಳ್ಳಿಯನ್ನು ನಿರ್ಧರಿಸುತ್ತಾರೆ. ನಿರ್ದಿಷ್ಟ ಅಂತರದಲ್ಲಿ ಎರಡು ಗೆರೆಗಳನ್ನು ಎಳೆಯುತ್ತಾರೆ. ಕಳ್ಳಿಯಾದವಳು ಗೆರೆಯ ಹೊರಗೆ ನಿಂತುಕೊಂಡು ಜೂಟಾ ಎನ್ನುತ್ತಾಳೆ. ಉಳಿದವರು ಜೂಟು ಎಂದು ಆಟಕ್ಕೆ ಚಾಲನೆ ನೀಡುತ್ತಾರೆ. ಕಳ್ಳಿಯು ಎಡ ಅಥವಾ ಬಲಗಾಲನ್ನು ಸ್ವಲ್ಪ ಮೇಲಕ್ಕೆತ್ತಿ ನೆಲಕ್ಕೆ ತಾಗದಂತೆ ಕುಂಟುತ್ತಾ ಗೆರೆ ಒಳಗಿನ ಆಟಗಾರರನ್ನು ಹಿಡಿಯಲು ಒಳಕ್ಕೆ ಬರುತ್ತಾಳೆ. ಉಳಿದವರು ಕುಂಟೆಯ ಕೈಗೆ ಸಿಗದೆ ಗೆರೆಯ ಒಳಗಡೆಯೇ ಓಡಾಡುತ್ತಾರೆ. ಕಳ್ಳಿಯು ಯಾರನ್ನಾದರೂ ಮುಟ್ಟಿಸಿದರೆ ಮುಟ್ಟಿಸಿಕೊಂಡವರು ಕಳ್ಳಿಯಾಗಿ ಕುಂಟುತ್ತಾರೆ. ಹೀಗೆ ಹೊಸದಾಗಿ ಆಟ ಪ್ರಾರಂಭವಾಗುತ್ತದೆ. ಇಲ್ಲಿ ಆಟಗಾರರು ಗೆರೆಯನ್ನು ದಾಟದೆ ಕುಂಟುತ್ತಿರುವವಳಿಗೆ ಸಿಗದೆ ಚಾಣಾಕ್ಷತನದಿಂದ ಆಡಬೇಕಾಗುತ್ತದೆ.

೫. ಜನಪದ ಅಡುಗೆ

ಮಾನವನ ಮೂಲಭೂತ ಅವಶ್ಯಕತೆಗಳಲ್ಲಿ ಅನ್ನವೂ ಒಂದು. ಪ್ರಕೃತಿಯೊಂದಿಗೆ ಬದುಕು ನಡೆಸಿಕೊಂಡು ಬಂದಿರುವ ಜನ ತಮಗೆ ಬೇಕಾದ ಆಹಾರವನ್ನು ಅನುಭವದಿಂದಲೇ ಕಂಡುಕೊಂಡಿದ್ದಾರೆ. ತಮ್ಮ ಸುತ್ತಮುತ್ತಲ ಭೌಗೋಳಿಕ ಪರಿಸರದಲ್ಲಿ ಸಿಗುವ ಆಹಾರ ಪದಾರ್ಥಗಳನ್ನು ಬಳಸಿಕೊಂಡು ವೈವಿಧ್ಯಮಯವಾದ ಆಹಾರವನ್ನು ತಯಾರಿಸುವ ರೀತಿಯನ್ನು ಮನುಷ್ಯ ರೂಢಿಸಿಕೊಂಡು ಬಂದಿದ್ದಾನೆ. ಮೈಗೆ ಬಟ್ಟೆಯಿಲ್ಲದಿದ್ದರೂ ಪರವಾಗಿಲ್ಲ ಆದರೆ ಹೊಟ್ಟೆಗೆ

ಆಗಾಗ ಆಹಾರ ಸೇವಿಸದಿದ್ದಲ್ಲಿ ಮನುಷ್ಯ ಬದುಕಲಾರ. ಕೆಲವು ಧಾನ್ಯಗಳ ಬಳಕೆ ಕೆಲವರ ಸಾಮಾಜಿಕ ಸ್ಥಾನಮಾನ, ಪ್ರತಿಷ್ಠೆಗಳಿಗೂ ಕಾರಣವಾಗುತ್ತದೆ. ಸಾಮಾನ್ಯ ದಿನಗಳಲ್ಲಿ ಬಳಸುವ ತಿಂಡಿಗಳಿಗಿಂತ ಹಬ್ಬ ಹರಿದಿನಗಳಲ್ಲಿ ತಯಾರಿಸುವ ತಿಂಡಿಗಳು ಬೇರೆಯಾಗಿರುತ್ತವೆ. ಒಂದೊಂದು ಹಬ್ಬದಲ್ಲು ಒಂದೊಂದು ತಿಂಡಿಗೆ ಪ್ರಾಶಸ್ತ್ಯವಿರುತ್ತದೆ. ಹೋಳಿಗೆಯಿಲ್ಲದೆ ಯುಗಾದಿ ಹಬ್ಬವಾಗುವುದಿಲ್ಲ. ಶ್ಯಾವಿಗೆ ಮಾಡದೆ ದೀಪಾವಳಿ ಆಚರಿಸುವುದಿಲ್ಲ. ಹಬ್ಬ ಮುಗಿದ ಮಾರನೆಯ ದಿನ ವರುಷ ತೊಡಕಿಗೆ ಮಾಂಸಹಾರ ಇರುತ್ತದೆ.

ಜನಪದ ಅಡುಗೆಗಳಲ್ಲಿ ಅವುಗಳ ರುಚಿಯ ಆಧಾರದ ಮೇಲೆ ಸಿಹಿ ಅಡುಗೆ–ಖಾರದ ಅಡುಗೆ ಮತ್ತು ಸಿಹಿ ಅಡುಗೆ ಎಂದು ಎರಡು ರೀತಿಯಲ್ಲಿ ವಿಂಗಡಿಸಬಹುದು. ಜನಪದರು ಅತಿಥಿಗಳನ್ನು ದೇವರಂತೆ ಕಂಡು ಅವರನ್ನು ಸತ್ಕಾರ ಮಾಡುತ್ತಾರೆ.

ಅ) ರಾಗಿ ಮುದ್ದೆ

ದಕ್ಷಿಣ ಕರ್ನಾಟಕದ ಬೆಳೆಗಳಲ್ಲಿ ರಾಗಿ ಪ್ರಮುಖ ಸ್ಥಾನ ಪಡೆದಿದೆ. ಕೃಷಿಯ ಪ್ರಾರಂಭದ ದಿನಗಳಿಂದಲೂ ರಾಗಿ ಮುದ್ದೆ ಪ್ರಸಿದ್ಧವಾದ ಆಹಾರವಾಗಿದೆ. ಕೆಲವು ಕಡೆ ಇದನ್ನು ಹಿಟ್ಟು ಎಂದು ಕರೆಯುತ್ತಾರೆ. ರಾಗಿ ಬಹಳ ತಂಪಾದ ಆಹಾರ. ಇದನ್ನು ತಿನ್ನುವುದರಿಂದ ಶಕ್ತಿ ಹೆಚ್ಚುತ್ತದೆ. ರಾಗಿ ಮುದ್ದೆ ಮಾಡುವಾಗ ಒಂದು ಸೇರು ನೀರಿಗೆ ಮೂರು ಪಾವು ಹಸಿಹಿಟ್ಟು ಬೇಕಾಗುತ್ತದೆ. ಮನೆಯಲ್ಲಿರುವವರ ಸಂಖ್ಯೆಯನ್ನವಲಂಬಿಸಿ ಮನೆಯ ಯಜಮಾನಿ ಹಿಟ್ಟನೆಸರನ್ನು ಒಲೆಯ ಮೇಲಿಡುತ್ತಾರೆ. ಹಿಟ್ಟನೆಸರು ಉಕ್ಕುತ್ತಿದ್ದಾಗ ಹದಕ್ಕೆ ತಕ್ಕಷ್ಟು ಹಸಿಹಿಟ್ಟು ಹಾಕಿ ಕೋಲಿನಿಂದ ಕಲುಕಿ ಬೇಯಲು ಬಿಡುತ್ತಾರೆ. ಚೆನ್ನಾಗಿ ಬೆಂದು ಹದಕ್ಕೆ ಬಂದಾಗ ಪಾತ್ರೆಯನ್ನು ಒಲೆಯ ಮೇಲಿಂದ ಕೆಳಗಿಳಿಸಿಕೊಂಡು ಕಾವುಗೋಲಿನಿಂದ ಹೊಂದಿಸಿ ತಮಗೆ ಬೇಕಾದ ಗಾತ್ರಕ್ಕೆ ಮುದ್ದೆ ಕಟ್ಟುತ್ತಾರೆ. ಮುದ್ದೆಗಳನ್ನೆಲ್ಲಾ ಪಾತ್ರೆಯೊಳಕ್ಕೆ ಹಾಕಿ ಇಡುತ್ತಾರೆ. ಮುದ್ದೆ ಸಿದ್ಧವಾಗುತ್ತಿದ್ದಂತೆ ಎಲ್ಲರನ್ನು ಊಟಕ್ಕೆ ಬನ್ನಿ ಎಂದು ಹೇಳಿ ಎಲ್ಲರು ಸೇರಿ ಊಟ ಮಾಡುತ್ತಾರೆ.

ಆ) ಉಪ್ಸಾರು

ಬಗೆ ಬಗೆಯ ಸೊಪ್ಪುಗಳನ್ನು ಮಿಶ್ರಣ ಮಾಡಿ ಕಾಳುಗಳ ಜೊತೆಯಲ್ಲಿ ಉಪ್ಸಾರನ್ನು ತಯಾರಿಸುತ್ತಾರೆ. ಸಾಮಾನ್ಯವಾಗಿ ಕೀರೆ ಸೊಪ್ಪು, ದಂಟಿನ ಸೊಪ್ಪು, ಹೊನಗೊನೆ ಸೊಪ್ಪು, ಅರಿವೆ ಸೊಪ್ಪುಗಳನ್ನು ಹೆಚ್ಚಾಗಿ ಬಳಸುತ್ತಾರೆ. ಉಪ್ಪೆಸರು ತುಂಬಾ ರುಚಿಕರವಾಗಿರುತ್ತದೆ. ಉಳ್ಳಿಕಾಳು ಉಪ್ಸಾರು ಮತ್ತು ಮುದ್ದೆ ಮತ್ತಷ್ಟು ರುಚಿಸುತ್ತದೆ. ಸೊಪ್ಪು ಮತ್ತು ಕಾಳುಗಳನ್ನು ಮಿಶ್ರಣ ಮಾಡಿಯು ಉಪ್ಸಾರನ್ನು ಸಿದ್ಧಮಾಡುತ್ತಾರೆ. ಉಪ್ಸಾರಿಗೆ ಬೇಕಾದ ಸೊಪ್ಪುಗಳನ್ನು ಕೆಲವರು ತಮ್ಮ ಹಿತ್ತಲ ತೋಟಗಳಲ್ಲಿ ಬೆಳೆದುಕೊಳ್ಳುತ್ತಾರೆ. ಕಾಳನ್ನು ಮೊದಲು ಪಾತ್ರೆಗೆ ಹಾಕಿ ಬೇಯಿಸುತ್ತಾರೆ. ಕಾರವನ್ನು ಪ್ರತ್ಯೇಕವಾಗಿ ಅರೆದುಕೊಳ್ಳುತ್ತಾರೆ. ಅಗತ್ಯಕ್ಕೆ ತಕ್ಕಷ್ಟು ಮೆಣಸಿನ ಕಾಯಿ, ಈರುಳ್ಳಿ, ಬೆಳ್ಳುಳ್ಳಿ, ಹುಣಸೆ ಹಣ್ಣು, ಮೆಣಸು, ಉಪ್ಪುಗಳನ್ನು ಅರೆದು ಕಾರ ತಯಾರಿಸುತ್ತಾರೆ. ನಂತರ ಸೊಪ್ಪು, ಕಾಳಿನ ಜೊತೆ

ಕಾರವನ್ನು ಹಾಕಿ ಬೇಯಿಸುತ್ತಾರೆ. ಹೀಗೆ ಸಿದ್ಧಗೊಂಡ ಉಪ್ಸಾರು ರಾಗಿ ಮುದ್ದೆಗೆ ಚೆನ್ನಾಗಿ ಹೊಂದಿಕೊಳ್ಳುತ್ತದೆ.

ಇ) ಹೊಂದ್ಸಾರು (ಉಳಿ ಎಸರು)

ಹೊಂದ್ಸಾರನ್ನು ತಯಾರಿಸಲು ಸ್ವಲ್ಪ ಹೆಚ್ಚು ಖರ್ಚಾಗುತ್ತದೆ. ಮೆಣಸಿನಕಾಯಿ, ದನಿಯಾ, ಜೀರಿಗೆ, ಮೆಣಸು, ಮೆಂತ್ಯ, ಸಾಸುವೆ, ಕಡಲೆಕಾಳು, ಕರಿಬೇವಿನ ಸೊಪ್ಪುಗಳನ್ನು ಪ್ರತ್ಯೇಕವಾಗಿ ಹುರಿದುಕೊಂಡಿರುತ್ತಾರೆ. ನಂತರ ಪುಡಿ ಮಾಡಿಕೊಳ್ಳುತ್ತಾರೆ. ದನಿಯಾ ಮತ್ತು ಮೆಣಸಿನ ಕಾಯಿಗಳನ್ನು ಬೇರೆ ಬೇರೆಯಾಗಿ ಕುಟ್ಟಿ ಪುಡಿ ಮಾಡುತ್ತಾರೆ. ತಮಗೆ ಬೇಕಾದ ತರಕಾರಿಗಳನ್ನು ಬೇಳೆ ಕಾಳುಗಳ ಜೊತೆಗೆ ಸಿದ್ಧಮಾಡಿಕೊಂಡಿರುವ ಸಾಂಬಾರ ಪುಡಿಯನ್ನು ಹಾಕಿ ಬೇಯಿಸುತ್ತಾರೆ. ರುಚಿಕರವಾದ ಹೊಂದ್ಸಾರು ಸಿದ್ಧವಾಗುತ್ತದೆ.

ಉ) ಮಾಂಸದ ಸಾರು

ದಿನನಿತ್ಯದ ಸಾಮಾನ್ಯ ಸಾಂಬಾರುಗಳನ್ನು ಬಿಟ್ಟರೆ ಉಳಿದಂತೆ ವಿಶೇಷ ಸ್ಥಾನಮಾನ ಪಡೆದುಕೊಂಡಿರುವುದು ಮಾಂಸದ ಸಾರು. ಬಂಧು ಬಳಗದವರು ಬಂದಾಗ ಬಾಡೂಟದ ವಿಶೇಷ ಆತಿಥ್ಯ. ಕೋಳಿ ಕುಯ್ದು ಗೌರವ ತೋರುವವರು ಇದ್ದಾರೆ. ವಾರಕ್ಕೊಂದು ದಿನವಾದರು ಮಾಂಸದ ಸಾರು ಮಾಡಿ ಊಟ ಮಾಡದಿದ್ದರೆ ಬೇಸರಪಟ್ಟುಕೊಳ್ಳುತ್ತಾರೆ. ಮಾಂಸದ ಸಾರಿಗೆ ಬೇರೆ ಸಾರುಗಳಿಗೆ ಬಳಸುವ ಕಾರವನ್ನು ಬಳಸುವುದಿಲ್ಲ. ಕಾಯಿ, ಕೊತ್ತುಂಬರಿಸೊಪ್ಪು, ಹಸಿ ಶುಂಠಿ, ಮೆಣಸಿನಕಾಯಿ, ದನಿಯಾ, ಮೆಣಸು, ಟೊಮ್ಯಾಟೊಗಳನ್ನು ಆಯಾ ಮಾಂಸಗಳಿಗೆ ತಕ್ಕಂತೆ ಬಳಸುತ್ತಾರೆ. ಬಾಡೂಟ ಕೆಲವರಿಗೆ ಏನೋ ಹುಚ್ಚು. ಮಾಂಸದ ಸಾರು ರುಚಿಯಾಗಿರದಿದ್ದರೆ ಹೆಂಗಸರ ಜೊತೆಯಲ್ಲಿ ಜಗಳವಾಡುತ್ತಾರೆ. ಚೆನ್ನಾಗಿದ್ದರೆ ಬಾಯ್ತುಂಬ ಹೊಗಳುತ್ತಾರೆ. ಕೆಲವರು ಮಾಂಸವನ್ನು ಮಾಡಲು ಪ್ರತ್ಯೇಕ ಒಲೆ ಮತ್ತು ಪಾತ್ರೆಗಳನ್ನು ಉಪಯೋಗಿಸುತ್ತಾರೆ. ಹಬ್ಬ ಹರಿದಿನಗಳಲ್ಲಿ ವಿಶೇಷವಾದ ರೀತಿಯಲ್ಲಿ ಬಾಡೂಟ ಮಾಡಿಕೊಂಡು ಬಂಧು ಮಿತ್ರರನ್ನೆಲ್ಲ ಕರೆದು ಊಟಕ್ಕೆ ಹಾಕಿ ಸಂಭ್ರಮಿಸುತ್ತಾರೆ.

೬. ಉಡುಗೆ-ತೊಡುಗೆಗಳು

ವ್ಯಕ್ತಿಗಳು ತೊಡುವ ಉಡುಗೆ-ತೊಡುಗೆಗಳು ಆ ಪ್ರದೇಶದ ಸಂಸ್ಕೃತಿಯನ್ನು ಪರಿಚಯಿಸುತ್ತವೆ. ಪ್ರದೇಶದಿಂದ ಪ್ರದೇಶಕ್ಕೆ ಉಡುಗೆ-ತೊಡುಗೆಗಳಲ್ಲಿ ವೈವಿಧ್ಯತೆ ಕಂಡುಬರುತ್ತದೆ. ಹಬ್ಬ ಹರಿದಿನಗಳು ಮತ್ತು ಮದುವೆ ಮುಂಜಿಗಳಲ್ಲಿ ವಿಶೇಷ ಉಡುಪುಗಳನ್ನು ತೊಡುವ ಜನರು ಉಳಿದಂತೆ ಸಾಮಾನ್ಯ ಉಡುಪುಗಳನ್ನು ಧರಿಸುತ್ತಾರೆ. ಗಂಡು ಮಕ್ಕಳಿಗೆ ನಮ್ಮ ತಾತ ಮುತ್ತಾತನ ಕಾಲದಿಂದಲೂ ಚಿಕ್ಕಂದಿನಲ್ಲಿ ಬಟ್ಟೆಯ ತುಂಡೊಂದನ್ನು (ಲಂಗೋಟಿ) ಕಟ್ಟುತ್ತಿದ್ದರು. ಈಗ ಚಡ್ಡಿಯನ್ನು ತಪ್ಪದೇ ಹಾಕುತ್ತಾರೆ. ಗಂಡು ಮಕ್ಕಳು ಶಾಲೆಗೆ ಹೋಗುವವರೆಗೂ

ಮೊಣಕಾಲಿನವರೆಗೆ ಬರುವ ಅಂಗಿಗಳನ್ನು ಧರಿಸುತ್ತಿದ್ದದ್ದು ಉಂಟು. ಈಗ ಇಂತಹ ಪರಿಸ್ಥಿತಿ ಇಲ್ಲ. ಮಗು ಹುಟ್ಟಿದಂದಿನಿಂದ ಬೆಳವಣಿಗೆಯ ಹಂತದವರೆಗೂ ವಿಭಿನ್ನವಾದ ಉಡುಪುಗಳನ್ನು ತೊಡಿಸಿ ತಾಯಂದಿರು ಖುಷಿಪಡುತ್ತಾರೆ. ಹಬ್ಬ ಹರಿದಿನಗಳಲ್ಲಿ ತಮಗೆ ಹೊಸ ಬಟ್ಟೆ ತೆಗೆದುಕೊಳ್ಳದಿದ್ದರೂ ಮಗುವಿಗೆ ಮಾತ್ರ ಟೀಷರ್ಟ್-ಜೀನ್ಸ್ ಪ್ಯಾಂಟ್, ಶೇರ್‌ವಾನಿ, ಷರ್ಟ್-ಪ್ಯಾಂಟ್, ಮಿಡಿ, ಚೂಡಿದಾರ್, ರೇಷ್ಮೆ ಲಂಗ, ಜಾಕೀಟು, ಮುಂತಾದ ತಾನು ಒಪ್ಪಿದ ಉಡುಪನ್ನು ತೊಡಿಸುತ್ತಾರೆ.

ಹೆಂಗಸರು ಸೀರೆ-ರವಿಕೆಗಳನ್ನು ತೊಟ್ಟರೆ ಗಂಡಸರು ಪಂಚೆ, ಷರ್ಟ್‌ಗಳನ್ನು ಉಡುತ್ತಾರೆ. ಹೆಗಲ ಮೇಲೆ ಟವಲ್ ಹಾಕಿಕೊಳ್ಳುತ್ತಾರೆ. ಜಮೀನಿನಲ್ಲಿ ಕೆಲಸ ಮಾಡುವಾಗ ನಿಕ್ಕರ್, ಬನಿಯನ್ ಧರಿಸುತ್ತಾರೆ. ಯುವಕರು ಹಳೆಯ ಪ್ಯಾಂಟ್ ಹಾಗು ಟೀ ಷರ್ಟ್ ತೊಟ್ಟು ಕೆಲಸ ಮಾಡುತ್ತಾರೆ. ಇತ್ತೀಚಿನ ದಿನಗಳಲ್ಲಿ ನಾಗರೀಕರಣದ ಪ್ರಭಾವದಿಂದಾಗಿ ಗಂಡಸರು, ಹೆಂಗಸರು, ಮಕ್ಕಳೆಲ್ಲರು ವಿಭಿನ್ನವಾದ ಉಡುಗೆಗಳನ್ನು ತೊಡುವುದನ್ನು ರೂಢಿಮಾಡಿಕೊಂಡಿದ್ದಾರೆ.

ಮಕ್ಕಳ ಸೊಂಟಕ್ಕೆ ಗಂಡು ಮಕ್ಕಳಿಗೆ ಉಡುದಾರ ಹೆಣ್ಣು ಮಕ್ಕಳಿಗೆ ಡಾಬು ಧರಿಸುತ್ತಾರೆ. ಬೆರಳಿಗೆ ಉಂಗುರವನ್ನು ಹಾಕುತ್ತಾರೆ. ಕೊರಳಿಗೆ ಕಾಸಿನ ಸರ, ಜೋಮಾಲೆಸರ, ಕಂಠಿ, ಅಡ್ಡಿಕೆಗಳನ್ನು ಹಾಕುತ್ತಿದ್ದರು. ಈಗ ಚೈನು, ನಕ್ಲೇಸ್, ಲಾಂಗ್‌ಸರ, ಪದಕವನ್ನು ಧರಿಸುತ್ತಾರೆ. ಕಿವಿಗೆ ಓಲೆ, ಜುಮಕಿ, ಮಾಟಿ, ಹ್ಯಾಂಗೀಂಕ್ಸ್, ಗುಂಡು ಹಾಕುತ್ತಾರೆ. ಕೈಗೆ ಬಳೆ, ಕೈಚೈನು, ಮೂಗಿಗೆ ಮೂಗುತಿ ಧರಿಸುತ್ತಾರೆ. ಕಾಲಿಗೆ ಕಾಲಿನ ಚೈನು (ಗೆಜ್ಜೆ) ಗಳನ್ನು ಹಾಕಿಕೊಳ್ಳುತ್ತಾರೆ.

೭. ಜನಪದ ವೈದ್ಯ

ಜನಪದ ವೈದ್ಯವು ಮಾನವನ ಬದುಕಿನೊಂದಿಗೆ ನೇರ ಸಂಬಂಧಪಟ್ಟದ್ದು. ಜನಪದರ ಕಾಯಿಲೆಗಳು ಹಾಗು ಅವುಗಳನ್ನು ಗುಣಪಡಿಸುವ ವಿಧಾನಗಳನ್ನು ಮಾನವ ಅರಿತುಕೊಂಡ. ಸಸ್ಯಗಳಲ್ಲಿ ರೋಗನಿವಾರಕ ಗುಣ ಇರುವುದೆಂದು ತಿಳಿದು ಔಷಧಿ ರೂಪದಲ್ಲಿ ಬಳಸತೊಡಗಿದ. ಅನುಭವ ವಿಸ್ತಾರವಾದಂತೆ ಜನಪದ ವೈದ್ಯವೇ ಅವನ ಪಾಲಿಗೆ ಸಂಜೀವಿನಿಯಾಯಿತು. ದೈಹಿಕ ರೋಗಗಳಲ್ಲಿ ಕೆಲವು ಸಾಂಕ್ರಾಮಿಕ ರೋಗಗಳಿರುತ್ತವೆ. ರೋಗಗ್ರಸ್ಥ ಮನುಷ್ಯ ಮಾತನಾಡಿದಾಗ, ಕೆಮ್ಮಿದಾಗ, ಸೀನಿದಾಗ, ಮಲಮೂತ್ರ ವಿಸರ್ಜನೆ ಮಾಡಿದಾಗ ಹೊರಬೀಳುವ ರೋಗಾಣುಗಳಿಂದ ರೋಗ ಒಬ್ಬರಿಂದ ಮತ್ತೊಬ್ಬರಿಗೆ ಹರಡುವ ಸಂಭವ ಹೆಚ್ಚಿರುತ್ತದೆ ಎಂಬ ತಿಳುವಳಿಕೆ ಜನಪದರಲ್ಲಿದೆ. ಕಾಲಿಗೆ ಕಲ್ಲು ತಾಕಿದಾಗಲೋ, ಕುಡಗೋಲು ಬಡಿದಾಗಲೋ, ಜಾರಿಬಿದ್ದು ಗಾಯವಾದಗಲೋ ಪರಿಸರದಲ್ಲಿಯೇ ಇರುವ ಸಸ್ಯ ಸಂಪತ್ತನ್ನು ಬಳಸಿಕೊಂಡು ಗುಣಮುಖನಾಗಿದ್ದಾನೆ. ಮನೆಯಲ್ಲಿ ಹೊಟ್ಟೆನೋವು, ತಲೆನೋವುಗಳು ಬಂದಾಗ ಉಪ್ಪು, ಎಣ್ಣೆ, ಬೆಳ್ಳುಳ್ಳಿ, ಸುಣ್ಣಗಳನ್ನು ಉಪಯೋಗಿಸಿ ಗುಣ ಹೊಂದಿದ್ದಾನೆ. ಗಿಡ ಮೂಲಿಕೆಗಳ ಔಷಧಿಯನ್ನು ನಂಬಿದ ಜನ ಹಳ್ಳಿಯ ವೈದ್ಯರ ಬಳಿಗೆ ಹೋಗುತ್ತಿದ್ದುದು ಗಮನಾರ್ಹ ಸಂಗತಿ. ಅನೇಕ

ರೋಗಗಳು ಅವುಗಳ ಪರಿಹಾರೋಪಾಯ ಎಲ್ಲವನ್ನು ನೆನಪಿನಲ್ಲಿಟ್ಟುಕೊಂಡು ರೋಗಕ್ಕೆ ಚಿಕಿತ್ಸೆ ಕೊಡತೊಡಗಿದ ವ್ಯಕ್ತಿಗಳೇ 'ನಾಟವೈದ್ಯ'ರಾಗಿ ಪ್ರಸಿದ್ಧಿ ಪಡೆದರು.

೭.೧. ಮನುಷ್ಯರು ರೋಗಗಳು ಮತ್ತು ಚಿಕಿತ್ಸೆ

ತಲೆನೋವು

ಅತಿಯಾದ ಬಿಸಿಲಿನಲ್ಲಿ ಸುತ್ತಾಡಿದಾಗ, ತಲೆಗೆ ತುಂಬ ಕೆಲಸ ಕೊಟ್ಟಾಗ ಸಾಮಾನ್ಯವಾಗಿ ತಲೆನೋವು ಕಾಣಿಸಿಕೊಳ್ಳುತ್ತದೆ. ಹಣೆ ಪೂರ್ತಿ ಒಂದೇ ಸಮನೆ ಸೂಜಿಯಿಂದ ಚುಚ್ಚಿದಂತೆ ನೋಯುತ್ತದೆ. ನೀಲಗಿರಿ ಎಣ್ಣೆಯನ್ನು ಹಣೆಗೆ ಹಚ್ಚುವುದರಿಂದ ತಲೆನೋವು ವಾಸಿಯಾಗುತ್ತದೆ. ಬೆಳ್ಳುಳ್ಳಿ ರಸವನ್ನು ಹಣೆಗೆ ಹಚ್ಚುವುದರಿಂದಲು ಗುಣವಾಗುತ್ತದೆ. ದಾಳಿಂಬೆ ಗಿಡದ ಬೇರನ್ನು ನೀರಿನೊಡನೆ ಅರೆದು ಹಣೆಗೆ ಲೇಪಿಸುವುದರಿಂದ ತಲೆನೋವು ವಾಸಿಯಾಗುತ್ತದೆ.

ಕೆಮ್ಮು

ಗಂಟಲಿನ ತೊಂದರೆಯಿಂದ ಕೆಮ್ಮು ಬರುತ್ತದೆ. ಗುಸುಗುಸು ಕೆಮ್ಮು, ಕಫದಿಂದ ಕೂಡಿದ ಕೆಮ್ಮು ಹೆಚ್ಚಾಗಿ ಕಾಡುತ್ತವೆ. ವೀಳ್ಯದೆಲೆ ಮತ್ತು ಲವಂಗ ತಿನ್ನುವುದರಿಂದ, ತುಳಸಿ ಎಲೆ ತಿನ್ನುವುದರಿಂದ ಕೆಮ್ಮು ಕಡಿಮೆಯಾಗುತ್ತದೆ. ಬೆಳ್ಳುಳ್ಳಿ ತಿಂದು ನೀರು ಕುಡಿಯದೆ ಮಲಗಿಕೊಳ್ಳುವುದರಿಂದಲು ವಾಸಿಯಾಗುತ್ತದೆ. ದಾಳಿಂಬೆ ಹೂವಿನ ಮೊಗ್ಗನ್ನು ಒಣಗಿಸಿ ಪುಡಿಮಾಡಿ ಸೇವಿಸುವುದರಿಂದಲು ಕೆಮ್ಮು ಗುಣವಾಗುತ್ತದೆ. ಶುಂಠಿ ಕಷಾಯ ಕುಡಿಯುವುದರಿಂದಲು ಕೆಮ್ಮು ಕಡಿಮೆಯಾಗುವುದುಂಟು. ಕಿರುನಾಲಿಗೆ ಉದ್ದವಾಗಿ ಕೆಮ್ಮು ಬಂದಾಗ ತುಂಬೆ ರಸ ಮತ್ತು ಸುಣ್ಣವನ್ನು ಬೆರೆಸಿ ಕಿರುನಾಲಿಗೆಗೆ ಹಚ್ಚುವುದರಿಂದ ಕೆಮ್ಮು ಕಡಿಮೆಯಾಗುತ್ತದೆ.

ನೆಗಡಿ

ವಿಪರೀತವಾದ ಶೀತದಿಂದ ನೆಗಡಿ ಕಾಣಿಸಿಕೊಳ್ಳುತ್ತದೆ. ನೆಗಡಿ ಅಷ್ಟು ಬೇಗ ಹೋಗುವುದಿಲ್ಲ. ವಾರವಾದರು ಇದ್ದೇ ಇರುತ್ತದೆ. ಮಳೆಗಾಲ-ಚಳಿಗಾಲದಲ್ಲಿ ಹೆಚ್ಚಾಗಿ ಬರುತ್ತದೆ. ಕೆಂಡದ ಮೇಲೆ ರಾಗಿಯ ಹಿಟ್ಟು ಹಾಕಿ ಅದರ ಹೊಗೆಯ ವಾಸನೆಯನ್ನು ಮುಖಕ್ಕೆ ತೆಗೆದುಕೊಳ್ಳಬೇಕು. ಮೆಣಸಿನ ನೀರು ಕುಡಿಯುವುದರಿಂದಲು ಕಡಿಮೆಯಾಗುತ್ತದೆ. ಬಿಸಿ ನೀರಲ್ಲಿ ಅರಿಷಿನ ಪುಡಿ ಹಾಕಿಕೊಂಡು ಕುಡಿಯುವುದರಿಂದಲು ನೆಗಡಿ ವಾಸಿಯಾಗುತ್ತದೆ. ಮೆಣಸನ್ನು ಕುಟ್ಟಿ ಅದರಲ್ಲಿ ಜೇನು ತುಪ್ಪವನ್ನು ಕಲಸಿ ಸೇವಿಸುವುದರಿಂದ ನೆಗಡಿ ಹೊರಟು ಹೋಗುತ್ತದೆ.

ಹೊಟ್ಟೆ ನೋವು

ಮನುಷ್ಯನು ಸೇವಿಸುವ ಆಹಾರದಲ್ಲಿ ವ್ಯತ್ಯಾಸವಾಗಿ ಅಜೀರ್ಣವಾದರೆ ಹೊಟ್ಟೆನೋವು ಬರುತ್ತದೆ. ಸುಣ್ಣವನ್ನು ಹರಳೆಣ್ಣೆಯಲ್ಲಿ ಬೆರೆಸಿ ಒಕ್ಕುಳಕ್ಕೆ ಹಚ್ಚುವುದರಿಂದ ಹೊಟ್ಟೆನೋವು ಹೊರಟು

ಹೋಗುತ್ತದೆ. ಕಾಲ್ದೂಳನ್ನು ತೆಗೆಯುವ ಪದ್ಧತಿ ಜನಪದರಲ್ಲಿದೆ. ಮೂರು ದಾರಿಯೊಳಗಿನ ಮಣ್ಣು ತಂದು ನೀವಳಿಸಿ ಕಡ್ಡಿ ಪೊರಕೆಯ ಮೇಲೆ ತೂ ಎಂದು ಉಗಿಯುವಂತೆ ಹೇಳುತ್ತಾರೆ. ಆಗಲೂ ಹೊಟ್ಟೆನೋವು ಮಾಯವಾಗುತ್ತದೆ. ನುಗ್ಗೆ ಸೊಪ್ಪನ್ನು ಜಜ್ಜಿ ರಸ ಮಾಡಿಕೊಂಡು ಅದಕ್ಕೆ ಸಕ್ಕರೆ ಅಥವಾ ಜೇನುತುಪ್ಪ ಸೇರಿಸಿ ಬೆಳಿಗ್ಗೆ ಸಂಜೆ ೧/೨ ಲೋಟ ಕುಡಿಯುವುದರಿಂದಲು ಹೊಟ್ಟೆನೋವು ವಾಸಿಯಾಗುತ್ತದೆ. ನೇರಳೆ ಹಣ್ಣಿನ ರಸ ಕುಡಿಯುವುದರಿಂದಲು ಹೊಟ್ಟೆ ನೋವು ಹೋಗುತ್ತದೆ.

ಉಗುರು ಸುತ್ತು

ಉಗುರಿನ ಸುತ್ತ ನೋವು ಹೆಚ್ಚಾಗುವುದಕ್ಕೆ ಉಗುರು ಸುತ್ತು ಎನ್ನುವರು. ನಿಂಬೆ ಹಣ್ಣಿಗೆ ತೂತು ಮಾಡಿ ಉಗುರು ಸುತ್ತಾದ ಬೆರಳಿಗೆ ಸಿಕ್ಕಿಸಿದಾಗ ಸಾಮಾನ್ಯವಾಗಿ ಉಗುರುಸುತ್ತು ಕಡಿಮೆಯಾಗುತ್ತದೆ. ಕಾರೆಗಿಡದ ಬೇರು ಅಥವಾ ಕಾಂಡದ ತೊಗಟೆಯನ್ನು ಅರೆದು ಉಗುರು ಸುತ್ತಾಗಿರುವ ಬೆರಳಿಗೆ ಕಟ್ಟಿದರೆ ಗುಣವಾಗುತ್ತದೆ. ಕಣಗಲ ಸೊಪ್ಪು, ಬೆಣ್ಣೆ ಮತ್ತು ಹಾಕಿಕೊಳ್ಳುವ ಸುಣ್ಣ ಇವುಗಳನ್ನು ಸೇರಿಸಿ ಅರೆದು ಕಟ್ಟುವುದರಿಂದ ಉಗುರುಸುತ್ತು ವಾಸಿಯಾಗುತ್ತದೆ.

ಗಂಟಲು ನೋವು

ಏನನ್ನು ತಿನ್ನಲು ಆಗದೆ, ಉಗುಳು ನುಂಗಲು ಸಾಧ್ಯವಾಗದಂತೆ ಗಂಟಲು ನೋವು ಕಾಣಿಸಿಕೊಳ್ಳುತ್ತದೆ. ಬಿಸಿ ನೀರಿನಲ್ಲಿ ಉಪ್ಪು ಹಾಕಿ ಕರಗಿಸಿ ಗಂಟಲೊಳಗೆ ಗುಳುಗುಳು ಮುಕ್ಕಳಿಸಬೇಕು. ನಿಂಬೆರಸವನ್ನು ಕುಡಿದಾಗಲು ಗಂಟಲು ನೋವು ವಾಸಿಯಾಗುತ್ತದೆ.

ಎದೆ ಉರಿ

ಮಾಡಿದ ಊಟ ಜೀರ್ಣವಾಗುವುದು ಇಲ್ಲ. ಊಟ ಮಾಡಲು ಸಾಧ್ಯವಾಗುವುದು ಇಲ್ಲ. ಎದೆ ಒಂದೇ ಸಮನೆ ಉರಿಯುತ್ತದೆ. ಇಂತಹ ಸಂದರ್ಭದಲ್ಲಿ ತಣ್ಣೀರನ್ನು ಹೆಚ್ಚು ಕುಡಿಯಬೇಕು. ಮಜ್ಜಿಗೆಗೆ ಸ್ವಲ್ಪ ಉಪ್ಪು ಹಾಕಿ ಕರಗಿಸಿ ಕುಡಿಯಬೇಕು. ಆಗ ಎದೆ ಉರಿ ಸಹಜವಾಗಿ ಕಡಿಮೆಯಾಗುತ್ತದೆ.

ಕುರ (ಕುರು)

ಮನುಷ್ಯನ ದೇಹದಲ್ಲಿ ಬಿಳಿಯ ಬಣ್ಣದ ಗುಳ್ಳೆಯೊಂದು ಕಾಣಿಸಿಕೊಳ್ಳುತ್ತದೆ. ಇದನ್ನೇ ಕುರವೆನ್ನುತ್ತಾರೆ. ಕೊಬ್ಬರಿ ಎಣ್ಣೆಯನ್ನು ವೀಳ್ಯದೆಲೆಗೆ ಸವರಿ ಅದನ್ನು ಬೆಂಕಿಯಲ್ಲಿ ಕಾಯಿಸಿ ಕುರಕ್ಕೆ ಹಚ್ಚುತ್ತಾರೆ. ಕೆಟ್ಟ ರಕ್ತದಿಂದ ಕುರಗಳು ಬರುತ್ತವೆಂದು ಹೇಳುತ್ತಾರೆ. ಹರಳೆಣ್ಣೆಯಿಂದ ಸವರಿ, ಬಿಸಿಯಾದ ರಾಗಿ ಮುದ್ದೆಯನ್ನು ಬಟ್ಟೆಯಲ್ಲಿ ಕಟ್ಟುವುದರಿಂದಲು ಕುರ ವಾಸಿಯಾಗುತ್ತದೆ. ಗರಿಕೆ ಹುಲ್ಲು ಮತ್ತು ಅರಿಶಿನವನ್ನು ಅರೆದು ದಿನಕ್ಕೆ ೩ ಬಾರಿ ಹಚ್ಚುವುದರಿಂದಲು ಕುರ ಹೊರಟುಹೋಗುತ್ತದೆ.

ಆಮ ಶಂಕೆ

ರಕ್ತಭೇದಿಯನ್ನು ಜನಪದರು ಆಮಶಂಕೆ ಎನ್ನುತ್ತಾರೆ. ಮಲ ವಿಸರ್ಜನೆಯ ಜೊತೆಗೆ ರಕ್ತವು ಹೊರಬೀಳುವುದೇ ರಕ್ತ ಭೇದಿ. ಬಿಲ್ವಪತ್ರೆಯ ಹಣ್ಣಿನ ತಿರುಳು ತಿನ್ನುವುದರಿಂದ ಆಮಶಂಕೆ ಕಡಿಮೆಯಾಗುತ್ತದೆ. ಕಪ್ಪು ಚಹಾದಲ್ಲಿ ನಿಂಬೆಹಣ್ಣಿನ ರಸ ಸೇರಿಸಿ ಕುಡಿಯುವುದರಿಂದಲು ಆಮಶಂಕೆ ಕಡಿಮೆಯಾಗುತ್ತದೆ. ಮೊಸರನ್ನ ಊಟ ಮಾಡುವುದರಿಂದಲು ವಾಸಿಯಾಗುತ್ತದೆ. ಎಳೆಯ ಸೀತಾಫಲವನ್ನು ಬೀಜ ತೆಗೆದು ತಿನ್ನುವುದರಿಂದ ಆಮಶಂಕೆ ನಿವಾರಣೆಯಾಗುತ್ತದೆ.

ಅಮ್ಮ (ಮಾರಿಬ್ಯಾನಿ)

ದೇಹದ ತುಂಬ ಗುಳ್ಳೆಗಳು ಎದ್ದು ತೊಂದರೆಕೊಡುತ್ತವೆ. ಮಾರಮ್ಮನ ಕೋಪವೇ ಇದಕ್ಕೆ ಕಾರಣವೆಂದು ಜನಪದರು ನಂಬಿದ್ದಾರೆ. ಐದು ದಿನಗಳವರೆಗೆ ಬೇವಿನ ಎಲೆಯನ್ನು ನೀರಿನಿಂದ ನೆನೆಸಿ ಅರೆದು ಮೈಗೆಲ್ಲ ಹಚ್ಚಬೇಕು. ಅದು ಒಣಗಿದ ಮೇಲೆ ಸ್ನಾನ ಮಾಡಬೇಕು. ಮಾರಮ್ಮನಿಗೆ ಮೊಸರನ್ನದ ತಳಿಗೆ ಕೊಟ್ಟು ಎಳೆನೀರಿನ ಅಭಿಷೇಕ ಮಾಡಿ ಪೂಜಿಸಬೇಕು. ಹೀಗೆ ಮಾಡಿದಾಗ ಅಮ್ಮ ವಾಸಿಯಾಗುತ್ತದೆ.

ಉರಿ ಮೂತ್ರ

ಮೂತ್ರ ಮಾಡುವ ಜಾಗದಲ್ಲಿ ಹೆಚ್ಚು ಉರಿ ಕಾಣಿಸಿಕೊಳ್ಳುತ್ತದೆ. ಇದನ್ನೇ ಉರಿ ಮೂತ್ರವೆನ್ನುವರು. ಹೆಚ್ಚು ತಣ್ಣೀರನ್ನು ಕುಡಿಯುವುದರಿಂದ, ಬಾಳೆಹಣ್ಣನ್ನು ತಿನ್ನುವುದರಿಂದ, ಕಲ್ಲಂಗಡಿ ಹಣ್ಣು ತಿನ್ನುವುದರಿಂದ ಉರಿ ಮೂತ್ರ ವಾಸಿಯಾಗುತ್ತದೆ. ಒಕ್ಕುಳಕ್ಕೆ ಹರಳೆಣ್ಣೆ ಹಚ್ಚುವುದರಿಂದ ಇದು ವಾಸಿಯಾಗುತ್ತದೆ.

ಭೇದಿ

ಪದೇ ಪದೇ ಮಲ ವಿಸರ್ಜನೆಯಾಗುವುದಕ್ಕೆ ಭೇದಿ ಎನ್ನುವರು. ಇದರಿಂದ ಮನುಷ್ಯ ಶಕ್ತಿಹೀನನಾಗುತ್ತಾನೆ. ನಿಂಬೆಹಣ್ಣಿನ ರಸ ಕುಡಿಯಬೇಕು. ಸಾಸಿವೆ ಅಥವಾ ಮೆಂತ್ಯವನ್ನು ನುಂಗುವುದರಿಂದಲು ಭೇದಿ ನಿಲ್ಲುತ್ತದೆ. ಅಣ್ಣೆಸೊಪ್ಪಿನ ಬೀಜಗಳನ್ನು ಅರೆದು ಕುಡಿಸುವುದರಿಂದಲು ಬೇಧಿ ನಿಲ್ಲುತ್ತದೆ. ಎಳೆಯ ಸೀತಾಫಲವನ್ನು ಬೀಜ ತೆಗೆದು ತಿನ್ನುವುದರಿಂದ ಭೇದಿ ನಿಲ್ಲುತ್ತದೆ.

ಕಾಮಾಲೆ (ಜಾಂಡೀಸ್)

ಕಾಮಾಲೆ ರೋಗವಿರುವ ವ್ಯಕ್ತಿಯ ಕಣ್ಣುಗಳು ಹಳದಿ ಬಣ್ಣಕ್ಕೆ ತಿರುಗುತ್ತವೆ. ಹಾಗಲಕಾಯಿಯ ರಸವನ್ನು ಸೇವಿಸುವುದರಿಂದ ಹಾಗು ಕಬ್ಬಿನ ಹಾಲನ್ನು ಕುಡಿಯುವುದರಿಂದ ಜಾಂಡೀಸ್ ವಾಸಿಯಾಗುತ್ತದೆ. ಕಬ್ಬಿನ ಗದ್ದೆಯಲ್ಲಿ ಬೆಳೆದ ತಿನ್ನಬಹುದಾದ ಬೆರಕೆ ಸೊಪ್ಪನ್ನು ತಂದು ಬೇಯಿಸಿ ತಿನ್ನುವುದರಿಂದಲೂ ಜಾಂಡೀಸ್ ಕಡಿಮೆಯಾಗುತ್ತದೆ.

ಪಿತ್ತ

ಇದರಿಂದಾಗಿ ತಲೆ ತಿರುಗುವುದು, ವಾಂತಿಯಾಗುವುದು, ಜ್ವರ ಬರುವುದು ಸಾಮಾನ್ಯ. ಹಸಿ ಶುಂಠಿ, ಕಲ್ಲು ಸಕ್ಕರೆಯನ್ನು ಸೇರಿಸಿ ತಿನ್ನುವುದರಿಂದ ಇದು ಕಡಿಮೆಯಾಗುತ್ತದೆ, ನೇರಳೆ ಹಣ್ಣಿನ ರಸವನ್ನು ಸೇವಿಸುವುದರಿಂದಲು ಪಿತ್ತ ಕಡಿಮೆಯಾಗುತ್ತದೆ. ನುಗ್ಗೆ ಹೂವನ್ನು ಚೆನ್ನಾಗಿ ಅರೆದು ಕಾದಿರುವ ಹಾಲಿಗೆ ಹಾಕಿ ಕುಡಿಸುವುದರಿಂದ ಪಿತ್ತ ಕಡಿಮೆಯಾಗುತ್ತದೆ.

ಜ್ವರ

ದೇಹದ ಅಸ್ವಸ್ಥತೆಯಿಂದಾಗಿ ಜ್ವರ ಕಾಣಿಸಿಕೊಳ್ಳುತ್ತದೆ. ಜ್ವರ ಹೆಚ್ಚಾಗಿ ಮೈಬಿಸಿಯಾಗುತ್ತದೆ. ದೇಹವೆಲ್ಲ ನಡುಗುತ್ತದೆ. ತಣ್ಣೀರು ಬಟ್ಟೆಯನ್ನು ಹಣೆಯ ಮೇಲಿಡುವುದರಿಂದಲು ಜ್ವರ ಕಡಿಮೆಯಾಗುತ್ತದೆ. ಬಿಳಿ ಎಕ್ಕೆ ಗಿಡದ ಬೇರನ್ನು ನಿಂಬೆಹಣ್ಣಿನ ರಸದಲ್ಲಿ ಅರೆದು ತಿನ್ನುವುದರಿಂದಲು ಜ್ವರ ವಾಸಿಯಾಗುತ್ತದೆ. ಅರಳಿ ಮರದ ಚಕ್ಕೆಯ ಒಳನಾರಿನಿಂದ ಕಷಾಯ ಮಾಡಿ ಕುಡಿಸುವುದರಿಂದಲು ಜ್ವರ ವಾಸಿಯಾಗುತ್ತದೆ.

ದೃಷ್ಟಿ

ಕೆಟ್ಟ ದೃಷ್ಟಿಯುಳ್ಳವರು ಮಗುವನ್ನು ನೋಡಿದರೆ ಅಥವಾ ಹೆಚ್ಚು ಜನ ಮಗುವಿನ ಆಟವನ್ನು ನೋಡಿದಾಗ ಮಗು ಒಂದೇ ಸಮನೆ ರಚ್ಚೆ ಹಿಡಿದು ಅಳುವುದನ್ನು ನೋಡಿ ಅದಕ್ಕೆ ದೃಷ್ಟಿಯಾಗಿದೆ ಎಂದು ತಿಳಿಯುತ್ತಾರೆ. ಮೆಣಸಿನಕಾಯಿ, ಉಪ್ಪನ್ನು, ಮಗುವಿಗೆ ಮೂರು ಸಾರಿ ನಿವಾಳಿಸಿ ಒಲೆಯಲ್ಲಿ ಹಾಕುತ್ತಾರೆ. ಅದು ಚಟ್ ಎಂದಾಗ ದೃಷ್ಟಿ ಹೋಯಿತು ಎನ್ನುತ್ತಾರೆ. ಬಿಳಿಯ ಹಂಚಿ ಕಡ್ಡಿಗೆ ಬೆಂಕಿಯನ್ನು ಹಚ್ಚಿಕೊಂಡು ಮೂರು ಸಲ ಮಗುವಿಗೆ ನಿವಾಳಿಸಿ ಬಾಗಿಲ ಮೂಲೆಗೆ ನಿಲ್ಲಿಸುತ್ತಾರೆ. ಆಗ ಹಂಚಿ ಕಡ್ಡಿಗಳು ಪಟ್ ಪಟ್ ಎಂದಾಗ ದೃಷ್ಟಿ ಹೋಯಿತೆಂದು ತಿಳಿದು ಅದರ ಬೂದಿಯನ್ನು ಮಗುವಿನ ಹಣೆಗೆ ಹಚ್ಚುತ್ತಾರೆ. ದೃಷ್ಟಿಯಾಗಬಾರದೆಂಬ ಉದ್ದೇಶದಿಂದಲೇ ಮಗುವಿನ ಕೈಗೆ ಕಪ್ಪು ದಾರವನ್ನು ಕಟ್ಟಿರುತ್ತಾರೆ.

ಗಂಟಲು ಕಟ್ಟುವುದು

ಕೆಲವೊಮ್ಮೆ ಮಾತು ಬರದೆ ಗಂಟಲು ಕಟ್ಟಿಕೊಳ್ಳುತ್ತದೆ. ಒಣಶುಂಠಿ, ಮೆಣಸಿನ ಕಾಯಿ ಮತ್ತು ಬೆಲ್ಲ ಸೇರಿಸಿ ಜಜ್ಜಿ, ಕುದಿಸಿದ ಮೇಲೆ ಅದಕ್ಕೆ ಹಾಲು ಬೆರಸಿ ರಾತ್ರಿ ಮಲಗುವಾಗ ಕುಡಿಯಬೇಕು. ಆಗ ಗಂಟಲು ಮೊದಲಿನಂತೆ ಸರಾಗವಾಗುತ್ತದೆ. ಚರಂಡಿ, ಕಾಲುವೆ, ಗದ್ದೆ ಮೊದಲಾದ ಶೀತ ಪ್ರದೇಶದಲ್ಲಿ ಬೆಳೆಯುವ ಗುರುಗದ ಸೊಪ್ಪನ್ನು ಅರೆದು ಮಜ್ಜಿಗೆಯಲ್ಲಿ ಬೆರೆಸಿ ಕುಡಿಸುವುದರಿಂದ ಗಂಟಲಿನ ಸ್ವರ ಸರಿಯಾಗುತ್ತದೆ.

ಅಜೀರ್ಣ-ವಾಂತಿ

ಇಂತಹ ಸಂದರ್ಭದಲ್ಲಿ ಜೀರಿಗೆ ಮತ್ತು ಗಂಧವನ್ನು ಸಮ ಪ್ರಮಾಣದಲ್ಲಿ ಕೂಡಿಸಿ ತೇದು ಒಂದು ಸೇರು ನೀರಿಗೆ ಹಾಕಿ ಕುಡಿಸಬೇಕು. ನೇರಳೆ ಚಕ್ಕೆಯನ್ನು ಸುಟ್ಟು ಅದರ ಕರಕನ್ನು

ಜೇನುತುಪ್ಪದೊಡನೆ ತಿನ್ನುವುದರಿಂದಲೂ ವಾಂತಿಯಾಗುವುದು ನಿಲ್ಲುತ್ತದೆ. ಅರಳಿ ಮರದ ಚಕ್ಕೆಯನ್ನು ಸುಟ್ಟು ಬೂದಿ ಮಾಡಿಕೊಂಡು ಸ್ವಲ್ಪ ನೀರಿಗೆ ಬೆರೆಸಿ ಕುಡಿಯುವುದರಿಂದ ವಾಂತಿ ಕಡಿಮೆಯಾಗುತ್ತದೆ. ಚರಂಡಿ, ಕಾಲುವೆ, ಗದ್ದೆ ಮೊದಲಾದ ಶೀತ ಪ್ರದೇಶದಲ್ಲಿ ಬೆಳೆಯುವ ಗುರುಗದ ಸೊಪ್ಪನ್ನು ತೇಯ್ದು ಮಜ್ಜಿಗೆಯಲ್ಲಿ ಕುಡಿಸುವುದರಿಂದಲು ಅಜೀರ್ಣ ವಾಸಿಯಾಗುತ್ತದೆ.

ಹಾವು ಕಚ್ಚಿದಾಗ

ಹಾವು ಕಚ್ಚಿದಾಗ ಜನರ ಭಯ ಮತ್ತಷ್ಟು ಹೆಚ್ಚುತ್ತದೆ. ಆಗ ತಾನೇ ತೆಗೆದ ಬಿಳಿಯ ತಾವರೆಯ ಗೆಡ್ಡೆಯ ರಸ ಕುಡಿಸುವುದರಿಂದ ನಾಗರಹಾವು ಕಡಿದ ವಿಷವು ಪರಿಹಾರವಾಗುತ್ತದೆ. ತುಂಬೆ ಎಲೆ ರಸಕ್ಕೆ ಬಾಳೆ ದಿಂಡಿನ ರಸ ಸೇರಿಸಿ ಕುಡಿಯುವುದರಿಂದ ಹಾವಿನ ವಿಷ ಪರಿಹಾರವಾಗುತ್ತದೆ. ಮುಳ್ಳು ಹರಿವೆ ಸೊಪ್ಪಿನ ಕಷಾಯ ಸೇವನೆಯಿಂದಲು ಹಾವಿನ ವಿಷ ಪರಿಹಾರವಾಗುತ್ತದೆ. ಹಾವು ಕಡಿದ ಕೂಡಲೇ ಹಾಗಲ ಎಲೆಯ ರಸವನ್ನು ಕುಡಿಸಿದರೆ ವಾಂತಿಯಾಗಿ ವಿಷ ಇಳಿಯುತ್ತದೆ.

ಹುಳುಕಡ್ಡಿ

ಮನುಷ್ಯದ ದೇಹದಲ್ಲಿ ಸಾಮಾನ್ಯವಾಗಿ ಕೈಕಾಲಿನಲ್ಲಿ ಹುಳಕಡ್ಡಿ ಕಾಣಿಸಿಕೊಳ್ಳುತ್ತದೆ. ಚರ್ಮದ ಮೇಲೆ ಬೆಳ್ಳಗೆ ಗೀರುಗೀರು ಆಕಾರದಲ್ಲಿ ಬರುತ್ತದೆ. ಇಂತಹ ಸಂದರ್ಭದಲ್ಲಿ ನುಗ್ಗೆ ಮರದ ಬೇರನ್ನು ನೀರಿನೊಂದಿಗೆ ಅರೆದು ಮೈಗೆ ಹಚ್ಚುವುದರಿಂದ ಹುಳುಕಡ್ಡಿ ವಾಸಿಯಾಗುತ್ತದೆ. ಪರಂಗಿ ಕಾಯಿಯ ಹಾಲನ್ನು ಹಚ್ಚುವುದರಿಂದಲು ಹುಳುಕಡ್ಡಿ ಗುಣವಾಗುತ್ತದೆ. ಕಕ್ಕೆ ಮರದ ಚಿಗುರೆಲೆಯನ್ನು ಅಕ್ಕಿ ತೊಳೆದ ನೀರಿನಲ್ಲಿ ಅರೆದು ದಿವಸಕ್ಕೆ ೨-೩ ಬಾರಿ ಲೇಪಿಸುವುದರಿಂದ ಹುಳುಕಡ್ಡಿ ವಾಸಿಯಾಗುತ್ತದೆ. ತಾವರೆ ಗಿಡದ ಬೇರನ್ನು ಅರೆದು ಹಚ್ಚುವುದರಿಂದಲು ಇದು ಗುಣವಾಗುತ್ತದೆ.

ಸುಟ್ಟಗಾಯ

ಕಕ್ಕೆ ಮರದ ಚಕ್ಕೆಯನ್ನು ಸುಟ್ಟು ಹಸುವಿನ ಹಾಲಿನಲ್ಲಿ ಕಲಕಿ ಮೂರು ದಿವಸ ಕುಡಿಸುವುದರಿಂದ ಸುಟ್ಟ ಗಾಯ ವಾಸಿಯಾಗುತ್ತದೆ. ದಾಳಿಂಬೆ ಎಲೆಗಳನ್ನು ಅರೆದು ಹಚ್ಚಿದರೆ ಸುಟ್ಟ ಗಾಯದ ಉರಿ ಕಡಿಮೆಯಾಗುತ್ತದೆ. ಗರಿಕೆ ಹುಲ್ಲಿನ ರಸವನ್ನು ಗಾಯದ ಮೇಲೆ ಹಾಕುವುದರಿಂದ ಗಾಯ ವಾಸಿಯಾಗುತ್ತದೆ.

ಸಾಮಾನ್ಯ ಗಾಯ

ತುಂಬೆ ಸೊಪ್ಪನ್ನು ಅರೆದು ಅದಕ್ಕೆ ಅರಿಶಿಣ ಸ್ವಲ್ಪ ಹಾಕಿಕೊಂಡು ಸುಣ್ಣವನ್ನು ಸೇರಿಸಿ ಗಾಯಕ್ಕೆ ಹಚ್ಚಿದರೆ ಅದು ವಾಸಿಯಾಗುತ್ತದೆ. ರೋಸಲ್ ಗಿಡದ ಸೊಪ್ಪನ್ನು ಅರೆದು ಹಚ್ಚುವುದರಿಂದಲೂ ಗಾಯ ವಾಸಿಯಾಗುತ್ತದೆ. ಕೆಂಪು ಉತ್ತರಾಣಿ ಸೊಪ್ಪಿನ ರಸವನ್ನು ಗಾಯದ ಮೇಲೆ ಹಾಕುವುದರಿಂದಲೂ ಗಾಯ ಗುಣವಾಗುತ್ತದೆ.

ತುಟಿ ಒಡೆದರೆ

ತುಟಿ ಒಡೆದು ನೋವು ಕಾಣಿಸಿಕೊಳ್ಳುತ್ತದೆ. ಸಾಮಾನ್ಯವಾಗಿ ಕಾಯಿಸಿದ ಹಾಲಿನ ಕೆನೆಯನ್ನು ತುಟಿಗೆ ಹಚ್ಚುತ್ತಾರೆ. ಸಾಸಿವೆ ಎಣ್ಣೆಯನ್ನು ದಿನಕ್ಕೆರಡು ಸಲ ಹಚ್ಚುವುದು ಉಂಟು. ಕೊಬ್ಬರಿ ಎಣ್ಣೆಯನ್ನು ತುಟಿಗೆ ಹಚ್ಚುವುದರಿಂದಲು ವಾಸಿಯಾಗುತ್ತದೆ.

೭.೨. ಗೋವೈದ್ಯ ಚಿಕಿತ್ಸೆ

ಹೊಟ್ಟೆ ಊದಿದರೆ

ಇದ್ದಕ್ಕಿದ್ದಂತೆಯೇ ದನಕರುಗಳ ಹೊಟ್ಟೆ ಊದಿಕೊಳ್ಳುತ್ತದೆ. ಈ ಸನ್ನಿವೇಶದಲ್ಲಿ ಹುರಳಿ ಕಾಳನ್ನು ಸ್ವಲ್ಪ ಮೆಣಸಿನಕಾಯಿಯನ್ನು ಹಾಕಿ ಕುದಿಸಲು ಇಡಬೇಕು. ಅವು ಕುದಿಯುವ ಹಂತಕ್ಕೆ ಬಂದಾಗ ತೆಗೆದುಕೊಂಡು ನೀರಿಗೆ ಹಾಕಿ ದನಕರುಗಳಿಗೆ ಕುಡಿಸಬೇಕು. ಒಂದು ಬಿಲ್ಲೆ ಕರ್ಪೂರವನ್ನು ೧ ಪಾವು ತಿನ್ನುವ ಸೋಡಾದೊಡನೆ ಬೆರೆಸಿ ನೀರಿನಲ್ಲಿ ಕಲಕಿ ಕುಡಿಸಬೇಕು. ಹೀಗೆ ಮಾಡಿದಾಗ ಹೊಟ್ಟೆ ಇಳಿಯುತ್ತದೆ. ಹತ್ತು ಬಿಳಿ ದಾಸವಾಳದ ಎಲೆ, ಎರಡು ಹಿಡಿ ಬೇರು ಮತ್ತು ನಾಲ್ಕು ಹಿಡಿ ತುಳಸಿ ಎಲೆ, ಇವುಗಳನ್ನು ಒಂದು ಲೀಟರ್ ಹಾಲಿಗೆ ಹಾಕಿ ಕುದಿಸಿ ಕುಡಿಸುವುದರಿಂದಲು ಹೊಟ್ಟೆ ಊತ ಕಡಿಮೆಯಾಗುತ್ತದೆ. ಹರಳೆಣ್ಣೆ ಶುಂಠಿ, ಹಿಂಗುಗಳನ್ನು ಅಗತ್ಯಕ್ಕನುಗುಣವಾಗಿ ಬೆರೆಸಿ ಕುಡಿಸಬೇಕು.

ಹುಳ ಮುಟ್ಟಿ ಗಾಯವಾದರೆ

ದನಕರುಗಳ ಕಣ್ಣು, ಕಿವಿ, ಮುಖಗಳಲ್ಲಿ ಗಾಯವಾದರೆ ಹುಳ ಮುಟ್ಟಿದೆ ಎಂದು ತಿಳಿಯುತ್ತಾರೆ. ನುಗ್ಗೆಸೊಪ್ಪುಗಳನ್ನು ಮೆಣಸು, ಬೆಳ್ಳುಳ್ಳಿಗಳ ಜೊತೆ ಅರೆದು ಕುಡಿಸಬೇಕು. ನಸ್ಯದ ಪುಡಿ ಮತ್ತು ಸುಣ್ಣವನ್ನು ಗಾಯಕ್ಕೆ ಹಚ್ಚುವುದರಿಂದಲೂ ವಾಸಿಯಾಗುತ್ತದೆ. ಗಾಯದ ಸುತ್ತಲೂ ಬೇವಿನ ಎಣ್ಣೆಯನ್ನು ಹಚ್ಚುವುದರಿಂದ ನೊಣಗಳು ಕುಳಿತುಕೊಳ್ಳುವುದನ್ನು ತಡೆಯಬಹುದು. ಆಲದ ಮರದ ಹಾಲನ್ನು ಗಾಯದ ಮೇಲೆ ಹಾಕಬೇಕು. ಕಣಗಲ ಗಿಡದ ಹಾಲನ್ನು ಗಾಯದ ಮೇಲೆ ಹಚ್ಚುವುದರಿಂದಲು ವಾಸಿಯಾಗುತ್ತದೆ.

ಹೆಗಲು ಬಂದಿದ್ದರೆ

ಹಸು ಮತ್ತು ಎತ್ತುಗಳಿಗೆ ಸಾಮಾನ್ಯವಾಗಿ ಹೆಗಲಿಗೆ ಗಾಯವಾಗಿ ರಕ್ತವು ಸೋರುತ್ತಿರುತ್ತದೆ. ಆಗ ಮುತ್ತುಗದ ಗಿಡದ ಎಲೆಯನ್ನು ತಂದು ಸುಟ್ಟು ಕೊಬ್ಬರಿ ಎಣ್ಣೆಯಲ್ಲಿ ತೇದು ಹೆಗಲಿಗೆ ತಿಕ್ಕಬೇಕು. ಮೇಣದ ಬತ್ತಿಯನ್ನು ಒಳ್ಳೆಣ್ಣೆಯಲ್ಲಿ ಸೇರಿಸಿ ಕುದಿಸಿ ಗಾಯಕ್ಕೆ ಹಚ್ಚಬೇಕು.

ಉಚ್ಚಿಕೊಳ್ಳುತ್ತಿದ್ದರೆ

೧ ಡಜನ್ ಬಾಳೆಹಣ್ಣಿನ ಜೊತೆಯಲ್ಲಿ ೧೦೦ ಗ್ರಾಂ ಹುರಿಗಡಲೆಯನ್ನು ಪುಡಿ ಮಾಡಿ ಕಲಸಿ ಕುಡಿಸಬೇಕು. ಕಾರೇಕಾಯನ್ನು ನುಣುಪಾಗಿ ಅರೆದು ಮಜ್ಜಿಗೆಯ ಜೊತೆಯಲ್ಲಿ ಅಥವಾ ಹಾಲಿನ ಜೊತೆಯಲ್ಲಿ ದಿನಕ್ಕೆ ನಾಲ್ಕು ಬಾರಿ ಕುಡಿಸಬೇಕು. ಜೀರಿಗೆಯನ್ನು ನಿಂಬೆಹಣ್ಣಿನ ಜೊತೆಯಲ್ಲಿ ಅರೆದು ಮಜ್ಜಿಗೆಯಲ್ಲಿ ಬೆರೆಸಿ ಕುಡಿಸುವುದರಿಂದ ರಕ್ತ ಭೇದಿಯಾಗುತ್ತಿದ್ದರೂ ನಿಲ್ಲುತ್ತದೆ. ನೇರಳೆ ಚಕ್ಕೆ,

ಜಾಲಿ ಮರದ ಚಕ್ಕೆಯನ್ನು ನುಣ್ಣಗೆ ಅರೆದು ಒಂದು ಲೀಟರ್ ಮಜ್ಜಿಗೆಗೆ ಬೆರಸಿಕೊಂಡು ಬೆಳಿಗ್ಗೆ ಮತ್ತು ರಾತ್ರಿ ಕುಡಿಸುವುದರಿಂದ ಭೇದಿ ಮತ್ತು ರಕ್ತಭೇದಿಗಳು ನಿಲ್ಲುತ್ತವೆ.

ದನದ ಕಿವಿ ಸೋರುತ್ತಿದ್ದರೆ

ಎಳ್ಳೆಣ್ಣೆಯಲ್ಲಿ ಬೆಳ್ಳುಳ್ಳಿಯ ಇಕ್ಕಲನ್ನು ಹಾಕಿ ಕುದಿಸಿ ಸ್ವಲ್ಪ ತಣ್ಣಗಾದ ಮೇಲೆ ೩-೪ ಬಿಲ್ಲೆ ಕರ್ಪೂರವನ್ನು ಉದುರಿಸಬೇಕು. ದನದ ಕಿವಿಯನ್ನು ಬಿಸಿ ನೀರಿನಿಂದ ತೊಳೆದು ಹತ್ತಿಯಿಂದ ಒರೆಸಿ ನಂತರ ಎಣ್ಣೆಯ ಮಿಶ್ರಣವನ್ನು ದಿನಕ್ಕೆ ಮೂರು ಸಲ ಕಿವಿಗೆ ಹಚ್ಚಬೇಕು. ಈ ರೀತಿ ಮಾಡುವುದರಿಂದ ಕಿವಿ ಸೋರುವುದು ನಿಲ್ಲುತ್ತದೆ.

ಮಳವು ಬಿಟ್ಟಿದ್ದರೆ (ಮೂಳೆ ಮುರಿದಿದ್ದರೆ)

ಎಕ್ಕದ ಹೂಗಳನ್ನು ಪುಡಿ ಮಾಡಿ ಅರೆದು ಗಾಯದ ಮೇಲೆ ಹಚ್ಚಬಹುದು. ಬಿದಿರು ದಬ್ಬೆಗಳನ್ನು ಹಾಕಿ ಬಟ್ಟೆಯಿಂದ ಬಿಗಿಯಾಗಿ ಕಟ್ಟಬೇಕು. ಲೋಳೆಸರದ ರಸವನ್ನು ಹಚ್ಚಿ ಕಟ್ಟುವುದರಿಂದಲು ವಾಸಿಯಾಗುತ್ತದೆ. ಹಸಿ ಸಾಸುವೆಯನ್ನು ಅರೆದು ತುಂಬುವುದು ಉಂಟು.

ದನಕ್ಕೆ ಕುಂದು ಬಂದರೆ

ಎತ್ತಾಗಲಿ ಹಸುಗಳಾಗಲಿ ಇಂತಹ ಸಂದರ್ಭದಲ್ಲಿ ಕಡಿಮೆ ಹುಲ್ಲನ್ನು ತಿನ್ನುತ್ತವೆ. ಜೊಲ್ಲು ಸುರಿಸುತ್ತಿರುತ್ತವೆ. ಮೈ ನಡುಗುತ್ತಿರುತ್ತದೆ. ಆಗ ದನಿಯಾ, ಬೆಳ್ಳುಳ್ಳಿ, ಮೆಣಸು, ಕಷಾಯ ಮಾಡಿ ಕುಡಿಸಬೇಕು. ಬೆಲ್ಲ ಮತ್ತು ಈರುಳ್ಳಿಯನ್ನು ಚೆನ್ನಾಗಿ ಜಜ್ಜಿ ವೀಳ್ಯದ ಎಲೆಯಲ್ಲಿ ತಿನ್ನಿಸುವುದರಿಂದಲೂ ವಾಸಿಯಾಗುತ್ತದೆ. ಕಬ್ಬಿನ ದಿಂಡನ್ನು ತಿನ್ನಿಸುವುದರಿಂದಲೂ ಕಡಿಮೆಯಾಗುತ್ತದೆ.

ಕೆಚ್ಚಲು ಬಾವು ಬಂದರೆ

ಲೋಳೆಸರ, ಅಮೃತಬಳ್ಳಿ, ಬೇವಿನ ಚಕ್ಕೆಯನ್ನು ನೀರಿನೊಂದಿಗೆ ಅರೆಯಬೇಕು. ದಿನಕ್ಕೆರಡು ಬಾರಿ ಇದನ್ನು ಕುಡಿಸುವುದರಿಂದ ಕೆಚ್ಚಲ ಬಾವು ವಾಸಿಯಾಗುತ್ತದೆ. ಅರಿಶಿಣ ಮತ್ತು ಹೊಂಗೆ ಎಣ್ಣೆಯನ್ನು ಸೇರಿಸಿ ಕಲಸಿ ಕೆಚ್ಚಲಿಗೆ ಹಚ್ಚುವುದರಿಂದ ಕೆಚ್ಚಲ ಬಾವು ನಿವಾರಣೆಯಾಗುತ್ತದೆ. ಮೆಣಸು, ಎಳ್ಳು, ಬೆಳ್ಳುಳ್ಳಿ, ಮಾವಿನ ಗಿಡದ ಚೆಕ್ಕೆಯನ್ನು ಸೇರಿಸಿ ಅರೆದು ಕುಡಿಸಬೇಕು. ಈ ರಸವನ್ನು ಕೆಚ್ಚಲಿಗೆ ಹಚ್ಚುವುದರಿಂದಲು ವಾಸಿಯಾಗುತ್ತದೆ. ಅರಿಶಿಣ ಪುಡಿಯನ್ನು ಬೆಣ್ಣೆಯಲ್ಲಿ ಕಲಸಿ ಕೆಚ್ಚಲಿಗೆ ಹಚ್ಚುವುದರಿಂದಲೂ ಕಡಿಮೆಯಾಗುತ್ತದೆ.

ಕಣ್ಣಲ್ಲಿ ಹೂವು ಬಿದ್ದಾಗ

ಕಣ್ಣಿನ ಕಪ್ಪು ಗುಡ್ಡೆಯ ಮೇಲೆ ಯಾವುದಾದರು ಚೂಪುಳ್ಳ ವಸ್ತುಗಳಿಂದ ಚುಚ್ಚಿದಂತಹ ಸಂದರ್ಭದಲ್ಲಿ ಕಪ್ಪು ಕಣ್ಣಾಲಿಯ ಮೇಲೆ ಬೆಳ್ಳನೆಯ ಕಲೆ ಉಂಟಾಗುತ್ತದೆ. ಇದನ್ನು ಹೂ ಬೀಳುವುದು ಅಥವಾ ಹೂ ಕೂರುವುದು ಎಂದು ಕರೆಯುತ್ತಾರೆ. ಇದು ಮನುಷ್ಯರಿಗಿಂತ

ಪ್ರಾಣಿಗಳಲ್ಲಿ ಹೆಚ್ಚು. ಬೇವಿನ ಗಿಡದ ಚಕ್ಕೆಯನ್ನು ತಂದು ಅರೆದು, ಹೂ ಬಿದ್ದ ಕಣ್ಣಿಗೆ ಮೂರು ಹನಿ ರಸ ಹಿಂಡುವುದರಿಂದ ವಾಸಿಯಾಗುತ್ತದೆ. ಅತ್ತಿ ಹಾಲನ್ನು ಒಂದೆರಡು ಹನಿ ಕಣ್ಣಿಗೆ ಹಾಕುವುದರಿಂದಲೂ ಗುಣವಾಗುತ್ತದೆ. ಸಕ್ಕರೆ ಮತ್ತು ಬೇವಿನ ಅಂಟನ್ನು ನೀರಿನಲ್ಲಿ ಚೆನ್ನಾಗಿ ನೆನೆಸಿ ರಾತ್ರಿ ಮಲಗುವಾಗ ಕಣ್ಣಿಗೆ ಹಾಕುವುದರಿಂದಲು ಕಣ್ಣಿನಲ್ಲಿರುವ ಹೂ ಮಾಯವಾಗುತ್ತದೆ. ಉತ್ರಾಣಿ ಬೇರನ್ನು ಸೋಸಿ ಗಂಧ ತೆಗೆದು ದಿನಕ್ಕೆರಡು ಬಾರಿ ಕಣ್ಣಿಗೆ ಹಾಕುವುದರಿಂದ ವಾಸಿಯಾಗುತ್ತದೆ. ಎಕ್ಕೆ ಗಿಡದ ಹಾಲನ್ನು ಹಸುವಿನ ಬೆಣ್ಣೆಯಲ್ಲಿ ಮಿಶ್ರಣ ಮಾಡಿ ಕಣ್ಣಿನ ಒಳಕ್ಕೆ ಸ್ವಲ್ಪ ಇಡಬೇಕು. ಹೀಗೆ ಮಾಡುವುದರಿಂದಲು ಗುಣವಾಗುತ್ತದೆ. ಕುಂಕುಮವನ್ನು ಬೆಣ್ಣೆಯಲ್ಲಿ ಕಲಸಿ ಕಣ್ಣಿನಲ್ಲಿ ದಿನಕ್ಕೆರಡು ಬಾರಿ ಹಾಕುವುದರಿಂದಲು ವಾಸಿಯಾಗುತ್ತದೆ.

ಕಣ್ಣಲ್ಲಿ ನೀರು ಸುರಿಯುತ್ತಿದ್ದರೆ

ಅಡಿಕೆಯ ಹೋಳುಗಳನ್ನು ನಿಂಬೆ ಹಣ್ಣಿನ ರಸದಲ್ಲಿ ಅರೆದು ಹಚ್ಚಿದರೆ ನೀರು ಸುರಿಯುವುದು ನಿಲ್ಲುತ್ತದೆ. ಲೋಳೆಸರವನ್ನು ಚೆನ್ನಾಗಿ ತೊಳೆದು ತಿರುಳನ್ನು ತೆಗೆದು ಕಣ್ಣಿನ ಒಳಕ್ಕೆ ಹಾಕಬೇಕು. ಹೀಗೆ ೨-೩ ದಿನ ಮಾಡುವುದರಿಂದ ವಾಸಿಯಾಗುತ್ತದೆ.

❖ ❖ ❖

ಅಡಿ ಟಿಪ್ಪಣಿಗಳು

೧. ದಕ್ಷಿಣ ಕರ್ನಾಟಕದ ಜನಪದ ಕಲೆಗಳು, ಡಾ. ಚಕ್ಕೆರೆ ಶಿವಶಂಕರ್, ಪುಟ. ೧೪.

೨. ಗಂಗಡಿಕಾರ ಒಕ್ಕಲಿಗರು, ಡಾ. ನಲ್ಲೂರು ಪ್ರಸಾದ್, ಪುಟ. ೧೪೧

೩. ಸಂಪ್ರದಾಯ ಶುಭದ ಸಂಕೇತ ರಂಗೋಲಿ (ಲೇಖನ) – ಪುಷ್ಪಾವತಮ್ಮ ಪುಟ. ೯೫.
(ಗ್ರಾಮಜ್ಯೋತಿ : ಸಂ.ಗೊ.ರು. ಚನ್ನಬಸಪ್ಪ)

ಅಧ್ಯಾಯ – ೮

ಐಕನಹಳ್ಳಿಯ ಉಪಭಾಷೆಯ ಪ್ರಭೇದಗಳು

೧. ಉಪಭಾಷೆ

ಭಾಷೆ ಸಂಪೂರ್ಣವಾಗಿ ಸ್ವಯಾರ್ಜಿತವಾದದ್ದು, ಅಲ್ಲದೆ ಸಮುದಾಯದ ಇಚ್ಛೆಗೆ ಅನುಗುಣವಾಗಿ ರೂಪುಗೊಳ್ಳುತ್ತದೆ. "ಸಾಮಾನ್ಯವಾಗಿ ಒಂದೇ ಭಾಷೆಯನ್ನಾಡುವ ಒಂದು ಪ್ರದೇಶದ ಅಥವಾ ಜನಾಂಗದ ಜನ ಒಂದೇ ಭಾಷಾಂತಂತುವಿಡಿದು ನುಡಿಯುತ್ತಾರೆ"[೧] ಈ ಭಾಷೆಯಲ್ಲಿ ಏಕರೂಪತೆ ಇರುತ್ತದೆ. ವ್ಯಕ್ತಿ ತಾನಿರುವ ಪ್ರದೇಶದ ಹಾಗೂ ಸಾಮಾಜಿಕ ಪರಿಸರದ ಪ್ರತಿನಿಧಿಯಾಗಿರುತ್ತಾನೆ. ಇವುಗಳಲ್ಲದೆ ವ್ಯಕ್ತಿಯ ಮಾತು, ತಾನು ಪಡೆದ ಜ್ಞಾನ, ನಡಾವಳಿ ಹಾಗೂ ಸಂಸ್ಕೃತಿಯನ್ನು ಆಧರಿಸಿಯೂ ರೂಪುಗೊಂಡಿರುತ್ತದೆ. ಇದು ವ್ಯಕ್ತಿ ಗಳಿಸಿಕೊಂಡ ಭಾಷೆಯಾಗಿರುತ್ತದೆ. ಇಂತಹ ಭಾಷೆಯನ್ನು 'ವ್ಯಕ್ತಿ ಭಾಷೆ' (Idiolect) ಎನ್ನುವರು. ಇಂತಹ ವ್ಯಕ್ತಿ ಭಾಷೆಗಳ ಮೊತ್ತವೆ ಉಪಭಾಷೆಯಾಗುತ್ತದೆ. ವ್ಯಕ್ತಿಯೊಬ್ಬನ ಮಾತಿನಲ್ಲಿ ಮಾತ್ರ ಭಿನ್ನತೆಗಳಿದ್ದರೆ ಅದು ಉಪಭಾಷೆಯಾಗುವುದಿಲ್ಲ, ಆ ಪ್ರದೇಶದ ಎಲ್ಲಾ ಜನರ ಮಾತಿನಲ್ಲಿ ಭಿನ್ನತೆಗಳಿರಬೇಕು. ಒಂದು ಊರು, ಒಂದು ಪರಿಸರ, ಒಂದು ರಾಜ್ಯ, ಒಂದು ಸಮಾಜ ಯಾವುದಾದರೂ ಆಗಬಹುದು. ವ್ಯಕ್ತಿಯೊಬ್ಬನ ಮಾತುಗಳನ್ನು ಕೇಳಿದಾಗಲೇ ಆ ವ್ಯಕ್ತಿ ಯಾವ ಪ್ರದೇಶದವನು ಎಂದು ತಿಳಿಯುತ್ತದೆ. ಉಪ ಭಾಷೆಗಳಲ್ಲಿ ಕೆಲವು ವಿಶಿಷ್ಟ ಪದಗಳು ಪ್ರಯೋಗಗೊಳ್ಳುತ್ತವೆ. ಉಚ್ಚಾರದ ವೈಶಿಷ್ಟ್ಯಗಳಲ್ಲಿ ಅಕ್ಷರಸ್ಥರ ಭಾಷೆ, ಅನಕ್ಷರಸ್ಥರ ಭಾಷೆ, ಮೇಲ್ವರ್ಗದವರ ಭಾಷೆ, ಹರಿಜನರ ಭಾಷೆ, ಜಾನಪದರ ಸಾಹಿತ್ಯದಲ್ಲಿ ಪದಸಂಪತ್ತು, ವೃತ್ತಿಗಳ ಹಿನ್ನೆಲೆಯಲ್ಲಿ ಕೆಲವು ಪರಿಭಾಷೆಗಳು; ಸಾಮಾಜಿಕ ಉಪಭಾಷೆಗಳಾದ ಹಬ್ಬಹರಿದಿನಗಳಲ್ಲಿ ಬಳಸುವ ಪರಿಭಾಷೆ. ಆಹಾರ, ಉಡುಗೆ ತೊಡುಗೆಗಳಲ್ಲಿ ಬಳಸುವ ಪರಿಭಾಷೆಗಳು. ಮಹಾಪ್ರಾಣ ಅಲ್ಪಪ್ರಾಣಗಳಲ್ಲಿ ವ್ಯತ್ಯಾಸವಿಲ್ಲದೆ ಬಳಸುವ ಪದಗಳು, ಊಷ್ಮವರ್ಣಗಳಾದ ಶ, ಷ ಕಾರಗಳ ಬದಲಾಗಿ, ಸ ಕಾರವನ್ನು ಬಳಸುತ್ತಾರೆ. ವಾಕ್ಯಗಳಲ್ಲಿ ಇಂಗ್ಲಿಷ್ ಪದಗಳನ್ನು ಪ್ರಯೋಗ ಮಾಡುವುದು. ಶ್ಲೀಲ–ಅಶ್ಲೀಲಗಳ ಭೇದ ಇಲ್ಲದೆ ವಾಕ್ಯಗಳ ಬಳಕೆ. 'ಹ'ಕಾರ ಆಕಾರಗಳ ಭೇದವೆಣಿಸದಿರುವುದು, ಇವೆಲ್ಲ. ಉಪಭಾಷೆಯ ಅಂಗಗಳಾಗಿ ಕಂಡುಬರುತ್ತವೆ.

೧.೧. ದೇಸಿ ಭಾಷೆ, ಜಾನಪದ ಸೊಗಡು

ಸೀಮಿತ ವಲಯದಲ್ಲಿ ನಿರ್ದಿಷ್ಟ ಕೋಮಿನವರು ಶಿಷ್ಟ ಭಾಷೆಗೆ ವಿಭಿನ್ನವಾಗಿ ತಮ್ಮದೇ ಆದ ಉಚ್ಚಾರ, ಶಬ್ದ ಸಂಪತ್ತು, ಅರ್ಥ ಸಂಪತ್ತು, ವಾಕ್ಯಶೈಲಿಗಳನ್ನು ಒಳಗೊಂಡಂತೆ ಮಾತನಾಡುವರು ಅದನ್ನು ಆ ಗ್ರಾಮದ ದೇಸಿ ಭಾಷೆ, ಜಾನಪದ ಸೊಗಡು ಎಂದು ಕರೆಯಬಹುದು. ಜನಪದ ಗಾದೆ, ಗೀತೆ, ಬೈಗುಳಗಳು ದಿನನಿತ್ಯದ ಭಾಷೆಯಲ್ಲಿ ದೇಸಿಯನ್ನು ಕಾಣಬಹುದು. ಭಾಷೆಯೊಂದರ ಮನದಂಡ ಎಂದರೆ ಅನಕ್ಷರಸ್ಥರು ಹಾಗೂ ಮಕ್ಕಳು ಆಡುವ ಭಾಷೆಯೇ ಆಗಿರುತ್ತದೆ. ಸಾಮಾನ್ಯ ಜನರು ತಮ್ಮ ಪ್ರತಿನಿತ್ಯದ ಮಾತುಕತೆಯ ಸಂದರ್ಭದಲ್ಲಿ ತಾವು ಹೇಳಬೇಕಾಗಿರುವ ವಿಷಯಗಳನ್ನು ಮತ್ತಷ್ಟು ಸ್ಪಷ್ಟವಾಗಿ ನಿರೂಪಿಸುವ ಉದ್ದೇಶದಿಂದ ತಾವಾಡುವ ಮಾತುಗಳ ನಡುವೆ ಗಾದೆಗಳನ್ನು ಬಳಸುತ್ತಾರೆ. 'ಹತ್ತು ಕಟ್ಟೊ ಕಡೆ, ಒಂದು ಮುತ್ತು ಕಟ್ಟು.' ಎಂಬ ಗಾದೆಯಂತೆ ಕಿರಿದರಲ್ಲಿ ಹಿರಿದಾದ ಅರ್ಥವನ್ನು ಹೇಳುವಂತಹ ಶಕ್ತಿಯು ಗಾದೆ ಮಾತುಗಳಿಗಿದೆ. ಗಾದೆಗಳು ಶಬ್ದಶಃ ಅರ್ಥವನ್ನೂ ಕೊಡದೆ ಲಕ್ಷಾರ್ಥವನ್ನೂ ಕೊಡುತ್ತವೆ. 'ಮೂರ್ಕಾಸು ಕೊಟ್ಟು ಮುದುಕಿ ಕಟ್ಕೊಳ್ಳೋದಕ್ಕಿಂತ, ಆರ್ಕಾಸು ಕೊಟ್ಟು ಹರೇದೊಳ್ನೆ ಕಟ್ಕೋಳ್ಳೋದೆ ಮೇಲಲ್ವೆ?', 'ಕಡಿಮೆ ಬೆಲೆ ಕೊಟ್ಟು ಕಳಪೆ ವಸ್ತುವನ್ನು ಕೊಳ್ಳೊದಕ್ಕಿಂತ ಹೆಚ್ಚಿನ ಬೆಲೆಯಾದರೂ ಒಳ್ಳೆಯ ವಸ್ತುವನ್ನು ಕೊಳ್ಳುವುದು ಮೇಲು' ಎಂಬುದನ್ನು ಈ ಗಾದೆ ಸೂಚಿಸುತ್ತದೆ.

ಉದಾಹರಣೆಗೆ ಅಂಗಡಿಯೊಂದರಲ್ಲಿ ಅಕ್ಕಿಯನ್ನು ಕೊಂಡುಕೊಳ್ಳಲೆಂದು ಬಂದ ಹೆಂಗಸೊಬ್ಬಳು ಎರಡು ವಿಧದ ಅಕ್ಕಿಯನ್ನು ನೋಡಿ ಬೆಲೆ ಕೇಳಿದಾಗ, ವರ್ತಕನು ಕಳಪೆ ಅಕ್ಕಿಗೆ ಕಡಿಮೆ ದರವನ್ನು ಉತ್ತಮ ಅಕ್ಕಿಗೆ ಹೆಚ್ಚಿನ ದರವನ್ನು ಹೇಳುತ್ತಾನೆ. ಆ ಹೆಂಗಸು ಎರಡು ತರದ ಅಕ್ಕಿಯನ್ನು ಕೈಯಲ್ಲಿ ಹಿಡಿದು. ಗುಣಮಟ್ಟ ಪರೀಕ್ಷಿಸಿ 'ಮುರ್ಕಾಸು ಕೊಟ್ಟು ಮುರುಕಿ ಕಟ್ಕೊಳೋದಕ್ಕಿಂತ, ಆರ್ಕಾಸು ಕೊಟ್ಟು ಹರೇದೋಳ್ನೆ ಕಟ್ಕೊಳ್ಳೋದು ಮೇಲಲ್ವೆ' ಎಂದಳು. ಇವಳ ಇಂಗಿತವನ್ನು ಮತ್ತು ಆಯ್ಕೆಯನ್ನು ಅರಿತ ವರ್ತಕನು ಉತ್ತಮ ದರ್ಜೆಯ ಅಕ್ಕಿಯನ್ನು ತೂಗಿಕೊಟ್ಟನು. ಇಲ್ಲಿ ಗಾದೆಯ ಭಾಷೆಯು ವಿಶಿಷ್ಟವಾಗಿದ್ದು, ನೇರವಾಗಿ 'ಬೆಲೆ ಹೆಚ್ಚಿರುವ ಉತ್ತಮ ಅಕ್ಕಿಯನ್ನು ಕೊಡು' ಎಂದು ಕೇಳಿಲ್ಲವಾದರೂ ಗಾದೆಯ ಲಕ್ಷ್ಯಾರ್ಥವೇ ಅದನ್ನು ಸಾಧ್ಯವಾಗಿಸಿದೆ. ಇದೇ ಅರ್ಥಕೊಡುವ ಗಾದೆ. 'ಕಾಸಿಗೆ ತಕ್ಕ ಕಜ್ಜಾಯ', 'ಆರು ದ್ವಾಸೆ ಕೊಟ್ರೆ ಅತ್ತೆ ಕಡಿಕೆ, ಮೂರು ದ್ವಾಸೆ ಕೊಟ್ರೆ ಮಾವನ ಕಡಿಕೆ' ಐಕನಹಳ್ಳಿ ಹಾಗು ಅದರ ಸುತ್ತಮುತ್ತಲು ಹಳ್ಳಿಗಳಲ್ಲೆಲ್ಲಾ ಕಂಡುಬರುವ ಪ್ರಯೋಗಗಳಿವೆ. 'ದೋಸೆ' ಎಂಬ ಪದಗಳಲ್ಲಿಯ ಓಕಾರ 'ವಾ'ಕಾರವಾಗಿ ಬದಲಾಗುತ್ತದೆ. ದೋಸೆ–ದ್ವಾಸೆ. ಇದೇ ರೀತಿ ವಕಾರಗಳು 'ಯ' ಕಾರವಾಗಿ ಇಲ್ಲಿ ಬದಲಾಗುವುದುಂಟು. ಕೆ.ಆರ್. ಪೇಟೆ–ಕ್ಯಾರ್ ಪೇಟೆ, ಕೇತನಹಳ್ಳಿ–ಕ್ಯಾತನಹಳ್ಳಿ ಎಂದು ಉಚ್ಚರಿಸುತ್ತಾರೆ.

ಜನಪದ ಗೀತೆಗಳಲ್ಲಿಯ ಭಾಷೆಯು ಸಹ ಶಿಷ್ಠ ಭಾಷೆಗಿಂತ ಭಿನ್ನವಾಗಿದೆ. ಹತ್ತು ಕಣ್ಣಿನೋಳೆ ಹದಿನಾರು ಬುಜದೋಳೆ / ಉತ್ತಾದ ಕೋವಲ್ಲಿ ಇರುವೋಳೆ ಸಾವಕ್ಕಿ ಸಣ್ಣ ಸೀರೆ ದ್ಯಾವಮ್ಮಗೆ / ಮುಂದೆರಡು ಜೀನ ಕುದರೆ ಶಿಷ್ಠ ಭಾಷೆಯಲ್ಲಿ ಬಳಸುವ 'ಭುಜ' ಪದ ಮಹಾ ಪ್ರಾಣಾಕ್ಷರದಿಂದ ಕೂಡಿದ್ದರೆ ಇಲ್ಲಿ ಅಲ್ಪಪ್ರಾಣದಿಂದಲೇ ಪ್ರಯೋಗವಾಗಿದೆ. 'ಹುತ್ತಾ' ಎಂಬ ಪದ 'ಉತ್ತಾ' ಎಂದು ಪ್ರಯೋಗವಾಗಿದೆ. ದೇವಮ್ಮ-ದ್ಯಾವಮ್ಮ ಆಗಿದೆ. 'ಏ'ಕಾರ 'ಯ' ಕಾರವಾಗಿದೆ. ಕುದುರೆ-ಕುದರೆಯಾಗಿ ಬಳಕೆಯಾಗಿದೆ. ಭಾಷೆಯಲ್ಲಿ ಪದದೊಳಗಿನ ಒಂದು ವರ್ಣಕ್ಕೆ ಮತ್ತೊಂದು ವರ್ಣವನ್ನು ಬಳಸುವುದು ಸಹಜ. ಉದಾ: ನಿಂಬೆ-ಲಿಂಬೆ, ಗಿಳಿ-ಗಿಣಿ ಅದೇ ರೀತಿಯಲ್ಲಿ ಇದನ್ನು ಸ್ವಚ್ಛಂದ ಪರಿವರ್ತನೆ (Free Variation) ಎಂದು ಕರೆಯುತ್ತಾರೆ. ಉದಾಹರಣೆಗೆ ನಿಂಬೆ-ಲಿಂಬೆ, ಗಿಳಿ-ಗಿಣಿ, ಅದೇ ರೀತಿಯಲ್ಲಿ ಮೇಲಿನ ಜನಪದ ಗೀತೆಯಲ್ಲಿ ಕುದುರೆ-ಕುದರೆಯಾಗಿ ಬಳಕೆಗೊಂಡಿರುವುದನ್ನು ಕಾಣಬಹುದು. ಮುಂದೆ+ಎರಡು - ಮುಂದೆರಡು ಎಂಬ ಲೋಪಸಂಧಿ ಪ್ರಯೋಗವನ್ನು ಕಾಣಬಹುದಾಗಿದೆ. ಉಪಭಾಷೆಯೊಂದರಲ್ಲಿ ತದ್ಭವ ರೂಪಗಳನ್ನು ಕಾಣಬಹುದು.

ಬೈಗುಳಗಳು ಕೂಡ ಭಾಷಾ ದೃಷ್ಟಿಯಿಂದ, ಅರ್ಥದ ದೃಷ್ಟಿಯಿಂದ ಮುಖ್ಯ ಎನಿಸುತ್ತವೆ. ಜೊತೆಗೆ ಗ್ರಾಮ ಜೀವನ ಅವಿಭಾಜ್ಯ ಅಂಗಗಳಾಗಿ ಈ ಬೈಗುಳಗಳನ್ನು ಕಾಣಬಹುದಾಗಿದೆ. ಸಾಮಾಜಿಕ ಜೀವನದಲ್ಲಿ ತಮಗೆ ನಾನಾ ಬಗೆಯ ತೊಂದರೆಗಳನ್ನು ನೀಡಿದ ಅಥವಾ ಕೇಡನ್ನು ಮಾಡಿದ ವ್ಯಕ್ತಿಗಳ ಮೇಲೆ ದೈಹಿಕವಾಗಿ ಹಲ್ಲೆ ಮಾಡಿ, ಪ್ರತಿಕಾರವನ್ನು ತೀರಿಸಿಕೊಳ್ಳಲಾಗದ ಅಸಹಾಯಕರು. ಶಾಬ್ದಿಕ ರೂಪದಲ್ಲಿ ಶಾಪ ಹಾಕುತ್ತಾರೆ, ಕೇಡನ್ನು ಹಾರೈಸುತ್ತಾರೆ. ಸಾಮಾಜಿಕವಾಗಿ ಕೆಳ ವರ್ಗದವರಲ್ಲಿ ಹೆಚ್ಚು. ಇವುಗಳಲ್ಲಿಯೂ ಪದ ಸಂಪತ್ತನ್ನು ಕಾಣಬಹುದಾಗಿದೆ.

'ನಿನ್ಗೆ ಆಪತ್‌ನ ರೋಗಬಂದು ಚಾಪೆಸುತ್ಕೊಂಡು ಹೊತ್ಕೊಂಡ್ಹೋಗ.

'ನಿನ್ ಕೈಗೆ ಕರಿನಾಗರ ಕಡಿಯ.'

'ನಿಂಗೆ ಮೊಲ್ಲಾಗ್ರು ಬರ'

'ನಿನ್ನ್ ಹಿಂಡೆ ಕೂಳ್ ಹಿಡಿಯಾ'

ಮೇಲಿನ ಬೈಗುಳಗಳಲ್ಲಿ 'ಆಪತ್‌ನ ರೋಗ' ಎಂದರೆ ಮಾರಾಣಾಂತಿಕ ರೋಗ ಎಂಬರ್ಥವಿದೆ. ಕರಿನಾಗರ ಎಂದರೆ - ವಿಷ ಸರ್ಪ, ಇದು ಕಡಿದರೆ ಉಳಿಯೋದೆ ಇಲ್ಲ ಎಂಬರ್ಥ 'ಮೊಲ್ಲಾಗ್ರು' ಎಂದರೆ ಮೂರ್ಛೆ ರೋಗ ಎಂಬಂರ್ಥ. 'ಹಿಂಡೆಕೂಳ್' ಎಂದರೆ ಸತ್ತಮೇಲೆ ಇಡುವ ಅನ್ನ ಅಂದರೆ ನೀನು ಸಾಯಲಿ ಎಂಬರ್ಥದ ಪದವಾಗಿ ಬಳಕೆಯಾಗುತ್ತದೆ. ಬೈಗುಳಗಳು ಲಯಬದ್ಧವಾಗಿ ಪ್ರಾಸಬದ್ಧವಾಗಿ ಇದ್ದು, ತಲೆಮಾರಿನಿಂದ ತಲೆಮಾರಿಗೆ ಬಾಯಿ ಮೂಲಕವೆ ಸಾಗಿ ಬಂದಿವೆ. ಇವುಗಳನ್ನು ದೇಶಿ ಭಾಷಾ ಸಂಪತ್ತು ಎನ್ನಬಹುದಾಗಿದೆ.

೧.೨. ದಿನನಿತ್ಯದ ಭಾಷೆ

ಐಕನಹಳ್ಳಿ ಪರಿಸರದ ದಿನನಿತ್ಯದ ಭಾಷೆಯು ಗ್ರಾಂಥಿಕ ಭಾಷೆಗಿಂತ, ಪ್ರಯಾಣ ಭಾಷೆಗಿಂತ (Standard Language) ಭಿನ್ನವಾಗಿದೆ. ಮಹಾಪ್ರಾಣಾಕ್ಷರಗಳ ಬಳಕೆಯಾಗಲಿ ಶ, ಷಕಾರಗಳ ಪ್ರಯೋಗಗಳಾಗಲಿ ಈ ಪ್ರದೇಶದ ದಿನನಿತ್ಯದ ಭಾಷೆಯಲ್ಲಿ ಕಂಡುಬರುವುದಿಲ್ಲ. 'ಸ ನಮ್ ಸಾಲೇಲಿ ಸಾರದ ಪೂಜೆ ಬನ್ನಿ ಸಾ', ಶ್ರೀನಿವಾಸ–ಸೀನ್ವಾಸ, ಸೀನ, ರಮೇಶ–ರಾಮೇಸ, ಷಷ್ಠಿ–ಸಸ್ಟಿ, ಪರಮೇಶ–ಪರಮೇಸ, ಷರಬತ್ತು–ಸರಬತ್ತು, ಷರತ್ತು–ಸರತ್ತು, ಶಂಕರ–ಸಂಕ್ರ, 'ಉಸ ಸಾಲೊದ್ಕೊಂಡು ಸಾಲೇಲ್ನಿಂತದೆ ಸೀಮೆಣ್ಣೆ ತರಕೆ, ಶಿಷ್ಟ ರೂಪ–ಉಷಾ ಶಾಲೊದ್ಕೊಂಡು ಸಾಲೇಲ್ನಿಂತವಳೆ ಸೀಮೆಎಣ್ಣೆ ತರೋಕೆ.' ಈ ಪರಿಸರದ ಜನರಿಗೆ ಹ ಕಾರ ಮತ್ತು ಆಕಾರಗಳಲ್ಲಿನ ಭೇದವರಿಯದೆ ಕೆಲವು ಪದಗಳ ಪ್ರಯೋಗ ಮಾಡುತ್ತಾರೆ. ಹಸ–ಅಸ, ಹಾಲು–ಆಲು, ಹುಲ್ಲು–ಉಲ್ಲು, ಅರಿಶಿಣ–ಹರಿಶಿಣ ಇತ್ಯಾದಿ ಹೀಗೇ ಬಳಸಲಾಗುತ್ತದೆ. ದಿನನಿತ್ಯದ ಕನ್ನಡ ಭಾಷೆಯ ಮೇಲೆ ಪ್ರಸ್ತುತ ಇಂಗ್ಲಿಷ್ ಭಾಷೆಯ ಪ್ರಭಾವದಿಂದಾಗಿ ಎಂತಹ ಕುಗ್ರಾಮವನ್ನು ಸಹ ಈ ಇಂಗ್ಲಿಷ್ ಪ್ರಭಾವ ಬಿಟ್ಟಿಲ್ಲ. ಪ್ರಸಾರ ಮಾಧ್ಯಮಗಳಿಂದ ಈ ಪ್ರಭಾವ ಇನ್ನೂ ಹೆಚ್ಚಾಗಿದೆ.

೧.೩. ಕನ್ನಡ ಇಂಗ್ಲಿಷ್ ಮಿಶ್ರ ವಾಕ್ಯಗಳು

- 'ಇದ್ಯಾಕಲ ಮಗ ನೋಟ್‌ಬುಕ್‌ನ ಟಿವಿ ಸ್ಟ್ಯಾಂಡ್ ಮೇಲೆ ಬಿಸಾಕಿದಿಯ'
- 'ನಮ್ಮ ಟಿವಿನಲ್ಲಿ ಉದಯ ಚಾನೆಲ್ ಬರತಾನೆ ಇಲ್ಲ'
- 'ಈ ಸ್ಯಾರಿ ಕಲ್ಲರ್ ಎಷ್ಟೊಂದು ಚಂದಾಗಿದೆ'
- 'ಇವತ್ತು ಕರೆಂಟ್ ಇಲ್ಲದೆ ಮಿಕ್ಸಿಲಿ ಖಾರ ಆಡಿಸಿಕಳಕಾಗಿಲ್ಲ ಒಳ್ಳಕಲ್ಲೆ ಗತಿ'
- 'ಅಂಗಡಿ ಬಾಗಲು ಬೇರೆ ತಗದಿಲ್ಲ ಸುಗರ್ ಖಾಲಿ ಆಗಿದೆ'
- 'ಈ ತಿಂಗಳು ಮೀಟರ್ ಓಡಿಲ್ಲ ಆದರೂ ಇಷ್ಟೊಂದು ಕರೆಂಟ್ ಬಿಲ್ ಬಂದು ಬಿಟ್ಟೈತೆ'
- 'ಬಸ್ ಬರಾ ಟೈಮ್ ಆಯಿತು ಶೂ ಬೇಡ ಸ್ಲಿಪ್ಪರ್‌ನೆ ಹಾಕೊಂಡು ಬಾ'
- 'ಗೇಟ್ ಮುಂದೆ ಯಾರು ಬೈಕ್ ನಿಲ್ಲಿಸಿರೋರು ಪಕ್ಕಕ್ಕೆ ನಿಲ್ಲಿಸಿ'
- 'ಯಾರ್ಲ ಚಳೀಲೂ ಫ್ಯಾನ್ ಹಾಕಿರೋರು ಆಫ್ ಮಾಡಿ ಮೊದ್ಲು'
- 'ಕೇಬಲ್‌ನನು ಹಣ ಕೇಳಕ್ಕೆ ಬಂದಿದ್ದ ನೆಕ್ಸ್ಟ್ ವೀಕ್ ಬಾ ಅಂತ ಹೇಳಿದ್ದೀನಿ.'

ಈ ಪರಿಸರದಲ್ಲಿ ಕೆಲವು ವಿಶಿಷ್ಟ ಪದಗಳು ವಿಶಿಷ್ಟ ಅರ್ಥದಲ್ಲಿ ಬಳಕೆಯಾಗುತ್ತವೆ. ಇವು ಐಕನಹಳ್ಳಿಗಷ್ಟೆ ಅಲ್ಲ ಮಂಡ್ಯ ಪರಿಸರದ ಪದಗಳು ಎಂದೇ ಕರೆಯಬಹುದಾಗಿದೆ.

ಸುಮ್ಕಿರು	–	ನಾನು ಇನ್ನು ಗಟ್ಟಿಯಾಗಿವ್ನಿ ಸುಮ್ಕಿರು ಮಗ ನಿನ್ನ ಬುಟ್ಟಬುಡಾಕಿಲ್ಲ.
ವಸಿ	–	ಆಗಲ್ಲ ಅಂತ ಸುಮ್ಕಿದ್ರೆ ಅದಾತ ವಸಿ ಹೊಟ್ಟೆಗೆ ತಿನ್ನು ಸರಿಯಾತದೆ.
ಹೋಗುಮ	–	ಬಿಸಲತ್ತಿದ ಮ್ಯಾಲೆ ನೆಡೆಯಾಕಾಗಲ್ಲ ತಂಪೊತ್ನಾಗೆ ಹೋಗುಮ ಬಾ.
ಹೋಗ್ವ	–	ಎಷ್ಟೊತ್ತು ಸುಮ್ಕೆ ಕಾಯೋದು ಅವನು ಬರಾಕಿಲ್ಲ ಹೋಗ್ವ ಬಾ.

ಸಟಿಗೆ	–	ಒಂದು ಸಟಿಗೆ ಸುಮ್ಕಿರು ಅದ್ರೆ ಸುಮ್ಮಕಿರಬೇಕು ಕ್ವಾಪ ಬಂದ್ರೆ ನಾನು ತಡಯಾಕಿಲ್ಲ.
ಯಾಕ್ಲ	–	ಯಾಕ್ಲ ಧಿಮಾಕಿನಲ್ಲಿ ಮಾತಾಡತಿದ್ದಿ. ದೊಡ್ಡೋರ ಕಂಡ್ರೆ ಭಯ ಭಕ್ತಿ ಒಂಚೂರು ಇಲ್ವ ನಿನಗೆ.
ದ್ವಾಸೆ	–	ನಮ್ಮ ಮನೆಯೋಳು ಇವತ್ತು ದ್ವಾಸೆ ಮಾಡಿದ್ಲು ತಿಂದುಕಂಡು ಬಂದೆ.
ಮರ್ವಾದೆ	–	ನಂಗೆ ನೀನು ಮರ್ವಾದೆ ಕೊಟ್ರೆ ನಿಂಗೆ ನಾನು ಮರ್ವಾದೆ ಕೊಟ್ಟೀನಿ ಅಷ್ಟೆಯ.
ಮಂತೆ	–	ನಾನು ಎಷ್ಟು ಅಂತ ಸಹಿಸಿಕಳ್ಳಿ ಮಂತೆ ನಂಗೂ ಬೇಸರ ಆಗಕಿಲ್ವ
ವುಟ್ಟಿಲ್ಲ	–	ಅವ್ನಿಗೆ ನಾನು ಇವತ್ತ ಸರಿಯಾಗಿ ಬುದ್ದಿ ಕಲಿಸ್ಲಿಲ್ಲ ಅಂದ್ರೆ ನಮ್ಮಪ್ಪಂಗೇ ವುಟ್ಟಿಲ್ಲ ಅಂದುಕಂಡುಬಿಡು.
ಇಚಾರ ಮಾಡು	–	ನಿಂಗಪ್ಪ ಹೊಲ ಕೊಟ್ಟಾನ ಅಂತ ವಸಿ ಇಚಾರ ಮಾಡು ಅಣ್ಣಯ್ಯ.
ಕಾಲೆತ್ತಿ ಕಡಿ	–	ಹೊತ್ತಾರಿಂದ ಮನೇಲಿ ಕೂತಿದ್ದೀನಿ ಯತ್ತಾಗೂ ಕಾಲೆತ್ತಿ ಕಡ್ಡಿಲ್ಲ.
ಮೂದೇವಿ	–	ಇದ್ಯಾಕ್ಲ ಮೂದೇವಿ ಹೋಟ್ಲತಾವ್ ಕೂತಿದ್ದಿ ಯಾನು ಕ್ಯಾಮಿಲ್ವ?

ಈ ಪರಿಸರದಲ್ಲಿ ಕೆಲವು ವಿಶಿಷ್ಟ ಪದಗಳು ಅರ್ಥರಹಿತವಾಗಿ ಪಡ್ಡೆ ಹೈಕಳ ಬಾಯಲ್ಲಿ ಪ್ರಯೋಗಗೊಳ್ಳುತ್ತವೆ. ಏ 'ಕೋತ್' ನನ್‌ಮಗ್ನೆ. ಇಲ್ಲಿ ಬಳಕೆಯಾಗುವ 'ಕೋತ್' ಕೋತಿ ಅಂತ ಅಲ್ಲವಾದರೂ ಅದರ ಅರ್ಥ ಇದೇ ಎಂದು ಹೇಳಲಾಗುವುದಿಲ್ಲ, ಕ್ವಾಟ್ಲೆ, ಗೆಡ್ಡೆ, ಕುಮ್ಮಿ, ಕುಮ್ಕಿ ಮೊದಲಾದ ಪದಗಳನ್ನು ಇದೇ ರೀತಿಯಾಗಿ ನೋಡಬಹುದಾಗಿದೆ.

ಐಕನಹಳ್ಳಿ ಪರಿಸರದ ಆಡು ಭಾಷೆಯಲ್ಲಿ ಯಾವುದೇ ಶ್ಲೀಲ ಮತ್ತು ಅಶ್ಲೀಲ ಎಲ್ಲ ಬೇದ ಎಣಿಸುವುದೇ ಇಲ್ಲ. ತಾವು ಆಡುತ್ತಿರುವ ಮಾತಿನ ಅರ್ಥ ಏನು? ಆ ರೀತಿ ಮಾತನಾಡಬೇಕೋ? ಬೇಡವೋ? ಎಂಬ ಯೋಚನೆ ಆಡುವವರಿಗಿದ್ದಂತಿಲ್ಲ. ಸಮ ವಯಸ್ಸಿನ ಸ್ನೇಹಿತರು ಅಥವಾ ಸ್ನೇಹಿತರ ಗುಂಪು ಕಲೆತಾಗ, ಅವರು ಶಾಲೆ, ಕಾಲೇಜು, ಬ್ಯಾಂಕ್, ಪಂಚಾಯಿತಿ, ವ್ಯಾನ್, ಬಸ್ ಎಲ್ಲಾದರೂ ಇರಲಿ ಅಶ್ಲೀಲದ ಮಾತುಗಳನ್ನೂ ನಿರ್ಭಿತಿಯಿಂದಲೇ ಆಡುತ್ತಾರೆ. 'ನನ್ ಮಗನೆ' ನೀನೂ ಅಲ್ಲೆ ಇರ್ಲಿಲ್ವ? ನಾನೇನಂದೆ' ನಿಮ್ಮಜ್ಜಿನಾ ಬಡಿಯ, ನಾನೇನು ನಿನ್ ಜೊತೆಗೆ ಇದ್ದನಾ?; 'ಹೋಗೊ ಬಡ್ಡೆತ್ತದೆ' ಮೊದಲಾದವುಗಳ ಅರ್ಥವನ್ನು ಗ್ರಹಿಸಲು ಹೋಗದೆ ಮಾತನಾಡುತ್ತಲೆ ಇರುತ್ತಾರೆ. ಇದರಿಂದಾಗಿ ಬಯ್ಯುವರು, ಬಯ್ಯಿಸಿಕೊಳ್ಳುವವರು ಈ ಮಾತುಗಳಿಂದ ಯಾವುದೇ ಮುಜುಗರಕ್ಕೆ ಒಳಗಾಗುವುದಿಲ್ಲ.

೧.೪. ವೃತ್ತಿ ಭಾಷಾ ಪದಗಳು

ಪ್ರತಿಯೊಬ್ಬ ಮಾನವನು ಒಂದೊಂದು ವೃತ್ತಿಯನ್ನು ಅನುಸರಿಸುತ್ತಾನೆ. ವೃತ್ತಿಯ ಮೂಲಕ ಜೀವನ ಸಾಗಿಸುವುದಷ್ಟೇ ಅಲ್ಲದೆ ಸಮಾಜ ಸುಗಮವಾಗಿ ನಡೆಯಲು ಅನುವಾಗುತ್ತದೆ. ಗ್ರಾಮ

ಜೀವನದಲ್ಲಿ ವೃತ್ತಿಗಳು ಬಹುಮುಖ್ಯ. ಆಚಾರಿ, ಅಗಸ, ಹಜಾಮ, ಒಕ್ಕಲಿಗ, ಶೆಟ್ಟಿ, ಮಡಿವಾಳ, ಇವೆಲ್ಲವೂ ವೃತ್ತಿ ಹಿನ್ನೆಲೆಯಲ್ಲಿ ರೂಪುಗೊಂಡ ಜಾತಿಗಳಾಗಿವೆ. ಪ್ರತಿಯೊಂದು ಜಾತಿಯ ಕಸುಬುಗಳಲ್ಲಿ ವೃತ್ತಿ ಭಾಷಾ ಪದಗಳು/ಪರಿಭಾಷೆಗಳು (Technical Terms) ಇದ್ದೆ ಇರುತ್ತವೆ. ಅವು ರೂಪುಗೊಂಡ ಬಗೆಗಿನ ವಿವರಗಳನ್ನು ನೋಡಬಹುದಾಗಿದೆ.

ತಿದಿ

ಆಚಾರಿಗಳು ಬಳಸುವ ವಸ್ತುಗಳಲ್ಲಿ 'ತಿದಿ' ಮುಖ್ಯವಾದುದು. ಮೊದಲು ಇದನ್ನು ಮೇಕೆ, ಕುರಿಗಳ ಚರ್ಮಗಳಿಂದ ತಯಾರಿಸುತ್ತಿದ್ದರು. ಈಗ ಕಬ್ಬಿಣದಿಂದ ತಯಾರಿಸಿಕೊಳ್ಳುತ್ತಾರೆ. ತಿದಿಯ ಮುಂಭಾಗದಲ್ಲಿ ಸಣ್ಣ ರಂಧ್ರವಿರುತ್ತದೆ. ತಿದಿಯನ್ನು ಗಳದ ಸಹಾಯದಿಂದ ಮೇಲೆ ಕೆಳಕ್ಕೆ ಆಡಿಸುತ್ತಾರೆ. ಆಗ ಈ ರಂಧ್ರದ ಮೂಲಕ ಕುಲುಮೆ (ಒಲೆ)ಗೆ ಬೆಂಕಿ ಬರುತ್ತದೆ. ಕಬ್ಬಿಣ ಕಾಯುವವರೆಗೂ ತಿದಿ ಒತ್ತುತ್ತಾರೆ.

ಕುಲುಮೆ (ಒಲೆ)

ತಿದಿಗೆ ಜೋಡಿಸಿರುವ ಕೊಳವೆಯ ಮುಂಭಾಗದ ನೆಲದಲ್ಲಿ ಸಣ್ಣ ಗುಂಡಿಯೊಂದನ್ನು ಮಾಡಿರುತ್ತಾರೆ. ಅದರ ಹೊರಭಾಗದಲ್ಲಿ ಇಟ್ಟಿಗೆಯಿಂದ ಚಿಕ್ಕ ಗೋಡೆಯೊಂದನ್ನು ಕಟ್ಟಿರುತ್ತಾರೆ. ಕುಲುಮೆಯಲ್ಲಿ ಇದ್ದಿಲನ್ನು ಹಾಕುತ್ತಾರೆ. ತಾವು ಸಿದ್ಧಪಡಿಸುತ್ತಿರುವ ವಸ್ತುವಿಗೆ ಅಗತ್ಯವಾದಷ್ಟು ಬೆಂಕಿ ಬಳಸಿಕೊಳ್ಳಲು ಇದು ಸಹಕಾರಿಯಾಗಿದೆ.

ಕಂಬಚ್ಚು

ಇದು ಹಲವು ಸೈಜುಗಳ ರಂಧ್ರಗಳನ್ನೊಳಗೊಂಡ ಕಬ್ಬಿಣದ ಪಟ್ಟಿ. ಚಿನ್ನ ಅಥವಾ ಬೆಳ್ಳಿಯ ತಂತಿಯನ್ನು ಗಾತ್ರಕ್ಕೆ ತಕ್ಕಂತೆ ಉದ್ದ ಮಾಡಿಕೊಳ್ಳಲು, ಹಿಗ್ಗಿಸಿಕೊಳ್ಳಲು ಬಳಸುವ ಸಾಧನ. ಕಂಬಿಯನ್ನು ಹೆಚ್ಚುವಂತೆ ಮಾಡುವ ಸಾಧನವೇ ಕಂಬಚ್ಚು ಎಂದು ಹೆಸರು ಪಡೆದುಕೊಂಡಿದೆ.

ಊದುವ ಕೊಳಪೆ

ಬೆಂಕಿ ಹಚ್ಚಿಸಲು ಗಾಳಿ ಊದುವ ಸಾಧನವಿದು. ಕಬ್ಬಿಣದಿಂದ ಇದನ್ನು ಮಾಡಿರುತ್ತಾರೆ. ತಿದಿ ಇಲ್ಲದಿರುವವರು ಹೆಚ್ಚಾಗಿ ಊದುವ ಕೊಳಪೆಯನ್ನು ಉಪಯೋಗಿಸುತ್ತಾರೆ.

ಇಕ್ಕಳ

ಕಬ್ಬಿಣದಿಂದ ಮಾಡಿರುವ ಇದು ಬಿಸಿಯಾದ ವಸ್ತುವನ್ನು, ಆಭರಣವನ್ನು ಹಿಡಿದುಕೊಳ್ಳಲು ಬಳಸುವ ಸಾಧನವಾಗಿದೆ. ಇದರಲ್ಲಿ ಚಿಕ್ಕದರಿಂದ ಹಿಡಿದು ದೊಡ್ಡದರವರೆಗೂ ಹಲವು ಸೈಜುಗಳಲ್ಲಿ ಹಾಗೂ ಆಕಾರಗಳಲ್ಲಿ ಇವು ತಯಾರಿಸಲ್ಪಟ್ಟಿರುತ್ತವೆ.

ಅಡಿಗಲ್ಲು (ರೇಜ)

ಚಿನ್ನವನ್ನು ಬೇಕಾದ ಆಕಾರಕ್ಕೆ ತರಲು ಕಾಯಿಸಿ ಬಡಿಯಬೇಕಾಗುತ್ತದೆ. ಬಡಿಯಬೇಕಾದರೆ ಅದನ್ನ ಇಟ್ಟುಕೊಳ್ಳಲು ಗಟ್ಟಿ ಲೋಹದ ತಳಬೇಕು. ಅದನ್ನೆ ಅಡಿಗಲ್ಲು ಎಂದು ಕರೆಯುತ್ತಾರೆ.

ಅರ

ಆಭರಣಗಳನ್ನು ಉಜ್ಜಿ ನಯಗೊಳಿಸಲು ಅರ ಬೇಕಾಗುತ್ತದೆ. ಚಿನ್ನದ ಆಭರಣ ತಯಾರಿಸುವ ಆಚಾರಿಗಳು ಬೇರೆ ಬೇರೆ ಆಭರಣಗಳನ್ನು ಉಜ್ಜಿ ರೂಪ ಕೊಡಲು ಬೇರೆ ಬೇರೆ ಆಕಾರದ ಅರಗಳನ್ನು ಬಳಸುತ್ತಾರೆ.

ಬೈರಿಗೆ

ತೂತು ಕೊರೆಯಲು ಬೈರಿಗೆಯನ್ನು ಬಳಸುತ್ತಾರೆ. ಇದು ಮರದ ಕೆಲಸ ಮಾಡುವವರಿಗೆ ಬೇಕೇ ಬೇಕು. ಮರದಿಂದ ಪೀಠೋಪಕರಣಗಳನ್ನು ತಯಾರಿಸುವಾಗ ಬೈರಿಗೆ ಹೆಚ್ಚು ಉಪಯೋಗಕ್ಕೆ ಬರುತ್ತದೆ.

ಒರೆಗಲ್ಲು

ಚಿನ್ನದ ಶುದ್ಧತೆಯನ್ನು ಪರೀಕ್ಷಿಸಲು ಒರೆಗಲ್ಲನ್ನು ಬಳಸುತ್ತಾರೆ. ಒರೆಗಲ್ಲು ಚೌಕಾಕಾರದ ಸಣ್ಣ ಗಾತ್ರದ ಕಲ್ಲು. ಚಿನ್ನವನ್ನು ಇದಕ್ಕೆ ಉಜ್ಜಿದಾಗ ಚಿನ್ನದ ಬಣ್ಣ ಇದರಲ್ಲಿ ಗೊತ್ತಾಗುತ್ತದೆ. ಬಣ್ಣವನ್ನು ನೋಡಿ ಚಿನ್ನದ ಶುದ್ಧತೆಯನ್ನು ಪತ್ತೆಹಚ್ಚುತ್ತಾರೆ.

ಸುತ್ತಿಗೆ

ಚಿನ್ನವನ್ನು ಕಾಯಿಸಿ ಬಡಿದು ಹದಗೊಳಿಸಲು ಬೇಕಾದ ಆಕಾರಕ್ಕೆ ರೂಪಿಸಲು ಸುತ್ತಿಗೆ ಬೇಕು. ಚಪ್ಪಟೆ ಬಾಯಿಯ ಸುತ್ತಿಗೆ, ಎದುರು ಬಾಯಿಯ ಸುತ್ತಿಗೆ, ಗಟ್ಟಿ ಬಡಿಯುವ ಸುತ್ತಿಗೆ ಹೀಗೆ ಬೇರೆ ಬೇರೆ ಆಕಾರದ ಸುತ್ತಿಗೆಗಳಿವೆ.

ನೇಗಿಲು

ಭೂಮಿಯನ್ನು ಉಳಲು ನೇಗಿಲನ್ನು ಬಳಸುತ್ತಾರೆ. ರೈತನ ಬದುಕಿನಲ್ಲಿ ನೇಗಿಲಿಗೆ ಮಹತ್ವದ ಸ್ಥಾನವಿದೆ. ಭೂಮಿಯನ್ನು ಉಳುಮೆ ಮಾಡುವಾಗ ಈ ಸಾಧನ ಬೇಕೇ ಬೇಕು. ಮೊದಲು ಮರದ ನೇಗಿಲನ್ನು ಹೆಚ್ಚಾಗಿ ಬಳಸುತ್ತಿದ್ದರು. ಮರದ ನೇಗಿಲಲ್ಲಿ ಉಳುಮೆ ಮಾಡುವುದು ಕಷ್ಟವಾಗುವುದನ್ನು ಅರಿತ ಇತ್ತೀಚಿನ ರೈತರು ಕಬ್ಬಿಣದ ನೇಗಿಲಿನ ಮೊರೆ ಹೋಗಿದ್ದಾರೆ.

ಕುಂಟೆ

ಬೆಳೆಗಳನ್ನು ಹರಗಲು ಬಳಸುವ ಸಾಧನವೇ ಕುಂಟೆ. ಉಳುಮೆಯಾದ ಮೇಲೆ ಮಣ್ಣಿನ ಹೆಂಟೆಗಳನ್ನು ಒಡೆಯಲು ಹಾಗು ರಾಗಿ ಮೆಣಸು ಬೆಳೆದಾಗ ಅದರ ಮಧ್ಯಭಾಗದಲ್ಲಿರುವ ಕಳೆಯನ್ನು ಕೀಳಲು ಕುಂಟೆಯನ್ನು ಬಳಸುತ್ತಾರೆ. ಬೆಳೆಯನ್ನು ಹರಗಲು ಸಣ್ಣಕುಂಟೆಯನ್ನು ಬಳಸಿದರೆ, ಮಣ್ಣಿನ ಹೆಂಟೆ ಒಡೆಯಲು ದೊಡ್ಡ ಕುಂಟೆಯನ್ನು ಬಳಸುತ್ತಾರೆ.

ಗೆಣೆ ಮರ (ಹಲಬೆ)

ಬೆಳೆ ಬಿತ್ತುವಾಗ ಸಾಲುಗಳನ್ನು ಹೊಡೆಯಲು ಬಳಸುವ ಸಾಧನ. ಏಳೆಂಟು ಅಡಿ ಉದ್ದ, ಒಂದು ಅಡಿ ಅಗಲವಾಗಿ ಗೆಣೆ ಮರವನ್ನು ತಯಾರಿಸಿಕೊಂಡಿರುತ್ತಾರೆ. ಗೆಣೆ ಮರದ ತಳಭಾಗದಲ್ಲಿ ಒಂದು ಅಡಿ ಉದ್ದದ ಐದು ಹಲ್ಲುಗಳಿರುತ್ತವೆ (ಮರದ ಬೆಣೆ) ರಾಗಿ, ಅವರೆ, ಕಾಳನ್ನು ಬಿತ್ತುವಾಗ ಹೊಲದಲ್ಲಿ ಗೆರೆಗಳನ್ನು ಗೆಣೆ ಮರದ ಸಹಾಯದಿಂದ ಸಿದ್ಧಮಾಡಿಕೊಳ್ಳುತ್ತಾರೆ.

ರೋಣಗಲ್ಲು

ಕಣದಲ್ಲಿ ಹರಡಿರುವ ರಾಗಿ ತೆನೆಯಿಂದ ಕಾಳನ್ನು ಬೇರ್ಪಡಿಸಲು ಬಳಸುವ ಸಾಧನವೇ ರೋಣಗಲ್ಲು. ಎತ್ತುಗಳನ್ನು ನೊಗಕ್ಕೆ ಕಟ್ಟಿ ರಾಗಿ ಹುಲ್ಲಿನ ಮೇಲೆ ಕಣದ ಸುತ್ತಲೂ ರೋಣಗಲ್ಲನ್ನು ಹೊಡೆಯುತ್ತಾರೆ. ಹೀಗೆ ಮಾಡಿದಾಗ ರಾಗಿ ಕಾಳುಗಳು ಬೇರ್ಪಡುತ್ತವೆ.

ಮೇಟಿ ಮರ

ಭತ್ತದ ಹುಲ್ಲನ್ನು ತುಳಿಸುವಾಗ ಕಣದ ಮಧ್ಯ ಭಾಗದಲ್ಲಿ ನೆಡುವ ಮರದ ಸಾಧನವನ್ನೆ ಮೇಟಿ ಮರ ಎನ್ನುತ್ತಾರೆ. ಮೊದಲು ಕಂಬಕ್ಕೆ ಹಗ್ಗವನ್ನು ಕಟ್ಟಿ ನಂತರ ಎತ್ತು, ಹಸುಗಳ ಕೊರಳಿಗೆ ಹಗ್ಗವನ್ನು ಕಟ್ಟುತ್ತಾರೆ. ಒಬ್ಬ ವ್ಯಕ್ತಿ ಕೋಲಿನಿಂದ ಎತ್ತುಗಳನ್ನು ಹೊಡೆಯುತ್ತ ಹುಲ್ಲನ್ನು ತುಳಿಸುತ್ತಾನೆ. ಇದರಿಂದಾಗಿ ಹುಲ್ಲಿನಲ್ಲಿ ಉಳಿದುಕೊಂಡಿರುವ ಭತ್ತ ಉದುರುತ್ತದೆ. ಹೀಗೆ ಮೇಟಿ ಮರ ರೈತನಿಗೆ ಉಪಯುಕ್ತವಾಗಿದೆ.

೧.೫. ಐಕನಹಳ್ಳಿಯ ಸಂಭಾಷಣೆಗಳಲ್ಲಿನ ನಿದರ್ಶನಗಳು

(ಪಡ್ಡೆ ಹೈಕಳ ಗುಂಪು ದೇವಸ್ಥಾನದ ಜಗಲಿಯಲ್ಲಿ ಕುಳಿತು ಮಾತನಾಡುವಾಗ)

ಒಬ್ಬ : 'ಎದ್ರೆ, ಜಾಡ್ಸಿ ಎದೆಗೊದಿತೀನಿ ಮಗನೆ'

ಮತ್ತೊಬ್ಬ : (ಸಮಾಧಾನ ಮಾಡುವ ರೀತಿಲಿ) 'ಬ್ಯಾಡ ಬುಡ್ಲಾ ಎಲ್ಲಾದ್ರು ಆಸವಲ್ಲದ ಜಾಗಕ್ಕೆ ಏಟುಬಿದ್ದು ಶಿವನ್ ಪಾದಸೇರ್ಕೊಂಡೋನು'?

(ಬಹಳ ಪರಿಚಿತರು ಬಹುಕಾಲದ ನಂತರ ಭೇಟಿಯಾದಾಗ?

ಒಬ್ಬ : ಓ ಹೋ ಹೋ ಕರಿಗೌಡ, ಏಟ್ ದಿನ ಆಯತ್ಲಾ ನಿನ್ ನೋಡಿ ಚೆನ್ನಾಗಿದಿಲಾ?

ಕರಿಗೌಡ : ನಾನೇನೋ ಚನ್ನಾಗಿವ್ನಿ ಕನ್ಲ, ನೀ ಎಂಗಿದ್ದಿ? ಇದ್ಯಾಕ್ಲ ಕಣ್ಣು ಪಾತಾಳ ಸೇರ್ಕಂಡವಲ್ಲ? ಬಾಡು-ಗೀಡು ತಿಂತಿಲ್ಲವ್ಲಾ?

ಒಬ್ಬ : ತಿನ್ದೆ ಏನು? ಗೇಮನೆ ಜಾಸ್ತಿ ಕಲ್ಲಾ. ಮಂತ ಮನೆಯವ್ರೆಲ್ಲಾ ಯಂಗವರೆ?

❖ ❖ ❖

ಅಡಿ ಟಿಪ್ಪಣಿ

೧. ಕನ್ನಡ ಭಾಷಾ ಪ್ರವೇಶ : ಡಾ. ಸಾಶಿ ಮರುಳಯ್ಯ, ಪುಟ. ೫೭.

ಅಧ್ಯಾಯ – ೯

ಒಟ್ಟು ನೋಟ

ಸಕ್ಕರೆಯ ಸೀಮೆಯಾದ ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕಿನ ಐಕನಹಳ್ಳಿ ಇಂದಿನ ಹೊತ್ತಿನಲ್ಲಿ ಬಹುದೊಡ್ಡ ಗ್ರಾಮವಾಗಿದ್ದು, ಪ್ರಸ್ತುತದ ನಗರೀಕರಣ ಹಾಗೂ ವೈಜ್ಞಾನಿಕ ಸಂಶೋಧನೆಗಳು ಗ್ರಾಮದ ಮೇಲೆ ಪ್ರಭಾವ ಬೀರಿದ್ದರೂ. ಐಕನಹಳ್ಳಿಯ ಜನರ ಜೀವನ ಕ್ರಮ, ಭೌಗೋಳಿಕ ಪರಿಸರ, ಆರ್ಥಿಕತೆ, ಆಡಳಿತ, ಸಾಮಾಜಿಕ ನಂಬಿಕೆಗಳು, ಆಚರಣೆ, ಗ್ರಾಮದೇವತೆ ಕುರಿತ ಸಾಂಸ್ಕೃತಿಕ ಅಧ್ಯಯನ ಹೆಚ್ಚೆಚ್ಚು ನಡೆದಷ್ಟು ಮುಂದಿನ ಪೀಳಿಗೆಗೆ ಕೊಡುಗೆಯಾಗಿ ಉಳಿಯಬಲ್ಲದು. ಆಧುನಿಕತೆಯ ಪ್ರಭಾವದಿಂದಾಗಿ ಮೂಲ ಸಂಸ್ಕೃತಿ ಮರೆಯಾಗುವ ಹೊತ್ತಿನಲ್ಲಿ ಇಲ್ಲಿನ ಜಾನಪದ ಸಾಹಿತ್ಯ, ಜನಪದ ವೈದ್ಯ, ಕಲೆ, ಉಡುಗೆ ತೊಡುಗೆ, ಜನಪದ ಆಟ, ಜೀವನ ಕ್ರಮ ಮೊದಲಾದವುಗಳ ಪರಿಚಯ ಅಗತ್ಯವಾದುದು. ಹಳ್ಳಿಗಳು ಇಂತಹ ಸಂಸ್ಕೃತಿಯನ್ನು ಉಳಿಸಿಕೊಂಡು ಬೆಳೆಯುತ್ತಿವೆ.

ಒಂದು ಗ್ರಾಮದ ಹೆಸರಿನ ಮೂಲದಲ್ಲಿ ಒಂದು ಸಂಸ್ಕೃತಿ ಅಡಗಿರಲು ಸಾಧ್ಯವಿದೆ. ಅದು ವಿಶ್ವಕೋಶದ ಕೆಲಸವನ್ನು ಮಾಡುತ್ತದೆ. ಐಕನಹಳ್ಳಿ ಗ್ರಾಮ ನಾಮದ ನಿಷ್ಪತ್ತಿ ಮೂಲವನ್ನು ಹುಡುಕುವುದರ ಜೊತೆಗೆ, ಈ ಊರಿಗೆ ಸಂಬಂಧಿಸಿದ ಕೆಲವು ಸ್ಥಳನಾಮಗಳನ್ನು ವಿವರವಾಗಿ ಕೊಡಲಾಗಿದೆ. ಆ ಮೂಲಕ ಜನರ ಸಂಸ್ಕೃತಿ, ಭಾಷೆ, ಜೀವನ ವಿಧಾನಗಳು ತಿಳಿಯಲು ಪ್ರಯತ್ನಿಸಲಾಗಿದೆ. ಮೇಲ್ನೋಟಕ್ಕೆ ಇದು ವ್ಯಕ್ತಿವಾಚಕ ಗ್ರಾಮವೆಂದು ತಿಳಿಯುತ್ತದೆ. ಕ್ಷೇತ್ರಕಾರ್ಯದ ಮೂಲಕ ಅಧ್ಯಯನ ಮಾಡಲಾಗಿದೆ. ಈ ನಾಗರಿಕ ಜೀವನದ ಸೌಲಭ್ಯಗಳನ್ನು ತಿಳಿಸಲಾಗಿದೆ. ಅಲ್ಲಿಯ ನೆಲ–ಜಲ, ಸಸ್ಯ ಸಂಪನ್ಮೂಲ, ಪಶು–ಪಕ್ಷಿ, ಬೆಳೆ, ಮೊದಲಾದ ವಿವರಗಳನ್ನು ಅಧ್ಯಯನ ಮೂಲಕ ವಿವರವಾಗಿ ವಿವೇಚಿಸಲಾಗಿದೆ. ಕೃಷಿ ಪರಿಭಾಷೆಯಲ್ಲಿ ಅಲ್ಲಿನ ಪರಿಕರಗಳನ್ನು ಪರಿಚಯಮಾಡಲಾಗಿದೆ.

ಒಂದು ಗ್ರಾಮ ಎನಿಸಿಕೊಳ್ಳಬೇಕಾದರೆ ಬೇಲಿಯನ್ನೊ ಕೋಟೆಯನ್ನೊ ಆ ಗ್ರಾಮ ಹೊಂದಿರಬೇಕು, ಗ್ರಾಮದ ಹೆಬ್ಬಾಗಿಲಿರಬೇಕು, ಅಲ್ಲದೆ ಆ ಗ್ರಾಮದಲ್ಲಿ ಒಕ್ಕಲಿಗರು ಮತ್ತು ಹರಿಜನರು ವಾಸವಾಗಿರಲೇ ಬೇಕು ಇಲ್ಲವಾದಲ್ಲಿ ಅದು ಗ್ರಾಮ ಎನಿಸಿಕೊಳ್ಳುವುದಿಲ್ಲ. ಈ ಗ್ರಾಮದಲ್ಲಿ ಬಹುಸಂಖ್ಯೆಗಳಲ್ಲಿ ಒಕ್ಕಲಿಗರಿದ್ದು, ನಂತರ ಸ್ಥಾನಗಳಲ್ಲಿ ಹರಿಜನರು, ಶೆಟ್ಟರು,

ಆಚಾರರು, ಅಗಸರು, ಕ್ಷೌರಿಕರು ಮೊದಲಾದವರಿದ್ದಾರೆ. ಇವರ ವೃತ್ತಿ ಮತ್ತು ಜೀವನ ಕ್ರಮಗಳನ್ನು ಚರ್ಚಿಸಲಾಗಿದೆ. ಕುಟುಂಬದ ಜೀವನೋಪಾಯಕ್ಕಾಗಿ ಜನರ ಮುಖ್ಯ ಆದಾಯದ ಮೂಲ ಕೃಷಿ ಹಾಗು ಪಶೋಸಂಗೋಪನೆಯಾಗಿರುತ್ತದೆ. ವ್ಯಾಪಾರ ಇತ್ಯಾದಿಗಳ ಮೂಲಕ ಆರ್ಥಿಕ ಮೂಲವನ್ನು ಹುಡುಕಿಕೊಂಡಿದ್ದಾರೆ. ಇವುಗಳ ಬಗ್ಗೆ ವಿವರವಾಗಿ ತಿಳಿಸಲಾಗಿದೆ. ಇಂತಹ ಗ್ರಾಮಗಳ ಅಧ್ಯಯನದಿಂದ ಸಂಸ್ಕೃತಿಗೆ ಮತ್ತು ಸಾಹಿತ್ಯಕ್ಕೆ ಏನಾದರೂ ಪ್ರಯೋಜನವಿದೆಯೆ? ಒಂದು ಹಳ್ಳಿ, ಗ್ರಾಮ, ಊರು, ಇವುಗಳ ಅಧ್ಯಯನ ಯಾವ ಕಾರಣಕ್ಕಾಗಿ ಮುಖ್ಯವಾಗುತ್ತವೆ? ಎಂಬ ಪ್ರಶ್ನೆಗಳು ಕಾಡುವುದು ಸಹಜ. ಹಳ್ಳಿ, ಊರು, ಗ್ರಾಮಗಳು ನೆನ್ನೆ ಮೊನ್ನೆಯ ಪರಿಕಲ್ಪನೆಗಳಲ್ಲ. ಗ್ರಾಮದ ಜನ-ಜೀವನದ ಮೇಲೆ, ಸಂಸ್ಕೃತಿಯ ಮೇಲೆ, ಸಂಸ್ಕೃತಿ ಕೂಡ ಬದಲಾವಣೆಗೆ ಒಳಗಾಗಿದೆ ಮತ್ತು ಇಂದೂ ಕೂಡ ಬದಲಾಗುತ್ತಲೇ ಮುಂದುವರೆಯುತ್ತಿದೆ. ಇಂತಹವುಗಳನ್ನು ಈ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

ಹಳ್ಳಿ, ಗ್ರಾಮ, ಊರುಗಳು ಎಂದಾಗ ವಿವಿಧ ಜಾತಿಯ, ಧರ್ಮದ, ವರ್ಗಗಳ ಜನರು ವಾಸಿಸುತ್ತಿದ್ದು ಎಲ್ಲರ ಸಂಪ್ರದಾಯಗಳು ಭಿನ್ನವಾಗಿದ್ದರೂ ಸಹಬಾಳ್ವೆ ನಡೆಸುತ್ತಾರೆ. ಇದು ಪ್ರಸ್ತುತ ಸಮಾಜಕ್ಕೆ ಬೇಕಾಗಿರುವ ಮುಖ್ಯ ಸಂದೇಶಗಳಲ್ಲಿ ಒಂದಾಗಿದೆ. ಇದರ ಬಗೆಗೆ ಈ ಅಧ್ಯಯನದಲ್ಲಿ ಬೆಳಕು ಚೆಲ್ಲಲಾಗಿದೆ. ಗ್ರಾಮದಲ್ಲಿರುವ ಪ್ರತಿಯೊಂದು ವರ್ಗ ಪದ್ಧತಿಯ ಹಿನ್ನೆಲೆಯಲ್ಲಿ ಭಿನ್ನಭಿನ್ನ ಸಾಮಾಜಿಕ ಆಚರಣೆಗಳನ್ನು ಕಾಣಬಹುದು. ಒಕ್ಕಲಿಗರು, ಹರಿಜನರು,ಶೆಟ್ಟರು, ಅಗಸರು, ಆಚಾರರು ಮೊದಲಾದ ವರ್ಗದಲ್ಲಿನ ಹುಟ್ಟಿನಿಂದ ಸಾವಿನವರೆಗೆ ನಡೆಯುವ ಎಲ್ಲಾ ವಿಧಿ-ವಿಧಾನಗಳ ಬಗ್ಗೆ ವಿಶ್ಲೇಷಿಸಲಾಗಿದೆ.

ಗ್ರಾಮಗಳಲ್ಲಿ ಗಂಡು ದೇವರುಗಳಿಗಿಂತಲೂ ಹೆಣ್ಣು ದೇವರುಗಳದ್ದೆ ಸಿಂಹಪಾಲು. ಹಿಂದೆ ರಕ್ಷಣೆಯ ದೃಷ್ಟಿಯಿಂದಲೂ, ಕುಟುಂಬದ ಜವಾಬ್ದಾರಿಯನ್ನು ನಿಬಾಯಿಸುವ ಕಾರಣಕ್ಕಾಗಿಯು ಹೆಣ್ಣು ತನ್ನ ಊರಿನಲ್ಲಿಯೇ ತನ್ನ ಮನೆಯಲ್ಲಿ ಉಳಿಯುತ್ತಿದ್ದಳು. ಗಂಡು ಹೊರಗೆ ದುಡಿದು ತಂದರೆ ಹೆಣ್ಣು ಕುಟುಂಬ ನಿರ್ವಹಣೆಯನ್ನು ಹೊರುತ್ತಿದ್ದಳು. ಅಲ್ಲದೆ ದ್ರಾವಿಡರಲ್ಲಿ ಮಾತೃಪ್ರಧಾನ ಕುಟುಂಬ ವ್ಯವಸ್ಥೆ ಇದ್ದ ಕಾಲದಲ್ಲಿ ಗ್ರಾಮ ಮತ್ತು ಗ್ರಾಮದೇವತೆಯ ಹುಟ್ಟು ಮತ್ತು ಬೆಳವಣಿಗೆಯಿಂದಾಗಿ ದೇವರುಗಳಿಗಿಂತ ದೇವತೆಗಳನ್ನು ಬಹುಪಾಲು ನೋಡಬಹುದು. ಎಲ್ಲಾ ಜಾತಿಯ ಜನರಿಂದ ಕೂಡಿದ ಗ್ರಾಮ ಸಹಜ ಬದುಕನ್ನು ನಡೆಸಲು ಗ್ರಾಮದೇವತೆಯಂತಹ ದೈವ ಪ್ರೇರಣೆ ಅಗತ್ಯವಾಗುತ್ತದೆ. ಮಾನವ ಪ್ರಕೃತಿಯನ್ನು ದೇವರೆಂದು ಪೂಜಿಸಿಕೊಂಡು ಬದುಕುತ್ತಿದ್ದದ್ದು ಹಿಂದಿನಿಂದಲೂ ಬೆಳೆದು ಬಂದಿದೆ.

ತನ್ನ ಮತ್ತು ಗ್ರಾಮದ ರಕ್ಷಣೆ ಮಾಡುವ ಸಲುವಾಗಿ ಮಾನವನು ತನ್ನ ಕಲ್ಪನೆಗೆ ಪ್ರತೀಕವಾದ ಮೂರ್ತಿಯೊಂದನ್ನು ಗುಡಿಯಲ್ಲಿಟ್ಟು ಪೂಜಿಸಿದನು. ಇದೇ ಗ್ರಾಮ ದೇವತೆಯಾಯಿತು. ಮಾತೃ ಪ್ರಧಾನ ಕುಟುಂಬ ಹೊಂದಿರುವ ಹಳ್ಳಿಗಳು ಯಾವ ರೀತಿ ಸ್ತ್ರೀ ದೇವತೆಗಳನ್ನು

ಗ್ರಾಮದೇವತೆಯನ್ನಾಗಿ ಹೊಂದಿವೆ ಎಂಬುದನ್ನು ವಿವರವಾಗಿ ವಿಶ್ಲೇಷಿಸಲಾಗಿದೆ. ಐಕನಹಳ್ಳಿಯಮ್ಮ ಅನುಗ್ರಹ ದೇವತೆಯಾಗಿದ್ದಾಳೆ. ಇವಳಿಗೆ ಹೊರುವ ಹರಕೆ, ಮಾಡುವ ಆರಾಧನೆ, ನಡೆಸುವ ಜಾತ್ರೆಯ ವಿವರ, ದೇವತೆಗೆ ಜನರು ನಡೆದುಕೊಳ್ಳುವ ರೀತಿ, ಹಬ್ಬ, ಅಲಂಕಾರ ಮುಂತಾದವುಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಇತರ ದೇವತೆಗಳಾದ ಲಕ್ಕಮ್ಮ, ಚಿಕ್ಕಮ್ಮ, ಸತ್ಯಮ್ಮ, ಕನ್ನಂಬಾಡಮ್ಮ, ಮಾರಮ್ಮ, ಭೈರವೇಶ್ವರ, ಬಸವೇಶ್ವರ, ಹೆತ್ತಪ್ಪ ಮುತ್ತಪ್ಪ ಮೊದಲಾದವುಗಳಿಗೆ ಗ್ರಾಮಸ್ಥರು ನಡೆದುಕೊಳ್ಳುವ ರೀತಿಯನ್ನು ಗುರುತಿಸಲಾಗಿದೆ. ದೈವದ ಬಗೆಗೆ ಗ್ರಾಮದ ಜನರಿಗಿರುವ ನಂಬಿಕೆ ಎಷ್ಟು ಗಟ್ಟಿಯಾದುದು ಎಂಬ ಅಂಶವನ್ನು ವಿಶ್ಲೇಷಿಸಲಾಗಿದೆ.

ಐಕನಹಳ್ಳಿಯ ದೇವ-ದೇವತೆಗಳ ಹಬ್ಬಗಳಲ್ಲದೆ, ಸಾಮಾನ್ಯವಾಗಿ ಎಲ್ಲಾ ಕಡೆ ಆಚರಿಸುವ ಹಬ್ಬಗಳನ್ನು ಆಚರಿಸುತ್ತಾರೆ. ಅವುಗಳಲ್ಲಿ ಯುಗಾದಿ, ಗೌರಿ ಹಬ್ಬ, ಪಿತೃಪಕ್ಷ, ದೀಪಾವಳಿ, ಆಯುಧ ಪೂಜೆ, ನಾಗರಪಂಚಮಿ, ಸಂಕ್ರಾಂತಿ, ಶಿವರಾತ್ರಿ, ಕಾರ್ತಿಕ ಸೋಮವಾರ, ಹೆಡಿಗೆ ಪರ, ಕಾರ ಹಬ್ಬ, ಉಪವಾಸದ ಹಬ್ಬ, ಮಾರಮ್ಮನ ಹಬ್ಬ, ತಿಪ್ಪಮ್ಮನ ಹಬ್ಬ, ಕಾರೆಮೆಳೆ ಸಿಂಗಮ್ಮನ ಹಬ್ಬ, ಬಂಡಿಹಬ್ಬ, ಮೊದಲಾದ ಹಬ್ಬಗಳನ್ನು ಮಾಡುತ್ತಾರೆ. ಯುಗಾದಿ ಹೊಸ ವರ್ಷವಾಗಿದ್ದು, ಬೇವು-ಬೆಲ್ಲ, ಹೋಳಿಗೆ ಈ ಹಬ್ಬದ ವೈಶಿಷ್ಟ್ಯ. ಯುಗಾದಿಯ ದಿನ ಚಂದ್ರನನ್ನು ನೋಡುವುದರ ಮೂಲಕ ಆ ವರ್ಷದ ಮುಂಗಾರು-ಹಿಂಗಾರು, ಗಾಳಿ-ಮಳೆ ಯಾವ ರೀತಿ ಇರುತ್ತದೆ ಎಂದು ಕಾಲಜ್ಞಾನ ತಿಳಿಯುತ್ತಾರೆ. ದೀಪಾವಳಿ ಈ ಗ್ರಾಮದ ವಿಶೇಷ ಹಬ್ಬವಾಗಿದೆ. ಇದು ಮೂರು ದಿನಗಳ ಕಾಲ ನಡೆಯುತ್ತದೆ. ಐಕನಹಳ್ಳಿಯಮ್ಮನ ಮಕ್ಕಳಾದ ದೊಡ್ಡಯ್ಯ ಚಿಕ್ಕಯ್ಯರು ಪಕ್ಕದ ಊರಾದ ತುಳಸಿ ಗ್ರಾಮದಲ್ಲಿದ್ದು ಅವರನ್ನು ಭಕ್ತರು ಐಕನಹಳ್ಳಿಗೆ ಕರೆದುಕೊಂಡು ಬರುತ್ತಾರೆ ಮತ್ತು ಹಬ್ಬದ ಆಚರಣೆಯಲ್ಲಿ ಭಾಗವಹಿಸುತ್ತಾರೆ. ಇವೆಲ್ಲವನ್ನು ವಿವರವಾಗಿ ವಿಶ್ಲೇಷಿಸಲಾಗಿದೆ.

ಇಂದು ಗ್ರಾಮೀಣಾಭಿವೃದ್ಧಿ, ನಗರಾಭಿವೃದ್ಧಿಯಂತಹ ಯೋಜನೆಗಳಿಗೆ ಮೂಲ ಗ್ರಾಮದ ರಚನೆಯ ಅರಿವು ಬಹುಮುಖ್ಯ. ಹಳ್ಳಿಗಳ ಅಧ್ಯಯನ ಅಂತಹ ಅರಿವನ್ನು ತಂದುಕೊಡುತ್ತದೆ. 'ಆಧುನೀಕರಣ ಹಳ್ಳಿಗಳನ್ನು ಪ್ರವೇಶಿಸಿದರೂ ಹಳ್ಳಿಯಲ್ಲಿ ಗುಪ್ತವಾಗಿ ಗಟ್ಟಿಗೊಂಡಿರುವ ಪ್ರಾಚೀನ ಪರಂಪರೆ ಹುದುಗಿದೆ. ಪಟ್ಟಣದಷ್ಟು ಬೇಗ ಹಳ್ಳಿ ತನ್ನ ಪ್ರಾಚೀನ ಪರಂಪರೆಯನ್ನು ಬಿಟ್ಟುಕೊಡಲಾರದು ಎಂಬ ಮಾತನ್ನು ಮನಗಾಣುವಲ್ಲಿ ಹಳ್ಳಿಗಳ ಅಧ್ಯಯನ ಮುಖ್ಯವಾಗಿದೆ. ವ್ಯಕ್ತಿ ಮತ್ತು ಸಮಾಜ ಗ್ರಾಮದೇವತೆಯನ್ನು ಅಪ್ರಜ್ಞಾಪೂರಕವಾಗಿ ಒಪ್ಪಿಕೊಂಡು ಅನುಸರಿಸುತ್ತಿದ್ದಾರೆ. ಒಂದು ಗ್ರಾಮದೇವತೆಗೆ ಸಂಬಂಧಿಸಿದ ಗೀತೆ, ಐತಿಹ್ಯ, ಗಾದೆ ಮುಂತಾದವುಗಳನ್ನು ಅಧ್ಯಯನ ಮಾಡುತ್ತಾ ಹೋದಂತೆ ಆ ಪರಿಸರದ ಜನರ ಜೀವನ ಕ್ರಮ, ಭಾಷೆ, ಸಾಮಾಜಿಕ ಜವಾಬ್ದಾರಿಗಳಂತಹ ಹಲವು ವಿಚಾರಗಳು ಬೆಳಕಿಗೆ ಬರುತ್ತವೆ. ಜನಪದರು ಪ್ರತಿ ದೇವತೆಯನ್ನು ಕುರಿತಂತೆ ಹಾಡು ಕಟ್ಟುತ್ತಾರೆ. ಐಕನಹಳ್ಳಿಯಮ್ಮನು ಕೂಡ ಇದರಿಂದ ಹೊರತಾಗಿಲ್ಲ. ಈ ದೇವತೆ ಕುರಿತಂತೆ ಇರುವ ಹಾಡು ಅವುಗಳು ಹುಟ್ಟಿಕೊಂಡ ಸಂದರ್ಭಗಳನ್ನು ಕೂಡ ವಿವರಿಸಲಾಗಿದೆ.

ಜನಪದರು ಜನಪದ ಪ್ರದರ್ಶನ ಕಲೆಗಳಾದ ನಾಟಕ, ಕೋಲಾಟ, ಸೋಮನ ಕುಣಿತ, ರಂಗದ ಕುಣಿತ ಮೊದಲಾದವುಗಳನ್ನು ಕರಗತ ಮಾಡಿಕೊಂಡಿರುತ್ತಾರೆ. ಐಕನಹಳ್ಳಿ ಗ್ರಾಮಸ್ಥರು ಕೂಡ ಇಂತಹ ಕಲೆಗಳನ್ನು ಉಳಿಸಿಕೊಂಡು ಬೆಳೆಸಿಕೊಂಡು ಬರುತ್ತಿದ್ದಾರೆ ಇವುಗಳನ್ನು ಕುರಿತು ಚರ್ಚಿಸಲಾಗಿದೆ. ಜನಪದ ವೈದ್ಯದಂತಹ ಅಂಶಗಳು ಆಧುನಿಕತೆಯ ಪ್ರಭಾವದಿಂದಾಗಿ ನಮ್ಮಿಂದ ಮರೆಯಾಗುತ್ತಿವೆ. ಇವುಗಳನ್ನು ಮುಂದಿನ ಪೀಳಿಗೆಗೆ ತಿಳಿಸುವಲ್ಲಿ ಹಾಗು ಕೊಂಡೊಯ್ಯುವಲ್ಲಿ ಈ ಅಧ್ಯಯನ ಮಹತ್ವ ಪಡೆದಿದೆ. ಜನಪದ ವೈದ್ಯಕ್ಕೆ ಸಂಬಂಧಪಟ್ಟ ಮಾಹಿತಿಗಳನ್ನು ಮನುಷ್ಯ ಹಾಗೂ ಗೋವೈದ್ಯ ಚಿಕಿತ್ಸೆಗಳ ಹಿನ್ನೆಲೆಯಲ್ಲಿ ವಿವರಿಸಲಾಗಿದೆ. ಜನಪದ ಅಡುಗೆಗಳ ಬಗ್ಗೆ ತಿಳಿಸಲಾಗಿದೆ. ಬಳಕೆಯಲ್ಲಿರುವ ಗಾದೆಗಳನ್ನು ಪರಿಚಯಿಸಲಾಗಿದೆ. ಹಾಗೆಯೇ ಮರಕೋತಿಯಾಟ, ಕಬ್ಬಡಿ, ಗುರಿಯಿಟ್ಟು ಹೊಡೆಯುವ ಚೆಂಡು, ಚಿನ್ನಿದಾಂಡು ಮೊದಲಾದ ಜನಪದ ಆಟಗಳನ್ನು ರೂಡಿಸಿಕೊಂಡಿದ್ದಾರೆ. ಕ್ಷೇತ್ರಕಾರ್ಯ ಮಾಡುವ ಮೂಲಕ ಮಾಹಿತಿ ಸಂಗ್ರಹಿಸಿ ತಿಳಿಸಲಾಗಿದೆ.

ಐಕನಹಳ್ಳಿಯು ಒಂದು ಬಯಲು ಪರಿಸರದ ಗ್ರಾಮವಾಗಿದ್ದು ಉಪಭಾಷಿಕವಾಗಿಯೂ ಗುರುತಿಸುವ ಒಂದು ಗ್ರಾಮವಾಗಿದೆ. ಇಲ್ಲಿ ಭಾಷೆ ಜಾನಪದ ಸೊಗಡು ತುಂಬಿದ ಗ್ರಾಮೀಣ 'ದೇಸಿ' ಭಾಷೆಯೂ ಅಹುದು. ಎಲ್ಲಾ ಮಹಾಪ್ರಾಣಗಳ ಉಚ್ಚಾರದ ಸ್ಥಾನದಲ್ಲಿ ಅಲ್ಪಪ್ರಾಣಗಳೆ ಬಳಕೆಯಾಗುತ್ತವೆ. 'ಶ' 'ಷ' ಕಾರಗಳಿಗೆ 'ಸ' ಕಾರ ಪ್ರಯೋಗಗೊಳ್ಳುತ್ತದೆ. ದಿನನಿತ್ಯದ ಭಾಷೆಯ ವಾಕ್ಯಗಳಲ್ಲಿ ಇಂಗ್ಲಿಷ್ ಪದ ಪ್ರಯೋಗ ಹೆಚ್ಚು. ಪದ ವಾಕ್ಯ ಪ್ರಯೋಗಗಳಲ್ಲಿ ಶ್ಲೀಲ ಮತ್ತು ಅಶ್ಲೀಲಗಳ ಭೇದ ಎಣಿಸುವುದಿಲ್ಲ. ಪರಂಪರೆಯಲ್ಲಿಲ್ಲದ ಕೆಲವು ಹೊಸ ಸಂಬಂಧ ವಾಚಕಗಳ ವಿಶಿಷ್ಟ ಪದ ಪ್ರಯೋಗಗಳು ಕಂಡುಬರುತ್ತವೆ. ಅವುಗಳನ್ನು ನಿದರ್ಶನದೊಂದಿಗೆ ತಿಳಿಸಲಾಗಿದೆ.

೧. ಕ್ಷೇತ್ರಕಾರ್ಯದ ಅನುಭವಗಳು

ಐಕನಹಳ್ಳಿ ನಮ್ಮ ಅಜ್ಜಿಯ ಊರು. ನನ್ನ ಅಜ್ಜಿ ಹಾಗು ತಾಯಿ ಇಬ್ಬರೂ ಇದೇ ಊರಿನಿಂದ ನಮ್ಮೂರಿಗೆ ಸೊಸೆಯರಾಗಿ ಬಂದವರು. ಹೀಗಾಗಿ ಬಾಲ್ಯದ ನನ್ನ ಒಡನಾಟ ಐಕನಹಳ್ಳಿಯ ತುಂಬ ವಿಸ್ತರಿಸಿಕೊಂಡಿತ್ತು. ಈ ಗ್ರಾಮದಲ್ಲಿ ವಿಶಿಷ್ಟವಾಗಿ ನಡೆಯುವ ದೀಪಾವಳಿ ಹಬ್ಬವೆಂದರೆ ನನಗೆ ಏನೋ ಒಂದು ಸೆಳೆತ. ಜೊತೆಗೆ ಯುಗಾದಿ ಹಬ್ಬದ ದಿನ ನಡೆಯುವ ರಂಗದ ಹಬ್ಬ ಹಾಗು ಕನ್ನಂಬಾಡಮ್ಮನ ಹಬ್ಬಕ್ಕೆ ತಪ್ಪದೆ ಹೋಗುತ್ತಿದ್ದೆ. ಇಲ್ಲಿನ ಆಚರಣೆಗಳು ನನ್ನ ಮೇಲೆ ಅಗಾಧವಾದ ಪ್ರಭಾವ ಬೀರಿದ್ದೊ. ಈ ಕಾರಣಕ್ಕಾಗಿಯೇ ನನ್ನ ಅಧ್ಯಯನಕ್ಕೆ ಐಕನಹಳ್ಳಿ ಗ್ರಾಮವನ್ನು ಆರಿಸಿಕೊಂಡೆ. ಮಾಹಿತಿ ಸಂಗ್ರಹಿಸುವ ಹಿನ್ನೆಲೆಯಲ್ಲಿ ಕ್ಷೇತ್ರ ಕಾರ್ಯಕ್ಕೆ ಹೋದಾಗ ನನಗಾದ ಅನುಭವಗಳು ಅಪಾರ. ನನಗೆ ಗೊತ್ತಿಲ್ಲದೆ ಅನೇಕ ಸ್ವಾರಸ್ಯಕರ ಸಂಗತಿಗಳು ನನಗೆ ತಿಳಿದುಬಂದವು. ಇದರಿಂದಾಗಿ ಜ್ಞಾನವು ವಿಸ್ತಾರವಾಯಿತು.

ನಾನು ಕ್ಷೇತ್ರಕಾರ್ಯಕ್ಕೆ ಹೋದಾಗೆಲ್ಲ ಗ್ರಾಮಸ್ಥರು ಕೊಟ್ಟ ಸಹಕಾರ ದೊಡ್ಡದು. ಕ್ಷೇತ್ರಕಾರ್ಯದಲ್ಲಿ ಬಹಳಷ್ಟು ನಿರೀಕ್ಷೆಗಳನ್ನಿಟ್ಟುಕೊಂಡು ಕೆಲವು ವಕ್ತೃಗಳನ್ನು ಭೇಟಿಯಾದಾಗ ಭ್ರಮನಿರಸನ ಗೊಂಡದ್ದು ಇದೆ. ಆದರೆ ನಿರಾಶಾವಾದಿಯಾಗದೆ ಪ್ರಾಮಾಣಿಕವಾಗಿ ಕ್ಷೇತ್ರಕಾರ್ಯ ಮುಂದುವರಿಸಿದೆ. ತುಳಸಿ ಗ್ರಾಮ ಹಾಗು ಐಕನಹಳ್ಳಿಯ ಗ್ರಾಮದವರು ಒಟ್ಟಾಗಿ ಐಕನಹಳ್ಳಿಯಮ್ಮ ಆಕೆಯ ಮಕ್ಕಳಾದ ದೊಡ್ಡಯ್ಯ, ಚಿಕ್ಕಯ್ಯನಿಗೆ ಸಂಬಂಧಿಸಿದ ಆಚರಣೆಗಳನ್ನು ಮುಂದುವರಿಸಿಕೊಂಡು ಬರುತ್ತಿರುವ ಅಂಶ ಗಮನ ಸೆಳೆಯಿತು. ರಾಜಮ್ಮ ಮತ್ತು ಸಂಗಡಿಗರು ಗ್ರಾಮ ದೇವತೆಯ ಬಗ್ಗೆ ಹಾಡನ್ನು ಹಾಡುವ ವಿಚಾರ ಗೊತ್ತಿದ್ದರಿಂದ ಅವರನ್ನು ಭೇಟಿಯಾಗಿ ನನ್ನ ಉದ್ದೇಶ ಹೇಳಿಕೊಂಡೆ. ಪ್ರಾರಂಭದಲ್ಲಿ ನಾನು ಕ್ಯಾಸೆಟ್ ಮಾಡಿ ಮಾರಾಟ ಮಾಡಿಕೊಳ್ಳುತ್ತೇನೊ ಎಂಬ ಅನುಮಾನದಿಂದಲೇ ನನ್ನನ್ನು ನೋಡಿದರು. ದಿನ ಕಳೆದಂತೆ ಪರಿಸ್ಥಿತಿಯನ್ನು ಅರಿತುಕೊಂಡು ತಮ್ಮ ಜನಪದ ಗೀತೆಗಳನ್ನು ಹಾಡಿ ಸಹಕಾರ ನೀಡಿದರು. ಬಹಳಷ್ಟು ವಕ್ತೃಗಳು ತುಂಬ ಉತ್ಸಾಹದಿಂದ ಮಾಹಿತಿ ನೀಡಿ ಮಹದುಪಕಾರ ಮಾಡಿದರು. ಕೆಲವರಂತು ಮನೆ ಮಗನಂತೆ ನನ್ನನ್ನು ಕಂಡು ಅತಿಥಿ ಸತ್ಕಾರ ನೀಡಿದರು.

ಹಳ್ಳಿಯ ಜನ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರಿಂದ ಸಾಮಾನ್ಯವಾಗಿ ಸಂಜೆಯ ವೇಳೆಯೆ ಅವರನ್ನು ಭೇಟಿ ಮಾಡಬೇಕಾಗಿತ್ತು. ಬಹಳಷ್ಟು ವಕ್ತೃಗಳು ನನ್ನ ಮೇಲೆ ಪ್ರೀತಿ ವಿಶ್ವಾಸ ತೋರಿಸಿ ನನ್ನ ಅನೇಕ ಸಂದೇಹಗಳಿಗೆ ವಿವರಣೆ ನೀಡಿದ್ದಾರೆ. ಜೊತೆಗೆ ಯಾವ ವ್ಯಕ್ತಿಯಿಂದ ನನಗೆ ಬೇಕಾದ ಅಮೂಲ್ಯ ಮಾಹಿತಿ ಸಿಗುತ್ತದೋ ಎಂಬ ಆಸೆಯಿಂದ ಸಾಕಷ್ಟು ವಕ್ತೃಗಳನ್ನು ಭೇಟಿಯಾಗಲು ಸಾಧ್ಯವಾಯಿತು. ಕೆಲವರು ಪದೇ ಪದೇ ಅಲೆಸಿ, ಕೊನೆಗೂ ಮಾಹಿತಿಕೊಟ್ಟರು. ಹಲವರು ನಮ್ಮ ಸಂಸ್ಕೃತಿಯ ವಿಚಾರಗಳು ಮುಂದಿನ ಪೀಳಿಗೆಗೆ ಉಳಿಯಲಿ ಎಂಬ ಸದಾಶಯ ವ್ಯಕ್ತಪಡಿಸಿದರು. ಈ ರೀತಿ ಕ್ಷೇತ್ರ ಕಾರ್ಯದಲ್ಲಿ ಮಿಶ್ರ ಪ್ರತಿಕ್ರಿಯೆಯ ಅನುಭವವಾಯಿತು. ಗ್ರಾಮದಲ್ಲಿ ನೆಲೆಸಿರುವ ಬಹುತೇಕ ಎಲ್ಲಾ ಜನಾಂಗದ ಧಾರ್ಮಿಕ ಆಚರಣೆಗಳ ಬಗ್ಗೆ ತಿಳಿಯುವ ಅವಕಾಶ ಸಿಕ್ಕಿತ್ತು. ಗ್ರಾಮದ ದೇವಾಲಯಗಳು, ಹಬ್ಬ ಹರಿದಿನಗಳ ಕುರಿತಾಗಿ ವಿವರವಾಗಿ ಅರಿತುಕೊಳ್ಳಲು ಸಾಧ್ಯವಾಯಿತು. ಜನಪದ ಆಟಗಳನ್ನು ಕುರಿತಾದ ಅನುಮಾನ ಬಗೆಹರಿಸಿಕೊಳ್ಳಲು ಮಕ್ಕಳನ್ನು ಆಟವಾಡಿಸಿ ಮಾಹಿತಿ ಪಡೆದುಕೊಂಡಿದ್ದೇನೆ. ಗ್ರಾಮದ ಬದುಕಿನ ವಿವಿಧ ಮಜಲುಗಳನ್ನು ಅನಾವರಣಗೊಳಿಸಲು ಈ ಅಧ್ಯಯನ ನನಗೆ ಅನುಕೂಲವಾಯಿತು. ಇಲ್ಲಿನ ಆಚಾರ-ವಿಚಾರ, ಸಂಪ್ರದಾಯ, ಆರ್ಥಿಕ ಸ್ಥಿತಿಗತಿ, ಸಾಮಾಜಿಕ ಚಿತ್ರಣ ತಿಳಿಯಲು ಸಹಕಾರಿಯಾಗಿದೆ. ಹಬ್ಬ-ಹರಿದಿನಗಳ ಬಗೆಗಿನ ವಿಚಾರಗಳು ಸಾಕಷ್ಟು ತಿಳಿದವು. ಕ್ಷೇತ್ರಕಾರ್ಯ ನನ್ನ ಬದುಕಿನಲ್ಲಿ ಅಗಾಧವಾದ ಅನುಭವವನ್ನೆ ತಂದೊಡ್ಡಿದೆ. ಮತ್ತಷ್ಟು ತಿಳಿದುಕೊಳ್ಳಬೇಕೆಂಬ ತುಡಿತ ಹೆಚ್ಚುವಂತೆ ಮಾಡಿದೆ.

೨. ಕಂಡುಕೊಂಡ ಫಲಿತಗಳು

೧. ಒಂದು ಗ್ರಾಮದ ಅಧ್ಯಯನ ಮಾಡುವುದರಿಂದ ಮೂಲ ಸಂಸ್ಕೃತಿಯೊಂದರ ಸ್ವರೂಪ ತಿಳಿದು ಬರುತ್ತದೆ.

೨. ಅಳಿದು ಹೋಗುತ್ತಿರುವ ಕೆಲವು ಸಂಸ್ಕೃತಿಗಳು ಜನಮಾನಸದಲ್ಲಿ ಉಳಿಯುವ ಜೊತೆಗೆ ಮುಂದಿನ ಪೀಳಿಗೆಗೆ ಸಾಗಲ್ಪಡುತ್ತವೆ.

೩. ಭಾರತದಂತಹ ಭಿನ್ನ ಸಂಸ್ಕೃತಿಯುಳ್ಳ ಸಮಾಜದಲ್ಲಿ ಏಕತೆಯ ಸಂದೇಶ ಮುಂದಿನ ಪೀಳಿಗೆಯ ಅರಿವಿಗೆ ಬರುತ್ತದೆ.

೪. ಪಾಶ್ಚಾತ್ಯ ರಾಷ್ಟ್ರಗಳ ಒಂದು ಹಳ್ಳಿ ಭಾರತ ದೇಶದ ಒಂದು ಹಳ್ಳಿ ಇವೆರಡರ ತೌಲನಿಕ ಅಧ್ಯಯನ ಆಧುನಿಕ ಸಮಾಜಕ್ಕೆ ಅಗತ್ಯವಾಗಿದೆ ಎಂದು ತಿಳಿದುಬರುತ್ತದೆ.

೫. ಅಂತರಾಷ್ಟ್ರೀಯ ಮಟ್ಟದಲ್ಲಿ ಇಂತಹ ಗ್ರಾಮ ಸಂಸ್ಕೃತಿಗಳ ಕೊಡುಕೊಳ್ಳುವಿಕೆ ನಡೆಯಬೇಕಾಗಿದೆ.

೬. ಇದೇ ರೀತಿ ಭಿನ್ನವಾದ ಪ್ರದೇಶದ ಭಿನ್ನವಾದ ಜಾತಿ ಜನಾಂಗಗಳಿರುವ ಗ್ರಾಮಗಳ ಅಧ್ಯಯನ ರಾಷ್ಟ್ರಮಟ್ಟದಲ್ಲಿ ಸಾಂಸ್ಕೃತಿಕವಾಗಿ ಮಹತ್ವವನ್ನು ತಂದುಕೊಡುತ್ತದೆ.

❖ ❖ ❖

<u>ಅನುಬಂಧ</u> :

೧. ಕೋಲಾಟ ಪದಗಳು

೨. ವಕ್ತೃಗಳ ವಿವರ

೩. ಆಕರ ಗ್ರಂಥಗಳು

೪. ಛಾಯಾಚಿತ್ರಗಳು

ಅನುಬಂಧ – ೧

ಕೋಲಾಟದ ಪದಗಳು

೧. ಗಣಸ್ತುತಿ

ಪಾಲಿಸಮ್ಮಯ್ಯ ಮುದ್ದು ದೇವಮ್ಮ
ನಮ್ಮ ನಾಲಿಗೆ ಏಳು ತಪ್ಪು ಬಾರದೇ ॥ ಪ ॥
ಅಕ್ಷರಕ್ಷರವೆರಡು ಲೆಕ್ಕವೇ
ತಾಯಿ ಕುಕ್ಷಿಯೊಳಗೆ ಮೂರು ಲೋಕವೇ
ಪಾಲಿಸಮ್ಮಯ್ಯ ಮುದ್ದು ತಂದೆ
ನಮ್ಮ ನಾಲಿಗೆ ಏಳು ತಪ್ಪು ಬಾರದೇ
ಐಕನಹಳ್ಳಿಯ ಗ್ರಾಮದ ವಾಸಿಯೇ
ಪಾಲಿಸಮ್ಮಯ್ಯ ಮುದ್ದು ತಾಯೆ
ನಮ್ಮ ನಾಲಿಗೆ ಏಳು ತಪ್ಪು ಬಾರದೇ
ಐಕನಹಳ್ಳಿ ಗ್ರಾಮದ ಬಾಲಕರು
ಕೋಲು ನಾಟಕ ಪೇಳುತಿರ್ಪೆವು
ಪಾಲಿಸಮ್ಮಯ್ಯ ಮುದ್ದು ತಾಯೆ
ನಮ್ಮ ನಾಲಿಗೆ ಏಳು ತಪ್ಪು ಬಾರದೇ
ತಾಯಿ ಮುದದಲಿದ್ದವ ಪಾಲಿಸೇ
ಐಕನಹಳ್ಳಿಯ ಗ್ರಾಮದ ವಾಸಿಯೇ
ಪಾಲಿಸಮ್ಮಯ್ಯ ಮುದ್ದು ದೇವಮ್ಮ.

೨. ಬಿಚ್ಚು ಗಡ್ಡಿ

ನಿಲ್ಲೆ ನಿಲ್ಲಮ್ಮ ದೇವಿ ಎಲ್ಲಿಗೆ ಗಮನ
ತಾಳು ತಾಳಮ್ಮ ದೇವಿ ಎಲ್ಲೀಗೆ ಗಮನ
ಮೊಗ್ಗು ಸಲ್ಲದೆಂದು ಮೊಗ್ಗು ಮರಿಯಲು ಬೇಡ
ಮೊಗ್ಗು ಸತ್ಯಮ್ಮನಾ ಗುಡಿ ಮುಂದೆ ನಿಲ್ಲೆ ॥ ಪ ॥
ಕಾಯಿ ಸಲ್ಲದೆಂದು ಕಾಯಿ ಮರಿಯಲು ಬೇಡ
ಕಾಯಿ ಲಕ್ಕಮ್ಮನ ಗುಡಿ ಮುಂದೆ ನಿಲ್ಲೆ
ನಿಲ್ಲೆ ನಿಲ್ಲಮ್ಮ ದೇವಿ ಎಲ್ಲಿಗೆ ಗಮನ
ತಾಳು ತಾಳಮ್ಮ ದೇವಿ ಎಲ್ಲೀಗೆ ಗಮನ
ಹಣ್ಣು ಸಲ್ಲದೆಂದು ಹಣ್ಣು ಮರಿಯಲು ಬೇಡ
ಹಣ್ಣು ಚಿಕ್ಕಮ್ಮನ ಗುಂಡಿ ಮುಂದೆ ನಿಲ್ಲೆ
ಹೂವು ಸಲ್ಲದೆಂದು ಹೂವಿಗೊಡಾಡ ಬೇಡ

ಹೂವು ಕನ್ನಂಬಾಡಮ್ಮನ ಗುಂಡಿ ಮುಂದೆ ನಿಲ್ಲೆ
ನಿಲ್ಲೆ ನಿಲ್ಲಮ್ಮ ದೇವಿ ಎಲ್ಲಿಗೆ ಗಮನ
ತಾಳು ತಾಳಮ್ಮ ದೇವಿ ಎಲ್ಲೀಗೆ ಗಮನ
ತಳಿಗೆ ಸಲ್ಲದೆಂದು ತಳಿಗೇ ಗೋಡಾಡಬೇಡ
ತಳಿಗೆ ದ್ಯಾವಮ್ಮನಾ ಗುಡಿ ಮುಂದೆ ನಿಲ್ಲೆ
ನಿಲ್ಲೆ ನಿಲ್ಲಮ್ಮ ದೇವಿ ಎಲ್ಲಿಗೆ ಗಮನ
ತಾಳು ತಾಳಮ್ಮ ದೇವಿ ಎಲ್ಲೀಗೆ ಗಮನ.

೩. ಸುತ್ತುಕೋಲು

ತಾನು ತಂದೆ ನಾನೋ ಸುಜಾಣು ತಂದೆ ನಾನೋ
ತಾನಂದೆ ನಾನೋ ಸುಜಾಣು ತಂದೆನಾನೋ
ತಾನಂದೆ ನಾನೋ ಸುಜಾಣು ತಂದೆನಾನೋ ॥ ಪ ॥
ಕಾಡುಗಣಿನೋಳೆ ನೀಕೂಡಿನುಟ್ಟಿನೋಳೆ
ಐಕನಹಳ್ಳಿ ಕೋಡಿಲ್ಲಿ ನೀರ ಮಗಿಯೋ ಮಾವನ ಮಗಳೆ
ಅಂಬಲ ಬಿತ್ತಲ್ಲೇ ನಿನ್ ಮೇಲೆ ತಂದೆ ನಾನೋ
ಅಂಬಲ ಬಿತ್ತಲ್ಲೆ ನಿನ್ ಮೇಲೆ ಮಾವನ ಮಗಳೇ
ಸಂಬಳ ಬಿಟ್ಟು ಬರಲಾರೆ ತಂದೆ ನಾನೋ
ತಾನು ತಂದೆ ನಾನೋ ಸುಜಾಣು ತಂದೆ ನಾನೋ
ತಾನಂದೆ ನಾನೋ ಸುಜಾಣು ತಂದೆನಾನೋ
ತಾನಂದೆ ನಾನೋ ಸುಜಾಣು ತಂದೆನಾನೋ
ಸಂಬಳ ಬಿಡಬೇಡ ನೀ ಸಾರಿಕ ಬಿಡಬೇಡ
ನನಗಾಗಿ ನೀನು ಕೆಡಬೇಡ ತಂದೆ ನಾನೋ
ನನಗಾಗಿ ನೀನು ಕೆಡಬೇಡ ಮಾವನ ಮಗನೆ
ತಿಂಗಳಿಗೊಂದು ಸಾರಿ ತಿರುಗಾಡು ತಂದೆ ನಾನೋ
ಮಾವನ ಮಗಳಲ್ವೇ ನೀನ್ ಮಲ್ಲಿಗೆ ಹರಳಲ್ವೆ
ಎಲ್ಯಾತ್ತೆ ನಿನ್ನ ಗೆಳೆತಾನ ತಂದೆ ನಾನೋ
ಎಲ್ಯಾತೆ ನಿನ್ನ ಗೆಳೆತಾನ ಮಾವನ ಮಗಳೆ
ಕಲ್‌ಬಾವಿಲಿ ನೀರ ತರುವಾಗ ತಂದೆ ನಾನೋ
ಕಲ್‌ಬಾವಿಲಿ ನೀರ ತರುವಾಗ ಮಾವನ ಮಗನೆ
ತಾನು ತಂದೆ ನಾನೋ ಸುಜಾಣು ತಂದೆ ನಾನೋ
ತಾನಂದೆ ನಾನೋ ಸುಜಾಣು ತಂದೆನಾನೋ
ತಾನಂದೆ ನಾನೋ ಸುಜಾಣು ತಂದೆನಾನೋ
ಕಿಕ್ಕೇರಿಯೋಳೆ ನೀನ್‌ನೆರಿಕೆಯ ವಂಗಿಯೋಳೆ
ಸರ್‌ಕಂದ್ರೆ ಕದವಾ ತೆಗೆಯೊಳೆ ತಂದೆನಾನೋ
ಸರ್‌ಕಂದ್ರೆ ಕದವಾ ತೆಗೆಯೋ ಮಾವನ ಮಗಳೆ ಎಲ್ಯಾತೆ
ನಿನ್ನಗೆಣೆತಾನಾ ತಂದೆ ನಾನೋ
ಎಲ್ಯಾತೆ ನಿನ್ನ ಗೆಣೆತಾನ ಮಾವನ ಮಗಳೆ

ಮಲ್ಲಿಗೆ ಮರದ ನೆರಳಲ್ಲಿ ತಂದೆನಾನೋ
ಮಲ್ಲೀಗೆ ಮರದ ನೆರಳಲ್ಲಿ ಮಾವನ ಮಗನೆ
ಕಾಣೋಗೆಣೆತಾನ ತಂದೆ ನಾನೋ
ತಾನು ತಂದೆ ನಾನೋ ಸುಜಾಣು ತಂದೆ ನಾನೋ
ತಾನಂದೆ ನಾನೋ ಸುಜಾಣು ತಂದೆನಾನೋ
ತಾನಂದೆ ನಾನೋ ಸುಜಾಣು ತಂದೆನಾನೋ.

೪. ಆರ್ ಕಡ್ಡಿ

ಮರೆಯಲಾರೆ ಮರುಗವಾನ ಮಡಿಯೂರೆ ದವನವಾ
ಕಲ್‌ಮೇಲೆ ಕಲ್ಲೊಡ್ಡಿ ಮಲ್ಲಿಗೆ ಕೊಯ್ಯೋಳೆ
ನಿಲ್ಲಲ್ಲೆ ಬಾಲೆ ಬರುತೀನಿ
ನಿಲ್ಲಲ್ಲೆ ಬಾಲೆ ಬರುತೀನಿ
ನಿನ್‌ಕೂಡ ಸಣ್ಣ ಮಲ್ಲೀಗೆ ಸರಿಪಾಲು ॥ ಪ ॥
ಮೂಗುತಿ ಮುಂಬಾರ ಎಣೆಗತ್ತಿ ನಿಂಬಾರ
ಕೆನ್ನೆಗೆ ಬಾರ ಹರುಳೋಲೆ
ಕೆನ್ನೆಗೆ ಭಾರ ಹರುಳೋಲೆ ದ್ಯಾವಮ್ಮ
ಬೆನ್ನಿಗೆ ಭಾರ ಶಿವುದಾರಾ
ಮಾವಿನ ಮರದಡಿ ಮರಳಲ್ಲಿ ಗುಂಡೀ ತೆಗೆದು
ನೀರಿಲ್ಲವೇನೆ ಕುಡಿಯೋಕೆ
ನೀರಿಲ್ಲವೇನೆ ಕುಡಿಯೋಕೆ ದ್ಯಾವಮ್ಮ
ಮಗ್ಗಿಲ್ಲವೇನೆ ಮಡಿಯಕೆ
ನಿಲ್ಲಲ್ಲೆ ಬಾಲೆ ಬರುತೀನಿ
ನಿಲ್ಲಲ್ಲೆ ಬಾಲೆ ಬರುತೀನಿ
ನಿನ್‌ಕೂಡ ಸಣ್ಣ ಮಲ್ಲೀಗೆ ಸರಿಪಾಲು
ಇದ್ದಿಯೆನವ್ವ ನಿದ್ರೆಗಣ್ಣಿನೋಳೆ ಸದ್ದಿಲ್ಲವೇನೆ ಗುಡಿಯಲ್ಲಿ
ಸದ್ದಿಲ್ಲವಲ್ಲೆ ಗುಡಿಯಲ್ಲಿ ದ್ಯಾವಮ್ಮ
ನಿದ್ದಿಲ್ಲವಲ್ಲೆ ಸಭಿಗೆಲ್ಲ
ಗುರುಗಂಜಿ ಬಣ್ಣದ ಗುಡಿಯಲ್ಲಿ ತೊಟುಕೊಂಡು
ಗಡುಗನಾಡ್ಯಾಳೆ ಗುಡಿಯಲ್ಲಿ
ಗುಡುಗನಾಡ್ಯಾಳೆ ಗುಡಿಯಲ್ಲಿ ದ್ಯಾವಮ್ಮ
ಗುರುಗಂಜಿ ಬೆಳ್ಳಿ ಬಯಲಲ್ಲಿ
ನಿಲ್ಲಲ್ಲೆ ಬಾಲೆ ಬರುತೀನಿ
ನಿಲ್ಲಲ್ಲೆ ಬಾಲೆ ಬರುತೀನಿ
ನಿನ್‌ಕೂಡ ಸಣ್ಣ ಮಲ್ಲೀಗೆ ಸರಿಪಾಲು
ದ್ಯಾವಮ್ನ ಗುಡಿ ಮುಂದೆ
ಸಾಲು ತೆಂಗಿನ ಮರ ಸ್ವಾಗಿ ಸ್ವಾಗಿಗು ಎಳಿಗಾಯಿ
ಸ್ವಾಗಿ ಸ್ವಾಗಿಗು ಎಳೆಗಾಯಿ ದ್ಯಾವಮ್ಮ

ನಿನ್ ಹಬ್ಬದೊತ್ತಿಗೆ ಈಡುಗಾಯಿ
ನಿಲ್ಲಲ್ಲೆ ಬಾಲೆ ಬರುತೀನಿ
ನಿಲ್ಲಲ್ಲೆ ಬಾಲೆ ಬರುತೀನಿ
ನಿನ್‌ಕೂಡ ಸಣ್ಣ ಮಲ್ಲೀಗೆ ಸರಿಪಾಲು
ಇಡುಗಲ್ಲಾ ಮೇಲೆ ವರಿಗ್ಯಾವ್ಳೆ ದ್ಯಾವಮ್ಮ
ದೊಡ್ಡೋರು ಹೋಗಿ ಕರೆತನ್ನಿ
ದೊಡ್ಡೋರು ಹೋಗಿ ಕರೆತನ್ನಿ ದ್ಯಾವಮ್ಮ
ಒಡ್ಡು ಒಲಗದ ಸಹಿವಾಗೀ
ನಿಲ್ಲಲ್ಲೆ ಬಾಲೆ ಬರುತೀನಿ
ನಿಲ್ಲಲ್ಲೆ ಬಾಲೆ ಬರುತೀನಿ
ನಿನ್‌ಕೂಡ ಸಣ್ಣ ಮಲ್ಲೀಗೆ ಸರಿಪಾಲು
ಪಟ್ಟೆಯದುಟ್ಟವಳೆ ಪುಟ್ಟುಮುತ್ತಕಟ್ಟವಳೆ
ಪಟ್ಟಕುತ್ತವೆಳ ಗುಡಿಯಲ್ಲಿ ಪಟ್ಟಾಗಿ ಕುತ್ತವಳೆ
ಗುಡಿಯಲ್ಲಿ ದ್ಯಾವಮ್ಮ ಪಂತ ಮಾಡ್ಯವಳೆ ರಣದಲ್ಲಿ
ನಿಲ್ಲಲ್ಲೆ ಬಾಲೆ ಬರುತೀನಿ
ನಿಲ್ಲಲ್ಲೆ ಬಾಲೆ ಬರುತೀನಿ
ನಿನ್‌ಕೂಡ ಸಣ್ಣ ಮಲ್ಲೀಗೆ ಸರಿಪಾಲು
ಹಣತೆಯ ಗೂಡಲ್ಲಿ ಇಣಕಿ ನೋಡವಳೆ
ಎಣೆಕೆ ಚಿಂತಾಕಿನೆ ಕೊರಳೊಳೆ
ಎಣಿಕೆ ಚಿಂತಾಕಿನ್ ಕೊರಳೊಳೆ ದ್ಯಾವಮ್ಮ
ಇಣಕಿ ನೋಡಾವ್ಳೆ ಪರಿಷೆಯಾ
ನಿಲ್ಲಲ್ಲೆ ಬಾಲೆ ಬರುತೀನಿ
ನಿಲ್ಲಲ್ಲೆ ಬಾಲೆ ಬರುತೀನಿ
ನಿನ್‌ಕೂಡ ಸಣ್ಣ ಮಲ್ಲೀಗೆ ಸರಿಪಾಲು.

೫. ಕಾಲುಚಿಟುಕು

ಕೋಲು ಕೋಲನ್ನ ಕೋಲು ಕೋಲೆ
ಕೋಲನ್ನ ಕೋಲೆ ಕೋಲು ಕೋಲನ್ನ ಕೋಲು ಕೋಲೆ ॥ ಪ ॥
ಹೊತ್ತುಹುಟ್ಟೀತು ಹೂಡಯ್ಯ ರಥವನು
ಮುತುಗದೂವಿನಂಗೆ ಬೆವರುತ
ಮೂತುಗದುವಿನಂಗೆ ಬೆವರುತ ಭೈರವ
ಹತ್ತೈಯ್ಯ ಗೊಂಬೆ ಹೊಸ ತೇರು
ಕೋಲು ಕೋಲನ್ನ ಕೋಲು ಕೋಲೆ
ಕೋಲನ್ನ ಕೋಲೆ ಕೋಲು ಕೋಲನ್ನ ಕೋಲು ಕೋಲೆ
ಗೊಂಬೇಯ ತೇರಿಗೆ ಎಂಬತ್ತು ದೀವಿಗೆ
ಕಂಬನೀಯಾರು ಕಡಿದಾರು
ಬೇಸಿಗೆ ಬಿಸಿಲಲ್ಲಿ ಯಾಕೊಂಟೊ ಭೈರವ

ನೀನು ಬಾಡಿ ನಿನ್ನ ಮುಖ ಬಾಡಿ
ಕೋಲು ಕೋಲನ್ನ ಕೋಲು ಕೋಲೆ
ಕೋಲನ್ನ ಕೋಲೆ ಕೋಲು ಕೋಲನ್ನ ಕೋಲು ಕೋಲೆ
ನೀನು ಬಾಡಿ ನಿನ್ನ ಮುಖಬಾಡಿ ಕೈಯೊಳಗಿರುವ
ಬಿಳಿಯಾಲೆ ಬಾಡಿ ತರುಗಾದೊ
ಹೊಳೆಗೆ ಹೋಗುವಾಗ ಹೊಂಬಾಳೆ ಝುಲ್ಲೆಂದೊ
ಹೊಳೆಗೋಗಿ ಗುಡಿಗೆ ಬರುವಾಗ
ಹೊಳೆಗೋಗಿ ಗುಡಿಗೆ ಬರುವಾಗ
ಹೊಳೆಗೋಗಿ ಗುಡಿಗೆ ಬರುವಾಗ ಭೈರವ
ಬಲಗಾಡೆ ಗೌಳಿ ನುಡಿದಾವು
ಹಳ್ಳಾಕೊಳ್ಳಾದ ನೀರು ಬೆಳ್ಳಿಯ ಕೈ ಚಂಬು
ಅಲ್ಲಿ ಭೈರವಗೆ ಶಿವ ಪೂಜೆ
ಕೋಲು ಕೋಲನ್ನ ಕೋಲು ಕೋಲೆ
ಕೋಲನ್ನ ಕೋಲೆ ಕೋಲು ಕೋಲನ್ನ ಕೋಲು ಕೋಲೆ
ಅಲ್ಲಿ ಭೈರವನ ಶಿವ ಪೂಜೆ ನಡೆವಾಗ
ಬೆಳ್ಳಿಯ ಘಂಟೆ ಢಣೆರೆಂದು
ಕಲ್ಲಿನ ಕೋಟಿಗೆ ಕಂಚಿನ ಬಾಗಿಲು
ಅತ್ತಿ ಬರುವಾಗ ಢಣೆರೆಂದೊ
ಅತ್ತಿ ಬರುವಾಗ ಢಣೆರೆಂದೊ ಭೈರವ
ಬಾಲ ಭೈರವಗೆ ದೊರೆತಾನ
ಕೋಲು ಕೋಲನ್ನ ಕೋಲು ಕೋಲೆ
ಕೋಲನ್ನ ಕೋಲೆ ಕೋಲು ಕೋಲನ್ನ ಕೋಲು ಕೋಲೆ
ಹೊಳೆಯ ಸಾಲಿನಲ್ಲಿ ಎಳಿಯ ಬೇವಿನಮರ
ಹಣ್ಣಾದರೇನು ಕಿರುಕಯ್ಯ
ಹಣ್ಣಾದರೇನು ಕಿರುಕಯ್ಯ ತಿಂಗಳುಮಾವ
ಚಲುವಾದರೇನು ಮದುವಿಲ್ಲ
ಕಟ್ಟಿಚೆಂದ ಕಲ್ಯಾಣಿ ಮೆಟ್ಟಿಚೆಂದು ಮೇಲ್ಕೊಟೆ
ಕಟುವ ಮೆಟ್ಟು ಚೆಂದಾ ಬೆಳಗೂಳ
ಕಟ್ಟುಮೆಟ್ಟು ಚೆಂದ ಬೆಳಗೂಳದ ಕಲ್ಯಾಣಿ
ಕೋಲು ಕೋಲನ್ನ ಕೋಲು ಕೋಲೆ
ಕೋಲನ್ನ ಕೋಲೆ ಕೋಲು ಕೋಲನ್ನ ಕೋಲು ಕೋಲೆ.

೬. ಬಿಚ್ಚು ಕಡ್ಡಿ

ಯಾಗಿರಲೆ ಮನೆಯಾಗ ಗಾಜಿನ ಪುರಿಯಾಗೆ
ಜಾಲದ ಹೂವು ನಮ್ಮ ಜಡಿಯಾಗೆ ಜಡಿಯಾಗೆ
ದಂಡಿಗೆಗೋಕ್ತಿನಿ ಚಂಬುಬಿಂದಿಗೆ
ತಾರೇ ಗೊಂಡೇವು ತಾರೆ ಕುದುರೆಗೆ

ಗೊಂಡೇವು ತಾರೆ ಕುದುರೆ ಮಾವನ ಮಗಳೆ
ನಂಬಿಗೆ ಕೋಡೇ ಬಲಗೈಯ್ಯ
ನಂಬಿಗೆ ಕೊಡಲಿಕ್ಕೆ ದೊಂಬಾರ
ಮುಂದಾಲೆ ದಂಡು ನಡಿಸೈಯ್ಯ
ತೋಟಕೆ ಹೋದ ಜನ ಊಟಕ್ಕೆ ಬರಲಿಲ್ಲ
ತೋಟದ ಹೂವು ತಲೆತುಂಬ
ತೋಟದ ಹೂವು ತಲೆತುಂಬಾ ಮಡಿಕ್ಕೊಂಡು
ಊಟದಾ ಬಲವಾ ಮರುತಾರೆ ಮರುತಾನೇ
ರೂಪೊದಯನಾ ಮಠಕೋಗಿ
ಓದಿ ಬರೊಳ ಕಂದ ನೋಡಿ ಸಂತೋಷಪಡುವೇ
ಮಾಡಿಸಿ ಕೊಡುವೆ ಗೆಲುಕೆಯ
ಮಾಡಿಸಿ ಕೊಡುವೆ ಗೆಲುಕೆಯಾ ಬುಗುರಿಯ
ನಲಿಯುತ ಹಾಡೊ ಬುಗುರಿಯಾ
ಕುದುರೆ ಕುಣಿಸುತ್ತ ಕುಂಕುಮಾ ಚೆಲ್ಲುತಾ
ಉಗುರಲ್ಲಿ ಬುಗುರಿ ತಿರುಗುತ್ತ
ಉಗುರಲ್ಲಿ ಬುಗುರಿ ತಿರುಗುತ್ತ ಅಣ್ಣೈಯ್ಯ
ತಿರುಗೀ ನೋಡವನೇ ಮೈಸೂರ
ತಿರುಗೀ ನೋಡವನೇ ಮೈಸೂರ ಬೀದಿಯಾ
ಅಲ್ಯಾತ್ತು ಹೆಣ್ಣೊ ಮದುರಲ್ಲಿ
ಅಲ್ಯಾತ್ತು ಹೆಣ್ಣು ಮದುರೇ ಗೌಡನ ಮಗಳು
ಮದ್ಯಾಹ್ನಕ್ಕೆ ದಾರೆ ಎರುದಾರೆ
ತಾಯಿ ಕಟ್ಟಿದಾ ಬುತ್ತಿ ಎಲ್ಲುಂಡೆ ಹೇಳು ಕಂದಾ
ಕಲ್ಲತ್ತಿ ಕಲ್ಲಾ ಇಳಿವಾಗ
ಕಲ್ಲತ್ತಿ ಕಲ್ಲಾ ಇಳಿವಾಗ ತಾಯಮ್ಮ
ಅಲ್ಲಿ ಮಾಡಿದ್ದು ಒಂದು ಹಗಲೂಟ
ಯಾಗಿರಲೆ ಮನೆಯಾಗ ಗಾಜಿನ ಪುರಿಯಾಗೆ
ಜಾಲದ ಹೂವು ನಮ್ಮ ಜಡಿಯಾಗೆ ಜಡಿಯಾಗೆ
ದಂಡಿಗೆಗೋಕ್ತಿನಿ ಚಂಬುಬಿಂದಿಗೆ
ತಾರೇ ಗೊಂಡೇವು ತಾರೆ ಕುದುರೆಗೆ.

೭. ಕಾಲು ಚಿಟುಕು

ಕೋಲು ಕೋಲನ್ನ ಕೋಲು ಕೋಲೆ ಕೋಲನ್ನ
ಕೋಲು ಕೋಲು ಕೋಲನ್ನ ಕೋಲು ಕೋಲೆ ॥ ಪ ॥
ಮಾಗುಡಿ ಕೆಂಪಣ್ಣಗೌಡ ಮಾತ್ನಲ್ಲಿ ಭವಸೂರ
ಮಾತ್ನಲ್ಲಿ ಗೆದ್ದ ಮಾಗುಡಿಯ
ಕಾಯಿ ಸೊಪ್ಪನು ತಿಂದು ಮಾಗುಡಿ
ಕೆಂಪಣ್ಣ ಕೆಂಬೂದಿ ಎಂಬ ಕೆರೆ ಕಟ್ಟೆ

ಚೆಳ್ಳೆ ಸೊಪ್ಪನು ತಿಂದು ಮಾಗುಡಿ
ಕೆಂಪಣ್ಣಗೌಡ ಆರೂರ ಮಲ್ಲಿಜೀತ ಮಾಡಿ
ಕೋಲು ಕೋಲನ್ನ ಕೋಲು ಕೋಲೆ ಕೋಲನ್ನ
ಕೋಲು ಕೋಲು ಕೋಲನ್ನ ಕೋಲು ಕೋಲೆ
ಆರೂ ಮಲ್ಲಿ ಜೀತ ಮಾಡಿ ಕೆಂಪಣ್ಣಗೌಡ
ಏಳ್‌ಸೇರ್‍ನ ಗುದ್ಲಿ ಹೆಗಲಮೇಲೆ ಇಟ್ಟುಕ್ಕೊಂಡ
ಬಾಳೆಯ ತೋಟಕೆ ಹೋಗುತಾನೇ
ಬಾಳೆಯ ತೋಟಕೆ ಹೋಗುತಾನೆ ಕೆಂಪಣ್ಣ ಗೌಡ
ಭೂಮಿಗೆ ಗುದ್ಲಿ ಬಿಡುತ್ತಾನೆ
ಭೂಮಿಗೆ ಗುದ್ಲಿ ಬಿಡುತಾನೆ ಕೆಂಪಣ್ಣಗೌಡ
ಹೆಪ್ಪು ಹಾರ್‍ಯಾವೆ ಗಮನಕ್ಕೆ
ಹೆಪ್ಪು ಹಾರ್‍ಯಾವೆ ಗಗುನಾ ಕೆಂಪಣ್ಣಗೌಡ
ಬಾಳೆಯ ಮರದ ನೆರುಳಲ್ಲಿ
ಬಾಳೆಯ ಮರದ ನೆರಳಲ್ಲಿ ಕೆಂಪಣ್ಣಗೌಡ
ನಿದ್ರೆ ಮಾಡ್ತಾನೆ ಕೆಂಪೇಗೌಡ
ಕೋಲು ಕೋಲನ್ನ ಕೋಲು ಕೋಲೆ ಕೋಲನ್ನ
ಕೋಲು ಕೋಲು ಕೋಲನ್ನ ಕೋಲು ಕೋಲೆ
ನಿದ್ರೆ ಮಾಡ್ತಾನೆ ಮಾಗುಡಿ ಕೆಂಪಣ್ಣಗೌಡ
ಏಳು ಎಡಿನ ಎಳಿನಾಗ
ಏಳು ಎಡಿನಾ ಎಳಿನಾಗನಾದರೂ
ನೆರಳು ಮಾಡವ್ನೆ ಕೆಂಪೇಗೌಡ್ಗೆ
ನೆರಳು ಮಾಡವ್ನೆ ಮಾಗುಡಿ ಕೆಂಪಣ್ಣಗೌಡ್ಗೆ
ತೋಟದ ಹೊಡಿಕಾರ ಬಂದು
ತೋಟದ ಹೊಡಿಕಾರ ಬಂದು ಏನೆಂದನು
ಕೆಂಪೇಗೌಡ್ಗೆ ದೊರೆತಾನ
ಕೆಂಪೇಗೌಡ ನಿನಗೆ ದೊರೆತಾನ ಬಂದರೆ
ನನಗ್ಯಾವ್ದ ಕೆಲ್ಸ ಕೊಡುಸ್ತಿಯೊ
ಬಡತಾನ ಬಯಲಾಗಿ ಸಿರಿತಾನ ಬಂದಾರೆ
ಮಂತ್ರಿ ಪ್ರಧಾನಿ ಕೊಡುಸ್ತೀನಿ
ಮಂತ್ರಿ ಪ್ರಧಾನಿ ಕೊಡುಸ್ತೀನಿ ಅಂತಹೇಳಿ
ಬಲಗೈಲಿ ಭಾಷೆ ಕೊಡುತಾನೆ
ಕೋಲು ಕೋಲನ್ನ ಕೋಲು ಕೋಲೆ ಕೋಲನ್ನ
ಕೋಲು ಕೋಲು ಕೋಲನ್ನ ಕೋಲು ಕೋಲೆ.

ಅನುಬಂಧ – ೨

ವಕ್ತೃಗಳ ವಿವರ

ಕ್ರಸಂ.	ಹೆಸರು	ವಯಸ್ಸು	ವಿದ್ಯಾಭ್ಯಾಸ	ವೃತ್ತಿ
೧.	ಕೆಂಪಮ್ಮ	೭೫	ಇಲ್ಲ	ಗೃಹಿಣಿ
೨.	ರಾಜಮ್ಮ	೪೫	೫ನೇ	ಗೃಹಿಣಿ
೩.	ಶಿವರತ್ನಮ್ಮ	೩೮	೩ನೇ	ಗೃಹಿಣಿ
೪.	ಸರೋಜಮ್ಮ	೪೮	೬ನೇ	ಗೃಹಿಣಿ
೫.	ರಂಗಮ್ಮ	೫೬	೫ನೇ	ಗೃಹಿಣಿ
೬.	ಸಣ್ಣಮ್ಮ	೭೪	ಇಲ್ಲ	ಗೃಹಿಣಿ
೭.	ನಾಗಮ್ಮ	೫೭	ಇಲ್ಲ	ಗೃಹಿಣಿ
೮.	ಮಹಾದೇವಮ್ಮ	೬೦	೪ನೇ	ಗೃಹಿಣಿ
೯.	ಕಾಳಪ್ಪ	೬೫	೪ನೇ	ವ್ಯವಸಾಯ
೧೦.	ಮಂಜೇಗೌಡ. ಡಿ	೩೭	ಪಿಯುಸಿ	ಬಿಲ್‌ಕಲೆಕ್ಟರ್
೧೧.	ಪುಟ್ಟಮ್ಮ	೬೫	ಇಲ್ಲ	ಗೃಹಿಣಿ
೧೨.	ಕೃಷ್ಣಯ್ಯ	೫೨	೪ನೇ	ವ್ಯವಸಾಯ
೧೩.	ತಮ್ಮಯ್ಯ	೫೫	೬ನೇ	ವ್ಯವಸಾಯ
೧೪.	ಸುಬ್ಬಣ್ಣ	೬೨	ಇಲ್ಲ	ವ್ಯವಸಾಯ
೧೫.	ಅಣ್ಣಯ್ಯಪ್ಪ	೭೬	ಇಲ್ಲ	ವ್ಯವಸಾಯ
೧೬.	ಲಕ್ಷ್ಮಣ	೫೨	೮ನೇ	ವ್ಯವಸಾಯ
೧೭.	ದೇವಮ್ಮ	೬೫	ಇಲ್ಲ	ಗೃಹಿಣಿ
೧೮.	ರವಿ	೩೮	ಪಿಯುಸಿ	ವ್ಯಾಪಾರ
೧೯.	ಶಿವರಾಮೇಗೌಡ	೫೦	೧೦ನೇ	ವ್ಯವಸಾಯ
೨೦.	ಪುಟ್ಟಣ್ಣ	೬೫	ಇಲ್ಲ	ಅರ್ಚಕರು
೨೧.	ದೊರೆ	೫೪	೭ನೇ	ವ್ಯವಸಾಯ
೨೨.	ರಾಮೇಗೌಡ	೫೮	೫ನೇ	ವ್ಯವಸಾಯ
೨೩.	ದೇವರಾಜು	೪೮	೮ನೇ	ವ್ಯವಸಾಯ

ಕ್ರ.ಸಂ.	ಹೆಸರು	ವಯಸ್ಸು	ವಿದ್ಯಾಭ್ಯಾಸ	ವೃತ್ತಿ
೨೪.	ಕೃಷ್ಣ	೫೫	೧೦ನೇ	ವ್ಯಾಪಾರ
೨೫.	ನಂಜುಂಡಯ್ಯ	೬೨	೭ನೇ	ವ್ಯವಸಾಯ
೨೬.	ರಾಮು	೫೮	೬ನೇ	ವ್ಯಾಪಾರ
೨೭.	ಉದಯ	೪೫	ಪಿಯುಸಿ	ಜನಪ್ರತಿನಿಧಿ (ವ್ಯವಸಾಯ)
೨೮.	ಬಾಲಚಂದ್ರ	೪೮	ಬಿ.ಎ.	ಜನಪ್ರತಿನಿಧಿ (ವ್ಯವಸಾಯ)
೨೯.	ತೇಲಪ್ಪ	೭೦	ಇಲ್ಲ	ವ್ಯವಸಾಯ
೩೦.	ಸಿಂಗಮ್ಮ	೬೭	ಇಲ್ಲ	ಗೃಹಿಣಿ
೩೧.	ಪಾಪೇಗೌಡ	೫೨	ಬಿ.ಎ.	ವ್ಯಾಪಾರ
೩೨.	ಸಣ್ಣಗೌಡಪ್ಪ	೫೫	ಪಿಯುಸಿ	ವ್ಯವಸಾಯ
೩೩.	ಅಣ್ಣಯ್ಯ. ಐ.ಬಿ	೫೦	ಪಿಯುಸಿ	ವ್ಯವಸಾಯ
೩೪.	ಮಂಜಪ್ಪ	೫೬	೮ನೇ	ವ್ಯವಸಾಯ
೩೫.	ಶಿವಣ್ಣ	೬೨	೪ನೇ	ವ್ಯವಸಾಯ
೩೬.	ಸುಬ್ಬಪ್ಪ	೫೩	೬ನೇ	ವ್ಯವಸಾಯ
೩೭.	ಸೊಂಬಮ್ಮ	೬೨	ಇಲ್ಲ	ಗೃಹಿಣಿ
೩೮.	ರಾಮು	೪೮	೧೦ನೇ	ಪೋಸ್ಟ್‌ಮಾಸ್ಟರ್
೩೯.	ಬಸವಶೆಟ್ಟಿ	೫೨	೮ನೇ	ವ್ಯಾಪಾರ
೪೦.	ನಂಜುಂಡಾಚಾರ್	೬೫	೪ನೇ	ಮರಗೆಲಸ
೪೧.	ಸಣ್ಣತಮ್ಮಾಚಾರ್	೫೫	೬ನೇ	ಮರಗೆಲಸ
೪೨.	ಕೋಡಯ್ಯ	೬೮	ಇಲ್ಲ	ವ್ಯವಸಾಯ
೪೩.	ಕುಳ್ಳಯ್ಯ	೫೭	ಇಲ್ಲ	ವ್ಯವಸಾಯ
೪೪.	ಕುಮಾರ್. ಎಂ.ಜೆ	೪೩	೬ನೇ	ವ್ಯವಸಾಯ
೪೫.	ಕೃಷ್ಣೇಗೌಡ. ಎಂ.ಡಿ	೬೨	ಪಿಯುಸಿ	ವ್ಯವಸಾಯ
೪೬.	ಪ್ರಕಾಶ್. ಎಂ.ಸಿ	೪೫	೧೦ನೇ	ವ್ಯವಸಾಯ
೪೭.	ಶಾಂತಮ್ಮ. ಎಸ್.ಎನ್	೪೮	೩ನೇ	ಗೃಹಿಣಿ
೪೮.	ಮಂಜೇಗೌಡ. ಎಂ.ಟಿ	೪೨	೫ನೇ	ವ್ಯವಸಾಯ
೪೯.	ಗಿರೀಶ್	೩೯	ಪಿಯುಸಿ	ಫೋಟೋಗ್ರಾಫರ್

ಕ್ರಸಂ.	ಹೆಸರು	ವಯಸ್ಸು	ವಿದ್ಯಾಭ್ಯಾಸ	ವೃತ್ತಿ
೫೦.	ರಾಮೇಗೌಡ. ಬಿ	೫೭	ಬಿ.ಎ.	ಜನಪ್ರತಿನಿಧಿ (ವ್ಯವಸಾಯ)
೫೧.	ಕಮಲಮ್ಮ	೪೮	೭ನೇ	ಜನಪ್ರತಿನಿಧಿ (ಗೃಹಿಣಿ)
೫೨.	ವೆಂಕಣ್ಣಯ್ಯ	೭೦	೭ನೇ	ಶಾನುಬೋಗರು
೫೩.	ದೇವರಸೇಗೌಡ	೬೨	೫ನೇ	ಜನಪ್ರತಿನಿಧಿ (ವ್ಯವಸಾಯ)
೫೪.	ಮಂಜೇಗೌಡ. ಎಸ್	೪೫	ಪಿ.ಯು.ಸಿ.	ಕಾರ್ಯದರ್ಶಿ, ಹಾಲಿನ ಡೈರಿ
೫೫.	ಶೇಖರ್	೩೮	೫ನೇ	ಹಾಲುಪರೀಕ್ಷಕ, ಹಾಲಿನ ಡೈರಿ
೫೬.	ಸಿದ್ದೇಗೌಡ. ಎಂ.ಕೆ	೫೫	ಬಿ.ಎ., ಬಿ.ಇಡಿ.	ಮುಖ್ಯ ಶಿಕ್ಷಕರು
೫೭.	ಶಂಕರ್. ಎಸ್.ಕೆ	೫೩	ಬಿ.ಎ.	ಗ್ರಾಮ ಲೆಕ್ಕಿಗರು
೫೮.	ಜಯಪಾಲ್. ಕೆ.ಎನ್	೫೨	ಬಿ.ಇ.	ಪ್ರಭಾರ ಹಿರಿಯ ಸಹಾಯಕ ಕೆ.ಪಿ.ಟಿ.ಸಿ.ಎಲ್., ಕಿಕ್ಕೇರಿ
೫೯.	ಡಾ. ವಿ. ಕೃಷ್ಣಮೂರ್ತಿ	೪೮	ಬಿ.ವಿ.ಎಸ್ಸಿ.	ಪಶು ವೈದ್ಯಾಧಿಕಾರಿ, ಕಿಕ್ಕೇರಿ
೬೦.	ಶಂಕರ್ ಪ್ರಸಾದ್	೫೩	ಬಿ.ಎ.	ಸಹಾಯಕ, ತಾಲ್ಲೂಕು ಕಛೇರಿ ಕೆ.ಆರ್. ಪೇಟೆ
೬೧.	ಶ್ರೀಧರ್. ಐ.ಆರ್	೩೯	ಬಿ.ಎಸ್ಸಿ., ಬಿ.ಇಡಿ	ಶಿಕ್ಷಕರು
೬೨.	ಪುಟ್ಟಸ್ವಾಮಿ	೪೨	ಪಿಯುಸಿ	ವ್ಯವಸಾಯ
೬೩.	ಸೋಮಶೇಖರ್	೪೭	ಬಿ.ಕಾಂ	ವ್ಯಾಪಾರ
೬೪.	ಮಂಜಮ್ಮ	೫೫	೪ನೇ	ಗೃಹಿಣಿ
೬೫.	ಹರೀಶ್	೪೩	ಬಿ.ಎಸ್ಸಿ	ಖಾಸಗಿ ನೌಕರಿ

೧೧.	ಮಂಜುಳ	೫೩	೭ನೇ	ಗೃಹಿಣಿ
೧೨.	ನಾರಾಯಣ	೫೧	೪ನೇ	ವ್ಯವಸಾಯ
೧೩.	ಪಾಂಡು	೪೮	೬ನೇ	ವ್ಯವಸಾಯ
೧೯.	ಸಣ್ಣೇಗೌಡ	೫೬	ಇಲ್ಲ	ವ್ಯವಸಾಯ
೨೦.	ರಮೇಶ	೪೫	೭ನೇ	ವ್ಯಾಪಾರ

❖ ❖ ❖

ಅನುಬಂಧ – ೩

ಆಕರ ಗ್ರಂಥಗಳು

೧. ಅರ್ಚಕ ಬಿ. ರಂಗಸ್ವಾಮಿ : ಹುಟ್ಟಿದ ಹಳ್ಳಿಯ ಹಾಡು, ವರ್ಧಮಾನ ಪವರ್ ಪ್ರೆಸ್, ೧೯೩೩.

೨. ಅನಂತರಾಮು. ಕೆ : ಸಕ್ಕರೆಯ ಸೀಮೆ, ಅನಂತ ಪ್ರಕಾಶನ, ಮೈಸೂರು – ೧೯೮೨

೩. ಅಂಬಳಿಕೆ ಹಿರಿಯಣ್ಣ : ಜಾನಪದ ಕೆಲವು ವಿಚಾರಗಳು, ಪ್ರಜ್ವಲ ಪ್ರಕಾಶನ, ಮೈಸೂರು – ೧೯೮೪

೪. ಅಂಬಳಿಕೆ ಹಿರಿಯಣ್ಣ : ಮಲೆನಾಡ ವೈಷ್ಣವ ಒಕ್ಕಲಿಗರ ಸಂಸ್ಕೃತಿ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು – ೧೯೯೯

೫. ಈಶ್ವರನ್ ಹಿರೇಮಲ್ಲೂರು : ಭಾರತದ ಹಳ್ಳಿಗಳು, ಪ್ರಸಾರಂಗ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – ೧೯೭೨

೬. ಕಾಳೇಗೌಡ ಕೆ. : ಕೃಷ್ಣರಾಜಪೇಟೆ, ತಾಲ್ಲೂಕು ದರ್ಶಿನಿ, ಹೇಮಾ ಪ್ರಕಾಶನ, ಮಂಡ್ಯ – ೧೯೮೮.

೭. ಕುವೆಂಪು : ಮಂತ್ರ ಮಾಂಗಲ್ಯ, ಉದಯ ರವಿ ಪ್ರಕಾಶನ, ಮೈಸೂರು – ೧೯೯೬.

೮. ಕೂಡ್ಲೂರು ವೆಂಕಟಪ್ಪ : ಗೊಂಬೆ ಚಿತ್ತಾರದ ಮಡೆಕಡೆದೊ, ಧಾತ್ರಿ ಪುಸ್ತಕ, ಬೆಂಗಳೂರು – ೨೦೦೯

೯. ಗಣನಾಥ ಎಕ್ಕಾರು : ಜನಪದ ಆಟಗಳು, ಪ್ರಸಾರಾಂಗ, ಕ.ವಿ.ವಿ., ಹಂಪಿ, ೨೦೦೦

೧೦. ಗೊರೂರು ರಾಮಸ್ವಾಮಿ ಅಯ್ಯಂಗಾರ್ : ಜನಪದ ಜೀವನ ಮತ್ತು ದರ್ಶನ, ಮೈಸೂರು ವಿಶ್ವವಿದ್ಯಾಲಯ, ಮೈಸೂರು – ೧೯೭೪.

೧೧. ಗೋವಿಂದರಾಜು ಟಿ. : ಚೆನ್ನಾದೇವಿ ಅಗ್ರಹಾರ ಜಾನಪದೀಯ ಅಧ್ಯಯನ, ಪುಸ್ತಕ ಜೇನು, ಚನ್ನಾದೇವಿ ಅಗ್ರಹಾರ. ೧೯೯೩.

೧೨. ಚಕ್ಕೆರೆ ಶಿವಶಂಕರ್ : ದಕ್ಷಿಣ ಕರ್ನಾಟಕದ ಜನಪದ ಕಲೆಗಳು, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು – ೨೦೦೮.

೧೩. ಚನ್ನಬಸಪ್ಪ ಗೊ.ರು. (ಸಂ.) : ಗ್ರಾಮ ಜ್ಯೋತಿ, ಕೆ.ಆರ್.ಲಿಂಗಪ್ಪ ಅಭಿನಂದನ ಗ್ರಂಥ, ಬೆಂಗಳೂರು; ೧೯೭೯

೧೪. ಚನ್ನಬಸಪ್ಪ ಗೊ.ರು. (ಸಂ.) : ಕರ್ನಾಟಕದ ಜನಪದ ಕಲೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – ೧೯೭೭

೧೫. ಚಲುವೇಗೌಡ ತ.ಚಿ. : ಕೆಲವು ಜನಪದ ಸಂಪ್ರದಾಯಗಳು, ತಳಗವಾದಿ ಪ್ರಕಾಶನ, ಮೈಸೂರು – ೧೯೭೮

೧೬. ಚಿದಾನಂದಮೂರ್ತಿ ಎಂ. : ಗ್ರಾಮೀಣ, ಭಾಷ್ಕೋ ಪ್ರಕಾಶನ, ಬೆಂಗಳೂರು – ೧೯೭೭.

೧೭. ಚೇತನ ಎಚ್.ಆರ್. : ಹೆತ್ತಗೋನಹಳ್ಳಿ ಮಾಯಮ್ಮ, ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ, ಬೆಂಗಳೂರು – ೧೯೯೫

೧೮. ಚಂದ್ರಶೇಖರ ಕಂಬಾರ : ಕನ್ನಡದ ಜಾನಪದ ವಿಶ್ವಕೋಶ (ಸಂ. ೧, ೨), ಕನ್ನಡ ಸಾಹಿತ್ಯ ಪ್ರಕಾಶನ, ಬೆಂಗಳೂರು – ೧೯೮೫

೧೯. ಚಂದ್ರ ಪೂಜಾರಿ ಎಂ. : ಸಂಶೋಧಕರು ಮತ್ತು ಕ್ಷೇತ್ರ ಕಾರ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦. ಚಂದ್ರು ಕಾಳೇನಹಳ್ಳಿ : ಸೋಲಿಗರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು – ೧೯೯೩

೨೧. ಚಂದ್ರಣ್ಣಗೌಡ ಕೆ.ವಿ. : ಸುಗ್ಗನಹಳ್ಳಿ ಒಂದು ಸಾಂಸ್ಕೃತಿಕ ಅಧ್ಯಯನ, ಬೆಂ.ವಿ.ವಿ.ಗೆ ಸಲ್ಲಿಸಿದ ಅಪ್ರಕಟಿತ ಮಹಾಪ್ರಬಂಧ.

೨೨. ಜವರೇಗೌಡ ದೇ. : ಜಾನಪದ ಅಧ್ಯಯನ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು– ೨೦೦೧.

೨೩. ಜವರೇಗೌಡ ದೇ. (ಪ್ರಧಾನ ಸಂಪಾದಕ) : ಸಿರಿಯೊಡಲು, ಸ್ವಾಗತ ಸಮಿತಿ, ೬೩ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಮಂಡ್ಯ – ೧೯೯೪

೨೪. ಜಗನ್ನಾಥ ಹೆಬ್ಬಾಳೆ (ಸಂ) : ಬೀದರ್ ಜಿಲ್ಲೆಯ ನಾಟಿ ವೈದ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – ೨೦೦೬

೨೫. ತೈಲೂರು ವೆಂಕಟಕೃಷ್ಣ : ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ, ಭಾನು ಪ್ರಕಾಶನ, ಮಂಡ್ಯ – ೧೯೫೮.

೨೬. ತೈಲೂರು ವೆಂಕಟಕೃಷ್ಣ : ಮಂಡ್ಯ ಜಿಲ್ಲೆಯ ಸ್ಥಳ ನಾಮಗಳು, ಭಾನು ಪ್ರಕಾಶನ, ಮಂಡ್ಯ.

೨೭. ದಾಸೇಗೌಡ ಜಿ.ವಿ. : ಮಂಡ್ಯ ಜಿಲ್ಲೆಯ ಜಾತ್ರೆಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ೨೦೦೦

೨೮. ದೊಡ್ಡಪ್ಪಗೌಡ ಮಾಕೋನಹಳ್ಳಿ : ಒಕ್ಕಲಿಗರು ಮತ್ತು ಸಂಪ್ರದಾಯ, ನಭಶ್ರೀ ಪ್ರಕಾಶನ, ಮೈಸೂರು–೧೯೭೮.

೨೯. ದೇವೇಂದ್ರ ಕುಮಾರ ಹಕಾರಿ (ಸಂ.) : ಗ್ರಾಮೀಣ ವೃತ್ತಿಗಳು, ಡಾ. ಕೆ.ಆರ್. ಸಂಧ್ಯಾ ರೆಡ್ಡಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ೨೦೦೦.

೩೦. ನಲ್ಲೂರು ಪ್ರಸಾದ್ : ನಲ್ಲೂರು ದೊರೆಕಾಳಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೨೦೦೦.

೩೧. ನಲ್ಲೂರು ಪ್ರಸಾದ್ : ಗಂಗಡಿಕಾರ ಒಕ್ಕಲಿಗರು, ಅಪ್ರಧೀನ ಪ್ರಕಾಶನ, ಬೆಂಗಳೂರು– ೨೦೦೧.

೩೨. ನಂಜೇಗೌಡ ಹೆಚ್. (ಸಂ.) : ಜಾನಪದ ಕೋಶ, ತನುಮನ ಪ್ರಕಾಶನ, ಮೈಸೂರು – ೨೦೦೨.

೩೩. ನಾಗರಾಜ್ ಎಂ.ಜಿ. : ಸಾಂಸ್ಕೃತಿಕ ಶ್ರೀ ವೀರಭದ್ರಸ್ವಾಮಿ, ಶ್ರೀಮದ್ವೀರಶೈವ ಸದ್ಬೋಧನಾ ಸಂಸ್ಥೆ, ಬಾಳೆಹೊನ್ನೂರು – ೧೯೯೯

೩೪. ನಾಗಾಚಾರಿ ಎಸ್. : ನಾಮಸಂಪದ, ಸೋನಾ ಪ್ರಕಾಶನ, ಮೈಸೂರು – ೨೦೦೬

೩೫. ನಾಗಾಚಾರಿ ಎಸ್. : ಮೈಸೂರು ಜಿಲ್ಲಾ ಗ್ರಾಮ ನಾಮಗಳ ಅಧ್ಯಯನ, ಮೈ. ವಿ.ವಿ.ಗೆ ಸಲ್ಲಿಸಿದ ಅಪ್ರಕಟಿತ ಮಹಾಪ್ರಬಂಧ.

೩೬. ನಾಗೇಗೌಡ ಎಚ್.ಎಲ್. : ಗ್ರಾಮದೇವತೆ ಮಾರಮ್ಮ, ಕರ್ನಾಟಕ ಜಾನಪದ ಟ್ರಸ್ಟ್, ಬೆಂಗಳೂರು – ೧೯೯೧.

೩೭. ನಾಗೇಗೌಡ ಎಚ್.ಎಲ್ : ನನ್ನೂರು; ಸಾಹಿತ್ಯ ಸದನ, ಬೆಂಗಳುರು – ೧೯೪೮

೩೮. ನಾಗೇಗೌಡ ಎಚ್.ಎಲ್. (ಸಂ.) : ಕನ್ನಡ ಜನಪದ ಕೋಶ, ಕರ್ನಾಟಕ ಜನಪದ ಪರಿಷತ್ತು, ಬೆಂಗಳೂರು – ೧೯೯೮.

೩೯. ನಾಗೇಶ್ ಎಚ್.ವಿ. : ಗ್ರಾಮಾಂತರ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು – ೨೦೦೦.

೪೦. ನಾಗೇಂದ್ರ ಸ್ವಾಮಿ ಚಿದರವಳ್ಳಿ : ನನ್ನೂರು ನನ್ನೋರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು; ೨೦೦೦

೪೧. ನಾರಾಯಣ ಕೆ.ವಿ. (ಸಂ.) : ಭಾಷೆ (ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ – ೧), ಪ್ರಸಾರಂಗ, ಕ.ವಿ.ವಿ. ಹಂಪಿ – ೨೦೦೦.

೪೨. ಪುರುಷೋತ್ತಮ ಬಿಳಿಮಲೆ : ಹುಲಿಗೆಮ್ಮ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೯೯.

೪೩. ಪಂಡಿತ ಐರೋಡಿ ಯಜ್ಞನಾರಾಯಣ ಉಡುಪ : ಪುರಾಣ ಭಾರತ ಕೋಶ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೪೪. ಬರಗೂರು ರಾಮಚಂದ್ರಪ್ಪ : ಸಂಸ್ಕೃತಿ ಮತ್ತು ಸೃಜನಶೀಲತೆ, ಜನಸ್ನೇಹ ಪ್ರಕಾಶನ, ಬೆಂಗಳೂರು – ೧೯೯೧

೪೫. ಬಸವರಾಜ ಸಬರದ : ಸಮುದಾಯ ಮತ್ತು ಸಂಸ್ಕೃತಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – ೨೦೦೨

೪೬. ಬೋರಲಿಂಗಯ್ಯ ಹೆಚ್. : ಉಜ್ಜನಿ ಚೌಡಮ್ಮ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು– ೧೯೭೯.

೪೭. ಭಾರತದ ಗ್ಯಾಸೆಟಿಯರ್ : ಕರ್ನಾಟಕ ರಾಜ್ಯ, ಮಂಡ್ಯ ಜಿಲ್ಲೆ – ೨೦೦೩

೪೮. ಮರುಳಯ್ಯ ಸಾ.ಶಿ. : ಕನ್ನಡ ಭಾಷಾ ಪ್ರವೇಶ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – ೨೦೦೯.

೪೯. ಮಹದೇವಿಬಾಯಿ : ಚಾಮರಾಜನಗರ ಸುತ್ತಿನ ಲಂಬಾಣಿ ಸಂಸ್ಕೃತಿ, ಕೀರ್ತಿ ಪ್ರಕಾಶನ, ಮೈಸೂರು – ೨೦೦೭.

೫೦. ಮಹಾದೇವಯ್ಯ ಪಿ. : ಸಾಮಾಜಿಕ ಉಪಭಾಷೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ – ೨೦೦೦.

೫೧. ಮುನಿರಾಜು ನಾ. : ಕೋಲಾರ ಜಿಲ್ಲೆಯ ಜನಪದ ವೈದ್ಯ, ಇಂಚರ ಪ್ರಕಾಶನ, ಬೆಂಗಳೂರು – ೨೦೧೧

೫೨. ಮೃತ್ಯುಂಜಯ ಹೊರಕೇರಿ : ರೈತ ಜಾನಪದ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು – ೧೯೯೮

೫೩. ರಮೇಶ್ ಬೆ.ಗೋ. : ಭಾರತೀಯ ಹಬ್ಬಗಳು ಮತ್ತು ಸಂಪ್ರದಾಯಗಳು, ವಾಸನ್ ಬುಕ್ ಡಿಪೊ, ಬೆಂಗಳೂರು; ೧೯೯೮

೫೪. ರಮೇಶ್ ಸ.ಚಿ. : ಕರ್ನಾಟಕ ಜನಪದ ಆಚರಣೆಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ; ೨೦೧೦

೫೫. ರಾಜಪ್ಪ ದಳವಾಯಿ (ಸಂ.) : ಕನ್ನಡ ಸಾಹಿತ್ಯ ಕೋಶ, ದಳವಾಯಿ ಪ್ರಕಾಶನ, ಬೆಂಗಳೂರು – ೧೯೯೬.

೫೬. ರಾಜೇಗೌಡ ಹ.ಕ. (ಸಂ) ಜವರೇಗೌಡ ದೇ. (ಸಂ) : ಸಿರಿಯೊಡಲು, ೬೩ನೇ ಅ.ಭಾ.ಕ.ಸಾ ಸಮ್ಮೇಳನ, ಮಂಡ್ಯ – ೧೯೯೪.

೫೭. ರಾಮಚಂದ್ರ ರಾವ್ ಎಸ್.ಕೆ. : ವಿವಾಹ ಪದ್ಧತಿಗಳು, ಪ್ರಸಾರಂಗ ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು – ೧೯೮೧

೫೮. ಲಕ್ಕಪ್ಪಗೌಡ ಎಚ್.ಜಿ. : ಜಾನಪದ ಕೈಪಿಡಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ೧೯೯೭

೫೯. ಲಿಂಗಯ್ಯ ಡಿ. : ಕರ್ನಾಟಕದ ಗ್ರಾಮದೇವತೆಗಳು, ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು. ೧೯೮೪.

೬೦. ಲಿಂಗಯ್ಯ ಡಿ. : ಬೋರೇದೇವರು, ದಿನಕರ ಪ್ರಕಾಶನ, ಬೆಂಗಳೂರು–೧೯೭೬.

೬೧. ಲಿಂಗಯ್ಯ ಡಿ. : ಕೊಂತಿಪೂಜೆ, ಸಾಹಿತ್ಯ ಬಂಡಾರ, ಬೆಂಗಳೂರು–೧೯೭೬

೬೨. ಲಿಂಗಯ್ಯ ಡಿ. : ಬಯಲು ಸೀಮೆಯ ಜನಪದ ಗೀತೆಗಳು, ಬೆಂಗಳೂರು–೧೯೭೩.

೬೩. ಲಿಂಗಯ್ಯ ಡಿ. (ಸಂ), ಚಕ್ಕೆರೆ ಶಿವಶಂಕರ್ (ಸಂ) : ರೋಗ ಜಾನಪದ, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು – ೨೦೦೮.

೬೪. ವಸಂತ ಕುಮಾರ ಎಂ.ಸಿ. : ಮಳಲಿ ಗಿಡ್ಡಮ್ಮ, ಮೈಸೂರು. ೧೯೭೦.

೬೫. ವಾಲಿ ಎಂ.ಎಸ್. : ಕೃಷಿ ಜಾನಪದ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – ೨೦೦೬.

೬೬. ವಿಶ್ವನಾಥ್ : ಗ್ರಾಮನಾಮಗಳ ಸಾಂಸ್ಕೃತಿಕ ಪರಿವೇಷ, ಸಂವಹನ ಪ್ರಕಾಶನ, ಮೈಸೂರು – ೨೦೦೩.

೬೭. ಶಿವಣ್ಣ ಡಿ.ಕೆ. : ಭಾರತೀಯ ಸಮಾಜದ ಅಧ್ಯಯನ, ಸಾಗರ ಬುಕ್ ಪ್ರಮೋಟರ್ಸ್, ಬೆಂಗಳೂರು – ೧೯೯೯.

೬೮. ಶ್ರೀನಿವಾಸ ರಿತ್ತಿ : ಕರ್ನಾಟಕ ಗ್ರಾಮಸೂಚಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು – ೧೯೮೫

೬೯. ಸಿದ್ದಲಿಂಗಯ್ಯ : ಗ್ರಾಮದೇವತೆಗಳು, ಅಂಕಿತ ಪುಸ್ತಕ, ಬೆಂಗಳೂರು. ೧೯೯೭.

೭೦. ಸೋಮಶೇಖರ್ ಗೌಡ : ಭಾಷೆ ರಚನೆ ಬಳಕೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – ೨೦೧೦.

೭೧. ಸ್ವಚ್ಛಂದಂ ಎ. ಅನಂತ ನರಸಿಂಹಾಚಾರ್ : ಸಂಸ್ಕಾರ ಮಹೋದಧಿಃ, ಅನಂತ ಪ್ರಕಾಶನ, ಬೆಂಗಳೂರು – ೨೦೦೯.

೭೨. ಹನುಮಂತರಾವ್ ಬಿ. ದೊಡ್ಡಮನಿ : ಜಾನಪದ ಹಬ್ಬಗಳು ಮತ್ತು ಉತ್ಸವಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು; ೨೦೦೪

೭೩. ಹಂಪಾ ನಾಗರಾಜಯ್ಯ : ದ್ರಾವಿಡ ಭಾಷಾ ಜ್ಞಾನ, ಡಿ.ವಿ.ಕೆ. ಮೂರ್ತಿ ಪ್ರಕಾಶನ ಮೈಸೂರು – ೨೦೦೮

೭೪. ಹಿಮಕರ ಎ.ಕೆ : ಕರ್ನಾಟಕದ ಆಯ್ದ ಗ್ರಾಮಾಧ್ಯಯನಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು; ೨೦೦೬

೭೫. ಹಿರೇಮಲ್ಲೂರು ಕೆ. ಈಶ್ವರನ್ : ಭಾರತದ ಹಳ್ಳಿಗಳು, ಪ್ರ. ಮೈ.ವಿವಿ., ಮೈಸೂರು, ೧೯೭೨.

❖ ❖ ❖

ಅನುಬಂಧ ೪

ಛಾಯಾಚಿತ್ರಗಳು



ದೀಪಾವಳಿ ಹಬ್ಬದಲ್ಲಿ ವೀರ ಮಕ್ಕಳು



ಐಕನಹಳ್ಳಿ ಅಮ್ಮನ ಮೆರೆಯುವ ದೇವರು



ತಳಿಗೆ (ಬುತ್ತಿ) ಹೊತ್ತು ಬರುತ್ತಿರುವ ಐಕನಹಳ್ಳಿಯ ಭಕ್ತರು



ಗರ್ಭಗುಡಿಯಲ್ಲಿ ಚಿಕ್ಕಯ್ಯ – ದೊಡ್ಡಯ್ಯ (ಸೋಮಗಳು)



ಬಾಯಿ ಬೀಗ ಚುಚ್ಚುತ್ತಿರುವ ಚಿತ್ರಣ



ದೀಪಾವಳಿ ಹಬ್ಬದಲ್ಲಿ ನೆರೆದಿರುವ ಅಪಾರ ಭಕ್ತ ಸಮೂಹ



ಐಕನಹಳ್ಳಿ ಅಮ್ಮನನ್ನು ಮೆರೆಸುತ್ತಿರುವುದು



ವೀರಮಕ್ಕಳ ಪೂಜೆಯ ಸಂಪ್ರದಾಯ



ಸಿಡಿಮರಕ್ಕೆ ವೀರಮಕ್ಕಳನ್ನು ಕಟ್ಟಿರುವುದು



ಜಾತ್ರೆಯಲ್ಲಿ ಸಿಹಿ ಖರೀದಿಸುತ್ತಿರುವ ಭಕ್ತರು



ದೊಡ್ಡಯ್ಯ-ಚಿಕ್ಕಯ್ಯನನ್ನು ಮೆರೆಸುತ್ತಿರುವುದು



ದೀಪಾವಳಿಯಲ್ಲಿ ಚಿಣ್ಣರ ಪಟಾಕಿ ಸಂಭ್ರಮ



ಐಕನಹಳ್ಳಿ ಅಮ್ಮನ ಗುಡಿಯ ಹೊರನೋಟ




ಐಕನಹಳ್ಳಿ ಅಮ್ಮನ ಗುಡಿಯ
ಮುಂದಿರುವ ಗರುಡಗಂಬ



ಗರ್ಭಗುಡಿಯಲ್ಲಿ ಐಕನಹಳ್ಳಿ ಅಮ್ಮ



ಪಿಡಿ ಕೊಂಡಿಗಳನ್ನು ಮತ್ತು ಬೆತ್ತದ ಕೋಲನ್ನು ತೊಳೆದು ತರುತ್ತಿರುವ ಚಿತ್ರಣ



ಭೈರವೇಶ್ವರ
ದೇವಾಲಯ



ಬಸವೇಶ್ವರ ಗುಡಿಯೊಳಗೆ ಭಕ್ತರು



ಕನ್ನಂಬಾಡಮ್ಮನ ಗುಡಿ



ಲಕ್ಕಮ್ಮನ ದೇವಾಲಯದ ಮುಂದೆ ಭಕ್ತ ಸಮೂಹ



ಬಸವೇಶ್ವರ ಗುಡಿಯ ಸುಂದರ ನೋಟ



ಬಸವೇಶ್ವರನ ಗರ್ಭಗುಡಿ



ಐಕನಹಳ್ಳಿ ಕೆರೆಯ ಮುಂದಿರುವ ಸತ್ಯಮ್ಮನ ಗುಡಿ



ಚಿಕ್ಕಮ್ಮನ ಗುಡಿಯ ಒಳನೋಟ



ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ



ಗ್ರಾಮಪಂಚಾಯಿತಿ ಕಾರ್ಯಾಲಯ



ಸಮುದಾಯ ಭವನ



ಹಾಲು ಉತ್ಪಾದಕರ ಸಹಕಾರ ಸಂಘ



ರಾಜೀವ್ ಗಾಂಧಿ ಸೇವಾ ಕೇಂದ್ರ



ಅಂಗನವಾಡಿ ಕೇಂದ್ರ



ಸರ್ಕಾರಿ ನ್ಯಾಯಬೆಲೆ ಅಂಗಡಿ



ಕರಿಕಲ್ಲಿನ ಮಂಟಿ



ಗ್ರಾಮದಲ್ಲಿರುವ ಹಾರೆಕಲ್ಲಿನ ಚಿತ್ರಣ



ಗ್ರಾಮದ ಹೊರಭಾಗದಲ್ಲಿರುವ ಕಲ್ಲಿನಭಾವಿ



ಮನೆಯೊಂದರ ಒಳಭಾಗದ ನೋಟ



ಗ್ರಾಮದ ಮನೆಮುಂದಿರುವ ಜಗಲಿಕಟ್ಟೆ



ಬಸವೇಶ್ವರ ಸ್ವಾಮಿ ಪ್ರೌಢಶಾಲೆ



ವಧುವಿಗೆ ಅರಿಶಿನ ಹಚ್ಚುತ್ತಿರುವುದು



ಶಾಸ್ತ್ರದ ನೀರು ತರುತ್ತಿರುವುದು (ಅಗಸರ ಮದುವೆಯಲ್ಲಿ)



ಗಂಡು ನೆರೆ ಹೊರಟಿರುವುದು



ಗಂಡು ನೆರೆ ಬಂದಾಗ ಹಿರಿಯರು ನದಿರು ಕೊಡುತ್ತಿರುವುದು



ಶಾಸ್ತ್ರದ ನೀರು ತರುತ್ತಿರುವುದು (ಒಕ್ಕಲಿಗರು)



ಐಕನಹಳ್ಳಿ ಅಮ್ಮನ ದೇವಾಲಯದ ಸುತ್ತಲ ಪರಿಸರ



ಗ್ರಾಮದ ಕೆರೆಯೊಂದರ ನೋಟ